ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಶರವಸ್ತಾ.

ಪ್ರಥಮ ಸಂಪುಟ (ಅ-ಚಾ)

ಪ್ರಧಾನ ಸಂಪಾದಕರು :

ಹೆಚ್. ದೇವೀರಪ್ಪ, ಎಂ. ಎ.

ಡೈರೆಕ್ಟರ್

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ :: ಮೈಸೂರು

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ
ವರ್ಣನಾತ್ಮಕ ಸೂಚೀ

ಪ್ರಥಮ ಸಂಪುಟ (ಅ-ಚಾ)

ಪ್ರಧಾನ ಸಂಪಾದಕರು :

ಹೆಚ್. ದೇವೀರಪ್ಪ, ಎಂ. ಎ.

ಡೈರೆಕ್ಟರ್

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ : : ಮೈಸೂರು

A Descriptive Catalogue of KANNADA MANUSCRIPTS

in the

Oriental Research Institute, Mysore

Vol. I (A-Chā)

General Editor :

H. DEVEERAPPA, M.A.

Director

Editor :

B. S. SANNAIAH, M.A.

Assistant Director

Assisted by :

THE RESEARCH ASSISTANTS

ORIENTAL RESEARCH INSTITUTE

UNIVERSITY OF MYSORE : : MYSORE

Published by
Oriental Research Institute, Mysore
1962

Price : Rs. 4-50

PRINTED AT
SRI SHAKTI ELECTRIC PRESS, MYSORE

ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯದ

ಕನ್ನಡ ಹಸ್ತಪ್ರತಿಗಳ

ವರ್ಣನಾತ್ಮಕ ಸೂಚೀ

ಪ್ರಥಮ ಸಂಪುಟ (ಅ-ಚಾ)

ಪ್ರಧಾನ ಸಂಪಾದಕರು :

ಹೆಚ್. ದೇವೀರಪ್ಪ, ಎಂ. ಎ.

ಡೈರೆಕ್ಟರ್

ಪ್ರಾಚ್ಯವಿದ್ಯಾ ಸಂಶೋಧನಾಲಯ

ಮೈಸೂರು ವಿಶ್ವವಿದ್ಯಾನಿಲಯ : : ಮೈಸೂರು

ಪ್ರಥಮ ಮುದ್ರಣ: ನವಂಬರ್ ೧೯೬೨
೧೦೦೦ ಪ್ರತಿಗಳು

ಬೆಲೆ: ರೂ. ೪-೫೦

ಮುದ್ರಕರು:
ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್
ಕೃಷ್ಣಮೂರ್ತಿಪುರಂ, ಮೈಸೂರು_೪

THIS work has been published with the aid of a grant from The Ministry of Scientific Research and Cultural Affairs, Government of India.

*

ಪೀಠಿಕೆ

ಮುದ್ರಣ ಸೌಕರ್ಯವಿಲ್ಲದಿದ್ದ ಕಾಲದಲ್ಲಿ ಜನರು ತಮಗೆ ಬೇಕಾದ ವಿಷಯಗಳನ್ನೂ ಗ್ರಂಥಗಳನ್ನೂ ಓಲೆಗರಿಗಳ ಮೇಲೂ ಕಾಗದವು ಬಳಕೆಗೆ ಬಂದಮೇಲೆ ಕಾಗದದ ಮೇಲೂ ಬರೆದು ಇಟ್ಟುಕೊಳ್ಳುತ್ತಿದ್ದರು. ಪ್ರಾಚೀನ ಗ್ರಂಥಗಳನ್ನು ತಾವು ಓದುವುದಕ್ಕಾಗಿ ಲಿಪಿಕಾರರಿಂದ ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದೂ ಉಂಟು. ಇದರಿಂದಲೇ ಇಂದು ಒಂದೇ ಕೃತಿಯ ಹಲವಾರು ಕೈಬರಹದ ಪ್ರತಿಗಳು ನಮಗೆ ದೇಶದ ಬೇರೆ ಬೇರೆ ಮೂಲೆಗಳಲ್ಲಿ ದೊರೆಯುತ್ತಿವೆ. ಹೀಗೆ ದೇಶದಾದ್ಯಂತ ಇರುವ ಈ ವಿಧವಾದ ಹಸ್ತಲಿಖಿತ ಗ್ರಂಥಗಳಲ್ಲಿ ಮುಖ್ಯವಾದುವನ್ನು ಸಂಗ್ರಹಿಸಿ ನಮ್ಮ ಸಂಸ್ಥೆಯ ಗ್ರಂಥಾಲಯದಲ್ಲಿಟ್ಟಿದೆ. ಅವುಗಳಲ್ಲಿ ಕನ್ನಡ ಗ್ರಂಥಗಳ ಸ್ವರೂಪವನ್ನು ಈ ವರ್ಣನಾತ್ಮಕ ಸೂಚಿಯು ವಿವರವಾಗಿ ತಿಳಿಯಪಡಿಸುತ್ತದೆ. ಪ್ರತ್ಯಕ್ಷವಾಗಿ ಪುಸ್ತಕಗಳನ್ನು ನೋಡದೆಯೇ ಅವುಗಳ ಸ್ಥೂಲಪರಿಚಯವನ್ನು ಈ ವರ್ಣನಾತ್ಮಕ ಸೂಚಿಯು ಮಾಡಿಕೊಡುತ್ತದೆ.

ಈ ವಿಧವಾದ ವರ್ಣನಾತ್ಮಕ ಸೂಚಿಯು ಕನ್ನಡ ವಿದ್ವಾಂಸರಿಗೆ ಅನೇಕ ದೃಷ್ಟಿಯಿಂದ ಉಪಯುಕ್ತವೆಂಬುದನ್ನು ಮನಗಂಡು ಸಂಸ್ಥೆಯು ಕ್ರಿ. ಶ. ೧೯೫೪ ರ ವರೆಗೆ ಸಂಗ್ರಹಿಸಿರುವ ಕೈಬರಹದ ಕನ್ನಡ ಗ್ರಂಥಗಳ ವರ್ಣನಾತ್ಮಕ ಸೂಚಿಯನ್ನು ಅತ್ಯಲ್ಪ ಕಾಲದಲ್ಲಿ ಸಿದ್ಧಪಡಿಸಿ ನಾಲ್ಕುಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಈ ನಾಲ್ಕು ಸಂಪುಟಗಳಲ್ಲಿ ಇದು ಒಂದನೆಯದು. ಇದರಲ್ಲಿ 'ಅ'ಕಾರದಿಂದ 'ಚಾ' ಪೂರ್ತಿ ಒಟ್ಟು ೪೦೭ ಕೃತಿಗಳ ವಿವರಣೆಯನ್ನು ಕೊಟ್ಟಿದೆ.

ಮೊದಲು ಆಂಗ್ಲ ಸಂಖ್ಯೆಯಲ್ಲಿ ಕೊಟ್ಟಿರುವುದು ಗ್ರಂಥಗಳ ಕ್ರಮಾಂಕ. ಇದಾದ ಬಳಿಕ ಗ್ರಂಥದ ಸಾಂಕೇತಿಕಾಂಕವನ್ನು ಕನ್ನಡ ಅಂಕಿಗಳಲ್ಲಿ ಕೊಟ್ಟಿದೆ. ಈ ಸಾಂಕೇತಿಕಾಂಕದ ಹಿಂದೆ 'ಕೆ' ಎಂದು ಮಾತ್ರ ಇದ್ದರೆ ಅದು ಓಲೆಯ ಪ್ರತಿಯೆಂದೂ, 'ಕೆ. ಎ' ಎಂದಿದ್ದರೆ ದೊಡ್ಡ ಅಳತೆಯ ಕಾಗದದ ಪ್ರತಿಯೆಂದೂ, 'ಕೆ. ಬಿ' ಎಂದಿದ್ದರೆ ಚಿಕ್ಕ ಅಳತೆಯ ಕಾಗದದ ಪ್ರತಿಯೆಂದೂ ಸೂಚನೆ. ಒಂದೇ ಪುಸ್ತಕದಲ್ಲಿ ಹೆಚ್ಚು ಗ್ರಂಥಗಳಿದ್ದಾಗ ಆ ಗ್ರಂಥವು ಆ ಕಟ್ಟಿನಲ್ಲಿ ಎಷ್ಟನೆಯದು ಎನ್ನುವುದನ್ನು ತಿಳಿಯುವುದಕ್ಕಾಗಿ ಸಾಂಕೇತಿಕಾಂಕದ ಮುಂದೆ ಒಂದು ಗೀಟನ್ನು ಹಾಕಿ ಅದರ ಮುಂದೆ ಗ್ರಂಥದ ಸಂಖ್ಯೆಯನ್ನು ಕೊಟ್ಟಿದೆ. ಅದೇ ಸಾಲಿನ ಮಧ್ಯದಲ್ಲಿ ದೊಡ್ಡ ಅಕ್ಷರಗಳಲ್ಲಿರುವುದು ಗ್ರಂಥದ ಹೆಸರು. ಕೊನೆಯಲ್ಲಿರುವುದು ಗದ್ಯ, ಪದ್ಯ, ವಚನ, ಷಟ್ಪದಿ ಮೊದಲಾದ ಗ್ರಂಥಪ್ರಭೇದ. ಎರಡನೆಯ ಸಾಲಿನ ಆರಂಭದಲ್ಲಿ ಪುಸ್ತಕದ ಅಳತೆಯನ್ನು ಅಂಗುಲಗಳಲ್ಲಿ ಕೊಟ್ಟಿದೆ. ಅಂಗುಲದ ವಿಭಾಗವನ್ನು ದಶಮಾಂಶದಿಂದ ಸೂಚಿಸಿದೆ. ಈ ಅಳತೆಯ ಅಂಕಿಗಳಲ್ಲಿ ಮೊದಲನೆಯದು ಉದ್ದ, ಎರಡನೆಯದು ಅಗಲ. ಇವೆರಡರ

ಮಧ್ಯೆ ವಿಭಾಗಕ್ಕಾಗಿ ' × ' ಚಿಹ್ನೆಯನ್ನು ಉಪಯೋಗಿಸಿದೆ. ಗ್ರಂಥದ ಹೆಸರಿನ ಕೆಳಗೆ, ಕವಿಯು ತಿಳಿದಿದ್ದರೆ ಆತನ ಹೆಸರನ್ನೂ ಅದೇ ಸಾಲಿನ ಕೊನೆಯಲ್ಲಿ ಕವಿಯ ಕಾಲವನ್ನೂ ಈ ಎರಡೂ ತಿಳಿಯದಿದ್ದಾಗ ಆ ಸ್ಥಳಗಳಲ್ಲಿ ಪ್ರಶ್ನಚಿಹ್ನೆ (?) ಯನ್ನೂ ಕೊಟ್ಟಿದೆ. ಕವಿ ಮತ್ತು ಕಾಲವಿಚಾರಗಳಿಗೆ ಬಹುಮಟ್ಟಿಗೆ ಕರ್ಣಾಟಕ ಕವಿಚರಿತೆಯನ್ನು ಅವಲಂಬಿಸಿದೆ.

ಮೂರನೆಯ ಸಾಲಿನ ಆರಂಭದಲ್ಲಿ ಗ್ರಂಥ ಪ್ರಾರಂಭವಾಗುವ ಮತ್ತು ಮುಗಿಯುವ ಪತ್ರ ಸಂಖ್ಯೆಗಳನ್ನು ಹೇಳಿದೆ. ಪತ್ರಗಳಿಗೆ ಕ್ರಮಾಂಕವನ್ನು ಬರೆಯದಿರುವ ಪುಸ್ತಕಗಳಲ್ಲಿ ಒಟ್ಟು ಎಷ್ಟು ಪತ್ರಗಳಿವೆ ಎನ್ನುವುದನ್ನು ಲೆಕ್ಕಮಾಡಿ ಕೊಟ್ಟಿದೆ. ಕೆಲವು ಕಡೆಗಳಲ್ಲಿ ಪುಟಸಂಖ್ಯೆಯನ್ನು ಕೊಟ್ಟಿದೆ. ಪತ್ರ ಎಂದಿರುವ ಕಡೆ ಎರಡು ಪಾರ್ಶ್ವಗಳೂ ಸೇರಿ ಒಂದು ಎಂದೂ, ಪುಟ ಎಂದರೆ ಪ್ರತಿಪಾರ್ಶ್ವಕ್ಕೂ ಬೇರೆ ಬೇರೆ ಕ್ರಮಾಂಕ ಕೊಟ್ಟಿದೆ ಎಂದೂ ತಿಳಿಯಬೇಕು. ಒಂದೇ ಪಾರ್ಶ್ವದಲ್ಲಿ ಬರೆದಿರುವ ಕಡೆಗಳಲ್ಲೆಲ್ಲಾ ವಿಶೇಷ ವಿಭಾಗದಲ್ಲಿ, ಪತ್ರಗಳ ಒಂದೇ ಪಾರ್ಶ್ವದಲ್ಲಿ ಬರವಣಿಗೆ ಇದೆ ಎಂದು ತಿಳಿಸಿದೆ. ಇದೇ ಸಾಲಿನ ಮಧ್ಯದಲ್ಲಿ ಪ್ರತಿ ಪತ್ರದ ಒಂದೊಂದು ಪಾರ್ಶ್ವದಲ್ಲೂ ಇರುವ ಸಾಲಿನ ಸಂಖ್ಯೆಗಳನ್ನೂ, ಕೊನೆಯಲ್ಲಿ ಪ್ರತಿಸಾಲಿನಲ್ಲೂ ಇರುವ ಅಕ್ಷರ ಸಂಖ್ಯೆಗಳನ್ನೂ ಸರಾಸರಿ ಮಾನದಿಂದ ಕೊಟ್ಟಿದೆ. ಬಳಿಕ ಗ್ರಂಥದ ಆದಿಭಾಗವನು ' **ಆದಿ :** ' ಎನ್ನುವುದರ ಮುಂದೆಯೂ ಅಂತ್ಯಭಾಗವನ್ನು ' **ಅಂತ್ಯ :** ' ಎನ್ನುವುದರ ಮುಂದೆಯೂ ಕೊಟ್ಟಿದೆ. ಈ ಆದ್ಯಂತ ಗ್ರಂಥ ಭಾಗಗಳ ಕೆಲವು ಕಡೆಗಳಲ್ಲಿ ....ಈ ಗುರುತಿನ ಕಡೆ ಗ್ರಂಥ ತ್ರುಟಿತವಾಗಿದೆಯೆಂದೂ × × × × ಹೀಗಿರುವ ಕಡೆ ಪುಸ್ತಕದಲ್ಲಿ ಆ ಭಾಗದ ಗ್ರಂಥವಿದ್ದರೂ ಆ ಭಾಗವನ್ನು ಬಿಟ್ಟು ಮುಂದುವರಿಸಿದೆ ಎಂದೂ ತಿಳಿದುಕೊಳ್ಳಬೇಕು. **ಆದಿ, ಅಂತ್ಯ**ಗಳಾದ ಬಳಿಕ ಇರುವ **ವಿಷಯ** ಎಂಬ ವಿಭಾಗದಲ್ಲಿ ಪ್ರತಿಪಾದ್ಯ ವಿಷಯವನ್ನು ಒಂದೊಂದು ವಾಕ್ಯದಲ್ಲಿ ಸೂಚಿಸಲಾಗಿದೆ.

ಆ ಬಳಿಕ ಇರುವ ' **ವಿಶೇಷ** ' ಎಂಬ ವಿಭಾಗದಲ್ಲಿ ಆ ಪುಸ್ತಕಕ್ಕೆ ಸಂಬಂಧಪಟ್ಟಂತೆ ಲಿಪಿ, ಪುಸ್ತಕದ ಸ್ಥಿತಿ, ಶಕಟರೇಫದ ಬಳಕೆ, ಅಸಮಗ್ರ ಮತ್ತು ಲುಪ್ತ ಪತ್ರಗಳ ವಿವರಣೆ, ಅದೇ ಪುಸ್ತಕದಲ್ಲಿ ಇರುವ ಇತರ ಗ್ರಂಥಗಳ ಸಂಖ್ಯೆ ಇವುಗಳ ವಿವರವನ್ನು ಸಂಗ್ರಹವಾಗಿ ಕೊಟ್ಟಿದೆ. ಕೆಲವು ಕನ್ನಡ ಪುಸ್ತಕಗಳೊಡನೆ ಇರುವ ಸಂಸ್ಕೃತ ಮತ್ತು ತೆಲುಗು ಭಾಷೆಯ ಗ್ರಂಥಗಳನ್ನು ಪ್ರತ್ಯೇಕವಾಗಿ ಪಟ್ಟಿಮಾಡಿ ನಾಲ್ಕನೆಯ ಸಂಪುಟದ ಅನುಬಂಧದಲ್ಲಿ ಕೊಟ್ಟಿದೆ.

ಪ್ರತಿಗ್ರಂಥದ ವರ್ಣನೆಯೂ ' ಕ್ರಮಾಂಕ ' ಮೊದಲಾಗಿ ' ವಿಶೇಷ ' ಕಡೆಯಾಗಿ ಹದಿನಾಲ್ಕು ವಿಭಾಗಗಳನ್ನೊಳಗೊಂಡಿದೆ.

ಸೂಚಿಯಲ್ಲಿ ಎತ್ತಿಕೊಟ್ಟಿರುವ ಭಾಗಗಳು ಪಾಠದೃಷ್ಟಿಯಲ್ಲಿ ಮೂಲಪ್ರತಿಯನ್ನೆ ಸಂಪೂರ್ಣವಾಗಿ ಹೋಲುತ್ತಿವೆ. ಆದರೆ ಪದ್ಯಭಾಗವನ್ನು ಆಯಾ ಛಂದಸ್ಸಿಗನು

ಗುಣವಾಗಿ ವಿಭಾಗಮಾಡಿ, ಗೀಟುಗಳಿದ್ದರೆ ಅವನ್ನು ತೆಗೆದುಹಾಕಿದೆ. ಓದುಗರಿಗೆ ಸೌಲಭ್ಯವಾಗಲೆಂದು ಅಗತ್ಯವಿದ್ದ ಕಡೆಗಳಲ್ಲಿ ಆಧುನಿಕ ಚಿಹ್ನೆಗಳನ್ನು ಹಾಕಲಾಗಿದೆ. ಲಿಪಿಕಾರರು ಆದ್ಯಂತಗಳಲ್ಲಿ ಅನೇಕ ಇಷ್ಟದೇವತೆಗಳ ಹೆಸರುಗಳನ್ನು ಬರೆದಿದ್ದರೆ, ಮೊದಲನೆಯದನ್ನು ಮಾತ್ರ ಕೊಟ್ಟು ಉಳಿದುವುಗಳನ್ನು ಬಹುಶಃ ಬಿಡಲಾಗಿದೆ. 'ಶ್ರೀ'ಕಾರದ ವಿಷಯದಲ್ಲಿಯೂ ಅಷ್ಟೆ. ಒಂದನ್ನೊ ಎರಡನ್ನೊ ಉದ್ಧರಿಸಿ ಉಳಿದುವನ್ನು ಬಿಟ್ಟಿದೆ. ಅನೇಕ ಪ್ರತಿಕಾರರು ಗ್ರಂಥಾಂತ್ಯದಲ್ಲಿ, ತಪ್ಪಂ ಬರೆದಂ ಕಡುಜಡ। ನಪ್ಪಂ ಬರೆದಾತನೆಂದು ಬಯ್ಯಲು ಬೇಡಾ॥ ತಪ್ಪಕ್ಕು ಶುದ್ಧಮಕ್ಕು। ತಪ್ಪುಳ್ಳರೆ ತಿದ್ದಿಕೊಳ್ಳುವುದುತ್ತಮ ಪುರುಷರ್—ಎಂದಿರುವುದುಂಟು. ಇದನ್ನು ಗ್ರಂಥಸೂಚಿಯಲ್ಲಿ ಸೇರಿಸಿಲ್ಲ. ಹಸ್ತಪ್ರತಿಗಳ ಸ್ವರೂಪವು ಗೊತ್ತಾಗಲೆಂದು ಅದರಲ್ಲಿರುವ ತಪ್ಪುಗಳನ್ನು ತಿದ್ದದೆ ಅವುಗಳಲ್ಲಿರುವಂತೆ ತಪ್ಪಾಗಿಯೇ ಕೊಟ್ಟಿದೆ. ಸಂಶೋಧಕರು ಇಂತಹ ಅಶುದ್ಧವೂ ಅಸಾಧುವೂ ಆದ ಬರವಣಿಗೆಯಿಂದ ಕೂಡಿದ ಹಸ್ತಪ್ರತಿಗಳ ಆಧಾರದ ಮೇಲೆ ಸರಿಯಾದ ಪಾಠವನ್ನು ಕಂಡುಹಿಡಿದು ಮೂಲಪ್ರತಿಯನ್ನು ಪುನರ್ನಿರ್ಮಿಸಿ ಸಂಪ್ರತಿಸಿ ಪ್ರಕಟಿಸುವಲ್ಲಿ ಎಷ್ಟು ಶ್ರಮ ವಹಿಸಬೇಕಾಗುತ್ತದೆ ಎಂಬುದನ್ನು ನಿಷ್ಪಕ್ಷಪಾತಿಗಳೂ ಗುಣಗ್ರಾಹಿಗಳೂ ಆದ ವಿದ್ವಜ್ಜನರು ಊಹಿಸಕೊಳ್ಳಬಲ್ಲರು.

ಈಗ ದೊರೆಯುತ್ತಿರುವ ಪ್ರಾಚೀನ ಗ್ರಂಥಗಳ ಹಸ್ತಪ್ರತಿಗಳು ಲಿಪಿಕಾರದಿಂದ ಪ್ರತಿಮಾಡಲ್ಪಟ್ಟವು. ಕವಿಯ ಸ್ವಹಸ್ತಾಕ್ಷರ ಪ್ರತಿಗಳಲ್ಲ. ಕವಿ ಗ್ರಂಥವನ್ನು ಸೃಷ್ಟಿಸಿದವ ಮಾತ್ರ. ಆತ ಒಬ್ಬನೇ. ಆದರೆ ಆ ಗ್ರಂಥಭಂಡಾರದ ರಕ್ಷಣೆಯ ಭಾರವನ್ನು ಬಹುಮಂದಿ ಲಿಪಿಕಾರರು ಹೊತ್ತಿದ್ದಾರೆ. ಗ್ರಂಥಕ್ಕೆ ಮರುಜೀವಣಿ ಎರೆಯುವವರು ಅವರು. ಒಂದು ಗ್ರಂಥದ ಹಲವಾರು ಪ್ರತಿಗಳನ್ನು ಬೇರೆ ಬೇರೆ ಲಿಪಿಕಾರರು ಬರೆದಿರುವುದರಿಂದಲೇ ಈಗಲೂ ಪ್ರಾಚೀನ ಗ್ರಂಥಗಳು ಜೀವಂತವಾಗಿವೆ.

ಅನೇಕ ಪ್ರತಿಗಳನ್ನು ಬರೆಯುವುದರ ಮೂಲಕ ಈ ಪ್ರತಿಕಾರರು ಪ್ರಾಚೀನ ಸಾಹಿತ್ಯದ ಒಂದು ಬೃಹದ್ರತ್ನಾಕರವನ್ನೇ ರಚಿಸಿದ್ದಾರೆ. ಇದಕ್ಕಾಗಿ ಪ್ರತಿಯೊಬ್ಬ ಸಾಹಿತ್ಯಾಭಿಮಾನಿಯೂ ಈ ಲಿಪಿಕಾರರನ್ನು ಅಭಿನಂದಿಸಬೇಕು.

ತಾನು ಬರೆದ ಬರವಣಿಗೆಯಲ್ಲಿ ತಪ್ಪು ಕಂಡುಬಂದರೆ ಅದನ್ನು ಸರಿಪಡಿಸಿಕೊಳ್ಳಿ ಎಂದು ಗ್ರಂಥಾಂತ್ಯದಲ್ಲಿ ಓದುಗರನ್ನು ಪ್ರಾರ್ಥಿಸದ ಲಿಪಿಕಾರನಿಲ್ಲ. ಇದು ಆತನ ವಿನಯವನ್ನು ಸೂಚಿಸುತ್ತದೆ. ಗ್ರಂಥಾರಂಭಕ್ಕೆ ಮೊದಲು ಪ್ರತಿಯೊಬ್ಬ ಲಿಪಿಕಾರನೂ ತನ್ನ ಇಷ್ಟದೈವ ಮತ್ತು ಗುರುಗಳನ್ನು ಸ್ತುತಿಸಿ ಬಳಿಕ ಗ್ರಂಥವನ್ನು ಬರೆಯಲು ಪ್ರಾರಂಭಿಸುತ್ತಾನೆ. (ಈ ವರ್ಣನಾತ್ಮಕ ಸೂಚಿಯಲ್ಲಿ ಅತ್ಯಧಿಕವಾಗಿ ಸ್ತುತಿಗಳು ಇರುವೆಡೆಗಳಲ್ಲಿ ಅವುಗಳನ್ನು ಬಿಟ್ಟು ಗ್ರಂಥವನ್ನು ಮುಂದುವರಿಸಿದೆ.) ಕೆಲವರು ತಾವು ಬರೆಯಲು ಪ್ರಾರಂಭಿಸಿದ ಮತ್ತು ಪ್ರತಿಮಾಡಿ ಮುಗಿಸಿದ ಕಾಲವಿವರವನ್ನು ಬರೆದಿದ್ದಾರೆ.

ವೀರಮಾಹೇಶ್ವರಾಚಾರ ಸಂಗ್ರಹವನ್ನು ಬರೆದ ಒಬ್ಬ ಲಿಪಿಕಾರನು ತಾನು ತಾಳೇಗರಿಯನ್ನು ಸಂಗ್ರಹಿಸಿ ಅದರಲ್ಲಿ ಬರವಣಿಗೆಯನ್ನು ಪೂರ್ತಿಮಾಡಿರುವ ವರೆಗಿನ ವಿವರವನ್ನು ಗ್ರಂಥಾಂತ್ಯದಲ್ಲಿ ಕೊಟ್ಟಿರುತ್ತಾನೆ. ಅದರ ಒಕ್ಕಣೆ ಈ ರೀತಿ ಇದೆ :—

"ಪಡುವಣ ದೆಸೆಯಿಂದೊಪ್ಪುತಿರ್ದ ಲವಣಾಂಬುಧಿಗೆ ಪುರ್ಬುಂ ಪುಟ್ಟಿದ ಹಾಂಗಿರ್ದ ಘಟ್ಟದ ಸರೋವರಂಗಳಲ್ಲೇಕಪಾದಚರ ಕೆದಱದ ಮುಂಡೆ ಮೌನವ್ರತ ದಿಂದೊಪ್ಪುತ್ತಿರ್ದ ದಿವ್ಯತಾಳಪತ್ರಮಂ ತಂದು ದ್ವಿತೀಯ ರಂಧ್ರವಂ ಮಾಡಿ ಬಿಂಗದ ಹೊರೆಯುಂತೊಂದೊಂದಂ ಪೊಂದಿಸಿಕ್ಕೆಲದಲುಭಯಂ ಪಲಗೆಯಷ್ಟಲೋವೆಯಷ್ಟ ಮೂಲೆಗಳಿಂದತ್ಯಂತಲಂಕಾರವಾಗಿ ಕಣ್ಗೆ ಚೆಲ್ವಾಗೊಪ್ಪಲ್ಪಟ್ಟ ದಿವ್ಯ ಶಿವಾಲಯವಂ ನಿರ್ಮಿಸಿದಿಂತಿರಬಾರದೆಂದು ಬಿಂದು ವಿಸರ್ಗಂ ದಡ್ಡತೆ ಪೊಂದಿದಾವ್ಯತೋರ್ಧ್ವರೇಫೆ ದೀರ್ಘ ಹ್ರಸ್ವದಿಂದೊಪ್ಪುತ್ತಿರ್ದ್ದ ಅಕ್ಷರಮೂರ್ತಿಗಳಂ ಲೇಖನವಂಮಾಡೆಂದು ಚಿಕ್ಕೈಯನವರು ದಿವ್ಯ ಆಲೇಖಮುಂ ಷಟ್ಸ್ಥಲಜ್ಞಾನ ಸಂಪನ್ನರಾದ ವಿರಕ್ತ ಅನ್ನ ದಾನ ದೇವರ ಹಸ್ತದಲ್ಲಿ ಪಾಲಿಸಲು ಯಿಂತೀ ಶಿವಗಣಂಗಳ ನಿರೂಪವಂ ಕೈಗೊಂಡು ಬರವುದಕ್ಕೆ ಯನ್ನ ಕಂಗಳು ಜಿಹ್ವೆ ಕರ ಕರ್ನಂಗಳು ಗತಿ ಮತಿ ಚೈತನ್ಯಕ್ಕೆ ಸಮಸ್ತ ಸದ್ಭಕ್ತ ವೀರಮಾಹೇಶ್ವರರುಗಳೇ ಕರ್ತ್ತರಾದ ಕಾರಣ ಯಿಂತಿವರ ಕರುಣ ಪ್ರಸಾದಮಂ ಕೈಕೊಂಡು ಈ ವೀರಮಾಹೇಶ್ವರಾಚಾರ ಸಂಗ್ರಹವ ಬರದೆನಲ್ಲದೆ ನನ್ನಿಚ್ಛೆಯೊಳಂ ನಾ ಬರದುದಿಲ್ಲ

ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಾಯಾ |
ಅಬದ್ಧೋ ವಾ ಸುಬದ್ಧೋ ವಾ ಮಮ ದೋಷೋ ನ ವಿದ್ಯತೇ ||

ಇಂತೆಂದುದಾಗಿ ಈ ಪುಸ್ತಕವಂ ಬರದ ಸ್ಥಿತಿಯಂತೆಂದಡೆ–ಸ್ವಸ್ತಿಶ್ರೀ ಜಯಾಭ್ಯುದಯ ವಿಧಿಷ್ಟ ಶಕ ವಿಕ್ರಮ ಶಕಯೊ ದ್ವಿತೀಯಶಕ ಸಂದದು ೪೦೦೦ ವರುಷ | ಶಾಲಿವಾಹನಶಕ ಸಂದದು ೧೫೪೩ ವರುಷ ಸಂದು ವರ್ತಮಾನವಾದ ಶಾರ್ವರಿ ಸಂವತ್ಸರದ ಚೈತ್ರಮಾಸದ ಶುಕ್ಲಪಕ್ಷದ ರೇವತಿ ನಕ್ಷತ್ರದ ಶುದ್ಧ ದಶಮಿ ಶಶಿವಾರದಲ್ಲು ಬರದ ವಿರಕ್ತ ಅನ್ನದಾನದೇವರು ಆಚಾರ್ಯ ಚಿಕ್ಕೈಯದೇವಗೆ ನೀಲಕಂಠನಾಗನಾಥಾಚಾರ್ಯರು ವಿರಚಿಸಿದಂಥಾ ವೀರಮಾಹೇಶ್ವರಾಚಾರ ಸಂಗ್ರಹವೆಂಬ ಬಾಹುಲ್ಯವಾದ ವ್ಯಾಖ್ಯಾನಶಾಸ್ತ್ರವ ಬರದು ಸಂಪೂರ್ನವಾಯಿತ್ತು | ಯಿಂತೀ ಪುಸ್ತಕಕ್ಕೈಶ್ವರ್ಯಮಸ್ತು ಶುಭಮಸ್ತು ನಿರ್ವಿಘ್ನಮಸ್ತು ಅಜೀರ್ಣಮಸ್ತು | ಆಯುರಾರೋಗ್ಯಮಸ್ತು ಚಂದ್ರಾರ್ಕ ತಾರಾ ನಭವುಳ್ಳನಕಂ ಸ್ಥಾಯಿಯಸ್ತು ||

ಭಗ್ನಪೃಷ್ಠಕಟಗ್ರೀವ ಬದ್ಧದೃಷ್ಟಿರಥೋಮುಖಂ | ಕಷ್ಟೇನ ಲಿಖಿತಂ ಶಾಸ್ತ್ರಂ| ಯತ್ನೇನ ಪರಿಪಾಲಯ || ಇಂತೆಂದುದಾಗಿ ಈ ಪುಸ್ತಕವಂ ಬರವರ್ಗಂ ಓದುವರ್ಗಂ ಶಿವಾನುಭಾವವಂ ನಿರೂಪಿಸುವರ್ಗಂ ಲಾಲಿಸುವರ್ಗಂ ಸಹಸ್ರಕೋಟಿ ನಮಸ್ಕಾರವಂ ಮಾಡುತ್ತಿದೇನೆ. ಎನ್ನ ಬಿಂನಪವನವಧರಿಸಿ ಯಿದಂ ಬರದ ನಿಂಮ ಕರುಣದ ಕಂದ ನಿಗೆ ನಿಮ್ಮ ಕೃಪಾಮೃತ ರಸವನೆಱದು ನೋಡಿ ಸಲಹಿ ನಿಮ್ಮ ಶ್ರೀಪಾದ ಪದ್ಮಾ

ರಾಧನೆಯ ಯೆಂದೆಂದು ಪಿಂಗದಂತೆ ಮಾಡಯ್ಯಾ ಲಿಂಗತಂದೆ ಶರಣು ಶರಣು ಶರಣಾರ್ತಿ ॥

ಪುಸ್ತಕವಂ ವನಿತಾ ವಿತ್ತಂ ಪರಹಸ್ತಗತಂ ಗತಂ ।
* ಆಯಾಸಂ ಪುನರಾಯಾಸಂ ಭ್ರಷ್ಟಭ್ರಷ್ಟಾ ಚ ಭ್ರಷ್ಟಯೋ ॥
ಜಲಾದ್ರಕ್ಷ ತೈಲಾದ್ರಕ್ಷ ದ್ರಕ್ಷಮಸ್ಲಾಗ್ಯ ಬಂಧನಾತ್ ।
ಅವಸ್ಯ ಯಾಚಕದ್ರಕ್ಷ ಮಮ ರಕ್ಷಂತು ಪುಸ್ತಕಂ ॥

ನೀಲಕಂಠ ನಾಗನಾಥಾಚಾರ್ಯ ವಿರಚಿತಂ ವೀರಮಾಹೇಶ್ವರಾಚಾರ ಸಂಗ್ರಹಂ ಸಂಪೂರ್ಣಂ ಮಂಗಳ ಮಹಾಶ್ರೀ ॥ ”

ಈ ವಿಧವಾದ ಒಕ್ಕಣೆಯಿಂದ ಪ್ರತಿಕಾರನ ವಿಚಾರವೂ ಆತನು ಪ್ರತಿಮಾಡಲು ತೆಗೆದುಕೊಂಡ ಶ್ರಮವೂ ಸ್ಪಷ್ಟಪಡುತ್ತದೆ.

ಈ ಗ್ರಂಥಸೂಚಿಯನ್ನು ಸಂಸ್ಥೆಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿರುವ ಶ್ರೀ ಬಿ. ಎಸ್. ಸಣ್ಣಯ್ಯನವರು ಮತ್ತು ರಿಸರ್ಚ್ ಅಸಿಸ್ಟೆಂಟರು ಅತ್ಯಲ್ಪಕಾಲದಲ್ಲಿ ಸಿದ್ಧಪಡಿಸಿರುವುದು ಸಂತೋಷಕರವಾದ ವಿಷಯ.

ಈ ವರ್ಣನಾತ್ಮಕ ಸೂಚಿಯ ಮೊದಲನೆಯ ಸಂಪುಟವನ್ನು ಅತಿ ಶೀಘ್ರಕಾಲ ದಲ್ಲಿ ಅಂದವಾಗಿ ಮುದ್ರಿಸಿಕೊಟ್ಟಿರುವ ಮೈಸೂರಿನ ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ ಮಾಲೀಕರಿಗೂ, ಈ ಗ್ರಂಥ ಪ್ರಕಟನೆಗೆ ಆರ್ಥಿಕ ನೆರವು ನೀಡಿರುವ ಕೇಂದ್ರ ಸರ್ಕಾರ ದವರಿಗೂ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಈ ಸಂಸ್ಥೆಯ ಕೃತಜ್ಞತಾ ಪೂರ್ವಕವಾದ ವಂದನೆಗಳು.

ಹೆಚ್. ದೇವೀರಪ್ಪ

---

* ಈ ಶ್ಲೋಕಗಳ ಸರಿಯಾದ ಪಾಠ ಈ ರೀತಿ ಇದೆ.

ಅಥವಾ ಪುನರಾಯಾತಂ ಜೀರ್ಣಂ ಭ್ರಷ್ಟಾ ಚ ಖಂಡಶಃ ॥
ತೈಲಾದ್ರಕ್ಷೇಜ್ಜಲಾದ್ರಕ್ಷೇದ್ರಕ್ಷೇಚ್ಛಿಥಿಲ ಬಂಧನಾತ್ ।
ಮೂರ್ಖಹಸ್ತೇ ನ ದಾತವ್ಯಮೇವಂ ವದತಿ ಪುಸ್ತಕಂ ॥

ಕನ್ನಡ ಹಸ್ತಪ್ರತಿಗಳ
ವರ್ಣನಾತ್ಮಕ ಸೂಚೀ

ಪ್ರಥಮ ಸಂಪುಟ (ಅ–ಚಾ)

→ 1

ಕೆ ೧೬೪/೧ | **ಅಕಾರಾದಿ ನಿಘಂಟು** | ಗದ್ಯ
೨೦.೩" × ೨.೩" | ಅಮೃತನಂದಿ (?) | ಸು ೧೩೦೦
೧–೪೫ ಪತ್ರ | ೯ ಪಂಕ್ತಿ | ೬೨ ಅಕ್ಷರ

ಆದಿ : ಅಳಿಷ್ಠಃ—ತಿಲಕ ವೃಕ್ಷ | ಅಳಿಕಾ—ಬಳ್ಳಿಹರುವೆ | ಅಳಿಕಂ—ಬಳಿಸೊಂಡೆ | ಅಳಕಃ—ಗರುಗಾ | ಅಲಸಾ—ಚಿಂನ್ನದಾರೇ | ಅಕ್ಷಿ—ನರುವಂಜಿ | ಅಲಾಜ್ಯಂ—ವಣಗಿದ ಮರಾ |

ಅಂತ್ಯ : ಕ್ಷೌದ್ರಜಾ—ಜೇನಶರ್ಕ್ಕರೆ | ಕ್ಷೌದ್ರಪ್ರಿಯಃ—ನೀರಿಪ್ಪೆ | ಕ್ಷೌದ್ರ ಧಾತು—ಹೇಮ ಮಾಕ್ಷಿಕಾ | ಕ್ಷೌದ ಶರ್ಕ್ಕರಾ—ಜೇನ ಶರ್ಕ್ಕರೆ | ನಂದನ ಸಂವತ್ಸರದ ಕಾರ್ತಿಕ ಶು ೩ಲ್ಲು ಕಟಿಗೆ ಸೇರುವೆಗಾರು ಪುಟಂಣ್ಣೈಯ್ಯನವರಿಗೆ | ಕಟಿಗೆ ಪಟ್ಟಣದ ವೆಂಕಟೈಯನ ಮಗ ತಿಂಮೈಯನು ಬರದು ಕೊಟ್ಟ ಅಕಾರಾದಿ ನಿಗಂಟು ಪುಸ್ತಕಕ್ಕೆ ಜಯ ಮಂಗಳ ಮಹಾಶ್ರೀ.

ವಿಷಯ : ವೈದ್ಯ ನಿಘಂಟು. MS. 1 P.

ವಿಶೇಷ : ಇದೇ ಕಟ್ಟಿನಲ್ಲಿ ದ್ರಾಕ್ಷಾದಿ ಚೂರ್ಣವೆಂಬ ಇನ್ನೊಂದು ಗ್ರಂಥವಿದೆ.

→ 2

ಕೆ. ಎ. ೧೩೨ | **ಅಕಾರಾದಿ ನಿಘಂಟು [ವೈದ್ಯಸಂಬಂಧ]** | ಗದ್ಯ
೧೩.೧" × ೮.೧" | ಲಕ್ಷ್ಮಣಪಂಡಿತ | ಸು. ೧೭೭೫
೧–೧೧ ಪತ್ರ | ೩೬ ಪಂಕ್ತಿ | ೩೪ ಅಕ್ಷರ

ಆದಿ : ಅಕಃ | ಅಯೋ ಗೌರಿ | ಅಯೇ ಕಂಕಣೀ | ಅಂತಕಾರಿ | ಶಿವ | ಅಪಿ ವಿಷ್ಣು | ಅಕ್ಕಣಾ | ಪುನಷ್ಟಿ | ಚಿಟಿಕೆ | ಹಾಲೆ ಅರ್ಕ | ರೋಹಿಣಿ | ಗೂಧೆ | ಅತುಃ ನಾದಲು | ಅಗಃ ವೃಕ್ಷಃ | ಕಲ್ಲರೆ | ಅಗ | ಮರನು | ಅಗಸ್ತ್ಯ | ಅಗಸಿ | ಮುನಿ | ರಾವಣ....

ಅಂತ್ಯ : ಸುಗಂಧಿ | ತತ್ಸರ | ಮುಷ್ಟೆ | ತಲರೂಪಕ | ಅವುಡಲ | ತಲಶೃಂಗಾಟ | ನೆಗ್ಗಿಲು | ತಕ್ರೆ | ತಿಗಟೆ | ತ್ರಾಯಮಾಣ | ದಸರಿ | ತಾಲಸ್ಕಂದ ಪತ್ರಕ |

ತಾಂಶಿ । ತಾಳೆ । ಕಿರುನಲಿಗೆ । ಕೆಂನ ಕೆಕ್ಕೆ । ತಾಳಿ । ಶ್ರೀತಾಳಿ । ಶ್ರೀಕಂಠ ಭೂಷಣ ।
ಯಿಾ ಪುಸ್ತುಕ ಯಿದ್ದದ್ದೆ ಯಿಷ್ಟು ಶೃತವಿರಬೇಕೂ.

ವಿಷಯ : ನಿಘಂಟು. ವೈದ್ಯಶಾಸ್ತ್ರ

ವಿಶೇಷ : ಸಾಧಾರಣವಾಗಿದೆ.

→ 3

ಕೆ ೪೬೮/೮	<u>ಅಕ್ಕೌಗಳ ಹಾಡು</u>	ಹಾಡು
೧೫.೫″ × ೧″	? —	?
೩೧–೩೨ ಪತ್ರ	೪ ಪಂಕ್ತಿ	೭೦ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯೇಂ ನವು: ॥
ಅಕ್ಕೌಕಂಢೆ ಕನಸಿನೊಳಾನು ಸತ್ಕಾಂಢ್ಯಾ ಪೃಥ್ವಿ ಭೂಮಂಡಲಾ ಪತಿಗಳೆಲ್ಲರನೂ । ಅಕ್ಕೌ ತಂಡಾತಂಢದಲಿ ವೊಡ್ಡೋಲಗಗಳೊಪ್ಪಿತಖಿಳಾಂಡ್ಡ ಭುಗಿಲೆನೆ ಶಬ್ದ ಘೋಷಾ ॥ ಪಲ್ಲ ॥

ಅಂತ್ಯ : ಅಕ್ಕೌ ಇನಿತು ಲೋಕಾಧಿಲೋಕದೊಳಿಹ · ಪಟ್ಟಣದೊಳನಿತರೊಳೆಲ್ಲ ನೆಲೆಗೊಂಢು । ಅಕ್ಕೌ ಅನುಪವು ನಿರಾವಮಾಯ ನಿಃಷ್ಕಲ ಫರಬ್ರಂಹ್ಮ । ಇನಕೋಟಿ ತೇಜ ರಾಜಿಸಿತೂ । ಅಕ್ಕೌ ವುನಕೆ ಮಂಗ್ಗಳಾವಾಗಿ ಸಾಹಾಸ್ರ ಧಳಕವುಲದೊಳಗನುಗೊಳಿಸಿ ಪ್ರಣವು ಸ್ವರೂಪಾ । ಅಕ್ಕೌ ಘನವುಹಿವು ಸಿಥ ಶ್ರೀಗುರುವಿರಲು ನಾಂ ಕಂಡು । ಅಕ್ಕೌ ಅನಿತರೊಳರಿದು ಕಣ್ಧರೆಧೆ ॥ ೭ ॥ ಶ್ರೀ ॥

ವಿಷಯ : <u>ಶಿವಸ್ತುತಿ</u>.

ವಿಶೇಷ : ಇದೇ ಕಟ್ಟಿನಲ್ಲಿ ಹಾಡುಗಳು, ಬಸವೇಶ್ವರನ ನಾಮಾವಳಿಗಳು ಎಂಬ ಕೃತಿಗಳಿವೆ.

4

ಕೆ ೨೫೯/೩ | ಅಕ್ಕಗಳ ಸೃಷ್ಟಿ [ವಚನ] | ವಚನ
೯.೫" × ೧.೭" | ಅಕ್ಕಮಹಾದೇವಿ | ಸು. ೧೧೬೦
೪ನೆಯ ಪತ್ರ | ೧೨ ಪಂಕ್ತಿ | ೪೬ ಅಕ್ಷರ

ಆದಿ : ಅಕ್ಕಗಳ ಶ್ರುಷ್ಟಿ ॥ ಆದಿಯನಾಧಿ ನಿತ್ಯಾನಿತ್ಯವ ತಿಳಿಯಲರಿಯದೆ। ವಾಯಕ್ಕೆ ಪರಬ್ರಂಹ್ಮವ ನುಡಿವ ವಾಯು ಪ್ರಾಣಿಗಳವರೆತ್ತಬಲ್ಲರೋ.

ಅಂತ್ಯ : ಆ ಪಂಚಮುಖದಿಂದವೆ ಪಂಚಾಕ್ಷರ ಉತ್ಪತ್ಯ ಆ ಪಂಚಾಕ್ಷರಿಯಿಂದವೆ ಪಂಚ.

ವಿಷಯ : ಜಗತ್ಸೃಷ್ಟಿ ಕ್ರಮದ ವಿವರ.

ವಿಶೇಷ : ಆದಿಯಲ್ಲಿ 'ಅಕ್ಕಗಳ ಸೃಷ್ಟಿ' ಎಂದಿದೆ. ಗ್ರಂಥ ಪರಿಶೀಲನೆಯಿಂದ ಇದು ಅಕ್ಕಮಹಾದೇವಿಯ ಸೃಷ್ಟಿವಚನಗಳ ಒಂದು ಭಾಗ ಎಂದು ತಿಳಿದುಬರುತ್ತದೆ. ಈ ಕಟ್ಟಿನಲ್ಲಿ ಪ್ರಾಣಲಿಂಗ ಜ್ಞಾನದರ್ಪಣ, ಸರ್ವಾಂಗಲಿಂಗಸ್ಥಲದ ವಚನ, ಸ್ವತಂತ್ರ ಸಿದ್ಧಲಿಂಗೇಶ್ವರನ ವಚನ, ಪ್ರಾಣಲಿಂಗ ಜ್ಞಾನದರ್ಪಣ ಎಂಬ ಕೃತಿಗಳಿವೆ.

5

ಕೆ ೪೬೮/೪ | ಅಕ್ಕಗಳ ಸೃಷ್ಟಿ [ವಚನ] | ವಚನ
೧೫.೩"×೧" | ಅಕ್ಕಮಹಾದೇವಿ | ಸು. ೧೧೬೦
೧೦–೧೩ ಪತ್ರ | ೪ ಪಂಕ್ತಿ | ೫೦ ಅಕ್ಷರ

ಆದಿ : ಶ್ರೀಗುರುಭ್ಯೋನಮಃ ॥ ಅಕ್ಕಗಳ ಶ್ರುಷ್ಟಿ ॥ ಆಧಿಅನಾಧಿ ನಿತ್ಯನಿತ್ಯವದ ತಿಳಿಯಲರಿಯದೆ ವಾಯಕ್ಕೆ। ಪರಬ್ರಂಹ್ಮವ ನುಡಿವ। ವಾಯುಪ್ರಾಣಿಗಳಿವರೆತ್ತಬಲ್ಲರೋ.

ಅಂತ್ಯ : ಮುಂನವೆ ಅಲ್ಲ। ಶೂನ್ಯವೆ ಅಲ್ಲ। ನಿಃಶೂನ್ಯನೆ ಅಲ್ಲ। ದ್ವೈತವೆ ಅಲ್ಲ। ಅದ್ವೈತವೆ ಮುಂನವೆ ಅಲ್ಲ। ಯಿಂತಿ ವೂಭೆಯಾತ್ಮಕ ತಾನೆಯಾಗಿ। ಯಿದು ಕಾರಣ। ಯಿದರ ಆಗುಹೋಗು। ಸಕ್ಕಿಲಸಂಮುಂದವ। ಚೆಂನ್ನಮಲ್ಲಿಕಾರ್ಜುನೈಯ್ಯ ನಿಂಮ್ಮ ಶರಣರೆ ಬಲ್ಲರೂ। ಅಕ್ಕಗಳ ಶೃಷ್ಟಿಯ ವಚನ ಸಮಾಪ್ತ.

ವಿಷಯ : ಜಗತ್ಸೃಷ್ಟಿಕ್ರಮದ ವಿವರ.

ವಿಶೇಷ : ಚೆನ್ನಮಲ್ಲಿಕಾರ್ಜುನಾಂಕಿತವಿದೆಯಾಗಿ ಅಕ್ಕಮಹದೇವಿಯ ವಚನವಿದೆಂದು ನಿರ್ಣಯವಾಗುತ್ತದೆ. ೧೦ ನೆಯ ಪತ್ರ ಮುರಿದುಹೋಗಿದೆ. ಈ ಕಟ್ಟಿನಲ್ಲಿ ಪ್ರಭುದೇವರ ಸೃಷ್ಟಿ, ಪುಷ್ಪಮಾಲೆ ಮೊದಲಾದ ಗ್ರಂಥಗಳಿವೆ.

6

ಕೆ. ೧೯೫	ಅಕ್ರೂರ ಚರಿತ್ರೆ	ಭಾಮಿನೀಷಟ್ಪದಿ
೯.೩"×೧.೩"	ಸೋಮನಾಥ	ಸು ೧೬೦೦
೧–೪೨ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ಅಕ್ರೂರಚರಿತೆಯ ಪುಸ್ತಕಕ್ಕೆ ನಿರ್ವಿಗ್ನಮಸ್ತು ||
ಶ್ರೀಯರಸನವತರಿಸಿ ದಯಿತ್ಯ ನಿ
ಕಾಯವನು ಸಂಹ್ವರಿಸಿ ದಿವಿಜರ
ಕಾಯಿದನಕ್ರೂರಂಗೆ ತಂನ್ನೆಯ ನಿಜವ ತೋರಿಸಿದಾ || ಪಲ್ಲ ||

ಶ್ರೀರಮಣನಮ್ರುತಾಬ್ಧಿಮಂದಿರ
ನೀರಜಾಸನ ಜನಕ ಜಗದಾ
ಧಾರ ಫಣಿ ಪರಿಯಂಕ್ಯನಹಿರಿಪು ಗಹನನಸುರಹರಾ
ಧಾರುಣೀಧರ ವರಸುದರುಶನ
ವಾರಿರುಹ ಕೌಮೋದಕೀಧರ
ನಾರದಪ್ರಿಯ ಸಲಹುಗೆಂಮ್ಮ ಮನೋನುರಾಗದಲಿ || ೧ ||

ಅಂತ್ಯ : ಬೇಡ ಮಾಣತಿಪೊಗಳೆ ನೀ ಮರು
ಳಾಡದಿರು ಸಾಕೆನುತ್ತ ಶರಣರ
ಕೂಡೆ ಸರಸೋಕ್ತಿಗಳನಾಡುತ ನಗುತ ಕೈದೊಳದೂ
ಕೂಡೆ ತಾಪಸರಂತೆ ಭೋಗರ
ವೇದೆಗೊಳಗಾಗಿಪ್ಪ ಹರಿ ನಲಿ
ದಾಡುತವೆ ಬಂದಡರಿದನು ಮಣಿಖಚಿತ ವಿಷ್ಠರವಾ || ೫೬ ||

ಅಂಸಂ ೮ ಕ್ಕಂ ಪದನು ೪೬೩ ಕಂ ಮಂಗಳಮಹಾಶ್ರೀ ||
ಕ್ರೋಧಿ ಸಂವತ್ಸರದ ಮಾರ್ಗಶಿರ ಬ ೧೦ ಶುಕ್ರವಾರ ದಿವಸ ಯಿಾ ಅಕ್ರೂರ ಚರಿತೆಯನ್ನು ಸುಂಕದ ದೇವಪ್ಪನ ಅಪ್ಪಣ್ಣನವರಿಗೆ ಆಯುರಾರೋಗ್ಯ ಆಇಶ್ವರ್ಯ ಪುತ್ರಮಿತ್ರಕಳತ್ರಾದಿ ಬಾಂಧವರು ಬ್ರಹ್ಮ ವಿಷ್ಣು ರುದ್ರ ತ್ರೈಮೂರ್ತಿಗಳು

ಅಷ್ಟದಿಕ್ಕುಪಾಲಕರು ಮನುಮುನಿಜನಪಾಲಕರು ಸದಾಕಾಲದಲು ರಕ್ಷಿಸಲಿ ಯೆಂದು ಬರದ ಅಕ್ರೂರ ಚರಿತ್ರೆ ಶುಭಮಸ್ತು ॥

ವಿಷಯ : ಶ್ರೀಯರಸನು ಅಕ್ರೂರನಿಗೆ ತನ್ನ ನಿಜವನ್ನು ತೋರಿಸಿದ ಕಥೆ.

ವಿಶೇಷ : ಹಲವು ಗರಿಗಳನ್ನು ಹುಳು ತಿಂದಿರುವುದರಿಂದ ಮಧ್ಯೆ ಅಕ್ಷರಲೋಪವಿದೆ. ಇಪ್ಪತ್ತನೆಯ ಓಲೆ ಮುರಿದುಹೋಗಿ ಅರ್ಧ ಭಾಗ ಇಲ್ಲ.

7

ಕೆ. ಎ. ೨೭೬	**ಅಕ್ರೂರ ಚರಿತ್ರೆ**	ಭಾಮಿನೀಷಟ್ಪದಿ
೧೨.೭"×೮"	ಸೋಮನಾಥ	ಸು ೧೬೦೦
೧–೨೦ ಪುಟ	೨೪ ಪಂಕ್ತಿ	೩೦ ಅಕ್ಷರ

ಆದಿ : ಮಾವನವಸಾನದಲಿ ದೇವಕಿ
ದೇವಿಯನು ಸಂತೈಸಿ ದೇವರ
ದೇವನಕ್ರೂರನ ಮನೋರಥವಿತ್ತು ಮನ್ನಿಸಿದ ॥ ಪಲ್ಲ ॥
ಖಳಶಿರೋಮಣಿ ಕಂಸನಳಿವಿಂ
ಗಳಲಿ ರವಿಯೊಡನಿಳಿದನಸುರನ
ಲಲನೆಯರವೊಲು ಮಱುಗಿದವು ಪಂಕಜರಥಾಂಗಚಯ
ಬಳಿಕ ಯದುಕುಲಸಹಿತ ಕೃಷ್ಣನ
ಬಳಿಗೆ ಬಂದಕ್ರೂರನಕ್ಷಿಯ
ಜಲವ ಮಿಡಿವುತ ಕಾಣಿಕೆಯನಿತ್ತೆರಗಿ ನಿಂದಿರ್ದಾ ॥ ೧ ॥

ಅಂತ್ಯ : ದೇವಜಯ * * ವಿಶ್ವತೋಧರ
* * * * * * * * * *
* * * * * * * * * * * *
ದೇವಯದುಕುಲ ಪಾಲಕನೆ ಜಯ
ದೇವ * * * * * * * * * * * * *
* * * * * * * * * * * * * *
ಸೋಮಕವಿ ಯಕ್ರೂರ ಚರಿತೆಯ
ತಾ ಮಹಾಭಕ್ತಿಯೊಳೊರೆದು * *
* * * * * * * * * * * ಯಾ
ಭೂಮಿಯೊಳಗೋದುವರ * *
ನಾ ಮಹಿಮ ಶ್ರೀಕೃಷ್ಣ ಸಲಹುವ
* * * * * * * * * * * * * ರಲಿ ॥ ೬೫ ॥

ಗೋದಾನ ಸಾಸಿರವ ವಿಪ್ರರಿ
ಗಾದರದೆ ಗಂಗೆಯ ತಡಿಯಲ್ಲಿ
* * * * * * * * * * * ಲರಾ
ಆದರದೆ ರಕ್ಷಿಸಿದ ಫಲವೆಂ
ದಾ ದಯಾನಿಧಿ ಕೃಷ್ಣನಾಜ್ಞೆಯೊ
ಳೋದು * * * * * * * * * ರೂ ॥ ೬೬ ॥

ಮಂಗಳಂ ಶ್ರೀ ॥

ವಿಷಯ : ಶ್ರೀಯರಸನು ಅಕ್ರೂರನಿಗೆ ತನ್ನ ನಿಜವನ್ನು ತೋರಿಸಿದ ಕಥೆ.

ವಿಶೇಷ : ಶಕಟರೇಫವನ್ನು ಕೆಲವು ಕಡೆ ಬಳಸಲಾಗಿದೆ. ಇದನ್ನು ಮದ್ರಾಸ್ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ ಲೈಬ್ರರಿಯ ಪ್ರತಿಯನ್ನು ನೋಡಿ ಬರೆಯಲಾಗಿದೆ. ಇದರಲ್ಲಿ ೮ ನೆಯ ಸಂಧಿ ಮಾತ್ರ ಇದೆ. ಅಸಮಗ್ರ ಪ್ರತಿ.

8

ಕೆ. ಬಿ. ೨೩೨	**ಅಕ್ರೂರ ಚರಿತ್ರೆ**	ಭಾಮಿನೀಷಟ್ಪದಿ
೮″ × ೬.೫″	ಸೋಮನಾಥ	ಸು ೧೬೦೦
೧–೨೩ ಪತ್ರ	೨೬ ಪಂಕ್ತಿ	೩೨ ಅಕ್ಷರ

ಆದಿ : ದೇವಕುಲದ ವಸುದೇವ ದೇವಕಿ
ಗುದಿಸಿ ನರಹರಿ ತಾಯಿ ತಂದೆಯ
ದುಃಖ ಶರಧಿಯೊಳು ಕಂಸನಿರಿಸಿದ ಬಂಧನವ ಬಿಡಿಸೀ
ಪಡದಿರುಳು ಗೋಕುಲದಿ ನಂದನ
ಸದನಲಿ ನಿಜಸುತನೆನಿಸಿ
ಮುಂದ ಮಿಗಲು ವಸುದೇವ ಮಾಯಾದೇವಿಯಿರೆ ಕಂಡಾ ॥ ೧ ॥

ಯಿಾ ಪರಿಯಲಾನಂದ ಗೃಹದಲಿ
ಶ್ರೀಪತಿಯ ಬಚ್ಚಿಟ್ಟು ಮಾಯಾ
ರೂಪಿಯುಹ ದುರ್ಗಾಂಬಿಕೆ ಕೊಂಡ್ಯೊದು ತವಕದಲೀ
ಕಾಪಿನವರರಿಯದವೊಲಾ ಮದು
ರಾಪುರಿಯ ಭವನವನು ಹೊಗೆ ನಾ
ನಾ ಪರಿಯಲೊದರಿದಳಬಲೆ ಬ್ರಂಹ್ಮಾಂಡವೊಡೆವಂತೆ ॥ ೨ ॥

ಅಂತ್ಯ : ಯಂದು ನಂದನು ಸಹಿತ ಹಲವರ
ರೊಂದೆ ರಥದಲಿ ಕುಳಿತು ಗೋವಳ
ರಿಂದೆ ಬರಲೆಂದೆನುತ ಲಕ್ಷ್ಮೀನಾಥ ಹೊರಹೊಂಟಾ
ಕಂದಿದಾನನದಿಂದ ಸತಿಸಹ
ಬಂದು ಅಕ್ರೂರನ್ನು ಮುಕುಂದನ
ಸುಂದರಾ ಪದಕೆರಗಿ ಬೀಳ್ಕೊಟ್ಟನು ಸರಾಗದಲಿ || ೫೨ ||

ಅಂತು ಸಂದಿ ೭ ಕಾಂ ಪದ ೪೩೪ ಕಾಂ ಮಂಗಳಮಹಾಶ್ರೀ ||

ವಿಷಯ : ಶ್ರೀಯರಸನು ಅಕ್ರೂರನಿಗೆ ತನ್ನ ನಿಜವನ್ನು ತೋರಿಸಿದ ಕಥೆ.

ವಿಶೇಷ : ಬರವಣಿಗೆ ಸ್ಫುಟವಾಗಿಲ್ಲ. ಒಂದು ಎರಡನೆಯ ಸಂಧಿಗಳೆರಡನ್ನೂ ಒಂದನೆಯ ಸಂಧಿಯೆಂದೆ ಈ ಪ್ರತಿಯಲ್ಲಿ ಲೆಕ್ಕಮಾಡಿರುತ್ತಾರೆ. ಮೊದಲನೆಯ ಸಂಧಿಯಲ್ಲಿ ಪ್ರಾರಂಭದಿಂದ ಹನ್ನೆರಡು ಪದ್ಯಗಳಿಲ್ಲ. ಅಸಮಗ್ರ ಪ್ರತಿ. ಗ್ರಂಥದ ಕೊನೆಯಲ್ಲಿ ಪ್ರತಿಯ ವಿಶೇಷವಿದೆ.

9

ಕೆ. ಬಿ. ೨೪೯	**ಅಕ್ರೂರ ಚರಿತ್ರೆ**	ಯಕ್ಷಗಾನ
೮" × ೬.೫"	ಚನ್ನ	ಸು ೧೯೦೦
೧—೩೦ ಪತ್ರ	೧೬ ಪಂಕ್ತಿ	೧೯ ಅಕ್ಷರ

ಆದಿ : ಶ್ರೀಃ | ಅಕ್ರೂರ ಚರಿತ್ರೆ ಪ್ರಾರಂಭವು || ರಾಗ || ನಾಟ || ತಾಳ ||
ಶರಣು ವಿಘ್ನೇಶ್ವರಗೆ | ಶರಣು ಬ್ರಹ್ಮನ ಸತಿಗೆ
ಶರಣು ಶ್ರೀವೇಲಾಪುರಾಧೀಶ ಹರಿಗೆ
ಶರಣು ಶಿವಶಂಕರಗೆ | ಶರಣು ಸದ್ಗುರುವರಗೆ
ಶರಣು ಶರಣೆಂಬೆ ಸನ್ಮತಿಯ ಕೊಟ್ಟುಳುಹೀ | || ಪಲ್ಲವಿ ||

ಶ್ರೀ ಗಣಾಧೀಶ್ವರನೆ । ಭೋಗಫಲದಾಯಕನೆ
ಭೋಗಿಭೂಷಣ ಗೌರೀವರತನಯ ನಿಂನಾ
ಈಗ ನಾ ಸ್ತುತಿಸುವೆನು । ಭೋಗಯಿಷ್ಟಾರ್ಥ ಯಿನ
ಗೀಗ ನಿರ್ವಿಘ್ನದಲಿ ಕೊಡು ಗಣಪ ಮತಿಯಾ || ೧ ||

ಅಂತ್ಯ : (೨೮ ನೆಯ ಪತ್ರ) ಹರಿಭಕ್ತರಡಿಗೆ ವಂದಿಶೀ
ಸ್ಥಿರದಿಂ ರಂಗಾರ್ಯ ಸದ್ಗುರು ಚರಣಕೆ ನಮಿಸೀ

ಹರುಷದಲಿ ಚಂನನೆಂಬನು
ವಿರಚಿಸಿದನು ಹಂಮುನುಳಿದು ಲಾಲಿಸಿ ಸುಜನರೂ ॥ ೪ ॥

× × × × ×

ಜಯಸುರ ಪಶುದ್ವಿಜ ಧರ್ಮರಕ್ಷಾಕರ
ಜಯ ಯದುಕುಲ ಕೃಷ್ಣ ಬಲರಾಮಗೆ
ಜಯ ಜಯ ಬೌದ್ಧಗೆ ಜಯಕಲ್ಕ್ಯರೂಪಗೆ
ಜಯ ತುರಂಗಾರ್ಯ ಸದ್ಗುರುನಾಥಗೇ ॥ ೩ ॥ ಜಯ ॥ ಶ್ರೀ
ಪರಗುಣ ಪರಿತೋಷ ಪ್ರಸ್ತುತಾಶೇಷಕೃತ್ಯಾ
ನಿಜಗುಣ ಕಲಿಕಾಭಿಃ ಲೋಕಮಾಮೋದಯನ್ತಃ
ಅವಿದಿತ ಪರದೋಷ ಜ್ಞಾನಪೀಯ್ಯೂಷ ಪೂರ್ಣಾಃ
ಕರಕೃತಮಪರಾಧಂ ಕ್ಷನ್ತುಮರ್ಹನ್ತು ಸನ್ತಃ ॥ ೧ ॥

ಶಾಲೀವಾಹನ ಶಕೆ ೧೮೨೪ನೆ ಪ್ಲವನಾಮಸಂವತ್ಸರದ ಅಧಿಕ ಆಷಾಢಕೃಷ್ಣ ೩ ಗುರುವಾರದಲ್ಲು ಲೇಖಿಕ ಕಡಬದ ಸುಬ್ರಾಮ್ಹೈಯ್ಯನು ಬರದು ಸಮಗ್ರ ಮಾಡಿದ್ದು.

ವಿಷಯ : ಶ್ರೀಯರಸನು ಅಕ್ರೂರನಿಗೆ ತನ್ನ ನಿಜವನ್ನು ತೋರಿಸಿದ ಕಥೆ.

ವಿಶೇಷ : ಕವಿಯು ತನ್ನ ಗುರುವಾದ 'ರಂಗಾರ್ಯ'ನ ಅಂಕಿತದಲ್ಲಿ ಈ ಕೃತಿಯನ್ನು ರಚಿಸಿರುತ್ತಾನೆ.

10

ಕೆ. ೧೧/೩	ಅಕ್ಷರಕೇವಲಿ ನಿಮಿತ್ತ	ಗದ್ಯ
೧೦.೫"×೧.೮"	?	ಸು ೧೬೫೦
೧೭–೨೩ ಪತ್ರ.	೧೧ ಪಂಕ್ತಿ	೪೨ ಅಕ್ಷರ

ಆದಿ : ಅಕ್ಷರಕೇವಲಿಯಂಬ ನಿಮಿತ್ಯ
ಶ್ರೀ ವರ್ಧಮಾನ ಜಿನರಂ
ಭಾವಜ ಮದಗಜ ವಿದಾರ ಕಂಠೀರವರಂ ।
ಕೇವಲ ಪದದಿಂದರಿವುದು
ನಾವಿಭು ಪೊಡ........

ನು ಚಿಂತಿಸಿದ ಕಾರ್ಯವು ಬೇಗದಲ್ಲಿ ಆಗದು. ಯರಡು ಚಿತ್ತವ ಮಾಡ ಬೇಡ.

ಅಂತ್ಯ : ನೀನು ಚಿಂತಿಸಿದ ಕಾರ್ಯವು ದುಃಖದಿಂದಲ್ಲದೆ ಆಗದು. ನೀನು ಬಡವನಾಗಿಯಿದ್ದೆ. ಆರನೂ ನಂಬಬೇಡ. ನೀನು ಚಿಂತೆಯ ಮಾಡುತಿದ್ದೆ. ನಿನ್ನ ಬಂಧುಗಳು ನಿನ್ನ ಮೇಲೆ ವಿರುದ್ಧವ ತಾಳುತಿದ್ದಾರು. ಆದರ ಪರಿಹರಾರ್ತವಾಗಿ ದೇವಪೂಜೆಯಂ ಮಾಡುತ್ತಿರಲಾಗಿ ನಿನಗೆ ನೆನೆದ ಕಾರ್ಯವೆಲ್ಲವು ಆಧಾವು. ಸಂದೇಹಂ ಮಾಡಬೇಡ ‖ ೯ ‖

ವಿಷಯ : ಪ್ರಶ್ನಶಾಸ್ತ್ರ.

ವಿಶೇಷ : "ಅಕ್ಷರಕೇವಲಿ" ಗ್ರಂಥವು ಕಂದಪದ್ಯದಿಂದ ಅರಂಭವಾಗುತ್ತದೆ. ಪ್ರಶ್ನೆಗಳಿಗೆ ಉತ್ತರವು ಗದ್ಯದಲ್ಲಿದೆ. ಈ ಗ್ರಂಥದ ಜೊತೆಯಲ್ಲಿ ಜಿನೇಂದ್ರಮಾಲೆಯೂ, ಸ್ವರಚಿಂತಾಮಣಿಯೂ ಇವೆ.

11

ಕೆ. ಬಿ. ೩೨೮/೧	**ಅಕ್ಷರದ ಚೌಪದ**	ಚೌಪದಿ
೭″ × ೬″	ಕರಸ್ಥಲದ ನಾಗಲಿಂಗಯ್ಯ	೧೪೩೦
೧_೨ ಪತ್ರ	೧೪ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ಗುರು ಕರಸ್ಥಲದ ನಾಗಲಿಂಗೈಯ್ಯನವರು ಮಾಡಿದಕ್ಷಾರದ ಚೌಪದ

ಚೌಪದನ ಚೌಪದನ ಕೇಳಿದರೆ ಯೇನುಂಟು
ಚೌಪದನ ಮುಖವಾರು ಕೊಂಬುವ್ಯದಿನೆಂಟು
ಚೆಲ್ವ ಮುನ್ವತ್ತಾ್ಯರಡು ಕಂಗಳದ ಕುಂಟು
ಚಾರೆಬಿಂಸಿ ಲಕ್ಷಜೀವದೊಳಗುಂಟು ‖ ೧ ‖
ಶ್ರೀಗುರುವೆ ಗಣೆನಾಥ ವದನಕರಿರೂಪಾ
ಶ್ರೀ ವಿದ್ಯಾ್ಯಭರಿತನೆ ನೀ ಕನಕ (ವದನ) ಕರಿರೂಪಾ
ಶ್ರೀ ಬಾಗ್ಯಾ್ಯಪುರುಷನೆ ವಿದ್ಯಾಕುಲದೀಪಾ
ಶ್ರೀ ಸಿದ್ಧಗಣೆನಾಥಾ ಶಿಶಿಗಿತ್ತ ಸ್ವಾಪಾ ‖ ೨ ‖

ಅಂತ್ಯ : ....ನಾಡಮೂರ್ತಿಯೆಂಬೊ ಗಣೆನಾಥ ಬಂದಾ
ವೇದಕ್ಕೆ ಮೊದಲೊಂದು ಪ್ರಸ್ತವನು ತಂದಾ
ನಾಗಲಿಂಗಮನ ಹ್ರುದಯಪೀಠದೊಳು ನಿಂದಾ
ನಾ ಹೇಳಲಳವಲ್ಲಾ ಈತನೆ ಛೆಂದಾ ‖ ೨೦ ‖
ಸರಸ್ವತಿಯು ಗಣೆನಾಥಾ ಶರಧಿಯೊಳಗಿರಲು
ಭರದಿಂದ ಬ್ರಹ್ಮನು ಕರಿಲಿಕ್ಕೆ ಬರಲು

ಸುರಮುನಿಗಳು ವಿದ್ದೆವನು ಹೇಳೆನಲು
ಶ್ರೀಗುರು ಬ್ರಹ್ಮವರವಿಟ್ಟುಷ್ಟಿರದಿ ಬಾಳೆನಲು ॥ ೨೧ ॥

ವಿಷಯ : “ ಚೌಸಷ್ಟಿವಿದ್ದೆವನು ಬಲ್ಲ....” ಗಣನಾಥನ ಮಹಿಮೆ ಹಾಗೂ ಅಕ್ಷರದ ಶ್ರೇಷ್ಠತೆಯನ್ನು ತಿಳಿಸಿದೆ.

ವಿಶೇಷ : ಇದೇ ಕಟ್ಟನಲ್ಲಿ ಗುರುಶಿಷ್ಯಸಂವಾದವೂ. ಕಾಯಪುರಿವಾಸ ಪ್ರಕರಣವೂ, ಒಂದು ಹಾಡೂ, ವೇದಾಂತದ ವಿಚಾರವೂ ಇವೆ. ಮತ್ತೊಂದು ಪತ್ರದಲ್ಲಿ ವ್ಯವಹಾರಕ್ಕೆ ಸಂಬಂಧಿಸಿದ ವಿಚಾರವಿದೆ. ಪತ್ರಗಳು ಹರಿದಿವೆ.

13

ಕೆ. ೩೬೯/೧೪	ಅಕ್ಷರಮಾಲಿಕಾಗದ್ಯ, ಇತ್ಯಾದಿ	ಗದ್ಯ, ಪದ್ಯ
೮" × ೧.೮"	ಪಾಲ್ಕುರಿಕೆ ಸೋಮ	ಸು. ೧೧೯೫
೯೮–೧೨೩ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಮಾಲಿನೀವೃತ್ತ

ಓಂ ಜಯಜಯಬಸವಾಖ್ಯಃ ಸ್ವಾನುಭೂತ್ಯೈಕ್ಯ ಶಾಕ್ಯ ಪ್ರಮಥಗಣಪವಿತ್ರ ಸ್ಫುರದ । ಬಸವಾಧೀಶಾಯ ತಸ್ಮೈ ನಮಃ ॥ ೧ ॥

ಅಂತ್ಯ : ಲಕ್ಷಣಪದಯತಿ ಸಂಧಿವಿ
ಲಕ್ಷಣಪೂರ್ವಸ್ವರಾಕ್ಷರಾಧ್ಯಕ್ಷರ ಕಾ
ದಿಕ್ಷಾಂತಾಕ್ಷರಮಾಲಾ
ದ್ಯಕ್ಷರಸ್ಥಲ ರಕ್ಷಿಸೆಂನುವೆಂ ಬಸವೇಶ ॥ ೪೦ ॥
ಶಿವಮಸ್ತು ಭಕ್ತಿವಿಭವೋ
ಧ್ರುವಮಸ್ತು ವಕ್ಷರಾಂಕ ಪಠಣಶ್ರವಣ
ಸ್ತವನಾಶಕ್ತರಿಗೆ ಮ....
ತ್ಸವಮಸ್ತು ಭಾವಾಕ್ಷೇದ್ಧಿರಸ್ತು ಶಿವ ಬಸವೇಶ ॥ ೪೧ ॥ ಶ್ರೀ.

ವಿಷಯ : ಬಸವ ಸ್ತುತಿ.

ವಿಶೇಷ : ಗ್ರಂಥವು ಬಹಳ ಶಿಥಿಲವಾಗಿದೆ. ಗರಿಗಳು ಅಸ್ತವ್ಯಸ್ತವಾಗಿವೆ. ಈ ೨೫ ಪತ್ರಗಳಲ್ಲಿ ನಮಸ್ಕಾರ ಗದ್ಯ, ಪಂಚಪ್ರಕಾರದ ಗದ್ಯ, ಷಟ್ಸ್ಥಲ ಗದ್ಯ, ಅಷ್ಟೋತ್ತರಶತನಾಮ ಗದ್ಯ, ಅಕ್ಷರಾಂಕನ ಗದ್ಯಗಳಿವೆ. ಇವಲ್ಲದೆ, ಈ ಕಟ್ಟನಲ್ಲಿ ಗುರು, ಷಡಕ್ಷರಿ, ಬಸವ, ಮನೋವಿಕಾರ ನಿರಸನ, ಭಕ್ತಿಬಿನ್ನಹ ರಗಳೆ

ಗಳೂ, ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮರುಳುದೇವ, ಪ್ರಭುಲಿಂಗ ಕಂದಗಳೂ; ಶತಕ ತ್ರಯ; ಮಲ್ಲಣಸ್ತೋತ್ರಗ್ರಂಥಗಳೂ ಇವೆ.

13

ಕೆ. ೩೨೩/೧೪	ಅಕ್ಷರಾಂಕ ಗದ್ಯ	ಗದ್ಯ, ಪದ್ಯ
೫.೪" × ೨"	ಪಾಲ್ಕುರಿಕೆ ಸೋಮನಾಥ	ಸು. ೧೧೯೫
೧೦೫–೧೧೧ ಪತ್ರ	೧೧ ಪಂಕ್ತಿ	೨೮ ಅಕ್ಷರ

ಆದಿ : ಶ್ರೀಗುರು ಬಸವಲಿಂಗಾಯನಮಃ । ಅಕ್ಷರಾಂಕ ಗದ್ಯ

ಕಂದ ॥ ಶ್ರೀಯುತ ನಮಶ್ಶಿವಾಯೆ ।
ತ್ಯಾಯತ ಪಂಚಾಕ್ಷರಿ ಪ್ರಣವ ಸಂಭೂತ ।
ಸ್ವಾಯತ ಬಾವನ್ನಕ್ಷರ ।
ಕಾಯಸನೇ ನಿಂಮ ಪೊಗಳೆ ನಾಂ ಬಸವೇಶಾ ॥

ಅಂತ್ಯ : ಕಂದ ॥ ಇತಿ ಭಾವನ್ನಕ್ಷರ ಸಂ ।
ಸ್ತುತಿ ಸಂಕಲಿತಾಕ್ಷರಾಂಕಿತ ಸ್ತೋತ್ರಮುಮಾ ।
ಪತಿ ನಿಮಗಪ್ಪಿಸಿದೇಂ ಸ ।
ದ್ರತಿಯಿಂ ಪಾಲ್ಕುಱಿಕೆ ಸೋಮಕೃತಿ ಬಸವೇಶಾ ॥ ೧ ॥

× × × ×

ಶಿವಮಸ್ತು ಭಕ್ತಿವಿಭವೋ ।
ದ್ಭವೋಸ್ತು ಭವದಕ್ಷರಾಂಕಪಠಣ ।
ಸ್ತವನಾಸಕ್ತರಿಗೆ ಹೋ ।
ತ್ಸವ ವೋಸ್ತುವಾಕ್ಸಿದ್ಧಿರಸ್ತು ಶಿವ ಬಸವೇಶಾ ॥ ೨ ॥

ಅಕ್ಷರಾಂಕ ಗದ್ಯ ಸದ್ಯ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಬಸವಸ್ತುತಿ

ವಿಶೇಷ : ಇದೇಕಟ್ಟಿನಲ್ಲಿ ಶಿವಾಧವಶತಕ, ಶಿವಾವಲ್ಲಭಶತಕ ಮೊದಲಾದ ಇತರ ೧೬ ಕೃತಿಗಳಿವೆ. ಇದರಲ್ಲಿ ಕೆಲವು ಸಂಸ್ಕೃತ ಕೃತಿಗಳಾಗಿವೆ.

14

ಕೆ. ಬಿ. ೧೬೧	**ಅಖಂಡ ಕಾವೇರೀ ಮಾಹಾತ್ಮ್ಯ ಟೀಕಾ**	ಗದ್ಯ
೭.೫" × ೬"	ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್	೧೯ನೆಯ ಶತಕ
೧೦೧ ಪತ್ರ	೧೧ ಪಂಕ್ತಿ	೩೦ ಅಕ್ಷರ

ಆದಿ: ಶ್ರೀಃ ॥ ಅಖಂಡ ಕಾವೇರೀ ಮಾಹಾತ್ಮ್ಯ ಟೀಕಾ ಪ್ರಾರಂಭಃ ॥ ಶುಭಮಸ್ತು ॥

ಶ್ಲೋ ॥ ವನ್ದೇ ವಿಘ್ನೇಶ್ವರಂ ದೇವಮುಮಾಪುತ್ರಂ ವರಪ್ರದಂ
ಟೀಕಾಂ ಕವೇರತನಯಾಮಾಹಾತ್ಮ್ಯಸ್ಯ ಕರೋಮ್ಯಹಮ್ ॥ ೧ ॥

ಯಸ್ಯಾಂ ಮಧ್ಯೇ ಹರಿಃ ಶೇತೇ ಯನ್ಮೂಲಂ ಬ್ರಹ್ಮಣಾ ಶ್ರಿತಂ
ಪಾರ್ಶ್ವದ್ವಯಂ ಶಿವೈರ್ಜುಷ್ಟಂ ತಸ್ಮೈ ಸಹ್ಯಭುವೇ ನಮಃ ॥ ೨ ॥

ಟೀಕು ॥ ಶ್ರೀ ಮಹಾವಿಷ್ಣುವು ಯಾವ ಕಾವೇರಿ ನದಿಯ ಮಧ್ಯದಲ್ಲಿ ಮಲಗಿರುವನೋ ಯಾವ ನದಿಯು ಉತ್ಪತ್ತಿಸ್ಥಲವು ಬ್ರಹ್ಮನಿಂದ ಆಶ್ರೈಸಲ್ಪಟ್ಟಿರುವದೋ ಯಾವ ನದಿಯ ಪಾರ್ಶ್ವಗಳೆರಡೂ ಪರಮೇಶ್ವರರಿಂದ ಯುಕ್ತವಾಗಿರುವವೋ ಅಂಥಾ ಪ್ರಸಿದ್ಧಳಾದ ಸಹ್ಯಪರ್ವತದಲ್ಲಿ ಹುಟ್ಟಿದಂಥಾ ಕಾವೇರೀ ದೇವಿಗೋಸ್ಕರ ನಮಸ್ಕಾರವು ॥ ೧ ॥

ಅಂತ್ಯ: ತಪೋವಂತಳಾಗಿದ್ದ ಆ ಕವೇರನ ಮಗಳನ್ನು ಕಾಣುವದಕ್ಕೋಸ್ಕರ ಬಂದವನಾಗಿ ಮೊದಲು ಆಶ್ರಮದಲ್ಲಿ ಸಂತೋಷದಿಂದ ಕಾವೇರಿಯುಂನೇ ಕಂಡನೆಂದು ॥ ೪೧ ॥ ಪಾರ್ವತಿಗೆ ಪರಮೇಶ್ವರನು ಹೇಳಿದನೆಂಬುದಾಗಿ ಸೂತಪುರಾಣೀಕನು ಶೌನಕ ಮೊದಲಾದ ಋಷಿಗಳಿಗೆ ವಿಸ್ತರಿಸಿ ಹೇಳಿದನೆಂನುವಲ್ಲಿಗೆ ಅಧ್ಯಾಯಾರ್ಥ ॥

ಇಂತು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖಚಕ್ರಾಂಕುಶಕುಠಾರ ಮಕರ ಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀ ವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಮಹೀಶೂರ ಶ್ರೀಕೃಷ್ಣರಾಜ ಒಡೆಯರವರಿಂದ ವಿರಚಿತವಾದ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಕರ್ಣಾಟಕ ವಚನ ರಚನಾಭಿಧಾನವಾದ ಸ್ಕಾಂದ ಪುರಾಣಸ್ಥ ಸಹ್ಯಾದ್ರಿಖಂಡಸ್ಥ ಅಖಂಡ ಕಾವೇರೀ ಮಾಹಾತ್ಮ್ಯೆಯಲ್ಲಿ ಹದಿನೆಂಟನೆಯ ಅಧ್ಯಾಯಕ್ಕಾಂ ಮಂಗಳ ಮಹಾಶ್ರೀ ॥

ವಿಷಯ: ಕಾವೇರೀ ನದಿಯ ಮಾಹಾತ್ಮ್ಯದ ವರ್ಣನೆ.

ವಿಶೇಷ: ಇದು ಸ್ಕಾಂದಪುರಾಣದ ಸಹ್ಯಾದ್ರಿಖಂಡದಲ್ಲಿರುವ ಅಖಂಡ ಕಾವೇರೀ ಮಾಹಾತ್ಮ್ಯದಲ್ಲಿರುವ ಶ್ಲೋಕಗಳ ಕನ್ನಡ ಗದ್ಯಾನುವಾದ; ಇದರಲ್ಲಿ ಒಟ್ಟು ಹದಿನೆಂಟು ಅಧ್ಯಾಯಗಳಿವೆ. ಅಕ್ಷರಗಳು ಸ್ಫುಟವಾಗಿವೆ.

15

ಕೆ. ಬಿ. ೧೫೮	**ಅಖಂಡಾನಂದ ಸ್ವರೂಪ**	ಗದ್ಯ
೭.೫'' × ೬.೨''	ವೆಂಕಟದಾಸ	ಸು. ೧೭೫೦
೧-೧೯೮ ಪತ್ರ	೧೧ ಪಂಕ್ತಿ	೨೮ ಅಕ್ಷರ

ಆದಿ: ಶ್ರೀ ‖ ಭವಬನ್ಧ ವಿಮೋಚನ ಜ್ಞಾನಮೋಕ್ಷಪ್ರದ ಅಖಣ್ಡಾನನ್ದಸ್ವರೂಪ ಪ್ರಕರಣ ಪ್ರಾರಂಭಃ ‖ ಶ್ರೀರಸ್ತು ‖

ಕಂದ ‖ ಪದ್ಯದ ವ್ಯಾಜದಿ ನಿಶ್ಚಯ
ವದ್ಭುತ ಸಾಧನಗಳೆಲ್ಲವ ತಿಳಿವಂದದಲಿ
ನಿರ್ಧರಿಸಿಯೆ ಪೇಳ್ವೆ ಪ್ರಾಕೃತ
ಪದ್ಯದಿ ಪರಮಾತ್ಮ ನಿಶ್ಚಯಜ್ಞಾನವನೆಲ್ಲಂ ‖ ೧ ‖

ಜ್ಞಾನಾಜ್ಞಾನವು ತಾನೆಂ
ದಾನಂದದಿ ತಿಳಿದ ಮನುಜಗೆ ಬ್ರಹ್ಮಾಕಾರ
ಧ್ಯಾನಧ್ಯೇಯವು ತೋರದೆ
ತಾನೆ ತಾನಾಗಿ ನಲಿಯುವ ವೇಣುಗೋಪಾಲ ‖ ೨ ‖

ಟೀಕು ‖ ಜ್ಞಾನಾಜ್ಞಾನವು ತಾನೆಂದಾನಂದದಿ ತಿಳಿದ ಮನುಜಗೆಯಂದರೆ। ಜ್ಞಾನಾಜ್ಞಾನವು। ಬ್ರಹ್ಮಸ್ವರೂಪವು ‖ (ಜ್ಞಾನಮಾನಂದಂಬ್ರಹ್ಮಾ) ಯೆಂಬ ಶ್ರುತಿಯು ಇದ್ದೀತಾಗಿ ಜ್ಞಾನವು ತಾನೆಂಬುದು ಸಿದ್ಧಾ ‖ ಅಜ್ಞಾನಾ-ಅಜ್ಞಾನವು ತಾನೆಂದರೆ ತಾನೆಂಬುವದು ಸ್ವರೂಪವಾಯಿತು। ಆದಕಾರಣ ಸ್ವರೂಪ ಶಬ್ದಕ್ಕೆ ಬ್ರಹ್ಮವೆ ತಾತ್ಪರ್ಯ

ಅಂತ್ಯ: ಈ ಪ್ರಕಾರ ನಿಶ್ಚಯವಪ್ಪುವ ವಸ್ತುವಿಗೆ ನಿಜವೆಂದು ತಾತ್ಪರ್ಯವಾದ್ದರಿಂ ಅಂಥಾ ನಿಜವಾಗಿಹನೆಂದು ತಾತ್ಪರ್ಯ ‖ ಈ ರೀತಿ ತಿಳಿಯುವದಕ್ಕೆ ಶಕ್ಯವಲ್ಲದ ತಿಳಿಯುವಂಥಾವ ಮತ್ತೊಬ್ಬನೆಂಬದಿಲ್ಲದ ಅಖಂಡ ಪರಿಪೂರ್ಣಯೇಕ ನಿಜ ಪರಬ್ರಹ್ಮಗೋಪಾಲನೇ ತಾನೆಂಬುದಕರ್ಥ। ಇತಿ ಶ್ರೀ ವೇಣುಗೋಪಾಲವರ ಬಾಲಕವಿ ಜನ್ಮಾಂತರೇ ಅಗಸ್ತ್ಯ ಶಿಷ್ಯ ಆದ್ಯ ಗೋಪಾಲಾರ್ಯ ಯತಿವರ್ಯ ಶಿಷ್ಯ ನಾರಾಯಣಸ್ವಾಮಿನಃ ಶಿಷ್ಯವಾಸುದೇವಯತಿವರ್ಯ ಶಿಷ್ಯ ದಾಸಾರ್ಯ ತಚ್ಛಿಷ್ಯ

ವೆಂಕಟದಾಸಪ್ರೋಕ್ತ ಭವಬನ್ಧವಿಮೋಚನ ಜ್ಞಾನಮೋಕ್ಷಪ್ರದ ಅಖಂಡಾನನ್ದ ಸ್ವರೂಪ ನಿಶ್ಚಯಪ್ರಕರಣ ಪ್ರಾಕೃತಪದ್ಯಾರ್ಥ ಸಪ್ತಮುಕ್ಕಂ ಮಂಗಳ ಮಹಾ ||

ಕಂದ || ಇಂತೀ ಪದ್ಯಾರ್ಥಂಗಳ
ಅಂತರ್ಬಾಹ್ಯಪ್ರೇರಕವಸ್ತುವೆ ಪೇಳ್ವೆಂ
ಇಂತಿರುತಿರೆ ಸ್ವಾತಂತ್ರ್ಯಂಗ
ಳಿಂತಿಲ್ಲದೆ ಯಿಹುದರಿಂದಾ ತಪ್ಪನಗಿಲ್ಲಂ ||

ಅಂತು ಪದ್ಯಾರ್ಥಂಗಳು ಸಪ್ತಮುಗಳೂ|| ಆದಿ ಅಂತ್ಯದ ಪದ್ಯವೆರಡು ಅಂತು ಪದ್ಯ ಪಂಭತ್ತುಕ್ಕಾಂ ಮಂಗಳಮಹಾಶ್ರೀ.

ವಿಷಯ : ಮೋಕ್ಷಪ್ರದ ಅಖಂಡಾನಂದ (ಬ್ರಹ್ಮ) ಸ್ವರೂಪದ ವಿವರ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಮಧ್ಯದಲ್ಲಿ ಕೆಲವು ಕನ್ನಡ ಪದ್ಯಗಳಿವೆ.

16

ಕೆ. ಬಿ. ೩೨೫/೧	ಅಖಂಡಾನಂದ ಸ್ವರೂಪ	ಗದ್ಯ
೭.೬" × ೬"	ವೆಂಕಟದಾಸ	ಸು ೧೭೫೦
೧–೨೦೩ ಪತ್ರ	೧೯ ಪಂಕ್ತಿ	೧೮ ಅಕ್ಷರ

ಆದಿ : ಭವಬಂಧ ವಿಮೋಚನ ಜ್ಞಾನಮೋಕ್ಷಪ್ರದ ಅಖಂಡಾನಂದ ಸ್ವರೂಪ ಪ್ರಕರಣ ಬರೆಯುವದಕ್ಕೆ ಆಯುರಾರೋಗ್ಯ ಐಶ್ವರ್ಯಮಸ್ತು ||

ಪದ್ಯದ ವ್ಯಾಜದಿ ನಿಶ್ಚಯ
ವದ್ಭುತ ಸಾಧನಗಳನೆಲ್ಲವ ತಿಳಿವಂದದಲಿ
ನಿರ್ಧರಿಸಿಯೆ ಪೇಳ್ವೆ·ಪ್ರಾಕೃತ
ಪದ್ಯದಿ ಪರಮಾತ್ಮನಿಷ್ಟ ನಿಶ್ಚಯ ಜ್ಞಾನವನೆಲ್ಲಂ
ಜ್ಞಾನಾಜ್ಞಾನವು ತಾನೆಂ
ದಾನಂದದಿ ತಿಳಿದ ಮನುಜಗೆ ಬ್ರಂಹ್ಮಾಕಾರ
ಧ್ಯಾನಧ್ಯೇಯವು ತೋರದೆ
ತಾನೇ ತಾನಾಗಿ ನಲಿಯುವ ವೇಣುಗೋಪಾಲಾ ||

ಟೀಕೂ || ಜ್ಞಾನಾಜ್ಞಾನವು ತಾನೆಂದಾನಂದದಿ ತಿಳಿದ ಮನುಜಯಂದರೆ | ಜ್ಞಾನಾಜ್ಞಾನವೂ ಬ್ರಂಹ್ಮಸ್ವರೂಪವೂ | ಜ್ಞಾನಮಾನಂದಂ ಬ್ರಂಹ್ಮಾಯಂಬ

ಶೃತಿ ಯಿದ್ಧೀತಾಗಿ ಜ್ಞಾನವೂ ತಾನೆಂಬುದು ಸಿದ್ಧಾ। ಅಜ್ಞಾನಾ। ಅಜ್ಞಾನವೂ ತಾನೆಂದರೆ ತಾನೆಂಬುದೂ ಸ್ವರೂಪವಾಯಿತೂ। ಆದಕಾರಣ ಸ್ವರೂಪು ಶಬ್ದಕ್ಕೆ ಬ್ರಂಹ್ಮವೇ ತಾತ್ಪರ್ಯ್ಯಾ॥

ಅಂತ್ಯ : ಯಿಾಪ್ರಕಾರ ನಿಶ್ಚಯವಪ್ಪುವ ವಸ್ತುವಿಗೆ ನಿಜವೆಂದು ತಾತ್ಪರ್ಯವಾದ್ದರಿಂ॥ ಅಂತ್ತಾ ನಿಜವಾಗಿಹನೆಂದು ತಾತ್ಪರ್ಯ್ಯಾ॥ ಯಿಾರೀತಿ ತಿಳಿಯುವದಕ್ಕೆ ಶಕ್ಯವಲ್ಲದ್ದ ತಿಳಿಯುವಂತ್ತಾವ ಮತ್ತೊಬ್ಬನೆಂಬುದಿಲ್ಲದ ಅಖಂಡ ಪರಿಪೂರ್ಣಯೇಕ ನಿಜಪರಬ್ರಂಹ್ಮ ಗೋಪಾಲನೇ ತಾನೆಂಬುದಕ್ಕತ್ತಾರ್ತ॥ ಯಿತಿಶ್ರೀ ವೇಣುಗೋಪಾಲ ವರಬಾಲಕವಿ ಜಂನ್ಮಾಂತರೆ ಅಗಸ್ತ್ಯಶಿಷ್ಯ ಅದ್ಯ ಗೋಪಾಲಾರ್ಯ ಯತಿವರ್ಯ ಶಿಷ್ಯ ನಾರಾಯಣ ಸ್ವಾಮಿನಃ। ಶಿಷ್ಯ ವಾಸುದೇವ ಯತಿವರ್ಯ ಶಿಷ್ಯ ದಾಸಾರ್ಯ ತಛಿಷ್ಯ ವೆಂಕಟದಾಸ ಪ್ರೋಕ್ತ ಭವಬಂಧ ವಿಮೋಚನ ಮೋಕ್ಷಪ್ರದ ಅಖಂಡಾನಂದ ಸ್ವರೂಪ ನಿಶ್ಚಯ ಪ್ರಕರಣ ಪ್ರಾಕೃತ ಪದ್ಯಾರ್ಥ ಸಪ್ತಮುಕ್ತಾಂ ಮಂಗಳ ಮಹಾಶ್ರೀ॥

ವಿಷಯ : ಮೋಕ್ಷಪ್ರದ ಅಖಂಡಾನಂದ (ಬ್ರಹ್ಮ) ಸ್ವರೂಪದ ವಿವರ.

ವಿಶೇಷ : ಇದರಲ್ಲಿ ಕೆಲವು ಕನ್ನಡ ಪದ್ಯಗಳೂ ಇವೆ. ಈ ಕೃತಿಯೊಡನೆ ಆಗಮ ವಿಸ್ತಾರ ನಿರ್ಣಯ, ಬಸವನಾಮಾವಳಿ, ನಂಜುಂಡಯೋಗೀಂದ್ರನ ಮಂಗಳ (ಮೂರು ಪದ್ಯಗಳು) ಈ ಕೃತಿಗಳಿವೆ.

17

ಕೆ. ಎ. ೧೬೦	**ಅಖಂಡೇಶ್ವರ ವಚನ**	ವಚನ
೧೦.೮″ × ೮.೫″	ಷಣ್ಮುಖಸ್ವಾಮಿ ?	?
೧-೧೬೪ ಪತ್ರ	೧೮ ಪಂಕ್ತಿ	೨೧ ಅಕ್ಷರ

ಆದಿ : ಶ್ರೀ ವಿಘ್ನೇಶ್ವರಾಯನಮಃ॥ ಈಶ್ವರನಾಮ ಸಂವತ್ಸರಸ್ಯ। ಅಧಿಕ ಜೇಷ್ಠ ಶುಕ್ಲ ಪಕ್ಷಸ್ಯ ಪ್ರಥಮ ಇಂದುವಾರಾನ್ವಿತ ಪ್ರಕೃತಮಾಗಿಯಿರುವ ಅಖಂಡೇಶ್ವರ ವಚನ ಬರಿಯುವದಕ್ಕೆ॥ ಶುಭಮಸ್ತು॥
ವೃಡಭಕ್ತ ಪಯೋದನ್ವದುಡ ರಾಜಯಿತುಂ ಸದಾ।
ಜಡಮಾಯಾತಮುಸ್ಸೂರ್ಯಂ ಷಡಕ್ಷರಗುರುಂ ಭಜೇ॥

ಮೊದಲು ಪಿಂಡಸ್ಥಲದ ವಚನ॥ ಆ ಸ್ಥಲದ ವಚನಾ॥ ಆದಿ ಆಧಾರಯಿಲ್ಲದಂದೂ॥ ನಾದಬಿಂದು ಕಳೆಗಳಿಲ್ಲದಂದೂ॥ ವೇದಶಾಸ್ತ್ರ ಆಗಮ ತರ್ಕ

ತಂತ್ರಂಗಳಿಲ್ಲದಂದೂ। ಚವುಸಷ್ಟಿ ವಿದ್ಯಾಕಲೆಗಳಿಲ್ಲದಂದು। ಭೇದಾಭೇದಂಗಳಿಲ್ಲದಂದು। ತೋರುವ ತೋರಿಕೆಗಳೇನೂ ಯಿಲ್ಲದಂದೂ। ಅಖಂಡೇಶ್ವರ ನಿಂಮು ನೀವರಿಯದೆ ಅನಂತಕಾಲಯಿರ್ದಿರಂದು ॥ ೧ ॥

ಅಂತ್ಯ : ॥ ೩೯ ॥ ನಾದ ನಿಜವೆಂಬೆನೆ ನಾದ ನಿಜವಲ್ಲ. ಬಿಂದು ನಿಜವೆಂಬೆನೆ ಬಿಂದು ನಿಜವಲ್ಲ. ಕಳೆ ನಿಜವೆಂಬೆನೆ ಕಳೆ ನಿಜವಲ್ಲ. ಆ ನಾದ ಬಿಂದು ಕಳೆಗಳಿಂದೊಗೆದ ಜಗಲು ನಿಜವೆಂಬೆನೆ ಜಗಲು ನಿಜವಲ್ಲ. ಜಗದ ಮಧ್ಯದಲ್ಲಿ ತೋರುವ ಲೀಲೆ ನಿಜವೆಂಬೆನೆ ಲೀಲೆ ನಿಜವಲ್ಲ ॥

ವಿಷಯ : ಷಟ್ಸ್ಥಲ ಸಿದ್ಧಾಂತ ಪ್ರತಿಪಾದನೆ.

ವಿಶೇಷ : ಪ್ರತಿ ಸಾಮಾನ್ಯವಾಗಿದೆ. ಕನ್ನಡ ವಚನಗಳು ಸಾಮಾನ್ಯ ರೀತಿಯಲ್ಲಿ ಪ್ರತಿಮಾಡಿದ್ದರೂ ಉದಾಹೃತ ಸಂಸ್ಕೃತ ಗ್ರಂಥಗಳು ಅಶುದ್ಧವಾಗಿ ಪ್ರತಿ ಮಾಡಲ್ಪಟ್ಟಿವೆ.

ಭಕ್ತಾದಿ ಶರಣಸ್ಥಲವು ಸಮಗ್ರವಾಗಿಯೂ ಐಕ್ಯಸ್ಥಲವು ಅಸಮಗ್ರವಾಗಿಯೂ ಇರುತ್ತದೆ. ಐಕ್ಯಸ್ಥಲದಲ್ಲಿ ೩೯ ನೆಯ ವಚನಾನಂತರ ಒಂದು ವಚನ ಬರೆದು ಸಂಖ್ಯೆಯನ್ನೂ ಗುರುತಿಸದೇ ಅಷ್ಟಕ್ಕೇ ಗ್ರಂಥ ನಿಂತಿದೆ. ಮುಂದೆ ಬರವಣಿಗೆಯಿಲ್ಲ. ಗ್ರಂಥವು ಸಮಗ್ರಪ್ರಾಯ. ಈ ಪ್ರತಿಯಲ್ಲಿ ಎಲ್ಲಿಯೂ ವಚನಕಾರನ ನಾಮವಾಗಲೀ ಪ್ರತಿ ಮಾಡಿದವನ ನಾಮವಾಗಲೀ ಕಾಲವಾಗಲೀ ಉಕ್ತವಾಗಿಲ್ಲ.

18

ಕೆ. ಬಿ. ೧೪	**ಅಂಗಜಬೋಧೆ**	ಭಾಮಿನೀಷಟ್ಪದಿ
೮.೧″ × ೬.೫″	?	ಸು ೧೬೫೦
೧–೭೭ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ॥ ಅಂಗಜಬೋಧೆ ॥ ೧ ನೇ ಸಂಧಿ—
ಶ್ರೀ ಪರಮತತ್ತ್ವಾನುಭವಸುಖ
ರೂಪವನು ಶಿವ ತಾಮರಸ ಸ
ಲ್ಲಾಪವನು ಸಲೆ ತಿಳಿವುದಂಗಜ ಶಾಸ್ತ್ರಬೋಧೆಯಲಿ ॥ ಪಲ್ಲವಿ ॥
ಜಯತು ಶ್ರೀಹೇರಂಬ ಶಿವಸುತ
ಜಯತು ವಿದ್ಯಾತತ್ತ್ವ ಕಾರಣ
ಜಯತು ವಿಘ್ನವಿನಾಯಕಾಯ ಗಣಾಧಿಪತಿ ಜಯತು

ಜಯತು ಗಜಮುಖ ವಕ್ತ್ರ ಜಯಜಯ
ಜಯತು ಲಂಬೋದರ ಉಮಾಪ್ರಿಯ
ಜಯತು ಚಿತ್ರಾಂಗಜ ಕುಮಾರನೆ ಯೇಕದಂತ ಜಯ ॥ ೧ ॥

ಅಂತ್ಯ : ಮಂಗಳ ಶ್ರೀತನುಜ ಪೂಜೆ ಕ್ರಿ
ಯಾಂಗದಿಂಗಿತದಂಗವಣೆಯ ಕ್ರ
ಮಂಗಳನು ಸಲೆ ಸಾಂಗೋಪಾಂಗ ವಲವಿನ ಅರಿವಂಗೆ
ಅಂಗವೆಸನು ಭವಕೆ ನೆರೆಪ್ರ
ತ್ಯಂಗವಹ ಅಂಗಜಸುಬೋಧೆಯ
ಅಲಸದೆ ಪೇಳ್ದಂಗೆ ಯಿಪ್ಪುದು ಮಂಗಳೋತ್ಸವವು ॥ ૩೯ ॥

ಸಂಧಿ ೯ಕ್ಕಂ ಪದನು ೨೮೮ ಕ್ಕಂ ಮಂಗಳಂ ಶ್ರೀ ॥ ಅಂಗಜಬೋಧೆ
ಸಂಪೂರ್ಣಂ ॥
ಮೊದಲಲಿ ವಾಮುಕ್ಕೆ ೩ ರಂ
ಮೊದಲಿಲ್ಲದೆ ತುದಿಯ ವಿಷಮವಿರಲೆರಡಕ್ಕುಂ
ಮೊದಲು ತುದಿಲಿ ವಾಮುಕ್ಕೊಂದಂ
ಮೊದಲಂ * * * ಲ್ಲದಿದ್ದರೆ ನಾಲ್ಕುಂ ॥
ನವೆಯುಕ್ಕಣ ಕೊಡುಯೆಂಬಣ
ಜಾತಿಯುಕ್ಕನ ಮಾಡುವಣ
ಶ್ರೀಕುರಿತು ಕೊಂಡುದ ೩ ಹೆಚ್ಚಗುಣಿಸುವಣಾ
ನೀಂ ಭಾವಿಸುವಣಾ ॥

ವಿಷಯ : ಕಾಮಶಾಸ್ತ್ರ

ವಿಶೇಷ : ಮಧ್ಯೆ ಒಂದೆರಡು ಕಡೆಗಳಲ್ಲಿ ಗ್ರಂಥವು ತ್ರುಟಿತವಾಗಿದೆ.

19

ಕೆ. ೧೮೪/೨	ಅಂಗದಸಂಧಾನ	ಭಾಮಿನೀಷಟ್ಪದಿ
೧೩.೫" × ೧.೮"	ಕುಮಾರವಾಲ್ಮೀಕಿ	ಸು ೧೫೮೦
೧೬೪–೧೬೯ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಅಂಗದಸಂಧಾನಾ ।

ವೀರವಿಜೆಯಭುಜಪ್ರತಾಪನು
ದಾರಸಾಹಸಮಲ್ಲ ವಾಲಿಕು
ಮಾರ ಸಂಧಿಗೆಹೋಗಿ ಸವರಿದ ನಿಖಿಳ ರಾಕ್ಷಸರಾ ||
ಪದಾ|| ಕೇಳಿದ್ಯೆ ರಾಜೇಂದ್ರಸುತ ದಶ
ಮೌಳಿಇಂದೀ ಜಗದೊಳಗೆ ಕಡು
ಖೂಳರುಂಟ್ಟೆಂದೆಣಿಸಬೇಡತಿಶಯುದ ಮೂರ್ಖರಲಿ ।
ಕೇಳಿಕೆಯ ಮನಚ್ಛತ್ರಭಂಗದ
ಮೇಲೆ ಮುರಿಯದೆ ಚ್ಛಲಪದದ ಪರಿ
ಪಾಳಿಯಿಂದುಪ್ಪವಡಸಿದನುಪ್ಪರದ ಗರ್ವದಲಿ || ೧ ||

ಅಂತ್ಯ : ಹೋಗದಧಿಕ ಕ್ರೋಧಸಿಕಿ ಬಳಿ
ಕಗಿವ ರೌದ್ರಾಟೋಪದಲಿ ಭುಗಿ
ಭುಗಿಸಿ ಬಲಿಮುಖಚಕ್ರಿ ಕೈವೀಸಿದನು ಕಾಳಗಕೆ ।
ನಗಮಹೀರುಹ ಹಸ್ತದುಬ್ಬಿರಿ
ದಗಲದಲಿ ಖೋಯೆಂದು ತೊರವೆಯ
ನಗರದಧಿಪತಿ ಹಾರವಿಸೆ ಹತ್ತಿದರು ಲಗ್ಗೆಯಲಿ || ೭೧ ||
ಅಧ್ಯಾಯ ೧ ಕ್ಕಂ ಪದನು ೭೧ ಕ್ಕಂ ಮಂಗಳಮಹಾಶ್ರೀ||

ವಿಷಯ : ರಾಮನು ರಾವಣನ ಬಳಿಗೆ ಅಂಗದನನ್ನು ದೂತನನ್ನಾಗಿ ಕಳುಹಿಸಿದ ಕಥೆ.

ವಿಶೇಷ : ಇದು ತೊರವೆರಾಮಾಯಣಕ್ಕೆ ಸೇರಿದ ಭಾಗ. ಕಿರಾತಾರ್ಜುನರ ಕಾಳಗ, ಸುಭಾಷಿತ(ಸಂ), ಸೋಮಾರಾಧ್ಯರ ಶತಕ, ರತ್ನಾಕರಶತಕ, ಅರುವತ್ತು ಮೂವರ ತ್ರಿವಿಧಿ, ಶಿವವಚನ ಮತ್ತು ವಿಷ್ಣುಕೀರ್ತನೆಗಳು, ಮಾನಸಪೂಜೆ (ಸಂ) ಗುರು ಶಿಷ್ಯ ವಾದ, ಶಿವಕೀರ್ತನೆಗಳು, ಸದ್ಗುರುರಹಸ್ಯ, ಐರಾವತ, ಭಾರತದಲ್ಲಿ ರಾಜ ನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಈ ಕಟ್ಟಿನಲ್ಲಿವೆ.

20

ಕೆ. ೩೪೭/೪	**ಅಂಗದ ಸಂಧಾನ**	ಭಾಮಿನೀಷಟ್ಪದಿ
೧೦" × ೧.೫"	ಕುಮಾರವಾಲ್ಮೀಕಿ	ಸು ೧೫೮೦
೮—೨೨ ಪತ್ರ	■ ಪಂಕ್ತಿ	೪೫ ಅಕ್ಷರ

ಆದಿ: ಅಂಗದ ಸಂಧಾನ ಬರೆಯುದಕ್ಕೆ ಅವಿಘ್ನಮಸ್ತು

ವೀರ ವಿಜೆಯ ಭುಜ ಪ್ರತಾಪನು
ದಾರ ಸಾಹಸಮಲ್ಲ ವಾಲಿಕು
ಮಾರ ಸಂಧಿಗೆ ಹೋಗಿ ಸವರಿದನಖಿಳ ರಾಕ್ಷಸರಾ ।

ಪದನೂ ॥ ಕೇಳಿದ್ನೆ ರಾಜೇಂದ್ರಸುತ ದಶ
ಮೌಳಿಯಿಂದೀ ಜಗದೊಳಗೆ ಕಡು
ಖೂಳರುಟ್ಟಿಂದೆನಿಸಬೇಡತಿಶಯದ ಮೂರ್ಖರಲೀ ॥
ಕೇಳಿಕೆಯು ಮನ ಛತ್ರಭಂಗದ
ಮೇಲೆ ಮುರಿಯದೆ ಛಲಪದದ ಪರಿ
ಪಾಳಿಕೆಯಿಂದ್ದುಪ್ಪವಡಿಸಿದನು ನುಪ್ಪರದ ಗರ್ವ್ವದಲೀ ॥ ೧ ॥

ಅಂತ್ಯ : ಹೋಗದಧಿ....ಕ್ರೋದ ಶಿಖಿ ಬಳಿ
ಕಗಿವ ರಉದ್ರಾಟೋಪದ....
ಭುಗಿಸಿ ಬಲಿಮುಖಚಕ್ರಿ ಕೈವೀಸಿದನು ಕಾಳಗಕೇ ।
ನಗಮಹೀರುಹ ಹಸ್ತರುಬ್ಬಿರಿ
ದಗಲದಲಿ ಖೋಯೆಂದ್ದು ತೊರವೆಯು....
....ರದಧಿಪತಿ ಹಾರವಿಸೆ ಹತ್ತಿದರು ಲಗ್ಗೆಯಲೀ ॥ ೭೧ ॥

ಅಂತು ಅಂಗ್ಗದ ಸಂದಾನದ ಪದನು ೭೧ಕಂ ಮಂಗಳಶ್ರೀ.

ವಿಷಯ : ರಾಮನು ರಾವಣನ ಬಳಿಗೆ ಅಂಗದನನ್ನು ದೂತನನ್ನಾಗಿ ಕಳುಹಿಸಿದ ಕಥೆ.

ವಿಶೇಷ : ಇದು ತೊರವೆ ರಾಮಾಯಣದ ಭಾಗ. ಪತ್ರಗಳಿಗೆ ಸಂಖ್ಯೆ ಇಲ್ಲ. ಗ್ರಂಥವು ಶಿಥಿಲ. ಇದೇ ಕಟ್ಟಿನಲ್ಲಿ ಸಂಕ್ಷೇಪ ಭಾರತ, ಸಂಕ್ಷೇಪ ರಾಮಾಯಣಗಳೆಂಬ ಇತರ ಎರಡು ಕೃತಿಗಳಿವೆ.

21

ಕೆ. ಎ. ೨೪೯/೩	**ಅಂಗದ ಸಂಧಾನ**	ಭಾಮಿನೀಷಟ್ಪದಿ
೧೨.೬" × ೭.೯"	ಕುಮಾರವಾಲ್ಮೀಕಿ	ಸು. ೧೫೮೦
೧೮–೨೯ ಪತ್ರ	೨೪ ಪಂಕ್ತಿ	೨೨ ಅಕ್ಷರ

ಆದಿ : ಅಂಗದ ಸಂಧಾನ ಬರಿಯುುವದಕ್ಕೆ ನಿರ್ವಿಘ್ನಮಸ್ತು

ಸೂಚನೆ ॥ ವೀರ ವಿಜಯ ಭುಜಪ್ರತಾಪನು
ದಾರ ಸಾಹಸನಮುಲ ವಾಲಿಕು
ಮಾರ ಸಂಧಿಗೆ ಹೋಗಿ ಸವರಿದ ನಿಖಿಳ ರಾಕ್ಷಸರಾ ॥

ಅಂತ್ಯ : ಹೋದುದಧಿಕ ಕ್ರೋಧ ಸಿಖಿ ಬಳಿ
ಕುಗಿದ ರವುದ್ರಾವೇಶದಲಿ ಭುಗಿ
ಭುಗಿಸಿ ಬಲಿಮುಖಚಕ್ರಿ ಕೈವೀಸಿದದು ಕಾಳಗಕೇ
ನಗ ಮಹೀರುಹಸ್ತರುಬ್ಬರಿ
ಸಗಲದಲಿ ಭೋಯೆಂದು ತೊರವೆಯು
ನಗರದಧಿಪತಿ ಹಾರವಿಸೆ ಹತ್ತಿದರು ಲಗ್ಗೆಗಳಾ ॥ ೬೫ ॥

ವಿಷಯ : ರಾಮನು ರಾವಣನ ಬಳಿಗೆ ಅಂಗದನನ್ನು ದೂತನನ್ನಾಗಿ ಕಳುಹಿಸಿದ ಕಥೆ.

ವಿಶೇಷ : ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಇದರೊಂದಿಗೆ ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಬಾಣಾಸುರನ ಪೂಜೆ, ವಿಭೀಷಣ ಶರಣಾಗತಿ ಎಂಬ ಗ್ರಂಥಗಳೂ ಇವೆ.

22

ಕೆ. ಬಿ. ೧೩೭	ಅಂಗದಸಂಧಾನ	ಯಕ್ಷಗಾನ
೭.೮" × ೬.೨"	ಲಿಂಗರಾಜ	೧೮೫೦
೧—೩೪ ಪತ್ರ	೧೭ ಪಂಕ್ತಿ	೧೭ ಅಕ್ಷರ

ಆದಿ : ರಾಮಾಯಣದಲ್ಲಿ ಅಂಗದ ಸಂಧಾನ । ಸೇತುಬಂಧನ । × ×
ಅನಘರಘುವರ ಕಥಾಮಾಕಂದ ಕೋಕಿ
ಲನೆ ಕೇಳ್ ವಾಲ್ಮೀಕಿ ಸುವಿವೇಕಿ ಜಾನಕಿಯುವರ
ವಿನುತ ಚೂಡಾಮಣಿಯನಣಿಯರದಿ ಮಣಿದೀಯೆ ದಿನಮಣಿ ಕುಲೇಶ ನಾಗಂ
ಮನದಿ ಹರುಷಂಗೊಂಡು ಮುಂದೆ ಪವನಜಗೆ
ವನಜಗರ್ಭನ ಪದವಿ ನಿನಗಾಗಲೆಂದು ವರಮುಂ ಕೊಟ್ಟು
ವನದೊಳೇಗೈದನೆಂಬುದಂ ಪೇಳೆನುತ್ತಂದು ಕುಶಲವರ ಕೇಳಲಾಗ ॥ ೧ ॥

ರಾಗ : ಶಂಕರಾಭರಣ ॥ ತ್ರಿವುಡೆ ॥
ಕೇಳಿರೈ ಮಕ್ಕಳಿರ ನಿಜಪಿತ
ನೇಳಿಗೆಯ ಚರಿತೆಯನು ಸಂತಸ
ದಾಳಿ ಪೇಳುವೆ ಮರುದಿವಸದೊಡ್ಡೋಲಗದೊಳು ॥ ೨ ॥

ಅಂತ್ಯ : ವಾರ್ಧಿಕ ॥

ಕರವಿಡಿದು ಬರಸೆಳದು ಬಿಗಿವಪ್ಪಿ ಬಂದೆಯಾ
ತರುಣ ನಮ್ಮಯ ಭಾಗ್ಯದೇಳ್ಗೆಯಿಂ ನೀನೆಂದು
ದುರುಳದೈತೇಯ ಶರಘಾತದಿಂದೊಸರ್ವ ಕೆನ್ನೀರ ಬಳಬಳದಿಡುತಲೆ
ಕರುಣದಿಂ ಸಂತೈಸಿ ನಾಳೆ ರಿಪುನಗರವಂ
ನಿರದೆ ಲಗ್ಗೆಯ ಹತ್ತಿರೆನುತಲಾಜ್ಞಾಪಿಸುತ
ಲಿರುತಿರ್ದನಾ ರಾಮನೆಂದು ಕುಶಲವರಿಗಾ ವಾಲ್ಮೀಕಿಮುನಿ ನುಡಿದನು
॥ ೩೮೧ ॥

ಮಂಗಳ ॥ ರಾಗ ಸೌರಾಷ್ಟ್ರ ಆದಿತಾಳ ॥

ಮಂಗಳಂ ಮಹಲಿಂಗನಿಗೆ ಶುಭಮಂಗಳಂ
ಅಂಗಜಾಂಗಭಂಗನಿಗೆ ಜಯಮಂಗಳಂ ॥ ಪ ॥

× × × ×

ಪುಂಗವ ತುರಂಗನಿಗೆ ಗಂಗಾಜಾನಿಗೆ
ಲಿಂಗರಾಜ ಸೇವ್ಯನಿಗೆ ತುಂಗ ಮಹಲಿಂಗನಿಗೆ ॥ ೩೮೪ ॥

ಸಂಪೂರ್ಣಕ್ಕೆ ಮಂಗಳಂ ॥

ವಿಷಯ : ಶ್ರೀ ರಾಮನು ಅಂಗದನನ್ನು ದೌತ್ಯಕ್ಕಾಗಿ ರಾವಣನಲ್ಲಿಗೆ ಕಳುಹಿಸಿದ ಕಥೆ.

ವಿಶೇಷ : ಅಕ್ಷರ ಸ್ಪುಟವಾಗಿದೆ. ಅಲ್ಲಲ್ಲಿ ಹುಳು ತಿಂದಿದೆ.

23

ಕೆ. ಬಿ. ೩೫೩/೭	**ಅಂಗದ ಸಂಧಾನ**	ಯಕ್ಷಗಾನ
೯″ × ೬.೫″	?	?
೧೨೫–೧೬೧ ಪತ್ರ	೨೨ ಪಂಕ್ತಿ	೨೪ ಅಕ್ಷರ

ಆದಿ : ಆಂಗಧನ ಸಂದಾನ ಬರೆಯುವದಕ್ಕೆ ಶುಭಮಸ್ತು
ಕುಶನೆ ಕೇಳ್ಳೈ ಪುಶ್ಯಸೂಧ್ಧ ದಸಮಿಯಲ್ಲಿ
ಪ್ರ.... ಬವಾಯಿತ್ತು ವೂಸುರಿಲದು ಸಂಪೂರ್ನವಾಯಿತ್ತಯೊ.... ಯೊಳಯು
॥ ೧ ॥

ಆ ಕವೀಂದ್ರ ಸಾಹಸವೆಂತೂಟೊಂ ನಾಲ್ಕು ದಿವಸ ಧಿಶೇತ್ತು ನಡದುಧು।
ನಾಕಧಿಂ ಬಹು ಬೇರಿ ಮೊಳಗೀವನೆಕರಿಜಸಾ ॥ ೨ ॥

ಅಂತ್ಯ : ವೂಂಣ ಕಪೂರದಲಿ ನೆಲಸಿದಗೆ ಪಂನಗಶಯನಗೆ ಕೇಶ....ಗೇ....ಂನ್ನಾ ನೀಲಾವ್ಯೈಯವಗೇ ।

ಶ್ರೀ ಪ್ರಸಂನ್ನಾ ಜನಾರ್ದನಾ ॥ ದೇವನಿಗೆ ಮಂಗಳಂ ಜಯ ಮಂಗಳಂ ॥
ಅಂತು ಸಂಧಿ ಅಧ್ಯಾಯ ೧೦ ಕಾಂ ಪದನು....ಕಂ ಜಯ ಮಂಗಳ ಮಹಾಶ್ರೀ.

ವಿಷಯ : ಶ್ರೀರಾಮನು ಅಂಗದನನ್ನು ದೌತ್ಯಕ್ಕಾಗಿ ರಾವಣನಲ್ಲಿಗೆ ಕಳುಹಿಸಿದ ಕಥೆ.

ವಿಶೇಷ : ಶಿಥಿಲ ಮತ್ತು ಅಶುದ್ಧಪ್ರತಿ. ಹುಳು ಹೊಡೆದಿದೆ. ಇದೇ ಪುಸ್ತಕದಲ್ಲಿ ರಾವಣೋದ್ಭವ ಪ್ರಸಂಗ, ಪುತ್ರಕಾಮೇಷ್ಟಿ, ಚಿಕ್ಕಪಟ್ಟಾಭಿಷೇಕ, ವಾಲಿ ಸುಗ್ರೀವರ ಕಾಳಗ, ಚೂಡಾಮಣಿ ಪ್ರಸಂಗ, ಸೇತುಬಂಧನ ಪ್ರಸಂಗ ರಾವಣನ ಕಥೆ, ವೆಂಕಟೇಶ ಶತಕ ಎಂಬ ಕೃತಿಗಳಿವೆ.

24

ಕೆ. ಎ. ೧೫೧	**ಅಜಾಮಿಳಚರಿತ್ರೆ (ಭಾಗವತ)**	ಭಾಮಿನೀಷಟ್ಪದಿ
೧೨.೫" × ೮"	ಚಾಟುವಿಠಲನಾಥ	ಸು ೧೫೩೦
೧–೨೪ ಪತ್ರ	೩೨ ಪಂಕ್ತಿ	೩೨ ಅಕ್ಷರ

ಆದಿ : ಪುಷ್ಪದಂತ ಪುರೇಣಾ ಭಾಗವತ ಸಂಮಂದಾ ಅಜಮಿಳ ಚರಿತ್ರೆ.
ಹೇಳಿದನು ಮುನಿನಾಥನಾ ನೃಪ
ಮವುಳಿ ಮಣಿಗೆ ಮಹಾಘ ನಿಕರೋಂ
ನ್ಮೂಲಸೈಕಸಮರ್ಥವಹ ಹರಿನಾಮ ನಿಷ್ಕೃತಿಯಾ ॥ ಪದನು ॥
ವರಮುನಿಪ ಚಿತ್ತವಿಸು ಮನ್ವಂ
ತರವನಾ ಸ್ವಾಯಂಬುವಾದ್ಯರ
ಚರಿತವನು ತತ್ಪುತ್ರ ಪೌತ್ರಾದ್ಯಖಿಳ ಚರಿತವನೂ
ಧರೆಯ ಸಪ್ತದ್ವೀಪಸಾಗರ
ಗಿರಿನದೀವನ ವರುಷಭುವನಾ
ಸ್ತರಣವನು ಕರುಣಿಸಿದೆ ಜ್ಯೋತಿಶ್ಚಕ್ರಸಂಸ್ಥಿತಿಯಾ ॥ ೧ ॥

ಅಂತ್ಯ : ಕೇಳಿದಡೆ ದುಸ್ವಪ್ನನಾಶನ
ವಾಲಿಸಿದಡಘಕುಲವಿನಾಶನ
ಕೇಳಿ ದಿಟದಿಂದೋಂಮೆ ಕೇಳಲು ಮನವ ಮಾಡಿದಡೇ
ಆಲಯವ ಮಾಡುವನು ಲಕ್ಷ್ಮೀ
ಲೋಲನವರೊಳಗೊಲಿದು ತ್ರಿಭುವನ

ಪಾವಕನು ನಿತ್ಯಾತ್ಮ ಕೃಷ್ಣನಶೇಷಜನ ಬಂದೂ ||
ಅಂತುಸಂದಿ ೧೪ ಕಕಂ ಮಂಗಳಮಹಾಶ್ರೀ ||

ವಿಷಯ : ಭಾಗವತದಲ್ಲಿರುವ ಅಜಾಮಿಳ ಮತ್ತು ಗಜೇಂದ್ರಮೋಕ್ಷದ ಕಥೆ.

ವಿಶೇಷ : ತಪ್ಪುಗಳು ಅಧಿಕ. ಚಾಟುವಿಠಲನಾಥನ ಭಾಗವತದ ಆರನೆಯ ಸ್ಕಂದದಲ್ಲಿ ೧ ರಿಂದ ೧೨ ಸಂಧಿಗಳಲ್ಲಿ ೭ ನೆಯ ಸಂಧಿಯನ್ನು ಬಿಟ್ಟು ಉಳಿದ ಸಂಧಿಗಳಿದ್ದು ಬಳಿಕ ಎಂಟನೆಯ ಸ್ಕಂದದ ಮೊದಲಿನ ನಾಲ್ಕು ಸಂಧಿಗಳಿವೆ. ಒಟ್ಟು ಇರುವುದು ೧೫ ಸಂಧಿಗಳು. ಆದರೆ ಲೇಖಕ ದೋಷದಿಂದ ೧೪ ಎಂದಾಗಿದೆ. ಆರನೆಯ ಸ್ಕಂಧದ ಕಥೆ ಅಜಾಮಿಳನ ಚರಿತ್ರೆ. ಎಂಟನೆಯ ಸ್ಕಂದದ ಕಥೆ ಗಜೇಂದ್ರ ಮೋಕ್ಷ. ಈ ಎರಡು ಕಥೆಗಳೂ ಇಲ್ಲಿ ಮಿಳಿತವಾಗಿವೆ. ಪತ್ರಗಳ ಶಿರೋನಾಮೆ ಯಲ್ಲಿ ಕೆಲವು ಕಡೆ ಪುಷ್ಪದಂತ ಪುರಾಣ ಭಾಗವತ ಸಂಮಂಧ ಎಂದೂ ಮತ್ತೆ ಕೆಲವು ಕಡೆ ಪುಷ್ಪದಂತಪುರಾಣ ವೈಷ್ಣವ ಸಂಮಂಧ ಎಂದೂ ಇದೆ. ಅರ್ವಾಚೀನಪ್ರತಿ.

25

ಕೆ. ೫೬೪/೧	**ಅಜಾಮಿಳನ ಮೋಕ್ಷ**	ಹಾಡು
೧೦.೨" × ೧.೮"	ಅನಂತರಾಮಯ್ಯ (?)	೧೯ ನೆಯ ಶತಕ
೭೩ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಉದೆಯರಾಗ ಬರವುದಕ್ಕೆ ಶುಭಮಸ್ತು । ಅಜಾಮಿಳನ ಮೋಕ್ಷ ಬರವುದಕ್ಕೆ ಆಚಂದ್ರಾರ್ಕಮಸ್ತು । ಹರಿಯೇ ನಾರಾಯಣಾಯಂನ್ನಮೋ ||

ನಾರಾಯಣಾಯೆಂಬ ನಾಮುವನು ನೆನದರೆ
ಹಾರಿ ಹೋಹದು ಜನ್ಮಜನ್ಮದ ಪಾಪಗಳು
ಶ್ರೀರಮಣನೆಂಬ ನಾಮಸ್ಮರಣೆಯನು ದೊರಕುವದು ಮುಕ್ತಿ
ದೋರಿಸು ಮುರಾರಿ ಶವುರೀ || ಹರಿಯೇ ನಾರಾಯಣಾಯಂನಮೋ ||ಪ||

ಸಕಲವೇದಪುರಾಣಶಾಸ್ತ್ರಗಳ ತಿಳಿದೋದಿ
ಭಕ್ತಿಯಲಿ ತ್ಯಾತಂದೆಯ ಚಿತ್ತವಿಡಿದೂ
ರಕ್ಷಂಣ್ಯವನು ಮಾಡಿ ಜಗದೊಳಗೆ
ಖ್ಯಾತಿಯಲಿ ಸುಕುಮಾರನೆನಿಸಿಕೊಂಡು ।
ಪ್ರಕ್ರುತಿಯಲಿ ಹೋಮಕೋಸ್ಕರ
ಸಮಿದ ತರಹೋಗಿ ದುಷ್ಕ್ರುತದ ಫಲದಿಂದ

ಚಾಂಡಾಲಿತಿಯು ಕಂಡು ಕಾಮುಖನಾಗಿ ನಿಂದು
ಮೈಮರದು ಅಜಾಮಿಳನು ಪಾತಕಿಯಂಬುದಾನರಿಯದೇ ॥
ಹರಿಯೇ ನಾರಾ ॥ ೧ ॥

ಅಂತ್ಯ : ವಲವಿಂದ ಹೆಳವನಾಕಟ್ಟೆ ಶ್ರೀ
ವೆಂಕಟನ ನೆಲೆಯರಿತು ಭಜಿಸಿದರ್ಗೆ
ಮನಬಾಧೆಗಳಿಲ್ಲ ಸುಲಭನಾಭನು
ಸ್ವಾಮಿಸಾಯುಜ್ಯಪದವೀವ ಬಲುನಂಬಿ ಭಜಿಸಿ ಜನರು ।
ಹರಿಯೇ ನಾರಾಯಣಾಯಂನ್ನವೋ ॥ ೧೫ ॥

ಅಜಾಮಿಳನ ಮೋಕ್ಷ ಸಮಾಪ್ತಂ ಮಂಗಳಮಹಾಶ್ರೀ ॥

ವಿಷಯ : ಅಜಾಮಿಳನ ಚರಿತ್ರೆ.

ವಿಶೇಷ : ಈ ಕಟ್ಟಿನಲ್ಲಿ ದ್ರೌಪದಿ ಸೀರೆ ಸೆಳೆದ ಹಾಡು, ಉದಯರಾಗ ಎಂಬ ಇತರ ಹಾಡುಗಳಿವೆ. ಕೊನೆಯಲ್ಲಿ ಇಂದ್ರಕೀಲವೆಂಬ ಯಕ್ಷಗಾನವನ್ನು ಪ್ರಾರಂಭ ಮಾಡಿರುವ ಒಂದು ಪತ್ರ ಇದೆ.

26

ಕೆ. ೮	ಅಜಿತನಾಥಪುರಾಣ	ಚಂಪು
೨೧.೬"×೧.೮"	ರನ್ನ	೯೯೩
೧–೬೧ ಪತ್ರ	೮ ಪಂಕ್ತಿ	೮೫ ಅಕ್ಷರ

ಆದಿ : ಶ್ರೀಮನ್ನಮ್ರಾರೇಂದ್ರಾರುಣಮಣಿ ಮುಕುಟದ್ಯೋತಿ ಬಾಲಾರ್ಕ್ಕಲೀಲೋ
ದ್ದಾಮಂ ಕಾಶ್ಮೀರರಾಗಂ ತನಗೆ ವಿನತನಾಗೇಂದ್ರ ಹಸ್ತಾರುಣಾಬ್ಜಂ
ಹೈಮಂ ಕರ್ನ್ನಾವತಂಸಂ ತನಗೆನೆ ಕರಮೊಪ್ಪಿರ್ದ್ದಳಾರ್ಹಂತ ಲಕ್ಷ್ಮೀ
ಧಾಮಂ ಮಾಳ್ಕೆಂಮ್ಮ ಹೃತ್ಪದ್ಮಮನಜಿತಜಿನೇಂದ್ರಕ್ರಮಾಂಭೋರುಹಶ್ರೀ
ಮೊದಲೊಳೆ ಸಿದ್ಧಭಕ್ತಿ ಸಕಳಕ್ರಿಯೆಗಾದುದು ಸಿದ್ಧಮಾತೃಕಾ
ಪದವಿಗೆ ತಾನೆ ಮೊತ್ತಮೊದಲಾದುದುಮಲ್ಲದೆ ಸಿದ್ಧಶೇಷೆಯೆಂ
ಬುದು ಶುಭವಾಕ್ಯಮಾಯ್ತೆಸಿಪ ಸಿದ್ಧರನಂತಸುಖಪ್ರಯುಕ್ತರ
ಭ್ಯುದಯ ಸುಖಂಗಳಂ ನಮಗೆ ಮಾಡಿ ನಿಮಿರ್ಚ್ಚುಗೆ ಕಾವ್ಯಸಿದ್ಧಿಯಂ॥೧೨॥

ಅಂತ್ಯ :

ಕ॥ ನೆಗಳ್ದವರಿರ್ವರ ಪೆಸರ್ಗ
ಳ್ನೆಗಳ್ದವು ಧಂನೆರಡು ಮಧ್ವಕ್ರಾತಿಗಳು ರಾಯಂ

ಮಗನತ್ತಿಮಬ್ಬೆ ಮಗಳೆನೆ
ನೆಗಳ್ದ ಸಂತಾನವೃದ್ಧಿಯಿಂ ಕವಿರತ್ನಂ
* * * * * * * ಪಂಚದಶಾ
ಧಿಕನವಶತಮಾಗೆ ವಿಜಯಸಂವತ್ಸರ ಕಾ
ರ್ತಿಕ ನಂದೀಶ್ವರ ದಿನದೊಳ್
ಪ್ರಕಟಿಸಿದುದು ರತ್ನನಿಂದೆಮಜಿತಪುರಾಣಂ ॥

ಗದ್ಯ ॥ ಯಿದು ಸಕಳಮುನೀಂದ್ರವೃಂದವೃಂದಾರಕ ಶ್ರೀಮದಜಿತಸೇನ ಭಟ್ಟಾರಕ ಶ್ರೀಪಾದಪದ್ಮಪ್ರಸಾದಾಸಾದಿತ ರತ್ನತ್ರ* * * * *ಕವಿರತ್ನ ವಿರಚಿತ ಶ್ರೀ ಚಿಂತಾಮಣಿ ವಿನಿರ್ಮಾಪಿತ ಶ್ರೀಮದಜಿತತೀರ್ತ್ಥಕರ ಪುರಾಣ ತಿಲಕದೊಳು ಪುರಾಣ ನಿರ್ವ್ವಾಣವರ್ನ್ನನಂ ದ್ವಾದಶಾಶ್ವಾಸಂ ॥ ೧೨ ॥

ಶ್ರೀವಾಸುಪೂಜ್ಯಾಯನಮಃ ಶ್ರೀಮದ್ವಿಜಯಕೀರ್ತಿಮುನಯೇ ನಮಃ ಅರಸಂಮರಸರು ಬರೆಸಿದ ಪುಸ್ತಕಂ—

ವಿಷಯ : ಎರಡನೆಯ ತೀರ್ಥಂಕರ ಅಜಿತನಾಥನ ಮತ್ತು ಎರಡನೆಯ ಚಕ್ರವರ್ತಿ ಸಗರನ ಕಥೆ.

ವಿಶೇಷ: ಪ್ರತಿಯು ಚೆನ್ನಾಗಿದ್ದರೂ ಅಲ್ಲಲ್ಲಿ ಪತ್ರಗಳು (೫೯, ೬೧) ಹರಿದಿವೆ. ಗರಿಯಂಚುಗಳು ಮುರಿದಿವೆ. ಶಕಟರೇಫವಿದೆ. ಪ್ರತಿಯ ಕೊನೆಯಲ್ಲಿ 'ಅರಸಂಮರಸರು ಬರೆಸಿದ ಪುಸ್ತಕಂ' ಎಂದಿದೆ.

27

ಕೆ. ಎ. ೧೬	ಅಜಿತನಾಥಪುರಾಣ	ಚಂಪು
೧೨.೩" × ೭.೫"	ರನ್ನ	೯೯೩
೧—೧೦೫ ಪತ್ರ	೨೪ ಪಂಕ್ತಿ	೨೫ ಅಕ್ಷರ

ಆದಿ : ವೃ॥ ಶ್ರೀಮನ್ನಮ್ರಾಮರೇಂದ್ರಾರುಣಮಣಿಮಕುಟದ್ಯೋತಿ
ಬಾಲಾರ್ಕಲೀಲೋ
ದ್ದಾಮಂ ಕಾಶ್ಮೀರರಾಗಂ ತನಗೆ ವಿನತನಾಗೇಂದ್ರಹಸ್ತಾರುಣಾಬ್ಜಂ
ಹೈಮಂ ಕರ್ನ್ನಾವತಂಸಂ ತನಗೆನೆ ಕರಮೊಪ್ಪಿರ್ದಳಾರ್ಹಂತ್ಯಲಕ್ಷ್ಮೀ
ಧಾಮಂ ಮಾಳ್ಕೆಂಮ ಹೃತ್ಪದ್ಮಮನಜಿತನೇಂದ್ರಕ್ರಮಾಂ
ಭೋರುಹಶ್ರೀ ॥ ೧ ॥

ಮೊದಲೊಳೆ ಸಿದ್ಧಭಕ್ತಿಸಕಳಕ್ರಿಯೆಗಾದುದು ಸಿದ್ಧಮಾತೃಕಾ
ಪದವಿಗೆ ತಾನೆ ಮೊತ್ತಮೊದಲಾದುದುಮಲ್ಲದೆ ಸಿದ್ಧಶೇಷೆಯೆಂ
ಬುದು ಶುಭವಾಕ್ಯಮಾಯ್ತೆನಿಪ ಸಿದ್ಧರನಂತ ಸು* * * *
* * * * ಯಸುಖಂಗಳಂ ನಮಗೆ ಮಾಡಿ ನಿಮಿಚ್ಚುರ್ಗೆ ಕಾವ್ಯ
ಸಿದ್ಧಿಯಂ ॥ ೨ ॥

ನೆಗಳ್ದುರ್ದುತ್ತಮು ಜೈನಮಾರ್ಗರುಚಿಯಿಂ ಚಾರಿತ್ರ ಸಂಸಿದ್ಧಿಯೊ
ಳ್ನೆಗಳ್ವರ್ಶಿಷ್ಯರುಮಂ ನೆಗಳ್ಪವರದ * * * *
ಗತಿ ವ್ಯಾಪಕವಾಗೆ ತಾಮೆ ಕಣಿಯಾಗಿರ್ದರ್ಗುರ್ಗಣಂಗಳ್ಗಿಭ
ವ್ಯಗಣಂಗಳ್ಗಮದಂ ನಿಮಿಚ್ಚಿರ್ ಮೆಚ್ಚಿಗಾಚಾರ್ಯನ್ನಿರ್ಜೌದಾರ್ಯಮಂ ॥

ಅಂತ್ಯ: ಕಂ॥ ವರಿರ್ವ್ವರ ಪೆಸಗ್ಗರ್
ಳ್ನೆಗಳ್ದವು ತಂನೆರಡು ಮದ್ವಕೃತಿಗಳು ರಾಯಂ।
ಮಗನತ್ತಿಮಬ್ಬೆಮಗಳೆನೆ
ನೆಗಳ್ದಂ ಸಂತಾನ ವೃದ್ಧಿಯಿಂ ಕವಿರತ್ನಂ ॥ ೬೧ ॥

ಶಕವವರ್ಷಂ ಪಂಚದಶಾ
ಧಿಕ ನವಶತಮಾಗೆ ವಿಜಯ ಸಂವತ್ಸರ ಕಾ
ರ್ತಿಕ ನಂದೀಶ್ವರ ದಿನದೊ
ಳ್ಪ್ರಕಟಿಸಿದುದು ರತ್ನನಿಂದಮಜಿತಪುರಾಣಂ ॥ ೬೨ ॥

ಗದ್ಯ: ಇದು ಸಕಳಮುನೀಂದ್ರ ವೃಂದವೃಂದಾರಕ ಶ್ರೀಮದಜಿತಸೇನ ಭಟ್ಟಾರಕ ಶ್ರೀಪಾದ ಪದ್ಮ ಪ್ರಸಾದಾಸಾದಿತ ಶ್ರೀ ರತ್ನತ್ರಯಾಲಂಕೃತ ಶ್ರೀಮದಭಿನವ ಕವಿಚಕ್ರವರ್ತಿ ಕವಿರತ್ನ ವಿರಚಿತ ದಾನಚಿಂತಾಮಣಿ ನಿರ್ಮಾಪಿತ ಶ್ರೀಮದಜಿತ ತೀರ್ತ್ಥಕರ ಪುರಾಣ ತಿಲಕದೊಳ್ ಕವಿನಿರ್ವಾಣ ವರ್ನ್ನ * * * * * ಸಂ ॥ ೨೨ ॥ ಅಂತು ಆಶ್ವಾಸ ೧೨ಕ್ಕಂ ಕಂದ ವೃತ್ತ ವಚನ ೧–೪೧. ಅನುಷ್ಟುಪು ಗ್ರಂಥಪ್ರಮಾಣು ೩೦೦೦ ಕ್ಕಂ ಮಂಗಳ ಮಹಾಶ್ರೀ.

ವಿಷಯ: ಎರಡನೆಯ ತೀರ್ಥಂಕರ ಅಜಿತನಾಥನ ಮತ್ತು ಎರಡನೆಯ ಚಕ್ರವರ್ತಿ ಸಗರನ ಕಥೆ.

ವಿಶೇಷ: ಈ ಗ್ರಂಥವು ಸುದೃಢವಾಗಿದೆ. ಶಕಟರೇಫದ ಬಳಕೆ ಇದೆ. ಅಲ್ಲಲ್ಲಿ ಪದಗಳು ಲುಪ್ತವಾಗಿವೆ. ಗ್ರಂಥದ ಕೊನೆಯಲ್ಲಿ "Copied by Chandrasekara Sastry in Office D. P. 1. Jan. 1883" ಎಂದು ಸೀಸದಕಡ್ಡಿಯಲ್ಲಿ ಉಲ್ಲೇಖಿಸಿದೆ.

28

ಕೆ. ಎ. ೫೩ — **ಅಜಿತನಾಥ ಪುರಾಣ** — ಚಂಪು

೧೨.೫" × ೭.೮" — ರನ್ನ — ೯೯೩

೧–೧೯೦ ಪತ್ರ — ೨೫ ಪಂಕ್ತಿ — ೨೩ ಅಕ್ಷರ

ಆದಿ: ವೃ|| ಶ್ರೀಮನ್ನಮ್ರಾಮರೇಂದ್ರಾರುಣ ಮಣಿಮುಕುಟದ್ಯೋತಿ
ಬಾಲಾರ್ಕ್ಕಲೀಲೋ
ದಾಮಂ ಕಾಶ್ಮೀರರಾಗಂ ತನಗೆ ವಿನತನಾಗೇಂದ್ರ ಹಸ್ತಾರುಣಾಬ್ಜಂ
ಹೈಮಂ ಕರ್ಣಾವತಂಸಂ ತನಗೆನೆ ಕರಮೊಪ್ಪಿರ್ದ್ದಳಾರ್ಹಂತ್ಯ ಲಕ್ಷ್ಮೀ
ಧಾಮಂ ಮಾಳ್ಕೆಮ್ಮ ಹೃತ್ಪದ್ಮಮನಜಿತಜಿನೇಂದ್ರ
ಕ್ರಮಾಂಭೋರುಹಶ್ರೀ || ೧ ||

ಮೊದಲೊಳೆ ಸಿದ್ಧಭಕ್ತಿ ಸಕಳಾಕ್ರಿಯೊಗಾದುದು ಸಿದ್ಧಮಾತೃಕಾ
ಪದವಿಗೆ ತಾನೆ ಮೊತ್ತಮೊದಲಾದುಮುಲ್ಲದೆ ಸಿದ್ಧಶೇಷೆಯೆಂ
ಬುದು ಶುಭವಾಕ್ಯಮಾಯ್ತೆನಿಪ ಸಿದ್ಧರನಂತಸುಖಪ್ರಯುಕ್ತರ
ಭ್ಯುದಯ ಸುಖಂಗಳಂ ನಮಗೆ ಮಾಡಿ ನಿಮಿಚ್ಚುಗೆ ಕಾವ್ಯಸಿದ್ಧಿಯಂ
|| ೨ ||

ಅಂತ್ಯ: ಶಕವರ್ಷಂ ಪಂಚದಶಾ
ಧಿಕ ನವಶತಮಾಗೆ ವಿಜಯಸಂವತ್ಸರ ಕಾ
ರ್ತಿಕ ನಂದೀಶ್ವರ ದಿನದೊ
ಳ್ಪ್ರಕಟಿಸಿದುದು ರತ್ನನಿಂದಮಜಿತಪುರಾಣಂ || ೬೨ ||

ಗದ್ಯ|| ಇದು ಸಕಳ ಮುನೀಂದ್ರವೃಂದವೃಂದಾರಕ ಶ್ರೀಮದಜಿತಸೇನ ಭಟ್ಟಾರಕ ಶ್ರೀಪಾದ ಪದ್ಮಪ್ರಸಾದಾಸಾಧಿತ ರತ್ನತ್ರಯಾಳಂಕೃತ ಶ್ರೀಮದಭಿನವ ಕವಿಚಕ್ರವರ್ತಿ ಕವಿರತ್ನರಚಿತ ಶ್ರೀದಾನಚಿಂತಾಮಣಿ ನಿರ್ಮ್ಮಾಪಿತ ಶ್ರೀಮದಜಿತ ತೀರ್ತ್ಥಕರ ಪುರಾಣತಿಲಕದೊಳು ಪುರಾಣನಿರ್ವ್ವಾಣವರ್ನ್ನನಂ ದ್ವಾದಶಾಶ್ವಾಸಂ || ಆಶ್ವಾಸ ೧೨ಕ್ಕೆ ವೃತ್ತ ಕಂದ ವಚನ ಸಹಾ ೧೦೪೧ ಅನುಷ್ಟುಪು ಗ್ರಂಥ ಪ್ರಮಾಣ ೩೦೦೦ ಸಹಾ ಮಂಗಳ ಮಹಾಶ್ರೀ.

ಶ್ರೀರಸ್ತು ವೃ||
ಶಾಲಿವಾಹನ ಶಕಾಬ್ದ ಸಾವಿರದಯ್ನೆನೂರೆಂಭತ್ತೈದಮೆ
ವಿಲೋಕ್ಕತಿ ಸೌಖ್ಯಮುಂ ಕುಡುವ ಶೋಭಕೃತ್ಸಮಾಭಾದ್ರ
ದೊಳ್ಬಾಲೇಂದ್ರಾತ್ಮಜ ಶುಕ್ಲ ಪಕ್ಷ ತ್ರಿತಯೊಳ್ಶಿಕ್ಕೇಂದ್ರ ಭೂಮಿಶಂಗೆಂ

ದಾ ಲಕ್ಷ್ಮಾರ್ಯಖ್ಯಬುಧೋತ್ತಮಂ ಬರೆದುಕೊಟ್ಟಂ ಜೈನಕೃತ್ಕಾವ್ಯಮಂ.
ಸಿರಿಯೊಳ್ಗರ್ವಿಸಿ ಬೇಳ್ಪವರ್ಗ್ಗೆ ಕುಡದನ್ಯಾಯತ್ನದಿಂ ಜೀವಮಂ!
ಪೊರೆವುತ್ತಂ ರಣಮೆಂದೊಡಂಜಿ ಭಯದಿಂ ಕಾಲ್ಗೆಟ್ಟು ಚಿಂತಿಪ್ಪ ಭೂ
ವರರಂ ಪುಟ್ಟಿಸಿ ಪದ್ಮಜಂ ಧರಣಿಯೊಳ್ ಹಾಸ್ಯಕ್ಕೆ ಪಕ್ಕಾದನೆಂ
ದೊರೆವಂ ಮೈಸುರ ಚಿಕ್ಕಭೂರಮಣ ತಾನೆಂ ಜಾಗಿಯೇಂ ಧೀರನೋ॥
ಶ್ರೀರಂಗೇಶ ತ್ರಿಣೇಶ ಸ್ಸಿರಿಗಿರಿ ತನುಜಾನಾರಿ ಮುಖ್ಯಾಮರರ್ಮೈ
ಸೂರ ಶ್ರೀ ಚಿಕ್ಕದೇವರಾಜಾವನಿಪತಿಗಖಿಳೋರ್ವಿಸಮ್ರಾಜಸ್ಸು
ಶೌರ್ಯೋದ್ದಾರಾಯುಃ ಪುತ್ರಮಿತ್ರಾವಳಿಯನೊಲವಿನಿಂದಿತ್ತು ರಕ್ಷಿಕ್ಕೆ
ಧಾತ್ರಿನಾರಿಂದು ಸೂರ್ಯತಾರಾನಿಲರುದಧಿ ಮಹಾಮೇರುಮಿರ್ಪಂನವಿಾಗಳ್

ಕಂ॥ ಶ್ರೀಯುತ ಮೈಸೂರ ಚಿಕ್ಕಯ
ರಾಯನ ರಾಯಸದ ಲಕ್ಷ್ಮೀಪತಿ ಹರ್ಷದಿನಾ
ತ್ರೇಯ ಸುಗೋತ್ರನೆನಿಪ ತ
ದ್ರಾಯಗೆ ಬರೆದಿತ್ತನಜಿತನಾಥನ ಕೃತಿಯಂ
ಅಜಿತನಾಥ ಪುರಾಣಂ ಸಮಾಪ್ತಂ ಮಂಗಳಮಹಾಶ್ರೀ.

ವಿಷಯ : ಎರಡನೆಯ ತೀರ್ಥಂಕರನಾದ ಅಜಿತನಾಥನ ಮತ್ತು ಎರಡನೆಯ ಚಕ್ರವರ್ತಿಯಾದ ಸಗರನ ಕಥೆ.

ವಿಶೇಷ : ಪತ್ರದ ಒಂದು ಕಡೆ ಬರೆದಿದೆ. ಶಕಟರೇಫ ಪ್ರಯೋಗವಿದೆ. ಅಲ್ಲಲ್ಲಿ ಪದಗಳು ಲುಪ್ತವಾಗಿವೆ. ಬರವಣಿಗೆಯಲ್ಲಿ ವ್ಯತ್ಯಾಸವಿದೆ. ಪತ್ರ ೧ರಿಂದ ೧೦೦ರವರೆಗೆ ಒಬ್ಬರೂ, ೧೦೦ ರಿಂದ ೧೬೨ ರವರೆಗೆ ಮತ್ತೊಬ್ಬರೂ, ೧೬೨ರಿಂದ ೧೯೦ರವರೆಗೆ ಇನ್ನೊಬ್ಬರೂ ಬರೆದಿರುವಂತೆ ತೋರುತ್ತದೆ. ಗ್ರಂಥಾರಂಭದ ಮೊದಲು ೪ ಪತ್ರಗಳು ಗ್ರಂಥದೊಳಗಿನ ವಿವರವನ್ನು (ಮೊದಲನೇ ಆಶ್ವಾಸದ ೬೩ನೇ ಪದ್ಯದವರೆಗೆ) ಹೇಳಿದೆ. ಅದೇ ೪ನೇ ಪತ್ರದಲ್ಲಿ "Copied by Padmaraja Pandit" ಎಂದಿದೆ.

29

ಕೆ. ಬಿ. [redacted]	ಅಂಜನಾಚರಿತ್ರೆ	ಸಾಂಗತ್ಯ
೭.೯" × ೬.೫"	ಶಿಶುಮಾಯಣ	ಸು. ೧೨೪೦
೧–೯೦ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಶ್ರೀ ಸರ್ವಸಿದ್ಧಿಪ್ರದಾಯಕ ವಿನಾಯಕಾಯ ನಮಃ ಶ್ರೀ ಶಾರದಾಂಬಾಯ ನಮಃ ಶ್ರೀ ಗುರುಭ್ಯೋನಮಃ.

ಸಾಂಗತ್ಯ ॥ ಶ್ರೀಮದಮರವಂದ್ಯನಾದಿಜಿನನ ಪಾದ
ತಾಮರಸದ್ವಯವೆಂನಾ ।
ರಾಮಣೀಯಕ ಹೃತ್ಸರಸಿಯೊಳೊಗೆಯಲೆಂ
ದಾ ಮುದದಿಂದ ವಂದಿಪೆನೊ ॥ ೧ ॥

ಜಾತಿಜರಾಮರಣಗಳೆಂಬ ತ್ರಿಪುರವ
ಭೂತಳವೆಲ್ಲರಿವಂತು
ಪೋತು ಸುಟ್ಟ ಜಿತಜಿನೇಶನ ಪದವನ
ಜಾತಗಳಿಗೆ ನಮಿಸುವೆನೂ ॥ ೨ ॥

× × × × ×

ಅರ್ಹನ ಮತದೊಳೆಸೆವ ಪದ್ಮಚರಿತವ
ವಿರಚಿಸಿದನು ರವಿಷೇಣಾ ।
ಪಶಮಮುನೀಂದ್ರ ಗೀರ್ವಾಣ ಭಾಷೆಯೊಳದ
ನೊರೆವಡಿಂನಾರಳವಹುದೂ ॥ ೯೯ ॥

ಅದರೊಳಂಜನೆಯೆಂಬ ಸುದತಿಯು ಕಥೆಯು ನಾ
ನೊದವಿ ಪೇಳ್ದೆನು ಕಂನಡದಿಂ
ವುದದಿಯನಳಿಲುಃ ತುಡುಕಿತೆಂಬ ನಾಣ್ನುಡಿ
ಗದಿರಾಜನಾದೆ ನಾನಿಂದೂ ॥ ೧೦೦ ॥

ತರಳ ಮಾಯಣ ನೀ ತರಳಮತಿಯೊಳೊಂದು
ಪರಿಯಿಂದೆ ನೋಡಬೇಕೆಂದು ।
ವರ ಬೆಳುಕರೆಪುರದರಸು ಗುಂಮಟದೇವ
ಕರದಿಂತೆಂದನೊಂದಿವಸ ॥

ಅಂಜನದೇವಿಯ ಚರಿತವನಿಳೆಯೊಳು
ರಂಜಿಸುವೋಲು ಪೇಳೆನಲೂ ।
ಕಂಜಾಕ್ಷನ ಸುತಭಂಜನ ಜಿನಪಾದ
ಕಂಜಕೆರಗಿ ಕೈಕೊಂಡೆಂ

ಅಂತ್ಯ : ಧರೆಯೊಳಗುಳ್ಳ ಭವ್ಯರುಗಳಿಗೆಲ್ಲಕ್ಕೆ
ವರಬಾಲಕನಾದ ದೆಸೆಯಿಂ ।
ಪಿರಿದ ಮಾತೇನು ತಾನೊರೆದ ಕೃತಿಗಳೊಳು
ತರಳ ಮಾಯಣನೆಂದಿಡುವನೂ ॥
ಧರೆಯೊಳಧಿಕ ಪೆಸರುವೆತ್ತು ರಾಜಿಪ

ತರಳ ಮಾಯಣ ಪೇಳಿದೊಂದೂ |
ಚರಿತವಿಳಾತಳದೊಳಗೊಪ್ಪುತಿರಲಾ
ತರಣಿ ಶಶಾಂಕರಿಪ್ಪನೆಗಂ ||
ಯಿಾಕೃತಿ ಮೆರೆಯಲನೇಕಕಾಲವು ಸರ್ವ
ಲೋಕವೆಲ್ಲವು ಸುಖವಿರಲೀ
ನಾಕಾಧಿಪನೈಶರ್ಯವಾಗಲಿ ಸರ್ವ
ಭೂಕಾಂತರುಗಳೆಲ್ಲರಿಗೇ ||
ಮಳೆಯಿನಿಸುಳಿಯದೆ ಕೊಳಲಿ ಸಕಲ ವಸ್ತು
ಬೆಳೆಯಲಿಳಾತಳದೊಳಗೆ |
ಸುಳಿವ ಮಹಾಮೃತ್ಯು ಮೊದಲಾದ ಕಂಟಕ
ವಳಿದಖಿಲರು ಸುಖವಿರಲೀ ||
ಪಂಚಾಣುವ್ರತಗಳ ಕೈಕೊಂಡು ತಪದಿಂದ
ಪಂಚೇಂದ್ರಿಯಂಗಳನೆಲ್ಲ |
ವಂಚಿಸಿ ಹನುಮಾಂನ್ಯ ಮುಕ್ತಿಯ ಪಡೆದಲ್ಲಿ
ಪಂಚಾದಶ ಸಂಧಿಯಾಯ್ತು || ೧೦೮ ||

ಅಂತೂ ಸಂಧಿ ೧೫ಕಂ ಪದನು ೩೧೦೩ಕಾಂ ಮಂಗಳ. ಅಂಜನಾಚರಿತ್ರೆ ಸಂಪೂರ್ನಮಂಗಳಂ.

ವಿಷಯ : ಅಂಜನಾದೇವಿಯ ಚರಿತ್ರೆ.

ವಿಶೇಷ : ೩೪-೪೯ ಪತ್ರಗಳು ೬೫ನೆಯ ಪತ್ರದನಂತರ ಇವೆ.

30

ಕೆ. ೫೫೩/೧	**ಅತಿಕಾಯನ ಕಾಳಗ**	ಭಾಮಿನೀಷಟ್ಪದಿ
೧೪.೯″ × ೨.೨″	ಕುಮಾರವಾಲ್ಮೀಕಿ	ಸು ೧೫೮೦
೮–೧೨ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ : ರಾಮಾಯಣದಲ್ಲು ಅತಿಕಾಯನಂ ಕಾಳಗದಲ್ಲು ಆದಿಯಲ್ಲಿ ನೀತಿಯಿಂದೇ ಬಂದು ವೀರತ್ವದಿಂದ ಲಕ್ಷ್ಮಣ ದೇವರ ಕೈಯ್ಯಮುಕ್ತಿಯಂ ಪಡದನೂ ||

ಪಲ್ಲ : ರಾಯರಾಕ್ಷಸ ವಿಜಯರಾಯರ
ರಾಯ ಲಕ್ಷ್ಮಣನಾಹವದೊಳತಿ

ಕಾಯನನು ಗೆಲಿದೊಲಿಸಿದನು ಭುಜವಿಜಯಭಾಮಿನಿಯ ॥
ಪದನೂ ॥ ಕೇಳಿರೈ ರಘುವಂಶ ಲಕ್ಷ್ಮೀ
ಬಾಲರಿರನ್ನಿಂಮ ವೀರಭ
ಟಾಳಿ ಬಲಿದುದು ಮುತ್ತಿಗೆಯನಸುರೇಂದ್ರ ಪುರವರಕೇ ॥
ಕೇಳಿಸಿತು ಕದನದಲಿ ಜೀವವ
ಜಾಳಿಸಿದ ರಾಕ್ಷಸರ ವಾರ್ತಾ
ಭೀಳಭೀಷಣ ವಚನದಚಲಿತ ಖಳಕುಲೋತ್ತಮನಾ ॥ ೧ ॥

ಅಂತ್ಯ : ರಥವ ತಿರುಗಿಸಿಕೊಂಡು ರಿಪುಸಾ
ರಥಿ ಪುರಾಂತರಕೈದಿದನು ಬಲ
ಮಥನ ಹೊಗಳಲು ಹರುಷದುಬ್ಬಿನಲನುಜನೊಡಗೂಡಿ
ಪೃಥುಳ ಬಲ ತೊರವೆಯ ಹಿರಂಣ್ಯಕ
ಮಥನ ತಿರುಗಿದನಿತ್ತಲಧಿಕ
ಪ್ರಥಿತ ವಿಜಯಾಭ್ಯುದಯದೇಳಿಗೆಯಿಂದ ಪಾಳಯಕೇ ॥ ೮೧ ॥
ಅತಿಕಾಯ್ನ ಮುಕ್ತಿ ಸಮಾಪ್ತಂ । ಮಂಗಳ ಮಹಾಶ್ರೀ ॥

ವಿಷಯ : ಲಕ್ಷ್ಮಣನು ಅತಿಕಾಯನೊಡನೆ ಯುದ್ಧಮಾಡಿ ಗೆದ್ದ ಕಥೆ.

ವಿಶೇಷ : ಇದೇ ಕಟ್ಟಸಲ್ಲಿ ತೊರವೆರಾಮಾಯಣದ ವಿಭೀಷಣನೀತಿಯ ಸಂಧಿ ಇದೆ.

31

ಕ. ಬಿ. ೧೩೧	**ಅತಿಕಾಯನ ಕಾಳಗ**	ಯಕ್ಷಗಾನ
೭.೭" × ೬.೨"	ಲಿಂಗರಾಜ (?)	ಸು. ೧೮೫೦
೧–೨೯ ಪತ್ರ	೧೫ ಪಂಕ್ತಿ	೨೪ ಅಕ್ಷರ

ಆದಿ : ಯಕ್ಷಗಾನ ಅತಿಕಾಯನ ಕಾಳಗ ॥
ಶ್ರೀಮದ್ವಾಯುಕುಮಾರ ಸೇವಿತಪದಂ ಸೀತಾಮನೋಸೌಖ್ಯದಂ
ಸೋಮಾದಿತ್ಯ ಸಹಸ್ರತೇಜ ಸದೃಶಂ ಸಾಕೇತವಾಸಂ ಪ್ರಭುಂ ।
ಶಾಮಾಭ್ರಾಂಗಮಮಾತಿ ಪ್ರಿಯಕರಂ ಶಾಂತಂ ಕೃಪಾಸಾಗರಂ
ರಾಮಂ ಸದ್ವರ ಪುಣ್ಯನಾಮಮನಘಂ ಆನಂದ ಸಂದೋಹಮಂ ॥ ೧ ॥
ರಾಗ ನಾಟಿ ತ್ರಿಪುಟಿ ತಾಳ ॥
ಶ್ರೀ ಗಣಪ ಗಿರಿರಾಜ ಆತ್ಮಜ

ಯೋಗಿ ನುತಪದ ಪಂಕಜ
ಭೋಗಿಶಯನ ಪ್ರಿಯ ಗುಹಾಗ್ರಜ
ನಾಗವದನ ಚತುರ್ಭುಜ ಶರಣು ಶರಣು ॥ ೨ ॥

ಅಂತ್ಯ : ಶೂರ್ಪಕರ್ಣನ ಜನಕಗೆ ಭವಗೆ
ದರ್ಪಕ ಮಥನಗೆ ಪರಶಿವಗೆ
ಕರ್ಪುರ ಗೌರಗೆ ಕಲುಷ ವಿದೂರಗೆ
ಸರ್ಪಭೂಷಣನಿಗೆ ಶಂಕರಗೆ ॥ ೩೮೫ ॥

ಕರುಣಾರುಣ ಶತಭಾಸನಿಗೆ
ಶರಣಾಗತ ಜನಪೋಷನಿಗೆ
ವರ ಗೋಷ್ಠಪುರವಾಸಗೆ ಕರುಣಾ
ಶರಧಿ ಲೋಕನಾಥೇಶನಿಗೆ ॥ ೩೮೬ ॥

ಜಯಮಂಗಳಂ ನಿತ್ಯ ಶುಭ ಮಂಗಳಂ ॥ ಶ್ರೀ ॥

ವಿಷಯ : ದಶಕಂಠನಿಂದ ಮೂರ್ಛಿತನಾದ ಲಕ್ಷ್ಮಣನನ್ನು ಕಲಿಹನುಮನು ಸಂಜೀವನವನ್ನು ತಂದು ಜೀವಿಸಿದ ಅಧ್ಯಾತ್ಮ ರಾಮಾಯಣದ ಕಥೆ.

ವಿಶೇಷ : ಗೋಷ್ಠಪುರದ ಲೋಕನಾಥನ ಅಂಕಿತದಲ್ಲಿ ಈ ಕೃತಿಯನ್ನು ಕವಿಯು ರಚಿಸಿರುವಂತೆ ಗ್ರಂಥದಿಂದ ತಿಳಿದು ಬರುತ್ತದೆ.

32

ಕೆ. ಬಿ. ೪೨೨/೧	ಅಧ್ಯಾತ್ಮರಾಮಾಯಣ	ಭಾಮಿನೀಷಟ್ಪದಿ
೧೯" × ೨.೩"	ಶಂಕರನಾರಾಯಣ	ಸು ೧೭೦೦
೧–೫೬ ಪತ್ರ	೧೯ ಪಂಕ್ತಿ	೧೨೪ ಅಕ್ಷರ

ಆದಿ : ಅಧ್ಯಾತ್ಮ ರಾಮಾಯಣ ಬರೆವುದಕ್ಕೆ ನಿರ್ವಿಘ್ನಮಸ್ತು ॥
ಶ್ರೀಮದಬ್ಜಾಸನ ಜನಕನೇ
ವ್ಯೋಮಕೇಶ ಪಿತಾಮಹನೆ ದ್ವಿಜ
ಭೂಮಿ ಸುರಪಶು ವೇದವೆಸವ ಮಹಾಬ್ಧಿ ವೃದ್ಧಿಕದಾ।
ಸೋಮ ಸದೃಶಿಕ್ಷ್ವಾಕು ನೃಪಕುಲ
ತಾಮರಸ ಸೂರ್ಯೋಪಮಾಹವ
ಭೀಮ ಸುಖಕರನಾಮ ರಾಮನೆ ರಕ್ಷಿಸಾನತರಾ ॥ ೧ ॥

ಅಂತ್ಯ : ಬುದ್ಧಿಯುತ ಶಂಕರನರಾಯಣ
ಬದ್ಧಿಸಿದ ಭಾಮಿನಿಯ ಷಟ್ಪದಿ
ಪದ್ಧತಿಗೆ ದೋಡಾರ್‍ಯಸುತ ನರಸುಂಹ್ವ ಬರದನಿದಾ ॥ ೧ ॥

ರಾಮಪೂರ್ವ ಚರಿತ್ರವನು ಶಂಕರ
ನಾಮಪೂರ್ವದ ನಾರಣ್ಯೆಯನು
ತಾ ಮನೋತ್ಸವದಿಂದ ವಿರಚಿಸಿ ಕಾಂಡಷಟ್ಕವನು
ಪ್ರೇಮದಿಂ ಮನವೆಳಸಿ ಪೇಳಿದ
ನೀ ಮಹಾಕಾರ್‍ಯವ ನಿರೀಕ್ಷಿಸಿ
ನೀ ಮಥಿಸಿ ಶೋಧಿಸಿ ಬರವುದೆಂದೆನುತಲೆಂನ್ನೊಡನೆ ॥ ೨ ॥

ಅದು ನಿಮಿತ್ತದಲಿದು ರಘೊತ್ತಮ
ನುದಿತವಹ ಪುಂಣ್ಯದ ಸುಚಾರಿ
ತ್ರದ ಕಥಾಸಾರದ ಮಹಾಕಾವ್ಯದ ಸುಧೆಯಿದೆಂದೂ
ಪದಪದವ ಶೋಧಿಸಿ ಬರದೆ ಹೆರ
ಗದಿ ಪೆಸರ ನರಸುಂಹ್ವನೆಂಬರು
ಬುಧವರರು ತಪ್ಪಿರಲು ತಿದ್ದುವುದೊಲಿದು ಕರುಣದಲಿ ॥ ೩ ॥

ಯುದ್ಧಕಾಂಡ ಸಮಾಪ್ತಃ ॥ ಕಂದ ಪದ್ಯಾ ॥
ತ್ರಯಂಬಕ ಶೇಷಾಯ್ಯರ ಪಾ
ದಾಂಬುಜ ಮಕರಂದ ಮಧುಕರನು ನರಸುಂಹ್ವಂ
ಕಂಬುಧರಾಚ್ಯುತ ಚರಿತವ
ನುಂ ಬರದೆಂ ಪ್ರಥಮಲಿಖಿತಮಿದು ಜಗದೊಳು ॥ ಮಂಗಳ ಮಹಾಶ್ರೀ ॥

ವಿಷಯ : ಅಧ್ಯಾತ್ಮರಾಮಾಯಣ ಯುದ್ಧಕಾಂಡದ ಕಥೆ.

ವಿಶೇಷ : ೫೬ ನೆಯ ಪತ್ರದಲ್ಲಿ ಯುದ್ಧಕಾಂಡ ಮುಗಿದಿದೆ. ಮುಂದೆ ಮತ್ತೆ ೧ ರಿಂದ ಕ್ರಮಾಂಕ ಪ್ರಾರಂಭವಾಗಿ ೧೨ ಪತ್ರಗಳಲ್ಲಿ ಅಧ್ಯಾತ್ಮ ರಾಮಾಯಣ ಉತ್ತರ ಕಾಂಡದ ಕಥೆ ಇದೆ. ಕಥಾಂತ್ಯದಲ್ಲಿ "ಸುರಗುರುವಿನ ಪೆಸರ ಸಂವತ್ಸರದ ಜೇಷ್ಠದ ಶುದ್ಧ ಪಂಚಮಿಯುರುವ ಗುರುವಾಸರದಿ ರಾಮಾಯಣವ ಪೂರ್ನ ಮೆನೆ ಹೆರಗದಿ ಪೆಸರ್ವಡದ ಹರಿಹರಪುರದ ದೊಡ್ಡಾರ್‍ಯರ ತನುಜ ಭೂಸುರ ಬರದ ನರಸುಂಹ್ವ ನಾಮಕನೀ ಮಹಾಕೃತಿಯು" ಎಂದಿದೆ. ಕೊನೆಯ ಒಂದು ಓಲೆಯಲ್ಲಿ ಅಧಾತ್ಮರಾಮಾಯಣದ ಮಾಹಾತ್ಮ್ಯವಿದೆ. ಅಕ್ಷರ ಬಹಳ ಸಣ್ಣ.

33

ಕೆ. ೫೦೨ ಅಧ್ಯಾತ್ಮರಾಮಾಯಣ ಭಾಮಿನೀಷಟ್ಪದಿ
೧೩ ೯" × ೨.೧" ಶಂಕರನಾರಾಯಣ ಸು. ೧೭೦೦
೧–೧೦೦ ಪತ್ರ ೧೩ ಪಂಕ್ತಿ ೯೩ ಅಕ್ಷರ

ಆದಿ : ಅಧ್ಯಾತ್ಮರಾಮಾಯಣವ ಬರವದಕೆ ನಿರ್ವಿಘ್ನಮಸ್ತು ॥
ಶ್ರೀಮದಬ್ಜಾಸನ ಜನಕನೇ
ವ್ಯೋಮಕೇಶಪಿತಾಮಹನೆ ದ್ವಿಜ
ಭೂಮಿ ಸುರಪಶುವೆನಿಪ ಮಹಾಬ್ಧಿಕರಾ
ಸೋಮಸದೃಶೇಕ್ಷ್ವಾಕು ನೃಪಕುಲ
........ರಸ ಸೂರ್ಯೋಪಮಾಹವ
ಭೀಮ ಸುಖಕರನಾಮ ರಾಮನೆ ರಕ್ಷಿಸಾನತರಾ ॥ ೧ ॥

ಅಂತ್ಯ : ಇದು ಯುದ್ಧಕಾಂಡದಲ್ಲಿ ಹದಿನೈದನೇ ಅಧ್ಯಾಯ ॥ ಶ್ರೀ ॥
ಯುದ್ಧಕಾಂಡದಿ ಪಂಚದಶಕಗ
ಳಿದ್ದವಧ್ಯಾಯಗಳು ಸಿದ್ಧಪದಗಳು
ಸಿದ್ಧವೇಳ್ನೂರದರ ಮೇಲೆಪತ್ತ ಮುದದಿಂದಾ
ಬುದ್ಧಿಯುತ ಶಂಕರನಾರಾಯಣ
ಬದ್ಧಿಸಿದ ಭಾಮಿನಿಯ ಷಟ್ಪದಿ
ಪದ್ಧತಿಗೆ ದೊಡಾರ್ಯಸುತ ನರಸಿಂಹ್ವ ಬರದನಿದಾ ॥ ೧ ॥
ರಾಮ ಪೂರ್ವಚರಿತವ ಶಂಕರ
ನಾಮಪೂರ್ವದ ನಾರಣೈಯ್ಯನು
ತಾ ಮನೋತ್ಸವದಿಂದ ವಿರಚಿಸಿ ಕಾಂಡಷಟ್ಕವನು
ಪ್ರೇಮದಿಂ ಮನವೆಳಸಿ ಪೇಳಿದ
ನೀ ಮಹಾಕಾವ್ಯವ ನಿರೀಕ್ಷಿಸಿ
ನೀ ಮಥಿಸಿ ಶೋಧಿಸಿ ಬರವುದೆಂದೆನುತಲೆಂನೊಡನೇ ॥ ೨ ॥
ಅದು ನಿಮಿತ್ತದಲಿ ರಘೂತ್ತಮ
ನುದಿತವಹ ಪುಂಣ್ಯದ ಸುಚಾರಿ
ತ್ರದ ಕಥಾಸಾರದ ಮಹಾಕಾವ್ಯದ ಸುಧೆಯಿದೆಂದೂ
ಪದಪದವ ಬೋಧಿಸಿ ಬರದೆ ಹೆರ
ಗದಿ ಪೆಸರ ನರಸುಂಹ್ವನೆಂಬರು
ಬುಧವರರು ತಪ್ಪಿರಲು ತಿದ್ದುವುದೊಲಿದು ಕರುಣದಲಿ ॥ ೩ ॥

ಕಂದಪದ್ಯಾ ದ್ರು॥ ತ್ರ್ಯಂಬಕ ಶೇಷಾರ್ಯರ ಪ
ದಾಂಬುಜ ಮಕರಂದ ಮಧುಕರನು ನರಸುಂಹ್ವಂ
ಕಂಬುಧರಾಚ್ಯುತ ಚರಿತವ
ನು ಬರೆದೆಂ ಪ್ರಥಮಖಿಲಿತಮಿದು ಮಿಗೆ ಜಗದೊಳ್ ॥

ಮಂಗಳ ಮಹಾಶ್ರೀ ॥ ಯಿದರಲ್ಲಿ ಯಿರೂದು ಬಾಲಕಾಂಡ ೧ಕೆ ಅಧ್ಯಾಯ ೮ಕೆ ಪದಾ ೨೭೬ ಆಯೋದ್ಯಾಖಾಂಡ ಮಂದಕೆ ಅಧ್ಯಾಯ ೯ಕೆ ಪದ ೪೩೬ ಅರಣ್ಯಖಾಂಡ ಮಂದಕ್ಕೆ ಅಧ್ಯಾಯ ೧೦ಕೆ ಪದ ೩೫೩ ಕಿಷ್ಕಿಂಧಾಖಾಂಡ ೧ಕೆ ಅಧ್ಯಾಯ ೯ ಕೆ ಪದ ೩೬೬ ಸುಂದರಕಾಂಡ ೧ ಕೆ ಅಧ್ಯಾಯ ೫ ಕೆ ಪದ ೨೧೭ ಯುದ್ಧಕಾಂಡ ೧ ಕೆ ಅಧ್ಯಾಯ ೧೫ಕೆ ಪದ ೨೭೦ ಅಂತು ಖಾಂಡ ೫ಕೆ ಸಂಧಿ ೫೬ಕಂ ಪದನೂ ಸಾ ೨೦೫೨ ಕಂ ಮಂಗಳಮಹಾಶ್ರೀ ॥

ವಿಷಯ : ಅಧ್ಯಾತ್ಮ ರಾಮಾಯಣದ ಕಥೆ.

ವಿಶೇಷ : ೨೧, ೮೧, ೯೨, ೯೩ ಈ ಕ್ರಮಾಂಕದ ನಾಲ್ಕು ಪತ್ರಗಳಿಲ್ಲ. ೮೨ ನೆಯ ಪತ್ರದಲ್ಲಿ ಅರ್ಧಭಾಗ ಮಾತ್ರವಿದೆ.

34

ಕೆ. ೪೨೨/೨	**ಅಧ್ಯಾತ್ಮರಾಮಾಯಣ**	ಭಾಮಿನೀಷಟ್ಪದಿ
೧೯" × ೨.೩"	ಕೃಷ್ಣರಾಜ	೧೭೪೮
೧–೧೨ ಪತ್ರ	೧೫ ಪಂಕ್ತಿ	೧೨೪ ಅಕ್ಷರ

ಆದಿ : ಶ್ರೀ ಭುವನನಿಧಿ ಮೇಖಲೆಯ ಸಾಂಬ್ರಾ
ಜ್ಯವನು ತಳದಿರೆ ರಾಮ ಘಟಸಂ
ಭವ ಮಹಾಮುನಿಯರುಹಿದನು ರಕ್ಷೋಧಿಪನ ಭವವಾ ॥
ಪದನೂ॥ ಕಾಲಕಂಧರ ನೀಲಕಂಧರ
ಮೌಳಿ ಸುಂದರ ಬಾಲಚಂದಿರ
ಖೇಲದಮೃತಾಂಭಃಪರಿಸ್ಫುಟಗಂಡ ಮಂಡಲನೆ
............ದೆನೆಗೆ ಗುಣ
ಜಾಲ....ರ ಶೀಲತೆಯ ಸುವಿ
ಶಾಲತೆಯ ಕವಿಮೂಲ............
ಶಂಕರನಾರಾಯಣನ ಪೆಸ
ರಿಂ ಕಡುರ್ಘುಸಂ ಬಡೆದ ಭೂಸುರ
ನಿಂ ಕೃತವಿದಧ್ಯಾತ್ಮರಾಮಾಯಣವು ಪ್ರಾಕೃತವೂ ॥

ಅಂತ್ಯ : ಆರುಕಾಂಡವ ಮಾಡಿಯಿದನು
ದ್ಧಾರವನು ಮಾಡುವದೆನುತ ವಿ
ಚಾರದಿಂ ಶಂಕರನರಾಯಣ ಭೂಸುರಂ ಕೊಡಲೂ
ಸಾರತರ ನರಸಾರ‍್ಯಗಾತಂ
ಚಾರುತೆಯ ಪಟ್ಕಾಂಡದಲ್ಲಿ ಕ
ಲಾರುಚಿಯಉ ಮಿಗಲುಂಟುಮಾಡಿ ಲಿಖಿಸಿ ಸಂಪುಟದಿ ॥ ೪೧ ॥

ಉಳಿದ ಕಾಂಡೋತ್ತರವಗ್ರೈಯಂ
ನ್ನಲು ದಯದಿ ಕರದೆಂನ್ನ ಮಾಡಿದೆ
ತಿಳುಹಿದಂದದೊಳವರು ಕೃಷ್ಣ ಧರೇಶನಾಂ ಕಲ್ಕಿಯೊಳ್
ಕಳಿಯೆ ನಯನ ಶರಾಷ್ಟ ವೇದೋ
ಜ್ವಲನರಾಬ್ಧಗಳಾಗಿ ಜನಿಸಿತು
ಲಲಿತ ಭಾದ್ರಪದ ದ್ವಿತೀಯಾ ಭಾನುವಾಸರದಿ ॥ ೪೨ ॥

ಇದು ವಿದ್ವತ್ಕವಿ ಭ್ರಮರ ಪೇಪೀಯಮಾನ ಮಾನಸಾರವಿಂದ ಕೌಶಲ್ಯ ಮಕರಂದ ಕೃಷ್ಣನರೇಂದ್ರ ವಿರಚಿತೋತ್ತರಕಾಂಡದಲ್ಲಿ ಪರಮಪದಾಭಿಗಮನಂ ಸರ್ವಂ ನವಮಾಧ್ಯಾಯಂ ॥

ಯೇಪ್ಯಭಿಜ್ಞಾನಭಿಜ್ಞಾವಾ ಕಥಾಂ ಶೃಣ್ಯಂತ್ಯುಸಾದರಂ ।
ಭಾಷಾತ್ಮಿಕಾಂ ಮುದಾತನ ರಾಮೇಣ ಸುಖಮಾಪ್ನುಯುಃ ॥ ಶ್ರೀ ॥
ವರವೆನುತ್ತರಕಾಂಡವಿದರೊಳ
ಗಿರುವವಧ್ಯಾಯಂಗಳೊಂಭ
ತ್ತರೊಳು ಪದ ಮುನ್ನೂರಯೆಪ್ಪತ್ತೇಳು ಗಣನೆಯಿದಂ
ಧರಣಿಪಾಗ್ರಣಿ ಕೃಷ್ಣನೃಪಕವಿವರ
ವಿರಚಿಸಿದ ಬರದವಂ ಹರಿಹರ
ಪುರದ ನರಸುಂಹನಾಲಿವುದೊಲಿದು ಸಜ್ಜನರು ॥ ೧ ॥

× × ಬರದೆನು ನರಸುಂಹ್ವನೆಂನ್ನ ಪೆಸರೀ ಜಗದೊಳ್

ವಿಷಯ : ಅಧ್ಯಾತ್ಮರಾಮಾಯಣ ಉತ್ತರಕಾಂಡದ ಕಥೆ.

ವಿಶೇಷ : ಗತಕಲಿ ೪೮೫೨ನೇ ವರ್ಷದ ಭಾದ್ರಪದ ದ್ವಿತೀಯಾ ಭಾನುವಾರ ಈ ಗ್ರಂಥ ಜನಿಸಿತು ಎಂದಿರುವುದರಿಂದ ಕವಿಯ ಕಾಲ ಕ್ರಿ. ಶ. ೧೭೪೮ ಎಂದು ಸ್ಥಿರಪಡುತ್ತದೆ. ಈ ಕಟ್ಟಿನಲ್ಲೆ ಮೊದಲು ಶಂಕರನಾರಾಯಣ ರಚಿತ ಅಧ್ಯಾತ್ಮ ರಾಮಾಯಣವೂ (ಯುದ್ಧಕಾಂಡ ಪೂರ್ತಿ) ೧೩ನೆಯ ಪತ್ರದಲ್ಲಿ ಅಧ್ಯಾತ್ಮ ರಾಮಾಯಣದ ಮಹಾತ್ಮ್ಯವೂ ಇದೆ. ಅಕ್ಷರ ಬಹಳ ಸಣ್ಣ. ೨ನೆಯ ಪತ್ರದ ವಿಷಯವಿರುವ ಮತ್ತೊಂದು ಪತ್ರ ಕೊನೆಯಲ್ಲಿದೆ.

35

ಕೆ. ೫೦೩ | ಅಧ್ಯಾತ್ಮರಾಮಾಯಣ | ಭಾಮಿನೀಷಟ್ಪದಿ
೧೩.೭" × ೨" | ಕೃಷ್ಣರಾಜ | ೧೭೪೮
೧೦೧–೧೧೫ ಪತ್ರ | ೧೨ ಪಂಕ್ತಿ | [illegible] ಅಕ್ಷರ

ಆದಿ: ....ವಿಲೆಯ ಸಾಮ್ರಾ
ಜ್ಯವನು ತಳದಿರೆ ರಾಮು ಘಟಸಂ
ಭವನ ಮಹಾಮುನಿಯರುಹಿದನು ರಕ್ಷೋಧಿಪನ ಭವವಾ ॥
ಪದನೂ ॥ ಕಾಲಕಂದರ ನೀಲಕಂಧರ
ಮೌಳಿ ಸುಂದರ................
................ದಮೃತಾಂಭೋಧಿ....ಡಲನೆ
ನೀಲಲೋಹಿತನೊಲಿದೆನಗೆಗಂಣ
ಜಾಲತೆಯ ವರಶೀಲತೆಯ ವಿ
ಶಾಲತೆಯ ಕವಿಮೂಲತೆಯ ಕರುಣಿಸುಗೆ ಬುಧರುಲಿಯೇ ॥ ೧ ॥

ಶಂಕರನಾರಾಯಣನ ಪೆಸ
ರಿಂ ಕಡುರ್ಚುಸಂಬಡೆದ ಭೂಸುರ
ನಿಂ ಕೃತವಿದಧ್ಯಾತ್ಮರಾಮಾಯಣವು ಪ್ರಾಕೃತವು
ಅಂಕಕಾಂಡಾವಧಿಕವಾಗೆ ಕ
ಳಂಕರಹಿತಾಶಯರು ಕರದೆ
ನಂ ಕವಿತ್ವಸ್ಫೂರ್ತಿಯಂ ಪ್ರ್ಯಾರ್ತಿಯನು ಗೈಯ್ಯನಲೂ ॥ ೨ ॥

ಅಂತ್ಯ: ಶಕ್ರನಾ ಲಕ್ಷಣನೊಡನೆ ದಿವ
ಮಾಕ್ರಮಿಸುತಿರೆ ಬಂದರುನ್ಮುಖ
ಶುಕ್ರರಂಬುಜಪೀಠನೊಡನೆ ವಿಲೋಕನೇಚ್ಛೆ ಮಿಗೆ
ವಿಕ್ರಮಜಿದರಿ........ಭಜಿಸುತಲ
ವಕ್ರಭೋಗವನಿದ್ದು ಕಾಮೇಶ್ವರನ ಸೌಮಿತ್ರಿ ॥ ೩೨ ॥
ಇದು ವಿದ್ವತ್ಕವಿ ಭ್ರಮರ ಪೇಪೀಯಮಾನ ಮಾನಸಾರವಿಂದ ಕೌಶಲ್ಯ
ಮರಂದ ಕೃಷ್ಣನರೇಂದ್ರ............ತ್ತರ ಕಾಂಡದಲಿ
ಲಕ್ಷ್ಮಣ ನಿರ್ಯಾಣ ಸೂ................ಚಂದ್ರಾಯ ನಮಃ

ವಿಷಯ: ಅಧ್ಯಾತ್ಮರಾಮಾಯಣ ಉತ್ತರಕಾಂಡದ ಕಥೆ.

ವಿಶೇಷ: ೧೧೩ ಮತ್ತು ೧೧೪ನೆಯ ಪತ್ರಗಳಿಲ್ಲ. ಕೆಲವು ಪತ್ರಗಳ ಅಂಚು ಮುರಿದಿದೆ. ಒಂದೆರಡೆಡೆಗಳಲ್ಲಿ ಶಕಟರೇಫದ ಬಳಕೆ ಇದೆ.

36

ಕೆ. ಎ. ೧೫೪ | ಅಧ್ಯಾತ್ಮರಾಮಾಯಣದ ಟೀಕು | ಶ್ಲೋಕ, ಟೀಕು
೧೨.೫" × ೮" | ಭಾಗವತ ಕೃಷ್ಣ | ೧೮೬೯ (?)
೧–೮೬ ಪತ್ರ | ೨೬ ಪಂಕ್ತಿ | ೩೨ ಅಕ್ಷರ

ಆದಿ : ಶ್ರೀಮದಧ್ಯಾತ್ಮರಾಮಾಯಣೇ ಬಾಲಕಾಂಡ ಪ್ರಾರಂಭಃ (ಟೀಕಾ)
ಶ್ಲೋ॥ ಪೋಂ॥ ಯಃ ಪೃಥ್ವೀಭರ ವಾರಣಾಯ ದಿವಿಜೈಸ್ಸಂಪ್ರಾರ್ಥಿತ ಶ್ಚಿಂನ್ಮಯ
ಸ್ಸಂಜಾತಃ ಪೃಥಿವೀತಲೇ ರವಿಕುಲೇ ಮಾಯಾಮನುಷ್ಯೋವ್ಯಯಃ।
ನಿಶ್ಚಕ್ರಂ ಹತರಾಕ್ಷಸಃ ಪುನರಗೇದ್ಬ್ರಂಹ್ಮತ್ವಮಾದ್ಯಂ ಸ್ಥಿರಾಂ
ಕೀರ್ತಿಂ ಪಾಪಹರಾಂ ವಿಧಾಯ ಜಗತಾಂ ತಂ ಜಾನಕೀಶಂ ಭಜೇ॥ ೧॥

ಟೀ॥ ಯೀ ಅಧ್ಯಾತ್ಮರಾಮಾಯಣವು ವಿಶ್ವಾಮಿತ್ರ ಪ್ರೋಕ್ತವೆಂದು ಸರ್ಗಾಂತದಲ್ಲಿ ಕೆಲವು ಪುಸ್ತಕಗಳಲ್ಲಿ ಯಿರುವದು॥ ಆ ಅರ್ಥದಲ್ಲಿ ವಾಲ್ಮೀಕಿ ಪ್ರೋಕ್ತವಾದ ರಾಮಾಯಣದೊಳ್ ಮನುಷ್ಯಾವತಾರಕ್ಕೆ ಸರಿಯಾಗಿರುವ ರಾಮಪ್ರಲಾಪಾದಿಗಳಂ ಕೇಳಿದ ಜನಗಳು ಮನ ಬಂದಂತ್ತೆ ಮಾತನಾಡುವದಂ ಸೈರಿಸಲಾರದೆ ಸರ್ವಜ್ಞನಾದ ವಿಶ್ವಾಮಿತ್ರ ಮುನೀಶ್ವರನೂ ಪಾರ್ವತಿಗೆ ಪರಮೇಶ್ವರನು ಪೇಳಿದ ತತ್ವಾರ್ಥವಂ ಜ್ಞಾನದೃಷ್ಟಿಯಿಂದ ತಿಳಿದು ಯೀ ರಾಮಾಯಣವಂ ಛಂದೋಬದ್ಧವಾಗಿ ಮಾಡಿದನೆಂತ್ತಲು ಅದಂ ಬ್ರಂಹ್ಮಾಂಡಪುರಾಣದಲ್ಲಿ ಪುರಾಣಪ್ರವಚನ ಕರ್ತುತ್ವದಿಂ ಪುರಾಣ ಕರ್ತೃವೆನಿಸಿದ ವೇದವ್ಯಾಸನು ದಾಹರಿಸಿರುವನೆಂತ್ತಲು ತಿಳಿಯತಕ್ಕದ್ದು. ಅಧ್ಯಾತ್ಮದೃಷ್ಟಿಯಲ್ಲಾತ್ಮಭಿಂನವಾದ ಪದಾರ್ಥವಿಲ್ಲದ್ದರಿಂದಲುಂ ಪರಮಾತ್ಮನಿಗೆ ತನ್ನಲ್ಲಿ ತಾನೆ ವಿಹರಿಸುವುದು ಸ್ವಭಾವವಾದ್ದರಿಂದಲುಂ ಯೀ ಟೀಕಿಗೆ ಆತ್ಮರಾಮಲೀಲೆಯೆಂದು ಪೆಸರಿಡಲ್ಪಟ್ಟಿರುವದೆಂದು ತಿಳಿಯತಕ್ಕದ್ದು॥

ಅಂತ್ಯ : ನಾನಾಜ್ಞಾನ ವಿಶೇಷ ಮಂತ್ರವಿತತಿಂ ತ್ಯಕ್ತ್ವಾ ವಸುದೂರೇ ಭೃಶಂ।
ರಾಮಂ ಶ್ಯಾಮತನುಂ ಸ್ಮರಾರಿಹೃದಯಾಬಾಂತಂ ಭಜಧ್ವಂ ಬುಧಾಃ॥ ೨೨॥
ಇತಿ ಆರಣ್ಯಕಾಂಡೆ ದಶಮಸರ್ಗಃ॥
ಯಂದು ರಾಕ್ಷಸನ ಮಾತಂ ಕೇಳಿ ರಾಮನು ನಸುನಗುತ ಲವನಂ ಪೇಳಿದನು. ಯಲಾ ರಾಕ್ಷಸನೆ ನಾನು ರಾಮನು। ಯೀ ಭಗವಂತನಾದ ಶ್ರೀರಾಮಚಂದ್ರನ ಭಕ್ತಿಯು ಮುಕ್ತಿಯಂ ಕೊಡುವಂತ್ತಾದ್ದು। ಯಲೈ ಜನಗಳಿರಾ ಕಾಮಧೇನುವಾದ ಪಾದಕಮಲದ್ವಯವುಳ್ಳ ಶ್ರೀರಾಮನನ್ನೆ ಅತಿ ಕುತೂಹಲ

ವಿಷಯ : ಅಧ್ಯಾತ್ಮರಾಮಾಯಣದ ಶ್ಲೋಕಗಳಿಗೆ ಕನ್ನಡ ಟೀಕು.

ವಿಶೇಷ : ಈ ಪುಸ್ತಕದಲ್ಲಿ ಆರಂಭದಿಂದ ಅರಣ್ಯಕಾಂಡದಲ್ಲಿ ೧೦ ನೆಯ ಸರ್ಗ ಪೂರ್ತಿ ಗ್ರಂಥವಿದೆ. ಕೊನೆಯಲ್ಲಿ ಬರವಣಿಗೆಯಿಲ್ಲದ ಕೆಲವು ಪತ್ರಗಳಿವೆ. ಕೆ. ಎ. ೧೫೫ ನೆಯ ನಂಬರಿನ ಪುಸ್ತಕದಲ್ಲಿ ಕಿಷ್ಕಿಂಧಾಕಾಂಡದಿಂದ ಮುಂದು ವರಿದಿದೆ.

37

ಕೆ. ಎ. ೧೫೫	**ಅಧ್ಯಾತ್ಮರಾಮಾಯಣದ ಟೀಕು**	ಶ್ಲೋಕ, ಟೀಕು
೧೨.೫" × ೮"	ಭಾಗವತ ಕೃಷ್ಣ	೧೮೬೯ (?)
೧–೨೨೯ ಪತ್ರ	೨೩ ಪಂಕ್ತಿ	೩೦ ಅಕ್ಷರ

ಆದಿ : ಶ್ರೀಮದಧ್ಯಾತ್ಮರಾಮಾಯಣೇ ಕಿಷ್ಕಿಂಧಾಕಾಂಡ ಪ್ರಾರಂಭಃ ।

ಶ್ಲೋ ॥ ತತಸ್ಸಲಕ್ಷ್ಮಣೋರಾಮಶ್ಶನೈಃ ಪಂಪಾಸರಸ್ತಟಂ ।
ಆಗತ್ಯ ಸರಸಾಂ ಶ್ರೇಷ್ಠಂ ದೃಷ್ಟ್ವಾ ವಿಸ್ಮಯಮಾಯಯೌ ॥ ೧ ॥

ಟೀ ॥ ಯಿಾಶ್ವರನು ಪಾರ್ವತಿಯಂ ಕುರಿತು ಪೇಳುವನು ॥ ಬಳಿಕ ಲಕ್ಷ್ಮಣನಿಂ ಸಹಿತನಾದ ರಾಮನು ಮೆಲ್ಲನೆ ಪಂಪೆಯೆಂಬ ಸರಸ್ಸಿನ ದಡವಂ ಕುರಿತು ಬಂದು ಆ ಸರೋವರವಂ ನೋಡಿ ಆಶ್ಚರ್ಯವಂ ಪೊಂದಿದನು ॥ ೧ ॥

ಅಂತ್ಯ : ರಾಮಾಯಣಂ ಜನಮನೋಹರಮಾದಿಕಾವ್ಯಂ
ಬ್ರಹ್ಮಾದಿಭಿಸ್ಸುರವರೈರಪಿ ಸಂಸ್ತುತಂ ಚ ।
ಶ್ರದ್ಧಾನ್ವಿತಃ ಪಠತಿ ಯಃ ಶೃಣುಯಾತ್ತು ನಿತ್ಯಂ
ವಿಷ್ಣೋಃ ಪ್ರಯಾತಿ ಸದನಂ ಸವಿಶುದ್ಧ ದೇಹಃ ॥ ೬೮ ॥

ಯಿತಿ ಶ್ರೀಮದಧ್ಯಾತ್ಮರಾಮಾಯಣೇ ವುಮಾಮಹೇಶ್ವರ ಸಂವಾದೆ ವುತ್ತರ ಕಾಂಡೇ ನವಮಸರ್ಗಃ ॥

ಟೀ ॥ ಆದಿ ಕಾವ್ಯವಾದ ಯಿಾ ರಾಮಾಯಣವು ಜನರಿಗೆ ಮನೋಹರ ವಾದಂಥಾದ್ದು ಬ್ರಹ್ಮಾದಿಗಳಾದ ದೇವಶ್ರೇಷ್ಠರಿಂದಲುಂ ಸ್ತುತಿಸಲ್ಪಟ್ಟದ್ದು ಯಿದ ನ್ನಾವನು ಶ್ರದ್ಧೆಯಿಂ ಕೂಡಿದವನಾಗಿ ಪಠಿಸುವನೋ ಯಾವನು ಕೇಳುವನೋ ಅವನು ಪರಿಶುದ್ಧವಾದ ದೇಹವುಳ್ಳವನಾಗಿ ಶ್ರೀಮಹಾವಿಷ್ಣುವಿನ ಮನೆಯಂ ಪೊಂದುವನು. ॥ ೬೮ ॥

ಯಿಂಬಲ್ಲಿಗೆ ಭಾಗವತಕೃಷ್ಣನಿಂ ರಚಿತವಾದಂಥಾ ಅಧ್ಯಾತ್ಮರಾಮಾಯಣಕ್ಕೆ ಟೀಕಾದ ಆತ್ಮರಾಮಲೀಲೆಯ ಉತ್ತರಕಾಂಡದೊಳೊಂಬತ್ತನೆ ಸರ್ಗಕ್ಕೆ ಮಂಗಳಮಸ್ತು ॥

ವಿಷಯ : ಅಧ್ಯಾತ್ಮರಾಮಾಯಣದ ಶ್ಲೋಕಗಳಿಗೆ ಕನ್ನಡ ಟೀಕು.

ವಿಶೇಷ : ಇದರಲ್ಲಿ ಕಿಷ್ಕಿಂಧಾಕಾಂಡದಿಂದ ಪ್ರಾರಂಭವಾಗಿ ಉತ್ತರಕಾಂಡ ಪೂರ್ತಿ ಇದೆ. ಕೆ.ಎ. ೧೫೪ ನಂಬರಿನ ಪ್ರತಿಯಲ್ಲಿ ಬಾಲಕಾಂಡದಿಂದ ಅರಣ್ಯಕಾಂಡದಲ್ಲಿ ೧೦ ನೆಯ ಸರ್ಗ ಪೂರ್ತಿ ಗ್ರಂಥವಿದೆ.

38

ಕೆ. ೪೨೨/೩	**ಅಧ್ಯಾತ್ಮ ರಾಮಾಯಣದ ಮಾಹಾತ್ಮ್ಯೆ**	ಭಾಮಿನೀಷಟ್ಪದಿ
೧೯" × ೨.೩"	ನರಸಿಂಹ	ಸು. ೧೪೦೦
೧೩ ನೆಯ ಪತ್ರ	೧೪ ಪಂಕ್ತಿ	೧೧೦ ಅಕ್ಷರ

ಆದಿ : ಶುಭಮಸ್ತು ॥ ಅಧ್ಯಾತ್ಮರಾಮಾಯಣದ ಮಾಹಾತ್ಮೆ ॥
ನಾರದಂಗರಹಿದನು ಕೇಳಲು
ವಾರಿಜೋದ್ಭವನಖಿಳ ವೇದದ
ಸಾರವಾದಧ್ಯಾತ್ಮರಾಮಾಯಣದ ಮಹಿಮೆಯನೂ ॥
ಪದನೂ ॥ ಕಮಲಜಾಂಡಪುರಾಣದುತ್ತರ
ದಮಲಖಂಡದಲೇಕಷಷ್ಠಿ
ಕ್ರಮದೆನಿಪ್ಪಧ್ಯಾಯದೊಳು ಶೌನಕನು ಮೊದಲಾದ
ಶಮದಮಾದಿಗಳಿಂದ
....
................ನಾರದರ ಸಂವಾದವನು ವಿಸ್ತರಿಸಿ ॥ ೧ ॥

ಅಂತ್ಯ : ವರದನೀ ಅಧ್ಯಾತ್ಮರಾಮನ
ಚರಿತಮಾಹಾತ್ಮ್ಯವನು ನಾರದ
ಗುರೆ ಕಮಲಸಂಭವನು ಭುವನದೊಳಾವನೀ ಕೃತಿಯಾ ।
ವರವ ಪಠಿಸುವ ಕೇಳುವನವಂ
ಪರಮವಿಷ್ಣು ಪದವಪಡದು
ಸುರವರ ಸುಪೂಜ್ಯನೆನಿಸಿ ಸದಾ ಸುಖರೂಪನಾಗಿರುವಂ ॥ ೨೯ ॥
ಕಮಲಜಾಂಡಪುರಾಣದಲ್ಲಿಹ
ಸುಮನಸರ ಮಾತಿನ ಮಹಾಥ್ಯಾ
ತುಮವೆನಿಪ ರಾಮಾಯಣದ ಮಹಿಮೆಯಿದು ಕನ್ನಡದಾ

ಕ್ರಮದಿ ಭಾಮಿನಿಸಟ್ಪದಿಯೆನಿ
ಪ್ಪಮಲ ಸತ್ಕೃತಿಯಾಯ್ತು ಧರಣೀ
ಯಮರ ನರಸುಂಹ್ವನು ರಚಿಸೆ ಸತ್ಪುರುಷರಹುದೆನಲು ॥

ಇತಿ ಶ್ರೀ ಅಧ್ಯಾತ್ಮರಾಮಾಯಣದ ಫಲಶ್ರುತಿ ಸಂಪೂರ್ನ ಮಂಗಳ ಮಹಾಶ್ರೀ॥
ತುರುವೇಕೆರೆ ಬೇಟೆರಾಯಸ್ವಾಮಿಯವರ ದಿವ್ಯ ಚರಣಾರವಿಂದವೆ ಗತಿ ॥

ವಿಷಯ : ಅಧ್ಯಾತ್ಮರಾಮಾಯಣದ ಫಲಶ್ರುತಿ.

ವಿಶೇಷ : ಈ ಫಲಶ್ರುತಿಯಲ್ಲಿ ೩೦ ಪದ್ಯಗಳಿವೆ. ಓಲೆಯ ತುದಿ ಮುರಿದಿರುವುದರಿಂದ ಒಂದು ಮತ್ತು ಎರಡನೆಯ ಪದ್ಯಗಳ ಕೆಲವು ಅಕ್ಷರಗಳಿಲ್ಲ. ಈ ಕಟ್ಟಿನಲ್ಲಿ ಅಧ್ಯಾತ್ಮ ರಾಮಾಯಣ ಮತ್ತು ಅಧ್ಯಾತ್ಮರಾಮಾಯಣ ಉತ್ತರಕಾಂಡ ಎಂಬ ಈ ಎರಡು ಕೃತಿಗಳಿವೆ. ಅಧ್ಯಾತ್ಮರಾಮಾಯಣ ಉತ್ತರಕಾಂಡದ ಪ್ರತಿಕಾರನಾದ ನರಸಿಂಹನೇ ಈ ಫಲಶ್ರುತಿಯನ್ನು ಭಾಮಿನೀಷಟ್ಪದಿ ಛಂದಸ್ಸಿನಲ್ಲಿ ರಚಿಸಿರುತ್ತಾನೆ. ಸಣ್ಣಕ್ಷರ.

39

ಕೆ. ೨೪೬	**ಅದ್ವೈತ ಬ್ರಹ್ಮವಿದ್ಯೆ**	ಶ್ಲೋಕ, ಟೀಕು
೮.೫" × ೧.೬"	?	?
೬೬–೧೨೯ ಪತ್ರ	೮ ಪಂಕ್ತಿ	೩೦ ಅಕ್ಷರ

ಆದಿ : ಮ್ರುತ್ಯು ಮತ್ಯೆತಿ । ನಾನ್ಯಃ ಪಂಥಾ ವಿಮುಕ್ತಯೇ ಯಂಬ । ಕೈವಲ್ಯೋಪನಿಷದ್ವಾಕ್ಯದಿಂದ ।....ಭವಿಷ್ಯದ್ವರ್ತಮಾನವಾದ ಸರ್ವಪ್ರಪಂಚಲೂ ಬ್ರಂಹ್ಮರೂಪವಾದ ಕಾರಣಾ । ಆ ಬ್ರಂಹ್ಮವನೂ ಶ್ರವಣಾದಿಗ....ಸಾಕ್ಷಾತ್ಕರಿಸಿ ಸಂಸಾರವನು ಕಳಿವನು । ಬೇರೆ ಸಾಧನವಿಲ್ಲಾ । ಯಂಬದಾಗಿ ।

ಅಂತ್ಯ : ಶುಕ್ಲಭಾಸ್ವದ ರೂಪಾಶ್ರಯವಾದ ಸೂರ್ಯಾದಿ ಪ್ರಕಾಶದಿಂದಲೂ ವಿಲಕ್ಷಣವಾದ ಬ್ರಂಹ್ಮಪ್ರಕಾಶವನೂ । ಉಪದೇಶಾಭ್ಯಾಸಗಳಿಂದಾ ತಿಳಿವದೂ । ಯಂದು ಸರ್ವಮವಧಾತಂ ॥

ಶ್ರೀಶಂಕರಾಚಾರ್ಯಕೃತಸ್ಯಾತ್ಮಬೋಧಸ್ಯಾಸ್ಯಪ್ರಬೋಧಿನೀ ।
ಅದ್ವೈತ ಬ್ರಹ್ಮ ವಿದ್ಯೇತಿಸಿಯಂ ವಿವ್ರುತ್ತಿ ರುಚ್ಯತೇ ॥ ೧ ॥

× × × ×

ಯಿತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀ ಗೋವಿಂದ ಭಗವತ್ಪಾದ ಪೂಜ್ಯರ ಶಿಷ್ಯರಾದ ಶಂಕರಾಚಾರ್ಯರಿಂದ ಲೋಕಾನುಗ್ರಹಾರ್ಥವಾಗಿ ನಿರ್ಮಿತವಾದ ಆತ್ಮಬೋಧಪ್ರಕರಣಕ್ಕೆ ವ್ಯಾಖ್ಯಾನವಾದ ಅದ್ವೈತ ಬ್ರಹ್ಮ ವಿದ್ಯೆಯೂ ಸಂಪೂರ್ಣಊ॥ ಯಿತಿ ಶ್ರೀಅದ್ವೈತ ಬ್ರಂಹ್ಮವಿದ್ಯಾ ಸಂಪೂರ್ಣಾ॥ ಶ್ರೀ.

ವಿಷಯ : ಅದ್ವೈತ ಸಿದ್ಧಾಂತ. ಆತ್ಮಬೋಧೆಯ ಟೀಕು.

ವಿಶೇಷ : ೬೬–೭೦, ೭೨, ೭೩ ನೆಯ ಗರಿಗಳು ಶಿಥಿಲವಾಗಿವೆ. ೧೧೫ನೆಯ ಗರಿಯು ಅರ್ಧಮಾತ್ರವಿದೆ. ಸುಂದರ ಬರಹ. ಆದರೆ ಅಸಮಗ್ರ ಪ್ರತಿ.

40

ಕೆ. ಬಿ. ೩೯೫/೧	**ಅನಂತನ ವ್ರತ**	ಯಕ್ಷಗಾನ
೭.೬" × ೫.೯"	?	?
೩೧೮–೩೩೭ ಪತ್ರ	೨೨ ಪಂಕ್ತಿ	೨೩ ಅಕ್ಷರ

ಆದಿ : ನಾಂದಿಶ್ಲೋಕಾ॥

ಶ್ರೀಮದನಂತಮುದಾರಂ। ಕಾಮಪ್ರದ ಕರುಣಾಂಭೋನಿಧಿಕಮನೀಯಂ॥
ಬಹುನಾಮಂ ನತಪಾಲಂ। ಸುಕ್ಷೇಮವನಾನಂದದಿಂದೆಮಗೀವುದು ಸತತಂ ॥ ೧ ॥

ವಾರ್ಧಿಕಾ॥ ಅಂತರಹಿತ ಶ್ರೀಯನಂತ ನಿಶ್ಚಿಂತನಂ
ಚಿಂತಿತಾರ್ಥಪ್ರದ ಕಲಾಪ ಚಿದ್ರೂಪನಂ
ಕುಂತಿತನುಭವ ಸುರಕ್ಷಕ ಜಗದ್ರೆಕ್ಷನಂ ದೇವದೇವಾಧೀಶನಂ
ಕಂತುಶತಕೋಟಿ ಲಾವಂಣ್ಯಾಗ್ರಗಂಣ್ಯನಂ
ತಂತ್ರಮೂರುತಿಯುಮಾಕಾಂತವಿಭವಂತನಂ
ಸಂತತಂ ಗುರು ವೆಂಕಟೇಶ ಸರ್ವೇಶನಂ ಧ್ಯಾನಿಪೆಂ ಮಾನಸದೊಳು ॥ ೨ ॥

ಅಂತ್ಯ : ಅಂತರಹಿತ ಶ್ರೀಯನಂತನಿಗೇ। ಆಧ್ಯಾಂತರಹಿತ ಪುರುಷೋತ್ತಮಗೇ
ಚಿಂತಿತಪ್ರದ ಸರ್ವಾಂತರ್ಯಾಮಿಗೆ। ಕುಂತಿಸುತರ ರಕ್ಷಿಪರಿಗೇ ॥ ೨೬೭ ॥
ಅಂಕುಶಧ್ವಜ ರೇಕಾಂಕಿತ ಚರಣಗೆ। ಪಂಕಜಮಾಲಾಲಂಕೃತಗೇ
ಶಂಕರಸಖವಳಲಂಕೆಯ ಶ್ರೀಗುರು। ವೇಂಕಟರಮಣ ನೃಶಿಂಹ್ಮನಿಗೇ
ಮಂಗಳಂ ಜಯಮಂಗಳಂ ॥ ೨೬೮ ॥

ವಿಷಯ : ಅನಂತ ವ್ರತದ ಮಹಿಮೆ.

ವಿಶೇಷ : ಇದೇ ಕಟ್ಟಿನಲ್ಲಿ ವಿಶೋಬಚರಿತ್ರೆಯೆಂಬ ಗ್ರಂಥವೂ ಇದೆ.

41

ಕೆ. ಎ. ೩೦೨	**ಅನಂತನಾಥ ಚರಿತ್ರೆ**	ಸಾಂಗತ್ಯ
೧೩.೩" × ೮.೩"	ಚಿಕ್ಕಪದ್ಮಣ್ಣಶೆಟ್ಟಿ	೧೫೮೧
೧–೫೭೬ ಪತ್ರ	೨೪ ಪಂಕ್ತಿ	೧೩ ಅಕ್ಷರ

ಆದಿ : ಶ್ರೀಮದ್ಭವ್ಯಬಾಂಧವ ಜಿನುಮಯರೂಪ
ಕೋಮಲಾಮಲಮುಕ್ತಿಪತಿಗೆ
ಸೋಮಜರಿಪು ವಿಷ್ಟರನೆನಿಸಿದ ಚೆಲ್ವ
ಶ್ರೀಮದನಂತಗೆಱಗುವೆ ॥ ೧ ॥

ಶ್ರೀಮದ್ದೇವೇಂದ್ರ ವೃಂದವಂದಿತ ಪದ
ತಾಮರಸದ್ವಯುವೆಸೆವ
ಶ್ರೀಮದನಂತನಾಥನಿಗೆಱಗುವೆನೊಲ್ದು
ಕಾಮಿತಫಲವೀಯಲೆಂದು ॥ ೨ ॥

ಅಂತ್ಯ : ಶ್ರೀಮತ್ಸುರನರನಾಗಪ್ರಣುತಪದ
ತಾಮರಸಗಳಿಂದ ಮೆಱೆವ
ಶ್ರೀಮದನಂತಸ್ವಾಮಿ ಭವ್ಯರ್ಗೆ
ಪ್ರೇಮದಿಂದೀಯೆ ಮೋಕ್ಷವನು ॥ ೧೧೭ ॥

ಸಕಲಕರ್ಮವ ಗೆಲ್ದನಂತನ ಚರಿತವ
ನಕಲಂಕಚರಿತ ಪದ್ಮಣನು
ಭಕುತಿಯಿಂ ಪೇಳಿ ಪೂರಿಸಿದನೆಂಬಲ್ಲಿ
ಮುಕುತಿಗೆಯ್ದಿದ ಕಡೆಸಂಧಿ ॥ ೧೧೮ ॥

ಅಂತು ಸಂಧಿ ೨೬ ಕ್ಕೆ ಪದನು ೩೪೨೦ ಕ್ಕಂ ಮಂಗಳಮಹಾಶ್ರೀ ॥

ವಿಷಯ : ಜೈನರ ೧೪ ನೇ ತೀರ್ಥಂಕರನಾದ ಅನಂತನಾಥನ ಕಥೆ.

ವಿಶೇಷ : ಗ್ರಂಥವು ಅಲ್ಲಲ್ಲಿ ಲುಪ್ತವಾಗಿದೆ, ಶಕಟರೇಫದ ಬಳಕೆ ಇದೆ. "ಹೊಬ್ಳಿ ಶ್ರೀ. ಶ್ರೀ. ಮೂರುಸಾವಿರಮಠದಿಂದ ಕ್ಯೂರೇಟರರವರು ತಂದ ವೋಲೇ

ಪುಸ್ತಕದ ಕಾಪಿ" ಎಂದು ಈ ಪ್ರತಿಯ ಮೊದಲಿನಲ್ಲೇ ಉಕ್ತವಾಗಿದೆ. ಗ್ರಂಥದ ಅಂತ್ಯವಾದಮೇಲೆ ಎಂಟು ಮಲ್ಲಿಕಮಾಲೆಯ ವೃತ್ತಗಳಿವೆ. ಅದರಲ್ಲಿ ಮೊದಲ ಮತ್ತು ಕಡೆಯ ವೃತ್ತಗಳನ್ನು ಈ ಕೆಳಗೆ ಕೊಟ್ಟಿದೆ.

ಸ್ತೋತ್ರ॥ ಮಲ್ಲಿಕಮಾಲೆ

ಶ್ರೀಮದುಜ್ವಲ ಬೋದದಾಮಲಭಾನುವಿಂ ಲೋಕವೆಲ್ಲಮಂ
ರಾಮಣೀಯಕಮಾಗುವಂದದಿ ಪ್ರೇಮದಿಂ ನೀ ಬೆಳಗಿದೈ
ಕಾಮವೈರಿ ಕರ್ಮಾರಿ ಕಾಲನ ಕಾಮುಮಂ ನೆಜ಼ಿ ಗೆಲ್ದೆ ನೀಂ
ಕೋಮಲಾಂಗನೆ ರಕ್ಷಿಸೆನ್ನನಂತನಾಥ ಜೀನೇಶ್ವರ ॥ ೧ ॥

× × × ×

ನರರ ಬಾಳ್ಕೆ ಸುರೇಂದ್ರವೈಭವ ವುರಗರಾಜನ ಭೋಗವು
ನಿರುತಮಲ್ಲವನೊಂದನೊಲ್ಲೆನು ಪರಮಕರುಣದಿ ಯೆನಗೆ ನೀಂ
ಪರಮಮೋಕ್ಷದ ಸುಖವನೊಂದನೆಯಿತ್ತು ರಕ್ಷಿಸು ಬೇಗದಿ
ಪರಮಪರಂಜ್ಯೋತಿರೂಪನನಂತನಾಥ ಜಿನೇಶ್ವರ ॥ ೮ ॥

ಸ್ತುತಿಯೆಂದಷ್ಟಕಂ ಮಂಗಳಮಹಾ ಅನಂತನಾಥ ಚರಿತ್ರೆ ಮುಗಿದುದು ॥ ಮಂಗಳಮಹಾಶ್ರೀ.

42

ಕೆ. ಬಿ. ೬೪	ಅನಂತನಾಥ ಪುರಾಣ	ಚಂಪು
೭." × ೬"	ಜನ್ನ	೧೨೦೯
೧–೨೬೩ ಪತ್ರ	೧೫ ಪಂಕ್ತಿ	೨೨ ಅಕ್ಷರ

ಆದಿ : ಶ್ರೀಃ ॥ ಅನಂತನಾಥಪುರಾಣ ಪ್ರಾರಂಭಃ ॥

ವೃ ॥ ಶ್ರೀಮದನಂತ ಬೋಧದಿನನಂತವಿಲೋಕನದಿಂದನಂತ ಸೌ
ಖ್ಯಾಮೃತದಿಂದನಂತಬಲದಿಂ ತನಗಾದುದನಂತನಾಮಮುದ್ದಾ
ಮದನಂತಕರ್ಮಜಯದಿಂ ದೊರೆವೆತ್ತುದು ಮತ್ತನಂತ ಜಿ
ನ್ನಾಮನೆನಿಪ್ಪನೀಗೆಮಗನಂತಜಿನೇಂದ್ರನನಂತಸೌಖ್ಯಮಂ ॥ ೧ ॥

ವೃ ॥ ಸಿದ್ಧನಿಷ್ಪಂನ ಸೌಖ್ಯೋದಯದ ಮಹಿಮೆಯಿಂ ಸಂದ ನಿತ್ಯತ್ವದಿಂ
ಸಿದ್ಧಲೋಕಾಗ್ರದೊಳ್ನಿಶ್ಚಳ ನಿವಸನರಾಗಿರ್ದ ವಿಖ್ಯಾತಿಯಿಂದಂ
ಸಿದ್ಧತಾನಮಾದ ಮೂರ್ಕಚ್ಛರಮತನು ಸಮನಿರ್ಗುಣಸ್ಸದ್ಗುಣರ್ಸಂ
ಶುದ್ಧಸಿದ್ಧನಿತಾಂತನಿಲಿಸುಗೆ ನಿಜನಿಶ್ರೇಯಸಶ್ರೀಯೊಳೆಂಮಂ ॥ ೨ ॥

ಅಂತ್ಯ : ವೃ ॥ ಶಕಸಂವತ್ಸರಮಂದು ಸಾಸಿರದ ನೂರ್ರೈವತ್ತೆರಳ್ಸಲ್ವಿನಂ
ವಿಕೃತಾಂಬರೆ ಚಿತ್ರಶುದ್ಧದಶಮಿಾದೇವೇಜ್ಯನೊಳ್ಪುಷ್ಯತಾ
ರಕದೊಳ್ಮಾಡಿಸಿದಂ ಪ್ರತಿಷ್ಠೆಯನನಂತ ಶ್ರೀ ಪುರಾಣಕ್ಕೆ ಕಂ
ಮೆಕುಲಾಂಭೋರುಹಭಾನು ಜಂನಮರಸಂ ಸಾಹಿತ್ಯರತ್ನಾಕರಂ ॥ ೮೪ ॥

ವೃ ॥ ನರಸಿಂಹಂ ಮಗದಾಧಿರಾಯ ಲಯಕಾಲಂ ಭಾಳವಿಸ್ತಾರಕಂ
ಸ್ಥಿರರಾಜ್ಯೋರ್ವ್ವಿವಲಕ್ಷ್ಮಿಯಿಂದೆ ಸುಖಮಿರ್ಕ್ಕಾಚಂದ್ರತಾರಂ ಜಿನೇ
ಶ್ವರಧರ್ಮ್ಮಂ ತ್ರಿಜಗದ್ವಿನಯ ಖಳಕರ್ಮ್ಮಧ್ವಾಂತಮುಂ ತೂಳ್ದಿಭಾ
ಸ್ಕರಬಿಂಬಂ ಶರದಿಂದುಬಿಂಬಮೆನೆ ಸಲ್ಗಾಕಲ್ಪಕಲ್ಪಂಬರಂ ॥ ೮೫ ॥

ಗದ್ಯ ॥ ಇದು ಪರಮ ಜಿನಸಮಯ ವನವಸಂತಾನಾರಾಮ ರಾಮಚಂದ್ರ ಮುನೀಂದ್ರ ಪ್ರಸಾದಾಸಾಧಿತ ರತ್ನತ್ರಯಾಭರಣ ಕಿರಣಪ್ರಸಂನ್ನಾಂತಃಕರಣ ಕವಿಚಕ್ರವರ್ತಿ ಬಿರುದ ಕವಿಭಾಳಲೋಚನ ಜನಾರ್ದನದೇವ ವಿರಚಿತ ಮಪ್ಪನಂತನಾಥಪುರಾಣದೊಳು ಪರಿನಿರ್ವಾಣ ಕಲ್ಯಾಣ ವರ್ನನಂ ಚತುರ್ದ್ದಶಾಶ್ವಾಸಂ ಸಂಪೂರ್ಣಂ ॥ ಅನಂತನಾಥ ಪುರಾಣಕ್ಕೆ ಮಂಗಳಮಹಾಶ್ರೀ.

ವಿಷಯ : ಅನಂತನಾಥ ತೀರ್ಥಂಕರನ ಚರಿತ್ರೆ.

ವಿಶೇಷ : ಈ ಪ್ರತಿಯಲ್ಲಿ ಎರಡು ವಿಧವಾದ ಅಕ್ಷರಗಳಿವೆ. ಶಕಟರೇಫದ ಬಳಕೆ ಕೆಲವು ಕಡೆಗಳಲ್ಲಿ ಮಾತ್ರ ಇದೆ. ೩೬ ನೆಯ ಪತ್ರದಿಂದ ೧೨೮ ನೆಯ ಪತ್ರದವರೆಗಿನ ಪತ್ರಗಳಲ್ಲಿ ಪದ್ಯಗಳನ್ನು ಪಾದ ವಿಂಗಡನೆ ಮಾಡಿ ಬರೆದಿದೆ. ೧೨೯, ೧೩೧ ನೆಯ ಪತ್ರಗಳಲ್ಲಿ ಬರವಣಿಗೆ ಇಲ್ಲ. ೨೫೯, ೨೬೦ ನೆಯ ಪತ್ರಗಳ ೨೫೦ ನೆಯ ಪತ್ರದ ನಂತರ ಇವೆ.

43

ಕೆ. ಎ. ೨೯೦	**ಅನಂತಶತಕ**	ಕಂದ, ಟೀಕು
೧೨.೬." × ೮"	ಶಾಮಾಚಾರ್ಯ	೧೮೬೮
೧–೨೭ ಪತ್ರ	೧೯ ಪಂಕ್ತಿ	೨೬ ಅಕ್ಷರ

ಆದಿ : ತೆನುಗು ಕಂದ ಪದ್ಯಗಳು–ಕನ್ನಡ ಟೀಕು
ಕಂ ॥ ಶ್ರೀಮಿಂಚಿನ ನೀಯಡುಗುಂ
ದಾಮರಲಕು ದಂಡ ಮಿಡುಚು ಧರಸೀ ದಾಸ
ಸ್ತೋಮಂಬುನ ಕಾದರಮುನ
ಜೈಮೋಚ್ಚುಚುಜೇತು ಶತಕಮನಂತಾ ॥ ೧ ॥

ಟೀಕು ॥ ಎಲೈ ಅಪಾರ ಮಹಿಮೆಯುಳ್ಳ ದೇವರೆ, ನಿನ್ನ ಪಾದಕಮಲಗಳಿಗೆ ನಮಸ್ಕರಿಸಿ, ನಿನ್ನ ಭಕ್ತರಿಗೆ ಕೈಗಳನ್ನು ಜೋಡಿಸಿ, ನೂರು ಕಂದ ಪದ್ಯಗಳನ್ನು ಮಾಡುತ್ತೇನೆ.

ಅಂತ್ಯ : ಕಂದ ॥ ಕಾವೇರಾಂಬಕು ವೇಂಕಟ
ಭೂವಿಬುಧನಕಾತ್ಮಜುಂಡ ಭುವಿಕವಿಜನಸಂ
ಭಾವಿತುಡ ಶಾಮಯಾರ್ಯುಡ
ಗಾವಿಂಚಿತಿ ಕೃತಿ ನಿತಾಂತ ಕರುಣನನಂತಾ ॥ ೧೦೧ ॥

ಟೀಕು ॥ ಕಾವೇರಮ್ಮನವರಿಗೂ ವೆಂಕಟಾಚಾರ್ಯರಿಗೂ, ಮಗನೂ ಕವಿಗಳ ಎಣಿಕಗೆ ಬಂದವನೂ, ಶಾಮಾಚಾರ್ಯನೂ, ಆದ ನಾನು ದೇವರೇ ! ನಿನ್ನದಯೆ ಯಿಂದ ಈ ಗ್ರಂಥವನ್ನು ಮಾಡಿದೆನು. ॥ ೧೦೧ ॥

ಕಂದ ॥ ಮಂಗಳಮು ನೀಕು ನಿತ್ಯಮು
ಮಂಗಳಮುನೀದು ಭಕ್ತಮಂಡಳಿಕಿ ಭಳೀ
ಮಂಗಳಮು ನೀ ವಿಭೂತಿಕಿ
ಮಂಗಳಮೀ ಶತಕಮುನಕು ಮಹಿನಿನನಂತಾ ॥ ೧೦೨ ॥

ಟೀಕು ॥ ದೇವರೇ ನಿನಗೆ ಶುಭವಾಗಲಿ, ನಿನ್ನ ಭಕ್ತಜನರಿಗೆ ಶುಭವಾಗಲಿ. ನಿನ್ನ ಮಹದೈಶ್ವರ್ಯಕ್ಕೆ ಶುಭವಾಗಲಿ, ಈ ಶತಕಕ್ಕೂ ಶುಭವಾಗಲಿ.

ಅನಂತಶತಕ ಸಂಪೂರ್ಣ

ವಿಷಯ : ಈ ಗ್ರಂಥದಲ್ಲಿ ಶರೀರ, ಉಪದೇಶ, ವಿದ್ಯೆ, ಭೂಗೋಳ, ಚರಿತ್ರೆ ಇನ್ನೂ ವಿವಿಧ ವಿಚಾರಗಳು ಉಕ್ತವಾಗಿವೆ.

ವಿಶೇಷ : ಪ್ರತಿಯು ಸಾಧಾರಣ ಸ್ಥಿತಿಯಲ್ಲಿದೆ. ಪತ್ರ ೧ ರಿಂದ ೨೫ ರ ವರೆಗೆ ಒಬ್ಬನ ಬರವಣಿಗೆಯೂ ೨೫ ರಿಂದ ೨೭ರ ವರೆಗೆ ಮತ್ತೊಬ್ಬನ ಬರವಣಿಗೆಯೂ ಆಗಿದೆ. ಕಂದ ಪದ್ಯವು ತೆಲುಗಿನಲ್ಲಿದ್ದು ಕನ್ನಡದಲ್ಲಿ ಅದರ ಟೀಕು ಇದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ೯೪ ನೇ ಕಂದದಲ್ಲಿ ಹೇಳಿರುವ ಕಾಲವೇ ಕವಿಯ ಕಾಲವೆಂದು ತಿಳಿದುಬರುತ್ತದೆ "ಅನಂತ"ನೆಂಬುದು ಕವಿಯ ಅಂಕಿತ ವಾಗಿ ಪ್ರತಿಯೊಂದು ಕಂದದ ಅಂತ್ಯದಲ್ಲಿ ಬರುತ್ತದೆ.

44

ಕೆ. ೧೭೬/೪ **ಅನಾಮಯಸ್ತೋತ್ರದ ಟೀಕು** ಶ್ಲೋಕ, ಟೀಕು

೧೦.೧" × ೨" ? ?

೪೩–೫೩ ಪತ್ರ ೧೨ ಪಂಕ್ತಿ ೫೦ ಅಕ್ಷರ

ಆದಿ : ಅನಾಮಯಸ್ತೋತ್ರದ ಟೀಕು ಬರವುದಕ್ಕೆ ಶುಭಮಸ್ತು
ಕಾತ್ಯಾಯನಿ ಮುಖಾಂಭೋಜ ಸಾರ ಭಾಸ್ವಾದ ಷಟ್ಪದಂ |
ಕಾರ್ತಸ್ವರಾಗನಿಲಯಂ ನಮಾಮಿ ಶಿವಮವ್ಯಯಂ
ವಾಙ್ಮನ ಸಾಗೋಚರನಾದ ಪರಮಾತ್ಮನನು | ಹೆಂಗೆ ಸ್ತೋತ್ರವ ಮಾಡೆನೆಂಬ ಶಂಕೆಯನು ಪರಿಹರಿಸುತ್ತಲು | ಸ್ತೋತ್ರಾರಂಭವನು ಮಾಡುತ್ತಿರ್ದ್ದಪಂ ||
ವೃ || ತೃಷ್ಣಾತಂತ್ರೀ ಮನಸಿ ತಮಸಾ ದುರ್ದಿನೇ ಬಂಧವರ್ತಿ ।
ಮಾದೃಗ್ಜಂತುಃ ಕಥಮಧಿಕರೋತ್ಯೈಶ್ವರಂ ಜ್ಯೋತಿರಗ್ರ್ಯಂ ||
ವಾಚಸ್ತ್ವೇತಾ ಭಗವತಿ ಹರೆ ಸನ್ನಿಕೃಷ್ಟಾತ್ಮರೂಪಾ |
ಸ್ತುತ್ಯಾತ್ಮಾನಂ ಸ್ವಯಮಿವ ಮುಖಾದಸ್ಯ ಮೇ ನಿಷ್ಪತಂತಿ ||
ಟೀಕು । ಭೋಯೀಶ । ಯಲೆ ಶಿವನೆ ।

ಅಂತ್ಯ : ಸಃ | ಆತನು | ಸುಭಗಂ । ಸೌಭಾಗ್ಯವನುಳ್ಳಂಥಾ । ನಿತ್ಯಂ । ಶಾಶ್ವತವಹಂತ್ಥಾ | ಪುಣ್ಯಂ | ಪುಣ್ಯವನು । ಅಪ್ನೋತಿ । ಯಯ್ದುವನು ತೇನ ಸ್ತೋತ್ರಪಾಠೆನ | ಆ ಸ್ತೋತ್ರಪಾಠದಿಂದ । ವ್ಯಾಧಿಂ । ವ್ಯಾಧಿಯನು । ಹರ । ಪರಿಹರಿಸುವುದು । ಸತ್ಯಂ ಹಿ। ನಿಜವಲಾ । ೩೩ || ಅನಾಮಯ ಸ್ತೋತ್ರದ ಟೀಕೂ ಸಂಪೂರ್ನ್ನ.

ವಿಷಯ : ಅನಾಮಯ ಸ್ತೋತ್ರಕ್ಕೆ ಕನ್ನಡ ಭಾಷೆಯಲ್ಲಿ ವಿವರ.

ವಿಶೇಷ : ಈ ಕಟ್ಟನಲ್ಲಿ ಹಲಾಯುಧ ಪಂಚಸ್ತವ, ಮಲಯರಾಜಸ್ತೋತ್ರ ಮೊದಲಾದ ಇತರ ಗ್ರಂಥಗಳಿವೆ.

45

ಕೆ. ೨೦/೪ **ಅನುಪ್ರೇಕ್ಷೆ** ಪದ

೯.೪" × ೧.೪" ಕಲ್ಯಾಣಕೀರ್ತಿ ೧೪೩೯

೪೨–೪೯ ಪತ್ರ ೬ ಪಂಕ್ತಿ ೩೮ ಅಕ್ಷರ

ಆದಿ : ಸಿದ್ಧ ರಾಸಿಯ ವಂದಿಪೆಂ
ಸಿದ್ಧಲಬ್ಧಿಯಬಯಸಿಯಸಿವಾಂ

ಉದ್ಧತಾಖಿಲ ಕರ್ಮ್ಮದಿಂ
ಶುದ್ಧರಾದರ ಮುತ್ತರಾ ॥ ೧ ॥
ಪಂಚಕಲ್ಯಾಣ ಕೀರ್ತಿಯಿಂ
ಸಂಚಯುಂಗಳ ಭವ್ಯರಾ
ಹಿಂಚದೆ ತಣಿಪಿದವರಮಾ
ಮುಂಚೆ ವಂದಿಪೆ ಜಿನಾರಾನು ॥ ೨ ॥

ಅಂತ್ಯ : ಕೇಳು ಕಲ್ಯಾಣಕೀರುತಿ
ಲೀಲೆಯುಂದನುಪ್ರೇಕ್ಷೆಯುಂ
ಬಾಲಕರ್ಗ್ಗೋದುವಂದದಿಂ
ದೊಳೆಗೊಂಡಿಂತು ಮಾಡಿದಂ ॥ ೭೩ ॥

ದಿವ್ಯಾದ್ರಿತಾರಂಬರಂ
ಭವ್ಯರಿಂ ಮುನಿಜನಗಳಿಂ
ಸೇವ್ಯವಾದೆಂನ ಕಾವ್ಯವು
ಶ್ರವ್ಯವಾಗಿಲ್ಲಿ ಜಯಪಲಿ ॥ ೭೪ ॥
ಅನುಪ್ರೇಕ್ಷೆ ಮಂಗಳಂ ಮಹಾ ಶ್ರೀ.

ವಿಷಯ : ಜೈನತತ್ವ.

ವಿಶೇಷ : ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಯೋಗಾಮೃತ, ಲೋಕಾಕಾರ ಸ್ವರೂಪ, ದೇವರಾಜವಲ್ಲಭಶತಕ, ಶಾಸ್ತ್ರಸಾರಸಮುಚ್ಚಯ, ಜಿನೇಶ್ವರಾಷ್ಟಕ ಎಂಬೀ ಗ್ರಂಥಗಳಿವೆ. ಈ ಕಟ್ಟಿನಲ್ಲಿ ೩೫–೪೨ ಪತ್ರಗಳಿಲ್ಲ.

46

ಕೆ. ಎ. ೨೮೪/೧೧	**ಅನುಪ್ರೇಕ್ಷೆ**	ಕಂದ
೧೨.೯" × ೮.೨"	?	?
೧–೨ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಅನುಪ್ರೇಕ್ಷೆ
....
....
...................ತ್ವಮನಿವಡದಿಂ
ನಡವುತಿರಲುಯುಮುದುಮುಕ್ಕಂ ॥ ೧ ॥

ಯಮಿ ಎನಿಸಿ ನಡವ ಪುರುಷಂ
ಕ್ರಮದಿಂದಂ ದ್ವಾದಶಾನುಪ್ರೇಕ್ಷೆಯ ತೆಱನಂ।
ಸಮಸಂದು ತಿಳಿಯವೇಳ್ಕುಂ
ಸಮತೆಯೊಳಂ ನಡವಮತಿಯಂಗೆಯನಿಕ್ಕುಂ ॥ ೨ ॥

ಅಂತ್ಯ : ಭವ್ಯಜನಂಗಳಿಗಿಂತಿವು
ಸೇವ್ಯಂ ಪನ್ನೆರಡು ತೆಱದ ಅನುಪ್ರೇಕ್ಷೆಗಳ್।
ದಿವ್ಯಮಿವು ನಿನಗೆ ಸತತ
ಮವ್ಯಾಬಾಧಮೆ ಮುಕ್ತಿ ನಿನಗೆ ಸುಖಸಂಪದಮಂ ॥ ೧೫ ॥

ವಿಷಯ : ಜೈನತತ್ತ್ವ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಶಕಟರೇಫ ಪ್ರಯೋಗ ಇದೆ. ಇದರಲ್ಲಿ ಪಂಚಗುರುಸ್ತೋತ್ರಂ ಮೊದಲಾದ ಇತರ ೧೧ ಗ್ರಂಥಗಳಿವೆ.

47

ಕೆ. ಬಿ. ೨೪೦/೨	**ಅನುಭವಪಂಚರತ್ನ**	ಹಾಡು
೭.೮"×೬.೨"	ಮುಮ್ಮಡಿ ಕೃಷ್ಣರಾಜವಡೆಯರು	೧೮೦೦
೭–೮ ಪತ್ರ	೧೬ ಪಂಕ್ತಿ	೨೧ ಅಕ್ಷರ

ಆದಿ : ಶ್ರೀ ಕೃಷ್ಣರಾಜವಡೆಯರವರಿಂದ ವಿರಚಿತವಾದ ಅನುಭವಪಂಚರತ್ನ ಪ್ರಾರಂಭವು ॥

ಬ್ಯಾಡದ ವಸ್ತುವ ನೂಕಲರಿಯದೆ ಕಳವಳಪಡುವುದುಚಿತವೆ ಕಮಲನಯನೆ।
ಮೈಯಂಟಿದ ಯಂಟೆಯು ಪುಸಿನೀರಲಿ ಪೋಗುವದುಂಟೆ ।
ಬೆಳದ ಹೆಂಮರವು ಹಸಿಯ ಬಿದುರೇಟಿಗೆ ಮರಗುವದುಂಟೆ।
ಬಲಿದ ಮುಳ್ಳು ಬೆಂಣೆಯನೊತ್ತಲು ಬೀಳುವದುಂಟೆ
ಕೊಬ್ಬಿದ ಬೆಟ್ಟವು ಹುಸಿಯೇಟಿಗೆ ಜಗ್ಗುವದುಂಟೆ।
ಘನ ಮಾಣಿಕ್ಯವು ಹಿಟ್ಟುಸಾಣೆಗೆ ವುದುರುವದುಂಟೆ।
ಶಿವನಾಣೆ ಪುಸಿಯಲ್ಲ ಮತಿವಂತ ಕೇಳು।
ಹದವರಿತು ಮದ್ದುಮಾಡೆ ಕನಶಿನಂತೆ ಜಾರಿಪೋಗುವದು ಬಾಲೆ
ಭಾವದಿಂ ತಿಳಿದು ಲೀಲೆಯಿಂ ಬೆರದಿರಬಹುದು ಶ್ರೀ ಚಾಮುಂಡಿದಯದಿ ॥ ೧ ॥

ಅಂತ್ಯ : ವಹ್ನಿಚಕ್ರವರ್ತಿಪಾತಾಳವ್ಯೋಮಶಿಖೆ ಮೆರೆಯುವ ನಯನ
ಭಾಗದ ತಿಥಿವರುಷವು ಕೂಡಿದದ್ರಿಮಾಸದಿ ಬೆಳದ ರುದ್ರದಿನದಿ
ಹಬ್ಬಿದ ಗುಣವಾರದಿ ಪೇಳಿದೆನು ಪುಸಿಯಾಗಲರಿಯದು ನೋಡಿ
ಭಾವಿಸಲು ಕೂಡದಿರುವದು ಕೂಡುವದು ರಮಣಿ ವಿಮರಿಶಿ ನೋಡಲು
ಝುಡತಿಯಾಗಿ ತಿಳಿಯುಬಹುದು ಸಂನುತಾಂಗಿ
ಹೆಚ್ಚಾಗಿ ವದರಿ ಫಲವೇನು ಮನದಂತೆ ನಡಸಬಹುದು ಶ್ರೀ ಚಾಮುಂಡಿ
ದಯದಿ ॥ ೫ ॥

ವಿಷಯ : ತತ್ತ್ವಬೋಧಕ ಹಾಡು.

ವಿಶೇಷ : ಇದರೊಡನೆ ಆಳಿದ ಮಹಾಸ್ವಾಮಿಯವರ ಸ್ವಾರಿವರ್ಣನೆ, ವೈರಾಗ್ಯ ಪ್ರತಿಪಾದಕ ಝೂವಡಿ ವೈರಾಗ್ಯ ಕೀರ್ತನೆ ಎಂಬ ಕೃತಿಗಳಿವೆ.

48

ಕೆ.ಎ. ೨೨೦	ಅನುಭವಮುಕುರ	ತ್ರಿಪದಿ
೧೨.೭" × ೮"	ಪರಂಜ್ಯೋತಿ ಯತಿ	ಸು. ೧೪೫೦
೧–೫೮ ಪತ್ರ	೨೦ ಪಂಕ್ತಿ	೧೯ ಅಕ್ಷರ

ಆದಿ : ಸೂತ್ರ—ಗುರುದೈವವೆನಿಸಿರ್ದ ಪರಮವಿದ್ಯಾಶಮನ
ಚರಂಗಳೆನಗೆ ಶರಣಕ್ಕು.

ತ್ರಿಪದಿ—ಶ್ರೀಮದಭಿನತ ಜನ ಪ್ರೇಮಾಸ್ಪದಂಗೆ ನಿ
ಸ್ಸೀಮಬೋಧಾಂಬುನಿದಿಗೆ ವಿದ್ಯಾಶ್ರಮಂ
ಗಾಮೋದವೆತ್ತು ನತನಪ್ಪೆ ॥ ೧ ॥

ಹೃದ್ಯಂಗೆ ಹೃದಯಕ್ಕಭೇದ್ಯಂಗೆ ವೇದಾಂತ
ವೇದ್ಯಂಗೆ ಜಕಲ ಜಗದಂತರಾತ್ಮಂಗೆ
ವಿದ್ಯಾಶ್ರಮಂಗೆ ನತನಪ್ಪೆ ॥ ೨ ॥

ಅಂತ್ಯ : ಇದು ಪರಂಜ್ಯೋತಿಯತಿ ಪದಪಿಂದ ಸವೆದಿಟ್ಟ
ಸದಮಲಾತ್ಮನುಭವ ಮುಕುರವಧಿಕಾರ
ವಿದರೊಳಾತ್ಮಂ ನಿಜವೆ ತೋರ್ಕುಱ ॥ ೬ ॥

ಪೇಳಿದವು ನಾಲ್ವತ್ತು ಮೇಲಾಱುಪದವಾಕ್ಯ
ವಾಳೋಚಿತಾರ್ತ್ಥವತಿ ಸುಗಮವಾಗಿಯವಱೊ
ಳಾ ಲಲಿತಾಖ್ಯ ಪದವೇಳು ॥ ೭ ॥

ಈ ೭ ಜೀವನ್ಮುಕ್ತ ನಿರೂಪಣೆ ॥ತ್ರಿ॥ ೪೬ ॥ ಸೂ ॥ ೭ ॥

ಕಂ॥ ತ್ರಿವಿದಿಗಳೆರಡೆಂಭತ್ತುಂ
ಅವಕುಳ್ಳ ಸೂತ್ರವೆರಡು ಹತ್ತಿಱುನೊಲಿನು।
ಭವಮುಕುರವೆಂಬವೀಱಾಂ
ಡವ ಪೇಳ್ದೆ ಆತ್ಮವಿದರುವಿದರು ಮೆಚ್ಚು ತೆಱದಿಂ ॥ ೧ ॥

ಅಂತು ಸಂಧಿ ೪ಕ್ಕಂ ತ್ರಿವದಿ ೪೬ ಸೂ ॥ ೨೦ ॥

ಕಂ॥ ತ್ರಿವಿದಕಾಂಡಕ್ಕೆ ಸೇರಿದ
ತ್ರಿವದಿಗಳೈದುಳಿದ ಸಾವಿರಂಗಳು ಸೂತ್ರಂ।
ವಿವರಿಸಲೀರ್ರೈವತ್ತೊಂ
ದವರಿವವೆರಡೆಂಟು ಸಂಧಿಯಿಂ ವಿರಚಿಸಿದೆಂ ॥ ೨ ॥

ಕಾಂಡ ಮೂಱಕ್ಕಂ ತ್ರಿವದಿ ೯೫ಱಕ್ಕಂ ॥ ಸೂತ್ರ ॥ ೧೦೨ ॥ ಸಂ ॥ ೧೬

ಕಂ॥ ಶ್ರೀವಿದ್ಯಾಶ್ರಮಪರತರ
ದೇವ ಪರಂಜ್ಯೋತಿಯೋಗಿ ವಿರಚಿತ ಗ್ರಂಥಂ।
ಭಾವಿಪೊಡನುಭವಮುಕುರವಿ
ಡಿವುದು ಸಾಧಕರಿಗಾತ್ಮಸುಖಸಂಪದಮಂ ॥

ಇತಿ ಶ್ರೀ ಕೈವಲ್ಯಾನ್ವಯ ಪ್ರವರ್ತಕ ಪರಮಹಂಸ ಪರಿವ್ರಾಜಿಕಾಚಾರ್ಯ ಸಕಲ ಯೋಗೀಂದ್ರವೃಂದವಂದ್ಯ ಪಾದಾರವಿಂದ ವಂದ್ಯಂ ಶ್ರೀ ವಿದ್ಯಾಶ್ರಮ ಶ್ರೀ ಪಾದಕಮಳನೀರಾಜಹಂಸ ಶ್ರೀ ಪರಂಜ್ಯೋತಿಯತಿವಿರಚಿತವಾದ ಅನುಭವಮುಕುರಂ ಸಮಾಪ್ತಂ ॥ ಶ್ರೀ ॥

ವಿಷಯ : ಅದ್ವೈತ ವೇದಾಂತ ವಿಚಾರ.

ವಿಶೇಷ : ಪ್ರತಿಯು ಸುದೃಢವಾಗಿದೆ. ಕೆಲವು ಕಡೆಗಳಲ್ಲಿ ಮಾತ್ರ ಬರೆದಿದ್ದುದನ್ನು ಅಳಿಸಿ ಮತ್ತೆ ಅದೇ ಸ್ಥಳಗಳಲ್ಲಿ ಬರೆದಿದೆ. ಶಕಟರೇಫದ ಬಳಕೆಯಿದೆ.

49

ಕೆ. ಬಿ. ೩೨೭/೨	**ಅನುಭವ ರಸಾಯನ**	ಗದ್ಯ
೭.೫" × ೫.೭"	ಕೃಷ್ಣಪ್ರಭು	?
೪೯_೫೮ ಪತ್ರ	೧೮ ಪಂಕ್ತಿ	೨೧ ಅಕ್ಷರ

ಆದಿ : ಅನುಭವ ರಶಾಯುನ ಬರೆಯುುದಕ್ಕೆ ಶುಭಮಸ್ತು
ಶ್ರೀಮದ್ವಿಚಾರ ಪರಾವಾರ। ಪಾರಿಣನಾದ ಗುರುವಂ ಸೇರಿ। ನಯುವಿನಯು ಸಂಪಂನನಾದ। ಶಿಷ್ಯನು। ಸಾಷ್ಟಾಂಗ ನಮುಸ್ಕಾರಂಗೈದು। ಕೃತಾಂಜಲೀ ಬದ್ಧನಾಗಿ। ನಿಂದಿರುವನಂ ಕಂಡು ಪ್ರಸನ್ನವಾದ ಮುಖದೊಳ್ಪೊಳೆವ ಕರುಣಾರಸಭರಿತ ಕಟಾಕ್ಷದಿಂದೀಕ್ಷಿಸಿ

ಅಂತ್ಯ : ನುಡಿವವಂಗೆ ನಾಲಿಗೆಯಿಲ್ಲ। ಕೇಳುವವಂಗೆ ಕಿವಿಯಿಲ್ಲ। ವೆಂದಂತಾಯಿತು। ಆಯಿತೆ। ಹಾಗಾಡರೆ ಕೇಳು। ಪರವಸ್ತುವು ಸದ್ರೂಪವಾಗಿರ್ಪದು ಸತ್ತೆಂದರೇನು। ಯಿರುವುದು। ಯಿರುವುದಳಿವುದಿಲ್ಲವೆ। ಯಿಲ್ಲ

ವಿಷಯ : ವೀರಶೈವ ತತ್ತ್ವ.

ವಿಶೇಷ : ಅಸಮಗ್ರಕೃತಿ. ಇದೇ ಪುಸ್ತಕದಲ್ಲಿ ಭಕ್ತ್ಯಾಧಿಕ್ಯ ರತ್ನಾವಳಿ, ಗೌರಿ ಸಿದ್ಧೇಶ್ವರನ ತ್ರಿವಿಧಿಗಳೆಂಬ ಕೃತಿಗಳಿವೆ. ತೆಳುವು ಕಾಗದ.

50

ಕೆ.ಬಿ ೩೭೭	**ಅನುಭವ ರಸಾಯನ**	ಗದ್ಯ
೭.೭"×೫.೫"	ಕೃಷ್ಣಪ್ರಭು	?
೧೮೧_೨೨೭ ಪತ್ರ	೨೨ ಪಂಕ್ತಿ	೨೪ ಅಕ್ಷರ

ಆದಿ : ಅನುಭವ ರಸಾಯುನವೆಂಬ ವಚನವಂನ್ನೂ ಬರೆಯುುವದಕ್ಕೆ ನಿರ್ವಿಘ್ನಮಸ್ತು.
ಶ್ರೀಮದ್ವಿಚಾರ ಪಾರಾವಾರ ಪಾರೀಣನಾದ ಗುರುವಂ ಶೇರಿ ನಯುವಿನಯು ಸಂಪನ್ನನಾದ ಶಿಷ್ಯನು ಸಾಷ್ಟಾಂಗ ನಮುಸ್ಕಾರಂಗೈದು ಕೃತಾಂಜಲಿಬದ್ಧನಾಗಿ ನಿಂದಿರುವನಂ ಕಂಡು ಪ್ರಸನ್ನವಾದ ಮುಖದೊಳ್ಪೊಳೆವ ಕರುಣಾರಸಭರಿತ ಕಟಾಕ್ಷದಿಂದೀಕ್ಷಿಸಿ ಕುಳ್ಳಿರೈಯುಂದಪ್ಪಣೆಯುಂ ಕೊಟ್ಟಮೇಲೆ ವಳ್ಳಿತಾಗಿ ಕುಳ್ಳಿರ್ದವನಾಗಿ ಭಯದಿಂದುತ್ತರವಿಾಯುದೆ ವಿನಮಿತಾಕ್ಷಿ ವೀಕ್ಷಣದಿಂದನು ನಯುಮಾಂತಿಹನಂ ನೋಡಿ

ಅಂತ್ಯ : ಯಿಂತೆಂದು ಗುರುವರ್‍ಯನ ಗೌರಿಪತಿಯೆಂದು ಚಿಂತಿಸಿ ನಮಿಸಿದ ಶಿಷ್ಯ ||
ಯೆಂತಾದರಿರವಿ ಜೀವನ್ಮುಕ್ತರಿಲ್ಲಿ ತುಷಂ ತೊಲಗಿದ ತಂಡುಲಗಳು ||೧೨೧||
ಯಿಂತು ಜೀವನ್ಮುಕ್ತಿ ಲಕ್ಷಣಂ ಸಂಪೂರ್ಣಂ ||ಕಂ|| ಶ್ರೀಮದನೇಕ ಸುರಸರ
ಶಿರೋದೇಶ ಕಿರೀಟಮಣಿ ಪ್ರಭಾನೀರಾಜಿತ ಪಾದಾರವಿಂದ ಪರಮೇಶ್ವರಾ
ಸಕ್ತ ಚಿತ್ತನಾದ ಕೃಷ್ಣಪ್ರಭುವು ಮಾಡಿದ ಅನುಭವರಸಾಯನಯೆಂಬ ವಚನ
ಗಳು ಜೀವನ್ಮುಕ್ತಿಸಹಾ ೫ ಕಾಂ ಮಂಗಳ ಮಹಾಶ್ರೀ.

ವಿಷಯ : ಅಧ್ಯಾತ್ಮವಿಚಾರವು ಗುರುಶಿಷ್ಯ ಸಂವಾದರೂಪದಲ್ಲಿದೆ.

ವಿಶೇಷ : ಪ್ರತಿಯು ಚೆನ್ನಾಗಿದೆ. ಅಕ್ಷರವು ಮೋಡಿ ಬರವಣಿಗೆಯಲ್ಲಿದ್ದರೂ ಸುಂದರ ವಾಗಿದೆ. ೧೮೧ ನೇ ಪತ್ರದಲ್ಲಿ ಗುರುಶಿಷ್ಯ ಸಂವಾದ ಸ್ವರೂಪವನ್ನು ತಿಳಿಸುವ ವಿಚಾರ ತೆಲುಗಿನಲ್ಲಿದೆ. ಕನ್ನಡ ಲಿಪಿ.

51

ಕೆ. ೩೨೦/೧	**ಅನುಭವ ಶಿಖಾಮಣಿ**	ಭಾಮಿನೀಷಟ್ಪದಿ
೧೪" × ೨"	ನಾರಸಿಂಹ	೧೭೬೮
೨ × ೭೧ ಪತ್ರ	೧೧ ಪಂಕ್ತಿ	೬೯ ಅಕ್ಷರ

ಆದಿ : ....ನುಡಿಶಿದಾ | ಯಿಧರ ಭೇದವ ತಾನೇನ ಬಲ್ಲಿಧರೊಳಗೆ
ನಾನರಿಯೇ || ೧೫ ||

ಸಕಲ ಶಾಸ್ತ್ರಪುರಾಣದೊಳಗಿಹ
ಸಕಲ ಸಾರವು ಇದ್ದ ಕಾರಣ
ಸಕಲ ಅನುಭವಕೆಲ್ಲಯಿದು ತಲೆಮಣಿಯು ಯೆನಿಸಿಹುದೂ |
ಸಕಲ ಕವಿಗಳ ಬಲ್ಲ ಹಿರಿಯರು
ಸಕಲ ಬಗೆಯಲಿ ನೋಡಿ ಧರೆಯೊಳು
ಸಕಲವನು ಶರದೂಗಿಸುವದೀ ಕೃತಿಗೆ ಸರಿಯಿಲ್ಲಾ || ೧೬ ||

× × × ×

ನಾಂದ್ಯಪದಗಳು ಸಮಾಪ್ತಮಹ ಶ್ರೀ ಶ್ರೀ ಶ್ರೀ ಜಯತೂ | ಶ್ರೀ ವಿರೂಪಾಕ್ಷ
ಲಿಂಗಾಯ ನಮಃ || ಪದನೂ ||

ನಾಂದ್ಯ || ಹರಿಸುತೆಗೆ ಅರೆಮೈಯ್ಯನಿತ್ತನೇ
ಹರಿಯ ಪುತ್ರಗೆ ಭಾಣವಿತ್ತನೇ
ಹರಿಯ ರಿಪುವಾಹನನ ಜನಕನೇ ಹರಿಯ ಭೂಷಣನೇ |

ಹರಿಯ ಚರ್ಮವ ನಡುವಿಗುಟ್ಟನೇ
ಹರಿಯ ವೈರಿಯ ಚರ್ಮಪೊದ್ದನೇ
ಹರಿಶಯನ ಸಖ ಹಂಪೆಯ ವಿರೂಪಾಕ್ಷಾ ಸಲಹೆಂನಾ ॥ ೧ ॥

× × × ×

ವುಂಟೆ ಲೋಕದಲೆನಲು ಮುನಿಪನು
ವುಂಟು ಶ್ರೀಗಂಭೀರರಾಯನೇ
ಯೆಂಟೆರಡು ದಿಕ್ಕರಿಶೆ ಆತಗೆ ಯಣೆಗಳಿಲ್ಲೆನಲೂ ।
ಶುಂಟಶುಂಭಗೆ ತಿಳುಪೆನಲು ವೈ
ಕುಂಠ ಸ.............................
......................ಪಡಿಹರರು ಸಮೆಹನರಿದೂ ॥ ೧೮ ॥

ಅಂತ್ಯ: ಹರಗಣಂಗಳ ಮನೆಯ ಆಳಿನ
ಚರಣಕಿಂಕ್ಕರ ನಾಳಿನಾಳಿನಾ
ಚರಕಿಲಾಳದವರ ಮನೇ ಬಾಗಿಲಾ ಮುಂದೇ ।
ಯಿರುಳು ಹಗಲು ಕಾದುಕೊಂಡು
ಯಿರುಸುನುಕನ ಚರಣಧೂಳಿಗೇ
ಸರಿಯು ಆಗದ ನರರ ಬಾಯಲಿ ಯೇನ ನುಡಿಶಿದನೋ ॥ ೫೬ ॥

ಅರಿಯೆ ತಾನೆ ಬಲ್ಲ ಹಂಪೆಯೊ
ಅರಸು ಶ್ರೀ ವಿರುಪಾಕ್ಷಲಿಂಗನೂ
ಪರಮಪಾವನ ತಂನ್ನ ಮಹಿಮೆಯಾ ತಾನೆ ಪೊಸರಿಶಿದಾ ।
ಸತ್ಯಲೋದಿವೋದಿ ಹೇಳಿದ
ತ್ಯರನರಿತು ನಡೆವರಿಗೆ ಶಿವನೂ
ಬರಲಿ ಮುಕ್ತಿಯ ಕೊಡುವೆನೆಂದೊಂದು ಮಾರ್ಗವನೂ ॥ ೫೭ ॥

ತೆಗೆದಿದಕ್ಕೆ ಅನುಭವಶಿಖಾಮಣಿ
ಮಿಗಿಲು ಹೆಸರನು ಯಿಟ್ಟದಕ್ಕೆ ಗತಿ
ಜಗದೊಳಗೆ ಯಿಪ್ಪತ್ತುನಾಲ್ಕು ಪದನು ಸಾಸಿರದಾ ।
ಮೊಗೆಯೆ ಕೋಣೊತ್ತಿ ಸತೂವಿಧ
ಬಗೆದು ಲಾಲಿಸು ವೇದಶಾಸ್ತ್ರವೂ
ರಗಳೆ ಪವುರಾಣಗಳ ಕೇಳಿದ ಫಲವು ಶಿಧಿಪುದೂ ॥ ೫೮ ॥

ಯುವನಾಮ ಸಂವತ್ಸರದ ಭಾದ್ರಪದ ಬಹುಳ ೧೦ ಬೃಹಸ್ಪತಿವಾರಾದಿ ತರಣಿಯೊರ ಗುರುವಾರದಲ್ಲೂ ಸಮಾಪ್ತಿ । ಗಳಿಗೆ ೨೪ ನೇ ಘಳಿಗೆತಾರೆಮಗ ಬಂದಿರಲು । ಹಂಪೆಯ ರಾಯ ಕರುಣದಿ । ಕಾವ್ಯ ಮುಗಿಶಿದೆನೂ ॥ ೫೯ ॥

ಅಂತ್ಯ ಸಂಧಿ ೨೪ ಕ್ಕಂ ಪದನೂ ೧೦೨೯ ಕಂ| ಶೋಕ ೨೩ ಕಂ| ಅಂತೂ ೧೦೫೨ ಕಂ ಸಮಾಪ್ತಂ.

ವಿಷಯ : ಶರಣರ ಕಥೆ ಇತ್ಯಾದಿ (ಗೌತಮಮುನಿ ಜಂಭೀರರಾಯನಿಗೆ ಬೋಧಿಸುವುದು).

ವಿಶೇಷ : ೧ ಮತ್ತು ೩ ನೆಯ ಸಂಖ್ಯೆಯ ಪತ್ರಗಳಿಲ್ಲ. ಒಟ್ಟು ೭೧ ಪತ್ರಗಳು. ೨೨ ಮತ್ತು ೨೩. ಈ ಪತ್ರಗಳ ಮಧ್ಯೆ ಪದ್ಯ ೮ ರಿಂದ ೧೭ ಪೂರ್ತಿಭಾಗದ ಒಂದು ಪತ್ರ ಲುಪ್ತವಾಗಿದ್ದರೂ ಕಟ್ಟಿನಲ್ಲಿ ಪತ್ರಸಂಖ್ಯೆಯ ಕ್ರಮವು ಮಾತ್ರ ತಪ್ಪದೇ ಮುಂದುವರಿದಿದೆ. ಅಂತೂ ಮೂರು ಪತ್ರಗಳು ಲುಪ್ತವಾಗಿ ಒಟ್ಟು ೬೮ ಪತ್ರಗಳಿವೆ. ಮೊದಲ ಸಂಧಿ, ಎರಡನೇ ಸಂಧಿಯಲ್ಲಿ ಸ್ವಲ್ಪಭಾಗ ಮತ್ತು ಏಳನೆಯ ಸಂಧಿಯಲ್ಲಿ ಸ್ವಲ್ಪ ಲುಪ್ತವಾಗಿದೆಯಾಗಿ ಅಸಮಗ್ರ. ಕೊನೆಯಲ್ಲಿ "ಯುವನಾಮಸಂವತ್ಸರದ ಬಾದ್ರಪದ ಬಹುಳ ೧೧ ಶುಕ್ರವಾರದ ಸೂರ್‍ಯೋವುದಯವಾದ ೫ ಘಳಿಗ್ಯೆ ಅನುಭವಶಿಖಾಮಣಿ ರತ್ನ ಸಂಪೂರ್ನ" ಎಂದಿದೆ. ಮೊದಲ ಸಂಧಿ ಸಮಾಪ್ತಿಭಾಗ ಮತ್ತು ಎರಡನೇ ಸಂಧಿ ಆದಿಭಾಗ ಅರ್ಧ ಹರಿದಿರುವ ಪತ್ರವೊಂದು ಈ ಕಟ್ಟಿನ ಕೊನೆಯಲ್ಲಿದೆ. ಈ ಕಟ್ಟಿನಲ್ಲಿ 'ವೈಶ್ಯಪುರಾಣಂ' (ಆಂಧ್ರಭಾಷಾ) ಎಂಬ ಮತ್ತೊಂದು ಗ್ರಂಥವಿದೆ.

52

ಕೆ.೧೯೦/೫	**ಅನುಭವಸಾರ**	ತ್ರಿವಿಧಿ
೧೩.೪" × ೧.೭"	ನಿಜಗುಣಶಿವಯೋಗಿ	ಸು ೧೫೦೦
೨೧೧–೨೩೦ ಪತ್ರ	೯ ಪಂಕ್ತಿ	೬೨ ಅಕ್ಷರ

ಆದಿ : ಅನುಭವಸಾರ | ತ್ರಿವಿಧಿ ಬರೆಯುವದಕ್ಕೆ ಶುಭಮಸ್ತು.

ಶ್ರೀಸೂತ್ರ || ಪರತರಾನಂದಮಯ ಗುರುಶಂಭುಪದವೆಂನ
ಶಿರದೊಳಿರುತಿರ್ಕೆ ನಿಜಕರುಣದಿಂದಾ ||

ತ್ರಿವಿಧಿ|| ಶ್ರೀಗುರುವೆ ನಿಜಸುಖದ ಸಾಗರವೆ ತೆರೆಮಸಗುವಾಗಳುಂ ಬೆಳಗುತಿಹ
ನಿಂನ ಕಡೆಗಣ್ಣಳೀಗೆ ಸಂತಸವನಖಿಳರ್ಗ್ಗೆ || ೧ ||

ಅಂತ್ಯ : ಕಂದ || ತ್ರಿಪದಿಗಳೈನೂರ್‍ಮ್ಮೇಲೈ |
ದವಧಿಯು ಮೂವ್ವತ್ತು ಸೂತ್ರವದು ನಾಲ್ವತ್ತಾ-

ರವರಿರ್ದ ಸಂಧಿಯೆಂಟನು
ಭವಸಾರದೊಳೆಸೆವಖಿಳ ವಿಬುಧರ್ವೆರ್ಚ್ಚಲ್ ॥

ಅಂತು ಸಂಧಿ ೮ ಕ್ಕಂ ಸೂತ್ರ ೪೬ ಕ್ಕಂ ತ್ರಿಪದಿ ೫೩೫ ಕ್ಕಂ ಮಂಗಳ ಮಹಾಶ್ರೀ ಶಂಭುಲ್ಲಿಂಗ ಮಲ್ಲಿಕಾರ್ಜುನ ಮಹಾಲಿಂಗವೈದ್ಯೇಶ್ವ ವೃಷಭೇಶ್ವ ರಾರ್ಪ್ಪಿತಮಸ್ತು ॥ ಶ್ರೀ ಅರುಣಾಚಲೇಶಸೇ ನಮಃ ಶ್ರೀ ॥ ಗದ್ಯ ॥ ಸ್ವಸ್ತಿ ಸಮಸ್ತಸುರವಿಸರ ಮಕುಟಮಣಿಗಣಕಿರಣಪ್ರಚೂರ ಪ್ರವಾಹ ತರಂಗಿಣೀ ತಟವಿರಾಜಿತಪದರಾಜೀವಯುಗಳ ಶ್ರೀ ಶಂಭೂಸತ್ಕೃಪಾಕಟಾಕ್ಷಸಾಂದ್ರ ಚಂದ್ರಿಕಾ ಸಕ್ರಾಂತ ನಿರಸ್ತನಿಖಿಲಸಂಸಾರ ಶ್ರಮವಿಸ್ಫೂರಿತನಿಜಾನಂದ ಸ್ವಾದನಾಸಕ್ತ ಚೇತೋಪೇತ ನಿಜಗುಣಾಹ್ವಯೇನ ಶಿವಯೋಗಿನಾಂ ವಿರಚಿತ ಮಪ್ಪ ಅನುಭವಸಾರ ನಾಮಪ್ರಕರಣ ಪರಿಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ವೇದಾಂತ.

ವಿಶೇಷ : ಇದರೊಂದಿಗೆ ಪರಮಾನುಭವ ಬೋಧೆಯೇ ಮೊದಲಾದ ಷಟ್ಶಾಸ್ತ್ರ ಸಂಬಂಧಿಯಾದ ಇತರ ಗ್ರಂಥಗಳೂ ೬೩ ಪುರಾತನರ ತ್ರಿವಿಧಿಯೂ ಇವೆ.

53

ಕೆ. ೩೧೨/೪	**ಅನುಭವಸಾರ**	ತ್ರಿಪದಿ
೧೮.೨" × ೨"	ನಿಜಗುಣಶಿವಯೋಗಿ	ಸು ೧೫೦೦
೫೨–೬೮ ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಅನುಭವಸಾರಾ ತ್ರಿವಿಧಿ ಬರೆಯುವುದಕ್ಕೆ ಶುಭಮಸ್ತು ॥ ಶ್ರೀ ಸೂತ್ರ ॥ ಪರತರಾನಂದಮಯ ಗುರುಶಂಭುಪದವೆಂನ ಶಿರದೊಳಿರುತಿಕ್ಕೆ ನಿಜ ಕರುಣದಿಂದಾ ॥

ತ್ರಿವಿಧಿ ॥ ಶ್ರೀಗುರುವೆ ನಿಜಸುಖದ ಸಾಗರವೆ ತೆರೆಮುಸಗು
ವಾಗಳುಂ ಬೆಳಗುತಿಹ ನಿಂನ ಕಡೆಕಣ್ಣ
ಳೀಗೆ ಸಂತಸವನಖಿಳರ್ಗೆ ॥ ೧ ॥

ಜಗದಾದಿಬೀಜಂಗೆ ನಿಗಮಾಂತ್ಯವೈದ್ಯಂಗೆ
ನಗರಾಜಸುತೆಯ ರಮಣಂಗೆ ಶಂಭುವಿಂ
ಗಗಣಿತೋತ್ಸವದಿ ನತನಪ್ಪೆಂ ॥ ೨ ॥

ಅಂತ್ಯ : ಬೇರೆ ಬೇರೋದಿ ಬಾಯಾರದಿದನೊಂಮೆ
ನಲವಿಂ ಕೇಳ್ದವರು ಪರಶಿವಪದವನು
ಸೂರೆಗೊಂಡಿಹರು ಸುಖದಲ್ಲಿ ॥ ೬ ॥

ವೀತರಾಗರ್ಗೆ ವಿಖ್ಯಾತರ್ಗೆ ತಿಳಿದ ಸಂ
ಪ್ರೀತಿಯುಳ್ಳರ್ಗೆ ಪೇಳ್ವುದನ್ಯರ್ಗೆ ಮನ
ಮೋತುಸರಲಾಗದಿದನೊಂಮೆ ॥ ೭ ॥

ಯಿದನೆ ಬರದೋದಿ ಕೇಳಿದರರ್ತ್ಥಂಗಳಂ
ಮುದದಿಂದೆ ಪೇಳಿದವರುಮಾವರಶಂಭು
ಪದವೆ ತಾವಾಗಿ ಸುಖಮಿರ್ಕು ॥ ೮ ॥

ಯಿಂತು ನಿಜಗುಣಯೋಗಿ ಸಂತಸದೊಳಿರೆದಿದ
ನಂತ ಮಹಿಮಾಂಬುನಿಧಿ ಶಂಭು ತಾನೊಪ್ಪಿ
ಸಂತಸದಿಂ ಪಾಡಿ ಸುಖಮಿರ್ಕೆ ॥ ೯ ॥

ವುತ್ತಮಪದಂಗಳೈವತ್ತು ಸೂತ್ರಂಗಳೈ
ದುತ್ತಮರು ಮೆಚ್ಚುವಂತೆಂಟನೆಯ ಸಂಧಿ
ವುತ್ತಮೋತ್ತಮವೆನಿಪೂದಿಂತ್ತೂ ॥ ೧೦ ॥

ಪರಿಶಿಷ್ಟನಿರೂಪಣೆ ॥*॥ ಇಂತಿ ಸಂಧಿ ೧ ಕ್ಕಂ ಸೂತ್ರಾ ೫ ತ್ರಿವಿಧಿ ೫೦ ॥

ಕಂದಾ ॥ ತ್ರಿವಧಿಗಳೈನೂರ್ಮೇಲ್ಲೈ ।
ದವಧಿಯು ಮೂವತ್ತು ಸೂತ್ರವದು ನಾಲ್ವತ್ತಾ ॥
ರವರಿರ್ದ ಸಂಧಿಯೆಂಟನು
ಭವಸಾರದೊಳಿಸೆವವಖಿಳವಿಬುಧರ್ಮೆಚ್ಚಲ್ ॥

ಅಂತೂ ಸಂಧಿ ೮ ಕ್ಕಂ ಸೂತ್ರಾ ೪೬ ಕ್ಕಂ ತ್ರಿವಧಿ ೫೩೫ ಕ್ಕಂ ಮಂಗಳ ಮಹಾಶ್ರೀ ॥ ಶಂಭುಲಿಂಗ ಮಲ್ಲಿಕಾರ್ಜುನ ಮಹಾಲಿಂಗ ವೈದ್ಯೇಶ್ವರ ವೃಷಭೇಶ್ವರಾರ್ಪಿತಮಸ್ತು ॥ ಗದ್ಯಾ ॥ ಸ್ವಸ್ತಿಸಮಸ್ತಸುರವಿಸರ ಮಕುಟಮಣಿಗಣ ಕಿರಣಪ್ರಚೂರ ಪ್ರವಾಹತರಂಗಿಣೀ ತಟವಿರಾಜಿತ ಪದರಾಜೀವಯುಗಳ ಶ್ರೀ ಶಂಭೂ ಸತ್ಯಪಾಕಟಾಕ್ಷ ಸಾಂದ್ರಚಂದ್ರಿಕಾಸಂಕ್ರಾಂತನಿರಸ್ತ ನಿಖಿಲಸಂಸಾರ ಶ್ರಮ ವಿಸ್ಫೂರಿತ ನಿಜಾನಂದ ಸ್ವಾದನಾಸಕ್ತ ಚಿತ್ತೋಪೇತ ನಿಜಗುಣಾಹ್ವಯೇನ ಶಿವಯೋಗಿನಾ ವಿರಚಿತಮಪ್ಪ ಅನುಭವಸಾರ ನಾಮಕರಣ ಪರಿಸಮಾಪ್ತಿ ಮಂಗಳಮಹಾಶ್ರೀ * ॥

ವಿಷಯ : ವೇದಾಂತವಿಚಾರ (ವೇದಾಂತದೊಳು ಗೋಪ್ಯವಾದರ್ಥ).

ವಿಶೇಷ : ಪ್ರತಿ ಸುಸ್ಥಿತಿಯಲ್ಲಿದೆ. ಉಪನಿಷದುಕ್ತ ವಿದ್ಯಾರಹಸ್ಯವು ತ್ರಿವಿಧಿಯಲ್ಲಿ ವಿವರಿಸಲ್ಪಟ್ಟಿದೆ. ೮ ಸಂಧಿಗಳುಳ್ಳದ್ದಾಗಿದೆ. ಈ ಗ್ರಂಥದೊಂದಿಗೆ ಇದೇ ಕರ್ತೃವಿನ ಕೈವಲ್ಯಪದ್ಧತಿ, ೬೩ ಪ್ರಮಥಗಣಂಗಳ ತ್ರಿವಿಧಿ, ಪರಮಾನುಭವ ಬೋಧೆ, ಪರಮಾರ್ಥಪ್ರಕಾಶಿಕೆ ಮತ್ತು ವಿವೇಕ ಚಿಂತಾಮಣಿಗಳೆಂಬ ಆರು ಗ್ರಂಥಗಳಿರುತ್ತವೆ.

54

ಕೆ. ೧೭೫/೨	ಅನುಭವ ಸೂತ್ರದ ಟೀಕು	ಶ್ಲೋಕ, ಟೀಕು
೧೦.೫" × ೨.೪"	ಚನ್ನಮಲ್ಲಿಕಾರ್ಜುನದೇವ	?
೧–೪೭ ಪತ್ರ	೧೫ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ॥ ಶುಭಮಸ್ತು ॥ ಅನುಭವ ಸೂತ್ರಂ ॥

ಶಮಿದವಿನಮದಾರ್ತಿಂ ಷಟ್ಸ್ಥಲೇ ಬ್ರಹ್ಮಮೂರ್ತಿಂ।
ಪ್ರವಿದಿತ ಗುರುಪಾರಂಪರ್ಯ ವಿದ್ಯಾಬ್ಧಿ ಪಾರಂ।
ವಿಮಲ ಚರಿತ ಪುಂಣ್ಯಂ ವೀರಶೈವಾಗ್ರಗಣ್ಯಂ।
ಪ್ರಣಮು ಗುರುವರೇಣ್ಯಂ ಪರ್ವತೇಂದ್ರಂ ಶರಂಣ್ಯಂ ॥

ಟೀ ॥ ಶಮಿದವಿನಮದಾರ್ತಿಂ–ಶಮಿದ–ಶಾಂತಿಯನೆಯ್ದಿಸಲ್ಪಟ್ಟದಾದ। ವಿನಮತ್–ನಮಸ್ಕಾರವ ಮಾಡುವವರುಗಳ। ಆರ್ತಿಂ–ದುಃಖವುಳ್ಳಾತನಾಗಿ। ಷಟ್ಸ್ಥಲ ಬ್ರಹ್ಮಮೂರ್ತಿಂ-ಷಟ್ಸ್ಥಲ-ಷಟ್ಸ್ಥಲವೆಂಬ। ಬ್ರಹ್ಮ-ಶಿವತತ್ವದ। ಮೂರ್ತಿಂ ಮೂರ್ತಿಯಾದಾತನಾಗಿ। ಪ್ರವಿದಿತ ಗುರುಪಾರಂಪರ್ಯ ವಿದ್ಯಾಬ್ಧಿಪಾರಂ–ಪ್ರವಿದಿತ–ಲೇಸಾಗಿ ಅಱಿಯಲುಪಟ್ಟ। ಗುರು–ಪಂಡಿತಾರಾಧ್ಯರ। ಪಾರಂಪರ್ಯ-ಸಂಪ್ರದಾಯದಿಂ ಬಂದಂಥಾ। ವಿದ್ಯಾ-ಜ್ಞಾನವೆಂಬ। ಅಬ್ಧಿ-ಸಮುದ್ರದ। ಪಾರಂ–ಕಡೆಯನುಳ್ಳಾತನುವಾಗಿ। ವಿಮಲಚರಿತಪುಂಣ್ಯಂ-ವಿಮಲ–ಮಲತ್ರಯವಿಲ್ಲದಂಥಾ। ಚರಿತ–ವರ್ತನೆಯಿಂದ। ಪುಂಣ್ಯಂ–ಶುದ್ಧನಾಗಿ। ವೀರಶೈವ-ವೀರಶೈವ ವರ್ತನಉಳ್ಳ ಶಿವಭಕ್ತರೊಳಗೆ। ಅಗ್ರಗಂಣ್ಯಂ-ಮೊದಲೆಣಿಸಲು ತಕ್ಕಾತನಾಗಿ। ಗುರುವರೇಣ್ಯಂ–ಗುರು-ಗುರುಗಳೊಳಗೆ। ವರೇಣ್ಯಂ–ವರಿಸಲು ತಕ್ಕಾತನಾಗಿ। ಶರಣ್ಯಂ–ರಕ್ಷಕನಾಗಲು ತಕ್ಕಂಥಾ। ಪರ್ವತೇಂದ್ರಂ–ಪರ್ವತ–ಶ್ರೀಪರ್ವತೊಡೆಯರೆಂಬ। ಯಿಂದ್ರಂ–ಪರಮೇಶ್ವರನ ಕುರಿತು। ಪ್ರಣಂಮ್ಯ–ನಮಸ್ಕರವ ಮಾಡಿ ॥ * ॥

ಅನುಭವಸೂತ್ರ ॥ ಜಯತಿ ಷಡಧ್ವವಿಶುದ್ಧಿ। ಜ್ಜಯತಿ ಶ್ರೀಮತ್ ಷಡಕ್ಷರೀ ವಿದ್ಯಾ ಜಯತಿ। ಜಯತಿ ಷಡಂಗಾ ಭಕ್ತಿ। ರ್ಜಯತಿ ಸ್ವತ ಏವ ಷಟ್ಸ್ಥಲ ಬ್ರಹ್ಮಾ ॥

ಟ್ಕೆ॥ ಸರ್ವೋತ್ಕೃಷ್ಟ ವಾಚಕವಪ್ಪ ಜಯಶಬ್ದದಿಂದ ನಮಸ್ಕಾರವು। ಷಡಧ್ವವಿಶುದ್ಧಿ–ಭಾವಜ್ಞಾನ ಮನೋಬುದ್ಧಿ ಚಿತ್ತಹಂಕಾರಂಗಳೆಂಬ ಷಣ್ಮಾರ್ಗಂಗಳ। ವಿಶುದ್ಧಿ–ಶುದ್ಧತೆ। ಜಯತಿ–ಸರ್ವೋತ್ಕೃಷ್ಟನಾಗುತ್ತಿಹುದು। ಶ್ರೀಮತ್ ಷಡಕ್ಷರೀ ವಿದ್ಯಾ–ಸರ್ವ ಸಂಪತ್ಕರವಪ್ಪ ಷಡಕ್ಷರೀ ಮಂತ್ರವು। ಜಯತಿ–ಸರ್ವೋತ್ಕೃಷ್ಟವಾಗುತ್ತಿಹುದು.

ಅಂತ್ಯ : ೬೮ ॥ ಏತದ್ಯೋ ವೇದ ಸೋಽವಿದ್ಯಾ । ಗ್ರಂಥಿಂ ವಿಕಿರತಿ ಪ್ರಭುಃ।
ಶಿವ ಸಿದ್ಧಾಂತಕಂ ತಂತ್ರಂ। ಶಿವಾದ್ವೈತಂ ಶಿವಂ ಪದಂ ॥
ಟೀ ॥ ಶಿವಾದ್ವೈತಂ। ಶಿವಂಗಿಂದವು ಬೇಱಿಲ್ಲದದಾಗಿ। ಶಿವಂ। ಮಂಗಳಮಪ್ಪ। ಪದಂ। ಪದವಪ್ಪ। ಯೇತತ್। ಈ। ಶಿವಸಿದ್ಧಾಂತಕಂ। ಶಿವಸಿದ್ಧಾಂತವೆಂಬ। ತಂತ್ರಂ। ಶಾಸ್ತ್ರವನು। ಪ್ರಭುಃ। ಸಮರ್ಥನಾದ। ಯಃ। ಆವಾತನು। ವೇದಃ। ಅಱಿವುತ್ತಿಹನು। ಸಃ। ಆತನು। ಅವಿದ್ಯಾಗ್ರಂಥಿಂ। ಅಜ್ಞಾನ ಗ್ರಂಥಿಯನು। ವಿಕಿರತಿ। ಬಿಡುತ್ತಿಹನೂ ॥ ೬೯ ॥ ಇತ್ಯನುಭವಸೂತ್ರೇ ಶಿವಸಿದ್ಧಾಂತತಂತ್ರೇ ಷಟ್ಸ್ಥಲನಿರ್ಣಯೇ। ಕ್ರಿಯಾವಿಶ್ರಾಂತಿರ್ನಾಮ ಅಷ್ಟಮಾಧಿಕರಣಂ ॥ * ॥
ಅವಾಚ್ಯಾತ್ಮ ಸ್ವರೂಪಾಯ। ಶಿವಭಾವ ಪ್ರದಾಯಿನೇ।
ನಮಸ್ಸದ್ಗುರುನಾಥಾಯ। ಷಟ್ಸ್ಥಲ ಬ್ರಹ್ಮಮೂರ್ತಯೇ ॥ * ॥
ಇತ್ಯಾರಾಧ್ಯಪ್ರಿಯ ಚೆಂನಮಲ್ಲಿಕಾರ್ಜುನ ದೇವನಾಮಾಂಕಿತಾಯಾಂ। ಅನುಭವಸೂತ್ರವಾಕ್ಯಾರ್ಥಪ್ರಕಾಶಿಕಾಯಾಂ। ಕರ್ನಾಟಭಾಷಾಟೀಕಾಯಾಂ ಕ್ರಿಯಾ ವಿಶ್ರಾಂತಿರ್ನಾಮ ಅಷ್ಟಮಾಧಿಕರಣಂ ಸಂಪೂರ್ಣಂ ವಿವೃತಂ ॥ ಶ್ರೀ ಶ್ರೀ ಶ್ರೀ ॥

ವಿಷಯ : ಷಟ್ಸ್ಥಲ ಸಿದ್ಧಾಂತದ ವಿವರ.

ವಿಶೇಷ : ಓಲೆ ಸುಸ್ಥಿತಿಯಲ್ಲಿದೆ, ಮೊಗ್ಗೆಯ ಮಾಯಿದೇವನ ಸಂಸ್ಕೃತಶ್ಲೋಕಗಳಿಗೆ ಕನ್ನಡ ಟೀಕಿದೆ. ವ್ಯಾಖ್ಯಾನಕಾರನ ನಾಮೋಲ್ಲೇಖಾದಿಗಳು ಪ್ರತಿ ಅಧಿಕರಣಾಂತ್ಯದಲ್ಲೂ ಬರುತ್ತವೆ. ಅನೇ ಪತ್ರ $\frac{1}{4}$ ಭಾಗ ಮುರಿದು ಲುಪ್ತವಾಗಿದೆ. ಕಟ್ಟಿನ ಆದಿಯಲ್ಲಿ ಗ್ರಂಥಸೂಚಿಯನ್ನೊಳಗೊಂಡ ಐದು ಪತ್ರಗಳು ಪ್ರತ್ಯೇಕವಾಗಿವೆ.

ಇದರೊಂದಿಗೆ :

ಜಯಸ್ತೋತ್ರ–ಬಿರುದಾವಳಿ ವಿವರ, ಪರಮ ರಹಸ್ಯ, ಮನೋವಿಜಯ, ಪರಮಾರ್ಥಗೀತೆ, ರಸಸಿಂಧೂರಕ್ರಮ, ಶಿವಪೂಜಾ ವಿಧಾನ, ಮೂರೇಳು ದೀಕ್ಷಾಪ್ರಶಸ್ತಿ, ವಿಶೇಷಾರ್ಥ ಪ್ರಕಾಶಿಕೆ ಎಂಬ ಗ್ರಂಥಗಳೂ ಇವೆ.

55

ಕೆ. ೩೨೨/೧	ಅನುಭವಸೂತ್ರದ ಟೀಕು	ಶ್ಲೋಕ, ಟೀಕು
೧೩" × ೨"	?	?
೧–೨೩ ಪತ್ರ	೧೨ ಪತ್ರ	೮೦ ಅಕ್ಷರ

ಆದಿ : ಶ್ರೀ ಗು....ಸ್ತು ॥ ಜಯತಿಷಡಧ್ವವಿಶುದ್ಧಿರ್ಜಯತಿ ಶ್ರೀ ಷಡಕ್ಷರೀವಿದ್ಯಾ ।
ಜಯತಿ ಷಡಂಗಾಭಕ್ತಿರ್ಜಯತಿ ಸ್ವತಏವ ಷಟ್ಸ್ಥಲಬ್ರಹ್ಮಾ ॥
ಟೀ ॥ ಮಂತ್ರಾದ್ವ । ಪದಾದ್ವ । ವರ್ನಾದ್ವ । ಭುವನಾದ್ವ ।....ಕಳಾದ್ವ । ವೆಂಬ ಈ ಷಡದ್ವ ಶುದ್ದಿ । ಓ ನಮಃಶಿವಾಯಯೆಂಬ ಈ ಷಡಕ್ಷರವಿದ್ಯೆ । ಅ ಐಕ್ಯಾಂಗ। ಶರಣಾಂಗ । ಪ್ರಾಣಲಿಂಗಾಂಗ । ಪ್ರಸಾದ್ಯಂಗ । ಮಹೇಶ್ವರಾಂಗ । ಭಕ್ತ್ಯಾಂಗ ವೆಂಬ । ಈ ಷಡ್ವಿಧಾಂಗ । ಸಮರಸಭಕ್ತಿ । ಆನಂದಭಕ್ತಿ ಅನುಭಾವಭಕ್ತಿ । ಅ....ಭಕ್ತಿ । ನಿಷ್ಟಾಭಕ್ತಿ । ಸದ್ಭಕ್ತಿಯೆಂಬ ಷಡ್ವಿಧಭಕ್ತಿ । ಯಿಂತಿವಱ ಸಮಷ್ಟಿರೂಪವಹ । ಮಹಾಲಿಂಗ । ಪ್ರಸಾದಲಿಂಗ । ಚರಲಿಂಗ । ಶಿವಲಿಂಗ । ಗುರುಲಿಂಗ । ಆಚಾರಲಿಂಗವೆಂಬ ಷಡ್ವಿಧಲಿಂಗಮೂರ್ತಿಯಹ ಷಟ್ಸ್ಥಲ ಬ್ರಹ್ಮವು । ತಂನಿಂದ ತಾನೆ ವೊಪ್ಪುತ್ತಿಹು । ....
ಅವಾಚಾತ್ಮಸ್ವರೂಪಾಯ ಶಿವಭಾವಪ್ರದಾಯಿನೇ ।
ನಮಃ ಸದ್ಗುರುನಾಥಾಯ ಷಟ್ಸ್ಥಲಬ್ರಹ್ಮ ಮೂರ್ತಯೇ ॥

ಅಂತ್ಯ : ಏತದ್ಯೋ ವೇದ ಸ್ಯೋऽವಿದ್ಯಾಗ್ರಂಥಿಂ ವಿಕಿರತಿ ಪ್ರಭುಃ ।
ಶಿವಸಿದ್ಧಾಂತಕಂ ತಂತ್ರಂ ಶಿವಾದ್ವೈತಂ ಶಿವಂ ಪದಂ ॥
ಟ್ಕ ॥ ಈ ಶಿವಾದ್ವೈತವಹ ಶಿವಪರವಹ ಶಿವಸಿದ್ಧಾಂತ ತಂತ್ರವನು ಆವನಾನೊಬ್ಬ ಮಹಾಪ್ರಭು ಅರಿವುತ್ತಂವಿದ್ದಾನು ಆತನು ಅಜ್ಞಾನವೆಂಬ ಗಂಟುಗಳನು ಕಡಿಕಡಿದು ಬಿಸುಡುವನು ॥ ೮೧ ॥ ಇತ್ಯನುಭವಸೂತ್ರೇ ಶ್ರೀ ಶಿವ ಸಿದ್ಧಾಂತ ತಂತ್ರೇ ಷಟ್ಸ್ಥಲನಿರ್ನ್ನಯೇ ಕ್ರಿಯಾವಿಶ್ರಾಂತಿನಾಮಾಷ್ಟಾಧಿಕರಣಂ ಸಂಪೂರ್ಣಂ ಮಂಗಳಮಸ್ತು.

ವಿಷಯ : ೧ ಷಟ್ಸ್ಥಲಸಿದ್ಧಾಂತ. ೨ ಪಶ್ಚಿಮ (ಶಿಖಾ) ಚಕ್ರದ ವಿವರ.

ವಿಶೇಷ : ಶಕಟರೇಫದ ಬಳಕೆಯೂ ಟೀಕೆಯಲ್ಲಿ ಅಲ್ಲಲ್ಲಿ ಇದೆ. ಇದರೊಂದಿಗೆ ಯೋಗ ರಹಸ್ಯವೂ ಏಕೋತ್ತರಶತಸ್ಥಲವಾರ್ಧಿಕಾದಿಗಳೂ, ಸೋಮಾಷ್ಟಕಾದಿ ಕೆಲ ಅಷ್ಟಕಗಳೂ, ಸಂಸ್ಕೃತ ಸ್ತೋತ್ರಗಳೂ, ನಮಕಚಮಕಾದಿ ಮಂತ್ರಗಳೂ, ಶಿವಕವಚಾದಿ ಕೆಲ ಕವಚಗಳೂ, ಕೆಲ ಹಾಡುಗಳೂ, ಪದಗಳೂ, ಅಲ್ಲಲ್ಲಿ ಆಗಮಕಾರಿಕೆಗಳೂ ಮತ್ತು ಜಪವಿವರ ಅಲ್ಲದೆ ಲಿಂಗಲೀಲಾ ವಿಲಾಸದಲ್ಲಿನ ಗ್ರಂಥದ ಟೀಕೂ ಸಹ ಇವೆ.

56

ಕೆ.೧೯೮	ಅನುಭವಾಮೃತ	ಭಾಮಿನೀ ಷಟ್ಪದಿ
೧೦.೨" × ೩"	ಮುಹಲಿಂಗರಂಗ	ಸು. ೧೬೭೫
೧–೬೪ ಪತ್ರ	೧೧ ಪಂಕ್ತಿ	೪೬ ಅಕ್ಷರ

ಆದಿ : ಅನುಭವಾಂವೃತವಂನ್ನು ಬರೆವುದಕ್ಕೆ ಶುಭಮಸ್ತು × × ×
ಸೂಚನೆ || ವ್ಯಾಸಮುನಿ ಶುಕ ಮುನಿಗೆ ಸಂ
ತೋಷದಿಂದಲಿ ತತ್ವಬೋಧೆಯು
ಲೇಸೆನಲು ವಿಸ್ತರಿಸಿ ಪೇಳಿದನಾತ್ಮವಿದರೊಲಿಯೆ ||
ಪದನೂ || ಶ್ರೀಮದನುಪಮತೇಜ ನತಜನ
ಕಾಮಿತಾರ್ಥ ಪಲಪ್ರದಾಯಕ
ಸೋಮಸೇಖರ ಸುರಮುನೀಂದ್ರಾರ್ಚಿತ ಪದಾಂಭೋಜಾ ||
ಸಾಮಗಾನಪ್ರಿಯ ಸದಾಶಿವ
ವಾಮಭಾಗಾಶ್ರಿತ ಭವಾನೀ
ಪ್ರೇಮ ಶ್ರೀಗಿರಿಮಲ್ಲಿಕಾರ್ಜುನ ಸಲಹು ಮೂಜಗವಾ || ೧ ||

ಅಂತ್ಯ : ಸರ್ವಲೋಕಾಧ್ಯಕ್ಷ ಜಯಜಯ
ಸರ್ವಲೋಕಾದಾರ ಜಯಜಯ
ಸರ್ವಮಂಗಳೆಯರಸ ಜಯಜಯ ಶರ್ವ ಸರ್ವೇಶಾ ||
ಗರ್ವಿತಾಸುರಮಥನ ಜಯಜಯ
ದುರ್ವಿದಗ್ದ ದುರಾಪ ಜಯಜಯ
ಪರ್ವತಾದಿಪ ಮಲ್ಲಿಕಾರ್ಜುನ ದೇವ ಜಯಜಯತೂ || ೨೯ ||

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದ ಗುರುವರ್ಯ ಪಾದ ಕಮಲ ಬೃಂಗಾಯಮಾನ ಸಹವಾಸಿ ಮುಹಲಿಂಗರಂಗ ವಿರಚಿತ ಅನುಭವಾಮೃತ ವೆಂಬ ಗ್ರಂಥದಲ್ಲಿ ನಿರ್ಗುಣಾರಾಧನೆ ಪ್ರಕರಣಂ ಯೇಕಾದಶೋಧ್ಯಾಯಃ || ಅಂತ್ರ್ರಾ ಅಧ್ಯಾಯ ೧೧ ಕ್ಕಂ ಪದನು ೮೦೪ ಕ್ಕಂ ಜಯಮಂಗಳಮಹಾಶ್ರೀ. ಸ್ವಸ್ತಿಶ್ರೀ ವಿಜಯಾಭ್ಯುದಯಾ ಶಾಲಿವಾಹನ ಶಖ ವರ್ಷಂಗಳು ೧೬೭೯ ನೇ ಸಂದ ವರ್ತಮಾನವಾದ ಪೈಂಗಳ ನಾಮ ಸಂವತ್ಸರದ ಮಾಘ ಬ ೫ ಗುರುವಾರ ದಲ್ಲು ಪದ್ಮಮಿತ್ರನುದಯವಾದ ೮ ನೇ ಗಳಿಗೆಯಲ್ಲಿ ಬರದು ಹೆಚ್ಚಿದಂತ್ರಾ ಅನುಭವಾಂವೃತವಂನ್ನು ಜವಳಿ ಅಂಗಡಿ ಕಾಳಿದಾಸೈಯ್ಯನಿಗೆ ವುಪಾಧ್ಯ ವೆಂಕಟೈಯ್ಯನು ಬರೆದುಕೊಟ್ಟಂತ್ರಾ ಪುಸ್ತುಕಾ ||

ವಿಷಯ : ವೇದಾಂತ.

ವಿಶೇಷ : ಗ್ರಂಥ ಸುಸ್ಥಿತಿಯಲ್ಲಿದೆ, ಅಕ್ಷರ ಸಣ್ಣ.

57

ಕೆ.೨೨೧/೧	**ಅನುಭವಾಮೃತ**	ಭಾಮಿನಿಷಟ್ಪದಿ
೧೨.೧" × ೧.೫"	ಮಹಾಲಿಂಗರಂಗ	ಸು ೧೬೭೫
೧-೬೯ ಪತ್ರ	೯ ಪಂಕ್ತಿ	೫೬ ಅಕ್ಷರ

ಆದಿ : ಅನುಭವಾಮೃತಂ ॥
ಪಲ್ಲ ॥ ವ್ಯಾಸ ಮುನಿಪತಿ ಶುಕಮುನಿಗೆ ಸಂ
ತೋಷದಿಂದಲಿ ತತ್ವಬೋಧೆಯಂ
ಲೇಸೆನಲು ವಿಸ್ತರಿಶಿ ಪೇಳಿದನಾತ್ಮವಿದುರೊಲಿಯೆ ।
ಪದನು ॥ ಶ್ರೀಮದನುಪಮತೇಜ ನತಜನ
ಕಾಮಿತಾರ್ಥ ಫಲಪ್ರದಾಯಕ
ಸೋಮಶೇಖರ ಸುರಮುನೀಂದ್ರಾರ್ಚಿತ ಪದಾಂಭೋಜಾ ।
ಸಾಮಗಾನಪ್ರಿಯ ಸದಾಶಿವ
ವಾಮಭಾಗಾಶ್ರಿತ ಭವಾನೀ
ಪ್ರೇಮ ಶ್ರೀಗಿರಿ ಮಲ್ಲಿಕಾರ್ಜುನ ಸಲಹು ಮೂಜಗವಾ ॥ ೧ ॥

ಅಂತ್ಯ : ದೇವ ಜಯಜಯ ಭಕ್ತನಿಕರವ
ಕಾವ ಜಯಜಯ ಸಕಲ ನಿರ್ಜರ
ದೇವ ಜಯಜಯ ಜಯ ಜನಾರ್ದನಬಂಧು ಜಯಜಯತೂ
ಪಾವಕಾಂಬಕ ಫಣಿವಿಭೂಷಣ
ಕಾಮಮರ್ದನ ಸಕಲಲೋಕದ
ಜೀವದಂತರ್ಯಾಮಿ ಸಲಹು ಮಲ್ಲಿಕಾರ್ಜುನನೇ ॥ ೩೦ ॥
ಇತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದ ಗುರುವರ್ಯ ಪದಕಮಲ ಭೃಂಗಾಯಮಾನ ಸಹವಾಸಿ ಮಹಲಿಂಗರಂಗ ವಿರಚಿತಮಪ್ಪ ಅನುಭವಾಮೃತವೆಂಬ ಗ್ರಂಥದಲ್ಲಿ ನಿರ್ಗುಣಾರಾಧನಪ್ರಕರಣ ಏಕಾದಶೋಧ್ಯಾಯಃ॥
ಅಂತು ಸಂಧಿ ೧೧ ಕ್ಕಂ ಪದನು ೮೧೦ ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ವೇದಾಂತ.

ವಿಶೇಷ : ಇದೇ ಕಟ್ಟಿನಲ್ಲಿ ಉತ್ತರಗೀತೆಗೆ ಪರಮಾನಂದ ತೀರ್ಥರು ಬರೆದಿರುವ ತೆಲುಗು ವ್ಯಾಖ್ಯಾನವಿದೆ.

58

ಕೆ. ಎ. ೨೬/೩	ಅನುಭವಾಮೃತ	ಭಾಮಿನೀಷಟ್ಪದಿ
೧೦.೪" × ಅ.೨"	ಮಹಲಿಂಗರಂಗ	ಸು. ೧೬೭೫
೧_೭೦ ಪತ್ರ	೨೩ ಪಂಕ್ತಿ	೨೮ ಅಕ್ಷರ

ಆದಿ : ೧೮೪೬ ನೆ ಸಂವತ್ಸರದ ಜುಲಾಯಿ ತಿಂಗಳ ೨೫ ನೆ ತಾರೀಕಿನಲ್ಲಿ ಅನುಭವಾಮೃತವೆಂಬ ಗ್ರಂಥವನ್ನು ಬರೆಯುವದಕ್ಕೆ ಶುಭಮಸ್ತು। ವೇದೌವ್ಯಾಸಾಯ ನಮಃ ।

ಸೂಚನೆ॥ ವ್ಯಾಸಮುನಿಪತಿ ಶುಕಮುನಿಗೆ ಸಂ
ತೋಷದಿಂದಲಿ ತತ್ವಬೋಧೆಯ
ಲೇಸೆನಲು ವಿಸ್ತರಿಸಿ ಪೇಳಿದನಾತ್ಮವಿದರೊಲಿಯೇ ॥

ಪದನೂ॥ ಶ್ರೀಮದನುಪಮತೇಜ ನತಜನ
ಕಾಮಿತಾರ್ಥಫಲಪ್ರದಾಯಕ
ಸೋಮಸೇಕರ ಮನುಮುನೀಂದ್ರಾರ್ಚಿತಪದಾಂಭೋಜಾ।
ಸಾಮಗಾನಪ್ರಿಯ ಸದಾಶಿವ
ವಾಮಭಾಗಾಶ್ರಿತ ಭವಾನೀ
ಪ್ರೇಮ ಶ್ರೀಗಿರಿಮಲ್ಲಿಕಾರ್ಜುನ ಸಲಹು ಮೂಜಗವಾ ॥ ೧ ॥

ಶ್ರೀ ಗಿರೀಶನ ಪಾದಪದ್ಮ ಪ
ರಾಗರಂಜಿತ ಮೌಳಿ ಭ್ರಮರಾಂ
ಬಾಗುಣಾರ್ಣವ ಪೂರ್ಣಚಂದ್ರ ವಚೋವಿಲಕ್ಷಣನೂ।
ಶ್ರೀಗುರುವಿನುಪದೇಶದಿಂದನು
ರಾಗವುದಿಸಲು ರಂಗನಾಥನು
ಯೋಗಿಜನವಹುದೆನಲು ಪೇಳಿದನನುಭವಾಂಮೃತವಾ ॥ ೨ ॥

ಘನತರದ ಸಹವಾಸಿ ವಂಶದ
ಲನುಪಮ ಮಹಲಿಂಗದೇವನ
ತನೆಯನಹ ಶ್ರೀರಂಗ ಸಹಜಾನಂದ ಗುರುಪದವಾ।
ನೆನೆದು ಸಮ್ಯಜ್ಞಾನವನು ಬ
ಲ್ಲನುಭವಿಗಳಹುದೆನಲು ಪೇಳಿದೆ
ವಿನುತರಾಸ್ವಾದಿಸುವುದೊಲಿದೀಯನುಭವಾಂಮೃತವಾ ॥ ೩ ॥

ಅಂತ್ಯ : ತತ್ವಮಸಿ ವಾಖ್ಯಾರ್ಥವನು ಪರ
ತತ್ವದಿರವನು ಸಕಲಯೋಗ
ಸ್ಫೂರ್ತಿಯನು ಷಡ್ವಿದಸಮಾಧಿಯ ಮನನದಿರವುಗಳಾ |
ಸತ್ವವಹ ಪರಮಾತ್ಮಪದವನು
ನಿತ್ಯಭೇದವನುಳಿವ ತೆರನನು
ವಿಸ್ತರಿಶಿ ಪೇಳಿದ ಮಹಾತ್ಮಗೆ ಜಯತು ಜಯ ಜಯತೂ || ೩೨ ||

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಸಹಜಾನಂದ ಗುರುವರ್ಯ ಪದ ಕಮಲಭೃಂಗಾಯಮಾನ ಸಹವಾಸಿ ಮಹಲಿಂಗರಂಗವಿರಚಿತ ಅನುಭವಾಂಮೃತ ವೆಂಬ ಗ್ರಂಥದಲ್ಲಿ ನಿರ್ಗುಣಾರಾಧನ ಪ್ರಕರಣಯೇಕಾದಶಸ್ವಾಸಂ ಅಂತು ಸಂಧಿ ೧೧ಕ್ಕಂ ಪದನು ೮೦೭ ಕ್ಕಂ ಮಂಗಳ ಸಂಪೂರ್ಣವೂ.

ವಿಷಯ : ತತ್ವಶಾಸ್ತ್ರ.

ವಿಶೇಷ : ಇದೇ ಪುಸ್ತಕದಲ್ಲಿ ಚತುರಾಸ್ಯನಿಘಂಟು ಮತ್ತು ಚಾಮುಂಡಿಕಾಲಘು ನಿಘಂಟು ಎಂಬ ಗ್ರಂಥಗಳೂ ಇವೆ.

59

ಕೆ. ಎ. ೧೮೩/೧	ಅನುಭವಾಮೃತ	ಭಾಮಿನೀಷಟ್ಪದಿ
೧೧″ × ೮″	ಮಹಲಿಂಗರಂಗ	ಸು. ೧೬೭೫
೧–೬೪ ಪತ್ರ	೨೧ ಪಂಕ್ತಿ	೨೮ ಅಕ್ಷರ

ಆದಿ : ಅನುಭವಾಮೃತ ಬರೆಯುವದಕ್ಕೆ ನಿರ್ವಿಘ್ನಮಸ್ತು ||
ವಾಗೀಶಾದ್ಯಾಸ್ಸುಮನಸಃ ಸರ್ವಾರ್ಥಾನಾಮುಪಕ್ರಮೇ |
ಯಂ ನತ್ವಾ ಕೃತಕೃತ್ಯಾ ಸ್ಯುಃ ತಂ ನಮಾಮಿ ಗಜಾನನಂ ||
ವ್ಯಾಸಂ ವಶಿಷ್ಟನಪ್ತಾರಂ ಶಕ್ತೇಃ ಪೌತ್ರಮಕಲ್ಮಷಂ |
ಪರಾಶರಾತ್ಮಜಂ ವಂದೇ ಶುಕತಾತಂ ತಪೋನಿಧಿಂ || ಶ್ರೀ ||
ವ್ಯಾಸಮುನಿ ಶುಕಮುನಿಗೆ ವರಸಂ
ತೋಷದಿಂದಲಿ ತತ್ವಬೋಧೆಯು
ಲೇಸೆನಲು ವಿಸ್ತರಿಸಿ ಪೇಳಿದನಾತ್ಮವಿದರೊಲಿಯೆ ||
ಪದನೂ || ಶ್ರೀಮದನುಪಮ ತೇಜ ನತಜನ
ಕಾಮಿತಾರ್ಥ ಫಲ ಪ್ರದಾಯಕ
ಸೋಮಸೇಕರ ಸುರಮುನೀಂದ್ರಾರ್ಚಿತ ಪದಾಂಭೋಜಾ |

ಸಾಮಗಾನಪ್ರಿಯ ಸದಾಶಿವ
ವಾಮಭಾಗಾಶ್ರಿತ ಭವಾನೀ
ಪ್ರೇಮ ಶ್ರೀ ಗಿರಿಮಲ್ಲಿಕಾರ್ಜುನ ಸಲಹು ಮೂಜಗವಾ ॥ ೧ ॥
ಶ್ರೀ ಗಿರೀಶನ ಪಾದಪದ್ಮಪ
ರಾಗರಂಜಿತ ಮೌಳಿ ಭ್ರಮರಾಂ
ಬಾ ಗುಣಾರ್ಣವ ಪೂರ್ಣಚಂದ್ರವಚೋವಿಪಕ್ಷಣನೂ
ಶ್ರೀಗುರುವಿನುಪದೇಶದಿಂದನು
ರಾಗವುದಿಸಲು ರಂಗನಾಥನು
ಯೋಗಿಜನವಹುದೆನಲು ಪೇಳಿದನನುಭವಾಮೃತವಾ ॥ ೨ ॥

ಅಂತ್ಯ : ಸರ್ವಲೋಕಾಧ್ಯಕ್ಷ ಜಯಜಯ
ಸರ್ವಲೋಕಾಧಾರ ಜಯಜಯ
ಸರ್ವಮಂಗಳೆಯರಸ ಜಯಜಯ ಶರ್ವ ಸರ್ವೇಶಾ
ಗರ್ವಿತಾಸುರಮಥನ ಜಯಜಯ
ದುರ್ವಿದಗ್ಧದುರಾಪ ಜಯಜಯ
ಪರ್ವತಾಧಿಪ ಮಲ್ಲಿಕಾರ್ಜುನದೇವ ಜಯಜಯತೂ ॥ ೩೨ ॥

ಶ್ರೀಮತ್ಪರಮಹಂಸ ಪರಿವ್ರಾಜಿಕಾಚಾರ್ಯ್ಯ ಸಹಜಾನಂದ ಗುರುವರ್ಯ್ಯ ಪಾದಕಮಲ ಭೃಂಗಾಯಮಾನ ಸಹವಾಸಿ ಮಹಲಿಂಗರಂಗ ವಿರಚಿತ ಅನುಭವಾಮೃತ ಗ್ರಂಥದಲ್ಲಿ ನಿರ್ಗುಣಾರಾಧನೆ ಪ್ರಕರಣ ಏಕಾದಶೋಧ್ಯಾಯಃ ಸಂಪೂರ್ಣಃ.
ಅಂತು ಅಧ್ಯಾಯ ೧೧ ಕಂ ಪದನೂ ಎಂಟನೂರ ಎಂಟು ೮೦೮ ಕಂ ಮಂಗಳಂ ಜಯತೂ.

ವಿಷಯ : ವೇದಾಂತ ತತ್ವ.

ವಿಶೇಷ : ಇದೇ ಪುಸ್ತಕದಲ್ಲಿ ವೇದಾಂತ ಡಿಂಡಿಮ (ಸಂ), ನಕ್ಷತ್ರಮಾಲಿಕಾ (ಸಂ), ಭಗವದ್ಗೀತಾ ಸಟೀಕಾ, ದ್ವಾದಶಮಂಜರೀ, ಅಪರಾಧಸ್ತೋತ್ರ ಎಂಬ ಕೃತಿಗಳಿವೆ.

60

ಕೆ. ಎ. ೧೮೩/೬ ಅಪರಾಧಸ್ತೋತ್ರದ ಟೀಕು ಶ್ಲೋಕ, ಟೀಕು
೧೧"×೮" ? ?
೧೭೪–೧೮೦ ಪತ್ರ ೨೧ ಪಂಕ್ತಿ ೨೭ ಅಕ್ಷರ

ಆದಿ : ಅಪರಾಧಸ್ತೋತ್ರ ಬರವುದಕ್ಕೆ ಸುಭಮಸ್ತು ||
ಆದೌ ಕರ್ಮಪ್ರಸಂಗಾತ್ಕಲಯತಿ ಕಲುಷಂ ಮಾತೃಕುಕ್ಷೌಸ್ಥಿತಿತಾಮಾ
ತಂನ್ಮೂತ್ರಮೇದ್ಯ ಮೇದ್ಯೈದ್ಯೈತಯತಿ ನಿಕರಾ ಜಾಠರೊ ಜಾತವೇದಾಃ
ಯದ್ಯದ್ವತತ್ಯದುಃಖಂ ವಿಷಮತಿ ವಿಷಮಂ ಶಕ್ಯೈಕೇತೇನವಕ್ತ್ರಂ
ಕ್ಷಂತವ್ಯೆ ಮೇ ಪರಾಧಃಸ್ಸಿವ ಶಿವಶಿವಭೋ ಶ್ರೀ ಮಹಾದೇವೆ ಶಂಭೋ ||

ಟೀಕು || ಆದೌ–ಆದಿಯಲ್ಲಿ | ಕರ್ಮಪ್ರಸಂಗಃ....ಕರ್ಮಪ್ರಸಂಗದ ದೆಶೆಯಿಂದೆ ಮಾತೃಕುಕ್ಷೌ—ತಾಯಿಯ ಕುಕ್ಷಿಯಲ್ಲಿ | ಸ್ಥಿತಂ—ಯಿದ್ದಂತ ಮಾಂ—ನಂನು ಕಲುಷಂ ಕಲುಷವು | ಕಲಯತಿ—ಪೇದಾಂತವೇ ತಂನ್ಮಾತ್ರ ಮೇದ್ಯ ಮೇದ್ಯಕರ್ಕ | ಆ ತಾಯಿಯ ಮೂತ್ರ ಮೇದ್ಯೆ ಮೇದ್ಯೆ ಮದ್ಯದಲ್ಲಿ | ಜಠರ ಜಠರ ಸಂಮಂದವಾದಂತಾ ಜಾಥವೇದಃ ಅಗ್ನಿಯುಂ ನಿತ್ರಾರಂ ಮಿಗಿಲಾಗಿ ದೈತಯತಿ ದುಃಖಸಲು ಮಾಡುತ್ತದೆ.

ಅಂತ್ಯ : ಆತ್ಮಾತ್ವಂ ಗಿರಿಜಾಪತಿಃ ಪರಿಜನಾಃ ಪ್ರಾಣಾ ಶರೀರಂ ಗೃಹಂ |
× × × × × × ×
ಪ್ರದಕ್ಷಿಣವಿಧಿಃ ಪ್ರದಕ್ಷಿಣವಿಧಾನವೆ | ಸರ್ವಾಃ ಸಮಸ್ತವಾದಂತ | ಗಿರಃ—ವಾಕ್ಯಗಳು | ಸ್ತೋತ್ರಾಣಿ—ಸ್ತೋತ್ರಗಳು | ಯದ್ಯತ್ರ ಥಾವಥಾವ ಕರ್ಮಂ—ಕರ್ಮವಂನ್ನು | ಕರೋಮಿ—ಮಾಡುತ್ತಾ ಯಿದ್ದಾನೇ ತತ್ತಲೆ | ಆವಪ ಅಖಿಲಂ—ಸಮಸ್ತವು | ತವ–ನಿನಗೆ | ಆರಾಧನಂ ಪೂಜೆಯು || ೧೪ ||

ರಾಗ || ಸುರುಟಿ || ಅಟತಾಳ ||
ಮಂಗಳಂ ಮಂಗಳಂ ಗೌರೀಶ ತೇ || ಮಂಗಳಂ || ಪಲ್ಲ ||
ಕಾಲ ಕಾಲ ಕರು | ಣಲವಾಲ ಮುನಿ | ಬಾಲಕ ಪಾಲಕ ಪಾಲಕರ | ಕ್ಷ್ವೇಳ ನೀಲಗಳ | ತ್ರೈಲೋಕ್ಯಮಂಗಳ | ಕೇಳಿಸುಖತ ಶೈಲಾ| ಬಾಲಾ ಸುಶೀಲಾ ||೧||
× × × × × × ×
ಸಾಂಗತರಂಗ ವರಾಂಗ ನಿರಂಗತು | ಠಂಗ ಕರಾಂಗ ಭವಾಂಗ ಹರ ಮಂಗ ಳಾಂಗ ಸರ್ವ | ಮಂಗಳೆಯರಸನೆ | ಸಂಗೀಕೃಪಾಪಾಂಗ ಸಂಗಮಲಿಂಗ | ಮಂ || ೩ || ಶ್ರೀ ||

ವಿಷಯ : ಶ್ರೀಶಂಕರಾಚಾರ್ಯ ವಿರಚಿತ ದೇವ್ಯಪರಾಧಸ್ತೋತ್ರದ ಟೀಕು.

ವಿಶೇಷ : ನೋಡಿ ಅಕ್ಷರ. ಗ್ರಂಥ ಅಸಮಗ್ರ. ಇದೇ ಪುಸ್ತಕದಲ್ಲಿ ಅನುಭವಾಮೃತ, ವೇದಾಂತ ಡಿಂಡಿಮ (ಸಂ) ನಕ್ಷತ್ರಮಾಲಿಕಾ (ಸಂ) ಭಗವದ್ಗೀತಾ ಎಂಬ ಕೃತಿಗಳಿವೆ.

61

ಕೆ. ೧೦೪	ಅಪ್ರತಿಮ ವೀರಚರಿತೆ	ಶ್ಲೋಕ, ಪದ್ಯ, ವಚನ
೧೩.೨" × ೧.೩"	ತಿರುಮಲಾರ್ಯ	೧೬೬೦
೧–೭೭ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಮದಪ್ರತಿಮ ವೀರಚರಿತಂ ॥ ಶ್ರೀಶೈಲಗುರುವೇ ನಮಃ

ಕಂ ॥ ಶ್ರೀವರನಖಿಲ ಜಗಜ್ಜ
ನ್ಮಾವನ ಮುಖದಿವ್ಯಲೀಲನಾಶ್ರಿತಸುಲಭಂ
ದೇವಂ ಚಿಕದೇವೇಂದ್ರಂ
ಗಾವಗಮೊಲ್ದೀಗೆ ಸಕಲಸಂಪತ್ತುಗಳಂ ॥ ೧ ॥

ಅಂತ್ಯ : ವೃ ॥ ಶ್ರುತಿಯಂ ಕಾಪಿಟ್ಟು ಗೋತ್ರೋನ್ನತಿಯನೆಸಗಿ ಮಾಸಿಂಗಮಂ ಪೋಲ್ತು ಗಾಢೋ
ನ್ನತಿಯಿಂ ವಿಶ್ರಾಂತಿಗೆಯ್ದಾಕ್ರಮಿಸಿ ವಸುಧೆಯಂ ದುಷ್ಟರಾಜನ್ಯರಂ ಗೆ
ಲ್ದತಿಮಾತ್ರಂ ಧಾರ್ಮಿಕಂ ತಾನೆನಿಸಿಯದು ಕುಲೌನ್ನತ್ಯಮಂ ಪೊಣ್ಮಿಸುತ್ತ
ಪ್ರತಿಮಂ ಲೋಕೈಕವೀರಂ ಬಗೆವುಗೆ ಕಲಿಯಂ ತೂಳ್ದಿ ಸಾಮ್ರಾಜ್ಯ ವಾಳ್ಗಂ ॥ ೨೦ ॥

ಇದರೊಳ್ ಪ್ರಕೃತಮಾದ ರಾಜವರ್ಣನದೊಳ್ ವಿಶೇಷಣಾದಿ ಸಾಮ್ಯದಿಂದ ಪ್ರಕೃತಮಾದ ಭಗವದ್ವ್ಯಾಪಾರಂ ತೋರ್ಪುದರಿಂ ಸಮಾಸೋಕ್ತಿಯುಂ ಮತ್ತಂ ಭಗವದವತಾರಂಗಳ ಕ್ರಮದಿನ್ತೋರ್ಪುದರಾ ರತ್ನಾವಳಿಯು ಮೆಂಬೆರಡುಮಲಂಕಾರಂಗಳೊಂದೇ ಪದ್ಯದೊಳಿರ್ಪುದರಿಂದಿದೇಕವಾಚಕಾನು ಪ್ರವಿಷ್ಟ ಸಂಕರಂ ॥ ಇಂತು ಸಂಕರ ನಾಲ್ಕುಂ ತೆರಂ ॥ ೨೦ ॥ ಶ್ರೀ ॥

ಇದು ಶ್ರಿಮನ್ಮಮಹಾರಾಜಾಧಿರಾಜ ಪರಮೇಶ್ವರ ಪೌಢಪ್ರತಾಪನಪ್ರತಿಮ ವೀರ ನರಪತಿ ಶ್ರೀ ಚಿಕದೇವಮಹಾರಾಜ ಕೃಪಾಪರಿಪಾಲಿತ ಶ್ರೀತಿರುಮಲಾರ್ಯ ವಿರಚಿತಮಪ್ಪ ಶ್ರೀಮದಪ್ರತಿಮವೀರ ಚರಿತಮೆಂಬಲಂಕಾರ ಗ್ರಂಥದೊಳ್ ನವೀನಾಲಂಕಾರಾದಿ ನಿರೂಪಣಂ ಚತುರ್ಥಪ್ರಕರಣಂ ಸಂಪೂರ್ಣಂ. ಅಪ್ರತಿಮ ವೀರ ಚರಿತಾಲಂಕಾರ : ಸಮಾಪ್ತಃ ||

ವಿಷಯ : ಅಲಂಕಾರ ಗ್ರಂಥ.

ವಿಶೇಷ : ೧೮ ರಿಂದ ೨೪ ವರೆಗಿನ ಪತ್ರಗಳಿಲ್ಲ. ಗ್ರಂಥಲಿಪಿ. ಕೊನೆಯ ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ.

62

ಕೆ. ೧೦೯	**ಅಪ್ರತಿಮವೀರಚರಿತೆ**	**ಶ್ಲೋಕ, ಪದ್ಯ, ವಚನ**
೧೩.೮" × ೧.೩"	ತಿರುಮಲಾರ್ಯ	೧೬೬೦
೧-೧೪೨ ಪತ್ರ	೩ ಪಂಕ್ತಿ	೪೧ ಅಕ್ಷರ

ಆದಿ : ಶುಭಮಸ್ತು : || ಅಪ್ರತಿಮವೀರಚರಿತಂ ||

ಕಂ || ಶ್ರೀವರನಖಿಲಜಗಜ್ಜ
ನ್ನಾಮನನಮುಖದಿವ್ಯಲೀಲನಾಶ್ರಿತ ಸುಲಭಂ
ದೇವಂ ಚಿಕದೇವೇಂದ್ರಂ
ಗಾವಗಮೊಲ್ದೀಗೆ ಸಕಲಸಂಪತ್ತುಗಳಂ ||೧||

ಅಂತ್ಯ : ಮಿಥ್ಯಾಧ್ಯವಸಿತ್ಯಲಂಕಾರಮೆನೆ ||

ಶ್ಲೋ || ಕಿಂಚಿನ್ಮಿಥ್ಯಾರ್ಥಸಿಧ್ಯರ್ಥಂ ಮಿಥ್ಯಾರ್ಥಾಂತರ ಕಲ್ಪನಂ ||

ವ || ಒಂದರ್ಥಂ ಪುಸಿಯೆನ್ದು ಪೇಳ್ವುದರ್ಕೆ ಪೆಱತು ಪಲವುಂ ಪುಸಿಗಳಂ ಪೇಳ್ವುದು ಮಿಥ್ಯಾಧ್ಯವಸಿತಿ ಎನಿಪುದು । ಎಂತೆನೆ

ಪಿಡಿದುಮೊಲೆಗೊಡಿನಲಗಂ
ಕಡು ಬಿಸಿಲ್ಗುದುರೆಯೇರಿ ಬಂಜೆಯಕುವರ
ನ್ನಡೆತರೆ ನೆಲನಂ ಸೋಂಕದೆ
ಪಡಿವರಿಸಲ್ಬರ್ಕುಮಂದು ಮಹಿಶೂರವರೊಳ್ || ಶ್ರೀ ||೬೩||

ಲಲಿತಾಲಂಕಾರವೆನೆ—

ಶ್ಲೋ ॥ ಪ್ರಸ್ತುತೇ....ರ್ಣ್ಯವಾಕ್ಯಾರ್ಥ ಪ್ರತಿಬಿಂಬಸ್ಯ ವರ್ನ್ನನಂ ॥

ವ ॥ ವರ್ನ್ಯವಾದೊಂದು ವಸ್ತುವಿನ ಕಾರ್‍ಯ್ಯವಮಂ ತಿಳುಪಲೆಳಸೆ ಆ ಕಾರ್‍ಯ್ಯವಮಂ ಪೇಳದೆ ಆ ಸ್ತು । ವಿನೊಳೆ ಅದರ್ಕೆ ಸವಾನವಾದ ಕಾರ್ಯಾಂತರಮಂ ಬಂಣಿಸೆಯದು ಲಲಿತಾಲಂಕಾರಂ ॥ ಎಂತೆನೆ ॥

ಕಂ ॥ ಅಂಗರಿಯದೆ ಕನ್ನಡ ನಾ
ಡಿಂಗಾವೇತರ್ಕೆ........

ವಿಷಯ : ಅಲಂಕಾರ ಗ್ರಂಥ.

ವಿಶೇಷ : ಅಸಮಗ್ರಪ್ರತಿ. ಕೆಲವು ಕಡೆ ಶಕಟರೇಫವನ್ನು ಬಳಸಿದೆ. ಮೂರನೆಯ ಪ್ರಕರಣದಲ್ಲಿ ' ಲಲಿತಾಲಂಕಾರ 'ದ ವರೆಗಿನ ಗ್ರಂಥವಿದೆ. ಅಲ್ಲಲ್ಲಿ ಹುಳು ತಿಂದಿದೆ.

63

ಕೆ. ೬೦೨/೧	ಅಬ್ಧಿಕಲ್ಪ	ಕಂದ
೧೨.೫" × ೨"	?	?
೧–೨೦ ಪತ್ರ	೧೦ ಪಂಕ್ತಿ	೫೨ ಅಕ್ಷರ

ಆದಿ : ಅಧ್ಬಿಕಲ್ಪ ॥ ಕರುಣಿಸು ಭೂಜಗಾರುಢನೆ
ಕರುಣಿಸು ಕಮಠನ ಗೆಲಿದಾ ಪಾರಿಶ್ವಾರ್ನಾಥನೆ
ಕರುಣಿಸು ನಿಜಪದವೀವನೆ
ಕರುಣಿಸು ಕನಕಗಿರಿ ಪಾರಿಶ್ವಾರ್ನಾಥನೆ ॥ ೧ ॥

ಜಿನಸಮಯದೊಳಗೆಘದಿಹಾ
ಜಿನನಂ ಪೂಜಿಪನು ಮತ್ತೆ ಅನುದಿನದೊಳಗುಂ
ಜಿನರಿಂದು ಪೊಗಳುತ್ತಿಹನು ಜಿನ
ಮುನಿಶಬ್ದವನು ತೆಗೆದು ತೆಗೆದು ಪೇಳಿದ ಪಲಮಂ ॥ ೨ ॥

ಅಂತ್ಯ : ಕ್ರೂರಗ್ರಹಯೋಗವಾಗಲು
ಹಾರದಿ ಮಘೆಯೊಳಗೆ ಶುಕ್ರ ನಿಲ್ಲಲು ಮತ್ತಾ
ಸುರರವಿಮದ್ಯ ಅಂತ್ಯಕ್ಕೆ
ನೇರಗೆ ಬಂದಿರಲು ಅರ್ಘ ಕುಂದುಗಳಕ್ಕುಂ ॥ ೬೦ ॥

ಅಂತು ೩೨೮ ಪದ॥ ಸುಭಮಸ್ತು ॥ ಅಂತು ವಾರಪಲ ॥ ಇಂತು ವಾರಪಲ ಸಮಾಪ್ತಾಂ ಮಂಗಲಮಹಾ ಶ್ರೀ ॥ ಶ್ರೀ ಶಾಲಿವಾಹನಶಕ ೧೬೫೭ನೆಯ ರಾಕ್ಷಸ ಸಂವತ್ಸರದ ಕಾರ್ತ್ತಿಕ ಬ ೧೦ ಬುಧವಾರ ಸೂರ್ಯನು ಪೂರ್ವ್ವ ಪ್ರತಿಷ್ಠೆಯಾದ ಧನುರ್ಲಗ್ನದಲ್ಲು ವೂಮತ್ತೂರ ಹಳೆಬಸದಿಯ ಕಳಿಲೆಸೂರಿ ಪಂಡಿತರ ಮಗನು ಪಂಡಿತನು ತನಗೆ ಬೇಕಾಗಿ ಬರೆದ ಅಬ್ಧಿಕಲ್ಪಕ್ಕೆ ಮಂಗಲಮಹಾಶ್ರೀ॥ ಹರದನ ಹಳ್ಳಿಯಲ್ಲು ಬರೆದು ಸಂಪೂರ್ಣವಾಯಿತು ॥

ವಿಷಯ : ಜ್ಯೋತಿಶ್ಶಾಸ್ತ್ರದ ಸಂಹಿತಾಸ್ಕಂಧದಲ್ಲಿ ತಿಳಿಸಿರುವ ಮಳೆಯೋಗ, ಉತ್ಪಾತ ಮೊದಲಾದುವುಗಳ ಫಲ.

ವಿಶೇಷ : ಅಶುದ್ಧ ಪ್ರತಿ, ಪ್ರತಿಯಕಾಲ ಕ್ರಿ.ಶ ೧೭೩೫. ಕೆಲವು ಪದ್ಯಗಳ ಅಂತ್ಯದಲ್ಲಿ 'ಜಿನಪದಭೃಂಗ' ಎಂದು ಜಿನೇಂದ್ರಮಾಲೆಯಲ್ಲಿರುವಂತೆಯೆ ಇರುವುದರಿಂದ ಆ ಗ್ರಂಥ ಕರ್ತೃವೇ ಈ ಕೃತಿಯನ್ನೂ ರಚಿಸಿರಬಹುದು. ಈ ಕಟ್ಟಿನಲ್ಲಿ ಪಂಚದಶ ಮೂಹೂರ್ತಗಳ ವಿಚಾರ, ಬಿಂದುಲಕ್ಷಣ ಈ ಎರಡು ಕೃತಿಗಳೂ ಸಂಗೃಹೀತವಾಗಿವೆ. ಕೊನೆಯಲ್ಲಿ ಜ್ವರಕ್ಕೆ ಔಷಧವನ್ನು ಬರೆದಿರುವ ಎರಡು ಗರಿಗಳಿವೆ. ಆದರೆ ಕ್ರಮಾಂಕ ಬೇರೆಯಾಗಿರುವುದರಿಂದ ಈ ಗರಿಗಳು ಬೇರೆ ಕಟ್ಟಿನವಿರಬಹುದು.

64

ಕೆ.ಎ ೨೯೨/೧	ಅಬ್ಧಿಕಲ್ಪ	ಕಂದ
೧೩" × ೮"	?	?
೧–೨೪ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಅಬ್ಧಿಕಲ್ಪ ಬರೆಯುವದಕ್ಕೆ ನಿರ್ವ್ವಿಘ್ನಮಸ್ತು ॥ ಅಬ್ಧಿಕಲ್ಪವೆಂಬ ನಿಮಿತ್ಯ ॥

ಕರುಣಿಸು ವೃಷಭಾರೂಢನೆ
ಕರುಣಿಸು ಖಗಪತಿಸುತನ ಗೆಲಿದಾಧೀಶನೆ
ಕರುಣಿಸು ನಿಜಪದವೀವನೆ
ಕರುಣಿಸು ಕಮಿಹೆರದ್ದಿ ಶಲದ್ದಿಶ್ವರನೇ ॥ ೧ ॥

ಜಿನಸಮುದ್ರೊಳಗೆ ಪುಟ್ಟಿಹ
ಜಿನನುಂ ಪೂಜಿಸುವ ಮತ್ತೆ ಅನುದಿನವೋರುಂ
ಜನರೆಂದು ಪೊಗಳುತಿಹನಂ
ಜಿನಮುನಿಶವನು ನೆರದು ಪೇಳಿದ ಫಲಮುಂ ॥ ೨ ॥

ವೃಷ್ಟಿಯ ಚಿನ್ನವನರಿದಾಕ್ಷಣ
ದೃಷ್ಠಿವ ಕೇಳ್ಳೆಯ್ಯ ಅಬ್ಧಿಕಲ್ಪದ ಫಲಗಳ
ಶ್ರಿಷ್ಟಿಗಿನಿತೆಂದು ಪೇಳುವೆ
ಕಟ್ಟಳೆಗಳನೊರೆದನಾದ ಜಿನಪದ ಭೃಂಗಾ ‖ ೩ ‖

ಅಂತ್ಯ : ಕ್ರೂರದ ಗ್ರಹಯೋಗವಾಗಲು
ಹಾರದಿ ಮಘೆಯೊಳಗೆ ಪುತ್ರ ನಿಲ್ಲಲು ಮತ್ತಾ
ಸೂರ ರವಿ ಮಧ್ಯ ಅಂತ್ಯಕ್ಕೆ
ಮೇರೆಗೆ ಬಂದಿರಲು ಅಗ್ನ್ಯರ್ ಕುಂದುಗಳಕ್ಕುಂ ‖ ೨೫ ‖

ಅಂತೂ ಅಧ್ಯಾಯ ೫೬ ಗ್ರಂಥ ೫೭೦ ಕ್ಕಂ ಮಂಗಳಮಹಾಶ್ರೀ ‖
ಅಬ್ಧಿಕಲ್ಪ ಸಮಾಪ್ತಾ ‖ ಶ್ರೀ ‖

ವಿಷಯ : ಜ್ಯೋತಿಶ್ಯಾಸ್ತ್ರದ ಸಂಹಿತಾಸ್ಕಂಧದಲ್ಲಿ ತಿಳಿಸಿರುವ ಮಳೆಯೋಗ ಉತ್ಪಾತ ಮೊದಲಾದುವುಗಳ ಫಲ.

ವಿಶೇಷ : ತಪ್ಪು ಅಧಿಕ. ಕೆಲವು ಪದ್ಯಗಳು ಜಿನೇಂದ್ರಮಾಲೆಯ ಪದ್ಯಗಳಂತೆ 'ಜಿನ ಪದಭೃಂಗಾ' ಎಂದು ಮುಗಿಯುತ್ತವೆ. ಈ ಪುಸ್ತಕದಲ್ಲಿಯೇ ಜಾತಕ ಚಂದ್ರಿಕಾಗ್ರಂಥದ ಕರ್ಣಾಟ ಟೀಕೆ ಮತ್ತು ಜಿನೇಂದ್ರಮಾಲಾ ಎಂಬ ಕೃತಿ ಗಳಿವೆ. ಮೋಡಿ ಅಕ್ಷರ.

65

ಕೆ. ಎ. ೩೨೦	**ಅಬ್ಬಲೂರು ಚರಿತ್ರೆ**	ಸಾಂಗತ್ಯ
೧೩″ × ೮.೪″	ಶಾಂತನಿರಂಜನ	?
೧-೪೨ ಪತ್ರ	೨೪ ಪಂಕ್ತಿ	೧೨ ಅಕ್ಷರ

ಆದಿ : ಅಬ್ಬಲೂರು ಚರಿತ್ರೆ ಸದ್ಗುರುಸಾರ ಸಂಪದಮಂ ಬರೆವುದಕ್ಕೆ ಶುಭಮಸ್ತು.
ಪಿಂಡಶತಬಾಂದಲಕ್ಕಾಗಿ ಕದ್ಯುಕ್ತನಂ
ಸಂದ ಸರಣಿಯ ಮರಳಿ ಯೌವ್ವನಾರ್ತನ ಮಾಡಿ
ಕೆಂಡು ಭವ್ಯರ ಪಡೆಯುಂ ಜಿನನಿರ್ದ ತಾಣಕ್ಕೆ ನಂದಿವಾಹನ ದೇವನ

ತಂದು ಪೀಠಂಗೊಳಿಸಿ ರಾಮನಂ ನೆರೆ ಗೆಲಿಸಿ
ಒಂದು ರೂಪಿನೊಳಿರ್ದು ಮೂರು ನಾಮವ ತಾಳ್ದು
ಬಂದು ಗೌತಮಪುರದಿ ನಿಂದ ಶ್ರೀ ಗುರುವಿನಾಯಸಕಮಂ ಪೇಳ್ವೆನೊಲಿದು
॥ ೧ ॥

ತಾವರೆಗಯ್ಯನ ತಾಯಯ್ಯನಳಿಯಾನ
ಪ್ರೀಯಾಳ ಮಗಳ ಗೆಲಿದನಾ
ಅವ್ವನ ಮಗಳ ಗಂಡಗೆ ಪಾಶುಪತವಿತ್ತ
ದೇವನ ಪಾದಕೊಂದಿಸುವೆ ॥ ೨ ॥

ಅಂತ್ಯ : ಉಘೆಯೆನ್ನಿ ಶರಣರು ಉಘೆಯೆನ್ನಿ ಮರ್ತ್ಯರು
ಉಘೆಯೆನ್ನಿ ಸಕಲ ಜಾತಿಗಳು
ಉಘೆಯೆನ್ನಿ ಒಡೆಯರು ಉಘೆಯೆನ್ನಿ ಭಕ್ತರು
ಉಘೆಉಘೆಯೆಂದರರ್ತಿಯಲಿ ॥ ೯೪ ॥

ಈ ಪುಣ್ಯಕಥೆಯ ಕೇಳಿದ ಮನುಜರಿಗೆಲ್ಲ
ಪಾಪವಿಮೋಚನವಹುದು
ಕಾಪಾಲಿಯೊಲಿದು ಸಾಲೋಕ್ಯಪದವನೀವ
ಕಾಪುರುಷನ ವೊಲಿದಪರೆ ॥ ೯೫ ॥

ಅಂತು ಸಂಧಿ ಐದಕ್ಕಂ ಪದನು ೫೦೫ಕ್ಕಂ ಮಂಗಳಂ.
ಶ್ರೀಮಜ್ಜೀಯಾಭ್ಯುದಯ ಶಾಲಿವಾಹನಶಕ ವರುಷ ಮನ್ಮಥ ಸಂವತ್ಸರದ ವೈಶಾಖ ಬ ೧೦ ಚಂದ್ರವಾರಕ್ಕೆ ಅಬ್ಬಲೂರು ಚರಿತ್ರೆ ಸಮಾಪ್ತಂ.

ವಿಷಯ : ಏಕಾಂತರಾಮನ ಚರಿತ್ರೆ.

ವಿಶೇಷ : ಪ್ರತಿಯ ಸ್ಥಿತಿ ಉತ್ತಮವಾಗಿದೆ. ಶಕಟರೇಫವಿದೆ. ಅಲ್ಲಲ್ಲಿ ಪದಗಳು ಲುಪ್ತವಾಗಿವೆ. ೧೩ನೇ ಕ್ರಮಾಂಕದ ಎರಡು ಪತ್ರಗಳಿವೆ. ಪತ್ರದ ಮೊದಲಲ್ಲಿ "ಷಿಕಾರಿಪುರದ ತಾಲ್ಲೂಕು ಸುರಗಿಹಳ್ಳಿ ಶ್ರೀಮಾನ್ ಬಸಪ್ಪನವರಿಂದ ಬಂದಿದ್ದ ಹಸ್ತಪ್ರತಿಯಿಂದ ತಾ. 14-8-1942 ರಂದು ಪ್ರತಿ ಎತ್ತಲಾಗಿದೆ.

66

ಕೆ. ಬಿ. ೪೫೯/೧ ಅಭಿಧಾನ ವಸ್ತುಕೋಶ (ಸಟೀಕು) ಕಂದ, ವೃತ್ತ, ಟೀಕು

ಲ.೨" × ೬.೬" ನಾಗವರ್ಮ ಸು. ೧೧೪೫

೧–೨೬೯ ಪತ್ರ ೧೨ ಪಂಕ್ತಿ ೧೧ ಅಕ್ಷರ

ಆದಿ: ಅಭಿದಾನವಸ್ತು ಕೋಶ ಸಟೀಕಾ

॥ ಸ್ವರ್ಗವರ್ಗಃ ॥

ದೇವಾದಿ ದೇವನಭವಂ
ಕೇವಳಬೋಧ ಪ್ರಬುದ್ಧ ತತ್ವಂ ಮುಕ್ತಿ
ಶ್ರೀ ವಲ್ಲಭನೆಮಗೀಗೆ ಸು
ಖಾವಾಪ್ತಿಯನೊಸೆದು ವರ್ಧಮಾನಜಿನೇಂದ್ರಂ ॥ ೧ ॥

ಟೀಕು ॥ ಯೆಲ್ಲಾ ದೇವರಿಗೊಡೆಯನಾದ ಅಭವಂ । ಸಾವು ಹುಟ್ಟಿಲ್ಲದ । ಕೇವಳಬೋಧ । ಜ್ಞಾನವೇ ರೂಪಾದ । ಪ್ರಬುದ್ಧ ತತ್ವಂ । ಅರಿಯಲ್ಪಟ್ಟ ಸಪ್ತ ತತ್ವಂಗಳನುಳ್ಳ । ಮುಕ್ತಿ । ಶ್ರೀವಲ್ಲಭನು । ಮೋಕ್ಷ ಲಕ್ಷ್ಮಿಗೆ ವೊಡೆಯನಾದ ವರ್ಧಮಾನ ಜಿನೇಶ್ವರನು । ಯಮಗೆ ವೊಲಿದು । ಇಹಸುಖ ಪರದ ಗತಿಯನು ಕೊಡಲಿ ॥ ೧ ॥

ಅಂತ್ಯ: ಅನುಬದ್ಧಂ ಪ್ರಾರಬ್ಧದೊ
ಳನುವೃತ್ತಿಯೊಳಿಸಗುಮಿಂನು ಪೂರ್ವೋಕ್ತಿಯಿಮಿಂ
ತೊನದಿರೆ ತತ್ಸಂಬದ್ಧಂ
ವಿನಯುತಮಪ್ಪಂತು ಸಕಲಯುತದಿ ನೆಗಳ್ಗುಂ ॥
ಇತಿ ನಾಗವರ್ಮ ವಿರಚಿತಮಪ್ಪ ನಾನಾರ್ಥಂ ಸಮಾಪ್ತಃ॥ ಮಂಗಳಮಹಶ್ರೀ

ಶ್ರೀ ಗುರುಬಸವ ಉಮಾಮಹೇಶ್ವರ ವಿಘ್ನೇಶ್ವರಸ್ಕಂಧರೇಣುಕ ದಾರುಕ ಮೊದಲಾದ ದಶದಿಕ್ಕಿನಲ್ಲಿರುವ ಸಕಲ ಪ್ರಮಥರು ಯೀ ಪುಸ್ತಕದಲ್ಲಿರಲಿ. ಶೈವ ಮತದಲ್ಲಿ ಸರ್ವೋತ್ಕರ್ಷವ ಮಾಡಲಿ ಶುಭಕೃತು ಸಂವತ್ಸರದ ಆಶ್ವೀಜ ಬಹುಳ ತ್ರಯೋದಶಿ ಸೋಮವಾರ ಪ್ರಾತಃಕಾಲದಲ್ಲಿ ಬರೆದು ಸಮಾಪ್ತಿಯಾದ ಪುಸ್ತಕಕ್ಕೆ ಜಯಮಂಗಲವ ಮಾಡಲಿ ಶಂಭುಲಿಂಗವು ಮಳರಿ ವಂಶದಲ್ಲಿ ಪ್ರಸಿದ್ಧವಾದ ನಿರಾಭಾರಿ ವೀರಶೈವ ಮತದಲ್ಲಿ ಹುಟ್ಟಿದ ಪಟ್ಟವಾದ ಶ್ರೀ ಸಿದ್ಧಲಿಂಗ ಸ್ವಾಮಿಗಳು ಬರೆದವರು. × × ×

ಅರಿಯದವರಾದರೂ ಅಕ್ಷರ ತಿಳಿಯದೆಯಿದ್ದರೂ ಬಿಡದೆ ಮುಂದಕ್ಕೆ ಹೋದಿದಲ್ಲಿ ಸುಂಪಾಂಗವಾಗಿ ಅರಿವುದು.

ವಿಷಯ : ಕನ್ನಡ ನಿಘಂಟು.

ವಿಶೇಷ : ಪ್ರತಿಯುು ಸುದೃಢವಾಗಿದೆ. ಶಕಟರೇಫವಿದೆ. ೨೬೮ನೆಯ ಪತ್ರದ ಹಿಂಭಾಗ ಮತ್ತು ೨೬೯ನೆಯ ಪತ್ರಗಳಲ್ಲಿ ಸ್ವರ್ಗವರ್ಗ, ಕಾಲವರ್ಗಾದಿಗಳ ವಿಭಾಗವಿವೆ. ೨೪೫ನೆಯ ಕ್ರಮಾಂಕ ೨೪೪ನೆಯ ಪತ್ರದ ಹಿಂಭಾಗದಲ್ಲಿಯೇ ಇದೆ. ಪತ್ರದ ಮೊದಲಲ್ಲಿ "ಮಂಜರಾಬಾದ್ ತಾಲ್ಲೂಕು ಯಸಳೂರು ಹೋಬಳಿ ಹೆಗ್ಗಡಿಹಳ್ಳಿ ಶ್ರೀ ಸಾವನಳವರಿಂದ ಬಂದ ಪ್ರತಿಯ ಮೇಲೆ ಕಾಪಿಯಾಗಿದೆ" ಎಂದು ಬರೆದಿದೆ. ಇದೇ ಪುಸ್ತಕದಲ್ಲಿ ಶಿವಪೂಜಾವಿಧಾನವೆಂಬ ಮತ್ತೊಂದು ಗ್ರಂಥವಿದೆ.

67

ಕೆ. ಎ. ೧೧೧	**ಅಭಿನವದಶಕುಮಾರ ಚರಿತೆ**	ಚಂಪು
೧೨.೫" × ೭.೭"	ಚೌಂಡರಾಜ	ಸು ೧೨೧೦
೧–೧೪೨ ಪತ್ರ	೧೬ ಪಂಕ್ತಿ	೩೩ ಅಕ್ಷರ

ಆದಿ : ಅಭಿನವದಶಕುಮಾರ ಚರಿತೆ ಪ್ರಾರಂಭಃ |
ಶ್ರೀಮರಯನುದಾರದೆಂಮರದೊಳೊಪ್ಪಿರೆ ತಾಳ್ವ ದಶಾವತಾರ ಸಂ
ದಾಯಕದೆಂದಿರಡೋದಿ ಬಲಮಂ ತವೆ ಗೆಲ್ದನು ಮಸ್ವಿಕಾಯಮಂ
ಸಾಯಕ ಸತ್ವದಿಂ ಪೊರೆದ ಲೋಕಜನಕ್ಕುತಿವೆತ್ತಾ ಪಂಡರಿ
ರಾಯನಭಂಗದಿಠ್ಠಲನಲಂಪಿನೊಳಗೆತ್ತಸಿದ್ಧಿಯಂ ‖ ೧ ‖

ಅಂತ್ಯ : ಕಂ|| ಯಿಹಲೋಕ ನಿಂದಿಪರ ಪರ
ರರ್ಥ ಕಾಂಕ್ಷೆಗೈವರ ಲೋಭದಿಂ ತನುವಂ
ನರಳಿಸುವರು ಪರಲೋಕಹಿತಂ
ತನಗಪ್ಪುದೆಂದು ನುಡಿವುದಂ ಕೇಳ್ದನಭಂಗವಿಠಲಭೃತ್ಯಂ ‖ ೨ ‖

ಗದ್ಯ|| ಯಿದು ನಿಖಿಳಬುಧಜನ ಮನೋವನಜವನದಿವಾಕಿರಣ ಪ್ರತಿಮಪ್ರಸಂಗ ಶ್ರೀಮದಭಂಗವಿಠಲಪದಾಂಭೋಜ ಮತ್ತ ಮದುಸೂದನ ನಂದನ ಸರಸಕವಿ ಚೌಂಡರಾಜ ವಿರಚಿತಮಪ್ಪ ಚತುರ್ಥಾಶ್ವಾಸ ಪದ ೬೫ಕಂ ಮಂಗಳಮಹಾಶ್ರೀ ‖

ವಿಷಯ : ದಂಡಿಕವಿಯ ಸಂಸ್ಕೃತ ದಶಕುಮಾರ ಚರಿತ್ರೆಯ ಕನ್ನಡ ಕಥೆ.

ವಿಶೇಷ : ಮೋಡಿ ಅಕ್ಷರ. ತಪ್ಪು ಅಧಿಕ.

68

ಕೆ.ಬಿ. ೩೧೧	**ಅಭಿಮನ್ಯು ಕಾಳಗ**	ಯಕ್ಷಗಾನ
೭.೭" × ೬.೫"	?	?
೧–೩೫ ಪತ್ರ	೧೬ ಪಂಕ್ತಿ	೨೬ ಅಕ್ಷರ

ಆದಿ : ವೃತ್ತ ॥ ಶ್ಲೋ ॥ ಶ್ರೀಪದ್ಮಾಸನ ಪೂಜಿತಾಂಘ್ರಿಕಮಲಂ ಸದ್ವಾಯು ಪುತ್ರ ಪ್ರಿಯಂ
ಆಪದ್ಬಾಂಧವಮಿಂದಿರೇಶಮತುಳಂ ಆನಂದತೀರ್ಥಾರ್ಚಿತಂ
ಪಾಪಾಂಭೋದಿ ಘಟೋದ್ಭವಂ ಶುಭಕರಂ ಪಂಕೇಜನೇತ್ರಂ ಹರಿಂ
ಗೋಪಾಲಂ ಗುಣಸಾಗರಂ ಗಿರಿಧರಂ ಧ್ಯಾಯಾಮಿ ಕೃಷ್ಣಂ ಸದಾ ॥ ೧ ॥

ರಾಗ ॥ ನಾಂತೊ " ಝುಂಪೆ "
ಜಯ ಮಹಾಗಣನಾಥ । ಜಯರಾಮ ಸುಪ್ರೀತ । ಜಯತು ಸದ್ಗುಣಯುತ ಜಯ ಬಹುಖ್ಯಾತ ॥

ಅಂತ್ಯ : ಶರದಿಂದು ಭಾಸನಿಗೆ । ಶರಣುಜನ ಪೋಷನಿಗೆ
ನಿರುಪಮುಭೃಂಗಾಳಕಿಗೆ ಗುಣಪೂರ್ಣಗೇ
ಶರರುಹಾಸನವ ಪಟ್ಟದ ರಾಣಿ ಶಾರದೆಗೆ
ಶರದವಾಹನ ಮುಖ್ಯಸುರನಮಿತಗೆ ॥ ೨೪೭ ॥

ಪಶ್ಚಿಮಾಂಬುಧಿಯ ತಡಿಯಲಿ ನಿಂದ ಮಾರುತಿಗೆ
ನಿಶ್ಚಯವ ತೋರಿ ಪೂಜೆಯಗೊಂಬಗೆ
ಆಶ್ಚರ್ಯಮಹಿಮಗೆ ಆನಂದಭರಿತಗೆ
ಸಚ್ಚರಿತ ಮಧ್ವಪತಿ ಶ್ರೀ ಕೃಷ್ಣಗೆ ಜಯಮಂಗಳಂ ॥
ಸೈಂಧವನ ವಧೆ ಸಂಪೂರ್ಣ ಮಂಗಳ ಮಹಾಶ್ರೀ ॥

ವಿಷಯ : ಅರ್ಜುನನ ಮಗನಾದ ಅಭಿಮನ್ಯುವಿನ ಯುದ್ಧ.

ವಿಶೇಷ : ಪದಗಳನ್ನು ಅಲ್ಲಲ್ಲಿ ಅಳಿಸಿ ಮತ್ತೆ ಬರೆದಿದೆ.

69

ಕೆ. ಬಿ. ೪೬೦/೨	ಅಭಿಮನ್ಯುಕಾಳಗ	ಯಕ್ಷಗಾನ
೨.೭″ × ೫.೫″	?	?
೬೬–೮೪ ಪತ್ರ	೨೨ ಪಂಕ್ತಿ	೨೧ ಅಕ್ಷರ

ಆದಿ : ೨೫ ನೇ ವಚನಾ । ರ್‍ರಾಗ ಸವುರ್‍ರಾಷ್ಟ್ರಾ ತ್ರಿವುಡೆ ॥ ೨೫ ॥

ಬೇರಿ ಡಂಕ ನಗಾರಿಗಳು ಮಿಗೆ ಭೋರಿಡುತ । ನಾಲ್ದೆಸೆಯೂ । ಕಂಪಿಸೆ । ಭೂರಿಭಿರಿದಿಗ । ಳಿಂದ ಪೊರಟ್ವಾನು । ಥಾರಭಟನೂ ॥ ೧೧೬ ॥

ಭೂರಿಭುಜ ಸಹ ಬರಲಿ । ಕಿತ್ತ ಸಾಲುರತ್ತಿಗೆ । ಸೂಚಿಸಿದ । ರಣದೀರಾ ॥ ಪಾರ್ತನು ಭುಜವ । ನೊದರಿಸುತಾರ್‍ರ್ರಭಟ್ಟಸೀ ॥ ೧೧೭ ॥

ಅಂತ್ಯ : ಭಕ್ತಿಯಲಿ ಭರದೋದಿ ಕೇಳಿದ್ದ । ಭಕ್ತಿಜನರ್ರ ಮನೋವ್ರಥಂಗಳ । ಶಕ್ತನಾಹ ಶರ್ರಪುರದ ಗಣಪತಿಯಿತ್ತು ಪೊರೆವಾ ॥ ೧೮೪ ॥

ಮಂಗಳಃ ॥ ೩೭ ॥

ಮಂಗಳಂ ಮತಿದಾಯಕ । ದಿನಮಣಿಗೆ ಮಂಗಳಂ ಶಿದ್ದಾಚರಣ । ಸೇವ್ಯಾಗೇ ಮಂಗಳಂ ಶರಪುರದ । ಶ್ರೀ ಮಹಾಗಣಪತೀಗೆ ಮಂಗಳಂ ಶರಭಲಿಂಗೆ ಸ್ವಾರನಿಗೇ ॥ ೧೮೫ ॥ ಅಭಿಮಂನ್ಯುನ ಕಾಳಗ ಸಂಪೂರ್ಣ ಅಂತು ಸಂಧಿ ೨ ಕಾಂ ಪದನು ೩೬೬ ಕಾಂ ಮಂಗಳಮಹಾ ಶ್ರೀ ಶ್ರೀ ಶ್ರೀ ॥

ವಿಷಯ : ಸೈಂಧವನನ್ನು ಅರ್ಜುನನು ಸಂಹರಿಸಿದ ಕಥೆ.

ವಿಶೇಷ : ಗ್ರಂಥವು ಸಾಧಾರಣವಾಗಿದೆ. ಅಭಿಮನ್ಯುವಿನ ಕಾಳಗವು ಪ್ರಾರಂಭದಿಂದ ದೊರೆತಿಲ್ಲ.

70

ಕೆ. ೨೦೪	ಅಮರಕೋಶ (ಸಟೀಕು)	ಶ್ಲೋಕ, ಟೀಕು
೮.೪″ × ೨.೪″	ವಿಠಲ	?
೧–೧೯೮ ಪತ್ರ	೧೧ ಪಂಕ್ತಿ	೪೬ ಅಕ್ಷರ

ಆದಿ : ಯಸ್ಯ.................ಸಿಂಧೋ ರಗಾಧಸ್ಯಾನಘಾ ಗುಣಾಃ ।
ಸೇವ್ಯತಾಮಕ್ಷಯೋ ಧೀರಾಸ್ಸಶ್ರೀಯ್ಯೇಚಾಮೃತಾಯ ಚ ॥ ೧ ॥

ಈ ಶ್ಲೋಕಾರ್ಥವೇನೂ ಯಂದರೆ ಶಾಸ್ತ್ರಕರ್ತುವಿಗೆ ಶಾಸ್ತ್ರಾರಂಭದೊಳು ಶಿಷ್ಟಾಚಾರ ಪರಿಪಾಲನೆಯು ಮಾಡತಕ್ಕದ್ದು. ಶಿಷ್ಟಾಚಾರವೆಂದರೆ ಮಂಗಳ ಕ್ರಿಯೆ. ಮಂಗಳಕ್ರಿಯೆಯೆಂದರೆ ತನ್ನ ದೇವತಾಪ್ರಾರ್ಥನೆ. ಶೈವರ್ಗೆ ಶಿವನುಂ ವೈಷ್ಣವರ್ಗೆ ವಿಷ್ಣುವುಂ ಜೈನರ್ಗೆ ಜಿನನುಂ ಬೌದ್ಧರ್ಗೆ ಬುದ್ಧನುಂ ಯೆಂದವರ ವರ್ಗೆ ಅಧಿದೇವತೆಯಾದ ಇಷ್ಟದೇವತೆಯಲ್ಲಿ ಮಹತ್ತ್ವೋಪಪಾದನೆಯಂ ಮಾಡಿ ಪ್ರಾರ್ಥನಾಪೂರ್ವಕವಾಗಿ ನಮಸ್ಕಾರಾ ಮಾಡಿದನು ಯಂಬದು.

ಅಂತ್ಯ : ಯುಷ್ಮದಾದಿಗಳು ತ್ರಿಲಿಂಗ ಸಮಂಗಳು । ತ್ವಂ ಪುಮಾನ್ । ತ್ವಂ ಸ್ತ್ರೀ ॥ ಅಹಂ ಪುಮಾನ್ । ಅಹಂ ಸ್ತ್ರೀ॥ ಅಲಿಂಗಶೇಷಃ॥ ವಕ್ತಾ ವಾಚಸ್ಪತಿರ್ಯತ್ರ ಶ್ರೋತಾ ಶಕ್ರಸ್ತಥಾಪಿ ತಾ । ಶಬ್ದಪಾರಾಯಣಸ್ಯಾಂತಂ ನಗಶೌ ತತ್ರ ಕೇವಲಂ ॥ ವಿದಗ್ಧಚೂಡಾಮಣಿನಾ ವಿಠಲೇನ ನಿರ್ಮ್ಮಿತೇ ವ್ಯಾಖ್ಯಾನೇಮರ ಕೋಶಸ್ಯಾಕೃತೀಯ್ಯು ಕಾಂಡಉಂಭಿ ತಷಿಜಿಹ್ವಾ ಫಲವ ಸಂಸ್ತರೇಷು ಪ್ರಭಾ ಚಂದನೈಬಿಂಬೋರ್ಸ್ಯಷ್ಠವ್ಯ ಮುಖೇನ ಚೋಪಚರಿತೋಯದ್ವಿಪ್ರಲಂಭಜ್ವರಃ.

ವಿಷಯ : ಅಮರಕೋಶದ ವ್ಯಾಖ್ಯಾನ.

ವಿಶೇಷ : ಕೊನೆಯ ಕೆಲವು ಪತ್ರಗಳು ಹರಿದಿವೆ.

71

ಕೆ. ೩೭೮	**ಅಮರಕೋಶ (ಸಟೀಕು)**	ಶ್ಲೋಕ, ಟೀಕು
೧೯.೫" × ೧.೯"	ವಿಠಲ	?
೧–೧೧೭ ಪತ್ರ	೮ ಪಂಕ್ತಿ	೮ ಅಕ್ಷರ

ಆದಿ : ದಂತಕಾಂತಿ ಶಲಾಕಾಭಿಃ ಪಾಣಿಪೃಷ್ಠಗತಶ್ಶುಕಃ
ಪಂಜರಸ್ಥಯಿವಾಭಾತಿ ಯಸ್ಯಾಸ್ತಾಂ ನೌಮಿ ಭಾರತೀಂ ॥
ಪಾತ್ರೋ ವಾದಿಮೃಗೇಂದ್ರಸ್ಯ ರಾಮಭಟ್ಟ ವಿಪಶ್ಚಿತ:
ಸಾಹಿತ್ಯವನಚೈತ್ರಸ್ಯ ದೇವರಸ್ಯ ತನೂಭವಃ
ಕವಿವಿಠ್ಠಲನಾಮಾಹು ನಾಮಲಿಂಗಾನುಶಾಸನಂ
ವ್ಯಾಚಕ್ಷೇ ನಿಪುಣಂ ಲೋಕಪ್ರೀತಯೆ ಲೋಕಭಾಷಯಾ॥
ಯಸ್ಯಜ್ಞಾನ ದಯಾ ಸಿಂಧೋರಘಥಸ್ಯಾನಘಾ ಗುಣಾಃ ।
ಸೇವ್ಯತಾಮಕ್ಷಯೋ ಧೀರಾಃ ಸಃ ಶ್ರೀಯೆ ಚಾಮೃತಾಯ ಚ ॥

ಅಂತ್ಯ : ಶಿಷ್ಟಪ್ರಯೋಗತಃ। ಉಕ್ತಶೇಷಂಗಳು ಶಿಷ್ಯಪ್ರಯೋಗ ಬೋದ್ಧವ್ಯಂಗಳು॥ ಅಂತೆ ಪೇಳಲ್ಪಟ್ಟುದು । ವಕ್ತಾ ವಾಚಾಸ್ಪತಿರ್ಯತ್ರ ಶ್ರೋತಾ ಶಕ್ರಸ್ತಥಾ ಪಿತೌ । ಶಬ್ದಪಾರಾಯಣಸ್ಯಾಂತಂ ನ ಗತೌ ತತ್ರ ತೇ ವಯಂ । ಲಿಂಗಾದಿ ಸಂಗ್ರಹವರ್ಗಃ ॥ ಶ್ರೀ ॥

ವಿದಗ್ಧಚೂಡಾಮಣಿನಾ ವಿಠ್ಠಲೇನ ವಿನಿರ್ಮಿತೇ
ವ್ಯಾಖ್ಯಾನೇಮರಕೋಶಸ್ಯ ತೃತೀಯಃ ಕಾಂಡವುಂಭಿತಃ ॥

ಜಿಹ್ವಾಪಲ್ಲವಸಂಸ್ತರೇಷು ಸುಧಿಯಾಂ ದಂತಪ್ರಭಾಚಂದ್ರ ನೈ
ರ್ಬಿಂಬೋಷ್ಠವ್ಯಜನೇನ ಚೋಪಚರಿತೋ ಯದ್ವಿಪ್ರಲಂಭ ಜ್ವರಃ
ಜಾನೀವೊಮರಸಿಂಹಮೇವ ತಮಿಮಂ ಸಂಯಾಂಜತೀ ಸಾಂಪ್ರತಂ
ವಾಣೀ ನಂದತಿ ವಿಠ್ಠಲಸ್ಯ ವಪುಷಾ ಭೂಯೋವತೀರ್ಣಂ ಭುವೀ ॥
ಇತಿ ವಿದಗ್ಧ ಚೂಡಾಮಣೌ.

ವಿಷಯ : ಅಮರಕೋಶದ ವ್ಯಾಖ್ಯಾನ.

ವಿಶೇಷ : ಪ್ರತಿ ಸುದೃಢವಾಗಿದೆ.

72

ಕೆ.ಎ. ೨೧೬	**ಅಮರಕೋಶ (ಸಟೀಕು)**	ಶ್ಲೋಕ, ಟೀಕು
೧೨.೬" × ೭.೮"	ಕಾಗದ	?
೧–೧೭೬ ಪತ್ರ	೨೦ ಪಂಕ್ತಿ	೨೪ ಅಕ್ಷರ

ಆದಿ : ನಿರ್ವಿಘ್ನಮಸ್ತು, ವಿಠ್ಠಲೀಯವು

ದಂತ ಕಾಂತಿ ಶಲಾಕಾಭಿಃ ಪಾಣಿಪ್ರಷ್ಠಗತಶ್ಶುಕಃ
ಪಂಜರಸ್ಥ ಇವಾ ಭಾತಿ ಯಸ್ಯಾಸ್ತಾಂ ಸೌಮಿ ಭಾರತೀಂ ॥ ೧ ॥
ಪಾತ್ರೋ ವಾದಿಮೃಗೇಂದ್ರಸ್ಯ ರಾಮಭಟ್ಟ ವಿಪಶ್ಚಿತಃ
ಸಾಹಿತ್ಯವನಚೈತ್ರಸ್ಯ ದೇವರಸ್ಯ ತನೂಭವಃ ॥ ೨ ॥
ಕವಿ ವಿಠ್ಠಲ ನಾಮಾಹು ನಾಮಲಿಂಗಾನುಶಾಸನಂ
ವ್ಯಾಚಕ್ಷೇ ನಿಪುಣಂ ಲೋಕಪ್ರೀತಯೆ ಲೋಕಭಾಷಯಾ ॥ ೩ ॥
ಯಸ್ಯ ಜ್ಞಾನದಯಾಸಿಂಧೋರಗಾಧಸ್ಯಾನಘಾಗುಣಾಃ
ಸೇವ್ಯತಾಮಕ್ಷಯೋಧೀರಾಸ್ಯಶ್ರೀಯೈ ಜಾಮತಾಯ ಚ ॥ ೪ ॥

ಟೀ॥ ಶಾಸ್ತ್ರಕರ್ತಗೆ ಶಾಸ್ತ್ರಾರಂಭದೊಳು ಶಿಷ್ಟಾಚಾರ ಪರಿಪಾಲನಂ ಕರ್ತವ್ಯಂ ।

ಅಂತ್ಯ : ಶಿಷ್ಟಪ್ರಯೋಗತಃ। ಉಕ್ತಶೇಷಂಗಳಪ್ಪ ನಾಮಲಿಂಗಂಗಳು ಶಿಷ್ಟಪ್ರಯೋಗ ಬೋದ್ಧವ್ಯಂಗಳು। ಅಂತೆ ಪೇಳಲ್ಪಟ್ಟುದು। ವಕ್ತಾ ವಾಚಸ್ಪತಿರ್ಯತ್ರ ಶ್ರೋತಾ ಶಕ್ರಸ್ತಥಾಪಿ ತೌ । ಶಬ್ದ ಪಾರಾಯಣ ಸ್ಯಾಂತನ್ನಗತೌ ತತ್ರ ತೇ ವಯಂ ಶ್ರೀ ಶ್ರೀ ಶ್ರೀ ॥ ಲಿಂಗಾದಿ ಸಂಗ್ರಹವರ್ಗಃ ಶ್ರೀ ಶ್ರೀ ಶ್ರೀ ॥

ವಿದಗ್ಧಚೂಡಾಮಣಿನಾ ವಿಟ್ಠಲೇನ ವಿನಿರ್ಮಿತೇ
ವ್ಯಾಖ್ಯಾನೆಮರಕೋಶಸ್ಯ ತೃತೀಯಃ ಕಾಂಡವುಂಭಿತಃ ॥

ಶ್ಲೋ ॥ ಜಿಹ್ವಾಪಲ್ಲವ ಸಂಸ್ತರೇಷು ಸುಧಿಯಾಂ ದಂತ ಪ್ರಭಾಚಂದನೈ
ರ್ಬಿಂಬೋಷ್ಠ ವ್ಯಜನೇನ ಚೋಪಚರಿತೋ ಯದ್ವಿಪ್ರಲಂಭಜ್ವರಃ
ಜಾನೀಮೋಮರಸಿಹ್ಮವೋವ ತಮಿಮಂ ಸಂಯಾಂಜತೀ ಸಾಂಪ್ರತಂ
ವಾಣೀನಂದತಿ ವಿಠ್ಠಲಸ್ಯ ವಪುಷಾ ಭೂಯೋವತೀರ್ಣಂ ಭುವೀ ॥
॥ ಇತಿ ವಿದಗ್ಧ ಚೂಡಾಮಣೌ ॥

ವಿಷಯ : ಅಮರಕೋಶದ ವ್ಯಾಖ್ಯಾನ.

ವಿಶೇಷ : ತಾನು ಬರೆದಿರುವ ವ್ಯಾಖ್ಯಾನವನ್ನು "ವಿದಗ್ಧಚೂಡಾಮಣಿ" ಎಂದು ಕರೆದುಕೊಂಡಿದ್ದಾನೆ.

73

ಕೆ. ೧೦೨	**ಅಮರಕೋಶ (ಸಟೀಕು)**	ಶ್ಲೋಕ, ಟೀಕು
೧೩.೬" × ೧.೩"	ಲಕ್ಷ್ಮಣಶಾಸ್ತ್ರಿ	ಸು ೧೮೦೦
೧_೧೦೪ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ವಿಶೇಷ್ಯ ನಿಘ್ನೈಸ್ಸಙ್ಕೀರ್ಣೈಃ ನಾನಾರ್ಥೈರವ್ಯಯೈರಪಿ ।
ಲಿಂಗಾದಿ ಸಙ್ಗ್ರಹೈರ್ವರ್ಗಾಃ ಸಮಾನ್ಯೇ ವರ್ಗಸಂಶ್ರಯಾಃ ॥ ೧ ॥

ವಿಶೇಷ್ಯ ನಿಘ್ನೈಃ । ವಿಶೇಷ್ಯಾಧೀನವಾದ ಶಬ್ದಗಳಿಂದಾ । ವಿಶೇಷಣವಾದ ಶಬ್ದಗಳಿಂದಾ । ಯಂಬ ಬಗೆ । ಸಂಕೀರ್ಣೈ ಗುಣಕ್ರಿಯಾದಿ ನಾನಾಶಬ ಗಳಿಂದಾ । ನಾನಾರ್ಥೈಃ । ಬಹುವಿಧವಾದ ಅರ್ಥವುಳ್ಳಂಥಾ ಶಬ್ದಗಳಿಂದ ॥ ಅವ್ಯಯೈಃ । ಅವ್ಯವಾದ । ಶಬ್ದಗಳಿಂದ । ಲಿಂಗಾದಿ ಸಙ್ಗ್ರಹೈ । ಸ್ತ್ರೀಲಿಂಗ

ಪುಲ್ಲಿಂಗ ನಪುಂಸಕಗಳಾ ಪ್ರಕಾರ ಸಂಗ್ರಗಳಿಂದಾ ದ್ವಿಷ್ಟದಿಂದಲು । ವರ್ಗ ಸಂಶ್ರಯಾಃ|ಕಾಂತ ಖಾಂತಾದಿ ಆವ್ವಾವ ವರ್ಗಗಳು ಆಶ್ರಸಿಕ್ಕೊಂಡು ಇದ್ದ । ವರ್ಗಾಃ | ಈ ವಿಶೇಷ್ಯ ನಿಘ್ನಾಸಙ್ಕೀರ್ಣ । ನಾನಾರ್ಥಾ ಅವ್ಯಯ । ಲಿಂಗಾದಿ ಸಂಗ್ರಹಗಳೆಂಬ ವರ್ಗಗಳು । ಸಾಮಾನ್ಯೇ । ಸಾಧಾರಣವಾದ ಶಬ್ದಗಳು | ಸಾಮಾನ್ಯವಾದ ಈ ಮೂರನೇಕಾಂಡದಲ್ಲಿ ಹೇಳಲ್ಪಡುತ್ತವೆ ॥ ೧ ॥

ಅಂತ್ಯ : ಶಿಷ್ಟಪ್ರಯೋಗತಃ | ಲಿಂಗವಿಶೇಷ ವಿಧಾನದಲಿ ಪೂರ್ವಾಪರ ವಿರೋಧ ವಾದ ರಿಪರಲಿಂ । ಆಗಾದು । ಹಾಗೆಂದರೆ ರಕ್ಷಃ | ದುಲದ ಶಬ್ದಗಳಲಿಂ | ಉತ್ತರಪ್ರಯೋಗವಿದ್ದ ಹಾಂಗೆ ಆ ಆಲಿಂಗಲೆ. ರರಿದುನೋಡಿಕೊಂಬುವುದು | ಲಿಂಗಸಂಗ್ರಹ ಸಮಾಪ್ತಃ | ಇತಿ ಶ್ರೀ ಲಕ್ಷ್ಮಣಶಾಸ್ತ್ರಿಣಾ ವಿರಚಿತೇ ಅಮಿತ ಕೋಶ ವ್ಯಾಖ್ಯಾನೆ ತೃತೀಯಕಾಂಡಂ ಸಂಪೂರ್ಣಂ ॥

ವಿಷಯ : ಅಮರಕೋಶ ಮೂರನೆಯಕಾಂಡದ ಟೀಕು.

ವಿಶೇಷ : ಕೆಲವು ಪತ್ರಗಳ ಅಂಚು ಮುರಿದಿದೆ. ಅಕ್ಷರಗಳು ವಿರಳವಾಗಿವೆ. ಲಿಪಿ ನಂದಿನಾಗರಿ.

74

ಕೆ. ೫೧೦	**ಅಮುಗಿದೇವನ ಸಾಂಗತ್ಯ**	ಸಾಂಗತ್ಯ
೯.೫" × ೧.೫"	ಶಿವಲಿಂಗಾರ್ಯ	ಸು ೧೬೦೦
೧–೯೦ ಪತ್ರ	೭ ಪಂಕ್ತಿ	೪೧ ಅಕ್ಷರ

ಆದಿ : ಪ್ಲವಂಗ ಸಂ | ಮಾಗ ಬ ೫ ಲ್ಲು ಶಿದ್ಧರಾಮ್ಮೆಯನವರ ಸಂಗತ್ಯ ಅಂಮಿಗಿ ದೇವಯ್ಯನವರ ಕಾವ್ಯ ಬರೆಯುವದಕ್ಕೆ ಶುಭಮಸ್ತು ॥

ಪದ ॥ ಶ್ರಿಪತಿಗೊಲಿದರ್ಧದೇಹಾವನಿತ್ತನೆ
ಶ್ರೀಪತಿನಯನಾರ್ಚಿತನೇ
ಶ್ರೀಪತಿಯಣುಗಾನ ಶಿರವ ಕರದೊಳಾಂತಾ
ಶ್ರೀಪತಿಸುತಶತ್ರು ಸಲಹೊ ॥ ೧ ॥

× × × × × × × ×

ಅವ ಕವಿಯಿವಕವಿವ ಕವಿಗಿವಿಗಳೂ
ಶಿವಕವಿಗಳಿಗೆಣೆಯುಹರೇ
ಶಿವನ ಭಕ್ತರ ಶಿಶು ಶಿವಲಿಂಗ ಪೇಳ್ದನು
ಅವಿರಳಾತ್ಮಕ ಭಕ್ತಕೃತಿಯಾ ॥ ೧೫ ॥

ಅಂತ್ಯ : ಕಲ್ಲುಸರವಿ ಕಡಿದೊಣಗಿ ಬಿಂನಿಹ ಮರಾ
ಪಲ್ಲೈಸವೇ ಕ್ಕೊಕ್ಕೊದಾ
ಪುಲ್ಲೆಲ್ಲ ಚಿಗುರಾವೆ ಶಿವಲಿಂಗರಾಧ್ಯನಾ
ಸೊಲ್ಲಿನ ಕೃತಿಯು ರಚನೇಗೇ ॥ ೧೧೬ ॥

ಅಂತು ಸಂಧಿ ೩೭ ಕಂ ಪದನೂ ೮೫೨ ಕಂ ಮಂಗಳ ಮಹಾಶ್ರೀ.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರುಷಂಗಳು ೧೭೦೫ ನೆಯ ಕ್ರೋದಿನಾಮ ಸಂವತ್ಸರದ ಶ್ರಾವಣ ಬ ॥ ಪಲ್ವಂಗ ಸಂವತ್ಸರದ ಪಾಲ್ಗುಣಶುದ್ಧ ೫ ವರೆಗೆ ಅಮಿಗಿದೇವಯ್ಯನವರ ಚರ್‍ರಿತೆ ಪುಸ್ತಕವನ್ನು ದೇವ ರಾಜ ಶ್ರೀ ಹಾಗಲವಾಡಿ ಸೀಮೆ ಕೋಟೇಸ್ತಳದ ಕುರುವಿನ ಮುದ್ದಪುರದ ಲಿಂಗಣ್ಣನ ಮಗ ಬೈರಣ್ಣನಿಗೆ ವೋದಿಕೊಳ್ಳುವದಕ್ಕೆ ಬರದುಕೊಟ್ಟ ಪುಸ್ತಕಕ್ಕೆ ಶುಭಮಸ್ತು ॥ × × × ಸಿದ್ಧರಾಮ್ಮೈಯ್ಯನವರ ಸಾಂಗತ್ಯ ಅಮಿಗಿದೇವ್ವೈಯ್ಯ ನವರ ಕಾವ್ಯ ಸಮಾಪ್ತಾ ಮಂಗಳಮಹಾ ಶ್ರೀ ॥

ವಿಷಯ : ಅಮಿಗಿದೇವರ ಕಥೆ.

ವಿಶೇಷ : ೩೧ ನೇ ಓಲೆ ಇಲ್ಲ. ಮಧ್ಯೆ ಕೆಲವು ಓಲೆಗಳ ಅಂಚು ಮುರಿದಿದೆ. ಈ ಕಾವ್ಯಕ್ಕೆ ಸಿದ್ಧರಾಮನ ಸಾಂಗತ್ಯ ಎಂಬ ಹೆಸರೂ ಇದೆ.

75

ಕೆ.ಬಿ. ೧೭೯/೪	**ಅಂಬರೀಷ ಚರಿತ್ರೆ**	ಭಾಮಿನೀಷಟ್ಪದಿ
೮'' × ೬.೪''	?	?
೪೨–೪೬ ಪತ್ರ	೧೪ ಪಂಕ್ತಿ	೩೦ ಅಕ್ಷರ

ಆದಿ : ಅಂಬರೀಶ ನೃಪಾಲನಾ ಸ
ಪ್ತಾಂಬುಧಿ ದ್ವಿಪಾದಿಪತ್ತಿಯನ
ಲ್ಯಂಬುಜಾಸನ ಭಕ್ತಿಯಲಿ ಪಾಲಿಸಿದನೀ ಧರೆಯಾ ॥ ಪ ॥

ಧರಣಿಪತಿ ಕೇಳಾ ಮನುದ್ಭವ
ಧರಣಿಪನಾ ಭಾಗವತದಿಂದವ
ತರಿಸಿದನು ಬಳಿಕಂಬರೀಸ ಮಹಾಮಹೀಪಾಲಾ

ಪರಮ ಭಾಗವತೋತ್ತಮನು ಸ
ಚ್ಚರಿತನಾತನ
ಪರಮರುಷಿ ದೂರ್ವಾಸಶಾಪವಲಂಗ್ಯತಮವೆಂದಾ ॥ ೧ ॥

ಅಂತ್ಯ : ಮೇರುಗಿರಿ ಕೈಕಾಲತಳದಂ
ತಾರು ಬರೆಯಲಿ ಕೃತ್ಯ ಬರೆ
ಪರಿವಾರ ಸತಿಸುತ ಬಾಂದವಾದ್ಯರು ಬಾಯ ಬಿಡುತಿರಲು
ಧಾರುಣೀಪತಿ ಹೆಜ್ಜೆಯನು ನಸು
ಜಾರಿಸದೆ ನೋಡುತ್ತ ನಿಂದನು
ಕಾರಣೀಕ ನಿತ್ಯಾತ್ಮ ವಿಷ್ಣುವೆ ತನಗೆ ಸತಿಯೆನುತಾ ॥ ೪೬ ॥

ಪ್ರಥಮ ಅಧ್ಯಾಯ ಸಂಪೂರ್ಣ ಅಧ್ಯಾಯ ೩ ಕಂ ಮ ಪದನೂ ೨೨೧ ಕಂ ಮಂಗಳಮಹಾಶ್ರೀ ॥

ವಿಷಯ : ಅಂಬರೀಷ ಮಹಾರಾಜನ ಕಥೆ.

ವಿಶೇಷ : ಇದರಲ್ಲಿ ವಿರೂಪಾಕ್ಷ ಶತಕ, ಸದಾಶಿವ ಶತಕ, ಪ್ರಾಣೇಶ ಶತಕ, ದೂರ್ವಾಸ ಚರಿತ್ರೆ, ಧ್ರುವಚರಿತ್ರೆ, ಗುರುಶಿಷ್ಯ ಸಂವಾದಗಳಿವೆ.

76

ಕೆ.ಬಿ. ೬೯೨	ಅಂಬರೀಷ ಚರಿತ್ರೆ	ಯಕ್ಷಗಾನ
೮" × ೬.೨"	ವಾಸುದೇವ	೧೯ ನೇ ಶತಕ
೨೧೧–೨೨೨ ಪತ್ರ	೨೪ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ | ಅಂಬರೀಶ ಚರಿತ್ರೆ ॥

ಆರ್ಯ ॥ ಶ್ರೀಗುರುಶಿವ ಸಹಜಾನಂದನೆ ಶಿರ
ಬಾಗುವೆ ನಿಂನಯ ಪದಯುಗದೀ
ಭೋಗಿಶಯನನ ಚರಿತೆ ಮಾಳ್ಪುದಕೆನ
ಗೀಗ ಮತಿಯ ಪಾಲಿಸು ದಯದೀ ॥ ೧ ॥

ಕಂದ ॥ ಶ್ರೀಕರ ಶುಭಕರ ವಿಘ್ನವ
ನೇಕೆನಿಸುವ ನಿಶಿಯಹರ ಪ್ರಭಾಕರ ನಿಂನಂ
ನಾ ಕಡುಭಕ್ತಿಯೊಳ್ನೆನವೆ ಸು
ವಾಕೆನಿಶೀ ಕೃತಿಯ ಗಣಪ ನೀ ಕರುಣದೊಳುಂ ॥ ೨ ॥

ಅಂತ್ಯ : ಪಾವನಾತ್ಮಕನಾದ ದೇವದೇವೋತ್ತಮಗೆ
ಭಾವಿಸಲ್ಕರಿಯದದ ಭಾವನಿಂಗೇ
ಭಾವಜಾರಿಸ್ತುತ್ಯನೀಯ್ಯೆ ಭಕ್ತರಿಗಿಷ್ಟ
ಕೋವಿದನು ಶ್ರೀವಾಸುದೇವನಿಂಗೇ ||
ಜಯಮಂಗಳಂ ಸದಾ ಶುಭಮಂಗಳಂ ||೧೭೦||

ಸಂಪೂರ್ಣ || ಶ್ರೀ ||

ವಿಷಯ : ಅಂಬರೀಷ ಮಹಾರಾಜನ ಕಥೆ.

ವಿಶೇಷ : ಈ ಕೃತಿಯಲ್ಲಿ ವಾಸುದೇವ ಎನ್ನುವ ಅಂಕಿತವಿದೆ. ಕವಿ ಶ್ರೀ ಕೃಷ್ಣರಾಜ ಸಾರ್ವಭೌಮರ ಆದೇಶದಂತೆ ಈ ಕೃತಿಯನ್ನು ರಚಿಸಿರುತ್ತಾನೆ. ಮೊದಲನೆಯ ಪತ್ರ ಸ್ವಲ್ಪ ಹರಿದಿದೆ.

77

ಕೆ. ಬಿ. ೪೦೦	**ಅಂಬರೀಷ ಚರಿತ್ರೆ**	ಯಕ್ಷಗಾನ
೮'' × ೬.೨''	ವಾಸುದೇವ	೧೯ನೇ ಶತಕ
೧-೨೮ ಪತ್ರ	೧೬ ಪಂಕ್ತಿ	೧೩ ಅಕ್ಷರ

ಆದಿ : ಅಂಬರೀಶ ಚರಿತ್ರೆ || ಪ್ರಾರಂಭ ||
ಆರ್ಯಾ || ಶ್ರೀಗುರು ಶಿವ ಸಹಜಾನಂದನೆ ಶಿರ
ಬಾಗುವೆ ನಿಂನಯ ಪದಯುಗದೀ
ಭೋಗಿಶಯನನ ಚರಿತೆ ಮಾಳ್ಪದಕೆನ
ಗೀಗ ಮತಿಯ ಪಾಲಿಸು ದಯದೀ ||೧||

ಕಂದ || ಶ್ರೀಕರ ಶುಭಕರ ವಿಘ್ನವ
ನೇಕೆನಿಸುವ ನಿಶಿಹರ ಪ್ರಭಾಕರ ನಿಂನಂ
ನಾ ಕಡುಭಕ್ತಿಯೊಳ್ನೆನವೆ ಸು
ವಾಕೆನಿಶೀ ಕೃತಿಯ ಗಣಪನೀ ಕರುಣದೊಳುಂ ||೨||

ಅಂತ್ಯ : ಪಾವನಾತ್ಮಕನಾದ ದೇವದೇವೋತ್ತಮಗೆ
ಭಾವಿಸಲ್ಕರಿಯದದ ಭಾವನಿಂಗೇ
ಭಾವಜಾರಿಸ್ತುತ್ಯನೀಯ್ಯೆ ಭಕ್ತರಿಗಿಷ್ಟ
ಕೋವಿದನು ಶ್ರೀವಾಸುದೇವನಿಂಗೇ ||೧೫೯||
ಸಂಧಿ ೧ ಕ್ಕೆ ೧೬೬ ಪಕ್ಕೆ ಮಂಗಳಮಹಾಶ್ರೀ ||

ವಿಷಯ : ಅಂಬರೀಷ ಮಹಾರಾಜನ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವನ್ನು ಹಾಕಿರುವುದಿಲ್ಲ. ಕೃತಿಯಲ್ಲಿ ವಾಸುದೇವ ಎನ್ನುವ ಅಂಕಿತವಿದೆ. ಕವಿ ಶ್ರೀ ಕೃಷ್ಣರಾಜ ಸಾರ್ವಭೌಮರ ಆದೇಶದಂತೆ ಈ ಕೃತಿಯನ್ನು ರಚಿಸಿರುತ್ತಾನೆ. ಈ ಪುಸ್ತಕದ ಆದಿ ಮತ್ತು ಅಂತ್ಯಗಳಲ್ಲಿ ಎರಡೆರಡು ಪ್ರತ್ಯೇಕ ಪತ್ರಗಳಿವೆ. ಇದರಲ್ಲಿ ಹಿಂದಿ ಮತ್ತು ಕನ್ನಡ ಹಾಡುಗಳಿವೆ.

78

ಕೆ. ಬಿ. ೪೦೩/೪	ಅಂಬರೀಷ ಚರಿತ್ರೆ	ಯಕ್ಷಗಾನ
೮.೩" × ೬.೪"	ವಾಸುದೇವ	೧೯ ನೇ ಶತಕ
೧–೧೨ ಪತ್ರ	೨೩ ಪಂಕ್ತಿ	೨೪ ಅಕ್ಷರ

ಆದಿ : ಅಂಬರೀಷ ಚರಿತ್ರೆ ||

ಆರ್ಯಾ || ಶ್ರೀಗುರುಶಿವ ಸಹಜಾನಂದನೆ ಶಿರ
ಬಾಗುವೆ ನಿನ್ನಯ ಪದಯುಗದೀ
ಭೋಗಿಶಯನನ ಚರಿತೆ ಮಾಳ್ಪುದಕೆನ
ಗೀಗ ಮತಿಯ ಪಾಲಿಸು ದಯದಿ ||೧||

ಕಂದ || ಶ್ರೀಕರ ಶುಭಕರ ವಿಘ್ನವ
ನೇಕೆನಿಸುವ ನಿಸಿಹರ ಪ್ರಭಾಕರ ನಿನ್ನಂ
ನಾ ಕಡುಭಕ್ತಿಯೊಳ್ನೆನೆವೆ ಸು
ವಾಕೆನಿಸೀ ಕೃತಿಯ ಗಣಪತೀ ಕರುಣದೊಳುಂ ||೨||

ಅಂತ್ಯ : ಕಂದ || ಉರಿ ನಿಲ್ಲಲು ಮುನಿಪತಿ ತಾಂ
ಚರಣವ ಬಿಟ್ಟೆದ್ದು ನೃಪನನಪ್ಪುತಲಾಗಳ್
ಪರಿಕಿಸದೆನ್ನವಗುಣಗಳ
ಪೊರೆದೆಯಲ್ಲೈ ನಿನಗೆ ಸರಿಯದಾರೆನೆ ಜಗದೊಳ್ ||೧–೧೫೩||

ಅಂಬರೀಷ ಚರಿತೆ ಸಂಪೂರ್ಣ ||

ವಿಷಯ : ಅಂಬರೀಷ ಮಹಾರಾಜನ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಪುತ್ರಕಾಮೇಷ್ಟಿ, ದೂರ್ವಾಸ ಭೋಜನ, ಕನಕಾಂಗೀ ಕಲ್ಯಾಣ, ಮಾರ್ಕಂಡೇಯ ಚರಿತ್ರೆ ಎಂಬ ಈ ನಾಲ್ಕು ಕೃತಿಗಳಿವೆ.

79

ಕೆ. ೫೮೬	**ಅಂಬಿಕಾವಿಜಯ**	ಭಾಮಿನೀಷಟ್ಪದಿ
೧೪.೨′′ × ೨.೩″	ಬೊಬ್ಬೂರು ರಂಗನಾಥ	ಸು ೧೬೫೦
೧೨–೩೦ ಪತ್ರ	೯ ಪಂಕ್ತಿ	೬೪ ಅಕ್ಷರ

ಆದಿ : ಅಂಬಿಕಾವಿಜಯ ಬರಲುದಕ್ಕೆ ಶುಭಮಸ್ತು.
ಭಾಮಿನೀಷಟ್ಪದಿ

ಪದನು॥ ಶ್ರೀರಮಣಿಯೊಲ್ಲಭನೆ ವಿಮಲ ಸ
ರೋೀರುಹಾಸನಪಿತನೆ ಸನಕ ಸ
ನಾರದಾದಿ ಸುರಉಘ ಪೂಜಿತ ಸರ್ವಗುಣಸಿಳಿಯಾ
ಚಾರುತರ ಕಮಸೀಯ ಮಣಿ ಕೇ
ಯೂರಶೋೀಭಿತ ಭಜನದಾ
ಧಾರ ಬೊಬ್ಬುರವೀರ ರಘುವರ ಸಲಹು ಮೂಜಗವಾ ॥ ೧ ॥

ಅಂತ್ಯ : ಪರಮಮಂಗಳಮೂರ್ತಿ ಸುಕೀರ್ತಿ ದಾನವ
ಹರತ್ರಿಯಂಬಕ ಕಮಲಜಾಸನ
ಸುರನಿಕರ ಸಂಸ್ತುತ್ಯ ಶೋೀಭನಮಹಿತ ಜಗದುದರಾ
ತರ್ರುಣಿನಿಂದಕ ಕುಲವಿಮೋಚನ
ಶರಧಿಶಯನ ಮುಕುಂದ ಬೊಬ್ಬುರ
ಪುರದೆರ್ನೈಯು ಶ್ರೀರಂಗಧಾಮಮಾರ್ಪಿತ ಕಥಾಂಮೃತಲೂ ॥ ೯೫ ॥

ಅಂತೂ ಸಂಧಿ ಅಂಬಿಕಾವಿಜಯ ಸಂಧಿ ೪೬ಕ್ಕಂ ಪದನು ೩೦೦೫ಕ್ಕಂ ಮಂಗಳಮಹಾಶ್ರೀ.

ಪಾರ್ಥಿವನಾಮ ಸಂವತ್ಸರದ ಫಾಲ್ಗುಣ ಶುಧ ೨ ಗುರುವಾರದಿ ವಿಘಳಿಗೆ ೨೬ ಕ್ಕೆ ಅಂಬಿಕಾವಿಜಯ ಸಾಮಾಪ್ತಃ. ಯಿಾ ಪುಸ್ತಕಂ ಬರದಾತ ವೇಲಾಪುರಿ ಸ್ಥಳದ ನಾಡಿಗ ಪುಟ್ಟಂಣೈಯನವರ ತನುಜ ಬಳಗನಾಡು ಲಕ್ಷ್ಮುಮೈಯನವರ ಪುತ್ರ ಶರಪುರಿ ಸೀಮೆಯೋೀಳ್ ವಿರಾಜಿತಮಪ್ಪ ತಾಂಬ್ರಚೂಡ ಪುರ್ನಿ ತಟಾಕ ಸಮಿಾಪ್ಯದ್ವಯನಾಖಿಲಂಭೋೀದರ ಭಕ್ತಸ್ಥಳ ಕರಣಿಕ ಪುಟ್ಟಂಣೈಯನು ನರಸೀಪುರದ ರಾಮೇಗೌಡರ ಪುತ್ರ ಲ್ಲಿಂಗೆಗೌಡರ ಕುಮಾರ ಸಿದ್ದೇಗೌಡರಿಗೆ ಪುತ್ರಪೌತ್ರ ವೃದ್ಧಿಯಾಗಿ ಪಟಿಸಲ್ಕೆ ಬರದುಕೊಟ್ಟಂಬಿಕಾವಿಜಯ ಪುಸ್ತಕಕ್ಕೆ ಆಚೇಂದ್ರಾರ್ಕಮಸ್ತು.

ವಿಷಯ: ಮಾರ್ಕಂಡೇಯ, ರಕ್ತಬೀಜಾಸುರ, ಮಧುಕೈಟಭ, ಚಂಡ ಚಾಮುಂಡ, ಶುಂಭಕಾಸುರ, ಧೂಮ್ರಲೋಚನ, ಮಹಿಷಾಸುರ, ಇವರುಗಳ ವೃತ್ತಾಂತ ಗಳೊಡನೆ ಅಂಬಿಕೆಯ ಮಹಿಮೆಯ ವಿವರ.

ವಿಶೇಷ: ಕೆಲವು ಓಲೆಗಳು ಶಿಥಿಲವಾಗಿವೆ.

80

ಕೆ. ೭೫/೧೨ ಅಂಬಿಗರ ಚೌಡಯ್ಯನವರ ವಚನ ವಚನ
೧೦.೭" × ೨.೨" ಅಂಬಿಗರ ಚೌಡಯ್ಯ ಸು ೧೧೬೦
೨೫೨–೨೫೫ ಪತ್ರ ೧೬ ಪಂಕ್ತಿ ೭೫ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯಂಗುಂ ನಮಃ ॥ ಭಕ್ತಜಂಗಮದ ಪರಿಯ ಹೇಳಿಹೆ ಕೇಳಿರಂಣಾ ಭಕ್ತನು ಜಂಗಮವಿದ್ದೆಡೆಗೆ ಹೋಗಿ ದೀರ್ಘದಂಡನಮಸ್ಕಾರವಂ ಮಾಡಿ ವಿಭೂತಿಯಂ ಕೊಟ್ಟು ಬಿಂನಹಂ ಮಾಡಿಕೊಂಡು ತಂನ ಗ್ರುಹಕ್ಕೆ ಹೋಗಿ × × × × ಯಿಂತೀ ಯಿವರಿಬ್ಬರನೆ ಮುಖವ ನೋಡಲಾಗದು ಯೆಂದಾತ ನಂಮ ಅಂಬಿಗರ ಚೌಡಯ್ಯನು ॥ ೧ ॥

ಅಂತ್ಯ: ಆವ ಕಾಯವನಾದಡು ಹೇಹವಿಲ್ಲದೆ ಮಾಡಿ ಗುರುಲಿಂಗಜಂಗಮಕ್ಕೆ ನೀಡಿ। ವೊಕ್ಕಮಿಕ್ಕ ಪ್ರಸಾದಮಂ ಸರಿಸಿ ಸಿದ್ರೆ ಬಂದರೆ ಮಲಗಿ ವ್ಯಾಧಿ ಬಂದರೆ ನರಳಿ। ಶಿವಹಂಗಿಲ್ಲದಿರಬೇಕು ಯಂದಾತ ಯಂನೊಡಯನಂದು ಅಂಬಿಗರ ಚೌವುಡಯ್ಯನೂ ॥ ೨೭ ॥ ಶ್ರೀ ಶ್ರೀ ಶ್ರೀ

ವಿಷಯ: ವೀರಶೈವ ಧರ್ಮಾಚರಣೆ.

ವಿಶೇಷ: ಸಮಗ್ರ. ಶಕಟರೇಫದ ಪ್ರಯೋಗವಿದೆ. ಒಟ್ಟು ೨೭ ವಚನಗಳಿವೆ. ಇದರೊಂದಿಗೆ ಶತಕತ್ರಯ, ಪ್ರಭುದೇವರ ಟೀಕಿನವಚನಗಳು ಮೊದಲಾದ ಇತರ ೧೨ ಗ್ರಂಥಗಳಿವೆ.

81

ಕೆ. ೮೦/೩ ಅಮ್ಮನವರ ಮೇಲೆ ಲಾಲಿಪದ ಹಾಡು
೭.೨" × ೧.೭" ಚೆಲುವಾಂಬೆ ಸು. ೧೭೨೫
೨೧೧–೨೧೮ ಪತ್ರ ೭ ಪಂಕ್ತಿ ೨೫ ಅಕ್ಷರ

ಆದಿ: ಅಂಮನವರ ಮೇಲೆ ಲಾಲಿಪದ " ರಾಗ ಕಾಂಬೋಧಿ ತಾಳ ಜಂಪೆ "
ಜೋ ಜೋ । ಜೋ ವಿನತ ವಾಣಿ । ಕನಕಾಚಲ

ಶ್ರೋಣಿ ಕಾಳಾಹಿ ವೇಣಿ । ಜೋ ಜೋ ॥ ಪಲ್ಲ ॥
ಯಿಾ ಲೋಕದಪರಾಧಿಗಳನು ಮಾಧವನು
ಪಾಲಿಸದೆ ಮುನಿವನಿವನೆಂದೆರ್ದೆವನೆಯನು
ಲೀಲೆ ಮಿಗೆ ನೆಲೆಗೊಂಡ ಕರುಣಾನಿಧಿಯನು
ಶ್ರೀಲಲನೆಯನು ಬಗೆಯೊಳೊದವೆ ಭಾವಿಪೆನು ॥ ಲಾಲಿ ॥ ೧ ॥

ಅಂತ್ಯ : ತಿರುವೆಂಕಟೇಶನರ್ಧಾಂಗಿ ನೀನೆಂದು
ನರನಾಥ ಕೃಷ್ಣ ಭೂವರಗೊಲಿದು ಬಂದು
ಸಿರಿವೆತ್ತ ಕಲ್ತೊಟ್ಟಿಯೊಳಗೆ ನೀನಿಂದು
ಕರುಣದಿಂ ಪೊರೆವೆ ಶರಣರ ದಯಾಸಿಂಧು ॥ ಲಾಲಿ ॥ ೩೫ ॥

ಲಾಲಿ ಶುಭ ಚರಿತೆ । ಲಾಲಿ ಸದ್ಗುಣಮಹಿತೆ ಲಾಲಿಸು ರವಿನುತೆ । ಲಾಲಿ ॥ ಪಲ್ಲ ॥ ಅವಿಘ್ನಮಸ್ತು

ವಿಷಯ : ಲಕ್ಷ್ಮೀದೇವಿಯ ಸ್ತುತಿ.

ವಿಶೇಷ : ೩೫ ಲಾಲಿಪದಗಳಿವೆ. ಬರಹವು ಸ್ಫುಟ. ಉತ್ತಮ ಸ್ಥಿತಿ. ಇದೇ ಕಟ್ಟಿನಲ್ಲಿ ವರನಂದಿಕಲ್ಯಾಣ ಮತ್ತು ವೆಂಕಟಾಚಲಮಾಹಾತ್ಮ್ಯ ಎಂಬೆರಡು ಗ್ರಂಥಗಳಿವೆ.

82

ಕೆ. ೩೨೫/೧೧	ಅಯ್ಯನವರ ನಾಂದ್ಯ	ಭಾಮಿನೀಷಟ್ಪದಿ
೯.೫″ × ೨″	ಮಹಂತಯ್ಯ	?
೨೮-೩೦ ಪತ್ರ	೧೧ ಪಂಕ್ತಿ	[illegible] ಅಕ್ಷರ

ಆದಿ : ಮಹಂತಯ್ಯನವರು ಮಾಡಿದ ಅಯ್ಯನವರ ನಾದ್ಯ.

ಭಾವಿನಿಷಟ್ಪದ ॥
ಶ್ರೀಮದನುಪಮ ಸತ್ಯ ನಿರ್ಮಲ
ಸೋಮಶೇಖರ ಕಾಮಸಂಹರ
ಶ್ವಾಮಿಶಾಶ್ವತ ಶರಣ ಜನಸತ್ಪ್ರೇಮ ಗುಣಧಾಮಾ
ಹೇಮಗಿರಿ ನಿಜವಾಸ ಶಂಕರ
ನಾಮ ಕರುಣಾಸಾರ ಸಂದರ
ಕೋವಿದ ಲ ಮಹೇಯ್ಯಕ ಶಾಂತವೀರ ಚಿದಂಗ ಪಾಲಿಪುದೂ ॥ ೧ ॥

ಅಂತ್ಯ : ಯಿಂತು ನಿಂಮಯ ಮಹಿಮೆ ನುತಿಯನು .
ಸಂತತಂ ಬರದೋದಿದವರ
ಚಿಂತೆಯಳಿದುಂನತದ ಮುಕ್ತಿಯನೆಯ್ದಿ ನಿಜವಹರೂ
ಅಂತುಮಲ್ಲದೆ ಸಕಲ ಸಿದ್ಧಿಯು
ಸಂತಸದೊಳೆಯ್ತುಂದು ಪಡವರು
ಕಾಂತಮುರಿ ಮುರಿಗೆಯ ಶಾಂತವೀರ ನಿಜೇಶ ರಕ್ಷಿಪುದೂ ॥ ೨೫ ॥
ಮುರಿಗೆಯ ಶಾಂತವೀರೇಶ್ವರನ ಪಂಚವಿಂಶತಿ ನಾದ್ಯ ಸಮಾಪ್ತ ಶ್ರೀ.

ವಿಷಯ : ಸ್ತುತಿ, ನಾಂದ್ಯಪದ್ಯಗಳು.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮುರಿಗೆಸ್ವಾಮಿಗಳ ನಾಂದ್ಯ, ಸಿದ್ಧೇಶ್ವರ ಪುರಾಣ ನಾಂದ್ಯಗಳೆಂಬ ಇನ್ನೂ ೨೨ ಗ್ರಂಥಗಳಿವೆ.

83

ಕೆ. ೧೮೪/೬	**ಅರುವತ್ತು ಮೂವರ ತ್ರಿವಿಧಿ**	ಹಾಡು
೧೩.೫″ × ೧.೮″	ಕಳಲೆ ನಂಜರಾಜ	೧೬೪೦
೧೯೯-೨೦೪ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಉದಯರಾಗದ ಧ್ವನಿ—
ಪೊಡಮಡುವೆ ಮನದಣಿಯಲೂ
ಪೊಡಮಡುವೆ ನಾನವರ ಪೊಗಳ್ದು ಸಂತಸ
ವಡುವೆ ಮೃಡನೊಲಿಸಿದರವತ್ತು ಮೂರು ಭಕ್ತರಿಗಾನೂ ॥
ಪೊಡಮಡುವೆ ಮನದಣಿಯಲೂ ॥
ಪದಾ ॥ ಧರಣಿಯೊಳು ಸಾಕ್ಷಾನ್ಮಹೇಶನೊಯಿವನಂದು
ಪಿರಿಯರೆಲ್ಲರು ತಂನ್ನ ಕೊಂಡಾಡುತಿರೆ ಶೈವ
ದರುಶನವನುದ್ಧರಿಸಿ ಪರಮಶಿವನೊಲ್ಮೆಯಿಂ ಸ್ಥಿರಕೀರ್ತಿವೊಡೆದು ರಾಜಿ
ಸುವ ಸಾಂದರರಡಿಗೆ
ಪೊರಮಡುವೆ ಮನದಣಿಯಲೂ ॥ ೧ ॥

ಅಂತ್ಯ : ಧರೆಯೊಳಗೆ ಝುಷವಡೆದ ಧಾರ್ಮಿಕಾಗ್ರಣಿ ವೀರ
ನರವರಾತ್ಮಜ ಕಳುಲೆ ನಂಜೇಂದ್ರಗಾವಗಂ

ವರವೀವ ಗರಳ ಪುರದೆರೆಯನಂ ಬಿಡದೊಲಿಸಿದರವತ್ತು
ಮೂರುಭಕ್ತರ ಚರಣಗಳಿಗಾನು
ಪೊರಮಡುವೆ ಮನದಣಿಯುಲೂ ॥ ೬೪ ॥

ಪರಮಭಕ್ತಿಯೊಳಾವರೆ ಭಕ್ತ ಚರಿತೆಯನು
ಬರದೋದಿ ಕೇಳ್ವರವರಖಿಲಸುಖಮುಂ ಪಡೆದು
ವರ ಷಡಾಧ್ವಾತೀತ ಕೈಲಾಸದೊಳು ಮಹೇಶ್ವರನ
ಸನ್ನಿಧಿಯೊಳಾನಂದದಿಂದಹರಾಗಿ
ಪೊರಮಡುವೆ ಮನದಣಿಯುಲೂ ॥ ೬೫ ॥

ವಿಷಯ : ಅರವತ್ತುಮೂರು ಶಿವಭಕ್ತರ ಚರಿತ್ರೆ.

ವಿಶೇಷ : ಈ ಕಟ್ಟಿನಲ್ಲಿ ಕಿರಾತಾರ್ಜುನರ ಕಾಳಗ, ಸುಭಾಷಿತ (ಸಂ), ಸೋಮಾರಾಧ್ಯರ ಶತಕ, ರತ್ನಾಕರ ಶತಕ, ಶಿವವಚನ ಮತ್ತು ವಿಷ್ಣುಕೀರ್ತನೆಗಳು, ಮಾನಸಪೂಜೆ (ಸಂ), ಗುರುಶಿಷ್ಯವಾದ, ಸದ್ಗುರು ರಹಸ್ಯ, ಐರಾವತ, ಭಾರತದಲ್ಲಿ ರಾಜನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

84

ಕೆ.ಬಿ. ೧೩೦/೨	**ಅರುವತ್ತು ಮೂವರ ತ್ರಿವಿಧಿ**	ತ್ರಿವಿಧಿ
೭.೯" × ೬.೪"	ಕಳಲೆ ನಂಜರಾಜ	೧೭೪೦
೪–೧೪ ಪತ್ರ	೧೫ ಪಂಕ್ತಿ	೨೮ ಅಕ್ಷರ

ಆದಿ : ಆರವತ್ತುಮೂವರು ಪ್ರಥಮಗಣಾಧೀಶ್ವರರ ತ್ರಿವಿಧಿ. ಉದಯರಾಗದ ಧ್ವನಿ.

ಪೊಡಮಡುವೆ ಮನದಣಿಯುಲೂ
ಪೊಡಮಡುವೆ ನಾನವರ ಪೊಗಳ್ದು ಸಂತಸ
ವಡುವೆ ಮೃಡನೊಲಿಸಿದರುವತ್ತುಮೂರು ಭಕ್ತರಿಗಾನೂ
ಪೊಡಮಡುವೆ ಮನದಣಿಯುಲೂ ॥ ಪದನೂ ॥

ಅಂತ್ಯ : ಪರಮಭಕ್ತಿಯೊಳಾವರೀ ಭಕ್ತ
ಚರಿತೆಯನು ಬರದೋದಿ ಕೇಳ್ವ
ವರಖಿಲ ಸುಖಮುಂ ಪಡೆದು
ವರ ಷಡಾದ್ವಾತೀತ ಕೈಲಾಸದೊಳು ಮಹೇಶ್ವರನ ಸಂನಿಧಿ

ಯೊಳಾನಂದದಿಂದಿಹರಾಗಿ
ಪೊರಮಡುವೆ ಮನದಣಿಯಲೂ ॥ ೬೫ ॥

× × ಅರುವತ್ತುಮೂವರ ಪ್ರಮಥಗಣಾಧೀಶ್ವರರ ತ್ರಿವಿಧಿ ಸಂಪೂರ್ಣಂ.

ವಿಷಯ : ಅರವತ್ತುಮೂವರು ಪುರಾತನರ ಚರಿತ್ರೆ.

ವಿಶೇಷ : ಇದರೊಂದಿಗೆ ಕೃಷ್ಣನಾಚಾರ್ಯರ ಕಾಲಜ್ಞಾನ ಗ್ರಂಥವೂ ಇದೆ.

85

ಕೆ.ಎ. ೧೮೭/೧	**ಅರುವತ್ತು ಮೂವರು ಪುರಾತನರ ಚರಿತ್ರೆ**	ಗದ್ಯ
೧೪.೧" × ೮.೯"	?	?
೧-೯೫ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ೬೩ಪುರಾತನರ ಚಾರಿತ್ರವಂನ್ನು ದ್ರಾವಿಡ ಪುರಾಣರೀತ್ಯ ಬರದಿದೆ. ನಾಮಂ-ತಿರುನೀಲಕಂಠರು | ಗ್ರಾಮ-ಚಿಂದಂಬರ | ಆಚಾರ-ಲಿಂಗಪೂಜಾ | ಆಶ್ರಮ-ಗ್ರಹಸ್ತ | ಭಕ್ತರು-ಜಂಗಮಭಕ್ತ | ಕುಲ-ಕುಲಾಲನು | ಮಾಸ-ಪುಶ್ಯಾ | ಕ್ಷೇ.... | ದೇಶ್ಯ.... | ಶಿವನಾಣೆಯಿಡೆ ತಂನ್ನ....ತ್ತೆ ಯಾನು ತೊರದು ಶ್ರೇಂಬುವಿ ನಕ್ರುಪೆವಡದ ತಿರುನೀಲಕಂಠರ್ಗೆ ಸವೆಯದೊಲವಿಂ....ಶರ........ ನಿಜಗುಣರ ೧೦ ಪದ್ಯದವುದ....ಣೀ ॥

ಅಂತ್ಯ : ಮಹಾಚೋಳ ಯಿಾತನೆ ಶೇಖರಾಳಿಸ್ವಾಮಿಗಳಿಂದ ಕೂಡಿ ಪೆರಿಯಪುರಾಣವ ಮಾಡ್ಸಿ ಭಕ್ತಚರಿತ್ರವಂನ್ನು ಮೆರಿಸಿ ಸರ್ವರಿಗು ಸುಖಮಾಡಿದವನೆಂದು ವುಮಾಪತಿಗೆ ಶಿವಾಚಾರ್ಯರು ಪ್ರಸಿದ್ದಮಾಡಿದರು × × × × ಯಿಾ ಪ್ರಕಾರದಿಂ ಪ್ರಸಿದ್ಧಿ ಹೊಂದಿದವರು ೬೩ ಪುರಾತನರು ಯಂದು ದ್ರಾವಿಡದಲ್ಲಿ ಪೆರಿಯಪುರಾಣವಿದೆ.

ವಿಷಯ : ಅರುವತ್ತು ಮೂವರು ಪುರಾತನರ ಚರಿತ್ರೆ.

ವಿಶೇಷ : ಪ್ರತಿಯು ತುಂಬಾ ಶಿಥಿಲವಾಗಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಇದರೊಂದಿಗೆ ಬಸವೇಶ್ವರನ ಪವಾಡಗಳು ಎಂಬ ಮತ್ತೊಂದು ಗ್ರಂಥವಿದೆ.

86

ಕೆ.ಎ. ೨೯೧/೨ ಅರುವತ್ತು ಮೂವರು ಪುರಾತನರ ಚರಿತ್ರೆ ವಾರ್ಧಕ ಷಟ್ಪದಿ

೧೩" × ೮" ವೀರಭದ್ರ ?

೧–೨೧೯ ಪುಟ ೩೦ ಪಂಕ್ತಿ ೧೮ ಅಕ್ಷರ

ಆದಿ: ಸೂಚನೆ॥ ಶಿವನೊಲುಮೆಯಿಂ ಪ್ರಬಲರೆನಿಸಿ ಶಿವಮಯರೆನಿಸಿ
ಭುವನದೊಳಗವತರಿಸಿ ಮಹಿಮೆಯಂ ನಟಿಸಿ ತ
ಚ್ಛಿವನಿಂ ಪೊಗಳ್ಕೆವೆತ್ತರುವತ್ತುಮೂವರ್ಪುರಾತನರನಾಂ ವರ್ಣಿಪೇಂ
ಶ್ರೀಮದಗಜಾ ಮುಖಾಂಬುಜ ಭೃಂಗಭೃಂಗಿ ವೃಷಭಾ
ದ್ಯಮಲ ಶಿವಶರಣಗಣಕುಲೋತ್ತುಂಗ ಗಿರಿ
ಧಾಮಾಗಮ ತುರಂಗರಂಗದಮರ್ಾತರಂಗಿಣೀ ಭೃಜ್ಜಟಾ ಶೋಭಿತಾ
ತಾಮಸಾತ್ವಿಕ ನಿಶಾಚರಸಂಘ ಸಂಘಾತ
ಕಾಮಕಾಲೋನ್ಮದ ವಿಭಂಗಭಂಗ ವಿದೂರ
ಸಾಮರ್ಥ್ಯಯುತ ಶಂಭುಲಿಂಗ ಸದಯಾಪಾಂಗ ಕರುಣದಿಂ
ರಕ್ಷಿಸೆಂಮ್ಮಂ ॥ ೧ ॥

× × × × × × ×

× × ಪೇಳ್ವಾತನಾರೆನ । ವರವೀರಭದ್ರಾಖ್ಯನೀ ಕಥೆ × × ॥೧೮॥

ಅಂತ್ಯ: ಜಯಜಯ ಸುಧಾಕರ ಕಲಾಧರ ಶುಭಾಕರ
ಜಯ ಜಯ ನಿಲಿಂಪಾಪಗಾಭೃತ ಜಟಾಭಾರ
ಜಯ ಜಯ ಜಗನ್ಮಯ ನಿರಾಮಯ ದಯಾಪಯೋನಿಧಿಮಹಿತ
ಮಹಿಮಾಕರಾ
ಜಯ ಜಯ ವಿರೂಪಾಕ್ಷ ವಿನಮಿತ ಸುಜನ ಪಕ್ಷ
ಜಯ ಜಯಲನತ್ರ್ಯೇಕ್ಷ ಶರಣಾವನಾಪೇಕ್ಷ
ಜಯ ಜಯ ಗಣಾಧ್ಯಕ್ಷ ಮಾಂ ರಕ್ಷಣಮಹೇಶ ತೆ ಸಂತತಂ ಜಯಜಯಾ
॥ ೧೩ ॥

ಅಂತು ಸಂಧಿ ೨೧ಕ್ಕಂ ಪದನು ೧೦೪೫ಕ್ಕಂ ಮಂಗಳಮಹಾ ॥
ತ್ರಿಷಷ್ಠಿ ಪುರಾತನ ವಿಧಿ ಸಂಪೂರ್ಣಂ ಮಂಗಳಮಹಾ ॥

ವಿಷಯ: ಅರುವತ್ತು ಮೂವರು ಪುರಾತನರ ಚರಿತ್ರೆ.

ವಿಶೇಷ: ಮಧ್ಯೆ ಮಧ್ಯೆ ಕೆಲವು ಪದ್ಯಗಳ ಚರಣಗಳಲ್ಲಿ ಕೆಲವು ಪದಗಳು ಲುಪ್ತ

ವಾಗಿವೆ. ಈ ಗ್ರಂಥದೊಂದಿಗೆ 'ಪ್ರಾಕ್ತನ ಗಣಕಥಾವಳಿ' ಎಂಬ ಮತ್ತೊಂದು ಗ್ರಂಥವಿದೆ.

87

ಕೆ. ೧೯೦/೨ ಅರುವತ್ತು ಮೂವರು ಪುರಾತನರ ತ್ರಿವಿಧಿ ತ್ರಿವಿಧಿ
೧೩.೩" × ೧.೭" ನಿಜಗುಣಶಿವಯೋಗಿ ಸು. ೧೫೦೦
೪೭–೫೦ ಪತ್ರ ೮ ಪಂಕ್ತಿ ೬೨ ಅಕ್ಷರ

ಆದಿ : ಶ್ರೀ ನಿಜಗುಣಶಿವಯೋಗಿಗಳು ವಿರಚಿತಮಪ್ಪ ಅರುವತ್ತು ಮೂರುಮಂದಿ ಪ್ರಮಥಗಣಂಗಳ ಮೇಲಣ ಸ್ತುತಿಯಂನು ಬರೆವುದಕ್ಕೆ ನಿರ್ವಿಘ್ನಮಸ್ತು ॥ ಶ್ರೀಶಂಭುಲಿಂಗನೇ ನಮಃ। ಶ್ರೀ ನಿಜಗುಣಶಿವಯೋಗಿಗಳ ಚರಣಾರವಿಂದಗಳಿಗೆ ನಮೋ ನಮಃಸ್ತೇ ನಮಃ ॥ ಶ್ರೀ

ಶ್ರೀಗುರುವೆ ನಿಜಸುಖದಾ। ಸಾಗರವೆ ತೆರೆ ಮಸಗು
ತಾಗಳುಂ ಬೆಳಗುತಿಹ ನಿಂನ ಕಡೆಗಣ್ಣ
ಳೀಗೆ ಸಂತಸವನಖಿಳರ್ಗೆ ॥ ೧ ॥

ಅಂತ್ಯ : ವರಚಿಂತ್ರಾಮಣಿಯೆಂತ್ತೆ ಪರಿಪರಿಯ ಶರಣರೆಲ್ಲರ ಮನೋ
ರಥವನೊಲಿದಿತ್ತಾಶಂಭು ನೀನಿರಿಸೆಂನ್ನಾನವರ ಸಭೆಯಲ್ಲಿ ॥ ೭೬ ॥
ಶ್ರೀ ನಿಜಗುಣಶಿವಯೋಗಿ ಸಂತಸದೊಳೊರೆದುದನಂತಮಹಿಮಾಂ–
ಬುನಿಧಿ ಶಂಭುಲಿಂಗ ತಾನೊಪ್ಪಿ ಸಂತಸದಿಂ ಪಾಡಿ ಸುಖಮಿರ್ಕ್ಕೆ ॥ ೭೭ ॥

ಇಂತು ಶ್ರೀ ನಿಜಗುಣಶಿವಯೋಗೀಂದ್ರರು ವಿರಚಿತಮಪ್ಪಾ ಅರುವತ್ತು ಮೂವರು ಪ್ರಮಥಗಣಂಗಳ ತ್ರಿವಿಧಿಗೆ ಮಂಗಳಮಹಾಶ್ರೀಶ್ರೀ

ವಿಷಯ : ದಕ್ಷಿಣ ಭಾರತದ ಸುಪ್ರಸಿದ್ಧ ಅರವತ್ತು ಮೂವರು ಶೈವಪುರಾತನರ ಚರಿತ್ರೆ.

ವಿಶೇಷ : ಇದರೊಂದಿಗೆ ಇದೇ ಗ್ರಂಥಕಾರನ ವಿವೇಕಚಿಂತಾಮಣಿ ಮೊದಲಾದ ಷಟ್‌ಶಾಸ್ತ್ರಗಳೂ ಇರುತ್ತವೆ. ಪ್ರತಿಯ ಕಾಲಾದಿಗಳನ್ನು ಪರಮಾರ್ಥ ಪ್ರಕಾಶಿಕೆಯ ಕೊನೆಯ ಭಾಗದಲ್ಲಿ ನೋಡುವುದು.

88

ಕೆ. ೩೧೨/೨	**ಅರುವತ್ತು ಮೂವರು ಪುರಾತನರ ತ್ರಿವಿಧಿ**	ತ್ರಿವಿಧಿ
೧೮.೨″ × ೨″	ನಿಜಗುಣಶಿವಯೋಗಿ	ಸು. ೧೫೦೦
೩೫–೩೭ ಪತ್ರ	೯ ಪಂಕ್ತಿ	೨೦ ಅಕ್ಷರ

ಆದಿ: ಶ್ರೀ ನಿಜಗುಣಶಿವಯೋಗಿಗಳ ವಿರಚಿತವಪ್ಪ ಅರವತ್ತುಮೂರು ಮಂದಿ ಪ್ರಮಥಗಣಂಗಳ ಮೇಲಣ ಸ್ತುತಿಯಂನು ಬರೆಯುವದಕ್ಕೆ ನಿರ್ವಿಘ್ನಮಸ್ತು ॥ ಶ್ರೀ ನಿಜಗುಣಶಿವಯೋಗಿಗಳ ಚರಣಾರವಿಂದಂಗಳಿಗೆ ನಮೋನಮಃ ॥

ಶ್ರೀ ಗುರುವೆ ನಿಜಸುಖದಾ ಸಾಗರವೆ ತೆರೆ ಮಸಗು
ತಾಗಳುಂ ಬೆಳಗುತಿಹ ನಿಂನ ಕಡೆಗಂಣ್ಗ
ಳೀಗೆ ಸಂತಸವನಖಿಳರ್ಗೆ ॥ ೧ ॥

ಶರಣಜನಸಹಿತಂಗೆ ಕರುಣಾರಸಭರಿತಂಗೆ
ದುರಿತದೂರಂಗೆ ಗಿರಿಸುತೆಯ ರಮಣಂಗೆ
ಗುರುಃಶಂಭುಲಿಂಗಾ ತಪ್ಪೆಂ ॥ ೨ ॥

ಅಂತ್ಯ: ವರಚಿಂತಾಮಣಿಯಂತೆ ಪರಿಪರಿಯ ಶರಣರೆ
ಲ್ಲರ ಮನೋರಥವನೊಲಿದಿತ್ತಾ ಶಂಭು ನೀ
ನಿರಿಸಿ ನಾನವರ ಸಭೆಯಲ್ಲಿ ॥ ೭೬ ॥

ಶ್ರೀ ಗುಣ ನಿಜಗುಣಶಿವಯೋಗಿ ಸಂತಸದೊ
ಳೊರೆದುದನಂತ್ತ ಮಹಿಮಾಂಬುನಿಧಿ ಶಂಭುಲಿಂಗ
ತಾನೊಪ್ಪಿ ಸಂತಸದಿಂ ಪಾಡಿ ಸುಖಮಿರ್ಕೆ ॥ ೭೭ ॥

ಇಂತು ನಿಜಗುಣ ಶಿವಯೋಗೀಂದ್ರರು ವಿರಚಿತವಪ್ಪಾ ಅರವತ್ತು ಮೂರು ಪ್ರಮಥಗಣಂಗಳ ತ್ರಿವಿಧಿಗೆ ಮಂಗಳಮಹಾಶ್ರೀ

ವಿಷಯ: ದಕ್ಷಿಣ ಭಾರತದ ಅರುವತ್ತು ಮೂವರು ಶೈವಪುರಾತನರ ಚರಿತ್ರೆ.

ವಿಶೇಷ: ಪ್ರತಿ ಸುಸ್ಥಿತಿಯಲ್ಲಿದೆ. ಒಟ್ಟು ೭೭ ತ್ರಿವಿಧಿಗಳಿವೆ. ಇದರಲ್ಲಿ ಶಂಭು ಲಿಂಗಾಂಕಿತವಿದೆ. ಈ ಗ್ರಂಥದೊಂದಿಗೆ ಕೈವಲ್ಯ ಪದ್ಧತಿ, ಪರಮಾರ್ಥಗೀತೆ, ಅನುಭವಸಾರ, ಪರಮಾನುಭವಬೋಧೆ, ಪರಮಾರ್ಥ ಪ್ರಕಾಶಿಕೆ ಮತ್ತು

ವಿವೇಕಚಿಂತಾಮಣಿ ಎಂಬ ಗ್ರಂಥಗಳಿವೆ. ಆದಿಯ ಪತ್ರದ ಎಡಭಾಗದ ಅಂಚಿನಲ್ಲಿ ' ಶ್ರೀ ನಿಜಗುಣಶಿವಯೋಗಿ ವಿರಚಿತೆ ಪ್ರಮಥಗಣಂಗಳ ಸ್ತುತಿ ತ್ರಿವಿಧೀ॥ ' ಎಂದು ಬರೆದಿದೆ.

89

ಕೆ.ಬಿ. ೪೫೬ ಅರುವತ್ತು ಮೂವರು ಪುರಾತನರ ಸಾಂಗತ್ಯ **ಸಾಂಗತ್ಯ**
೮.೨" × ೬.೬" ಶಿವಯೋಗಿ ಸೋಮೇಶ **ಸು. ೧೬೫೦**
೧–೭೧೩ ಪುಟ ೧೨ ಪಂಕ್ತಿ ೧೨ ಅಕ್ಷರ

ಆದಿ: ಅರುವತ್ತು ಮೂವರ ಚರಿತೆಯ ಬರೆವುದಕೆ ಶುಭಮಸ್ತು ॥

ಪದ॥ ಶ್ರೀ ಗಿರಿಜೆಯ ಮುಖಕಮಲ ಮಿತ್ರನೇ ಶರ
ಣಾಗತ ಶಾಂತ ಸುತೇಜಾ
ರಾಗದಿಂದೆನಗೆ ಸುಮತಿಯಿತ್ತು ನೀ ಶರ
ಣಾಗು ಸಂತತ ಸೋಮನಾಥಾ ॥ ೧ ॥

ಶ್ರೀ ಮಹಾದೇವ ದೇವೇಶ ದೇವರುಗಳ
ಸ್ತೋಮವಂದಿತ ದಿವ್ಯಚರಣಾ ॥
ಹೈಮವತಿ ಮನೋಲ್ಲಾಸವೇ ಹುಲಿಗೆಜ಼ಿ
ಸೋಮೇಶ ಜಯ ಜಯ ಜಯತು ॥ ೨ ॥

× × × × × ×

ಶಿವಕವಿಗಳ ಶಿಶು ಶಿವ ಶರಣರ ಭೃತ್ಯ
ಶಿವಪೂಜಕರ ಸೇವಕನು
ಶಿವಯೋಗಿ ಸೋಮೇಶ್ವರ ಸೋಮೇಶನ ಪದ
ಭುವನಜ ಭೃಂಗ ಪೇಳಿದನು ॥ ೪೪ ॥

ಅಂತ್ಯ: ಅಱುವತ್ತುಮೂವರ ಚರಿತೆಯಿದನು ಪುಣ್ಯ
ಸರಣಿಯೆಂದಱಿದಾವನಾಗೆ
ಬರದೋದಿ ಪಠಿಸಿ ವಿಸ್ತರಿಸಲು ಕೈಲಾಸ
ದರಸುತನವು ಗುಣಪದವಿ ॥ ೧೬ ॥

ಎಂದೆಲ್ಲ ಶಿವಶರಣ ಸಂದೋಹವಾ
ನಂದದಿಂ ಪೊಗಳುತಲಿರಲಿ
ಇಂದು ರವಿಗಳುಳ್ಳನ್ನಲೀ ಕೃತಿ ಭಕ್ತ
ವೃಂದವೊಲಿದು ಪಾಡುತಿರಲಿ ॥ ೧೭ ॥

ಇದು ಅಱವತ್ತು ಮೂವರ ಸಂಗತ್ಯದಿ
ಮುದವೆತ್ತು ಸೋಮೇಶ್ವರನಾ
ಪದವ ಧ್ಯಾನಿಪ ಶಿವಯೋಗಿ ಸೋಮೇಶ ಪೇ
ಳಿದ ಕೃತಿಗೆಂಟನೇ ಸಂಧಿ ॥ ೧೮ ॥

ಅಱುವತ್ತು ಮೂವರ ಸಾಂಗತ್ಯ ಸಂಪೂರ್ಣ.

ವಿಷಯ : ಅರುವತ್ತು ಮೂವರು ಪುರಾತನರ ಚರಿತ್ರೆ.

ವಿಶೇಷ : ಪಾದಗಳನ್ನು ವಿಂಗಡಿಸಿ ಬರೆದಿದೆ. ಶಕಟರೇಫದ ಬಳಕೆ ಇದೆ.

8.2.7

90

ಕೆ. ಬಿ. ೧೫೯	**ಅರ್ಕಪುಷ್ಕರಿಣೀ ಮಾಹಾತ್ಮ್ಯೆ**	ಗದ್ಯ, ಟೀಕು
೭.೯'' × ೬.೫''	ಶ್ರೀಕೃಷ್ಣರಾಜ ಒಡೆಯರು	೧೮೦೦
೧–೧೮೩ ಪತ್ರ	೧೧ ಪಂಕ್ತಿ	೩೪ ಅಕ್ಷರ

ಆದಿ : ಅರ್ಕಪುಷ್ಕರಿಣೀ ಮಹಾತ್ಮ್ಯೆ ಟೀಕು ಬರೆಯುವದಕ್ಕೆ ಶುಭಮಸ್ತು. ಯಾವ ಅರ್ಕೇಶ್ವರನ ಕಾಂತಿಯಿಂದ ಭೂಮಿಯಲ್ಲಿ ಸಕಲ ಜಗತ್ತೂ ಕೂಡಾ ಪ್ರಕಾಶಿಸುತ್ತದೆಯೊ। ಯಾವವನ ಅನುಗ್ರಹದ್ದೆಶೆಯಿಂದ ಸೂರ್ಯನು ನಿರ್ಮಲನು ಆದನೊ। ಯಾವ ಕಾರಣದ್ದೆಶೆಯಿಂದ ಯಾವ ಅರ್ಕೇಶ್ವರನ ಶರೀರವು ಸೂರ್ಯನ ಮುಖಕಮಲ ಪರಾಗದಿಂದಾ ಚನ್ನಾಗಿ ಪೂಜಿಸಲ್ಪಡುತ್ತದೆಯೊ। ಮತ್ತು ಯಾವ ಪೂರ್ವ್ವೋತ್ತನಾದ ಪರಮೇಶ್ವರನ ಪಾದಾರವಿಂದವನ್ನು ಕಾವೇರಿಯು ನಿತ್ಯದಲ್ಲಿಯೂ ನಿರ್ಮಲವನ್ನಾಗಿ ಮಾಡುತ್ತಿಧಾಳೆಯೊ ಯಾವ ಕಾರಣದ್ದೆಶೆಯಿಂದ ಈ ಭಾಸ್ಕರರಾಜಕ್ಷೇತ್ರವನ್ನು ಬ್ರಹ್ಮನೆ ಮೊದಲಾದವರುಗಳು ಈ ಕಾಶೀಕ್ಷೇತ್ರವನ್ನು ನಾನು ಮೊದಲು ತಾನು ಮೊದಲೆಂದು ಯಾವ ಪರಮೇಶ್ವರನ ಸಭೆಯಲ್ಲಿ ವರ್ಣಿಸುತ್ತಿಧಾರೆಯೊ, ಅಂಥ ನಿತ್ಯನಾಗಿಯೂ ಅದ್ವಿತೀಯನಾಗಿಯೂ ಯಿರತಕ್ಕ ಆ ಅರ್ಕೇಶ್ವರನೆಂಬ ಲಿಂಗವನ್ನು ಪ್ರತಿನಿತ್ಯದಲ್ಲಿಯೂ ನಮಸ್ಕರಿಸುವೆನು. ॥ ೧ ॥

ಅಂತ್ಯ : ಈ ಪರಮರಹಸ್ಯವಾದ ಈ ಕ್ಷೇತ್ರ ಮಾಹಾತ್ಮ್ಯೆಯು ನಂಮ ತಂದೆಯಾದ ಬ್ರಹ್ಮನಿಂದ ಕೇಳಿದೆನೂ, ಈ ಮಹಿಮೆಯೂ ನಿತ್ಯವೂ ಕೇಳುವಂಥಾವರಿಗೆ ಶ್ರೀರಾಮನ ಸಾಯುಜ್ಯ ಫಲವನ್ನು ಕೊಡುವದೆಂದು ॥ ೧೬ ॥

ನಾರದನು ಬೃಹದ್ರಥನಿಗೆ ಹೇಳಿದನೆಂದು ಸೂತಪುರಾಣೀಕನು ಶೌನಕಾದಿ ಋಷಿಗಳಿಗೆ ಬಿಸ್ತರಿಸಿ ಹೇಳಿದನೆಂದು ಅಧ್ಯಾಯಾರ್ಥ

ಇಂತು ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲ ದೇಶಾವತಂಸ ಕರ್ಣಾಟಕ ಜನಪವ ಸಂಪದಧಿಷ್ಠಾನ ಭೂತ ಶ್ರೀಮನ್ಮಹೀಶೂರ ಮಹಾಸಂಸ್ಥಾನ ಮಧ್ಯದೇದೀಪ್ಯಮಾನ ವಿಕಲ ಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲಪ್ರಮುಖ ನಿಖಿಲ ರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾನ್ನುಭೂತ ದಿವ್ಯರತ್ನ ಸಿಹ್ಮಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪಾಪ್ರತಿಮವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃ ಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭಸಾಳ್ವ ಗಂಡಭೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ ಮಹೀಶೂರ ಶ್ರೀ ಕೃಷ್ಣರಾಜವಡೆಯರವರಿಂದ ವಿರಚಿತ ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಕರ್ಣಾಟಕ ವಚನಾ ಪ್ರಕಾರವಾದ ಬ್ರಹ್ಮಾಂಡ ಪುರಾಣಸ್ಥ ಶ್ರೀರಾಮಕ್ಷೇತ್ರವೆಂಬ ಚುಂಚನಕಟ್ಟೆ ಸ್ಥಲ ಮಹಾತ್ಮ್ಯೆಯಲ್ಲಿ ಮೂರನೆಯ ಆಶ್ವಾಸ ಸಮಾಪ್ತವು ಮಂಗಳ ಮಹಾ

ವಿಷಯ : ಚುಂಚನಕಟ್ಟೆ ಮಾಹಾತ್ಮ್ಯೆ.

ವಿಶೇಷ : ಗ್ರಂಥವು ಸಾಮಾನ್ಯ ಸ್ಥಿತಿಯಲ್ಲಿದೆ.

91

ಕೆ. ೧೦೪	**ಅರ್ಜುನ ಕೊರವಂಜಿ**	ಯಕ್ಷಗಾನ
೧೩. ೨" × ೧.೨"	?	?
೧–೨೯ ಪತ್ರ	೬ ಪಂಕ್ತಿ	೪೨ ಅಕ್ಷರ

ಆದಿ : ಅರ್ಜುನ ಕೊರವಂಜಿ ಬರೆಯುವದಕ್ಕೆ ನಿರ್ವಿಘ್ನಮಸ್ತು

ಆದಿತಾಳಾ ॥ ಕ್ಷಿತಿಗತಿಹಿತ ಅತಿ ಸಂನ್ಮನುಜರ ಪತದೊಳು ನೆಲಸಿದಗೆ । ಅಸುರರ ಶೀಕ್ಷಿಶಿ । ಅಗಣಿತ....ಗೆ । ಶ್ರೀ ಲಕ್ಷ್ಮೀದೇವಿರ ಪ್ರಿಯಗೆ । ಶರಣೆಂನ್ನಿ ಜನರೆಲ್ಲಾ ಶೇಷಾಶಯನ ಹರಿಗೆ ॥ ೧ ॥

ಅಂತ್ಯ : ಬೆಟ್ಟವ ಮರೆಮಾಡಿ ಗೋವರ್ದ್ಧನದ ಮುಂದೆ ವಟ್ಟಿದಂನಗಳಾ........ಂಡೆ ಕೃಷ್ಣ ನೀ ಸುಖಿಯಂದು ಪಾರ್ಥ ಆಡಿದರು ಕುಳಿಯಾ ॥ ೩೦ ॥ ಭೀಮಪಾರ್ಥರ್ಧ ಮಿಕ್ಕ ನಕುಲ ಸಹದೇವರು ನೂರೊಂದು........ಆದರಿಸುತ ಕೃಷ್ಣರಾಯರೋ ಕುಳಿಯ ಆಡೆ ಕುಂತ್ರಿ ಯಶೋಧೆಯ ಅರ್ಜುನ ಕೊರವಂಜಿ ಕಥೆ ಸಂಪೂರ್ನ ಮಂಗಳಮಹಾ ಶ್ರೀ

ವಿಷಯ : ಅರ್ಜುನನು ಕೊರವಂಜಿ ವೇಷದಿಂದ ದ್ವಾರಕಿಗೆ ಹೋಗಿ ಸುಭದ್ರೆಯನ್ನು ಕೊಂಡೊಯ್ದುದು.

ವಿಶೇಷ : ತುಂಬಾ ಹುಳುತಿಂದ ಪ್ರತಿ. ಪತ್ರದ ಮೊದಲಲ್ಲಿ "ಪರಿಧಾವಿನಾಮ ಸಂವತ್ಸರದ ಜ್ಯೇಷ್ಠ ಶುಧ ೭ ಬುಧವಾರ ದಿವಸ ಪ್ರಾರಂಭಃ"—ಎಂದಿದೆ. ಕೊನೆಯಲ್ಲಿ ರಾಮಾಯಣಕ್ಕೆ ಸಂಬಂಧಿಸಿದ ಒಂದು ಪತ್ರ ಇದೆ.

92

ಕೆ. ೧೦೫	**ಅರ್ಜುನ ಕೊರವಂಜಿ**	ಯಕ್ಷಗಾನ
೧೫.೬" × ೧.೩"	?	?
೧—೨೭ ಪತ್ರ	[illegible] ಪಂಕ್ತಿ	[illegible] ಅಕ್ಷರ

ಆದಿ : ಶ್ರೀ....ಅಸುರಾರ ಸಿಕ್ಷೇಸಿ ಆಗಣಿತ ಮಹಿಮಗೆ। ಲಕ್ಷ್ಮಿದೇವೀಶ ಪ್ರಿಯಗೆ ಶರಣೆಂನ್ನಿ ಜನರೆಲ್ಲಾ। ಶೇಷಾಶಾಯನ ಹಗಿ....ಧಾರಗೆ....ತದಲಿ ಲಕ್ಷ್ಮಿಕಾಂತನ ಶ್ರೀಪಾದ ಪಂಖಜ ಯುಗಗಳಿಗೆ ॥ ಶರಣೆಂನ್ನಿ ಜನರೆಲ್ಲ....ಯನ ಹರಿಗೆ ॥೨॥

ಅಂತ್ಯ : ವೊಲ್ಲೆಮುಡಿಯ ವೊಗ್ಗೆ....ಮಲಾಂಗಿಯ ಕದುತರಾಲ್ಲ....ದರೊ ತುಳಿಯಿ ....ತ್ರಿನ ಹೊಂನಂಡೆಯೊಳಗೆ ವೋಕುಳಿ ತುಂಬಿ ಅತ್ಯಂತ ಹರುಷದಿಂ....ಯ ॥ ೨೬ ॥ ಪತಿಯ....ಡೆ ಪಗಡೆಯುಯನಾಡಿ ಸತಿ ಬಳಲಿದೆಯನು ತಾ। ಸತಿ ಶಿರೊ....ದ್ರಾವುಪತಿಯ । ಮೂದಲಿಸೂತಲೇ ॥೨೭॥ ಹದಿನಾರು ಸಾವಿ........

ವಿಷಯ : ಅರ್ಜುನನು ಕೊರವಂಜಿ ವೇಷದಿಂದ ಸುಭದ್ರೆಯನ್ನು ಕೊಂಡೊಯ್ದುದು.

ವಿಶೇಷ : ಅತ್ಯಂತ ಶಿಥಿಲವಾಗಿದೆ.

7.6.

93

ಕೆ. ಬಿ.೧೨೦	ಅರ್ಜುನ ಕೊರವಂಜಿ	ಯಕ್ಷಗಾನ
೭.೮" × ೬.೨"	?	?
೧—೧೮ ಪತ್ರ	೧೭ ಪಂಕ್ತಿ	೨೧ ಅಕ್ಷರ

ಆದಿ : ಅರ್ಜುನ ಕೊರವಂಜಿ ಸುಭದ್ರಾಕಲ್ಯಾಣ ||
ಶರಣೆನ್ನೀ ಜನರೆಲ್ಲ | ಕ್ಷಿತಿಗತಿಹಿತ ಅತಿಸನ್ಮುಸುಜರ ಪಥದಲ್ಲಿ ಸಲಹಿದಗೆ |
ಅಸುರರ ಸೀಕ್ಷಿಸಿದಗಣಿತ ಮಹಿಮಗೆ | ಲಕ್ಷ್ಮೀದೇವಿಯ ಪ್ರಿಯಗೆ ||೧|

ಅಂತ್ಯ : ದೇವೇಂದ್ರ ಪೂಮಳೆ ಕರೆಯೆ | ವಿಪ್ರರು ಅತಿದೇವ ಮುಡಿಯಃಲಕ್ಷತೆ ತಳಿದು ||
ದೇವರದೇವರುಡುಗೆ ತಾಂಬೂಲವ ಸೇವಕಜನರಿಗೆ ತೊಡಿಸಿದರು ಮಂ ||೨೦೫||
ಮಂಗಳಂ ಜಯ ಮತ್ಸ್ಯ ಕೋರ್ಮ ವರಾಹ ನರಶಿಂಗ ವಾಮನಗೆ ಭಾರ್ಗವ ರೂಪಗೆ | ಮಂಗಳಂ ರಾಮಕೃಷ್ಣ ಬೌದ್ಧಕಲ್ಕಿಗೆ ಜಯಮಂಗಳವೆಂದು ಪಾಡಿದ ರಾಗ ಮಂಗಳಂ ಜಯಮಂಗಳಂ.

ವಿಷಯ : ಕೊರವಂಜಿ ವೇಷದಲ್ಲಿ ಅರ್ಜುನನು ದ್ವಾರಕಿಯನ್ನು ಹೊಕ್ಕು ಶ್ರೀಕೃಷ್ಣನ ಸಹಾಯದಿಂದ ಸುಭದ್ರೆಯನ್ನು ಹಸ್ತಿನಾವತಿಗೆ ಕೊಂಡೊಯ್ದುದು.

ವಿಶೇಷ : ಪ್ರತಿಯಲ್ಲಿ ಒಂದೆರಡು ಕಡೆ ಹುಳು ತಿಂದಿದೆ. ಕೆಲವೆಡೆ ಅಳಿಸಿ ಬರೆದಿದೆ.

4.3.6.2.

94

ಕೆ.ಬಿ. ೪೩	ಅರ್ಥಪಂಚಕ ನಿರೂಪಣಂ	ಚಂಪು
೭.೮" × ೬.೨"	ಚಿಕ್ಕುಪಾಧ್ಯಾಯ	೧೬೭೨
೧—೩೮ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಅರ್ಥಪಂಚಕ ಬರಿಯುವುದಕ್ಕೆ ಶುಭಮಸ್ತು ||
ಶ್ರೀ ರಮಣನರ್ಥಪಂಚಕ
ಸಾರಜ್ಞ ಜನೌಘ ಮುಕ್ತಿದಾಯನತುಲೋ
ದಾರಕರಂ ಚಿ
ದ್ವಾರಿಧಿಯಾಗೆನುಗೆ ವರದರಾಜಂ ಶುಭಮಂ ||೧||

ಅನಿಶಂ ಸಂಸೃತಿಯುತ ಚೇ
ತನಂಗೆ ತತ್ವಂಗಳರಿವಿನುಚ್ಚಲಿಪ ಸಾ
ಧನಕರ್ಥ ಪಂಚಕದ ತಿಳಿ
ವನುಕೂಲಮುಮಾರುವೆಂದೊಡಾಂ ಬಿತ್ತರಿಪೆಂ ॥ ೨ ॥

ಅಂತ್ಯ : ಈಯರ್ಥಪಂಚಕಂಗಳ
ನಿಳೆಯೊಳ್ತಿಳ್ತಿಪುವರ್ಗೆ ಬರೆವರ್ಗ್ಗೆಸಿರ್ವ
ರ್ಗ್ಗೆಯತಿಯಿನಾಲಿಪರ್ಗ್ಗೆ
ಶ್ರೀ ಯಧಿಪತಿವರದನಧಿಕಸೌಖ್ಯಮನೀಗುಂ ॥ ೩೩ ॥

ಶ್ರೀ ವರದನರ್ಥಪಂಚಕ
ಭಾವಜ್ಞ ಜನೇಷ್ಟದಾಯಿಯೆಮಗೀಗನಿಶಂ
ಪಾವನಭಕ್ತಿಯನಕೃತಿ
ಗಾವಗಮೊದವುಗೆ ಜಯಶುಭಂ ಕಲ್ಯಾಣಂ ॥ ೩೪ ॥
ಅರ್ಥಪಂಚಕಂ ಸಂಪೂರ್ಣಂ ॥

ವಿಷಯ : ವಿಶಿಷ್ಟಾದ್ವೈತ ವೇದಾಂತ.

ವಿಶೇಷ : ಸ್ಫುಟಾಕ್ಷರ.

95

ಕೆ. ಬಿ. ೯೧/೨	**ಅರ್ಧೇಂದು ಮೌಳಿಶತಕ**	ವೃತ್ತ
೭.೮" × ೬.೫"	ಗೊಮ್ಮಟಾರ್ಯ	ಸು ೧೫೦೦
೧–೪೪ ಪುಟ	೧೨ ಪಂಕ್ತಿ	೨೧ ಅಕ್ಷರ

ಆದಿ : ಅರ್ಧೀಂದು ಮೌಳಿಶತಕಂ ॥ ....
ಅಱ್ ತಾತಂಣೇರ್ಗಳಂ ಸತ್ಕವಿ ನವರಸಮುಂ ತುಂಬಿ ಕಂಪುಳ್ಳಪೂಮಂ
ಕಱು ತಾಯುಂ ನಲ್ಲಮೆಣ್ಣಲ್ಲನನತಿಸುಭಟಂ ಯುದ್ಧಮುಂ ರೋಗಿ ಮರ್ದಂ
ಸೆಱೆಯೊಳ್ಸಿಲ್ಕಿರ್ಧಿಭಂ ವಿಂಧ್ಯಮನನುದಿನಮನ್ವೇಷಿಪಂತೆಯ್ದು ಬಿಲ್ಲುಂ
ಬೆರಗಪ್ಪನ್ನಂ ಮನಂ ನಿನ್ನನೆ ಬಿಡದಱಸುತ್ತಿರ್ಪುದರ್ಧೇಂದು ಮೌಳಿ ॥ ೩ ॥

ಅಂತ್ಯ : ಸೌರಾಷ್ಟ್ರಂ ಸೋಮನಾಥಂ ಪ್ರಭುಗಿರಿಶಪದಕ್ಷೇಪಿತಂ ಚಿತ್ರ ಭಕ್ತಿ
ಶ್ರೀರಾಮುಂ ಗುಮ್ಮಟಾರ್ಯ್ಯಂ ವಿರಚಿತವೆನಿಪರ್ಧೇಂದು ಮೌಳಿಸ್ತವಾಖ್ಯಂ
ಸೌರಂ ಶೈವಾಗಮೋಕ್ತಂ ಶಮದನು ನಿಯುಮಾರ್ಥಪ್ರದಂ ಭಕ್ತಿಯಿಂದೊ
ಲ್ದಾರಾನುಂ ನಿಚ್ಚನಿಚ್ಚಂ ಪಠಿಯಿಸಿದವರ್ಗಕ್ಕುಂ ವಿಶಿಷ್ಟಾರ್ಥ ಸೌಖ್ಯಂ
॥ ೧೦೮ ॥

ಅರ್ಧೇಂದು ಮೌಳಿಶತಕಂ ಸಂಪೂರ್ಣಂ.

ವಿಷಯ : ತತ್ತ್ವಗಳನ್ನೊಳಗೊಂಡಿರುವ ಸ್ತುತಿ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಆರಂಭದಲ್ಲಿ ಎರಡು ಪದ್ಯಗಳಿಲ್ಲ. ಮಧ್ಯೆ ಕೆಲವೆಡೆಗಳಲ್ಲಿ ಗ್ರಂಥಲೋಪವಿದೆ. ಮೊದಲಿನ ೫೩ ಪದ್ಯಗಳು ಅರ್ಧೇಂದು ಮೌಳಿ ಎನ್ನುವುದರಿಂದಲೂ ಉಳಿದ ಪದ್ಯಗಳು ಅತ್ಯಂತ ಶುದ್ಧಾ ಎನ್ನುವುದರಿಂದಲೂ ಮುಗಿದಿವೆ. ಈ ಪುಸ್ತಕದಲ್ಲಿ ರಾಮನಾಥ ಶತಕ, ಪಂಪಾಶತಕ ಎಂಬ ಎರಡು ಶತಕಗಳಿವೆ. ಅಸಮಗ್ರ ಪ್ರತಿ.

6·4· 96

ಕೆ. ೪೧೯	ಅಲಂಕಾರಶಾಸ್ತ್ರ	ಗದ್ಯ
೧೨. ೯" × ೧.೨"	ಕೇಶವಶಾಸ್ತ್ರಿ	?
೧–೪೪ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ವೇಲಾಪುರನಾಥಾಯ ಶ್ರೀ ವತ್ಸಾಂಕಿತ ವಕ್ಷಸೇ
ಶ್ರೀ ಕೇಶವಾಭಿದಾನಾಯ ಶ್ರೀ ಕಾಂತಾಯ ನಮೋನಮಃ ॥
ಶ್ರೀ ವೇಲಾನಗರೀಡ್ವಿಷ್ಣು ಧ್ಯಾನಾಮೃತ ತರಂಗಿಣೀಂ
ಸರಸ್ವತೀ ಸಂಪ್ರದಾಯ ಯತಿರಾಡ್ಗುಣಮಂಜರೀಂ ॥
ಕಥಾ ಶಿವಭುಜಂಗಸ್ಯ ವ್ಯಾಖ್ಯಾನಮಪಿ ಕೋಮಲಂ
ಭಾಸ್ವತ್ಕನಕಧಾರಾಂ ಚ ಲಕ್ಷ್ಮೀದಂಡಕಮೇವ ಚ ॥
ಅರ್ಥತ್ರಯಯುತಾಂ ತಾರಾವಳೀಂ ತಸ್ಯಾಶ್ಚ ದೀಪಿಕಾಂ
ಕವಿಕಂಠ ಪಾಶಪ್ರತಿಮಾಂ ನಾನಾರ್ಥಾಂ ಚರಣಸ್ತುತಿಂ ॥
ಕೇಶವಾಷ್ಟಪದಿಂ ಪ್ರೀತ್ಯಾ ಯಶ್ಚಕಾರ ಕವೀಶ್ವರಃ
ಸೋಽಯಂ ಕೇಶವ ಶಾಸ್ತ್ರೀತಿ ಪ್ರಸಿದ್ಧೋ ಹಾಸನೇ ವಸನ್
ತನೋತ್ಯಲಂಕಾರಶಾಸ್ತ್ರಂ ಮೃದುಕರ್ಣಾಟಭಾಷಯಾ ॥

ಕಾಂತೆ ಸಹವಾಗಿ ಸರಸಕಂತುಕ ಕೇಳಿ ಮುಂತಾದ
ಕಂತು ಖೇಲನಗಳಿಂ ಸಂತುಷ್ಟನಾದ ಕಮಲಾಕಾಂತನಂ ನೆನೆದು
ಕಾಂತ ಭೂಪತಿಗೆ ಸಂತೋಷಕರವಾದಲಂಕಾರ ಶಾಸ್ತ್ರವಂ ಕೇಳಿ ‖ ೧ ‖

ಯಾವ ಪದ್ಯದೊಳು ಕವಿಸಮ್ಮತವಾದ ಚಂದ್ರಕಮಲ ಮುಂತಾದ ಉಪಮಾನಗಳ ಪೇಳಿ ಮೊಖ ಮೊದಲಾದ ಉಪಮಾನಗಳ ಪೇಳಿ ಮೊಖ ಮೊದಲಾದ ಉಪಮೇಯಗಳ ಪೇಳಿ ಈ ಸ್ತ್ರೀಯು ಮುಖಕಾಂತಿಯಿಂದ ಚಂದ್ರನಿಗೆ ಸರಿಯಾಗಿದ್ಧೀತೆಂದು ಸಾದೃಶ್ಯ ಹೇಳಲ ಪಧ್ಧತಿದ್ದೀತೋ ಅಲ್ಲಿ ಉಪಮಾಲಂಕಾರಂ ‖

ಅಂತ್ಯ : ವ್ಯಾಜನಿಂದಾಲಂಕಾರ – ನಿಂದೆಯಿಂದ ನಿಂದೆಯೇ ತೋರಿದಡೆ ವ್ಯಾಜನಿಂದಾಲಂಕಾರಂ । ಮೃದುವಾದ ಕೇಶವನ ಪಾದಪದ್ಮದ ಚರಿತಾಮೃತವಪಾನ × × × ಶ್ರೀ ಕೇಶವನ ದಿವ್ಯಚರಿತಾಮೃತಪಾನಾ ಮಾಡಿಕೊಂಡು ಸುಖವಾಗಿರದೆ ವಿಷಯಾಟವಿಯಲ್ಲಿ ತಿರುಗುತಿದ್ಧೇ....

ವಿಷಯ : ಅಲಂಕಾರಗಳ ಲಕ್ಷಣ ಮತ್ತು ಲಕ್ಷ್ಯಗಳ ವಿವರ.

ವಿಶೇಷ : ಅಸಮಗ್ರಪ್ರತಿ. ಗ್ರಂಥಾರಂಭದಲ್ಲಿ ಕೆಲವು ಸಂಸ್ಕೃತ ಶ್ಲೋಕಗಳಿವೆ. ಗ್ರಂಥಲಿಪಿ. ಕ್ರಮಾಂಕ ಳ ಪುನರುಕ್ತಿಯಾಗಿದೆ. ಮೊದಲನೆಯ ಒಂದು ಬೇರೆ ಪತ್ರದಲ್ಲಿ ಕವಿಯು ರಚಿಸಿದ ಕೃತಿಗಳ ವಿವರ ಇದೆ.

8.3.5.1 97

ಕೆ. ೩೬/೬	**ಅವಧೂತ ಗೀತೆ**	ಹಾಡು
೧೪. ೭" × ೨.೩"	ಗುರುಬಸವೇಶ್ವರ	ಸು. ೧೪೩೦
೫೯–೬೨ ಪತ್ರ	೧೨ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯನಮಃ ‖ ಅವಧೂತಗೀತಿ ‖ ಪದಸೂ ‖
ಸ್ವಸ್ತಿ ಸಮಸ್ತ ಜಗಂ ನಿಜರೂಪ । ಭಕ್ತಮನೋಮಂದಿರ ಚಿದ್ವೀಪಾ ‖
ನಿತ್ಯಂ ಗುರುಬಸವೇಶ ಪರಾಪ । ಕೂರ್ತೆಂನೊಳು ನೆಲಸಿರು ನಿರ್ಲ್ಲೇಪಾ ‖ ೧ ‖

ಅಂತ್ಯ : ಭಾಳದೊಳಮಳ ವಿಭೂತಿಯ ಭಾಣ । ನಾಲಗೆಯೊಳು ನಾಮಾಮೃತ ಪಾನಾ ‖
ಮೇಲುಸಿಖರದೊಳಗಭವನ ದ್ಯಾನಾ । ಮೂಲಾಧಾರ ಬಾಲಾದ್ಭವಹೀನಾ ‖ ೬೭ ‖

ಅವರವರೊಳಗಿಹನವರವರಂತೆ । ವಿವರಿಸಿನೊ........ಷಟ್ಕಾವ್ಯಕ್ಕಂ ಪದನು ೮೮೮ ಕ್ಕಂ ಶ್ರೀ.

ವಿಷಯ : ವೇದಾಂತ.

ವಿಶೇಷ : ಶಕಟರೇಫ ಪ್ರಯೋಗವಿದೆ. ೬೧ ನೇ ಪತ್ರ ಲುಪ್ತವಾಗಿದೆ. ಅಸಮಗ್ರ. ಇದರೊಂದಿಗೆ ಮನೋವಿಜಯ ಕಾವ್ಯ, ಶಿವಯೋಗಂಗಾಭೂಷಣ ಮೊದಲಾದ ಇತರ ಆರು ಗ್ರಂಥಗಳಿವೆ.

98

ಕೆ.ಬಿ. ೧೮/೨	**ಅವಧೂತ ಗೀತೆ**	ಹಾಡು
೭.೭" × ೬.೨"	ಗುರುಬಸವೇಶ್ವರ	ಸು. ೧೪೩೦
೩೫–೩೮ ಪತ್ರ	೧೨ ಪಂಕ್ತಿ	೨೫ ಅಕ್ಷರ

ಆದಿ : ಅವರವರೊಳಗಿಹನವರವದಂತೆ
ವಿವರಿಸಿ ನೋಡಲು ತಾ ತಂನಂತೆ
ರವಿ ಗಗನಾಂಗಣದೊಳು ನಡವಂತೆ
ಭವವಿರಹಿತನಾದನು ವೋರಂತೆ ॥ ೬೮ ॥

ಭಸಿತ ಕರಂಡ ಕಮಂಡಲು ದಂಡಾ
ಪಸರಿಸಿದ ಬೆನಹರಾಕ್ಷರ ತುಂಡಾ
ಸ್ವಸನ ಮನೋಜಯವಾಗಿಹ ಕಂಡಾ
ಮಸುಳಿಸದಿಹವರ ಸದ್ಗುರು ಪಿಂಡಾ ॥ ೬೯ ॥

ಅಂತ್ಯ : ಸ್ವಾನುಭವದ್ವಯದಿಂ ಗುರುಭಸವಾ
ತಾನವಧೂತನೆನಿಸಿ ಕೇಳಿರವಾ
ಜ್ಞಾನೋತ್ತರ ಮಾರ್ಗದ ಬಹುವಿಧವಾ
ಸಾನಂದದಿ ಪೇಳ್ದನು ನಿಜಮತವಾ ॥ ೧೦೧ ॥

ಅವಧೂತಗೀತೆ ಸಮಾಪ್ತ ಮಂಗಳಮಸ್ತು ॥ ಶ್ರೀ ॥ ಅಂತು ಕಾವ್ಯ ಷಷ್ಟ ಮಕ್ಕಂ ಪದನು ೮೯೭ ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ವೀರಶೈವ ಸಿದ್ಧಾಂತದ ವಿರಕ್ತಿಬೋಧಕ ಹಾಡುಗಳು.

ವಿಶೇಷ : ಅಸಮಗ್ರಪ್ರತಿ. ಈ ಕೃತಿಯೊಡನೆ ಶಿವಯೋಗಾಂಗ ವಿಭೂಷಣವೆಂಬ ಗ್ರಂಥವಿದೆ.

99

ಕೆ.ಬಿ. ೩೪೪/೨ | ಅವಧೂತ ಗೀತೆ | ಹಾಡು
೭.೮" × ೬" | ಗುರುಬಸವೇಶ್ವರ | ಸು ೧೮೩೦
೨೫–೮೧ ಪುಟ | ೧೫ ಪಂಕ್ತಿ | ೨೫ ಅಕ್ಷರ

ಆದಿ : ಅವಧೂತಗೀತಿ ಬರೆಯುುವದಕ್ಕೆ ಶುಭಮಸ್ತು । ಚವುಪದಿ ।
ಸ್ವಸ್ತಿ ಸಮಸ್ತಜಗಂ ನಿಜರೂಪ
ಭಕ್ತ ಮನೋಮಂದಿರ ಚಿದ್ವೀಪ
ನಿತ್ಯಂ ಗುರು ಬಸವೇಶ ಪರಾಪ
ಕೂತ್ತೆಂನೊಳು ನೆಲಸಿರು ನಿರ್ಲೇಪ ॥ ೧ ॥

ಗುರುಬಸವೇಶ ಸಮಗ್ರಪರೇಶ
ಶರಣಮನಸ್ಸರಸಿರುಹ ನಿವಾಸ
ಪರಮನಿರಂತರ ಸುಖ ಪರಿತೋಷ
ವರಕರ ಸಲಹೆಂನನು ಭವನಾಶ ॥ ೨ ॥

ಅಂತ್ಯ : ಸ್ವಾನುಭವದ್ವಯದಿಂ ಗುರುಬಸವ
ತಾನವದೂತನೆನಿಸಿ ಕೇಳ್ದಿಶವ
ಜ್ಞಾನೋತ್ತರಮಾರ್ಗದ ಬಹುವಿಥವ
ಸಾನಂದದಿ ಪೇಳ್ದನು ನಿಜಮತವ ॥ ೧೦೧ ॥
ಅ ದೂತಗೀತಿ ಸಂಪೂರ್ಣಂ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತದ ವಿರಕ್ತಿ ಬೋಧಕ ಹಾಡುಗಳು.

ವಿಶೇಷ : ಈ ಪುಸ್ತಕದಲ್ಲೆ ವೃಷಭಗೀತೆ, ಪಂಚವಿಂಶತಿಲೀಲೆ, ಪರಮಾರ್ಥ ಗೀತೆಯ ಟೀಕು ಎಂಬ ಕೃತಿಗಳಿವೆ.

7.6. 100

ಕೆ.ಬಿ. ೧೩೨ | ಅಶೋಕಸುಂದರೀ ಪರಿಣಯ | ಯಕ್ಷಗಾನ
೭.೭" × ೬.೨" | ಶಾಂತವಿಠಲ | ?
೧–೩೨ ಪತ್ರ | ೧೫ ಪಂಕ್ತಿ | ೨೫ ಅಕ್ಷರ

ಆದಿ : ಶ್ರೀ ವಿಷ್ಣುಪುರಾಣ ಆಶೋಕಸುಂದರೀ ಪರಿಣಯ ॥ ಯಕ್ಷಗಾನ ನಾಟಕ ॥
ಶ್ರೀ ಹರಸುತಗಭಿವಂದಿಸಿ । ಗುರುಶಾರದೆಯಂ ಪ್ರಾರ್ಥಿಸಿ । ಕವಿಜನ ಪದ

ವಾರಿ | ಜಕೆ ತಲೆವಾಗುತ್ತ ನುತಿಸುವೆ ಭಾರತಿಯ ಬಲಗೊಂಡು ಹರಿಯನು
ಧ್ಯಾನಿಪೆ ಮನ್ಮನದೊಳಂ. ‖ ೧ ‖

ರಾಗ ನಾಟಿ-ಝಂಪೆತಾಳ ‖

ಜಯ ಜಯತು ವಿಘ್ನೇಶ
ಜಯ ತರುಣ ಸಂಕಾಶ
ಜಯಸಕಲ ಮುನಿಪೋಷ
ಜಯತು ಜಗಧೀಶಾ ‖ ೨ ‖

ಅಂತ್ಯ : ವಿದೂಷಕ ಪ್ರವೇಶ–ಬಂದಾ ಸವಿಗಾರ ಬಂದಾ ಬಂದಾ ‖ ಪಲ್ಲಾ ‖
ಬೇವು ಗೊಂಚಲ ಮುಡಿದು
ಕಪ್ಪು ಪಿಡಿದು ಕುಣಿಕುಣಿದು ‖ ೪೫೨ ‖

ಕಾಲಗೆಜ್ಜೆಯ ನುಡಿಸಿ । ದೀಪವ ಹಿಡಿಸಿ
ವಡಂಬಡಿಸಿ ಬುಧಜನರ್ಮನವ ‖ ೪೫೩ ‖

ಶಾಂತವಿಠಲನೆಂದು
ರಸತಂದು
ಮುಂದೆ ಬಂದು
ಬಹುಭಾಗ್ಯಪದಕೆ ‖ ಬಂದಾ ‖ ೪೫೪ ‖

ಮಂಗಳ | ರಾಗ | ಸವುರಾಷ್ಟ್ರ ತ್ರಿಪುಟ ತಾಳ ‖
ಮಂಗಳಂ ಗಿರಿಜಾರಮಣ.

× × × × ×

ಸಂತತಮೂಷಕತೋಷ ಅಮೃತಭಾಷ
ಶಾಂತವಿಠಲ ವಿಘ್ನವಿನಾಶನ ನಮೋ ನಮೋ ‖ ೪೬೧ ‖ ಶ್ರೀ ‖

ವಿಷಯ : ನಹುಷನು ಘೋರದಾನವನಾದ ಹುಂಡನನ್ನೂ ಆತನ ಮಗನನ್ನೂ ಕೊಂಡು ಪಾರ್ವತಿಯ ನಂದನೆಯಾದ ಅಶೋಕಸುಂದರಿಯನ್ನು ವಿವಾಹ ವಾದ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

8.6. 101

ಕೆ. ೮೩ ಅಶ್ವವೈದ್ಯ (ಸಟೀಕಾ) ಕಂದ, ವೃತ್ತ, ಟೀಕು
೧೦.೮" × ೧.೧" ? ?
೧-೧೨೫ ಪತ್ರ ■ ಪಂಕ್ತಿ ೫೦ ಅಕ್ಷರ

ಆದಿ : ಅಶ್ವವೈದ್ಯಾ ಬರವ ಪುಸ್ತುಕಕ್ಕೆ ಅಮೃತಸಿಧಿರಸ್ತು ॥
ಅನು....................................
....
...............ವತ ಕೃತಿ ಲಕ್ಷಣದಿಂ
ದಿನಕರ ತನಯು ರೇವಂತನ ಮತದಿಂ ಪೇಳ್ವೆನೆಸವ ಪೊಂನ್ನ ಕಂನ್ನಡದಿಂ ॥
ಟೀಕು ॥ ಹೇಳಲ್ಪಟಂಥಾ ಅಶ್ವಶಾಸ್ತ್ರ....................................ಕೃತಿಯ ಲಕ್ಷಣದಿಂದ ಸೂರ್ಯನ ಮಗನು ರೇವಂತ್ತನ ಮತದಿಂ ಕಂನ್ನಡವಾಗಿ ಹೇಳಿಹೆನೂ. ॥೧॥

ಅಂತ್ಯ : ಉಬ್ಬುವುದು ಹೊಟೆ ಶ್ವಾಸವು
ನೆಬ್ಬಿಸುವದು ಭರದುಲಾಡುಗು ಬೆಂಸುಂ
ಬೆಬ್ಬನೆ ಬೆರತಿಹುದು ತಾ
ನುಬ್ಬರಿಸುವ ವಾಯುಶೂಲೆಯಂಬುದದಕ್ಕುಂ ॥
ಟೀಕು ॥ ಹೊಟ್ಟೆ ಉದುವದೂ ಯಿದಿರುಬ್ಬಸವಹುದು। ಭರದಲ್ಲಿ ಪಾಡುಗ್ಯೆ ಉದು ಬೆಂನು ಬೆರತಿಹದು ಅದಂ ಉಬ್ಬರಿಸುವ ವಾಯುಶೂಲೆಯೆಂಬದೂ ॥೬೩॥
ಹಿಡಿಹಿಡಿಕೆಯ ಸಮೂಲದೊ
ಳೊಡಗೂಡಿದ ಶುಂಠಿ ಉಳ್ಳಿ ನಲೆಂಣೆಯೊಳುಂ
ತಡೆಯದೆ ಕೂಡಿಟಡ ಬಲಕಂ
ದೃಢ ತೈಲವ ಪೂಸಿ ಶಾಕಂಗ್ಯೆಯುಲು ತೀರ್ಗುಂ ॥ ಟೀಕು ॥

ವಿಷಯ : ಕುದುರೆಯ ವೈದ್ಯ.

ವಿಶೇಷ : ಒಂದನೇ ಪತ್ರ ಅರ್ಧ ಮುರಿದಿದೆ. ಮಧ್ಯೆ ಕೆಲವು ಪತ್ರಗಳಿಗೆ ಹುಳು ಹಿಡಿದಿದೆ. ೧೦ನೇ ಅಧ್ಯಾಯದಲ್ಲಿ ೬೩ನೇ ಪದ್ಯದವರೆಗಿದೆ.

೩.೬

102

ಕೆ. ೪೮೩	ಅಶ್ವವೈದ್ಯ (ಸಟೀಕಾ)	ಶ್ಲೋಕ, ಟೀಕು
೧೭.೩" × ೧.೪"	?	?
೧-೭೧ ಪತ್ರ	೧೦ ಪಂಕ್ತಿ	೮೧ ಅಕ್ಷರ

ಆದಿ : ಅಶ್ವವೈದ್ಯಾ—

ಶಾಲಿಹೋತ್ರಂ ಮುನಿಶ್ರೇಷ್ಠಂ ಶುಶ್ರುತಪ್ಪರಿಪೃಚ್ಛತಿ ।
ಅಶ್ವಪ್ರಶಂಸ ಮಾಹಾತ್ಮ್ಯಂ ಸ ಜ್ಞಾತಂ ತತ್ವತೋ ಮಯಾ ।
ತದಾಹಂ ಶ್ರೋತುಮಿಚ್ಛಾಮಿ ವಿಸ್ತರೇಣವದಸ್ವ ಮೇ ॥

ಟೀಕು ॥ ಶುಶ್ರುತನೆಂಬಂಥಾ ಮುನೀಶ್ವರನು ಮುನಿಶ್ರೇಷ್ಠನಾದ ಶಾಲಿ ಹೋತ್ರಂನ್ನು ಕುರುತು ಅಶ್ವಪ್ರಶಂಸಾ ಮಹಿಮೆಯುಂನ್ನು ಹೇಳಿದನು। ಬಾರ್ಯೆಯ್ಯಾ ಶಾಲಿಹೋತ್ರನೆ ನಿಂನ ದೆಶೆಯಿಂದ ಸಂಕ್ಷೇಪದಲ್ಲಿ ತಿಳಿಯಲ್ಪಟ್ಟಿತು। ಆ ಅಶ್ವ ಪ್ರಶಂಸೆಯುಂನ್ನು ವಿಸ್ತಾರದಿಂದ ಕೇಳುವುದಕ್ಕೋಸ್ಕರ ಯಿಚ್ಛೈಸ್ತೇನೆ ನನಗೆ ಹೇಳಿ ॥

ಅಂತ್ಯ : ನಾನಾ ಶೂಲೆಗೆ ಶ್ವಾಸನ ಮಾಡೂದು। ವೈಯಿಕ್ಕೂದು। ಅಳೈ ಆಡೂದು। ಅದಕ್ಕೆ ಔಷಧಿ। ಮುತ್ತುಕದ ಬೀಜ ಚಾಪನದ ಹೂವು। ಮಾದಿಫಲದ ಕುಸುಮ ಯಿಂಗು ಯಿವಂ ತುಪ್ಪದಲ್ಲಿ ಯಿಕ್ಕುವುದು। ಮೂತ್ರಶೂಲೆಗೆ ದಂಡಿಗೆಯ ಮುರಿಯುವುದು। ಅದಕ್ಕೆ ಔಷಧಿ। ನೆಗ್ಗಿಲ ಬೇರುಂನ್ನು ಹಾಲಲ್ಲಿ ಅರೆದು ಹುಯ್ಯೂದು। ವಿಷಾವರ್ತಶೂಲೆ ಲಕ್ಷಣ ಮಾತೃಕೆಯಲ್ಲಿ ಯಿದ್ದ ಗ್ರಂಥ ಸಂಪೂರ್ನ। ಯಿಂನ್ನು ಯಿಾವೈದ್ಯವ ಸಂಪಾದಿಶಿ ಕೆಲವು ಚಿಕಿತ್ಸೆ ಬರಯಬೇಕಾಗಿ ಯಿದ್ದಿತು। ಅದನರಿತು ಯಿಂನ್ನು ಗ್ರಂಥ ಸಂಪಾದಿಸಿ ಬರಲ್ತಕದು ॥ ಇತಿ ಮಾನಪ್ರಿಯ ಶಾಲಿಹೋತ್ರಮತೇ ಅಶ್ವವೈದ್ಯಂ ಸಂಪೂರ್ನಂ ॥

ವಿಷಯ : ಶಾಲಿಹೋತ್ರನ ಅಶ್ವವೈದ್ಯದ ಟೀಕು.

ವಿಶೇಷ : ಮೊದಲು ಶ್ಲೋಕವನ್ನು ಬರೆದು ಬಳಿಕ ಅದಕ್ಕೆ ಟೀಕನ್ನು ಕೊಟ್ಟಿದೆ. ಅಂತ್ಯದಲ್ಲಿ ಕೆಲವು ಔಷಧಿಗಳಸಂಗ್ರಹವಿದೆ.

೪.೬.

103

ಕೆ.ಬಿ. ೧೦೩/೧ | ಅಶ್ವವೈದ್ಯ (ಸಟೀಕಾ) | ಕಂದ ಪದ್ಯ, ಟೀಕು
೭.೩" × ೬.೧" | ಅಭಿನವಚಂದ್ರ | ಸು. ೧೪೦೦
೧–೩೩೪ ಪತ್ರ | ೧೧ ಪಂಕ್ತಿ | ೨೩ ಅಕ್ಷರ

ಆದಿ : ಅಶ್ವವೈದ್ಯ ಕಂದಪದ್ಯದ ಟೀಕು ॥ ಪ್ರಾರಂಭ ॥
ಅನುಪಮ ಹಯ ಶಾಸ್ತ್ರಾಗಮ
ವನಧಿಯೊಳಾ ಸಿಂಹದತ್ತ ಕೃತಿಲಕ್ಷಣದಿಂ
ದಿನಕರನ ತನಯ ರೇವಂ
ತ್ತನ ಮತದಿಂ ಪೇಳ್ವೆನೆಸೆವ ಪೊಸಕನ್ನಡದಿಂ ॥ ೧ ॥
ಟೀಕು ॥ ಹೇಳಲ್ಪಟ್ಟಂಥಾ ಅಶ್ವಶಾಸ್ತ್ರವೆಂಬ ಸಮುದ್ರದಲ್ಲಿ ಸಿಂಹದತ್ತನು ಹೇಳಿದ ಕೃತಿಯ ಲಕ್ಷಣದಿಂದ ಸೂರ್ಯನ ಮಗನು ರೇವಂತನ ಮತದಿಂ ಕಂನಡವಾಗಿ ಹೇಳಿಹೆನೂ ॥ ೧

ಅಂತ್ಯ : ನುಗ್ಗೆ ಶಿಖಿ ಸಿಂಧು ಫಳಮುಂ
ಮುಗ್ಗಿಸು ಅರಿದಾಳ ಗಂಧಕಂ ಮಣಿಶಿಲೆಯುಂ
ತಗ್ಗಿಸು ಶಿಖಿಮುಖ ತುಪ್ಪದಿ
ಭೊ.... ತೊಯಿದರಳೆ ಬಾಹುಪಂನೆಯು ತೀರ್ಗುಂ ॥ ೧೧ ॥
ಟೀಕು ॥ ನುಗ್ಗೆಯ ಬೇರು ಚಿತ್ರಮೂಲನ ಬೇರು ಸಮುದ್ರಫಳದ ಕಾಯಿ ಅರಿದಳ ಗಂಧಕ | ಮಣಿಶಿಲೆ ಯಿವೆಲ್ಲವಂ ಚೂರ್ಣವಂ ಮಾಡಿ ಗೇರತುಪ್ಪದಲ್ಲಿ ಹಾಕಿ ಕಾಶಿಯಿರಿಸಿ ಆ ಯಂಣೆಯುಂ ಬತ್ತಿಯಿಂ ಕೊಯಿದು ಕುದುರೆಯ........

ವಿಷಯ : ಕುದುರೆಯ ವೈದ್ಯ ವಿಚಾರ (ಔಷಧಿ ಮುಂತಾದುವು).

ವಿಶೇಷ : ಅಸಮಗ್ರ ಪ್ರತಿ, ಸುಂದರಾಕ್ಷರ. ಮಧ್ಯೆ ಮಧ್ಯೆ ಗ್ರಂಥಪಾತವಿದೆ. ೫೮ರಿಂದ ೬೧, ೬೯ ರಿಂದ ೭೨, ೯೨ ರಿಂದ ೯೫, ೨೧೯ ರಿಂದ ೨೨೨, ೨೬೮ ರಿಂದ ೩೦೯ ಇವು ಖಾಲಿ ಪತ್ರಗಳು. ೧೮ ನೇ ಅಧ್ಯಾಯದ ೧೧ನೇ ಪದ್ಯದ ಟೀಕೆಯಿಂದ ಮುಂದಿನ ಗ್ರಂಥಭಾಗವಿಲ್ಲ. ೨೫೧ನೇ ಪತ್ರದಲ್ಲಿ ಕವಿಯ ಹೆಸರಿದೆ. ೩೩೫ರಿಂದ ೩೬೨ ಕ್ರಮಾಂಕ ಪೂರ್ತಿ ಖಾಲಿ ಪತ್ರಗಳಿದ್ದು ಬಳಿಕ ಬಾಚರಸನ ಅಶ್ವ ವೈದ್ಯವಿದೆ.

8.6. 104

ಕೆ.ಬಿ ೧೦೩/೨	ಅಶ್ವವೈದ್ಯ	ವೃತ್ತ
೭.೩'' × ೬.೧''	ಬಾಚರಸ	ಸು. ೧೫೦೦
೩೬೩–೩೭೧ ಪತ್ರ	೧೧ ಪಂಕ್ತಿ	೧೭ಅಕ್ಷರ

ಆದಿ : ಶಾಲಿಹೋತ್ರನ ಮತ । ಸ್ರಗ್ಧರಾವೃತ್ತ ॥
ಸುಶ್ರುತ ಶಾಲಿಹೋತ್ರ ನಳವಾಕ್ಯದೊಳುಂ ಹಯಚೇಷ್ಟೆ ರೂಪು ದಂ
ತಶ್ರವಣಾಕ್ಷಿ ವರ್ನ ಸುಳಿ ನಾಲಗೆ ಗಂಧ ಶುಭಾಶುಭಂಗಳಂ
ವಿಶ್ರುತ ಮೂಪತ್ತೈದೆನಿಪ ವೃತ್ತದೊಳುಂ ನೆರೆ ಪೇಳ್ದನಾಗ ಮೈ
ತಾಶ್ರಯ ಚೌಡರಾಜಸುತ ಬಂಜರಸಂ ಸುಜನೈಕ ಬಾಂಧವಾ ॥೧೪॥

ಅಂತ್ಯ : ಚಳಮಭ್ಯಂಜನಮಿಪ್ಪತೊಂಭತ್ತೆನಿಪಬ್ದಂಬಕಂ ವತ್ಸಮೈಯ್ದುಳ್ಕೆ ತಾ
ನಲುಗುತಿಪ್ಪವು ಕಂಡಮುಂ ಕುಸಿದು ಬೇರುಂ ತೋಕ್ಕ್ರ್ಗೆ ಚೆಲ್ವಾಗಿ ನೋ
ಡಲು ಮೂವತ್ತೆರೆಡಬ್ದದೊ.... ತನಮೆಂಬೀ ವ್ಯಂಜನಂ ಪುಟ್ಟಲಾ
ಸ್ಖಲಿತಂ ಬೀಳುಗು ದಂತಪಙ್ತಿ ಪರಮಾಯುಂ ತುಂಬಲಶ್ವಾಳಿಗಳ್ ॥೩೪॥

ವಿಷಯ : ಕುದುರೆಗಳ ಸುಳಿ ಮತ್ತು ಅವುಗಳ ಫಲವಿಚಾರ.

ವಿಶೇಷ : ಈ ಗ್ರಂಥದಲ್ಲಿ ೩೪ ಪದ್ಯಗಳಿವೆ. ಸುಂದರಾಕ್ಷರ. ಇದೇ ಪುಸ್ತಕದಲ್ಲಿ ಅಭಿನವಚಂದ್ರನ ಅಶ್ವವೈದ್ಯವೆಂಬ ಗ್ರಂಥ ಟೀಕೆಯೊಡನೆ ಇದೆ.

8.6. 105

ಕೆ.ಎ. ೨೩೩	ಅಶ್ವಶಾಸ್ತ್ರ	ಕಂದ
೧೩.೧'' × ೮.೨''	ಅಭಿನವಚಂದ್ರ	ಸು. ೧೪೦೦
೧–೧೫೪ ಪತ್ರ	೧೬ ಪಂಕ್ತಿ	೧೪ ಅಕ್ಷರ

ಆದಿ : ಕಂದಂ ॥ ಶ್ರೀಪತಿ ದಾನವ ಕುಲದ
ಪ್ಪಾರ್ಪಹನಮರೇಂದ್ರ ವಂದಿತಂ ಸಕಲ ಜಗ
ದ್ವ್ಯಾಪಕನೆಮಗೀಗೆ ಸುಖ
ವ್ಯಾಪಾರೋದಾರ ಮಹಿಮೆಯಂ ಚಕ್ರಧರಂ ॥೧॥

ಅಂತ್ಯ : ಸಕಲ ವಿಷಹರಮನನುಪಮ
ಸಕಲ ಕ್ಷಯರೋಗ ಹರಮನೆಸೆದಿರೆ ಪೇಳ್ದಂ
ಸಕಳ ಬುಧಸ್ತುತ್ಯಮನೊ
ಲ್ವಿಕಳಂಕರ್ಪೊಗಳೆ ಷೋಡಶಾಧ್ಯಾಯಮಿದಂ ॥ ೩೮ ॥
ಅಂತು ಸಂಧಿ ೧೬ಕ್ಕಂ ಪದ ೮೮೮ಕ್ಕಂ ಮಂಗಳ ಮಹಾ। ಶ್ರೀ। ಶಾಳಿಹೋತ್ರ ಸಮಾಪ್ತಃ। ಗ್ರಂಥ ಲೆಕ್ಕಕ್ಕೆ ೧೮೮೮ಕ್ಕಂ ಮಂಗಳ ಮಹಾಶ್ರೀ॥

ವಿಷಯ : ಕುದುರೆಯ ವೈದ್ಯ ವಿಚಾರ (ಔಷಧಿ ಮುಂತಾದುವು).

ವಿಶೇಷ : ಶಕಟ ರೇಫದ ಬಳಕೆಯಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಗ್ರಂಥಾರಂಭದಲ್ಲಿ ವಿಷಯ ಸೂಚಿಯನ್ನು ಪ್ರತ್ಯೇಕ ಎರಡು ಪುಟಗಳಲ್ಲಿ ಬರೆದಿದೆ. ೧೫೪ ರಿಂದ ೧೫೯ ರವರೆಗಿನ ಪತ್ರಗಳಲ್ಲಿ ಗ್ರಂಥಕ್ಕೆ ಸೇರದ ಕುದುರೆಗಳ ಹಲ್ಲು, ಸುಳಿ, ಆಯುಷ್ಯ ಮೊದಲಾದ ವಿಷಯಗಳ ಸಂಗ್ರಹವಿದೆ.

8·6 106

ಕೆ.ಬಿ. ೨೨೭	**ಅಶ್ವಶಾಸ್ತ್ರದ ಟೀಕು**	ಗದ್ಯ
೮" × ೬.೭"	ರಾಮಚಂದ್ರ	ಸು. ೧೬೨೫
೧೭–೧೨೦ ಪತ್ರ	೧೨ ಪಂಕ್ತಿ	೨೮ ಅಕ್ಷರ

ಆದಿ : ನಾಗಿ ಕರಾಳಿಯಾಗಿರಲಾಗದು. ಈ ಲಕ್ಷಣಗಳುಳ್ಳ ಕುದುರೆಯನಾಳಲಾಗದು. ಕುದುರೆಗೆ ಉದ್ದವಾದ ಹೊಳಕು ಆವದಾದರೂ ಮೈಯಲ್ಲಿ ಒಂದು ಊನ; ಬಹಳ ಉದ್ದ ಬಹಳ ಗಿಡ್ಡ ದೊಡ್ಡ ಮಲೆಗಳು; ಕಿವಿಯ ತುದಿಯ ಕವಲುಗಳು ಎರಡು ಮುಖದ ಹಾಗೆ ಹಿಂದೆ ಮುಂದೆ ವಿಕಾರವಾದ ಮುಖ; ಹೆಚ್ಚಾದ ಹಲ್ಲುಗಳು; ವೃಷಣಗಳು ಹೆಚ್ಚು ಕುಂದು; ತಲೆಯಲ್ಲಿ ಕೊಂಬಿನ ಹಾಗೆ ಕಾಣಿಸುವ ಹುಬ್ಬು, ಈ ಹೇಳಿದ ಗುಣಂಗಳು ಇರಲಾಗದು.

ಅಂತ್ಯ : ಚುಜ್ಜಲತೊಪ್ಪೆ ಚಿತ್ರಮೂಲತೊಪ್ಪೆ ಈ ಎರಡನ್ನು ಚೆನ್ನಾಗಿ ತುಳಿದು ಹಸುವಿನ ಹಾಲಲ್ಲಿ ಕಾಯಿಸಿ ಕೊಳಗಿನ ಮೇಲಿಕ್ಕಿ ಬಿಗಿದು ಕಟ್ಟಿ ಒಂದು ದಿನ ಇರಿಸುವುದು. ಮರುದಿನ ಮದ್ದು ತೆಗೆದು ಹಾಕಿ ಈ ಮದ್ದನಿರಿಸುವುದು. ಮದ್ದುಗಳ ಗೇರುತುಪ್ಪ ಎಣ್ಣೆ ಹೊಂಗೆಯೆಣ್ಣೆ ಬಿಳು ಹಾಲೆ ತೊಪ್ಪೆಯ ಅರೆದು ಕಟ್ಟಲು ಸುಖವಹುದು. ಅಶ್ವಶಾಸ್ತ್ರಂ ಸಂಪೂರ್ಣಂ.

ವಿಷಯ : ಶಾಲಿಹೋತ್ರನ ಅಶ್ವಶಾಸ್ತ್ರದ ಕನ್ನಡ ಗದ್ಯಾನುವಾದ.

ವಿಶೇಷ : ಶಿಥಿಲ ಮತ್ತು ಅಸಮಗ್ರ ಪ್ರತಿ. ಆದಿಯಲ್ಲಿ ೧೬ ಪತ್ರಗಳಿಲ್ಲ. ೧೭ ನೇ ಪತ್ರದಲ್ಲಿ ನಾಲ್ಕನೆಯ ಅಧ್ಯಾಯದ ಮಧ್ಯಭಾಗದಿಂದ ಗ್ರಂಥ ಆರಂಭವಾಗಿ ೧೨೦ ನೇ ಪತ್ರದಲ್ಲಿ ೧೯ನೇ ಅಧ್ಯಾಯ ಮುಗಿದಿದೆ. ೧೮ನೇ ಅಧ್ಯಾಯದ ಕೊನೆಯಲ್ಲಿರುವ ಎರಡು ಪದ್ಯಗಳಿಂದ ರಾಮಚಂದ್ರ ಕವಿಯಾದ ತಾನು ಮೈಸೂರು ಚಾಮರಾಜ ಭೂವರರಿಂದ ಪ್ರೋತ್ಸಾಹಿತನಾಗಿ ಶಾಲಿಹೋತ್ರನ ಅಶ್ವಶಾಸ್ತ್ರವನ್ನು ವಾಕ್ಯರೂಪದಲ್ಲಿ ಕನ್ನಡಿಸಿರುವೆನೆಂದು ಹೇಳಿಕೊಂಡಿರುತ್ತಾನೆ. ಈ ಗ್ರಂಥವನ್ನು ತಿರುನಾರಣೈಯ್ಯಂಗಾರ್ ಎನ್ನುವರು ೯–೨–೧೯೦೧ ರಲ್ಲಿ ಕಂಪೇರ್ ಪ್ರಾರಂಭಿಸಿ ೨೩–೨–೧೯೦೧ರಲ್ಲಿ ಮುಗಿಸಿದರೆಂದಿದೆ. ಕಂಪೇರ್ ಮಾಡುವಾಗ ಕಂಡು ಬಂದ ಗ್ರಂಥಲೋಪಗಳನ್ನು ಬೇರೆ ಕಾಗದಗಳಲ್ಲಿ ಬರೆದು ಅಲ್ಲಲ್ಲೆ ಅಂಟಿಸಿರುತ್ತಾರೆ.

Q.2.5 107

ಕೆ. ೨೨೨/೭	ಅಷ್ಟಪದೀಟೀಕು	ಶ್ಲೋಕ, ಟೀಕು
೯.೧" × ೧.೪"	ಅಪ್ರಮೇಯಶಾಸ್ತ್ರಿ	?
೫೫–೭೭ ಪತ್ರ	೬ ಪಂಕ್ತಿ	೪೬ ಅಕ್ಷರ

ಆದಿ : ಅಷ್ಟಪದಿ ಬರೆಯುದ್ದಕ್ಕೆ ನಿರ್ವಿಘ್ನಮಸ್ತು.

ಮೇಘೈರ್ಮೇದುರಮಂಬರಂ ವನಭುವಃಶ್ಯಾಮಾಸ್ತಮಾಲದ್ರುಮೈ ।
ರ್ನಕ್ತಂಭೀರುರಯಂ ತ್ವಮೇವ ತದಿಮಾಂ ರಾಧೇ ಗೃಹಂ ಪ್ರಾಪಯಾ ॥
ಇತ್ಥಂ ನಂದನದೇಶಿತಶ್ಚಲಿತಯೋಃ ಪ್ರತ್ಯ....ಜ ದ್ರುಮಂ ।
ರಾಧಾಮಾಧವಯೋರ್ಜಯಂತಿಯಮುನಾಕೂಲೇ ರಹಃ ಕೇಳಯಃ ॥

ಟೀಕೂ ॥ ಹೇ ರಾಧೇ ಯಲೆ ರಾಧಾದೇವಿಯೇ ಅಂಬರಂ ಆಕಾಶಉ ಮೇಘೈಃ ಮೇಘಗಳಿಂದ ಮೇದುರಂ ಕಪ್ಪಾಗಿ ಇದ್ಧಿತೂ । ವನಭುವಃ ವನಭೂಮಿಗಳು ತಮಾಲದ್ರುಮೈಃ ಹೊಂಗೆಮರಗಳಿಂದಾ ಶ್ಯಾಮಾಃ ಕಪ್ಪಾಗಿ ಇದ್ಧಿತೂ। ಆಯಂ ಯೀ ಶ್ರೀಕೃಷ್ಣನು ನಕ್ತಂ ರಾತ್ರಿಯಲ್ಲಿ ಭೀರುಃ ಅಂಜುವಂಥಾವನು । ತಸ್ಮಾತ್ ಕಾರಣಾತ್ ಅದು ಕಾರಣ ದೆಶೆಯಿಂದಾ ತ್ವಮೇವ ನೀನೇ ಇಮಂ ಯೀ ಶ್ರೀ ಕೃಷ್ಣನನ್ನು ಗೃಹಂ ಮನೆಯನ್ನು ಪ್ರಾಪಯ ಹೊಂದಿಸುಕೊಂಡಾ ।—

ಅಂತ್ಯ : ಪದ್ಮಾ। ಲಕ್ಷ್ಮೀದೇವಿಯ। ಪಯೋಧರ। ಸ್ತನಗಳ। ತಟೀ। ಪ್ರದೇಶದಲ್ಲಿ। ಪರಿರಂಭ। ಆಲಿಂಗನದಿಂದ। ಲಗ್ನ ತಗಲಿದಂಥಾ। ಕಾಶ್ಮೀರ ಕುಂಕುಮದಿಂದ। ಮುದ್ರಿತಂ। ಗುರುತು ಉಂಟಾಗಿ ಮಾಡಲ್ಪಟ್ಟಂಥಾದಾಗಿಯೂ। ವ್ಯಕ್ತಾ ಬೇರ್ಪಡಿಸಲ್ಪಟಂಥಾ ಅ....ರಾಗವಿವ ಅತ್ಯಂತ ಪ್ರೀತಿ ಉಂಟಾದ್ದಾಗಿಯು। ಖೇಲಂ। ಕ್ರೀಡಿಸುವಂಥಾ। ಅನಂಗ। ಮಂನ್ಮಥನ ದೆಶೆಯಿಂದ ಉಂಟಾದ ಖೇದಂ। ದುಖ್ಖದಿಂದಲಾದ। ಸ್ವೇದಾಂಬು। ಬೆವರು। ಪೂರಂ। ಸ್ವೇದೋದಕದ। ಪೂರಂ ಸಮೂಹ ಉಳಂಥಾ। ಮಧುಸೂಧನಸ್ಯ। ಶ್ರೀಕೃಷ್ಣನ। ಉರಃ। ವಕ್ಷಸ್ಥಳಉ। ನಃ। ನಮಗೆ। ಶ್ರಿಯಂ ಐಶ್ವರ್ಯವಂನ್ನು। ಅನುಪೂರಯತ್। ಧನಲಕ್ಷ್ಮೀ। ಧಾನ್ಯಲಕ್ಷ್ಮಿ। ಸಂತಾನಲಕ್ಷ್ಮೀ। ಸೌಭಾಗ್ಯಲಕ್ಷ್ಮೀ। ವೀರಲಕ್ಷ್ಮೀ। ವಿಜಯಲಕ್ಷ್ಮಿ। ಗ್ನ್ಯಾನಲಕ್ಷ್ಮೀ। ಧೈರ್ಯಲಕ್ಷ್ಮೀಕಟಾಕ್ಷಸ್ಥಿರ ಸಾಮ್ರಾಜ್ಯ ತುಂಬಲು ಮಾಡಲಿ॥

ವಿಷಯ : ಸ್ತೋತ್ರ.

ವಿಶೇಷ : ಪುಸ್ತಕ ಸ್ವಲ್ಪ ಶಿಥಿಲ. ಇದರೊಂದಿಗೆ ಸಂಕ್ಷೇಪಭಾರತ, ಸಂಕ್ಷೇಪ ರಾಮಾಯಣ, ವ್ಯಾಸರಾಮಾಯಣ, ಅನ್ನಪೂರ್ಣಾಷ್ಟಕ (ಸಂ), ಶಿವಸ್ತುತಿ (ಸಂ), ರಾಮಾಷ್ಟಕ (ಸಂ), ಬಾಲಕೃಷ್ಣಾಷ್ಟಕ (ಸಂ) ಎಂಬ ಗ್ರಂಥಗಳೂ ಇವೆ.

108

ಕೆ. ಬಿ. ೮೪/೨	**ಅಷ್ಟಪದೀಟೀಕು**	ಶ್ಲೋಕ, ಟೀಕು
೮.೬″ × ೬.೫″	ಅಪ್ರಮೇಯಶಾಸ್ತ್ರಿ	?
೧–೧೪೮ ಪತ್ರ	೨೧ ಪಂಕ್ತಿ	೧೭ ಅಕ್ಷರ

ಆದಿ : ಅಷ್ಟಪದೀಟೀಕು ಸಹಿತವಾಗಿ ಬರೆವುದಕ್ಕೆ ನಿರ್ವಿಘ್ನಮಸ್ತು.

ಮೇಘೈರ್ಮೇದುರಮಂಬರಂ ವನು ಭುವಶಾಮಾಸ್ತು....ವೈರ್ಸಕ್ತಂ
ಭೀರುರಯಾ ತ್ವಮೇವ ತದಿಮಂ ರಾಧೇ........ಪ್ರಾಪಯಾ।
ಯಿಥ್ಥಂ ನಂದನಿದೇಶತಶ್ಚಲಿತಯೋಃ ಪ್ರತ್ಯಧ್ವಕುಂಜದ್ರುಮಂ।
ರಾಧಾಮಾಧವಯೋರ್ಜಯಂತಿ ಯಮುನಾಕೂಲೇ........ಹಃ ಕೇಳಯಃ ॥೧॥
ಟೀಕು ॥ ಹೇ ರಾಧೆ। ಯಲೈರಾಧಾದೇವಿಯೆ। ಯಸ್ಮಾತ್ತಾ....ತ್।

ಅಂತ್ಯ : ಅದು ಧರ್ಮಶಾಸ್ತ್ರಂಗಳಲ್ಲಿ ವಿರುದ್ಧವಾಗಿ ಅಪೇಯುವಾದುದರಿಂದ ಮರವೆ ವುಂಟಾದುದರಿಂದ ನಿಂನ ಜನ್ಮವೆ ವ್ಯರ್ಥವೆಂಬದರ್ಥಂ। ಹೇಗೆಂಬುದರಿಂದ

ಸಕಲಪುರುಷಾರ್ಥ ಸಾಧನವಾದ ಸಕಲಜನ ಹೃದಯಾನಂದಕರವಾದ ಸಕಲ ಮಧುಪದಾರ್ಥಂಗಳಲ್ಲಿ ಮುಖ್ಯತೆಯೆನುಳ್ಳದಾದ ಜಯದೇವನ ವಾಕ್ಯಂಗಳೆಂಬ| ಅಮೃತವಂನ್ನು। ಸೇವಿಸುವ ಸತ್ಪುರುಷರುಗಳು ಯೆಲೆ ಮಧುವೆ ನಿನ್ನ ಮನ.... ದಃಲಾದರು ನೆನೆಯರು ಯಂಬುದು ತಾತ್ಪರ್ಯಂ। ಇಹಪರಂಗಳಿಗೆ ಸಾಧನವಾದ ಪರಮ ಸುಖಪ್ರದವಾದ ಜಯದೇವ ವಾಕ್ಯಂಗಳೂ। ಸದಾ ಆಸಾದನಂಗೈಲ್ತಕ್ಕ ದೆಂಬುದು ಅಭಿಪ್ರಾಯಂ.

ವಿಷಯ : ಶ್ರೀಕೃಷ್ಣ ರಾಧೆಯರ ಪ್ರೇಮವಿಲಾಸ ವರ್ಣನಾತ್ಮಕ ಸ್ತೋತ್ರ.

ವಿಶೇಷ : ಪ್ರಕೃತ ಗ್ರಂಥದ ಜೊತೆಗೆ ಪ್ರಹ್ಲಾದ ಚರಿತ್ರೆಯೂ ಇದೆ. ೭೬ ಮತ್ತು ೮೪ ಪತ್ರಗಳಲ್ಲಿ ಕೆಲವು ಭಾಗ ಖಾಲಿಯಿದೆ. ಪ್ರತಿಯ ಸ್ಥಿತಿಯು ತ್ರುಟಿತ, ಹುಳು ತಿಂದಿದೆ. ಪತ್ರದ ಕೊನೆಯಲ್ಲಿ ಟೀಕಾಕಾರನ ವೃತ್ತಾಂತ “ಪಾಠಧಾರಣ ಸಾಕ್ಯಾಯ ಕರ್ನಾಟಕ ನಿರಾಕೃತಂ। ಬಾಲಾನಾಂ ಚ ಪ್ರಮೇಯಾಕ್ಯ ಶಾಸ್ತ್ರಿಣಾ ಸತ್ಯವಾದಿನಾ ॥ ೧ ॥ ಇತಿ ಶ್ರೀಮದ್ಭಕ್ತಿವರ್ಧನ ವಿಮಾನ ಸ್ಥಿತಾರ ವಿಂದವಲ್ಲಿಕಾಪತೇಃ। ಅಪ್ರಮೇಯ ಸ್ವಾಮಿನಃ ಪಾದಾರವಿಂದಾರ್ಚಕೇನ ಅಪ್ಪಾಜಿ ಭಟ್ಟಾರಕ ಪುತ್ರೇಣ ಅಪ್ರಮೇಯ ಶಾಸ್ತ್ರೀಣಾ ವಿರಚಿತ ಗೀತಾ ಗೋವಿಂದ ಟೀಕಾಯಾ ಶ್ರಿಂಗಾರ ಪ್ರಕಾಸಿಕಾಯಾಂ ಕೈವಲ್ಯಪ್ರದೋ ನಾಮ ದ್ವಾದಶಸ್ಸರ್ಗಃ ॥ ಅಂತ್ತು ಅಷ್ಟಪದಿ ೨೪ ಕಂ ಗ್ರಂಥ ೭೮ ಕಂ ಮಂಗಳ ಮಹಾ ಶ್ರೀ ”ಎಂದಿದೆ.

109

ಕೆ.ಬಿ. ೩೭೯	**ಅಷ್ಟಪದೀ ಟೀಕು**	ಶ್ಲೋಕ, ಟೀಕು
೭.೯" × ೬.೨"	ಅಪ್ರಮೇಯಶಾಸ್ತ್ರಿ	?
೧–೪೪ ಪತ್ರ	೩೧ ಪಂಕ್ತಿ	೨೫ ಅಕ್ಷರ

ಆದಿ : ಮೇಘೈರ್ಮೇಧುರಮಂಬರಂ ವನಭುವಃ ಶಾಮಸ್ತಮಾಲಾದ್ರುಮೈರ್ನಕ್ತಂ।
ಬೀರುರಯುತ್ವಮೇವ ತದಿಮಂ ರಾದೇ ಗೃಹಂ ಪ್ರಾಪಯಾ ॥
ಯಿಥಂ ನಂದನಿದೇಶತಶ್ಚರ್ರಿತಯೋಃ ಪ್ರತ್ಯಧ್ವಕುಂಜದ್ರುಮಂ।
ರಾಧಾ ಮಾಧವಯೋರ್ಜಯಂತೀ ಯಮುನಾ ಕೂಲೇ ರಹಃ ಕೇಳಯಃ ॥೧॥

ಟೀ ॥ ಹೇ ರಾಧೇ। ಯೆಲ್ಲೆ ರಾಧಾದೇವಿಯೇ। ಯಸ್ಮಾತ್। ಆವುದಾ ನೊಂದು ಕಾರಣದ ದೆಸೆಯಿಂದಾ। ಅಂಬರಂ। ಆಕಾಶವು।

ಅಂತ್ಯ : ಹರಿವಿನಿಹಿತ ಮನಸಾಂ ಹರಿಃ । ಶ್ರೀಕೃಷ್ಣನಂಲ್ಲಿ । ವಿನಿಹಿತ । ಯಿರಿಸಲ್ಪಟ್ಟ । ಮನಸಾಂ । ಮನಸುನಳ್ಳಂಥಾವರುಗಳಾ । ವಿಷ್ಣುಭಕ್ತರುಗಳ ಯೆಂಬುದರ್ಥಂ । ಕಂಠತಟ್ಟೇ । ಕಂಠಪ್ರೇದೇಶವಂನ್ನು । ಅವಿರಾವಾಮಂ । ಯಥಾತಥಾ । ನಿರಂತರಂ । ವಹಣ ಹೇಗಹುದು ಹಾಗೆ । ಅಧಿತಿಷ್ಠತ್ತು । ವಾಸವಾಗಿರವಾಗೀ । ಹೀಗೆಂಬುದರಿಂದಾ । ಹರಿದಾಸರುಗಳ್ಳ । ಕಂಠದಲ್ಲೀ । ಯಿರಲಿಯಂಬುದು ತಾತ್ಪರ್ಯ್ಯಂ ॥ ೮ ॥ ಅಂತೂ ಅಷ್ಟಪದಿ ೨೦ ಕ್ಕಾಂ ಮಂಗಳ ಮಹಾಶ್ರೀ

ವಿಷಯ : ಶ್ರೀ ಕೃಷ್ಣ ರಾಧೆಯರ ಪ್ರೇಮ ವಿಲಾಸದ ವರ್ಣನೆ.

ವಿಶೇಷ : ಪ್ರತಿಯು ಸಾಮಾನ್ಯವಾಗಿದೆ. ಗ್ರಂಥದ ಮೊದಲಲ್ಲಿ " ತ್ತುನಾಮ ಸಂವತ್ಸರದ ಶ್ರಾವಣ ಸೋಮ್ಯನಾಮ ಸಂವತ್ಸರದ....ಹುಳ ೩೦ ಭಾನವಾರದಲ್ಲು ಅಂಣ್ಣೈಯನ ವಹಿಗೆ ಅಂಣ್ಣೈಯನ್ನು । ಅಷ್ಟಪಧಿ ಬರೆಯುವುದಕ್ಕೆ ಶುಭಮಸ್ತು...." ಎಂದಿದೆ. ಮುಂದಕ್ಕೆ ವೈದ್ಯಕ್ಕೆ ಸಂಬಂಧಿಸಿದ ಎರಡು ಪತ್ರಗಳಿವೆ.

8.3.51.

110

ಅಷ್ಟಮಹಸಿದ್ಧಿವಾರ್ಥಕ ಅಷ್ಟಕಗಳು,

ಕೆ.೩೨೨/೯	ಇತ್ಯಾದಿ	ಪದ್ಯ, ಶ್ಲೋಕ, ಗದ್ಯ
೧೩" × ೨"	?	?
೨೪–೩೦ ಪತ್ರ	೧೨ ಪಂಕ್ತಿ	೪೨ ಅಕ್ಷರ

ಆದಿ : ಅಷ್ಟಮಹಸಿದ್ಧಿಗಳ ಪೇಳ್ವೆನೀ ಮನದ
ದುಷ್ಟವಳಿದುರ್ವಿಷಯಮಂ ಕಳೆದುಮಜ್ಞಾನ
ಶ್ರೇಷ್ಟವಾಗಿಹ ಪರಮ ತತ್ವದಲಿ ಕೂಡಲದು ಅಷ್ಟಮಹಸಿದ್ಧಿ ಶುದ್ಧಾ ॥
ಪದ ॥ ಭವಘೋರ ತಿಮಿರದೊಳು ಬಿದ್ದು ಪೊರಳುವ ನರಗೆ
ಭವಹರಂ ಗುರುನಾಥ ತಾ ತಂನ ಕರುಣದಿಂ
ಶಿವಜ್ಞಾನವೆಂಬ ಜ್ಞಾನಾಂ ಜನವ ನಚ್ಚಲ್ಕೆ ಭವಹರಿದು ಪ್ರಭೆಯುದೋರೆ
ನವನಾಳ ನವಚಕ್ರ ನವಪದ್ಮಗಳನೆಲ್ಲ
ಕವಿದುಕೊಂಡಿಹ ಕತ್ತಲೆ ಹರೆದು ತಮತಮಗೆ
ಶಿವನರಿಕೆಯೆಂದು ತೋರಿದಡೆಯಂಜನಸಿದ್ಧಿಯೆಂದೆಂಬ ಭೇದವದರಾ ॥ ೧ ॥

ಅಂತ್ಯ : ವುತ್ತುಂಗ ಮಾಣಿಕದ ಭಿತ್ತಿಮಂಟಪದಲ್ಲಿ ।
ನಿತ್ಯ ನಿರ್ಮಲದ । ನಿಜಗಂಡ ಯೋಗಿಗೆ ।
ಮುಕ್ತಿಯದ್ಯಾಕೆ ಸರ್ವಗ್ನ ॥ ೨ ॥

ವಿಷಯ : ಅಷ್ಟಮಹಾಸಿದ್ಧಿ ವಿಚಾರ.

ವಿಶೇಷ : ಇದರಲ್ಲಿ ಷಡಕ್ಷರಾರ್ಯ ಕೃತವಾದ ಸಂಸ್ಕೃತ ಶಂಕರಗುಣಸ್ತುತಿಯಷ್ಟಕವೂ, ರಾಮದೇವನಿಂದ ರಚಿತವಾದ ಸಂಸ್ಕೃತ ಗಂಗಾಧರಾಷ್ಟಕವೂ, ನಮಃಶಿವಾಯಾಷ್ಟಕವೂ, ಷಡಕ್ಷರಾಂಕನ ಸಂಸ್ಕೃತದ ಮತ್ತೊಂದು ನಮಶ್ಶಿವಾಯಾಷ್ಟಕವೂ, ಬ್ರಹ್ಮಕೃತ ಅರ್ಧನಾರೀಶ್ವರಸ್ತೋತ್ರವೂ ಮತ್ತು ಅಜಪಾಗಾಯತ್ರೀ ವಿಚಾರವೂ, ಒಂದು ಷಡಕ್ಷರಿಯ ಕನ್ನಡ ಹಾಡೂ, ಸರ್ವಜ್ಞನ ಎರಡು ಶಿವಯೋಗ ಸಂಬಂಧಿ ವಚನಗಳೂ ಇರುತ್ತವೆ. ೩೧ ರಿಂದ ೪೮ ಪತ್ರಗಳು ಲುಪ್ತ. ಇದೇ ಕಟ್ಟಿನಲ್ಲಿ ಲಿಂಗಲೀಲಾವಿಲಾಸಗ್ರಂಥದ ವ್ಯಾಖ್ಯಾನ ಇತ್ಯಾದಿ, ಅನುಭವ ಸೂತ್ರ ಮೊದಲಾದ ಗ್ರಂಥಗಳಿವೆ.

6.6. 111

ಕೆ.ಬಿ. ೪೮೮	ಅಷ್ಟವಿಧ ನಾಯಕಾ ಲಕ್ಷಣ ಲಕ್ಷ್ಯ	ಕಂದ, ಪದ್ಯ, ಜಾವಡಿ
೫.೮″ × ೩.೬″	ಲಿಂಗನೃಪ (?)	೧೯ನೇ ಶತಕ
೧–೧೫ ಪತ್ರ	೧೬ ಪಂಕ್ತಿ	೧೨ ಅಕ್ಷರ

ಆದಿ : ಅಷ್ಟವಿಧನಾಯಕಾ ಲಕ್ಷಣ ಲಕ್ಷ್ಯಂಗಳ ಕಂದ ಪದ್ಯ ಜಾವಡಿಗಳೂ ಬರೆಯುವ ದಕ್ಕೆ ನಿರ್‍ವಿಘ್ನಮಸ್ತು ॥

ಲಕ್ಷಣಾ ॥ ಕಂದಾ ॥

ಪರಸತಿಯ ನೆನೆಪಮರಸುತ
ವರನಂ ಸ್ವಾಧೀನಗೊಳಿಸಿ ಮಡಗಿಹೆನೆಂಬಾ
ಗರುವಿಕೆಯನಾಂಪಳಾವಳೊ
ಳವಳೆ ಸ್ವಾಧೀನಪತಿಕೆ ॥

ರಾಗ ॥ ಬೇಹಾಗು ॥ ರೂಪಕ ತಾಳ ॥
ಯೆಂತು ಪೇಳೂವೆ ಸತೀ । ತಾಂತ ನಿರವ ಕಮಲಮುಖಿ ॥ ಪಲ್ಲ ॥
ನೊಂತೆನೇನ ಕಂತೂಪಿತನ
ಯಿಂತುಟೆಂನುತಾನ ॥ ಅನು ॥

ಆಟಪಾಟಂಗಳು। ವುಟಕೂಟವೆಂನೊಳು
ನೋಟವಿಲ್ಲ ಸವತಿಯರೊಳು। ಚೇಟಿಯೆ ನೀ ಕೇಳು ॥ ೧ ॥

× × × × ×

(೩ನೇ ಪತ್ರ) ತುಂಗವುಹಿಮಗೆ। ಜಟಾ। ಸಂಗಿ ಸೋವುಗೆ
ಲಿಂಗಭೂಪಗೆಯಾತ್ಮ। ಲಿಂಗರೂಪಗೆ। ಸದಾಶಿ ॥ ೪ ॥

ಅಂತ್ಯ : ಹರಿಯೆ ಮರೆಯೆನೀ। ಪೊರೆಯೆ ಪರರ ನಾ
ನರಿಯೆ ಸರಿಯೆ ನರ। ಹರಿಯೆ ಮುರಾರಿಯೆ ॥ ೨ ॥
ನೀಲನೀರದಲಿ ಶಾಮಲ ಕಾಯಕರು
ಶಾಲವಾಲ ನತಪಾಲನ ಶೀಲ ॥ ೩ ॥

ವಿಷಯ : ಎಂಟು ವಿಧ ನಾಯಕಾ ಲಕ್ಷಣಕ್ಕನುಗುಣವಾದ ಲಕ್ಷ್ಯ ಪದ್ಯಗಳು.

ವಿಶೇಷ : ಅಸಮಗ್ರ, ಎರಡನೇ ಪತ್ರದ ಒಂದು ಪಾರ್ಶ್ವದಲ್ಲಿ ಬರವಣಿಗೆ ಇಲ್ಲ. ಕೊನೆಯಲ್ಲಿ ಕೆಲವು ಶುದ್ಧಪತ್ರಗಳಿವೆ.

112

ಕೆ.ಎ. ೧೧೭	**ಅಷ್ಟಾವರಣತಿಲಕ (ದೇವರಾಜ ಕಾವ್ಯ)**	ವಾರ್ಧಕ ಷಟ್ಪದಿ
೧೩" × ೮.೨"	ಮಹಮೂರ್ತಿ	?
೧–೬೮ ಪತ್ರ	೩೫ ಪಂಕ್ತಿ	೩೮ ಅಕ್ಷರ

ಆದಿ : ಯೀ ಗ್ರಂಥ ವೀರಶೈವ ಮಥಸ್ತುತೈನ। ಜಂಗಾಲ ಅಷ್ಟಾವರ್ನಾಲು ಅಂಟೆ। ೧ ಗುರು। ೨ನೆ ಲಿಂಗಂ। ೩ನೆ ಜಂಗಂ। ೪ನೆ ವಿಭೂತಿ। ೫ನೆ ರುದ್ರಾಕ್ಷಿ। ೬ನೆ ಪಂಚಾಕ್ಷರಿ। ೭ ಮಂತ್ರಪ್ರದೋದಕಂ। ೮ನೆ ಪ್ರಸಾದಂ ಯಿವಿ ಅಷ್ಟವರ್ನ ತಿಲಕಂ ಯೀ ವರ್ನಾಲ ಮಹಾತ್ಮ್ಯಂಮುಂನೂ ಜೈನುಲು ಕೊಂನ್ನು। ವೀರ ಶೈವ ಮಥಸ್ತುಲಕೂಂನು। ನಡಿಚಿನ ಖರ್ಷಣಮು ಯಿಂನ್ನು ಕೊಂತೆಮಂದಿ ರಾಜುಲುರಾಜರೀಕಂಲೋ ನಡಚಿನ ವಿಚಿತ್ರಮುಲುಂ ನೂವುಂನವಿ ಯೀ ಗ್ರಂಥಂ ಹಳೆಕನ್ನಡಂ ವಾರ್ಧಿಕ ಪದಮುತೋ ವುಂದಿ ॥ ಶುಭಮಸ್ತು ॥

ಶ್ರೀ ಮಹಾಲಿಂಗಪ್ಪಾಲವಾಗಿ ಪೇಳಿದಳು ಮಧುಮಾನಣಿಯ ಕಥೆಸಾತಿ ॥ ವಾರ್ಧಿಕಪದ ॥ ರಾಗ ತಾಳ ಝಂಪೆ ॥

ಶ್ರೀ ಗುರುವಿನೋದ ಕರುಣದಿಂದೆ ಮಹಾಲಿಂಗದೊಲವಾಗಿ ಪ್ರತಿಬಿಂಬಮಂ ಪಡೆದು ಮಧುಮಾನುಣಿಯು ನೀಗಿ ಕ್ಷೇತ್ರಿಯ ಹರಿಮತವ ಕೆಡೆಮೆಟ್ಟಿ ॥ ಅಷ್ಟ ವರ್ನವ ಬೋಧಿಸಿ ॥ ಪದನು ॥

ಶ್ರೀ ಗುರುಪರಬ್ರಂಹ್ಮ ಪಂಚಾಸ್ಯ ಪರಶಿವನೆ
ಯೋಗಿ ಹೃದಿಸಜಭಾನುವೇ ಚಂದ್ರಶೇಕರ
ನಾಗಾರಿಗಮನಂ ಮರಾಳವಾಹನವ್ಯತ । ನಾಗಾರ್ಯರೆ ಸುರವಂದ್ಯನೆ
ಆಗಮ ಶೃತಿಗಗಣಿತನೆ ಅಷ್ಟಮಾಣಮಹೀ-
ಮಾಗರಿಮಾವಾಂಘ್ರಿಮಾದ್ರಿಜಾವರದ ಶಿತಿಕಂಠ
ಭೋಗಿಭೂಷಣ ಭೂತನಾಥ ಭುವನಾಧಾರ ಗುರುವೇ
ದಯಕಲ್ಪತರುವೆ ॥ ೧ ॥

× × × × × ×

ವಾರುಧಿಯ ಕರುಣ ಗಂಭೀರ ನಿಜಸತ್ಯಪರಿ
ಪೂರ । ನೀಲವಂ ಕೇಳುವಳುಲ್ಲ ಸವಲೀ ಚಾರುತರ ಶರಣರುಂನತವ ಕಥೆ
ಚೆಂನಬಸವೇಶ ಪೇಳುವನು ಮುದದಿ ॥
ಭೂರಮಣ ದೇವರಾಜಂಗೆ ಮಧುಮಾಸುನಿಯುಂ
ಬರಮಣಿ । ನಲ್ಲನಿಗೆ ಲಿಂಗಧಾರಣಗೈಯ್ದು
ಸಾರಮಂ ಪೇಳ್ದುದಾ ವಾರ್ಧಿಕ ಷಟ್ಪದವ ದಿವ್ಯಮಣಿ ಪೋಣಿಪಂತೆ ॥ ೩೫ ॥

ವಪ್ಪುದ್ದೊಡವಿಡಿಯ ಹುಚ್ಚಿಮನಣುಗ ಗುರುಶಿದ್ದ
ನೊಪ್ಪಿದಾತ್ಮಜನು ಕರಿವೀರ್ರೈಯ್ಯನಣುಗನ್ನೈಯನುದ
ರಾಬ್ದಿನಿಶಿ ವರದ ಮಹನೂರ್ತಿವೀರ। ವಿರಚಿಸಿ ಕಾವ್ಯ ಗುರುಬಲದಲೀ ॥
ತಪ್ಪೆ ತಿಳಿಯೊಳು ಶರಣು ಜನರು ಶಿವಕವಿಗಳಿಗೆ
ವಪ್ಪದಿಂದೆರಗುವೆನು ತಪ್ಪು ತಿದ್ದಿದವರಿಗೆ
ಅಪ್ಪುವೆನು ಚರಣ ಕಿಂಕರ ಕಿಂಕರರವೆಂಕನಾಗಪ್ಪೆನೋ ॥ ೩೬ ॥

ಅಂತ್ಯ : ಗುರುಕರುಣದಿಂದ ಪುಟ್ಟಿದ ಕಾವ್ಯವ ಧರೆಯೊಳಗೆ
ಬರೆದು ಪಠಿಸಿದು ಅರ್ಥವ ಮಾಡಿ
ದರಿಗೆ ಹರಯಿಷ್ಟಾರ್ಥವ ಕೊಡುತಿಹ ನಿರುತವು ಶರಣರ ಕಥಾಮೃತವ ಬಲ್ಲ
ನಿತು ಪೇಳ್ದಿಂವಂ
ದರಿತರೊಂದರಿಯೆ ಬಾಲಮತಿಯಿಂ ಪದ ಪದ್ಯ
ಶಬ್ದ ಪ್ರಾಸು ಯೇತಿಗಳ ಬೇದ ಬಾವಾರ್ಥವೆಂಕಣದೆ ಮಹಾಮುರ್ತಿನಿಂ
ಮವರ ತರಳನೆಂದೆರಗುವೆನು ಕರಪಿಡಿದು ಬಲ್ಲ ಪ್ರಹೊಡರು ತಿದ್ದಿ ಮೆರಸು
ವದೂ
॥ ೨೧೭ ॥
ಯೀ ಅಷ್ಟವರ್ನ ತಿಲಕ ಹನ್ನೊಂದನೆ ಸಂಧಿ ಸಮಾಪ್ತ ಸಾವಿರದ ಮೂರ
ನೂರಮುವ್ವತಾರು ಪದಕಂ ಮಂಗಳ ಮಹಶ್ರೀ.

ವಿಷಯ : ನವಿಲಪುರದರಸು ದೇವರಾಜನನ್ನು ಆತನ ಪತ್ನಿ ಮಧುಮಾನುಣಿಯು ಅಷ್ಟಾವರ್ಣವಂನ್ನು ಬೋಧಿಸಿ ಲಿಂಗಧಾರಣೆ ಮಾಡಿಸಿದ ಕಥೆ.

ವಿಶೇಷ : ಮೋಡಿ ಅಕ್ಷರ.

113

ಕೆ. ೩೨೩/೨	**ಅಷ್ಟಾವರಣಸ್ತೋತ್ರದ ತ್ರಿವಿಧಿ**	ತ್ರಿವಿಧಿ (?)
೫.೪" × ೨"	ಸಿದ್ಧರಾಮ	ಸು ೧೧೬೦
೧೬–೩೧ ಪತ್ರ	೧೧ ಪಂಕ್ತಿ	೨೪ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ " ಅಷ್ಟಾವರಣಸ್ತೋತ್ರದ ತ್ರಿವಿದಿ "

ಶ್ರೀಗುರುವೆ ಶ್ರೀಗುರುವೆ ಭವಪಾಶದೂರನೆ
ಶ್ರೀಗುರುವೆ ಆದಿಯಂತರ ಶೂನ್ಯ ನೀನೆ
ಶ್ರೀಗುರುವೆ ಆನಂದಮಯರೂಪ
ನೀ ಗತಿಯಂದಾನತವನೆಯಿದುವನು ಯೋಗಿನಾಥಾ ॥ ೧ ॥

ಅಂತ್ಯ : ಕುಂಭಿನಿಯ ಮಸ್ತಕದ ಯಿಂಬಪ್ಪ ಅಕ್ಷರವ
ಶಂಭು ಕಂಡನು ತಂನ ಅಂತರದಲ್ಲಿ
ಕರಿಯ ಕೂಪದ ವೊಳಗೆ ಬಿಳಿಯ ಜಲ ಪ್ರಜ್ವಲಿಸಿ
ಆದ ಕಂಡು ಮುಕ್ತನ್ನೈ ಯೋಗಿನಾಥಾ ॥ ೧೪ ॥

ಕಂ॥ ಮಂತ್ರ ಮನವಾವರಿಸೆ ಭ್ರಾತುಗೆಟ್ಟುದು ನೋಡಾ
ಶಾಂತಿ ಶಲಿಲದಿಂ ಯೆಂನ ಮೈ ನನದೂ
ಕಂತು ಕಾಲರ ನೆನದು ಮಹಂತ ಮರಣವ ಗೆಲಿದು ನಿ
ಶ್ಚಿಂತ ಸುಖಿಯಾನಾದೆ ಯೋಗಿನಾಥಾ ॥ ೧೫ ॥

ಅಷ್ಟಾವರಣಸ್ತೋತ್ರದ ತ್ರಿವಿಧಿ ಸಂಪೂರ್ನ್ನ ಮಂಗಲ ಮಹಾಶ್ರೀ.

ವಿಷಯ : ವೀರಶೈವತತ್ತ್ವದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪ್ರಸಾದ, ಪಾದೋದಕ ಇವುಗಳ ಮಹಿಮೆ.

ವಿಶೇಷ : ಸಮಗ್ರ, ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಿಶ್ರಸ್ತೋತ್ರ, ಶೀಲವಂತಯ್ಯನ ತ್ರಿವಿಧಿಗಳೆಂಬ ಇತರ ೧೬ ಕೃತಿಗಳಿವೆ. ಇವುಗಳಲ್ಲಿ ಕೆಲವು ಸಂಸ್ಕೃತ ಗ್ರಂಥಗಳಾಗಿವೆ.

114

ಕೆ. ೩೬೯/೮	ಅಷ್ಟಾವರಣಸ್ತೋತ್ರದ ತ್ರಿವಿಧಿ	ಶ್ಲೋಕ, ಟೀಕು
೮″ × ೧.೮″	ಸಿದ್ಧರಾಮ	ಸು. ೧೧೬೦
೪೭–೫೮ ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ಶ್ರೀಗುರುವೆ ಶ್ರೀಗುರುವೆ ಭವಪಾಶದೂರನೆ
ಶ್ರೀಗುರುವೆ ಆದಿಯಂತರಸೂನ್ಯನೆ
ಶ್ರೀಗುರುವೆ ಆನಂದಮಯರೂಪನೆ ಗತಿಯೆ
ದಾನತವನೆಯ್ದುವೆನು ಯೋಗಿನಾಥ ॥ ೧ ॥
ಪರವೆ ಪರಬ್ರಹ್ಮವೆ ಗುರುವೆ ಪರತತ್ವವೆ
ನಿರುತ ನಿರ್ಮಲ ಜ್ಞಾನ ನಿತ್ಯರೂಪಾ
ನಿರತಿಶಯ ನಿರವಧಿಕೆ ನಿರ್ಭಿಂನನಿ ತರ್ದ್ವಂದ್ವ
ಗುರುವೆ ರಕ್ಷಿಸು ಪರವೆ ಯೋಗಿನಾಥ ॥ ೨ ॥

ಅಂತ್ಯ : ಮಂತ್ರಮನವಾವರಿಸೆ ಬ್ರಾಂತುಗೆಟ್ಟಿತು ನೋಡ
ಶಾಂತಿ ಸಲಿಲದಿ ಯಂನ ವ್ಯೆ ನನದುದೂ
ಕಂತುಕಾಲರನೊದೆದು ಮಹಾಂತ ಪುರಾಣವ ಗೆಲಿದು ನಿ
ಶ್ಚಿಂತ ಸುಖಿಯಾನದೆ ಯೋಗಿನಾಥ ॥ ೧೪೫ ॥
ಅಷ್ಟಾವರಣ ತ್ರಿವಿಧಿ ಸಂಪೂರ್ನ್ನ ಮಂಗಳ ಮಹಾಶ್ರೀ.

ವಿಷಯ : ವೀರಶೈವತತ್ವದ ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ, ಪ್ರಸಾದ, ಪಾದೋದಕ ಇವುಗಳ ಮಹಿಮೆ.

ವಿಶೇಷ : ಈ ಗ್ರಂಥವು ಸಮಗ್ರವಾಗಿದೆ. ಆದರೆ ಮೊದಲ ಬಹುಪಾಲು ಓಲೆಗರಿಗಳು ತ್ರುಟಿತ ಹಾಗೂ ಅಂಚುಗಳು ಮುರಿದಿವೆ. ಈ ಗ್ರಂಥದೊಡನೆ ಗುರು, ಷಡ ಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿ ಬಿನ್ನಹ ರಗಳೆಗಳೂ; ಬಸವ ಸ್ತೋತ್ರ, ಮಿಶ್ರಸ್ತೋತ್ರ, ಶೀಲವಂತನ ತ್ರಿವಿಧಿಗಳೂ; ಶಂಕರದೇವ, ಮಂತ್ರಮಹತ್ವ, ಮರುಳುದೇವ, ಪ್ರಭುಲಿಂಗ ಕಂದಗಳೂ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶತಕತ್ರಯವೂ; ಮಲ್ಹಣ ಸ್ತೋತ್ರವೂ ಇವೆ.

115

ಕೆ. ಬಿ. ೨೩೧	**ಆಚರಣಸಂಬಂಧ ಷಟ್ಪದಿ**	ಭಾಮಿನೀಷಟ್ಪದಿ
೮" × ೬.೬"	?	?
೧-೩೦ ಪತ್ರ	೨೫ ಪಂಕ್ತಿ	೩೫ ಅಕ್ಷರ

ಆದಿ : ಭಾಮಿನಿ ॥

ಶ್ರೀಮದಗಜ ವಾಮಭಾಗೋ
ದ್ದಾಮವಪುರಾಭಿರಾಮನಭಿನುತ
ಸಾಮಗಾನಸ್ತೋಮ । ಸರಸಪ್ರೇಮನರಿಭೀಮ
ಕಾಮತಾತ ಪಿತಾಮಹಾಪ್ರಮು
ಖಾಮರೇಂದ್ರ ಕ್ಷೇಮವ ಪ್ರತಿ
ನಾಮನೊಸೆದುದ್ಧರಿಸುಗೆಂಮನು ಸಿದ್ಧವ್ರಜದಾಮಾ ॥ ೧ ॥

ಅಂತ್ಯ : ಪಿರಿದು ಆಚರಣೆ ಷಟ್ಪದಿ ಲಿಂಗಸ್ತೋತ್ರ ಬಸವಸ್ತೋತ್ರ ಮಿಶ್ರಸ್ತೋತ್ರವನು ಅಗಜೆಗೀಶ್ವರ ನಿರೂಪಿಸಿದ ಮಹಿಮೆಯನ್ನು ದೇಶಿಕನಾದ ನಿಮಗೆ ಪೇಳಿದೆನು ಸುವಿಸ್ತರದಿಂದ ಮಧುರತರ ಆಚರಣಸಂಬಂಧಷಟ್ಪದಿಯನ್ನು ॥ ಧರೆಯೊಳಗೆ ಭಕ್ತಿಯಿಂ ಆರಾದರಂ ಪಠಿಸೆ ಕೇಳಿ ಮೆರೆಸುವಂ ವೀರಶೈವ ಪಟ್ಟಕಧಿಹರೆಂದು ಬಸವಂಣ ರಾಮಯ್ಯಗೆ ನಿರೂಪಿಸಿದನು. ॥ ೧೧೧ ॥

ಯೀ ನಾಲ್ಕು ಷಟ್ಪದಿ ವಿವೇಕದಿಂ ಕೇಳ್ವರಿಗೆ ದುಃಕರ್ಮ ದುಸ್ವಪ್ನ ದುಃಶಕುನ ಪರಮದುಗ್ರಹ ದೋಷಪಾವಕಾಹಿ ಜ್ವರಗಳ ಬೀತಿ ಸಂದೋಹವೂ॥ ಮರಳಿ ವೃಶ್ಚಿಕ ಚೋರಪಮೃತ್ಯುವಿನ ಬಾಧೆಯಿದಳಿಗು ಭೂತ ಪಿಶಾಚಿ ದೈವ ದಾರಿದ್ರ ನರಪರಿಂದೊಗೆ ಭಯವಿತತಿಗಳು ನಿಮಿಷಾರ್ಧದೊಳ್ ಕೆಟ್ಟುಪೋಪುದ ನಿಶಂ ॥೧೧೨॥ ಪ್ರಭು ಬಸವೇಶ ಚಂನಬಸವಂಣನು ಕಿಂನರ ಮಾಚಿ ತಂದೆಯಾ ಶುಭಗಗನು ಸತ್ಯನಿಂಬಿ ಮಹಾದೇವಿಯು ನಾಗಾಂಬೆ ಶೀಲನೇತ್ರೆ ಮದ್ವಿಭು ಶಿವ ಸಿದ್ಧರಾಮನಜಗಂಣಶಿವಾತ್ಮಕ ಘಟ್ಟಿವಾಳ । ಅಭವಗಣಂಗಳೆ ಹೃದಯಾಂಬುಜಮಧ್ಯದೊಳಿಕ್ಕೆ ಸತತಂ ॥೧೧೩॥ ಆಚರಣಸಂಬಂಧ ಮಿಶ್ರಸ್ತೋತ್ರ ಸಂಪೂರ್ಣ ಮಂಗಳಮಹಾ ಶ್ರೀ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ಮೊದಲು ೧೬೨ ಪದ್ಯಗಳಾದ ಬಳಿಕ "ಅಂತು ಸಂಧಿ ಸ್ಥಲ ಪ್ರಥಮ ಸಂಪೂರ್ಣ ಮಂಗಳ ಮಹಾ ॥" ಎಂದಿದೆ. ಎರಡನೆಯದಾಗಿ ಲಿಂಗಸ್ತೋತ್ರ ಷಟ್ಪದಿ ೧೧೦, ಬಸವಸ್ತೋತ್ರಷಟ್ಪದಿಗಳು ೧೦೯, ಕೊನೆಯಲ್ಲಿ ಮಿಶ್ರಸ್ತೋತ್ರ

ಷಟ್ಪದಿಗಳು ೧೧೩ ಇವೆ. ಅಂತೂ ಆಚರಣೆ ಸಂಬಂಧ, ಲಿಂಗಸ್ತೋತ್ರಸಂಬಂಧ, ಬಸವಸ್ತೋತ್ರ ಸಂಬಂಧ, ಮತ್ತು ಮಿಶ್ರಸ್ತೋತ್ರ ಸಂಬಂಧಗಳಾದ ಷಟ್ಪದಿಗಳಿವೆ. ದೇಶಿಕಾರ್ಯ ವಿರಚಿತೆ ದೇಶಿಕೋತ್ತಮ ವಿರಚಿತವೆಂದು ಕಟ್ಟಿನ ಮೇಲ್ಭಾಗದಲ್ಲಿ ಬರೆದಿದೆಯಾದರೂ ಕವಿಯ ನಾಮೋಲ್ಲೇಖ ಗ್ರಂಥದಲ್ಲೆಲ್ಲೂ ಕಂಡು ಬರುವುದಿಲ್ಲ.

116

ಕೆ. ೭೫/೫	ಆಚರಣೆಯವಚನ	ವಚನ
೧೦.೭" × ೨.೨"	ಚೆನ್ನಂಜೇದೇವರು ಸೇರಿಸಿದುದು	?
೧೧೩– ೧೧೮ ಪತ್ರ	೧೯ ಪಂಕ್ತಿ	೬೫ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯೆಂ ನಮಃ॥ ಚೆಂನಜೇದೇವರು ಸೇರಿಸಿದ ಆಚರಣೆಯ ವಚನ ॥ ವಂಮೆಯೂ ಶ್ರೀಗುರುವಿನ ಶ್ರೀಚರಣವ ನೆನದಡೆ ಭವಬಂಧನ ಬಿಡುವುದು। ಗುರುವೆ ಶರಣು ಗುರುವೆ ಶರಣು। ಹರಿ ಬ್ರಮ್ಹಾದಿಗಳಿಗೆ ಗೋಚರವಾದ ಕೂಡಲ ಚೆಂನಸಂಗಯ್ಯನೆಂಬ ಲಿಂಗವ ತೋಱದ ಬಸವಂಣ ಗುರುವೆ ಶರಣುಶರಣೂ ॥ ೧ ॥

ಅಂತ್ಯ : ಸಿರಿಯಾಯಿತ್ತೆಂದು ವುತ್ಸಾಹದಿಂದುಬ್ಬದೆ । ಕೆಟ್ಟಿತೆಂದು ಮನನೊಂದು ಭಿಂನವಾಗದಂತೆ ಯಿರಬೇಡಾ ಹಿರಿಯರ ಮನ ಮನ ವಿಶ್ವಂದವಾಗದೊಂದೆ ಯಂದದಲ್ಲಿಪ್ಪಂತಪ್ಪ ನಿಂಮದೊಂದು ಸಮಥಾಗುಣ ಎಂನನೆಂದು ಒಂದು ಪೊಂದಿಪ್ಪುದು ಹೇಳಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ ॥ ೧೪೦ ॥

ಆಚರಣೆಯ ವಚನ ಸಮಾಪ್ತ ಮಂಗಳಮಹಾಶ್ರೀಶ್ರೀ ॥

ವಿಷಯ : ಶರಣರ ಆಚರಣೆಯ ರೀತಿನೀತಿಗಳ ವಿವರ.

ವಿಶೇಷ : ಸಮಗ್ರ ; ಒಟ್ಟು ೧೪೦ ವಚನಗಳಿವೆ. ವಿವಿಧಾಂಕಿತ ವಚನಸಂಗ್ರಹ. ಶಕಟರೇಫವಿದೆ. ಇದರೊಂದಿಗೆ ಸಂಬಂಧವಚನಗಳು, ಬಸವೇಶ್ವರನ ಸ್ತೋತ್ರದ ವಚನಗಳು ಮೊದಲಾದ ಇತರ ೧೨ ಗ್ರಂಥಗಳಿವೆ.

117

ಕೆ.೫೨೫	ಆಚಾರ್ಯರ ಸಂಭವ ಟೀಕು	ಶ್ಲೋಕ, ಟೀಕು.
೧೩.೩" × ೧.೪"	?	?
೧–೯೬ ಪತ್ರ	೬ ಪಂಕ್ತಿ	೫೮ ಅಕ್ಷರ

ಆದಿ : ಶ್ರೀ ಸೋಮನಾಥಾಯ ನಮಃ ॥ ಆಚಾರ್ಯರ ಸಂಭವ ಗ್ರಂಥ.

ಭವಸಂಚಿತ ಪಾಪೌಘ ವಿಧ್ವಂಸನ ವಿಚಕ್ಷಣಂ।
ವಿಘ್ನಾಂಧಕಾರಭಾಸ್ವಂತಂ ವಿಘ್ನರಾಜಮಹಂ ಭಜೇ ॥

ಧ್ಯಾನಶ್ಲೋಕ ॥ ಭಾವಮೇತ್ವಂ ಭವಧ್ವಾಂತ ಭಾಸ್ಯವಾಚಾಮಗೋಚರಃ
ನೀಲಕಂಠ ಸದಾಭಕ್ತ! ವತ್ಸಲಂ ಪರಮೇಶ್ವರಃ ॥ ೧ ॥

× × × × ×

॥ ೧೧ ॥ ವಂದೇ ಜ್ವಾಲ ಜಯಸ್ತಭ । ಲಿಂಗರೂಪಂ ನಮಸ್ತುತೇ ॥ = ॥ ಯಂಬಿವು ಮೊದಲಾದ ಪಂಚವಿಂಶತಿ ಲೀಲಾ ವಿಗ್ರಹ ಮೂರ್ತಿಗಳಿಗೆ ಬ್ಯಾರೆ ಬ್ಯಾರೆ ನಮಸ್ಕಾರವಂನೊಪ್ಪಿಸಲ್ಪಟ್ಟ ಕ್ರಮವೆಂತೆಂದೊಡೆ। ಸಮಸ್ತ ದೈವತಾ ಹ್ವಾನೋತ್ಕೃಷ್ಟ್ಯ ಶಂಕರ ಚಿಂತನಂ ॥ ಯಂದು ವೇದವಿಗ್ರಹ ಬಹು ಪ್ರಸಿದ್ಧ ಮಪ್ಪುದರಿಂದ ಆವುದಾನೊಂದು ಪೂಜಾಸ್ತೋತ್ರ ನಮಸ್ಕಾರ ವಿದ್ಯಾರಂಭ ವಿಧಿ ಮೊದಲಾದವರುಗಳಲ್ಲಿ ಸಾಕ್ಷಾತ್ಪರಮೇಶ್ವರ ಧ್ಯಾನವೆ ಸರ್ವೋತ್ಕೃಷ್ಟ ವಲ್ಲದೆ ವುಳಿದ ದೇವರ್ಕಳಂ ಧ್ಯಾನಿಸಲಾಗದೆಂಬರ್ಥ ಪ್ರತಿಪಾದ್ಯವಾಗಿ ಅಥರ್ವಣ ಸಿರಸ್ಸಿನಲ್ಲಿ ನುಡಿಯುತ್ತಿದೆ ॥ ಶಿವ ಏಕೋ

ಅಂತ್ಯ : ॥ ೧೨೩ ॥ ಯಂದು ಮತ್ತಂ ॥ ವಿಜೋಮಘೋರಹೃತ್ಯಾಖ್ಯ। ವಿಶಬ್ದಃ ಪರಿಕೀರ್ತಿತಃ। ಅಗ್ನಿತತ್ವಜ ಭಕ್ತಸ್ಮಿಂನ್। ರಶಬ್ದ ಪರೋಸ್ಥಿರಾ ॥ ೧೨೪ ॥ ತತ್ವಮದ್ವಾರ್ಯ ಭಕ್ತಾಂತ್ರೇ। ತಶಬ್ದ ರಾಜಿತಶ್ರುಣು ॥ ಯಂದು ಶಿಷ್ಯವರ್ಗ ವಾಕ್ಯವುಂಟಾಗ। ತ್ರಿಯಾಕ್ಷರನೆಂಬ ಯೇಕೋರಾಮಾರಾಧ್ಯನು। ಪಂಚಾ ಚಾರ್ಯರುಗಳ। ಆದ್ಯಾಂತಕ್ರಮಗಣನೆಗೆ। ಮದ್ಧ್ಯಚಾ....ನಹುದರಿಂದಾತನ ಶಿಷ್ಯರೆ। ನಿರಾಭಾರ ವೀರಶೈವರೆಂದು ಪ್ರಮಾಣಮುಕ್ಕು ॥ ಮತ್ತೆಮಾ ತ್ರಿವಿಧ ವೀರಶೈವರು ಮಿತಿಗೆಟ್ಟು। ಅಹಂಭಾವದಿಂದ ಜ್ಞಾನಸಂಪ್ರಾಪ್ತವಾಗಿ। ಗುರುದ್ರೋ

ವಿಷಯ : ವೀರಶೈವ ಪಂಚಾಚಾರ್ಯರ ಉತ್ಪತ್ತಿ, ವಂಶಾವಳಿ ಇತ್ಯಾದಿ.

ವಿಶೇಷ : ಸಮಗ್ರ.

8.3.5.6

118

ಆತ್ಮಲಿಂಗ ಪ್ರಣವಸಂಯೋಗಸ್ಥಲದ ತ್ರಿವಿಧಿ

ಕೆ. ೩೧೮/೧		ತ್ರಿವಿಧಿ, ಟೀಕು
೧೨.೮" × ೨.೨"	ಶೀಲವಂತಯ್ಯ	ಸು. ೧೧೬೦
೧–೩೦ ಪತ್ರ	೧೨ ಪಂಕ್ತಿ	[redacted] ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ ಆತ್ಮಲಿಂಗ ಪ್ರಣವ ಸಂಯೋಗಸ್ಥಲದ
ತ್ರಿವಿದಿಯ ಬರೆಉದಕ್ಕೆ ಶುಭಮಸ್ತು ||
ಕಂದಾ || ನಮವಾತ್ಮಲಿಂಗ ಶಿವಯೆನ
ಲಮಲ ತರದ ಸಂಗಅಯಳಿಗಳೆರಡಾರ್ನಂ ಚಿ
ದ್ರಮಣ ಲಿಂಗಾಂಗ ಸಂಗಾ
ಕ್ರಮವಾತ್ಮ ಸುಲಿಂಗಪ್ರಣವ ಸಂಯೋಗಮಿದಂ ||

ಟೀಕು || ಉಕ್ತಾತ್ || ನಮಃ ಪದಂ ತತ್ವಲ ಜೀವವಾಚಿ |
ಶಿವಃ ಪದಂ ತತ್ಪರವಮಾತ್ಮವಾಚಿ
ಯಾಯಾತ್ಪರಂ ಚ ಪರಂ ಚತುರ್ಥೀ
ಸೋಹಂ ಪರಬ್ರಂಹ್ಮ ಮಯೋಸ್ಮ ಖಂಡಂ ||

ಟ್ಕೀ || ನಮಃ | ನಕಾರ ಮಕಾರಗಳೆರಡೂ | ಆತ್ಮಾ | ಜೀವಾತ್ಮ ಸ್ವರೂಪ
ವಾಹಂತಾ | ಅಂಗಸ್ಥಲಉ | ಶಿವಾಯೆನಲು | ಶಿಕಾರ ವಕಾರಂಗಳೆರಡೂ |
ಲಿಂಗ | ಪರಮಾತ್ಮ ಸ್ವರೂಪವಾಹಂಥಾ ಲಿಂಗಸ್ಥಲಉ | × × × ಶಿವಾಗ
ಮಂಗಳಲ್ಲಿ ಹೇಳಲ್ಪಡುತಿಹುದೆಂದು | ಶ್ರೀ ಗುರು ಶಿಷ್ಯಂಗೆ ನಿರೂಪಿಸುತ್ತಿಹ
ನೆಂಬುದರ್ಥಾ |
ತ್ರಿವಿಧಿ || ಶ್ರೀ ಗುರುದೇವಂಗೆ ಆಗಮಾತೀತಂಗೆ
ನಾಗಕಂಕಣಗೆ | ಯತಿವರ ಮರುಳಾರ್ಯಂಗೆ
ರಾಗದಿಂದೊಮ್ಮೆ ಶರಣೆಂಬೆ ||

ಅಂತ್ಯ : ಕಂ|| ಅಂದಿನ ಹರಗುರು ವಾಕ್ಯದಿ
ಹೊಂದಿದ ಶಿವಯೋಗಿ ಸಾರವಾತುಲ ತಂತ್ರಂ
ಕಂದಪದಶ್ರುತಿ ಗ್ರಂಥ ಉ
ತ್ತಂಗಳ ಗುರುಶಾಂತ ನಾನರಿದಿಕ್ಕುರ್ಣಂ [?] ||
ಯಿಂತಿ ಆತ್ಮಲಿಂಗ ಪ್ರಣವ ಸಂಯೋಗಸ್ಥಲದ ತ್ರಿವಿಧಿ ಸಂಪೂರ್ನ
ಮಂಗಳ ಮಹಾಶ್ರೀ ||

ಜಾತಿಸ್ಮರತ್ವಂ। ಪೃಥುವೀಪತೀತ್ವಂ।
ಸೌಭಾಗ್ಯ ಲಾವಂಣ್ಯಮತೀವ ರೂಪಂ।
ತ್ವದ್ಭಕ್ತಿ ಸೇವಾಪರಮೂಯರಿಷ್ಟಂ।
ತ್ವದ್ಭತ್ಸ್ವಮೇಶಂ ಶಂಕರಜನ್ಮಜನ್ಮನೀ ॥

ಶ್ರೀಮದ್ರಾಜಾದಿ ರಾಜ। ರಾಜ ಪರಮೇಶ್ವರ × × × × ಮಹಿಶೂರ ನಗರದ ಆಳಿದ ಮಹಾಸ್ವಾಮಿ ಕ್ರಿಷ್ಣರಾಜ ಒಡೆಯವರ ಆಗ್ನಾಧಾರಕನಾದ ವಳಬಾಗಿಲ ಗುರಿಕಾರ ದೇವೈಯ್ಯನವರ ಪುತ್ರನಾದ ಮಾದೈಯನ ಸ್ವಹಸ್ತ ಬರಹಾ॥ ಶ್ರೀ ಗುರುಬಸವ ॥

ವಿಷಯ : ಗುರುಸ್ತೋತ್ರ (ವೀರಶೈವಯೋಗ ವಿಚಾರ).

ವಿಶೇಷ : ಬರಹವು ಸುಂದರ. ೧೫ ನೆಯ ಗರಿಯು ಮುರಿದು ತುಂಡಾಗಿದೆ. ಇದೇ ಕಟ್ಟಿನಲ್ಲಿ 'ಮುಕ್ತಾಂಗನ ಕಂಠಮಾಲೆ' ಎಂಬ ಇನ್ನೊಂದು ಗ್ರಂಥವಿದೆ.

8.3.5.4

119

ಕೆ. ೩೪೯	**ಆದಯ್ಯಗಳ ವಚನ**	ವಚನ
೬" × ೨"	ಆದಯ್ಯ	೧೧೬೦
೧-೪೪ ಪತ್ರ	೧೧ ಪಂಕ್ತಿ	೩೦ ಅಕ್ಷರ

ಆದಿ : ಆದೈಯ್ಯಗಳ ವಚನ॥ ಯೋಗವಿಯೋಗವೆಂಬೆರಡಳಿದು॥ ನಿಂಮ್ಮ ನೆನಹುಯೆಂನ ಮನದಲ್ಲಿ ನಿಜಯೋಗವಾಗಿ ಸಮ್ಯಜ್ಞಾನದಲ್ಲಿ। ಪರಮಸುಖವಿಂಬುಗೊಂಡು ಸದ್ಭಾವಜನೆಯೆ ಪ್ರಸಂನವಾಗಿ ಚಿದ್ಬಿಂದುವಿನೊಳು ಪ್ರತಿಬಿಂಬಿಸುತಿಪ್ಪ ಚಿದ್ಬಂಹ್ಮಾವದೊಳಕೊಂಡ ಮಹಾಶರಣರ ತೋಱಿಸಿ ಬದಿಕಿಸಾಸಾರಾಪ್ಪ ಸೋಮೆಶ್ವರಾಗಿ ನಿಂಮ್ಮ ನಿಂರ ಧರ್ಮ ನಿಂಮ್ಮ ಧರ್ಮ॥ ೧ ॥

ಅಂತ್ಯ: ಬಸವಂಣನೆಂನ ಅಂಣ ಮಡಿವಾಳನೆಂನ ಮನ। ಪ್ರಭುವೆಂನ ಪ್ರಾಣ ಚಂನ್ನಬಸವನೆಂನ ಕರಸ್ತಲದಲಿಂಗಾ ಗಟ್ಟಿವಾಳನೆಂನ ಭಾವ। ಸೊಡ್ಡಳ ಬಾಚರಸರೆಯೆಂನ ಅಱು। ಮಹಾದೇವಿಯಕ್ಕನೆಂನ ಗ್ನಾನಾ ಮುಕ್ತಾಯಕ್ಕನೆಂನ ಅಕ್ಕರು। ಸತ್ಯಕ್ಕನೆಂನ ಯುಕ್ತಿ। ನಿಂಬಿಯಕ್ಕನೆಂನ ನಿಶ್ಚಯ। ಅಲ್ಲಾಳಿಯಕ್ಕನೆಂನ ಸಮತ್ತೆ। ಅನುಮಿಸನೆಂನ ನಿಶ್ಚಲ। ನಿಜಗುಣನೆಂನ ಕ್ಷೇಮ। ರೇವಣಸಿದ್ಧದೇವರೆಂನ ನೇತ್ರ। ಸಿದ್ಧಾರಾಮಿತಂದೆಗಳೆಂನ ನೇತ್ರದ್ರುಕ್ಕು। ಮರುಳಸಿದ್ಧೆದೇವರೆಂನ

ಶ್ರೋತ್ರ। ಪಂಡಿತಾರಾಧ್ಯರೆಂನ ಜಿಂಹೆಂ। ಯೇಕೊರಾಮಯ್ಯಗಳೆಂನ ನಾಸಿಕಾ॥ ಅಸಂಖ್ಯಾತರೆಂನ್ನ ಆವಯುವ। ಪುರಾತನರೆಂನ ಪುಂಣ್ಯದ ಪುಂಜ। ಯೇಳು ನುರೆಪ್ಪತ್ತು ಅಮರಗಣಂಗಳೆನಗೆ ಗತಿಮತಿ। ಸೌರಾಷ್ಟ್ರ ಸೋಮೇಶ್ವರಾ ಆ ನಿಂಮ್ಮ ಶರಣರ ಪಡಿದೊತ್ತಯ್ಯ ನಿಂಮ ದರ್ಮ ನಿಂಮ ದರ್ಮ ನಿಂಮ ದರ್ಮ ॥ ೧೭೩ ॥ ಆದಯ್ಯಗಳ ವಚನ ಸಮುಪ್ತ ಮಂಗಳ ಮಹಾ ॥ ಶ್ರೀ

ವಿಷಯ : ವೇದಾಂತವನ್ನು ವಚನ ರೂಪದಲ್ಲಿ ವಿವರಿಸಿದೆ.

ವಿಶೇಷ : ೪೪ ಗರಿಗಳಾದ ಮೇಲೆ ಪ್ರಕೀರ್ಣಪತ್ರವೊಂದು ಸಂಸ್ಕೃತ ಭಾಷೆ ಮತ್ತು ಕನ್ನಡ ಟೀಕೆಯೊಂದಿಗಿದೆ. ಶಕಟರೇಫದ ಬಳಕೆಯಿದೆ. ೧೬ ನೆಯ ಪತ್ರ ಸ್ವಲ್ಪ ಮುರಿದಿದೆ.

120

ಕೆ.ಬಿ. ೨೬೩	ಆದಯ್ಯನ ಕಾವ್ಯ	ವಾರ್ಧಕ ಷಟ್ಪದಿ
೮" × ೬.೬"	ಸಿದ್ಧನಂಜೇಶ	೧೭೦೦
೧–೫ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಆದಯ್ಯನ ಕಥೆ ॥ ಶ್ರೀ ಸರ್ವಸಿದ್ಧಿಪ್ರದಾಯಕ ವಿನಾಯಕಾಯ ನಮಃ॥ ಶ್ರೀ ಸರಸ್ವತಿಯಮ್ಮನವರ ಪಾದಾರವಿಂದವೇ ಗತಿ ॥ ಷಟ್ಪದಿ ॥

ಯಂದು ಸತ್ರಮಥೇಂದ್ರರಾದಿಗಣನಾಯಕನ
ಬಂದುರ ಚರಿತ್ರಮುಂ ಪೇಳ್ವೆನದನೆಂತೆನಲು
ಯಿಂದುಸೇಖರನು ಪುತ್ರಾದ್ಯ ಗಂಧರ್ವಸಿದ್ಧ ಕಿಂನರ ರಾಕ್ಷಸಾ ॥

ವೃಂದ ಯಡಬಲದಲ್ಲಿ ವಾಲೈಸೆ ವೀರೇಶ
ನಂದಿ ಮುಖ್ಯ ಪ್ರಮಥಗಣವೆರಸಿ ಕೈಲಾಸ
ಮಂದಿರದೊಳಗಜಾ ಸಮೇತ ಸಿಂಹಪೀಠದೊಳಗಿರಲಾಗಳೂ ॥ ೧ ॥

ಅಂತ್ಯ : ಆಚಾರ್ಯ ರೇವಣಸಿದ್ಧೇಶ ಮರುಳು ಸಿ
ದ್ಧಾಚಾರ್ಯಮಿದೇವಾಚಾರ್ಯ ಗುರು ಪಂಡಿತಾ
ತಾಚಾರ್ಯ ಚಾಕಮಧ್ಯದಿ ನಿಂದ ಪಂಚನಂಣಿನಿ ಸಿದ್ಧನಂಜೇಶ್ವರಾ ॥
ಸ್ವಾಚಾರ್ಯ ಪದಸರಸಿರುಹ ಷಥುಪ ಚಿಕ್ಕನಂ

ಜಾಚಾರ್ಯ ರಚಿತವಹ ಹಂಪೆಯ ಹರೀಶ್ವರ ಶಿವಾ
ಚಾರ್ಯರ ಸುತ ರಾಘವಾಂಕನ ಕೃತಿಗೆ ಪದಿಮೂರ ಸಂದಿಸುವ ಜೋನು
ಬಂದೀ ‖ ೬೨ ‖

ಅಂತು ಆದಯ್ಯನ ಗಣೇಶನ ಕಾವ್ಯವು ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಆದಯ್ಯನೆಂಬ ಶಿವಶರಣನು ಈಶ್ವರನ ಆಜ್ಞೆಯಿಂದ ಭೂಮಿಯಲ್ಲಿ ಜನ್ಮ ತಳೆದು ಶೈವಧರ್ಮವನ್ನು ಸ್ಥಾಪಿಸಿದ್ದು.

ವಿಶೇಷ : ಪ್ರತಿಯಲ್ಲಿ ಅಲ್ಲಲ್ಲಿ ಹುಳುಗಳಿಂದಾದ ರಂಧ್ರಗಳಿವೆ. ೧–೫ ಪತ್ರಗಳು ಮಾತ್ರ ಇವೆ. ಕವಿಯದಾಗಲಿ, ಲಿಪಿಕಾರನದಾಗಲಿ ಕಾಲ, ದೇಶಗಳು ಹೇಳಿಲ್ಲ. ಪದ್ಯ ಸಂಖ್ಯೆಯು ಅಂತ್ಯದಲ್ಲಿ ೬೨ ಎಂದಿರುವುದು ಹಸ್ತದೋಷದಿಂದ ಎಂದು ಊಹಿಸಬಹುದು. ಏಕೆಂದರೆ, ೬೫ನೇ ಪದ್ಯದ ಅನಂತರ ೬೨ ಎಂದು ಬರೆದಿದೆ. ಹೀಗೆ ಸ್ಖಾಲಿತ್ಯಗಳು ಅಲ್ಲಲ್ಲಿ ಕಂಡುಬರುತ್ತವೆ.

121

ಕೆ. ೧೬೯/೧೨	**ಆದಯ್ಯನ ನಾಂದ್ಯ**	ವಾರ್ಧಕ ಷಟ್ಪದಿ
೯. ೬″ × ೨″	?	?
೫೦_೫೭ ಪತ್ರ	೧೧ ಪಂಕ್ತಿ	೫೦ ಅಕ್ಷರ

ಆದಿ : " ಆದಯ್ಯಗಳ ನಾಂದ್ಯಂ " ವಾಧಿಕ ‖

ಪಲ್ಲ ‖ ದೇವಸಭೆಯೊಳಗಿಂದುಧರನ ಬೆಸನಂ ಪಡೆದು
ಭೂವಳಿಯಕೆಸವ ಸೌರಾಷ್ಟ್ರದೊಳು ಜನಿಸಿ ಬೆಳ
ದಾವಗ ವ್ಯವಹಾರ ರೂಪಿಂದ ಹೂಲಿಗೆರೆಗೆ ನಡೆತಂದನಾದಯ್ಯನೂ ‖

ಪದ ‖ ಶ್ರೀಮದಗಜಾಹರುಷ ರತ್ನಾಕರೇಂದು ಗೌ
ರೀ ಮನೋವನವಸಂತಂ ಭವಾನೀವದನ
ತಾಮರಸ ದಿನಕರನುಮಾ ಕಲ್ಪಲತ ಕಂದಲಿತ ಪ್ರಬಲಸುರ........
ಭೂಮಿಭೃತ್ತನೆ ಯಾಕ್ಷಿಕುಮುದನುತ ಚಂದ್ರಿಕಾ
ನಾಮನೆಂನಂ ಸಲಹುಗನುದಿನಂ ಹುಲಿಗೆರೆಯ
ಸೋಮನಾಥಂ ಸೋಮಶೇಖರಂ ಸೋಮಮುಂದಯಾಳು ಮೂರ್ತಿವಿಲಾ
ಸನೂ ‖ ೧ ‖

ಅಂತ್ಯ : ಮೀಱಿ ಕಂಡಂ ಕಂಡು ತನುವಿನೊಳು ಹಿಳುಕೆಮಂ
ಹೀಱಿದಂ ಸಂತೋಷವನೇಱಿದಂ ಜನನಮಂ
ಮಾಱಿದಂ ಕಳೆಗಳಂ ಬೀಱಿದಂ ವಿಪುಳಡಗೆಯೋರಿದಂ ಸಂ
ಸಾರದಿಂ ಜಾರಿದಂ ನಿಟ್ಟೆಯುಂ ಸಾರಿದಂ ಭಕ್ತಿಯುಂ
ತೋಱಿದಂ ಹಗೆಗಳಂ ಕೇಱಿದಂ ಚಿತ್ತಮಂ
ಮಾರಿದಂ ಶಿವನಡಿಗೆ ಸೂರೆಗೊಂಟ್ಟಂ ಮನವಪ್ರತಿಮನಾದಯ್ಯನೂ ॥೨೧॥
ಆದಯ್ಯಗಳ ನಾದ್ಯ ಸಮಾಪ್ತಂ ಮಂಗಳ ಮಹಾಶ್ರೀ.

ವಿಷಯ : ಸ್ತುತಿ (ನಾಂದೀಪದ್ಯಗಳು).

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಣ್ಣೀಶ್ವರನ ಕಾವ್ಯದ ನಾಂದ್ಯ, ದೇವಿ ಸ್ತುತಿಗಳೇ ಮೊದಲಾದ ಇತರ ೨೩ ಗ್ರಂಥಗಳಿವೆ.

8.3.5.6.

122

ಕ. ೪೧೪	ಆದಿತ್ಯಪುರಾಣ	ಭಾಮಿನೀಷಟ್ಪದಿ
೧೩" × ೨"	ರಾಮಚಂದ್ರಗುರುಶಿಷ್ಯ	ಸು. ೧೫೫೦
೧-೨೯೪ ಪತ್ರ	೧೦ ಪಂಕ್ತಿ	೫೪ ಅಕ್ಷರ

ಆದಿ : ಶ್ರೀಗಣಾಧಿಪತಯೇ ನಮಃ ॥ ಆದಿತ್ಯಪುರಾಣ ಬರೆಯುವುದಕ್ಕೆ ನಿರ್ವಿಘ್ನ ಮಸ್ತು ॥ ಪ್ರಮಾದಿ ಸಂವತ್ಸರದ ಆಶ್ವೀಜ ಶ್ಧ ೧ ಸೋಮವಾರದಲೂ ಯೀ ಪುಸ್ತಕ ಬರೆಯುವದಕ್ಕೆ ಪ್ರಾರಂಭಾ ॥ ಯೀ ಪುಸ್ತುಕ ಬರದ್ದು ಅರಮನೇ ಲೇಖರೀ ಕಾನಕಾನಹಳೀ ದಾಸಪ್ಪನ ಬರಹಾ ॥

ಶಿವಕಥಾಮೃತವೆಂಬ ಶಿವಕಾ
ವ್ಯವನು ಪೇಳ್ವಡೆ ಮೊದಲು ವಿಸ್ತರಿ
ಸುವೆನು ನಾಂದಿಯ ಸಂಧಿಯನು
ಶಿವಮುಖ್ಯ ಸಂಸ್ತುತಿಯಾ ॥ ಪದನೂ ॥
ಶ್ರೀಮದಮೃತ ಮಯೂಖ ಸೀಕರ
ತಾಮರಸ ನೇತ್ರಾದಿ ವಿಜಯ
ಸ್ತೋಮ ಮಣಿಮುಕುಟೀ ಪ್ರಭಾವರಂಜಿತಾಂಘ್ರಿಯುಗಾ
ಸೋಮ ಮಂಗಳ ನಾಮಕರುಣಾ
ಧಾಮಸುಖ ನಿಶ್ರಾಮಭಕ್ತ
ಪ್ರೇಮ ಕಾಶೀರಮಣ ವಿಸ್ತರಿಸು ಶಿವಕಥಾಮೃತವ ॥ ೧ ॥

ಅಂತ್ಯ : ಯಂದು ಸೂಕ್ಷ್ಮದಲಿ ಕಾಶ್ಯಪ
ನಂದನನು ಹೇಳಿದನು ಮುನಿ
ನಂದನಿಗೆ ಹಿತವಾಗಿ ಸಂತಸದಿಂದ ಮನವಲಿದೂ
ಯಿದನರ್‍ರಿದು ನಡರ್‍ರಿಗೆ ಹರಚಿತ
ವೆಂದು ಸೂತಪಉರಾಣಿಕನು ಮುನಿ
ವೃಂದಕೋರದನು ದುಷ್ಟಶಿಷ್ಟಹಿತೋಪದೇಶವನೂ ॥ ೮೨ ॥

ಅಂತೂ ಸಂಧಿ ೪೮ ಕಾಂ ಪದನು ೨೬೬೮ ಕಾಂ ಮಂಗಳಮಹಾಶ್ರೀ ॥
ಆದಿತ್ಯಪುರಾಣ ಸಮಾಪ್ತಂ ॥

ವಿಷಯ : ಶಿವಮಹಿಮಾ ವರ್ಣನೆ.

ವಿಶೇಷ : ಪ್ರತಿಯು ಚನ್ನಾಗಿದೆ. ಅಕ್ಷರ ಸ್ಫುಟ. ೪೪ ನೆಯ ಪತ್ರದ ಒಂದು ಕಡೆ ಮಾತ್ರ ಬರೆದಿದೆ.

123

ಕೆ. ೪೩೮/೧	**ಆದಿತ್ಯ ಪುರಾಣ**	ಭಾಮಿನೀ ಷಟ್ಪದಿ
೧೯" × ೨.೨"	ರಾಮಚಂದ್ರಗುರುಶಿಷ್ಯ	ಸು ೧೫೫೦
೧–೧೧೩ ಪತ್ರ	೧೨ ಪಂಕ್ತಿ	೮೮ ಅಕ್ಷರ

ಆದಿ : ಆದಿತ್ಯ ಪುರಾಣ ಬರಉದಕ್ಕೆ ಶುಭಮಸ್ತು ॥ ಭಾಮಿನೀ ಷಟ್ಪದಿ
ಶಿವಕಥಾಮೃತವೆಂಬ ಶಿವಕಾ
ವ್ಯವನು ಪೇಳ್ವಡೆ ಮೊದಲು ವಿಸ್ತರಿ
ಸುವೆನು ನಾಂದಿಯ ಸಂಧಿಯನು ಶಿವಮುಖ್ಯ ಸಂಸ್ತುತಿಯಾ ॥ ಪಲ್ಲವಿ ॥
ಶ್ರೀಮದಮ್ರುತ ಮಯೂಖ ಶೇಖರ
ತಾಮರಸನೇತ್ರಾದಿ ದಿವಿಜ
ಸ್ತೋಮ ಮಕುಟಮಣಿಪ್ರಭಾ ವಿರಾಜಿತಾಂಘ್ರಿಯುಗಾ
ಸ್ತೋಮ ಮಂಗಳನಾಮ ಕರುಣಾ
ಧಾಮ ಸುಖವಿಶ್ರಾಮ ಭಕ್ತ
ಪ್ರೇಮ ಕಾಶೀರಮಣ ವಿಸ್ತರಿಸೀ ಕಥಾಮ್ರುತವಾ ॥ ೧ ॥

ಅಂತ್ಯ : ಯೆಂದು ಸಂಕ್ಷೇಪದಲಿ ಕಾಶ್ಯಪ
ನಂದನನು ಹೇಳಿದನು ತಂನಯ
ನಂದನಗೆ ಹಿತವಾಗಿ ಶಿವಧರ್ಮಾನುಸಾರವಿದೂ ॥

ಯೆಂದರಿದು ನಡವರಿಗೆ ಹರಚಿರ
ವೆಂದು ಸೂತಪುರಾಣಿಕನು ಮುನಿ
ವೃಂದಕೊರದನು ದುಷ್ಟಶಿಷ್ಟ ಹಿತೋಪದೇಶವನೂ ॥ ೭೮ ॥

ಅಂತೂ ಸಂಧಿ ೪೮ ಕ್ಕಂ ಪದ ೨೮೩೧ ಕ್ಕಂ ಮಂಗಳಮಹಾಶ್ರೀ.

× × × × ×

ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಶ ೧೬೭೮ಂ ನೆಯ ಯಿಾಶ್ವರ ಸಂವತ್ಸರದ ಜೈತ್ರ ಬ ೯ ಯು ಮಂಗಳವಾರದಲ್ಲು ಪೆರುದೂರ ಸಂಣ ನಾರಾಯಣನ ಮಗ ಅನಂತನು ಬರದ ಆದಿತ್ಯಪುರಾಣ ಪುಸ್ತಕಕ್ಕೆ ಶುಭಮಸ್ತು ॥

ವಿಷಯ : ಶಿವಮಹಿಮಾ ವರ್ಣನೆ.

ವಿಶೇಷ : ಪ್ರತಿಯು ಚೆನ್ನಾಗಿದೆ. ಮಧ್ಯದ ೮ ಪತ್ರಗಳ ಅಂಚು ಸ್ವಲ್ಪ ಮುರಿದಿದೆ. ಇದರೊಂದಿಗೆ ಬ್ರಹ್ಮೋತ್ತರ ಖಂಡದ ಕನ್ನಡ ಅನುವಾದದ ಗ್ರಂಥವು ಇದೆ.

124

ಕೆ. ಎ. ೧೯೨.	ಆದಿತ್ಯ ಪುರಾಣ	ಭಾಮಿನೀ ಷಟ್ಪದಿ
೧೨.೩" × ೭.೭"	ರಾಮಚಂದ್ರಗುರುಶಿಷ್ಯ	ಸು ೧೫೫೦
೧–೨೨೦ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಆದಿತ್ಯಪುರಾಣ ಪ್ರಾರಂಭವು – ಭಾಮಿನಿ ಷಟ್ಪದಿ.

ಶಿವಕಥಾಮೃತವೆಂಬ ಶಿವಕಾ
ವ್ಯವನು ಪೇಳ್ವಡೆ ಮೊದಲು ವಿಸ್ತರಿ
ಸುವೆನು ನಾಂದೀ ಸಂಧಿಯನು ಶಿವಮುಖ್ಯ ಸಂಸ್ತುತಿಯಾ ॥

ಶ್ರೀಮದಮೃತ ಮಯೂಖಶೇಖರ
ತಾಮರಸ ನೇತ್ರಾದಿ ದಿವಿಜ
ಸ್ತೋಮ ಮಕುಟಮಣಿ ಪ್ರಭಾವಿರಾಜಿತಾಂಘ್ರಿಯುಗಾ ॥

ಸೋಮಮಂಗಳ ನಾಮ ಕರುಣಾ
ಧಾಮ ಸುಖವಿಶ್ರಾಮ ಭಕ್ತ
ಪ್ರೇಮ ಕಾಶೀರಮಣ ವಿಸ್ತರಿಸಿದನು ಕಥಾಮೃತವ ॥ ೧ ॥

ಅಂತ್ಯ : ವಿಶ್ವನಾಥನೆ ನಡೆಯನಹುದೀ
ವಿಶ್ವದೊಳು ಶಿವನೂರ್ಧ್ವರೇತನು
ವಿಶ್ವನಾಥನ ವೀರ್ಯಕೆಂದು ಪತನವದಕಿಲ್ಲಾ ॥
ವಿಶ್ವದೊಳಗದು ಬೀಳೆ ತಾಳ್ವ
ಮಹದೈರ್ಯವಾಗುಂಟು.

ವಿಷಯ : ಶಿವನ ಮಹಿಮಾವರ್ಣನೆ.

ವಿಶೇಷ : ೪೯ ನೆಯ ಸಂಧಿಯಲ್ಲಿ ೧೧ ನೆಯ ಪದ್ಯ ಅಪೂರ್ಣವಾಗಿದೆ. ಗ್ರಂಥ ಅಸಮಗ್ರವಾಗಿದೆ.

125

ಕೆ.ಬಿ. ೬೩	**ಆದಿತ್ಯ ಪುರಾಣ**	ಭಾಮಿನೀ ಷಟ್ಪದಿ
೨.೭" × ೬.೩"	?	?
೧–೩೯೩ ಪತ್ರ	೧೧ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ॥ ಆದಿತ್ಯಪುರಾಣ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥ ಭಾಮಿನೀ ಷಟ್ಪದಿ ಕನ್ನಡ ಪದ್ಯಕಾವ್ಯ ॥ ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ ॥ ಶ್ರೀರಸ್ತು ॥ ಪಲ್ಲ ॥

ಶಿವಕಥಾಮೃತವೆಂಬ ಶಿವಕಾ
ರ್ಯವನು ಪೇಳ್ದಡೆ ಮೊದಲು ವಿಸ್ತರಿ
ಸುವೆನುನಾದಿಯು ಸಂಧಿಯನು ಶಿವಮುಖ್ಯಸಂಸ್ತುತಿಯಾ ॥
ಪದನೂ ॥ ಶ್ರೀಮದಮೃತಮಯೂಖಶೇಖರ
ತಾಮರಸ ನೇತ್ರಾದಿ ದಿವಿಜ
ಸ್ತೋಮ ಮಣಿಮುಕುಟ ಪ್ರಭಾವ ರಚಿತಾಂಘ್ರಿಯುಗಾ ।
ಸೋಮಮಂಗಳ ನಾಮ ಕರುಣಾ
ಧಾಮ ಸುಖನಿಶ್ರಾಮ ಭಕ್ತ
ಪ್ರೇಮ ಕಾಶೀರಮಣ ವಿಸ್ತರಿಸೀ ಕಥಾಮೃತವಾ ॥ ೧ ॥

ಅಂತ್ಯ : ಯಂದು ಸಂಕ್ಷೇಪದಲಿ ಕಾಶ್ಯಪ
ನಂದನನು ಹೇಳಿದನು ಮುನಿ
ನಂದನಗೆ ಹಿತವಾಗಿ ಸಂತಸದಿಂದ ಮನವಲಿದೂ ।

ಯಿದನರಿದು ನಡದರಿಗೆ ಹರಚಿತ
ವೆಂದು ಸೂತಪುರಾಣಿಕನು ಮುನಿ
ವೃಂದಕೊರದನು ದುಷ್ಟಶಿಷ್ಟ ಹಿತೋಪದೇಶವನೂ ॥ ೮೨ ॥
ಅಂತೂ ಸಂಧಿ ೪೮ ಕ್ಕಂ ಪದನೂ ೨೬೬೮ ಕ್ಕಂ ಮಂಗಳಮಹಾ ॥

ವಿಷಯ : ಶಿವನ ಮಹಿಮಾ ವರ್ಣನೆ.

ವಿಶೇಷ : ಸ್ಫುಟಾಕ್ಷರ.

8.3.4.3.

126

ಕೆ. ೫೭೩	**ಆದಿಪರಮೇಶ್ವರ ಪುರಾಣ**	ಯಕ್ಷಗಾನ
೧೦.೬" × ೨.೨"	ಬೊಮ್ಮಣ್ಣ	?
೧–೭೫ ಪತ್ರ	೧೧ ಪಂಕ್ತಿ	೪೨ ಅಕ್ಷರ

ಆದಿ : ಆದಿಪರಮೇಶ್ವರನ ಯಕ್ಷಗಾನ ಬರವುದಕ್ಕೆ ನಿರ್ವಿಜ್ಞಮಸ್ತು.
ವೃತ್ತ॥ ವಿದ್ಯಾನಂದ ಸುದಾಂಭುರಾಸಿಕುಮುದ ಪ್ರಾಣಾಪ್ತಚಂದ್ರಪ್ರಭಾ
ಆದ್ಯಾತ್ಮಾಗಮು ಬೋಧಭಾಸುರ ಮಹಾದಿವ್ಯದನಿವಾಮೃತ
ಸದ್ಯಾಂಭೂಧರಸಾರ ಭವ್ಯಕಳಕಂಠಾನಂದ ನಿತ್ಯೋತ್ಸವಾ ।
ಗದ್ಯಾಪದ್ಯದಿ ಪಾಡಿ ನಿಂಮ್ಮ ಸ್ತುತಿಪೆಂ ರತ್ನಾಕರಾಧೀಶ್ವರಾ ॥
ಶ್ರೀಮತ್ಕಾರುಣ್ಯಬೋಧೋದಯ ವಿರಚಿತ ಕ್ಷೀರಾಂಬು ಸಂಪೂರ್ನ್ನರಾಸಿ ।
ಸ್ತೋಮಂ । ಶ್ಯಾದ್ವಾದ ವಿದ್ಯಾದಿಪಜತಿಜನಪ್ರೊದ್ಧಾಮ ಕೈವಲ್ಯನಾಥಂ ।
ಕಾಮಕ್ರೋದಮದದ್ವಿಭಪ್ರಕಟಿತಂ । ದಷ್ಟ್ರಾಂಕರಾಲಾಮೃಗೇಂ
ದ್ರಾಮೋಹಾಂದಪ್ರಭಾಕರಃಜ್ಜಿನವರ ಶ್ರೀ ಸಿದ್ಧಬುಧ್ಧಂ ನಮಃ ॥ ೨ ॥

ಅಂತ್ಯ : ಶರಣಾಗು ಕರುಣವಾರಿದಿ । ಶರಣಗಮರೇಂದ್ರವೃಂದವಂದಿತ ಚರಣ ॥
ಶರಣಾಗು ಭವ್ಯಬಾಂಧವ । ಶರಣಗಾವಾವಭವದಿ ವೇಣುಪುರದಾದೀಶಾ ॥
ಗದ್ಯಾ॥ ಶ್ರೀಮದ್ದೇವೇಂದ್ರ ವೃಂದ ಮಣಿಮಕುಟತಟಘಟಿತ ಮಣಿಗಣ
ಕಿರಣ ವಾರಿಧಾರಾದೌತಚಾರು ಚರಣಾರವಿಂದದ್ವಂದ । ಭಗವದರ್ಹತ್ಪರ
ಮೇಶ್ವರನ ಭವಾವಳಿಯ ಯಕ್ಷಗಾನ ಸಂಪೂರ್ಣ್ನ ಮಂಗಲಮಹಾಶ್ರೀ ॥

ವಿಷಯ : ಆದಿಪರಮೇಶ್ವರ ಅಥವಾ ಪ್ರಥಮತೀರ್ಥಂಕರನಾದ ವೃಷಭನಾಥ ಮತ್ತು
ಭರತ ಬಾಹುಬಲಿಗಳ ಕಥೆ.

ವಿಶೇಷ: ಪ್ರತಿಯು ಚೆನ್ನಾಗಿದೆ. ಪ್ರತಿಯ ಪತ್ರದ ಕೊನೆಯಲ್ಲಿ ಪ್ರತಿಕಾರನ ವಿಷಯವು ಇಂತಿದೆ: "ಚಿಕ್ಕ ಬಸ್ತಿ ವುಪಾದ್ಯ ಪುಟ್ಟಂಣನವರಿಗೆ ಆಜ್ಯಪ್ಪನವರ ಮಗ ಪುಟ್ಟೈಯನು ಧರ್ಮಾರ್ತ್ಥ ಕಾರಣವಾಗಿ ಬರದುಕೊಟ್ಟ ಯಕ್ಷಗಾನ ಪುಣ್ಯಾರ್ತ್ಥವಾಗಿ ಬರಕೊಟ್ಟದ್ದು ಆಯುರಾರೋಗ್ಯ ಐಶ್ವರ್ಯ ಯಿಹಪರ ವೃದ್ಧಿರಸ್ತು | ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಖವರ್ಷ ೧೭೬೯ನೇ ವರ್ತಮಾನಕ್ಕೆ ಸಲುಪ್ಲವಂಗ ಸಂವ್ವತ್ಸರದ ಮಾರ್ಗ್ಗಿಶಿರ ಸು ೫ ವರಿಗೆ ಸಂಪೂರ್ಣ್ನ ಮಂಗಲಮಹಾಶ್ರೀ."

8.3.4.3. 127

ಕೆ. ೨೭	ಆದಿಪುರಾಣ	ಚಂಪು
೧೭.೨" × ೧.೧"	ಪಂಪ	೯೪೧
೧—೨೫೭ ಪತ್ರ	೪ ಪಂಕ್ತಿ	೮೬ ಅಕ್ಷರ

ಆದಿ: ಶ್ರೀ ದೇವೇಂದ್ರ ಮುನೀಂದ್ರ ವಂದಿತ ಗುಣವ್ರಾತಂ ಜಗತ್ಸ್ವಾಮಿ
ಸಂದಾದಿ ಬ್ರಹ್ಮನಗಾಧಬೋಧ ನಿಳಯಂ ದುರ್ವ್ವಾರ ಸಂಸಾರ ವಿ
ಚ್ಛೇದೋಪಾಯ ನಿಯುಕ್ತಿ ಸೂ...............ರಂಪಾಪ ಹೃ
ತ್ಪಾದಾಬಂದಯುಗೆಮುಯನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ||

ಅಂತ್ಯ: ಭಾಸುರದೇವಕೋಟಿ ವಿಭುವಪ್ಪ ಮಹರ್ದ್ಧಿಕನಪ್ಪವಾಸ....
ಗಾಸನ ಕಂಪಮಂ ಪಡೆದು ತೀರ್ತ್ಥಕರತ್ವಮನಿತ್ತ್ರನಸ್ವರಾ
ವಾಸಮ.........................
...............ನೆಯ್ದಿ ಭಾವಿಸುಗೆ ಭ....ರನಂತ ಸುಖಾಭಿಲಾಷಿಗಳೂ ||

ಗದ್ಯ|| ಇದು ದೇವೇಂದ್ರ ಮುನೀಂದ್ರವಂದ್ಯ ಪ....ಮ........ದ್ರ ಮುಖಚಂದ್ರ ವಾಕ್ಚಂದ್ರಿಕಾಪ್ರಸರ ಪ್ರಾಸಾದೋದೀರ್ಣ ಸೂ...........ಣದೊಳ್ಪರಿ ನಿರ್ವ್ವಾಣ ಕಲ್ಯಾಣವರ್ಣ್ನನಂ ಷೋಡಶಾಶ್ವಾಸಂ || ೧೬ ||
ಶ್ರೀ ಶಾಂತಿನಾಥಾಯ ನಮಃ.

ವಿಷಯ: ಆದಿತೀರ್ಥಂಕರನಾದ ವೃಷಭನಾಥನ ಚರಿತ್ರೆ.

ವಿಶೇಷ: ಪ್ರತಿಯು ತುಂಬಾ ಶಿಥಿಲವಾಗಿದೆ. ಕೆಲವು ಪತ್ರಗಳು ಮುರಿದುಹೋಗಿವೆ. ಶಕಟರೇಫ ಪ್ರಯೋಗವಿದೆ.

8.3.4.3 128

ಕೆ. ಎ. ೭	ಆದಿಪುರಾಣ	ಚಂಪು
೧೧.೫" × ೮"	ಪಂಪ	೯೪೧
೧–೩೨೧ ಪುಟ	೨೨ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ದೇವೇಂದ್ರ ಮುನೀಂದ್ರ ವಂದಿತ ಗುಣವ್ರಾತಂ ಜಗತ್ಸ್ವಾಮಿ
ಸಂದಾದಿ ಬ್ರಂಹ್ಮನಗಾವ ಬೋಧ ನಿಳಯಂ ದುರ್ವ್ವಾರಸಂಸಾರ ವಿ
ಚ್ಛೇದೋಪಾಯನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ ಪಾಪ ಹೃ
ತ್ಪಾದಾಬ್ಜಂ ದಯುಗೆಯ್ವನಕ್ಕೆಮಗೆ ಮುಕ್ತಿಶ್ರೀ ಸುಖಾವಾಪ್ತಿಯಂ ॥ ೧ ॥

ಅಂತ್ಯ : ಭಾಸುರದೇವಕೋಟಿ ವಿಭುವಪ್ಪುಮಹರ್ದಿನಕನಪ್ಪ ವಾಸವಂ
ಗಾಸನಕಂಪಮಂ ಪಡೆವ ತೀರ್ಥಕರಕತ್ವಮನಿತ್ತನಶ್ವರಾ
ವಾಸಮನೆಯ್ದಿಸಲ್ಕಿದುವೆ ಷೋಡಶಭಾವನೆಯಿಂದೆ ಷೋಡಶಾ
ಶ್ವಾಸಮನೆಯ್ದೆ ಭಾವಿಸುಗೆ ಭವ್ಯರನಂತ ಸುಖಾಭಿಲಾಷಿಗಳ್ ॥ ೯೭ ॥

ಗದ್ಯ॥ ಇದು ದೇವೇಂದ್ರ ಮುನೀಂದ್ರವಂದ್ಯ ಪರಮಜಿನೇಂದ್ರ ಮುಖಚಂದ್ರ
ವಾಕ್ಚಂದ್ರಿಕಾ ಪ್ರಸರ ಪ್ರಾಸಾದೋದೀರ್ಣ ಸೂಕ್ತಿಕಲ್ಲೋಲ ಮಾಲಾ
ಕೀರ್ಣಕವಿತಾ ಗುಣಾರ್ಣವ ಪ್ರಣೀತಮಪ್ಪಾದಿ ಪುರಾಣದೊಳ್ ಪರಿ
ಗೀರ್ವ್ವಾಣ ಕಲ್ಯಾಣಂ ಷೋಡಶಾಶ್ವಾಸಂ ಶ್ರೀ.

ವಿಷಯ : ಆದಿತೀರ್ಥಂಕರನಾದ ವೃಷಭನಾಥನ ಚರಿತ್ರೆ.

ವಿಶೇಷ : ಗ್ರಂಥದ ಕೊನೆಯಲ್ಲಿ "ಕಾಳಯುಕ್ತಿಸಂವತ್ಸರದ ಕಾರ್ತೀಕ ಬಹುಳ ೧೪ ಆದಿವಾರದಲ್ಲು ನಾಗಮಂಗಲದ ಸ್ಥಳದ ಶಾನುಭಾಗ ಕುಕ್ಕೆ ಲಿಂಗರಸರ ವೆಂಕಪ್ಪೈಯ್ಯನವರ ಮಗ ತಿರುಮಲೈಯ್ಯ ಬರದ ಆದಿಪುರಾಣದ ಪುಸ್ತಕಕ್ಕೆ ಶುಭಮಸ್ತು ಶ್ರೀಶ್ರೀಶ್ರೀ ಆಶ್ವಾಸ ೧೬ಕ್ಕ ಮಂಗಳಂ. ಶಾಲೀವಾಹನ ಶಕ ೮೬೩ನೇ ಪ್ಲವನಾಮ ಸಂವತ್ಸರ ಕಾರ್ತೀಕ ಶುದ್ಧ ಪಂಚಮಿಾ ಭಾನುವಾರ ಮೂಲಾ ನಕ್ಷತ್ರದಲ್ಲಿ ಯಿಾ ಆದಿಪುರಾಣ ಮುಗಿಯಿತೆಂಬುದಾಗಿ ಹೇಳಲ್ಪಟ್ಟದೆ. ಹಾಗೆ ಆದರೆ ೧೭೯೫ನೆ ಶಾಲೀವಾಹನಶಕ ವರ್ಷವುಳ್ಳ ಯಿಾ ಶ್ರೀಮುಖನಾಮ ಸಂವತ್ಸರಕ್ಕೆ ೯೩೨ ಸಂವತ್ಸರಗಳಾಯಿತ್ತು" ಎಂದಿದೆ. ಪುಟಸಂಖ್ಯೆ ೧೭,೧೨೫, ೨೭೩ ಪುನರುಕ್ತಿಯಾಗಿವೆ. ೧೭ನೆಯ ಪುಟಸಂಖ್ಯೆ ಮಾತ್ರ ಬಿಟ್ಟುಹೋಗಿದೆ.

129

ಕೆ. ಎ. ೧೩೧	**ಆದಿಪುರಾಣ**	ಚಂಪು
೧೨" × ೭.೭"	ಪಂಪ	೯೪೧
೧—೧೪೪ ಪತ್ರ	೧೭ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ ದೇವೇಂದ್ರ ಮುನೀಂದ್ರ ವಂದಿತ ಗುಣವ್ರಾತಂ ಜಗತ್ಸ್ವಾಮಿ ಸಂ ದಾದಿ ಬ್ರಹ್ಮನಗಾಧ ಬೋಧನಿಳಯಂ ದುರ್ವ್ವಾರಸಂಸಾರ ವಿ ಚ್ಛೇದೋಪಾಯ........ಯುಕ್ತಸೂಕ್ತಿವೃಷಮಾರ್ಗ್ಗಗ್ರೇಸರಂ ಪಾಪಹೃ ತ್ಪಾದಾಬ್ಜಂ ದಯೆಗೆಯ್ವಿನಕ್ಕೆಮಗೆ ಮುಕ್ತಿ ಶ್ರೀ ಸುಖಾವಾಪ್ತಿಯುಂ॥

ಅಂತ್ಯ : ಭಾಸುರದೇವಕೋಟಿ ವಿಭುವಪ್ಪಮಹರ್ದ್ಧಿಕನಪ್ಪ ವಾಸವಂ ಗಾಸನ ಕಂಪಮಂ ಪಡೆದು ತೀರ್ಥಕರತ್ವಮನಿತ್ತನಪ್ಪರಾ ವಾಸಮನೆಯ್ದಿ ಸಲ್ಕಿದುವೆ ಷೋಡಶಭಾವನೆಯಿಂದೆ ಷೋಡಶಾ ಶ್ವಾಸಮನೆಯ್ದೆ ಭಾವಿಸುವ ಭವ್ಯರನಂತ ಸುಖೋಭಿಲಾಷಿಗಳ್॥

ವಿಷಯ : ಆದಿತೀರ್ಥಂಕರನಾದ ವೃಷಭನಾಥನ ಚರಿತ್ರೆ.

ವಿಶೇಷ : ಗ್ರಂಥವು ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಬೇರೆ ಬೇರೆ ತರಹದ ಕಾಗದ ಗಳನ್ನು ಬಳಸಿದೆ. ಎರಡು ರೀತಿಯ ಮಸಿಯಿಂದ ಬರೆದಿದೆ. ಪುಸ್ತಕದ ಮೊದಲ ಪತ್ರವು ಹರಿದು ಎರಡು ತುಂಡಾಗಿದೆ. ಎರಡೆರಡು ಹಾಳೆಗಳಿಗೆ ಒಂದೊಂದು ಸಂಖ್ಯೆಯನ್ನು ಕೊಟ್ಟಿದೆ. ೧೮ನೆಯ ಪತ್ರವು ಕಟ್ಟಿನಿಂದ ಬೇರೆಯಾಗಿದೆ. ೨೭ ಪತ್ರಗಳಿಗೆ ಮಾತ್ರ ಪಾಠಗಳನ್ನು ಗುರುತಿಸಿದೆ. ೧೨೧ನೆಯ ಪತ್ರದ ಎರಡನೆಯ ಹಾಳೆಯು ಬರಿದಾಗಿದೆ.

130

ಕೆ. ೫೭೦	**ಆಯುತ ಸುಳಾದಿಗಳು**	ಹಾಡು
೧೭.೨" × ೧.೪"	ವೈಕುಂಠದಾಸರು, ಇತ್ಯಾದಿ	?
೧—೨೮೩ ಪತ್ರ	೮ ಪಂಕ್ತಿ	೬೬ ಅಕ್ಷರ

ಆದಿ : ಸಾರಂಗ ನಾಟಿ ಸೂಳಾದಿ। ಆದಿತಾಳ। ಪಾರಾವಾರದಲ್ಲಿ ಭಾರಾದಾಹೊಂನ ಮಂತ್ರಿ। ಕಿರಲಿಯಾದಾನೆಣು ಸೂತ್ರಿ। ಬೇರೂರಿಪ್ಪ ಕಾಗೆಯ। ಗಿರೂವಾಣ ದಾನಾವಾರು ಹೇರುತ್ತಾ ಕಾಡಿಯಲ್ಲು × × × × ನಾಟಿ ರಾಗ ಆಯತ॥ ಸಸಸಾಸಿಪಮರಿಗಮ ಪದನಿಸ ಸನಿಪಾ। ನಿನಿ ಇಸ್ಸಾಸ್ಸ। ನೀನಿ ಇಸಾಸ್ಸ ಮಾಪಾ। ಸಾ। ಸಾ। ಮತೊಂದು ಆಯುತ॥ ಸಾಸಸಸ ಸಸಸ।

ಅಂತ್ಯ : ಕೊಂಬಾನಾರೆಲ್ಲಾ ಬಂನ್ನಿ । ವಿಠಲಾನಲ್ಲಿತ್ಸಂದ್ಯಾತ್ಸಂಡಡಾ ।
ಬೇಹರಗಾಳುಂಟು । ವುಂದುಂಟೊವೊಂದ್ದಿಲ್ಲಾವೆ ।
ಯಂಬಾದೊಂದು ಸಂದೇಹವಾ ಬಿಟ್ಟು ಬಂನ್ನಿರೆಲ್ಲಾ ॥ ೮ ॥

ಯಿಾದೊಂದೇ ಸಾರಿಗೆಗೆ ಭಾಳಾಲಾಭಾಯೆಂದೆಂದು
ನಾವೂಕುಲ್ಲಿತೂ ವುಂಣಲುಂಟ್ಟು । ತಂದೆ ಪೂರಂದಾತಾ
ವಿಠಲಾರಾಯಾತ್ಸಂಡಾವಾದವೂ ನಂಮ್ಮ ಬೇಹಾರವೂ ॥ ೯ ॥
ರಾವಮಾನಾವಮಾಮೃತವಾ ॥ ಶ್ರೀ ॥

ವಿಷಯ : ರಾಗಗಳ ಆಯತಗಳು ಮತ್ತು ಸುಳಾದಿಗಳು.

ವಿಶೇಷ : ೧, ೨ ಮತ್ತು ಮಧ್ಯೆ ಕೆಲವು ಪತ್ರಗಳಲ್ಲಿ ಒಂದು ಪಾರ್ಶ್ವದಲ್ಲಿ ಮಾತ್ರ ಬರೆದಿದೆ. ಕ್ರಮಾಂಕ ೧೮, ೧೯, ೧೫೬, ೨೦೨, ೨೨೬ ಇವು ಶುದ್ಧ ಪತ್ರಗಳು. ೨೫೧–೨೫೯, ೨೭೬–೨೭೭ ಪೂರ್ತಿ ಪತ್ರಗಳು ಇಲ್ಲ. ಓಲೆಯ ಪಾರ್ಶ್ವದಲ್ಲಿ ಆಯತ ಮತ್ತು ಸುಳಾದಿಗಳಿಗೆ ಸಂಬಂಧಪಟ್ಟ ರಾಗಗಳ ಹೆಸರನ್ನು ಬರೆದಿದೆ. ವೈಕುಂಠದಾಸರು, ವ್ಯಾಸರಾಯರು, ವಾದಿರಾಜರು ಮೊದಲಾದವರು ರಚಿಸಿರುವ ಸುಳಾದಿಗಳನ್ನು ಲೇಖಕರು ಸಂಗ್ರಹಿಸಿ ಬರೆದಿರುತ್ತಾರೆ. ಕಟ್ಟಿನ ಮೊದಲು ಕೊನೆಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ.

131

ಕೆ. ಎ. ೭೩	ಆರಾಧ್ಯ ಚಾರಿತ್ರ, ಭಾಗ ೧	ವಾರ್ಧಕಷಟ್ಪದಿ
೧೨.೬″ × ೭.೮″	ನೀಲಕಂಠಾಚಾರ್ಯ	೧೪೮೫
೧–೨೦೫ ಪತ್ರ	೨೪ ಪಂಕ್ತಿ	೧೮ ಅಕ್ಷರ

ಆದಿ : 'ಆರಾಧ್ಯಚರಿತ್ರೆ' ವಾರ್ಧಿಕಷಟ್ಪದಿ
ಸೂಚನೆ ॥ ಭೂಮಿಯೊಳ್ಮಲ್ಲಿಕಾರ್ಜುನ ಪಂಡಿತಾರಾಧ್ಯ
ನಾಮನುನ್ನತ ಶಿವನ ಶಾಸನದಿನುದ್ಭವಿಸಿ
ಕಾಮಹರನಿಭ ಕೋಟಿ ಫಲ್ಯಾಖ್ಯ ದೇಶಿಕನ ಕೃಪೆವಡೆದು
ಸುಖಮಿರ್ದನು ॥
ಪದನು ॥ ಶ್ರೀಮದಮಲಾಂಬಿಕಾತನು ಕಾಂತಿ ಸಲಿಲಜೋ
ದ್ಧಾಮ ನವತಾರುಣ್ಯ ತಾಮರಸ ಸೌರಭ
ಪ್ರೇಮಮದರೋಲಂಬ ವಾಣೀಶ ಲಕ್ಷ್ಮೀಶಪೂಜಿತ ಪದಾಬ್ಜಯುಗಳ

ತಾಮರಸಮಿತ್ರ ಶುಚಿತಾಮರಸ ವೈರಿನಯು
ನಾ ಮಹಾಶ್ರಾದ್ಧ ದೇವಾವಲೇಪನರುಂದ್ರ
ಭೂಮೀಧ್ರಭಿನ್ನ ಬಿದುರಾ ಪಾಲಿಸೆಮ್ಮುವಂ ಪ್ರೇಮದಿಂ ನೀಲಕಂಠ ॥೧॥

× × × ×

ನಿರತಿಶಯ ಸುಖರೂಪನಪರಾಖಿಲ ಪಾಪ
ನುರುತರಾಗಮ ಕಲ್ಮನಿತರ ಮತ ಹೃಚ್ಛಲ್ಯ
ನರಶಿ ಭಕ್ತಕುಟುಂಬನೀಶ್ವರ ಪ್ರತಿಬಿಂಬನೆಂಬ ಜಸವೆಣ್ದೆಸೆಯೊಳು
ಪರಕಲಿಸುತಿರೆ ರಾಜಿಸುವ ನಾಗನಾಥಾರ್ಯ
ವರಸುತಂ ನೀಲಕಂಠಾಚಾರ್ಯ ಪುಂಗವಂ
ಕರುಣಾ ಕಟಾಕ್ಷದೀಧಿತಿಯಿಂದ ಮಾವನಂ ಪೊರೆಗೆ ಭೂಜನ
ಸಮಿತಿಯಿಂ ॥ ३೬ ॥

× × × ×

ಕೃತಿನಾಮವಾರಾಧ್ಯಚಾರಿತ್ರಮೆನಿಸುವುದು
ಕೃತಿಪಾಲಕರ್ಶಿವನ ಸದ್ಭಕ್ತರೀ ಕೃತಿಗೆ
ಪತಿ ನೀಲಕಂಠಲಿಂಗಂ ಕೃತಿಯನತಿಶಯಂ ಪೇಳ್ದಾತನಾರೆಂದೆನೆ
ವಿತತ ಕರ್ಣಾಟಲಕ್ಷಣ ಕಮಲಭವನೆನಿಪ ।
ಚತುರವರ ನೀಲಕಂಠಾಚಾರ್ಯನೆಂದೊಡಿದು
ನುತಿವೆತ್ತು ಸತ್ಪುರುಷ ಕರ್ಣ ಭೂಷಣಮೆನಿಪುದಚ್ಚರಿಯೆ
ಪರಿಭಾವಿಸೆ ॥ ೪३ ॥

ಅಂತ್ಯ : (ವಾದಪ್ರಕರಣ)

ಅಂತೆವೋಲ್ಸರ್ವ ಜಂತುಗಳಳಿಯಲವರೊಳಗೆ
ಸಂತತಂ ಪ್ರತಿಬಿಂಬಿಸುವ ಶಿವಂ ಕಿಡುವನೇ
ಮುಂತರಿಯದೆಲೆ ಸಾಂಖ್ಯ ಜಜುಚುತಿಪ್ಪೆಯ್ನಿನ್ನ ಕುತ್ಸಿತೋಕ್ತಿಗಳೆಲ್ಲಿಯುಂ
ಮಂತಣಂಗೆಯೆ ಸಲ್ಲವೀ ಜೀವಜಾಲದೊಳ ।
ಗುಂತೆ ತೋರುತ್ತಿರ್ಪ ದುರವಸ್ಥೆಗಳ್ನಾಡೆ ।
ಕಂತುಹರನುಂ ಮುಟ್ಟವೆಂತೆಂಬೊಡಂ ಕೇಳ ಮನುಮುಣ್ಮೆ ಸಂತಸ
ದೊಳು ॥ ೨೮ ॥

ವಿಷಯ : ಪಂಡಿತಾರಾಧ್ಯರ ಚರಿತ್ರೆ.

ವಿಶೇಷ : ಈ ಭಾಗದಲ್ಲಿ ದೀಕ್ಷಾಪ್ರಕರಣ ಮತ್ತು ಪುರಾತನ ಪ್ರಕರಣಗಳು ಮುಗಿದು ವಾದ ಪ್ರಕರಣದಲ್ಲಿ ೨೮ ಪದ್ಯಗಳು ಮಾತ್ರ ಇವೆ. ಶಕಟರೇಫದ ಬಳಕೆ ಕೆಲ ವೆಡೆ ಮಾತ್ರ ಕಂಡುಬರುತ್ತದೆ.

132

ಕೆ. ಎ. ೭೪	ಆರಾಧ್ಯ ಚಾರಿತ್ರ, ಭಾಗ ೨	ವಾರ್ಧಕ ಷಟ್ಪದಿ
೧೨.೬" × ೭.೮"	ನೀಲಕಂಠಾಚಾರ್ಯ	೧೪೮೫
೧–೧೯೯ ಪತ್ರ	೨೪ ಪಂಕ್ತಿ	೧೮ ಅಕ್ಷರ

ಆದಿ: ವಾದ ಪ್ರಕರಣ
ಸುರಮಾರ್ಗದಲ್ಲಿ ನಿರ್ಮಲತೆವೊಡೆದೊಪ್ಪುತುಂ
ಚರಿಯಿಸುವ ದಿನಮಣಿ ಪ್ರತಿಬಿಂಬಮಾವಗಂ
ಧರಣಿ ಜಲಂಗಳೊಳ್ಕೈದೋರಲಾ ಜಲಂಗಳೊಳೊಗೆದು ತೋಱುತಿರ್ಪ
ಉರುಭಂಗ ಭಂಗುರತ್ವ ಪ್ರಮುಖ ಜಲವಿತತಿ
ಪರಿಕಿಪೊಡೆ ಜಲಕಲ್ಲದೇ ರವಿಗದುಂಟೆ ಕೇ
ಳಿರದಂತೆ ಲೋಕದಂತರ್ಯಾಮಿಯೆನಿಪ ಶಿವನೊಳ್ ಜಗದ ಪ್ರಕೃತಿ ವಿಕೃತಿ ||೨೯||

ಅಂತ್ಯ : ಸದಮಲ ಪ್ರಚುರ ವಿಶೃತ ಪರಮಭಕ್ತಗಣ
ಪದಸರೋರುಹ ಸಾಂದ್ರ ಮಕರಂದಪಾನ ಸಂ
ಮ್ಮುದಿತ ಚಂಚಚ್ಚಂಚರೀಕನನವರತ ಪಂಚಾಕ್ಷರೀ ಪ್ರಸಿತ ಹೃದಯಂ
ವಿದಿತ ಮಂಜುಳ ನೀಲಕಂಠಾಹ್ವಯಂ ಮನೋ
ಮುದದೆ ಪೇಳ್ದುರುತರಾರಾಧ್ಯ ಚಾರಿತ್ರದೊಳ
ಗಿದುವೆರಂ ತತ್ಪಂಡಿತಾರಾರಾಧ್ಯ ವಿಭುವಿನ ಶಿವೈಕ್ಯ ಕಥನಂ ಭಾವಿಸೆ ||೨೭||

ಅಂತು ಸಂಧಿ ೧೦ ಕ್ಕಂ ಪದನು ೬೦೫ ಕ್ಕಂ ಮಂಗಳ ಮಹಾಶ್ರೀ.
ಅಂತು ಆರಾಧ್ಯಚಾರಿತ್ರದಲ್ಲಿ ಪ್ರಕರಣ

ಪ್ರಕರಣ	ಸಂಧಿ	ಪದ
೧. ದೀಕ್ಷಾಪ್ರಕರಣ	೧೪	೭೦೮
೨. ಪುರಾತನಪ್ರಕರಣ	೧೩	೬೧೮
೩. ವಾದಹಿಮಾಪ್ರಕರಣ	೧೮	೬೬೦
೪. ಮಹಿಮಾಪ್ರಕರಣ	೧೦	೪೭೮
೫. ಪರ್ವತಪ್ರಕರಣ	೧೦	೬೦೫

ಅಂತು ಪ್ರಕರಣ ೫ಕ್ಕೆ ಸಂಧಿ ೬೫ಕ್ಕೆ ಪದ ೩೦೬೯ಕ್ಕಂ ಆರಾಧ್ಯಚಾರಿತ್ರಂ ಸಂಪೂರ್ಣಂ.

ವಿಷಯ : ಪಂಡಿತಾರಾಧ್ಯರ ಚರಿತ್ರೆ.

ವಿಶೇಷ : ವಾದ ಪ್ರಕರಣದ ೨೯ನೆಯ ಪದ್ಯದಿಂದ ಪ್ರಾರಂಭವಾಗಿ, ಮಹಿಮಾ ಪರ್ವತ ಪ್ರಕರಣದೊಂದಿಗೆ ಈ ಗ್ರಂಥ ಸಂಪೂರ್ಣಗೊಂಡಿದೆ. ೧೯೯ನೆಯ ಪತ್ರ ಸ್ವಲ್ಪ ಹರಿದಿದೆ. ಈ ಪತ್ರದಲ್ಲಿ ಮಾತ್ರ ಒಂದೇ ಕಡೆ ಬರವಣಿಗೆಯಿದ್ದು ಗ್ರಂಥ ಸಂಪೂರ್ಣವಾಗಿದೆ. ಆಮೇಲೆ ಕೆಲವು ಪತ್ರಗಳಲ್ಲಿ ಬರವಣಿಗೆಯಿಲ್ಲ. ಶಕಟರೇಫದ ಬಳಕೆ ಕೆಲವೆಡೆ ಮಾತ್ರ ಕಂಡುಬರುತ್ತದೆ.

133

ಕೆ. ಬಿ. ೩೯೪	**ಆಸ್ಥಾನ ಜ್ಯೋತಿ (ನೀತಿಯ ಪದ್ಯಗಳು)**	ಕಂದ
೭.೮″ × ೬″	?	?
೧–೨೨ ಪುಟ	೧೮ ಪಂಕ್ತಿ	೧೮ ಅಕ್ಷರ

ಆದಿ : ಆಸ್ಥಾನ ಜ್ಯೋತಿ ನೀತಿ ಪದ್ಯ
ಆಸ್ಥಾನ ಜ್ಯೋತಿಯೆಂಬುವ
ನೀತಿಯ ಕಂದಗಳನರಿತು ನಡೆವರಿಗೆಲ್ಲಂ
ಮಾತಿನ ಮರಹಂ ಮುಂನಿಸಿ
ಖ್ಯಾತಿಯೊಳಂ ನಡಸುತಿಹುದು ಭೂತಳಕೆಲ್ಲಂ ‖ ೧ ‖

ಅಂತ್ಯ : ಅರ್ಥವು ಗೃಹದೊಳಗುಳಿವುದು
ಅತ್ತುಳಿವರು ಸತಿಯು ಸುತರು ಬಂಧುಗಳೆಲ್ಲರು
ಮೂರ್ತಿಯು ಜಗದೊಳಗುಳಿವುದು
ಕೀರ್ತಿಯು ಅಪಕೀರ್‍ತ್ತಿಯರಡು ಬೆನ್ನಲಿ ಬಕ್ಕುಂ ‖ ೧೨೬ ‖
ಆಸ್ಥಾನಜ್ಯೋತಿ ನೀತಿ ಪದ್ಯ ಸಹಾ ಸಂಪೂರ್ಣ.

ವಿಷಯ : ನೀತಿ.

ವಿಶೇಷ : ಸುದೃಢವಾದ ಪ್ರತಿ.

134

ಕೆ.ಬಿ. ೨೪೦/೧ ಆಳಿದ ಮಹಾಸ್ವಾಮಿಯವರ ಸವಾರಿ ವರ್ಣನೆ ಹಾಡು

೭.೮" × ೩.೨" ? ?

೧–೩ ಪತ್ರ ೧೭ ಪಂಕ್ತಿ ೨೧ ಅಕ್ಷರ

ಆದಿ : ಶ್ರೀ ‖ ಆಳಿದ ಮಹಸ್ವಾಮಿಯವರ ಸ್ವಾರಿ ವರ್ನನೆ ‖
ಖಡಕ್ ‖ ರಾಗ ‖ ಭೈರವಿ ‖ ತಾಳ ‖
ಧೀರನಹುದೂ ‖ ಧೀರಜಲಧಿ ಗಂಭೀರ ವಿಮಲ ಮಹಿ
ಶೂರನಾಳವರ ಚಾಮರಾಜ ಸುಕುಮಾರ ।
ಸುಕುಮಾರ ಲಾವಂಣ್ಯ ಮಹೀಪತಿ ಕೃಷ್ಣರಾಜ ರಾಜೇಂದ್ರಾ ।
ರಾಜೇಂದ್ರ । ರಾಜೇಂದ್ರಭೋಗ ದೇವೇಂದ್ರ ಸರಸಿಗಣ ಸಾಂದ್ರ
ರಿಪುಗಜ ಮೃಗೇಂದ್ರ ಶುಭಾ ಕೃತಿಚಂದ್ರಾ ‖ ವರಚಂದ್ರ ।
ವರಚಂದ್ರನಂತೆ ನಿಜಮಂದಿರದಿಂ
ಆನಂದದಿಂದ ಗೋವಿಂದನಂತೆ ಸುಖದಿಂದ ಬೆರದು
ವರ ಚಾಮುಂಡೇಶ್ವರಿ ಕೃಪೆಯೊಳನುದಿನವು
ಧರಣಿಪ ಬರುವನು ಸ್ವಾರೀ ‖ ಪಲ್ಲವಿ ‖

ಅಂತ್ಯ : ಪರುಠವದಿಂದೈತಂದಾ
ಧರಣಿ ಹರುಷದೊ
ಳರಮನೆಯನು ಪೊಕ್ಕಾಗಲು
ವರಕೇಸರಿ ಪೀಠದೊಳಗೆ ಮಂಡಿಸಿ
ಪರಿಜನಗಳ ಮನ್ನಿಸಿ ಬುಧರನು
ಕರಕರದಾದರಿಸುತ್ತ ಮಿಗೆ
ಸುರುಚಿರವಹ ಭೂಷಣಗಳುರೆ ನೀಡಿದ
ವರ ಶಾಲೋರಿ ಕಡಗ ತೊಡೆಗಳನು
ಭರದೊಳಗಿತ್ತು ವೇಂಕಟ ವಿಠಲೇಶನ
ಚರಣವ ನೆನದಾನಂದದೊಳಿರುತಿಹ
ಧರಣೀಪತಿ ಶ್ರೀ ಕೃಷ್ಣರಾಜ ರಾಜೇಂದ್ರಾ ‖ ೨೨ ‖
ಆಳಿದ ಮಹರಾಸ್ವಾಮಿಯವರ ಸ್ವಾರಿ ವರ್ನನೆ ಸಂಪೂರ್ಣವು ‖ ಶ್ರೀ ‖

ವಿಷಯ : ಆಳಿದ ಮಹಾಸ್ವಾಮಿ ಶ್ರೀ ಕೃಷ್ಣರಾಜೇಂದ್ರರ ಸವಾರಿಯ ವರ್ಣನೆ.

ವಿಶೇಷ : ಇದೇ ಪುಸ್ತಕದಲ್ಲಿ ಅನುಭವ ಪಂಚರತ್ನ, ವೈರಾಗ್ಯ ಪ್ರತಿಪಾದಕ ಝಾವಡಿ, ವೈರಾಗ್ಯ ಕೀರ್ತನೆ ಎಂಬ ಕೃತಿಗಳಿವೆ.

135

ಕೆ. ೫೬೨	ಇಂದ್ರಕೀಲ	ಯಕ್ಷಗಾನ
೧೦.೫" × ೧.೯"	ವಿಷ್ಣು	೧೯ ನೆಯ ಶತಕ
೧–೩೪ ಪತ್ರ	೯ ಪಂಕ್ತಿ	೪೪ ಅಕ್ಷರ

ಆದಿ : ಯಕ್ಷಗಾನ ಯಿಂದ್ರಕೀಲಪ್ರಸಂಗ ಬರಉದಕ್ಕೆ ಶುಭಮಸ್ತು । ಶಾರ್ದೂಲ ವಿಕ್ರೀಡಿತಾ ವೃತ್ತಾ ॥

ಶ್ರೀ ಗಂಗಾಧರನಂಬುಜಾಪ್ತ ಶತಭಾಸಂ ತ್ರೈಜಗತ್ಪಾಲಕಂ
ನಾಗಾರೂಢ ಮುಖಾಮರೌಘವಿನುತಂ ಕೈಲಾಸವಾಸಂ ಹರಂ
ನಾಗಾರಾತಿ ವರೂಥ ಮಿತ್ರನಭವಂ ನಾನಾಸುವಿದ್ಯಪ್ರದಂ
ವಾಗೀಶಾಖ್ಯ ಪುರೇಶನೀಉದೆಮಗಂ ಸದ್ಭಕ್ತಿ ಸಂದೋಹಮಂ ॥ ೧ ॥

ಅಂತ್ಯ : ಕಂದ ॥ ದ್ವಿಜಕುಲ ಜಾತಂ ರಾಮಾ
ತ್ಮಜ ವಿಷ್ಣುವೆನಿಪ್ಪನಜಪುರೇಶನ ಭಜಕಂ
ಶ್ರುಜಿಸಿದ ವಾಕ್ಯವನಾಲಿಸಿ
ಸುಜನಮ್ಮುದವೆತ್ತು ಮೆರಸವೇಳ್ಕುಂ ಧರೆಯೊಳಂ ॥ ೧ ॥

ಅಜವಿನುತಂ ಸುಜನನುತಂ
ಭುಜಗಾಭರಣಂ ಸುರೇಶವಂದಿತ ಚರಣಂ
ಅಜಪುರವಾಸಂ ಯಿಶಂ
ಗಜಚರ್ಮಾಂಬರನೆ ಹರನೆ ರಕ್ಷಿಸುಗೆಂಮಂ ॥ ೨ ॥

× × × ×

ಅಜಪುರವಾಸಗೆ ಮಂಗಳಾ
ಗಿರಿಜಾಧವನಿಗೆ ಮಂಗಳ
ಚಲ್ವ ಉರಗಾಭರಣಗೆ ಮಂಗಳಾ ॥ ೩ ॥

ಅಂತುಪ್ರಸಂಗ ೧ ಕ್ಕಾಂ ಪದ ೩೮೫ ಕ್ಕಾಂ ಮಂಗಳ ಮಹಾಶ್ರೀ.
ಶ್ರೀ ಕೃಷ್ಣಾಯ ಜಯಮಂಗಲಂ । ಸದಾಶುಭ ಮಂಗಲಂ ॥
ದುರ್ಮುಖಿ ಸಂವತ್ಸರದ ಆದಿಕ ಆಷಾಡ ಬ ೩ ಯು ಭಾರ್ಗವಾರದಲ್ಲು ಬರದು ಪ್ರಸಂಗಕ್ಕೆ ಆಚಂದ್ರಾರ್ಕಮಸ್ತು ॥

ವಿಷಯ : ಅರ್ಜುನನು ಈಶ್ವರನೊಡನೆ ಯುದ್ಧಮಾಡಿ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ೨೫, ೨೬, ೨೯ ನೇ ಕ್ರಮಾಂಕದ ಓಲೆಗಳು ಉಳಿದ ಓಲೆಗಳಿಗಿಂತ ಸ್ವಲ್ಪ ತುಂಡಾಗಿವೆ.

136

ಕೆ.ಎ. ೧೦೭/೬	ಇಂದ್ರಕೀಲ	ಯಕ್ಷಗಾನ
೧೨.೧″ × ೭.೮″	?	?
೭೧—೪೪ ಪತ್ರ	೩೩ ಪಂಕ್ತಿ	೩೦ ಅಕ್ಷರ

ಆದಿ : ಭಾರತದ ಅರಂಣ ಪರ್ವದಲ್ಲಿ ಯಿಂದ್ರಕೀಲ ಬರಿಯುವದಕ್ಕೆ ಶುಭಮಸ್ತು ॥
ನಾಂದಿ ಶ್ಲೋಕ ॥

ಶ್ರೀ ಗಂಗಾಧರನಂಬುಜಾಪ್ತ ಶತಭಾಸಂ ತ್ರೈಜಗತ್ಪಾಲಕಂ
ನಾಗಾರೂಢ ಮುಖಾಮರವ್ರುಘವಿನುತಂ ಕೈಲಾಸವಾಸಂ ಹರಂ
ನಾಗಾರಾತೀವರೂಥ ಮಿತ್ರನಭವಂ ನಾನಾ ಸುವಿದ್ಯಪ್ರದಂ
ವಾಗೀಶಾಖ್ಯ ಪುರೀಶನೀವುದೆಮಗಂ ಸದ್ಭಕ್ತಿ ಸಂದೋಹಮಂ ॥ ೧ ॥

ವಾರ್ಧಿಕ್ಯಾ ॥ ಪುರಹರನ ರಾಣಿಯಂ ಕಾಳಾಹಿವೇಣಿಯಂ
ಶರಜಾತ ಪಾಣೀಯಂ ಕಲಕೀರ ವಾಣೀಯಂ
ಹರಿಣಾಂಕವದನೆ ಮುನಿ ಹೃದಯ ಸದನೆಯಂ ಕುಂದು ಕೂಟ್ಮಳರದನೆಯಂ
ದುರುಳ ಖಳನಾಶೆಯಂ ನಿರತಸಂತೋಷೆಯಂ
ಶರಣಜನಘೋಷೆಯಂ ನವರತ್ನಭೂಷೆಯಂ
ಕರುಣಾರ್ಕ ಭಾಷೆಯಂ ಕುಟಚಾದ್ರಿವಾಸೆಯಂ ಸ್ಮರಿಸಿ ಮತಿಯಂ ಪಡೆವೆನೂ ॥ ೨ ॥

ಅಂತ್ಯ : ಗಜ ಚರ್ಮಾಂಬರಧರನಿಗೆ ಮಂಗಳ
ತ್ರಿಜಗತ್ಪಾಲಗೆ ಮಂಗಳಾ
ಭಜಕರ ಭಯನಾಶಗೆ ಮಂಗಳಾ
ಅಜಪುರವಾಸಗೆ ಜಯ ಮಂಗಳಾ
ಗಿರಿಜಾಧವನಿಗೆ ಮಂಗಳಾ ॥ ೪೧೨ ॥

ಅಂತ್ತು ಕಥೆ ೧ಕ್ಕೆ ಪದನೂ ೪೧೨ಕ್ಕಂ ಮಂಗಳಂ ಮಹಾ ಶ್ರೀ.

ವಿಷಯ : ಅರ್ಜುನನು ಈಶ್ವರನೊಡನೆ ಯುದ್ಧಮಾಡಿ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಈ ಪುಸ್ತಕದಲ್ಲಿ ಐರಾವತ, ದ್ರೌಪದೀ ಕಲ್ಯಾಣ, ಸುಭದ್ರೆ ಕಲ್ಯಾಣ, ಕನಕಾಂಗಿ ಕಲ್ಯಾಣ, ಸಭಾಪರ್ವ, ಚಿತ್ರಸೇನನ ಕಾಳಗ ಮತ್ತು ೧೧೧ ನೇ ಪತ್ರದಲ್ಲಿ ವಿರಾಟಪರ್ವ ಆರಂಭದ ಒಂದೇ ಒಂದು ಹಾಡು, ಗೌಳೀಫಲ ನಿರ್ಣಯವೆಂಬ ಗ್ರಂಥಗಳಿವೆ.

137

ಕೆ. ಎ. ೨೫೮/೨	ಇಂದ್ರಕೀಲ	ಯಕ್ಷಗಾನ
೧೩.೪″ × ೯″	?	?
೫೦–೮೫ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಭಾರತದೊಳಗಣ ಯಿಂದ್ರಕೀಲಕ । ಯಕ್ಷಗಾನದ ಪ್ರಸಂಗ ಬರಿಯುವದಕ್ಕೆ ಶುಭಮಸ್ತು । ಶುಭಂ ಶೋಭನಮಸ್ತೂ ॥

ವೃತ್ತಾ ॥ ಶ್ರೀ ಗಂಗಾಧರನಂಬುಜಾಪ್ತ ಶತಭಾಸಂ ತ್ರೈಜಗತ್ಪಾಲಕಂ ।
ನಾಗಾರೂಢ ಮುಖಾಮರವೃಘವಿನುತಂ ಕೈಲಾಸವಾಸಂ ಹರಂ
ನಾಗಾರಾತಿ ವರೂಥ ಮಿತ್ರನಭವಂ । ನಾನಾ ಸುವಿದ್ರಪ್ರದಂ ।
ವಾಗೀಶಾಖ್ಯಪುರೀಶನೀವುದೆಮಗಂ ಸುಜ್ಞಾನ ಸವುಭಾಗ್ಯಮಂ ॥೧॥

× × × ×

ಭಾರತ ಮಹಾಕಥನದೊಳಗೆ ಫಲುಗುಣನೂ
ಮಾರಾರಿಯೋಳ್ ಶಣಿಶಿ ಶರವ ಪಡದುದನೂ ॥ ೨ ॥
ವಿಸ್ತಾ್ರಮಾಗಿರುವ ಯಕ್ಷಗಾನದಲೀ
ಬಿತ್ತರಿಪೆನಜಪುರದ ಹರನ ಕರುಣದಲೀ
ಬಾಲಬಾಷಿತವೆಂದು ನಿಂದಿಸದೆ ದಯಾ
ಮೇಲುಳ್ಳ ಸಜ್ಜರು ಕೇಳ್ವುದೀ ಕೃತಿಯಾ ॥ ೯ ॥

ಅಂತ್ಯ : ಅಜವಿನುತಂ ಸುಜನನುತಂ
ಭುಜಗಾಭರಣಂ ಸುರೇಶವಂದಿತ ಚರಣಂ
ಅಜಪುರವಾಸಂ ಯಿಶಂ
ಗಜ ಚರ್ಮಾಂಬರನೆ ರಕ್ಷಿಸುಗೆಮ್ಮಂ ॥ ೪೩ ॥

× × × ×

ಗಜಚರ್ಮಾಂಬರಧರನಿಗೆ ಮಂಗಳ | ತ್ರಿಜಗತ್ಪಾಲಗೆ ಮಂಗಳ
ಭಜಕರ ಭವಭಯನಾಶಗೆ ಮಂಗಳ ಅಜಪುರವಾಸಗೆ ಮಂಗಳ
ಗಿರಿಜಾಧವನಿಗೆ ಮಂಗಳಾ ||

ಅಂತ್ತು ಸಂದಿ ೧ಕಾಂ ಪದನು || ೪೪೨ || ಯಿಂದ್ರಕೀಲ ಸಮಾಪ್ತಿ ಮಂಗಳ ಮಹಾಶ್ರೀ.

ವಿಷಯ : ಈಶ್ವರನೊಡನೆ ಅರ್ಜುನನು ಸೆಣಸಿ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಸಮಗ್ರ. ಕ್ರಮಸಂಖ್ಯೆಯಿಲ್ಲ, ಶಿಥಿಲ. ೪೯ನೆಯ ಪತ್ರದ ಹಿಂಭಾಗದಲ್ಲಿ "ಸಾಧಾರಣ ನಾಮ ಸಂವತ್ಸರದ ಆಷಾಢ ಶು. ೩ಲ್ಲು ಯಿಂದ್ರಕೀಲ ಪ್ರಸಂಗ ಬರೆಯುವುದಕ್ಕೆ ಶುಭಮಸ್ತು" ಎಂದಿದೆ. ಇದೇ ಪುಸ್ತಕದಲ್ಲಿ ಬಭ್ರುವಾಹನನ ಕಾಳಗವೆಂಬ ಮತ್ತೊಂದು ಗ್ರಂಥವಿದೆ.

138

ಕೆ. ಬಿ. ೧೨೨	**ಇಂದ್ರಕೀಲ**	ಯಕ್ಷಗಾನ
೭.೬" × ೩"	ಅಳಿಯ ಲಿಂಗರಾಜ	೧೮೫೦
೧—೪೩ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ಇಂದ್ರಕೀಲ || ನಾಂದಿ || ಕಂದಪದ್ಯ ||
ಶ್ರೀ ಕಾಳೀ ನವಯೌವನ
ಮಾಕಂದ ಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾಕರ ಹಂಸಂ ಕರುಣಾ
ಕೇಕಠನೆಮಗೀಗೆ ಸೌಖ್ಯಮಂ ಕಾಳೀಶಂ ||
ರಾಗ|| ನಾಟಿ ಝಂಪೆ ತಾಳ ||
ಜಯತು ಕಾಳೀಕಾಂತ ಜಯತು ರಹಿತಾದ್ಯಂತ
ಜಯವಲಯಿತಾನಂತ ಜಯದಯಾಕ್ರಾಂತ
ಜಯತು ಜಿತಸಾಮಂತ ಜಯನತವನ ವಸಂತ
ಜಯತು ನುತ ನಿಗಮಾಂತ ಜಯತು ನಿರಹಂತ || ೨ ||

ಅಂತ್ಯ : ತಿಂಗಳ ತಳೆದವಗೆ ಸಂಗತ ಸಾರಂಗ ಕರಾಂಗುಳಿಗೆ
ಗಂಗೋತ್ತಮಾಂಗಗೆ
ಪುಂಗವಾಹಗೆ ಲಿಂಗೇಂದ್ರ ಕರಕಂಜ
ಭೃಂಗ ಮಹಲಿಂಗಗೆ || ೪೨೨ ||

ಕಂದ ಪದ್ಯ ॥ ಕರಿ ರಸ ಭಕ್ತಿ ಪಯೋನಿಧಿ
ಪರಿಮಿತ ಕಲಿವತ್ಸರಂ ಕರಂ ಕೆರಳಲ್ಕೀ
ಹರನ ಧುರದ ಪರಿಯಂ ತಾ
ನೊರೆದಂ ಲಿಂಗೇಂದ್ರನೊಲಿದುಘೇಯುನೆ ಲೋಕಂ ॥ ೪೨೩ ॥
ಶ್ರೀ ಪಾರ್ವತೀ ಪರಮೇಶ್ವರ ನಮೋ ನಮಸ್ತೆ
ಜಯ ಜಯಶ್ರೀ ಪರಮೇಶ್ವರ ॥

ವಿಷಯ : ಅರ್ಜುನನು ಈಶ್ವರನೊಡನೆ ಕಾದಿ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಕಲಿ ೪೯೬೮ ನೇ ವರ್ಷ ಈ ಕೃತಿಯ ರಚನೆ ಮುಗಿದಿದೆ.

139

ಕೆ. ಬಿ. ೨೦೨	**ಇಂದ್ರಕೀಲ**	ಯಕ್ಷಗಾನ
೭.೪"×೬"	ಅಳಿಯ ಲಿಂಗರಾಜ	೧೮೫೦
೧–೫೪ ಪತ್ರ	೧೪ ಪಂಕ್ತಿ	೨೦ ಅಕ್ಷರ

ಆದಿ : ಇಂದ್ರಕೀಲ ॥ ಶ್ರೀರಸ್ತು ॥ ನಾಂದಿ ॥ ಕಂದ ॥
ಶ್ರೀಕಾಳೀ ನವಯವ್ವನ
ಮಾಕಂದಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾಕರಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ ॥ ೧ ॥

ರಾಗ ॥ ನಾಟಿ ॥ ಝಂಪೆ ॥
ಜಯತು ಕಾಳೀಕಾಂತ ಜಯತು ರಹಿತಾದ್ಯಂತ
ಜಯ ವಲಯಿತಾನಂತ ಜಯ ದಯಾಕ್ರಾಂತ
ಜಯತು ಜಿತಸಾಮಂತ ಜಯ ನತವನ ವಸಂತ
ಜಯತು ನುತ ನಿಗಮಾಂತ ಜಯತು ನಿರಹಂತ ॥ ೨ ॥

ಅಂತ್ಯ : ತಿಂಗಳ ತಳೆದವಗೆ ಸಂಗತಸಾರಂಗತರಾಂಳಿಗೆ
ಗಂಗೋತ್ತಮಾಂಗಗೆ
ಪುಂಗವವಾಹಗೆ ಲಿಂಗೇಂದ್ರಕರಕಂಜ
ಭೃಂಗ ಮಹಲಿಂಗಗೆ ॥ ೪೨೨ ॥

ಕಂದ ॥ ಕರಿರಸ ಭಕ್ತಿಪಯೋನಿಧಿ
ಪರಿಮಿತ ಕಲಿವತ್ಸರಂತರಂ ತೆರಳಲ್ಕೀ
ಹರ ನರನ ಧುರದ ಪರಿಯಂ
ನೊರದಂ ಲಿಂಗೇಂದ್ರನೊಲಿದುಘೇಯನೆ ಲೋಕಂ ॥ ೪೨೩ ॥

ವಾರ್ಧಕಾ ॥ ೫೦ ॥ ಬಾಮಿನಿ ॥ ೧೯ ॥ ಕಂದ ॥ ೨೭ ॥ ಕ್ಕೆ ಮಂಗಳಂ ।
ಸರ್ಗ ೧೮೮೪ ನೇ ಯ್ಸಿವಿ ಡಿಶಂಬರು ತಾರೀಖು ೫ ರಲ್ಲು ಯಿಂದ್ರಕೀಲದ ಕಥೆಯು ಸಂಪೂರ್ಣಂ ॥
ಚಿ। ಅ। ವು। ಮಗ। ನರಶಿಂಗರಾಯನ ಬರಹಕ್ಕೆ ಮಂಗಳಂ ಮಹಾಶ್ರೀ.

ವಿಷಯ : ಅರ್ಜುನನು ಈಶ್ವರನೊಡನೆ ಕಾದಿ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಗ್ರಂಥವು ಮುಗಿದ ಮೇಲೆ ಹಲವು ಶುದ್ಧ ಪತ್ರಗಳಿವೆ. ಅಕ್ಷರಗಳು ಸ್ಫುಟವಾಗಿಯೂ ಗುಂಡಾಗಿಯೂ ಇವೆ. ಬರವಣಿಗೆಗಾರರು ಬರೆಯಲು ಮೂರು ವಿಧವಾದ ಶಾಯಿಯನ್ನು ಉಪಯೋಗಿಸಿರುತ್ತಾರೆ.

140

ಕೆ. ಬಿ. ४೯೯	ಇಂದ್ರಕೀಲ	ಯಕ್ಷಗಾನ
೭.೯" × ೬.೨"	ವಿಷ್ಣು	೧೯ ನೆಯ ಶತಕ
೧–೫೪ ಪತ್ರ	೧೫ ಪಂಕ್ತಿ	೧೭ ಅಕ್ಷರ

ಆದಿ : ಯಿಂದ್ರಕೀಲ ಬರಿಯುವದಕ್ಕೆ ಶುಭಮಸ್ತು ॥
ವೃತ್ತಾ ॥ ಶ್ರೀ ಗಂಗಾಧರನಂಬುಜಾಪ್ತ ಶತಭಾಸಂ ತ್ರೈಜಗತ್ಪಾಲಕಂ
ನಾಗಾರೂಢ ಮುಖಾಮರೌಘವಿನುತಂ ಕೈಲಾಸವಾಸಂ ಹರಂ
ನಾಗಾರಾತಿ ವರೂಥಮಿತ್ರನಭವಂ ನಾದಾಸುವಿದ್ಯಪ್ರದಂ
ವಾಗೀಶಾಖ್ಯಪುರೀಶನೀವುದೆಮಗಂ ಸುಜ್ಞಾನ ಪೀಯೂಷಮಂ ॥

ಅಂತ್ಯ : ಕಂದ ॥ ದ್ವಿಜಕುಲಜಾತಂ ರಾಮಾ
ತ್ಮಜ ವಿಷ್ಣುವೆನಿಪ್ಪನಜಪುರೇಶನ ಭಜಕಂ
ಶೃಜಿಶಿದ ವಾಕ್ಯವನಾಲಿಶಿ
ಸುಜನರ್ಮುದವೆತ್ತುವೆರಶಿ ಕೇಳ್ವುದು ಧರೆಯೊಳ್ ॥ ೪೫೭ ॥

× × × ×

ಗಜಚರ್ಮಾಂಬರಧರನಿಗೆ ಮಂಗಳ
ಭಜಕರ ಭವಭಯನಾಶಗೆ ಮಂಗಳ
ತ್ರಿಜಗವ ಪಾಲಿಪ ಶಿವನಿಗೆ ಮಂಗಳ
ಅಜಪುರವಾಸಿಗೆ ಮಂಗಳಂ
ಮಂಗಳಂ ಜಯಮಂಗಳಂ ॥ ೪೬೧ ॥

ಯಿಂದ್ರಕೀಲವು ಸಂಪೂರ್ಣ ಮಂಗಳ ಮಹಾಶ್ರೀ ॥

ವಿಷಯ : ಅರ್ಜುನನು ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಕಾಗದವು ಬಹಳ ತೆಳುವಾಗಿರುವುದರಿಂದ ಒಂದು ಕಡೆಯಲ್ಲಿ ಬರೆದಿರುವುದು ಮತ್ತೊಂದು ಕಡೆಗೂ ಕಾಣುವುದರಿಂದ ಅಕ್ಷರಗಳನ್ನು ಕಷ್ಟಪಟ್ಟು ಗುರ್ತಿಸಬೇಕಾಗುತ್ತದೆ.

141

ಕೆ.ಬಿ. ೪೬೫/೧	ಇಂದ್ರಕೀಲಕ	ಯಕ್ಷಗಾನ
೮.೨" × ೬.೫"	?	?
೧_೨೯ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ಭಾರತದೊಳಗಣ ಯಕ್ಷಗಾನದಲ್ಲಿ ಯಿಂದ್ರಕೀಲಕ ಪ್ರಸಂಗ ಬರಿಯುದಕ್ಕೆ ಶುಭಮಸ್ತು ॥

ವೃತ್ತಾ॥ ಶ್ರೀಗಂಗಾಧರನಂ ಭುಜಾಪ್ತಶತಭಾ....ತ್ರೈಜಗತ್ಪಾ....ಗಾರೂಡ
ಮುಖ ಮರವುಘ ವಿನುತಂ ॥ ಕೈಲಾಸ....ಹರಂ ॥
ನಾಗಾರಾತಿವರೂಥ ಮಿತ್ರಾನ....ಪ್ರದಂ ॥
ವಾಗೀಶ್ಯಾಖ್ಯ ಪುರೇಶನೀವುದೆಮಗಂ ಸದ್ಭಕ್ತಿ ಸಂದೋಹಮಂ ॥

× × × ×

ಕಂದ ಪದ್ಯಾ ॥ ಹರಪುತ್ರಂ ಗಜವಕ್ತ್ರಂ
ಹರಿಮಿತ್ರಂ ವಾಸವಾಧಿಸ್ತೋತ್ರಂ
ಸ್ಮಿರತೋಷ ಉರಗ ಭೂಷಂ
ಕರುಣದೊಳೀಗೆಮಗೆ ಮತ್ತಿಯನಂ ವಿಘ್ನೇಶಂ ॥ ೧ ॥

ಅಂತ್ಯ : ಬರುವ ಭಾಷಣಗಳನು ತರಿದು
ನರನು ತೋಷದಿಂದ ಸರಳಗರದನವನಿಯಭವೆಲ್ಲ

ಶರದವ್ಮ್ಮಯುದಲೀ ತೆರಪುಗಾಣದಿಂದವಾಗೆ
ತೆರಳಿ ವುತ್ತೆ ಧನುಜರಧಿಕಾ । ತೆರದ ವಾಯೆಯಿಂದಾ.

ವಿಷಯ : ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಅಕ್ಷರ ಗುಂಡಾಗಿದೆ. ಅಸಮಗ್ರಪ್ರತಿ. ಮೊದಲನೆಯ ಪುಟದ ಅಕ್ಷರಗಳು ಅಳಿಸಿಹೋಗಿರುವುದರಿಂದ ಓದುವುದು ಕಷ್ಟ. ಇದೇ ಪುಸ್ತಕದಲ್ಲಿ ಮಾರಿ ಮುಖನ ಕಾಳಗ ಎಂಬ ಯಕ್ಷಗಾನಗ್ರಂಥವಿದೆ. ಮಧ್ಯೆ ಕೆಲವು ಪತ್ರಗಳಲ್ಲಿ ಗೃಹ ಕೃತ್ಯದ ಲೆಕ್ಕಗಳಿವೆ. ಕ್ರಮಸಂಖ್ಯೆಯನ್ನು ಗುರುತಿಸಿಲ್ಲ.

142

ಕೆ. ಎ. ೨೪೬/೩	ಇಂದ್ರಕೀಲ ಚೌಪದ	ಚೌಪದ
೧೨.೬" × ೮"	?	?
೧೩ ಪತ್ರ	೧೯ ಪಂಕ್ತಿ	೨೨ ಅಕ್ಷರ

ಆದಿ : ಇಂದ್ರಕೀಲ ಚಉಪದ ಬರಿಯುವದಕ್ಕೆ ಶುಭಮಸ್ತು ।
ಶ್ರೀ ನಿಲೆಯ ಸಖನ ಚರಣಗಳ ಬಲಗೊಂಡು
ಶ್ರೀವರನ ಸಖನ ತನುಜನ ಬೇಡಿಕೊಂಡೂ
ಶ್ರೀವರನ ನೆನದು ಶಿವನಡಿಯ ದಯಗೊಂಡು
ಶ್ರೀ ಹೈಮಾವತಿಯ ಕಾರುಣ್ಯ ಪಡಕೊಂಡೂ ॥ ೧ ॥

ಅಂತ್ಯ : ಗಜಮುಖನೆ ತ್ರಿಜಗವಂದಿತ ಭಾನುತೇಜಾ
ಅಜ ಸುರಾರ್ಚಿತ ಸಲಹೊ ನೀನು ವಿಘ್ನರಾಜಾ ॥
ಮಾಸದಲಿ ಭಾದ್ರಪದ ಶುದ್ಧ ಚೌತಿಯಲಿ
ಪಾಶಾಂಕುಶಧರಗೆ ನಮಿಸಿ ಭಕ್ತಿಯಲಿ
ಲೇಸಾಗಿ ಪಾದ್ಯಾಚ ಮಾನವಿದುರಿನಲಿ
ಭೂಸುರರು ಪೂಜಿಪರು ಹರುಷನಿಷ್ಠೆಯಲಿ ॥ ೮೦ ॥
ಇಂದ್ರಕೀಲ ಸಮಾಪ್ತಮಾದುದು.

ವಿಷಯ : ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಪಾರ್ವತೀ ಸ್ತೋತ್ರ, ವೀರಸಂಗಯ್ಯನ ಚೌಪದ, ಮಹಾನವಮಿ ಪದಗಳೆಂಬ ಇತರ ಗ್ರಂಥಗಳಿವೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ.

143

ಕೆ.ಬಿ. ೫೦೨ ಇಂದ್ರಕೀಲದ ಕಥೆ ಯಕ್ಷಗಾನ

೮" × ೬.೩" ಲಿಂಗರಾಜ ೧೮೫೦

೧–೬೨ ಪತ್ರ ೧೩ ಪಂಕ್ತಿ ೧೬ ಅಕ್ಷರ

ಆದಿ : ಯಿಂದ್ರಕೀಲದ ಕಥೆ| ಶ್ರೀ ಗಣಾದಿಪತೆಯೆಂ ನಮಃ

ನಾಂದಿ | ಕಂದ |

ಶ್ರೀ ಕಾಳೀ ನವಯುವ್ವನ
ಮಾಕಂದ ಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾ ಕರಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ || ೧ ||

ರಾಗಾ | ನಾಟಿ | ಝಂಪೆ |

ಜಯತೂ ಕಾಳೀಕಾಂತ | ಜಯತು ರಹಿತಾದ್ಯಾಂತ
ಜಯವಲಯಿತಾನಂತ | ಜಯದಯಾಕ್ರಾಂತಾ ||

ಅಂತ್ಯ : ಕಂದಾ || ಪರಿರಸ ಭಕ್ತಪಯೋನಿಧಿ
ಪರಿಮಿತ ಕಲಿತ ವತ್ಸರಂತರಂ ತೆರಳಲ್ಕೀ
ಹರನರನ ಧುರದ ಪರಿಯಂ
ನೊರದಂ ಲಿಂಗೇಂದ್ರನೊಲಿದುಘೇಯನೆ ಲೋಕಂ || ೪೨೩ ||

ಶ್ರೀ ಸರ್ಣ ೧೮೪೯ ಯಿಸವಿ ಮೇ ತಾರೀಖು....ಲ್ಲು ವೋದೋವಾದನು ಬರದುಪ್ಪಿಸಿದ ಯಿಂದ್ರಕೀಲದ ಪ್ರಸಂಗಕ್ಕೆ ಮಂಗಳಮಹಾಶ್ರೀ.

ವಿಷಯ : ಅರ್ಜುನನು ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದ ಕಥೆ.

ವಿಶೇಷ : ಅಕ್ಷರ ಸ್ಫುಟವಾಗಿವೆ.

144

(ಇಂದ್ರದೀಪಿಕಾ ನಿಘಂಟು)

ಕೆ. ೩೩೨/೪ ? ಶ್ಲೋಕ, ಅರ್ಥ

೧೫.೧" × ೨" ? ?

೨ ಪತ್ರ ೧೩ ಪಂಕ್ತಿ ೧೧೩ ಅಕ್ಷರ

ಆದಿ : ಶ್ರೀಗುರುವೇ ನಮಃ | ಇಂದ್ರದೀಪಿಕಾ ನಿಘಂಟು |
ನಿಘಂಟುನಾ ವಿನಾ ವೈದ್ಯೋ ವಿದ್ವಾನ್ವ್ಯಾಕರಣಂ ವಿನಾ |
ವಿನಾಭ್ಯಾಸ ಧನುರ್ವಿದ್ಯಾ ತ್ರಯೋ ಹಾಸ್ಯಸ್ಯ ಭಾಜನಂ ||

ಗಳಗಶ್ಲೋರ್ಧ್ವಪೇಸೀ ಚ ವರ್ಧನಂ ವಿಪುಳಂ ಫಲಂ। ಯೀ ೪ ಮದನ | ಮಂಗಾರೇ ದೇವಭಾಂಡಾರಾಂಥಕಶ್ಚ ದೇವದಾಳೀ ಚವೇನು ಕಾ | ಪಿತ್ಥಕಃ ಸಾಗರಾಗರಿ। ಯೀ ೭ ದೇವದಾಳಿ | ಅತಿ ತಿಕ್ತಶ್ಚಂದ್ರವೃಕ್ಷಃ ಕದಾಚಕ್ರ ಯಥಾಪಿ ಚ । ಗಿರಿಮಲ್ಲಿಕಾ | ಯೀ ೩ ಕೊಡಸಿಗೆ |

ಅಂತ್ಯ: ಉತ್ಪಲಂ ವಾರುಹಂ ಶ್ಲಕ್ಷ್ಣಂ ತರವಾರಂ ಚ ತುಂಡಿನಂ | ಯೀ ೫ ನೈದಿಲು | ನಳಾದ ನಿರುಜಿಶ್ಚೈವ ಸುಷಿರೋ ನಳದಸ್ತಥಾ | ಯೀ ೪ ಬಳ್ಳಿ| ದ್ಯಾಮಕಂ ಶಂಬರಂ ಬಿಂದು ಚಿತ್ರಾಧ್ವಫಲಾಶಕಾ । ಯೀ ೩ ನಂಜುಬುಲ್ಲು| ವರದಿತ್ಯೈಲಶೀರ್ಷಕಂ | ಯೀ ಸ್ಥಾಣೇಯುಮಂಚಿಪತ್ರೆ | ಇತಿ ಸಮಾಪ್ತಃ.

ವಿಷಯ: ವೈದ್ಯ ನಿಘಂಟು.

ವಿಶೇಷ: ೯ ಮತ್ತು ೧೧ನೇ ಸಂಖ್ಯೆಯ ೨ ಪತ್ರಗಳು ಮಾತ್ರ ಇವೆ. ಸಂಸ್ಕೃತ ಪದಗಳಿಗೆ ಕನ್ನಡ ಅರ್ಥವಿದೆ. ಇದರೊಂದಿಗೆ

ಶಬ್ದಾನುಶಾಸನ, ರಾಜೇಂದ್ರ ವಿಜಯಪ್ರಬಂಧ, ವೈದ್ಯನಿಘಂಟು, ನಾನಾರ್ಥರತ್ನಮಾಲಾ (ಸಂಸ್ಕೃತ), ಶಬ್ದಮಣಿದರ್ಪಣ ಎಂಬ ಗ್ರಂಥಗಳಿವೆ.

145

ಕೆ. ೬೩೪	ಇಷ್ಟಲಿಂಗ ಚಾರಿತ್ರ	ವಾರ್ಧಕ ಷಟ್ಪದಿ
೧೪.೧"×೧.೯"	?	?
೨೦–೨೫ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯನಮಃ ॥ ಯಿಷ್ಟಲಿಂಗಚಾರಿತ್ರ ಪ್ರಾರಂಭ ॥

ಪಲ್ಲ॥ ಮಹಾದೇವ ನಾನೇಂ ಕೃತಾರ್ಥನೊ| ನಾಹಂ ಕೋಹಂ ಸೋಹಂ ಮೆಂಬ ಮೂರು ಭ್ರಮೆಯ ತೋಹಿನೊಳು ತೊಡಕದ | ಷಡುಸ್ಥಲ ಬ್ರಂಹ್ಮವಂ । ಕಂಡೇ ಕರಸ್ಥಲದೊಳೂ ॥

ಪದ॥ ಶ್ರೀಮಂನ್ಮಹಾಶಿದ್ಧ ಶಿವಮೂರ್ತಿ ವರಗುರು
ಸ್ವಾಮಿ ಸಂನ್ಯಾನಿ ಶರಣಪ್ರೇಮಿ ಕರುಣದಿಂ
ಭೂಮಿಚಂದ್ರಾರ್ಕ್ಕರುಳ್ಳನಕ ಭವದೋಳ್ಬಂದಪಂ ಕಂದನೆಂದು
ಮರುಗೀ

ನಾಮರೂಪಕ್ರಿಯಾರಹಿತನೆನಿಸುವ ವುಮಾ
ಕಾಮಿನಿಯಕಾಂತ್ತನಂ ಶಾಂತನಂ ನಿಜಕರತ
ಳಾಮಳಕವಾಗಿ ತೋರಿಸಿದ ಗುರುಲಿಂಗಮಂ ಕಂಡೇಂ
ಕರಸ್ಥಲದೊಳೂ ॥೧॥

ಅಂತ್ಯ : ಗುರುವೆ ಶರಣಾರ್ತ್ತಿ ಶಂಕರಲಿಂಗ ಕಾರುಂಣ್ಯ
ದಿರವೆ ಶರಣಾರ್ತಿ ಶಂಕರಲಿಂಗ ಭಕ್ತಿ ಸುರ
ತರುವೆ ಶರಣಾರ್ತ್ತಿ ಶಂಕರಲಿಂಗ ಶರಣು ಶರಣಾರ್ತ್ತಿ ಶಂಕರಲಿಂಗವೇ
ತರಳನೊಳು ತಪ್ಪನರಸಿದಿರಿ ಶಿವಶಿವ ನಾನು
ನರಜಂನ್ಮದೇಹಿ ನಾ ನಡೆವುದಿಲ್ಲಂತ್ತಪ್ಪು
ನುಡಿವುದೆಲ್ಲಂ ತಪ್ಪು।
ಧರಣಿಯೊಳು ನೀ ತಪ್ಪನೊಪ್ಪವಿಡಿವುದು ನಿಂಮ್ಮ ಧರ್ಮ ॥೪೭॥
ಯಿಷ್ಟಲಿಂಗಚಾರಿತ್ರ ಸಮಾಪ್ತಃ ಶ್ರೀ.

ವಿಷಯ : ಇಷ್ಟಲಿಂಗಸ್ತೋತ್ರ.

ವಿಶೇಷ : ಕೆ ೬೩೩, ಕೆ ೬೩೫ನೆಯ ನಂಬರಿನ ಶುಕಮುನಿ ಚಾರಿತ್ರ, ಪುನರ್ದೀಕ್ಷಾ ರಗಳೆಗಳೂ ಈ ಗ್ರಂಥದೊಂದಿಗೆ ಇವೆ.

146

ಕೆ. ಬಿ. ೪೬೭	ಇಷ್ಟಲಿಂಗೇಶ್ವರ ಶತಕ	ವೃತ್ತ
೮.೩"×೬.೬"	?	?
೧–೧೯ ಪತ್ರ	೧೮ ಪಂಕ್ತಿ	೨೦ ಅಕ್ಷರ

ಆದಿ : ಶ್ರೀವಿಷ್ಟಲಿಂಗೇಶ್ವರನ ವೃತ್ತ (ಶತಕಂ)
ಗುರುವೇ ಸದ್ಗುರು ಇರುವೆ ಯನ್ನ ಮರೆವಂ ನೀನೋಡಿ ರಕ್ಷಿಸೆಲೆ
ವರೆದಂ ಸ್ವರ್ಣವ ಬಣ್ಣವಿಟ್ಟು ಸಹಜಂ ಶಿದ್ಧಾಂತ ತಿಳಿವಂಡದಿ
ಧರೆಯೊಳ್ ಮೂಢರ ಮಂಕು ಮಾನುಜಡರೊಳ್ ನೀಕೂಡಿ ಬೆರಸದಿರೈ
ಹರನೇ ನಿಮ್ಮ ತ್ರಿಕಾಲ ಬಿಡದೆ ಸ್ತುತಿಪೇಂ ಶ್ರೀವಿಷ್ಟಲಿಂಗೇಶ್ವರಾ ॥೧॥

ಅಂತ್ಯ : ಮಹಾಮೇರು ಸಮಾನವಾದ ಮೇಡ್ಲೇರೀಪಟ್ಣ ಹಿರೇಮಠದನು
ಆ ಕಬ್ಬಿನ ಕಂಥೆ ಬಗೆಯಾ ಶಿವಲಿಂಗ ಪೇಳ್ದ ವೃತ್ತಂಗಳಿಂ
ಮಹೇಶಂ ವಾಕ್ಯವು ಅರಿದುದೆಲ್ಲ ನೋಡಿಂತಪ್ಪಂಪಿರೆತ್ತಿರ್ದುದಂ
ಮಹಾಸಂಜೀವನ ಜೀವಕರ್ತ ನೀನೆ ಶ್ರೀವಿಷ್ಟಲಿಂಗೇಶ್ವರಾ ॥೯೮॥
ಶ್ರೀ ಇಷ್ಟಲಿಂಗೇಶ್ವರ ಶತಕಂ ಸಂಪೂರ್ಣಂ ಮಂಗಳಮಹಾಶ್ರೀ ।

ವಿಷಯ : ಇಷ್ಟಲಿಂಗೇಶ್ವರ ಸ್ತುತಿ.

ವಿಶೇಷ : ಮಧ್ಯೆ ಗ್ರಂಥಲೋಪವಿದೆ. ಅಕ್ಷರಗಳು ಸ್ಫುಟವಾಗಿಯೂ, ವಿರಳವಾಗಿಯೂ ಇವೆ.

147

ಕೆ. ಬಿ. ೩೦೩/೧	**ಈಶ್ವರ ಸ್ವರೂಪ**	ಗದ್ಯ
೭.೬" × ೬.೨"	?	?
೧–೩೩ ಪತ್ರ	೧೫ ಪಂಕ್ತಿ	೧೯ ಅಕ್ಷರ

ಆದಿ : ಈಶ್ವರ ಸ್ವರೂಪು । ಯಿಶ್ವರ ಸ್ವರೂಪನು ವಿಚಾರಿಸುತ್ತಲಿದ್ದೇನೆ । ಯಿಶ್ವರನು ಯಾರು ಯಂದರೆ ಮಾಯೆಯು ಮಾಯಾಧಿಷ್ಠಾನ ಚೈತನ್ಯವೂ ಮಾಯೆಯಲ್ಲಿ ಪ್ರತಿಬಿಂಬಿಸಿದ ಚೈತನ್ಯವೂ ಯಿವು ಮೂರು ಕೂಡಿ ಯಿಶ್ವರ ನೆಂದು ಯಾಕೆ ಹೇಳಬೇಕು. ಕೇವಲವಾದ ಮಾಯೆಗೆ ಹೇಳುವ ಯೆಂದರೆ ತಿಗದು । ಆಕಾಶಕ್ಕು ಯಿಶ್ವರತ್ವ ಬರಬೇಕು. ಅದಕ್ಕೆ ಯಿಶ್ವರತ್ವ ಕೂಡ ದಾಗಿ ಮಾಯೆಗೆ ಯಿಶ್ವರತ್ವ ಹೇಳಕೂಡದು ।

ಅಂತ್ಯ : ಸಂಕ್ಷೇಪಕಾಚಾರ್ಯರುಗಳು ಪುರಾಣಾದಿಗಳ ಶೋಧಿಸಿ ಆ ಪುರಾಣಾದಿಗಳ ಅರ್ಥವ ಸಂಕ್ಷೇಪ ಶಾರೀರದಲ್ಲಿ ನಿರೂಪಿಸ್ತರು ॥ ನಿರೂಪಿಸಿದ ವಾಕ್ಯವೇನೂ ಯಂದರೆ ಹೇಳಲಾ । ಪುರುಷಾಪರಾಧ ಮಲಿನಾಧಿ ಪಣಾನಿರವದ್ಯ ಚಕ್ಷು ರುದ್ರಯಾಪಿಧಾನ ಫಲಾಯಭರ್ಜುವಾ ವಿಷಯವಶಿಶ್ರು ಸಂಭವಾಪಿತು ತದಾತ್ಮಸಿಧಿಃ ॥
ಭರ್ಜುಮನನಂ ಸಪ್ತಚತ್ವಾರಿಂಶೋಧ್ಯಾಯ ಸಂಪೂರ್ಣಂ ॥ ಅಂತೂ ೪೭ ನೇ ಅಧ್ಯಾಯ ಸಮಾಪ್ತಃ ॥

ವಿಷಯ : ಈಶ್ವರ ಸ್ವರೂಪ ವಿಚಾರ.

ವಿಶೇಷ : ಇದೇ ಪುಸ್ತಕದಲ್ಲಿ ಪರಬ್ರಹ್ಮಪ್ರಕಾಶಿಕೆ ಎಂಬ ಕೃತಿ ಇದೆ.

148

ಕೆ. ಬಿ. ೧೪೫ | ಉತ್ತರ ಗೀತೆಯ ಟೀಕು | ಶ್ಲೋಕ, ಟೀಕು
೭.೮″×೬.೧″ | ಗೌಡಪಾದಾಚಾರ್ಯ | ?
೧–೫೫ ಪತ್ರ | ೧೬ ಪಂಕ್ತಿ | ೨೦ ಅಕ್ಷರ

ಆದಿ : ಉತ್ತರಗೀತಾ ಸವ್ಯಾಖ್ಯಾನ ಬರೆಯುವುದಕ್ಕೆ ಶ್ರೀರಸ್ತು ॥
ಅಖಂಡಸಚ್ಚಿದಾನಂದಮವಾಙ್ಮಾನಸಗೋಚರಂ ।
ಆತ್ಮಾನಮಖಿಲಾಧಾರಮಾಶ್ರಯೇಭೀಷ್ಟಸಿದ್ಧಯೇ ॥ ೧ ॥
ಷಡ್ಗುಣಪರಿಪೂರ್ಣನಾದ ಅರ್ಜುನನು ಕುರುಕ್ಷೇತ್ರದಲ್ಲಿ ಸೇನಾಮಧ್ಯದಲ್ಲಿ ಭಗವಂತನಿಂದ ಉಪದೇಶಿಸಲ್ಪಟ್ಟ ಆತ್ಮೋಪದೇಶವನ್ನು ವಿಷಯಭೋಗ ಪ್ರಾಬಲ್ಯದಿಂದ ಮರತು ತಿರಿಗಿ ಆ ಆತ್ಮತತ್ವವನ್ನು ತಿಳಿಯಲೋಸ್ಕರ ಷಡ್ಗುಣ ಪರಿಪೂರ್ಣನಾದ ಶ್ರೀ ಕೃಷ್ಣನಂ ಕುರಿತು ಪ್ರಶ್ನೆ ಮಾಡುತ್ತಿದ್ದಾನೂ॥

ಅಂತ್ಯ : ಭೂತವಸ್ತುನ್ಯಶೋಚಿತ್ವೇ ಪುನರ್ಜನ್ಮನವಿದ್ಯತೇ ॥
ಭೂತವಸ್ತುನಿ। ಹಿಂದೆ ಹೋದಂಥಾ ವಸ್ತುವಿನಲ್ಲಿ। ಅಶೋಚಿತ್ವೆ। ದುಃಖ ರಾಹಿತ್ಯ ಸಿದ್ಧವಾಗುತ್ತಿರಲಾಗಿ ಇದು ಉಪಲಕ್ಷಣವು। ಆಗಾಮಿ ವಸ್ತುವಿನಲ್ಲಿ ನಿರಪೇಕ್ಷಸಿದ್ಧವಾಗುತ್ತಿರಲಾಗಿಯೂ ವರ್ತಮಾನ ವಸ್ತುವು ಪ್ರಾಪ್ತವಾದಲ್ಲಿ ಭೇದರಾಹಿತ್ಯವು ಸಿದ್ಧವಾಗುತ್ತಿರಲಾಗಿ। ಪುನರ್ಜನ್ಮ। ಪುನಃ ಜನ್ಮವು। ನ ವಿದ್ಯತೆ। ಆಗುವದಿಲ್ಲ ॥ ೧೭ ॥ ಶ್ರೀ॥ ಗೌಡಪಾದಾಚಾರ್ಯ ಶ್ಲೋಕ ॥
ಆತ್ಮಯೋಗಮುಪೋಚದ್ಯೋ ಭಕ್ತಿಯೋಗಶಿರೋಮಣಿಂ।
ತಂ ವಂದೇ ಪರಮಾನಂದಂ ನಂದನಂದನಮೀಶ್ವರಂ ॥
ಇತಿ ಶ್ರೀ ಗೌಡಪಾದಾಚಾರ್ಯ ವಿರಚಿತಾಯಾಂ ಅಶ್ವಮೇಧಪರ್ವಣಿ ಉತ್ತರ ಗೀತಾವ್ಯಾಖ್ಯಾಯಾಂ ತೃತೀಯೋಧ್ಯಾಯಃ ॥ ಶ್ರೀಕೃಷ್ಣಾರ್ಪಣಮಸ್ತು ॥

ವಿಷಯ : ವೇದಾಂತ.

ವಿಶೇಷ : ಪ್ರತಿಕಾರರು ಸುಬ್ರಾಯರು. ಪ್ರತಿಯ ಕಾಲ ೧೮–೪–೧೮೯೯.

149

ಕೆ. ೧೮೯ | ಉತ್ತರರಾಮಕಥಾ | ಭಾಮಿನೀ ಷಟ್ಪದಿ
೧೭.೯″ × ೧.೬″ | ನರಸ | ೧೬೧೨
೧–೯೧ ಪತ್ರ | ೧೧ ಪಂಕ್ತಿ | ೧೧೫ ಅಕ್ಷರ

ಆದಿ : ವುತ್ತರ ಖಾಂಡಾ ಬರಉದಕ್ಕೆ ಆಯುರಾರೋಗ್ಯ ಅಯಿಶ್ವರ್ಯಮಸ್ತು

ಸೂಚನೆ ॥ ಶ್ರೀ ಮನೋಹರವೆನಿಸಿದುತ್ತರ
ರಾಮುಕಥನದ ಪೀಠಿಕೆಯೊಳಜ
ರಾಮು ಹರಿಹರ ಪರಮು ಮೊದಲಾದಾದ್ಯರನು ನೆನವೇ ॥

ಪದನೂ ॥ ಶ್ರೀಪತಿಯು ಶಿವನಜರುಗಳು ನಾ
ನಾಪರಿಯ ಪ್ರತುಮೆಗಳ ನಿರ್ಮಿಸಿ
ಚಾಪಲದಲಾಡಿಸಲು ದಿವರಾತ್ರೆಗಳ ಥೆರೆಗಳಲಿ
ದೀಪಗಳು ರವಿ ಶಶಿಗಳಗ್ನಿಯು
ಸ್ತಾಪಿಸಲು ನಾಟಕವ ನೋಡುವ
ನಾ ಪರಮು ವಿಷ್ಣುವಿನ ಪದಪದ್ಮಗಳಿಗೆರಗುವೆನೂ ॥ ೧ ॥

× × × ×

ಸುಕವಿಗಳ ಸೇವಕನು ರಘುನಾ
ಯಕನ ದಾಸರದಾಸ ಸಜ್ಜನ
ನಿಕರ ವಂದ್ಯನು ಸುಗುಣ ಸೂವ್ರತಶೀಲ ಧಾರ್ಮಿಕನೂ
ಸಕಲಜನ ಸಂನ್ನುತನು ತಿಂಮಾಂ
ಬಿಕೆಯ ರಂಗೇಂದ್ರನ ಕುಮಾರನು
ಸುಕವಿ ನರಸನು ಪೇಳ್ದನುತ್ತರ ರಾಮುಕಥನವನೂ ॥ ೨೧ ॥

× × × ×

ಶ್ರೀವರನ ವರವಚನದಲಿ ಪರಿ
ಧಾವಿ ಸಂವತ್ಸರದೊಳಗೆ ಸಂ
ಭಾವಿಸುವ ವೈಶಾಖಮಾಸದೊಳಕ್ಷ ತದಿಗೆಯಲಿ
ದೇವಗುರುವಾರದಲಿ ಪೇಳಿದ
ನೀ ವಸಥೆಗೂರ್ಜಿತವದಾಗಲು
ರಾವಣಾರಿಯು ಮುನಿಯ ಕೇಳಿದ ಕಥೆಯು ಕವಿ ನರಸಾ ॥ ೨೯ ॥

ಅಂತ್ಯ : ಧಾತ್ರಿಯೊಳಗತ್ಯಧಿಕ ಭಾಸ್ಕರ
ಕ್ಷೇತ್ರಭವನಾಶನಿ ಸುತೀರ್ಥದಿ
ಸ್ತೋತ್ರಸುತ ನಾರಾಯಣ ಗಿರಿ ವೇದಾದ್ರಿ ಗರುಡಾದ್ರಿ
ಗೋತ್ರಗಳಲಿ ವಿಶಾಲಯೋಗದಿ
ಪಾತ್ರ ಹರಿಗರ್ಪಿಸಿದ ಫಲ ಜಗ
ನೇತ್ರವಂಶನು ರಾಮುನುತ್ತರ ಕಥೆಯು ಕೇಳ್ದರಿಗೆ ॥ ೪೯ ॥

ಅಂತೂ ಸಂಧಿ ೫೬ ಕಂ ಪದನೂ ೨೬೭೫ ಕಂ ಶ್ಲೋಕಾ ೮೩೬೦ ಕಂ ಜಯ ಮಂಗಳ ಮಹಾಶ್ರೀ.

ಶ್ರೀಮದಸುರವರ ಪ್ರಸಂನ × × ಶುಭಕ್ರತು ಸಂ। ಆಶ್ವೀಜ ಶು ೧೨ ಶುಕ್ರವಾರದವರಿಗೆ ಬೊಂಮ್ಮುಹಳ್ಳಿ ರಾಮಂಣನವರ ಕುಮಾರ ನಾರಣಪ್ಪ ಬರದ ವಾಲ್ಮೀಕ ರಾಮಾಯಣ ಸಪ್ತಖಾಂಡ ಸಂಪೂರ್ನಃ।

ವಿಷಯ : ಉತ್ತರ ರಾಮಾಯಣದ ಕಥೆ.

ವಿಶೇಷ : ೩೧, ೩೨, ೩೩ ಮತ್ತು ೩೪ ರ ೨ ಪತ್ರಗಳು ಒಟ್ಟು ೫ ಪತ್ರಗಳು ಖಾಲಿಯಿವೆ. ಈ ಭಾಗದ ಗ್ರಂಥವು ಲುಪ್ತವಾಗಿದೆ. ಅಕ್ಷರ ಸಣ್ಣಗಿದ್ದರೂ ಸ್ಫುಟ.

150

ಕೆ. ೬೦೪	**ಉತ್ತರರಾಮಕಥಾ**	ಭಾಮಿನೀ ಷಟ್ಪದಿ
೨೩.೨"×೧.೩"	ನರಸ	೧೬೧೨
೧–೨೦೯ ಪತ್ರ	[illegible] ಪಂಕ್ತಿ	೧೦೫ ಅಕ್ಷರ

ಆದಿ : ಶ್ರೀ × × × ಧಾತು ಸಂವತ್ಸರದ ಪುಷ್ಯ ಶುಧ ಪಂಚಮಿಾ ಸೋಮವಾರ × × × ಪುಟಲಕ್ಷ್ಮನು × × ರುದ್ರಪ್ಪನವರಿಗೆ ಬರದುಕೊಟ್ಟಂತ್ತಾ ವುತ್ತರ ರಾಮಾಯಣದ ಪುಸ್ತುಕಾ ಬರವುದಕ್ಕೆ ಶುಭಮಸ್ತು × × ×

ಶ್ರಿಮನೋಹರಮೆನಿಸಿದುತ್ತರ
ರಾಮಕಥನದ ಪೀಠಿಕೆಯೊಳಜ
ರಾಮ ಹರಿಹರ ಪರಮ ಮೊದಲಾದ್ಯರನು ನೆನವೇ ॥

ಪದನೂ ॥ ಶ್ರೀಪತಿಯು ಶಿವನಜರುಗಳು ನಾ
ನಾಪರಿಯ ಪ್ರಥುಮೆಗಳ ನಿರ್ಮಿಸಿ
ಚಾಪಲದಲಾಡಿಸಲು ದಿವರಾತ್ರಿಗಳ ಥೆರೆಗಳಲಿ
ದೀಪಗಳು ಶಶಿರವಿಗಳಗ್ನಿಯು
ಸ್ಥಾಪಿಸಲು ನಾಟಕವ ನೋಡುವ
ನಾ ಪರಮ ವಿಷ್ಣುವಿನ ಪದಪದ್ಮಗಳಿಗೆರಗುವೆನೂ ॥ ೧ ॥

× × × ×

ಸುಕವಿಗಳ ಸೇವಕನು ರಘುನಾ
ಯಕರ ದಾಸರದಾಸ ಸಜ್ಜನ
ನಿಕರವಂದ್ಯನು ಸುಗುಣ ಸೂವ್ರತಸೀಲ ಧಾರ್ಮಿಕನೂ

ಸಕಲಜನ ಸಂನ್ನುತನು ತಿಂಮಾಂ
ಬಿಕೆಯ ರಂಗೇಂದ್ರನ ಕುಮಾರನು
ಸುಕವಿ ನರಸನು ಪೇಳ್ದನುತ್ತರ ರಾಮಕಥನವನೂ ॥ ೨೧ ॥

× × × ×

ಶ್ರೀವರನ ವರವಚನದಲಿ ಪರಿ
ಧಾವಿ ಸಂವತ್ಸರದೊಳಗೆ ಸಂ
ಭಾವಿಸಲು ವೈಶಾಖಮಾಸದೊಳಕ್ಷತದಿಗೆಯಲೀ
ದೇವಗುರುವಾರದಲಿ ಪೇಳಿದ
ನೀ ವಸುಧೆಗೂರ್ಜಿತವದಾಗಲು
ರಾವಣಾರಿಯು ಮುನಿಯು ಕೇಳಿದ ಕಥೆಯ ಕವಿನರಸಾ ॥ ೨೯ ॥

ಅಂತ್ಯ : ಯೇರಿದನು ಆ ಗಿರಿಯ ಶೃಂಗಗ
ಳಾರೈದು ಅಲ್ಲಿರ್ದ ಗುಹೆಗಳ
ಸೇರಿಯಿಹ ಮುನಿ ಸಿಧವಿದ್ಯಾಧರರು ನಿಷ್ಟಿಸುತಾ
ಸಾರಿ ಅದ್ರಿಯ ಸರಣಿಯೊಳು ವನ
ಪೂರಿತದಿ ಕಮಲಗಳ ಖಗಕುಲ
ಚೀರಿಕೆಯ ಕೊಳನಿರಲು ಕಾಣುತಲಲ್ಲಿಗೈತಂದಾ ॥ ೨೨ ॥
ಪದ್ಮನಂಧಿಯ ರಾಗ ಕಲಿಯುಲು
ಪದ್ಮಪೂರಿತ । ಕೊಳನು

ವಿಷಯ : ಉತ್ತರ ರಾಮಾಯಣದ ಕಥೆ.

ವಿಶೇಷ : ಶುಕ, ಪರಾಶರ, ವ್ಯಾಸ, ಮಾಘ, ಮಯೂರ, ಭಾರವಿ, ನಾಗವರ್ಮ, ದಂಡಿ, ರುದ್ರಭಟ್ಟ, ರಾಘವಾಂಕ, ಕುಮಾರವ್ಯಾಸ, ವಿರಾಗಿ ಶುಕರೂಪ, ಧನಂಜಯ, ಯೋಗಿ ನಿತ್ಯಾನಂದ ಕವಿಗಳನ್ನು ಸ್ತುತಿಸಿದ್ದಾನೆ. ತಾನು ಭಾರದ್ವಾಜ ಗೋತ್ರದವನೆಂದೂ ಆಪಸ್ತಂಭ ಸೂತ್ರದವನೆಂದೂ, ದ್ರವಿಡಕುಲ ಶೀಲನೆಂದೂ ಹೇಳಿಕೊಳ್ಳುತ್ತಾನೆ. ಪ್ರತಿ ಅಸಮಗ್ರ.

151

ಕೆ. ಎ. ೩೨೭ **ಉತ್ತರರಾಮಚರಿತಂ** ನಾಟಕ

೧೩.೮"×೮.೭" ವೆಂಕಟರಾಯ ೧೯೩೪

೧–೫೨ ಪತ್ರ ೧೭ ಪಂಕ್ತಿ ೧೫ ಅಕ್ಷರ

ಆದಿ : ಶ್ರೀ ವೇಂಕಟರಾಯ ಕವಿ ಕೃತಂ ಉತ್ತರ ರಾಮಚರಿತಂ (ಪ್ರಥಮಾಂಕಂ)

ಸೂತ್ರಧಾರಂ– (ಪ್ರವೇಶಿಸಿ, ಸಪುಷ್ಪಾಂಜಲಿ ಪುಟಂ)

ವೃ|| ಶ್ರೀಮತ್ಕಲ್ಯಾಣರೂಪಂ ಸಕಲ ಸುರನುತಂ ದಿವ್ಯತೇಜೋನಿದಾನಂ
ಧೀರಸ್ಫಾರೋರುಭಾವಂ ಪರಮಗುಣಯುತಂ ಶಾಂತನಶ್ರಾಂತವಿದ್ಯಂ
ಸ್ನಿಗ್ಧಂ ವರ್ಧಿಷ್ಣುವಂದ್ಯಂ ಮೃದುಮಧುರವಚಂ ನಿರ್ವಿಕಲ್ಪಾಂತರಂಗಂ
ರಾಮಂ ಸೀತಾವರಂ ರಕ್ಷಿಸುಗೆ ಮುನಿಜನೋಲ್ಲಾಸಕೋಶಂ
ರಮೇಶಂ || ೧ ||

ಅಂತ್ಯ : ಧರೆಯಂ ಪಾಲಿಕೆ ಪಾಪಮಂ ತುಳಿದು ಮೇಣ್ ಪುಣ್ಯಂಗಳಂ ವರ್ಧಿಸು
ತ್ತಮಲಂ ಮಂಗಲಮಿಾ ಕಥಾಲಹರಿ ಗಂಗಾಮಾತೃವಂತಾವಗಂ
ವಿಬುಧರ್ ಬ್ರಹ್ಮವಿದರ್ ಸಮಂತಭಿನಯ ಪ್ರಾಗಲ್ಭ್ಯಮಂ ಭಾವಿಸು
ತ್ತೊಲವಂ ತಾಳ್ದುಗೆ ವೇಂಕಟಾರ್ಯಕೃತಮಾದೀ ರೂಪಕಗ್ರಂಥದೊಳ್||೨೦||

(ಎಂದೆಲ್ಲರುಂ ಪೋಪರ್)

ಸಪ್ತಮಾಂಕಮಿದು

(ಇಂತುತ್ತರ ರಾಮಚರಿತಂ)

ರೂಪಕಂ ಪರಿಸಮಾಪ್ತಂ–ಶ್ರೀರಾಮಾರ್ಪಣಮಸ್ತು

ವಿಷಯ : ಲೋಕಾಪವಾಧಕ್ಕೆ ಅಂಜಿದ ಶ್ರೀರಾಮನು ಪೂರ್ಣಗರ್ಭಿಣಿಯಾದ ಸೀತಾದೇವಿಯನ್ನು ವನಾಂತರಕ್ಕೆ ಕಳುಹಿಸಿ ಕೆಲವು ವರ್ಷಗಳು ಕಳೆದನಂತರ ಅದೇ ಕಾಡಿನಲ್ಲಿ ಅನಿರೀಕ್ಷಿತವಾಗಿ ಆಕೆಯನ್ನೂ ತನ್ನ ಮಕ್ಕಳಾದ ಕುಶ ಲವರನ್ನೂ ಸಂಧಿಸಿ ಅವರನ್ನು ಅಯೋಧ್ಯೆಗೆ ಕರೆತರುವ ಕಥೆ.

ವಿಶೇಷ : ಪ್ರತಿಯ ಪರಿಸ್ಥಿತಿಯು ಉತ್ತಮವಾಗಿದೆ. ಅಲ್ಲಲ್ಲಿ ಬರೆದಿರುವುದನ್ನು ಅಳಿಸಿ ಮತ್ತೆ ಬರೆದಿದೆ. ಬರೆದುದರ ಮೇಲೆ ಕಾಗದದ ಚೂರಿನಲ್ಲಿ ಬರೆದು ಅಂಟಿಸಿದೆ. ಕಂದ, ವೃತ್ತಗಳಿದ್ದರೂ ಪ್ರಾಸವನ್ನು ಕೈ ಬಿಟ್ಟಿದೆ. ಗ್ರಂಥದ ಆದಿಯ ೨ ಪತ್ರಗಳಲ್ಲಿ ಕವಿಯೇ ಬರೆದಿರುವ ಮುನ್ನುಡಿ ಮತ್ತು ಪಾತ್ರಗಳ ವಿವರವೂ ೫೨ನೇ ಪತ್ರದಲ್ಲಿ ಆತನ ಇತರ ಕೃತಿಗಳ ವಿವರವೂ ಇವೆ. ಅವು ಎಲ್ಲಿ ಕಾಪಾಡಲ್ಪಟ್ಟಿದೆ ಎಂಬುದನ್ನೂ ತಿಳಿಸಿದೆ. ಈ ನಾಟಕ ಭವಭೂತಿಯ ಸಂಸ್ಕೃತ ಕೃತಿಯ ಕನ್ನಡ ಅನುವಾದವಾಗಿದೆ.

152

ಕೆ. ಬಿ. ೭೧	ಉತ್ತರರಾಮಚರಿತ್ರೆ	ಗದ್ಯ
೭.೯" × ೬.೪"	?	?
೧–೧೫೭ ಪತ್ರ	೧೨ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಗಣೇಶ ಶಾರದ ಗುರುಭ್ಯೋ ನಮಃ ಉತ್ತರ ರಾಮಚರಿತ್ರೆ ಬರೆಯುವ ದಕ್ಕೆ ನಿರ್ವಿಘ್ನಮಸ್ತು.

ಇದಂ ಕವಿಭ್ಯ: ಪೂರ್ವೇಭ್ಯೋ ನಮೋ ವಾಕಂ ಪ್ರಶಾಸ್ಮಹೇ ।
ವನ್ದೇ ಮಹಿಚ ತಾಂ ವಾಣೀಮಮೃತಾಮಾತ್ಮನಃ ಕಲಾಮ್ ॥

ಭವಭೂತಿ ಯೆಂಬ ಮಹಾಕವಿಯು ಸ್ವಕೃತವಾದ ಮಹಾವೀರಚರಿತ್ರೆ ಯೆಂಬ ನಾಟಕದಲ್ಲಿ ಪೂರ್ವರಾಮಚರಿತ್ರವಂ ಸರಸವಾಗಿ ನಿರೂಪಿಸಿ, ಪ್ರಕೃತ ದಲ್ಲಿ ಉತ್ತರರಾಮಚರಿತ್ರವಂ ನಿರೂಪಿಸಲೋಸುಗ ಉತ್ತರರಾಮ ಚರಿತ್ರವೆಂಬ ನಾಟಕವಂ ರಚಿಸುವನಾಗಿ ×××× (೨ ನೆಯ ಪತ್ರದಿಂದ) ಸೂತ್ರಧಾರನು ನಾಟ್ಯರಂಗಸ್ಥಾನದಲ್ಲಿ ಪರಿಸಿದವನಾಗಿ ಪೂರ್ವದಲ್ಲಿ ನಿಂತವನಾಗಲು.

ಅಂತ್ಯ : ಶಬ್ದ ಬ್ರಹ್ಮಸ್ವರೂಪವಂ ತಿಳಿದಿರುವ ಅಭಿಜ್ಞನಾದ ಭವಭೂತಿಯೆಂಬ ಮಹಾಕವಿಯ ವಾಕ್ಕೆ ಈ ರೀತಿ ನಾಟಕಕಥಾರೂಪವಾಗಿ ಪರಿಣಮಿಸಿ ಇರುವುದಾದ ಕಾರಣಾ ಅಭಿನಯಗಳಿಂ ಪ್ರಕಾಶಂಗೈಯ್ಯಲ್ಪಟ್ಟ ಅರ್ಥಸ್ವರೂಪ ವುಳ್ಳ ಅಂಥಾ ಈ ಕಥೆಯಂ ಲೋಕದಲ್ಲಿ ವಿದ್ವಾಂಸರು ಚೆನ್ನಾಗಿ ಭಾವಿಸುವ ರಾಗಲೀ ಎಂದು ಪೇಳಿದ ರಂಗಸ್ಥಾನದಿಂದ ಎಲ್ಲರೂ ತಿರುಗಿದವರಾಗಿ ಪೊರಟರು ಯಂಬಲ್ಲಿಗೆ ಶ್ರೀ ಶ್ರೀ ಶ್ರೀ

ಸಪ್ತಮಾಂಕವು ಸಂಪೂರ್ಣವು.

ವಿಷಯ : ರಾಮನು ಸೀತಾದೇವಿಯು ಪತಿವ್ರತೆಯೆಂದು ಸ್ಪಷ್ಟವಾಗಿ ತಿಳಿದಿದ್ದರೂ ಲೋಕಾಪವಾದಕ್ಕೆ ತಲೆಬಾಗಿ ಪೂರ್ಣಗರ್ಭಿಣಿಯಾದ ಅವಳನ್ನು ಅರಣ್ಯಕ್ಕೆ ಕಳಿಸುತ್ತಾನೆ. ಪುನಃ ಕೆಲವಾರು ವರ್ಷಗಳು ಕಳೆದ ಬಳಿಕ ಅನಿರೀಕ್ಷಿತವಾಗಿ ಅದೇ ಕಾಡಿನಲ್ಲಿ ಸೀತಾಪುತ್ರರನ್ನೂ ಸೀತೆಯನ್ನೂ ಕಂಡು ಅವರನ್ನು ಅಯೋಧ್ಯೆಗೆ ಕರೆತರುತ್ತಾನೆ.

ವಿಶೇಷ : ಸೀಸದ ಕಡ್ಡಿಯಿಂದ ಕಾಗುಣಿತ, ಒತ್ತು, ಇವುಗಳನ್ನು ತಿದ್ದಿದೆ. ಈ ಪ್ರತಿ ಮತ್ತು ಕೆ. ಬಿ. ೭೪ಳ ಇವುಗಳು ಒಂದಕ್ಕೊಂದು ಹೋಲುತ್ತವೆ.

153

ಕೆ. ಬಿ. ೮೧	**ಉತ್ತರರಾಮಚರಿತ್ರೆ**	ನಾಟಕ
೮" × ೬.೫"	ಬಸವಪ್ಪ ಶಾಸ್ತ್ರಿ	೧೯ನೆಯ ಶತಮಾನ
೧–೫೩ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಉತ್ತರ ರಾಮ ಚರಿತ್ರೆ. ಸೂತ್ರಧಾರ

ವೃ॥ ವಾಮಾಂಕಸ್ಥಿತ ಶೈಲರಾಜತನಯಾ ಕರ್ಣಾವತಂಸೋತ್ಪಲಂ
ಶ್ಯಾಮಂ ಮಾರ್ಪೊಳೆದಂತೆ ತೋರೆ ಕರೆಕಂಬುಗ್ರೀವದೊಳ್ವೀಶ್ವರ
ಕ್ಷಾಮಾಹಾತ್ಮ್ಯಮನಪ್ಪುಗೈದ ಕರುಣಾವಾರಾಕರಂ ಶ್ರೀಪುರೀ
ಧಾಮಂ ರಕ್ಷಿಕೆ ಚಾಮಭೂಮಿಪತಿಯಂ ಶ್ರೀಕಂಧರಂ ಶಂಕರಂ ॥
ರಾಗ ॥ ಯಮುನಾ ॥ ಆದಿ ॥
ಅಮರೀಕಬರೀ ಭ್ರಮರಿ। ರಮಣೀಯಾಂಘ್ರಿ ಪದ್ಮೆ ॥ ಪ ॥

ಅಂತ್ಯ : ರಾಮಂ — ಎಲೈ ಪೂಜ್ಯರೆ, ಇದಕ್ಕಿಂತಲೂ ಇನ್ನೇನು ಪ್ರಿಯವುಂಟು। ತಮ್ಮ ಅನುಗ್ರಹದಿಂದ ಎಲ್ಲಾ ವಿಷಯಗಳಲ್ಲಿಯೂ ನಾನು ಪೂರ್ಣ ಮನೋ ರಥನು. ಆದರೆ ಇದು ತಮ್ಮ ಕೃಪೆಯಿಂದ ಉಂಟಾಗಲಿ.

ಭರತವಾಕ್ಯ – ಕಂ॥ ಈ ಕಥೆ ಪಾಪಂಗಳನು ನಿ
ರಾಕರಿಸಲಿ ಗಂಗೆಯಂತೆ ಸಲಹಲಿ ತಾಯೊಲ್
ಲೋಕವ ಬುಧರೊಪ್ಪಲಿ ವಾ
ಲ್ಮೀಕಿಯ ಭಾರತಿಯನೆಮ್ಮ ಪಾಲಿಸಲೀಶಂ ॥
ಸಪ್ತಮಾಂಕಂ ಸಂಪೂರ್ಣಂ.

ಸೂತ್ರಧಾರ ॥ ರಾಗ ॥ ಸುರಟಿ ॥ ಆದಿತಾಳ ॥
ಜಯ ಜಗದಾವನ ನಿಪುಣ ಸಿತಿಕಂಠ ॥ ಪ ॥
ಜಯ ಸಿತಿಕಂಠ। ಸೇವಕಾವನೋಕ್ಕಂಠ ॥ ಅ ॥
ಖಂಡಿತಕಾಲ। ಖಂಡಲಬಾಲ। ಕಾಂಡದ ಲೀಲ ವೃ। ಕುಂಡುಜಪಾಲ ॥ ೧ ॥
ಪಾಲಯ ಚಾಮಭೂಪಾಲಕಮನುಂ ಕಂ। ಪಾಲಯ ಗಿರಿಜಾ।
ಲೋಲಸುಶೀಲ ॥ ೨ ॥
ಉತ್ತರರಾಮ ಚರಿತ್ರೆ ಸಂಪೂರ್ಣವಾಯಿತು ॥ ಶ್ರೀ ಶ್ರೀ ಶ್ರೀ

ವಿಷಯ : ಪೂರ್ಣಗರ್ಭಿಣಿಯಾದ ಸೀತಾದೇವಿಯನ್ನು ಲೋಕಾಪವಾದಕ್ಕೆ ಅಂಜಿದ ಶ್ರೀರಾಮನು ಕಾಡಿಗೆ ಕಳುಹಿಸಿದ ಕೆಲವಾರು ವರ್ಷಗಳನಂತರ ಕುಶ ಲವ (ಸೀತಾದೇವಿಯ ಮಕ್ಕಳು) ಸೀತೆಯರನ್ನು ಅನಿರೀಕ್ಷಿತವಾಗಿ ಸಂಧಿಸಿ ಅಯೋಧ್ಯೆಗೆ ಕರೆತರುವ ಕಥೆ.

ವಿಶೇಷ: ಪ್ರತಿಯು ಸಾಮಾನ್ಯ ಸ್ಥಿತಿಯಲ್ಲಿದೆ. ಇದು ಭವಭೂತಿ ಕವಿಕೃತ ಸಂಸ್ಕೃತ ಉತ್ತರರಾಮ ಚರಿತ್ರೆಯ ಕನ್ನಡಾನುವಾದ.

154

ಕೆ. ಬಿ. ೨೯೪	ಉತ್ತರರಾಮಚರಿತ್ರೆ	ಗದ್ಯ
೯.೨"×೭.೩"	?	?
೧-೯೮ ಪತ್ರ	೨೩ ಪಂಕ್ತಿ	೨೫ ಅಕ್ಷರ

ಆದಿ: ಇದಂ ಕವಿಭ್ಯಃ ಪೂರ್ವೇಭ್ಯೋ ನಮೋವಾಕಂ ಪ್ರಶಾಸ್ಮಹೇ |
ವಂದೇ ಮಹೀಚಕಾಂವಾಣೀ ಮಮೃತಾತ್ಮನಃ ಕಲಾಂ ||

ಭವಭೂತಿಯೆಂಬ ಮಹಾಕವಿಯು ಸ್ವಕೃತವಾದ ಮಹಾವೀರ ಚರಿತ್ರೆಯೆಂಬ ನಾಟಕದಲ್ಲಿ ಪೂರ್ವರಾಮಚರಿತ್ರವಂ ಸರಸವಾಗಿ ನಿರೂಪಿಸಿ ಪ್ರಕೃತದಲ್ಲಿ ವುತ್ತರರಾಮ ಚರಿತ್ರವಂ ನಿರೂಪಿಸಲೋಸುಗ...............

× × × ×

ಸೂತ್ರಧಾರನು ನಾಲ್ಕ್ಯಕ್ಕೆ ಉಪಯುಕ್ತರಾದ ತಂನ ಪರಿಜನರೊಡಗೂಡಿ ರಂಗಸ್ಥಾನವಂ ಪ್ರವೇಶಂಗೈದು ಮಹಾಸಭೆಗೆ ಅಭಿಮುಖನಾಗಿ ನಿಂತು ಪುಷ್ಪಾಂಜಲಿಯಂ ಸಮರ್ಪಿಶಿ...............

ಅಂತ್ಯ: ಶಬ್ದಬ್ರಂಹ್ಮಸ್ವರೂಪವಂ ತಿಳಿದಿರ್‍ರುವ ಅಭಿಜ್ಞನಾದ ಭವಭೂತಿಯಂಬ ಮಹಾಕವಿಯ ವಾಕ್ಕೆ ಯಿಾ ರೀತಿ ನಾಲ್ಕು........ಕರೂಪವಾಗಿ ಪರಿಣಮಿಶಿಯಿರ್‍ರುವದಾದ ಕಾರಣ ಅಭಿನಯಗಳಿಂ ಪ್ರತುರಂಗೈ........ರಿಪ್ಪಲೂ ಅರ್ಥ ಸ್ವರೂಪವುಳ್ಳ ಅಂಥಾ ಯಿಾ ಕಥೆಯಂ ಲೋಕದಲ್ಲಿ ವಿದ್ವಾಂಸರ್‍ರು ಚಂನಾಗಿ ಭಾವಿಸುವರಾಗಲೀ ಯಂದು ಪೇಳಿ ರಂಗಸ್ಥಾನದಿಂದಾ ಯಲ್ಲರ್‍ರೂ ತಿರಿಗಿದವರಾಗಿ ಪೊರಟರ್‍ರು ಯಂಬಲ್ಲಿಗೆ ಸಪ್ತಮಾಂಕ ತಾತ್ಪರ್ಯವು.

ವಿಷಯ: ಶ್ರೀರಾಮಚಂದ್ರನು ಲೋಕಾಪವಾದಕ್ಕೆ ಅಂಜಿ ಪೂರ್ಣಗರ್ಭಿಣಿಯಾದ ಸೀತೆಯನ್ನು ಅರಣ್ಯಕ್ಕೆ ಕಳುಹಿಸಿ ಕೆಲವಾರು ವರ್ಷಗಳ ಅನಂತರ ಅನಿರೀಕ್ಷಿತವಾಗಿ ಸೀತೆಯನ್ನೂ ಸೀತಾಪುತ್ರರಾದ ಕುಶಲವರನ್ನೂ ಸಂಧಿಸಿ ಅಯೋಧ್ಯೆಗೆ ಕರೆತರುವ ಕಥೆ.

ವಿಶೇಷ: ಪ್ರತಿಯು ಹುಳು ತಿಂದು ಶಿಥಿಲವಾಗಿದೆ. ಇದು ಭವಭೂತಿಕವಿಯ ಸಂಸ್ಕೃತ ಉತ್ತರರಾಮ ಚರಿತ್ರೆಯ ಕನ್ನಡ ಗದ್ಯಾನುವಾದವಾಗಿದೆ.

155

ಕೆ. ೧೦೧	**ಉತ್ತರರಾಮಾಯಣ**	ಭಾಮಿನೀಷಟ್ಪದಿ
೧೪.೬" × ೧.೫"	ತಿರುಮಲೆ ವೈದ್ಯ	ಸು. ೧೬೫೦
೧–೯೧ ಪತ್ರ	೭ ಪಂಕ್ತಿ	೬೩ ಅಕ್ಷರ

ಆದಿ : ಶ್ರೀ ಮದನುಪಮ ನಾಮ ಸುಜನ
ಪ್ರೇಮ ಜಿತ ಸಂಗ್ರಾಮ ದಶಶಿರ
ಕಾಮ ಮದಹರ ಸೋಮಧರ ಸೀತಾಮನ........
....
............ವಲ
ಲಾಮ ಪಾಲಿಸು ಭೀಮಬಲ ನಿಸ್ಸೀಮ ರಘುರಾಮಾ ॥ ೧ ॥
ಆದಿಯಲಿ ನಾರದನು ಪೇಳಿದ
ನಾದಿಕವಿ ವಾಲ್ಮೀಕಿಗವನದ
ನಾದಿವಿಡಿದುಸುರಿದನು ರಾ........ತಿಯಾ
ಮೇಧಿನಿಗೆ ಪೆಸರಾದ ಗವಿಯಣ
ಮೇಧಿನೀಸುರಸೂನು ಪೇಳ್ದನು
ಮೇಧಿನಿಗೆ ಕನ್ನಡಿಸಿದನು ತಿರುಮಲ ವೈದ್ಯನೀ ಕೃತಿಯಾ ॥ ೭ ॥

ಅಂತ್ಯ : ಅಕ್ಷಯಾತ್ಮ ವಿಪಕ್ಷದಾನವ
ಸೀಕ್ಷ ದುಷ್ಕೃತ ರೂಕ್ಷ ಸುಮನಸ
ಪಕ್ಷ ಲೋಕಾಧ್ಯಕ್ಷಕೌಸ್ತುಭಲಕ್ಷಘನವಕ್ಷಾ
ಪಕ್ಷಿರಥ ಕಮಲಾಕ್ಷ ಕಿಂನ್ನರ
ಯಕ್ಷ ಸುರಮುನಿ.....ಜನಾ
ಪೇಕ್ಷ ನರಹರಿಯಕ್ಷ ಪಾಲಿ.....ಮೋಕ್ಷಪದ ದಕ್ಷಾ ॥ ೨೫ ॥

ಅಂತೂ ಸಂಧಿ ೨೦ ಕ್ಕಂ ಪದನು ೧೧೧೦ ಜಯಮಂಗಳ ಮಹಾಶ್ರೀ. ಶ್ರೀ ದುರ್ಮತಿ ಸಂವತ್ಸರದ ಆಷಾಡ ಶು ೫ ಮಂಗಳವಾರ ಬೀಳುಗಿರಿ ಶಾನಭಾಗ × × × ಶಿವರಾಮೈಯನಿಗೆ ನಂಜನಗೂಡ ಮದೂರೈಯ್ಯನವರ ಮಗ ನರಸೈಯ್ಯನು ಬರದುಕೊಟ ಕಂನ್ನಡ ಉತ್ತರ ರಾಮಾಯಣಕ್ಕೆ ಜಯ ಮಂಗಳ ಮಹಾಶ್ರೀ.

ವಿಷಯ : ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದ ಕಥೆ.

ವಿಶೇಷ : ಪ್ರತಿಯು ಶಿಥಿಲವಾಗಿದೆ.

156

ಕೆ. ೫೫೮	ಉತ್ತರರಾಮಾಯಣ	ಭಾಮಿನೀಷಟ್ಪದಿ
೧೪″ × ೨.೨″	ನಾರಾಯಣ	ಸು. ೧೬೦೦
೧–೧೩೮ ಪತ್ರ	೧೧ ಪಂಕ್ತಿ	[illegible] ಅಕ್ಷರ

ಆದಿ : ಪಲ್ಲ ॥ ಲೀಲೆ ಮಿಗೆ ಸಭೆಯೊಳಗೆ ಮುನಿಗಳ
ಮೇಳದಲಿ ಕುಳ್ಳಿರ್ದು ಕಳ....
ಹೇಳಿದನು ರಾವಣನ ವಂಶಕ್ರಮವ ರಘುಪತಿಗೆ ॥
ಪದ ॥ ಶ್ರೀಮದಮಿತ ಗುಣಾಭಿರಾಮ ರ
ಮಾಮನೋಹರಮೂರ್ತಿ ಕಮಲಜ
ಕಾಮಹರ ಮುಖದೇವ ಹೃದಯಾಂಭೋಜ ದಿನರಾಜಾ
ಸಾಮಗಾನ ಪ್ರೇಮ ತಾರಕ
ನಾಮ ಮಂತ್ರಾತ್ಮಕನು ರಘುಕುಲ
ರಾಮ ಸಲಹುಗೆ ಸಕಲಲೋಕವನೊಲಿದು ಕರುಣದಲಿ ॥ ೧ ॥

× × × ×

ಪ್ರತಿಯಿದುತ್ತರ ರಾಮಕಥೆ ಯಾ
ಕೃತಿಗಹೋಬಲ ನಾರಸಿಂಹನೆ
ಪತಿಯಿದನು ಭೂಸುರಕುಲೋತ್ತಮದಾತ ದಿನಮಣಿಯಾ
ಸುರನು ರಂಗಯ ನಾರಸಿಂಹಂ
ಗತಿಸಖನು ಗುರುಚರಣ
ರತನೆನಿಸುತಿಹ ಸುಕವಿ ನಾರಾಯಣನೆ ಪೇಳಿದನೂ ॥ ೧೦ ॥

ಅಂತ್ಯ : ಪ್ರವಿಮಲಾತ್ಮವಿವೇಕ ಪುಣ್ಯ
ಶ್ರವಣಗಳ ಪಲ ಕಾಶಿಯಲಿ ಶಂ
ಭುವಿನ ಕೈಯ್ಯಲಿ ತಾರಕ ಬ್ರಹ್ಮಾಕ್ಯ ಮಂತ್ರವನೂ
ಹವಣಿಸಿಡ ಭಕ್ತಿಯಲಿ ಪಡದೊಂ
ದವಿರಳದ ಪದವಹುದು ರಘುಪುಂ
ಗವನ ಸತ್ಕಾವ್ಯದೊಳಗೊಂದಕ್ಷರವ ಕೇಳ್ದರಿಗೆ ॥ ೨೫ ॥

ಅಂತು ಸಂಧಿ ೪೬ ಕ್ಕಂ ಪದ ೨೧೮ ಕ್ಕಂ ಮಂಗಳ ಮಹಾಶ್ರೀ.

ವಿಷಯ : ಉತ್ತರ ರಾಮಾಯಣ.

ವಿಶೇಷ : ಕವಿಯು ಶಿವ, ಸರಸ್ವತಿ, ಗಣಪತಿ ಇವರನ್ನೂ ವಾಲ್ಮೀಕಿ, ವ್ಯಾಸ, ಕಾಳಿದಾಸರನ್ನೂ ಸ್ತುತಿಸಿದ್ದಾನೆ. ೬೪ ರ ಎರಡು ಪತ್ರಗಳಿವೆ. ೨೮ ನೆಯ ಪತ್ರದ ಪದ್ಯಗಳು ಮತ್ತೊಂದು ಪತ್ರದಲ್ಲಿಯೂ ಇದ್ದು ಆ ಪತ್ರ ಕೊನೆಯಲ್ಲಿದೆ. ಅದಕ್ಕೆ ಪತ್ರ ಸಂಖ್ಯೆ ಇಲ್ಲ.

157

ಕೆ.ಬಿ. ೫೬	ಉತ್ತರ ರಾಮಾಯಣ	ಭಾಮಿನೀ ಷಟ್ಪದಿ
೭.೫″ × ೬.೩″	ತಿರುಮಲೆವೈದ್ಯ	ಸು. ೧೬೫೦
೧–೨೭೩ ಪತ್ರ	೧೧ ಪಂಕ್ತಿ	೧೯ ಅಕ್ಷರ

ಆದಿ : ಉತ್ತರ ರಾಮಾಯಣ ಪ್ರಾರಂಭಃ ಕನ್ನಡ ಪದ್ಯ ಕಾವ್ಯ × ×
ಪಲ್ಲ ॥ ಶ್ರೀಮದನುಪಮನಾಮ ಸದ್ಗುಣ
ಧಾಮ ಚಿತಸಂಗ್ರಾಮ ದಶಶಿರ
ಕಾಮ ಮದಹರ ಸೋಮಧರ ಸೀತಾಮನಃಪ್ರೇಮಾ ।
ತಾಮರಸಭವ ವಾಮನತಸು ।
ತ್ರಾಮ ಶೌರ್ಯೋದ್ಧಾಮ ದೇವ ಲ
ಲಾಮ ಪಾಲಿಸು ಭೀಮಬಲ ನಿಸ್ಸೀಮ ರಘುರಾಮಾ ॥ ೧ ॥
× × × ×
ಆದಿಯಲಿ ನಾರದನು ಪೇಳಿದ
ನಾದಿಕವಿ ವಾಲ್ಮೀಕಿಗಾನುಡಿ
ಯಾದಿವಿಡಿದುಸುರಿದನು ರಾಮಾಯಣದ ಸತ್ಕೃತಿಯಾ ।
ಮೇದಿನಿಗೆ ಪೆಸರಾದ ಗವಿಯಣ
ಮೇದಿನೀಸುರಸೂನು ಪೇಳ್ದನು
ಮೇದಿನಿಗೆ ಕಂನಡಿಸಿ ತಿರುಮಲವೈದ್ಯನೀ ಕೃತಿಯಾ ॥ ೬ ॥

ಅಂತ್ಯ : ಅಕ್ಷಯಾತ್ಮ ವಿಪಕ್ಷದಾನವ
ಶಿಕ್ಷ ದುಷ್ಕೃತ ರೂಕ್ಷ ಸುಮನಸ
ಪಕ್ಷ ಲೋಕಾಧ್ಯಕ್ಷ ಕೌಂಸ್ತುಭ ಲಕ್ಷ್ಮೆ ಘನವಕ್ಷಾ ।
ಪಕ್ಷಿರಥ ಕಮಲಾಕ್ಷ ಕಿನ್ನರ
ಯಕ್ಷ ಸುರಮುನಿರಕ್ಷ ಸುಜನಾ
ಪೇಕ್ಷ ನರಹರಿಯಕ್ಷ ಪಾಲಿಸು ಮೋಕ್ಷ ಪದದಕ್ಷಾ ॥ ೨೫ ॥

ಅಂತೂ ಸಂಧಿ ೨೦ ಕ್ಕಾಂ ಪದನೂ ೧೦೧೧ ಕ್ಕಾಂ ಮಂಗಳ ಮಹಾಶ್ರೀ.

ವಿಷಯ : ಉತ್ತರ ರಾಮಾಯಣ.

ವಿಶೇಷ : ಪ್ರತಿ ಚೆನ್ನಾಗಿದೆ.

158

ಕೆ.ಬಿ. ೪೩೬	ಉತ್ತರ ರಾಮಾಯಣ	ಕುಸುಮಷಟ್ಪದಿ
೭.೭″ × ೬.೪″	ಯೋಗೀಂದ್ರ	ಸು. ೧೬೫೦
೧–೫೯೧ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರು × × × ಉತ್ತರ ರಾಮಾಯಣ ಬರೆಯುವದಕ್ಕೆ ಶುಭಸ್ತು.
ಶ್ರೀ ಮನೋರಮಣನು
ದ್ಧಾಮ ಮುನಿವರರ ರಘು
ರಾಮನನುಪಚರಿಸಿದನು ಭಕತಿ ಮಿಗಿಲೂ ॥
ಪದ ॥ ಶುಕಸನಕ ಜನಕನಂ
ಬಿಕೆಯುರಸ ವಾರಿಜಾಂ
ಬಕಸೂನುಸುತನನರನಂಬರೀಷಾ
ಅಕಳಂಕ ದಿತಿಜ ಶೌ
ನಕ ನಾರದಾದಿ ಸದು
ಭಕತ ಜನರಿಗೆ ಮಂಗಲವ ನಮಗೆ ॥ ೧ ॥

ಅಂತ್ಯ : ಉತ್ತಮವೆನಿಪ್ಪುದಿಂ
ತುತ್ತಮ ಶ್ಲೋಕ ಚಾ
ರಿತ್ರವಿದು ವಾಲ್ಮೀಕಿ ಮುನಿಪನಿಂದಾ
ವಿಸ್ತೀರ್ನವಾಯ್ತುದನೆ
ಮತ್ತೆ ಯೋಗೀಂದ್ರಾಖ್ಯ
ನುತ್ತಮರು ಮೆಚ್ಚೆ ಕನ್ನಡದಲೊರದಾ ॥ ೬೬ ॥
× × × ×
ದೇವ ಸಚ್ಚಿದಾನಂದ
ದೇವ ನೀ ಪರಿಪೂರ್ಣ
ದೇವ ದೇವರ ದೇವ ಕರುಣಾಕರಾ
ದೇವನಿದ ಬರದವಂ
ಗೌದಿ ಕಾರುಣ್ಯದಿಂ
ದೀವುದೈ ಶ್ರೀಕೃಷ್ಣಪದ ಭಕತಿಯಾ ॥ ೭೧ ॥
ಅಂತು ಸಂಧಿ ೪೮ಕ್ಕೆ ಪದ....ಮಂಗಳ ಮಹಾಶ್ರೀ.

ಚಿತ್ರವಿಸಿ ರಘುವರ ಚ | ರಿತ್ರ ಪುಸ್ತಕವಿದನು |...............ಪರಿಧಾವಿ |
ಸಂವತ್ಸರದ ವೈಶಾಖ ಬಹುಳ ೧ ಯಲ್ಲು ಬರದು ಮುಗಿಸಿರುತ್ತದೆ.

ವಿಷಯ : ಉತ್ತರರಾಮಚರಿತ್ರೆ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ.

159

ಕೆ. ೫೬೪/೩	**ಉದಯರಾಗ**	ಹಾಡು
೧೦.೨" × ೧.೮"	ಕ. ಅನಂತರಾಮಯ್ಯ (?)	೧೯ನೆಯ ಶತಕ
೫–೧೩ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಯೇಳು ಜಗದಾಧಾರ ಯೇಳು ಮಾನ್ಮಥಪಿತನೆ
ಯೇಳೇಳು ಕಂಸಮಂರ್ದನನೆ ಯೇಳು ಲಕ್ಷ್ಮೀರಮಣ
ಯೇಳು ಗೋವಿಂದನೆ ಯೇಳು ಪ್ರಹಲ್ಲಾದಗೊಲಿದ ದೇವರ ದೇವನೆ
ಯೇಳೈಯ್ಯ ಸ್ವಾಮಿಾ ಬೆಳಗಾಯಿತೂ ‖ ಪಲ್ಲ ‖
ಮುಂಗುರುಳು ಮುಂದಲೆಗೆ
ಭಂಗಾರದರಳೆಲೆಯಾಣಿನುಲುಮುತಿಕಾಯಿ
ಮುಂಗೈಯ್ಯ ಮುರಹರಂ
ಅಂಗಯ್ಯ ಮಾಣಿಕ ಅಂದುಗೆ ಕಿರುಗೆಜ್ಜೆ ಘಂಮುಘಳರೆನುತಲಾ
ನಂದದಿಂದಲೆ ಸ್ವಾಮಿ ಮೈಮುರಿದು ಕೊಂಡಾ ‖
ಯೇಳೈಯ್ಯ ಸ್ವಾಮಿ ‖ ೧ ‖

ಅಂತ್ಯ : ಮಂಗಳ ಮಂಗಳ ಯಿಾಶನ ಮಿತ್ರಗೆ
ಮಂಗಳ ಮಂಗಳ ಪಾಂಡವ ವಂದ್ಯಗೆ
ಮಂಗಳ ಮಂಗಳ ಯಿಾರೇಳು ಲೋಕವ ಧರಿಸಿದಗೆ
ಮಂಗಳ ಮಂಗಳ ಉಡುಪಿನ ಕೃಷ್ಣನಿಗೇ
ಮಂಗಳಂ ಜಯ ಮಂಗಳಂ ‖ ಶ್ರೀ ‖ ಶ್ರೀ ‖
ಅಂತೂ ಉದೆಯರಾಗ ಪದ ೧೦ಂಕ್ಕೆ ಮಂಗಳಮಹಾಶ್ರೀ ‖

ವಿಷಯ : ಕೃಷ್ಣ, ಗಣಪತಿ ಮೊದಲಾದ ದೇವರುಗಳ ಹಾಡುಗಳು, ಗಜೇಂದ್ರ ಮೋಕ್ಷ ಇತ್ಯಾದಿ.

ವಿಶೇಷ : ೮, ೯ ಪತ್ರಗಳಿಲ್ಲ. ಒಂದೆರಡು ಹಾಡುಗಳಲ್ಲಿ ಕಾಗಿನೆಲೆ ಆದಿಕೇಶವನ

ಅಂಕಿತವಿದೆ. ಈ ಕಟ್ಟಿನಲ್ಲಿ ಅಜಾಮಿಳನ ಮೋಕ್ಷ, ದ್ರೌಪದಿ ಸೀರೆ ಸೆಳೆದ ಹಾಡು ಈ ಎರಡೂ ಇವೆ. ಕೊನೆಯಲ್ಲಿ ಇಂದ್ರಕೀಲವೆಂಬ ಯಕ್ಷಗಾನವನ್ನು ಪ್ರಾರಂಭಮಾಡಿರುವ ಒಂದು ಓಲೆ ಇದೆ.

160

ಕೆ. ೧೨೯	ಉದಯಾದಿತ್ಯಾಲಂಕಾರ	ಕಂದ, ವೃತ್ತ
೧೪.೪" × ೧.೪"	ಉದಯಾದಿತ್ಯ	ಸು. ೧೧೫೦
೧–೪ ಪತ್ರ	೬ ಪಂಕ್ತಿ	೬೭ ಅಕ್ಷರ

ಆದಿ : ಉದಯಾದಿತ್ಯನ ಅಲಂಕಾರ |
ಶ್ರೀಯುಂ ವಾಕ್‌ಶ್ರೀಯುಮೆನಿ
ಪ್ಪಾಯತಿಯಿಂದರ್ಥ ಶಬ್ದ ರೂಪಮನಾಂತಾ
ಮ್ನಾಯನಿಧಿಯಾಗಳಾವಳ
ಜೇಯೆ ಜಗನ್ಮೂರ್ತಿ ಸಕಲ ಮಂಗಳ ನಿಳಯೆಂ ‖ ೧ ‖

ಅಂತ್ಯ : ಆಶೀರ್ವ್ವಚನಮುದಭಿಲಷಿ
ತಾಶಂಸನ ವಚನಮುದೆಗ ನಿನ್ನಂ ಪೊರೆಗೆಂ
ದಾ ಸಿವನಾ ದಾನವರಿಪು
ವಾಶಕದಳಗರ್ಭರಾತ್ರಿಶಕ್ತಿ ಸಮೇತರ್ ‖ ೬೮ ‖
ಭಾವಿಕಮೆನಿಕುಂ ಸತ್ಕವಿ
ಭಾವಗತಾರ್ಥಂ ಸ್ಥಳೋಪವರ್ನನ ಶಬ್ದೋ
ದ್ಭಾವಾದ್ಭುತಾರ್ಥ ಕಂಸ
ದ್ಭಾವಿಕ ರಸಸಂಮುದಂಗ........

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಕೆಲವು ಪತ್ರಗಳನ್ನು ಹುಳು ಹೊಡೆದಿರುವುದರಿಂದ ಕೆಲವು ಕಡೆ ಅಕ್ಷರಗಳು ಹೋಗಿವೆ. ಅಸಮಗ್ರ ಪ್ರತಿ.

161

ಕೆ. ೨೩೧/೪	ಉದಯಾದಿತ್ಯಾಲಂಕಾರ	ಕಂದ, ವೃತ್ತ
೧೦" × ೧.೪"	ಉದಯಾದಿತ್ಯ	ಸು. ೧೧೫೦
೧೭೮–೧೮೨ ಪತ್ರ	೯ ಪಂಕ್ತಿ	೫೨ ಅಕ್ಷರ

ಆದಿ : ಶ್ರೀಯುಂ ವಾಕ್‌ಶ್ರೀಯುಮೆನಿ
ಪ್ಪಾಯತಿಯಿಂದರ್ತ್ಥ ಶಬ್ದರೂಪಮನಾಂತಾ
ಮ್ನಾಯನಿಧಿಯಿಂದಳಾವಳ
ಜೇಯೆ ಜಗನ್ಮೂರ್ತಿ ಸಕಲಮಂಗಳ ನಿಳಯೇ ॥ ೧ ॥

ಅಂತ್ಯ : ಸದಮಲ ಕಾಂತಿಯಿಂ ಸಮತಿಯಿಂ ಸುಕುಮಾರತೆಯಿಂದೆ ಭಿಂನಭಾ
ವದೆನುತ ಲಕ್ಷ್ಯದಿಂ ಸಕಲಭೋಗದಿನುಜ್ವಲರೂಪದಿಂ ಪೊದ
ಳ್ದೊದವಿದ ಕಾವ್ಯದಿಂ ನೃಪಕವೀಶ್ವರರಿಂ ಶಿಖಾಮಣಿಯಾ
ದುದಜಂದಮಾದನಿಂತುದೆಗನೃಪೇಶ್ವರಂ ನೃಪ ಕವೀಶ್ವರರಿಂ
ಕವಿರಾಜಶೇಖರಂ ॥ ೭೬ ॥
ಉದಯಾದಿತ್ಯಾಲಂಕಾರ ಮಂಗಳಮಹಾಶ್ರೀ ॥

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಶಕಟರೇಫ ಮತ್ತು 'ಱ' ಈ ಲಿಪಿಗಳ ಪ್ರಯೋಗವಿದೆ. ಇದೇ ಕಟ್ಟಿನಲ್ಲಿ ಶಬ್ದಮಣಿದರ್ಪಣ, ಛಂದೋಂಬುಧಿ, ರಸರತ್ನಾಕರ, ಶೃಂಗಾರ ರತ್ನಾಕರ ಎಂಬ ಈ ನಾಲ್ಕು ಕೃತಿಗಳೂ ಇವೆ.

162

ಕೆ. ಎ. ೩೦	ಉದಯಾದಿತ್ಯಾಲಂಕಾರ	ಕಂದ, ವೃತ್ತ
೧೨.೮" × ೭.೮"	ಉದಯಾದಿತ್ಯ	ಸು. ೧೧೫೦
೮ ಪತ್ರ	೨೨ ಪಂಕ್ತಿ	೨೩ ಅಕ್ಷರ

ಆದಿ : ಉದಯಾದಿತ್ಯಾಲಂಕಾರಾ ।
ಶ್ರೀಯುಂ ವಾಕ್‌ಶ್ರೀಯುಮೆನಿ
ಪ್ಪಾಯತಿಯಿಂದರ್ಥ ಶಬ್ದರೂಪಮನಾಂತಾ
ಮ್ನಾಯನಿಧಿಯಾದಳಾವಳ
ಜೇಯೆ ಜಗಂನ್ಮೂರ್ತಿ ಸಕಲಮಂಗಳ ನಿಳಯೇ ॥ ೧ ॥

ಅಂತ್ಯ : ಭಾವಿಕಮೆಸಿಕುಂ ಸತ್ಕವಿ
ಭಾವಗತಾರ್ಥಂ ಸ್ಥಳೋಪವರ್ಣನ ಶಬ್ದೋ
ದ್ಭಾವಾದ್ಭುತಾರ್ಥಕಂ ಸ
ದ್ಭಾವಿಕರಸ ಸಂಮುದಂಗಳಿವು ಭಾವಂಗಳ್ ॥ ೬೯ ॥

ವೃತ್ತ॥ ಕವಿಗಳ ಕಾವ್ಯ ಭಾವನೆಯೆ ಭಾವಿಕವೆಂಬುದದುಂ ಪ್ರಭಂಧವಾ
ಸ್ತವವಿಷಯುಂ ಪರಸ್ಪರ ಕೃತಾ ॥

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಅಸಮಗ್ರ ಪ್ರತಿ. ಮೇಲುಕೋಟೆಯಲ್ಲಿ ಕ್ರಿ.ಶ. ೧೮೮೯ರಲ್ಲಿ ಇದನ್ನು ಪ್ರತಿ ಮಾಡಲಾಗಿದೆ. ಗ್ರಂಥಾರಂಭಕ್ಕೆ ಮೊದಲು ಎರಡು ಪತ್ರಗಳಲ್ಲಿ ೧ ರಿಂದ ೨೫ ಪದ್ಯಪೂರ್ತಿ ಪದ್ಯಗಳ ವಿಷಯಾನುಕ್ರಮಣಿಕೆ ಇದೆ. ಪತ್ರದ ಒಂದೇ ಕಡೆ ಬರವಣಿಗೆಯಿದೆ.

163

ಕೆ. ಎ. ३೧೪	ಉದ್ಧರಣೆ ಪಟಲಗಳು	ಬೀಜಾಕ್ಷರಗಳು
೧೧″ × ೪.೫″	?	?
೧–೧೯ ಪತ್ರ	—	—

ಆದಿ :

೧ ಅನಾದಿಭಕ್ತನ ಉದ್ಧರಣೆ	ಶೀ । ನಿತ್ಯತ್ವವೇ ಲಿಂಗ	ವಾ । ಚಿತ್ರಕಾಶವೇ ಜಂಗಮ	ಶ್ರೀ ಗುರು ರೇವಣಸಿದ್ಧೇಶ್ವರಾಯ ನಮಃ

ನ । ಅಖಂಡತ್ವವೆ ಅನಾದಿ ಭಕ್ತ	ಮ । ಪರಿಪೂರ್ಣತ್ವವೆ ಗುರು	ವಾ । ಚಿತ್ರಕಾಶವೇ ಜಂಗಮ	ಯ । ಪರಮಾನಂದವೇ ಪ್ರಸಾದ	ಯ । ಪರಮಾನಂದವೆ ಪ್ರಸಾದ	ಓಂ । ಚಿದ್ರಸವೆ ಪಾದೋದಕ

ಅಂತ್ಯ :

ಬೇರುಗೆಣಸಿನ ಗಂಧ ೬	ಮಧುರವಾದ ರುಚಿ ೬	ಪೀತವರ್ಣದ ರೂಪ ೬	ಕಠಿಣವಾದ ಸ್ಪರ್ಶನ ೬	ತಾಳಕಂಸಾಳದ ಶಬ್ದ ೬	ಗಂಧದ ತೃಪ್ತಿ ೬

ಇದು ಇನ್ನೂರ ಹದಿನಾರು ತೆರದ ಅರ್ಪಣೋದ್ಧರಣೆ.

ವಿಷಯ : ವೀರಶೈವ ವೇದಾಂತವನ್ನು ತಿಳಿಸುವ ಉದ್ಧರಣೆಗಳು.

ವಿಶೇಷ : ಕಾಗದವಿರುವ ಒಂದು ಪಾರ್ಶ್ವದಲ್ಲಿ ಮಾತ್ರ ಚಿತ್ರಗಳೂ, ಬರವಣಿಗೆಯೂ ಇದೆ. ಮತ್ತೊಂದು ಪಾರ್ಶ್ವದಲ್ಲಿ ಬಟ್ಟೆಯನ್ನು ಹೊದಿಸಿದೆ. ನಾನಾ ಬಣ್ಣಗಳ ಚೌಕಟ್ಟನಲ್ಲಿ ಉದ್ಧರಣೆಗಳು ಬರೆಯಲ್ಪಟ್ಟಿವೆ. ಅವುಗಳ ಹೆಸರುಗಳೂ ಇವೆ. ಪ್ರತಿಯೊಂದು ಉದ್ಧರಣೆಯೂ ಅಂದವಾಗಿಯೂ ಸಚಿತ್ರವಾಗಿಯೂ ಸ್ಫುಟವಾಗಿಯೂ ಇದೆ. ಪ್ರತಿ ಸಂಪೂರ್ಣವಾಗಿಯೂ ಚೆನ್ನಾಗಿಯೂ ಇದೆ. ಇದನ್ನು ಹಿಂದಿನ ಒಂದು ಪ್ರತಿಯ ಆಧಾರದಮೇಲೆ ಶಾಲಿವಾಹನ ಶಕ ೧೮೬೨ರಲ್ಲಿ ಶ್ರೀ ಶಿಲ್ಪಿಸಿದ್ಧಲಿಂಗಸ್ವಾಮಿಗಳು ಪ್ರತಿ ಮಾಡಿದ್ದಾರೆ.

164

ಕೆ. ೪೫೮	**ಉದ್ಧರಣೆಯ ವಾಚ್ಯ**	ಗದ್ಯ
೧೦.೭″ × ೨.೨″	?	?
೧–೩೩ ಪತ್ರ	೧೨ ಪಂಕ್ತಿ	[redacted] ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯನಮಃ॥ ಉದ್ಧರಣೆಯ ವಾಚ್ಯ॥ ಪ್ರಥಮದಲ್ಲಿ। ಅನಾದಿ ಭಕ್ತನ ಉದ್ಧರಣೆ। ಶ್ರೀ ವೀರಶೈವ ಸಿದ್ಧಾಂತ ಸ್ಥಾಪನಾಚಾರ್ಯರಪ್ಪಾಧ್ಯರ ಅನುಮಥದಿಂ। ದುದ್ಧರಿಸಿದ। ಕುಟಿಲ ಕುಹಕ ಯಂತ್ರಗಳಲ್ಲ। ಶಿವಜ್ಞಾನ ಸಾಧನವಪ್ಪ ಶಿವಯಂತ್ರನ್ಯಾಸ। ಶಿವತತ್ವಸ್ಥಾಪಿತ ಶಿವಲಿಂಗಾಂಗ ಸಂಬಂಧ। ಪ್ರತಿಪಾದಕಾಗಮ। ಗ್ರಂಥಾರ್ತ್ಥವಾಚ್ಯಂಗಳಿಂ ಕೆಲಉ ವಚನಂಗಳಿಂ। ಸಂಗ್ರಹಿಸಿದ। ಉದ್ಧರಣೆಯ ಪಟಲವಿದು। ಶಿವಲಿಂಗಾಂಕಿತ ಶಾಸನವೆಂದು। ಶಿವಶರಣರವಧರಿಪುದು। ಪ್ರಥಮದಲ್ಲಿ। ಅನಾದಿಭಕ್ತನ ಉದ್ಧರಣೆಯ ಸಂಬಂಧ॥ ಸರ್ವಶೂಂನ್ಯ ನಿರಾಲಂಬ ವಸ್ತುವಿನ। ಚಿಂನ್ನಾದ ಚಿದ್ಬಿಂದು। ಸ್ವರೂಪವಾದ। ಲಿಂಗ ಜಂಗಮವ ಗರ್ಭೀಕರಿಸಿಕೊಂಡಿರ್ಪ್ಪ। ಚಿತ್ಕಲಾ ಸ್ವರೂಪವಾದ। ಅನಾದಿಭಕ್ತನ ನಿಲವೆಂತೆಂದೊಡೆ। ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ

ಅಂತ್ಯ : ಇನ್ನು ಮೇಲಣ। ದಾದ ಶಕ್ಯುತಿಗಳ। ಮಧ್ಯ। ಸ್ಥವಾದ। ನೂರೆಂಟು ಮನೆಗಳ। ನ್ಯಾಸಾಕ್ಷರಂಗಳೆ। ಬಾವಂಗಕಲಾಮೂರ್ತ್ತಿ। ಬಾವಂನತತ್ವಶಿವ ಶಕ್ತಿ ಪ್ರಕ್ರುತಿಪುರುಷರೆಂಬ। ನೂರೆಂಟು ತತ್ವಕರ। ಣ। ನೂರೆಂಟು ರುದ್ರ। ನೂರೆಂಟು ಶಕ್ತಿ। ಗುರುಚರಪರ। ವೆಂಬ। ಲಿಂಗತ್ರಯ। ಮಂತ್ರ। ಜ್ಞಾನ। ಪ್ರಸಾ....ವೆಂಬಂಗತ್ರಯ। ಸರ್ವಸೂನ್ಯ ನಿರಾಲಂಬಸ್ಥಲ। ಪೊಂದು। ಅಂಗ

ಸ್ಥಲ ನಾಲ್ವತ್ತನಾಲ್ಕು। ಲಿಂಗಸ್ಥಲ ಐವತ್ತೇಳು। ಇಂತೀ ನೂರೆಂಟು ಸ್ಥಳಕುಳ ಸ್ವರೂ....ಗಿಹಲು। ಇಂನೂ ಚೌಕಮಧ್ಯಸ್ಥವಾದ। ಅಷ್ಟಭವನ। ನ್ಯಾಸಾಕ್ಷರಂಗಳೇ। ಅಷ್ಟಮೂರ್ತಿ। ಅಷ್ಟತನು। ಅಷ್ಟಮಂತ್ರ। ಅಷ್ಟಾಂಗಲಿಂಗ। ....ಪ........ನಿಂ। ಮತ್ತಂ। ಮೂರು ಮೂರು। ತೆರನಾದ। ಅಷ್ಟಾವರಣ। ಸ್ವರೂಪವಾಗಿಹಲು। ಇಂತಿ ಸರ್ವಸಿದ್ಧಿಕರವಾದ। ಜ್ಞಾನಚಕ್ರೋದ್ದರಣೆ ಸಂಬಂ..............ಮಹಾ ಶ್ರೀ ಶ್ರೀ ಶ್ರೀ ॥

ವಿಷಯ : ಲಿಂಗಾಂಗಗಳ ಸಕೀಲು ವಿವರ. ವೀರಶೈವ ಸಿದ್ಧಾಂತ.

ವಿಶೇಷ : ೧, ೨೯, ೩೦, ೩೧, ಮತ್ತು ೩೨ ಈ ಪತ್ರಗಳು ಸ್ವಲ್ಪ ಉತ್ತಮವಾಗಿವೆ. ಪ್ರತಿ ಶಿಥಿಲವಾಗುತ್ತಿದೆ. ಅಕ್ಷರ ಮೋಡಿಯೆನಬಹುದು. ೨೯ ನಂಬರಿನ ಪತ್ರ ಎರಡಿವೆ. ಈ ಕಟ್ಟಿನಲ್ಲಿರುವ ಉದ್ಧರಣೆಗಳು ಅನಾದಿ ಭಕ್ತನ ಉದ್ಧರಣೆಯ ವಾಚ್ಯಾರಭ್ಯ ಜ್ಞಾನಚಕ್ರೋದ್ಧರಣೆ ವಾಚ್ಯಾಂತವಾಗಿ ೨೩ ಉದ್ಧರಣೆಗಳ ವಾಚ್ಯಗಳಿವೆ. ಇವೆಲ್ಲಕ್ಕೂ ಒಟ್ಟಾಗಿ ಉದ್ಧರಣೆಯ ವಾಚ್ಯವೆನ್ನಲಾಗಿದೆ.

165

ಕೆ.ಎ. ೩೦೩	ಉದ್ಭಟ ಕಾವ್ಯ	ವಿವಿಧ ಷಟ್ಪದಿ
೧೩.೩" × ೮.೨"	ಬಸವಾಂಕ	ಸು ೧೫೫೦
೧–೭೨ ಪತ್ರ	೨೪ ಪಂಕ್ತಿ	೧೦ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ॥
ಉದ್ಭಟ ಕಾವ್ಯಂ ಬರೆಯುವುದಕ್ಕೆ ಶುಭಮಸ್ತು ॥
ತಾಯುವೆರಸಿ ಅರಿಜನ ಪುರಜನ ಸಹವಾಗಿ ಕೈಲಾಸಕ್ಕೆ ಕರೆದುಕೊಂಡು ಹೋದ ಉದ್ಭಟರಾಯನ ಕಾವ್ಯ ಬರೆಉದಕ್ಕೆ ಶುಭಮಸ್ತು ॥

ಪರಿವರ್ಧಿನೀ॥ ಶ್ರೀ ಶಿವಶರಣಕ್ಕೆರ್ಗೇಳ್ವುದು। ಗುರ್ಜರದೇಶಾಧೀಶನ ಕಥೆಯಂ।
ಸತ್ಪತತೀಶನ ಕೃಪೆಯಿಂ। ಪೇಳ್ವೆಂ ಕಾವ್ಯಮುಖ ವರ ಪದ್ಧತಿಯಿಂ ॥

ಪದ॥ ಶ್ರೀಮದ್ಭೂಧರ ವರ ವರ ತನಯಾ। ಕೋಮಲ ಬಾಹಕಾನಕ ಚಂಪಕ।
ಧಾಮಾಸ್ಮಿತಗಿಲನಂಬಾ ಹಿಮಕೃದ್ಬಿಂಬಾಸ್ಯ ದ್ಯುತಿಯಿಂ ॥
ಪ್ರೇಮದಿಸೀಂಟುವ ಚಾರು ಚಕೋರಂ। ಹೇಮಾಗಾಗಾರಂ ಸತಿಸಲಹುಗೆ।
ಸೋಮೋತ್ತಂಸಂ ಶ್ರೀಕಾಂತೇಶಂ ಶರ್ಮೋದ್ಧರ ಕೋಶಂ ॥ ೧ ॥

ಅಂತ್ಯ : ಕೋವಿದರತಿ ರಸಿಕರ್ಜದುರರ್ನಿ । ಷ್ಟಾವಸದರ್ಸದ್ಭಕ್ತರ್ಲಾಲಿಪು
ದೋವುವುದೆಂಸೀ ಕಾವ್ಯದೊಳೆನಿತೆಡಹಿರಲನಿತಂ ಕಳೆದೂ
ನೇವರಿಸೂದೊಲವಿಂದೆನಿಸುಂ ಸ । ದ್ಭಾವನ ಸಂವಿಜ್ಜೀವನ ಗುರ್ಜರ
ದೇವನ ಕಥೆಯೊಳ್ಗಣಪದವಡದುದೀವೇಳನೆಯಾಶ್ವಾಸಂ ॥ ೫೦ ॥

ಪುಂಣ್ಯಂಬಡೆದಂ ಪೌರಾಣದ ಬಸ । ವಂಣಂ ನೆರೆ ಪೇಳ್ದುದ್ಭಟ ದೇವನ
ಗಣ್ಯಾಕೃತಿಯೊಳ್ಪೂರ್ವಾ ಪ್ರತಿಯೊಳುಳ್ಳಂತಾಂ ಬರದೆ
ತಿಂಣಂಬೆತ್ತಿಹ್ವಲಿಪಂ ಸೂನೃತ । ವಾಣ್ಯಂ ರಸಶಬ್ದಾರ್ಥಂ ತಳ್ವಿರೆ
ಬಣ್ಣಂ ವಡೆವೊಲ್ತಿರ್ದುವುದುತ್ತಮ ಭಕ್ತರ್ಬಲ್ಲವರೂ ॥ ೫೧ ॥
ಉದ್ಭಟಕಾವ್ಯ ಸಮಾಪ್ತ ಮಂಗಲಮಾಹಾ ಅಂತೂ ಆಶ್ವಾಸ ೭ಕ್ಕಂ
ಪದ ೩೫೫ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ಉದ್ಭಟದೇವನ ಚರಿತೆ.

ವಿಶೇಷ : ಬರವಣಿಗೆ ಸ್ಫುಟವಾಗಿದೆ.

166

ಕೆ.ಬಿ. ೨೦೭	**ಉದ್ದಾಳೀಕನ ಕಥೆ**	ಸಾಂಗತ್ಯ
೭.೬" × ೬"	?	?
೭೦—೧೦೩ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ : ಕಿರುಡೊಳ್ಳಿಗೆ ವುರುಗನ ಸುತ್ತಿದಾತನೆ
ಮೆರೆವ ಪಾಶಾಂಕುಶಧರನೆ
ಗಿರಿಜೇಯ ವರಪುತ್ರಾ ಕರಿಮುಖಗೊಂದೀಶಿ
ದೃಢವಾಗಿ ಕರುಣಿಸೊ ಮತಿಯಾ ॥ ೧ ॥

× × × ×

ವೊಣ್ಯೊಳು ಚಲ್ಲೀದ ಆಣಿ ಮುತ್ತಾರೀ
ಶಿ ನೂಲಿಗೆ ಪೋಣಿಸಿದಂತೆ
ಯೋಗಿಗಳರಸುದ್ದಾಳಿಕನ ಕಥೆಯನು
ಹೇಳುವೆ ಚರಿತ್ರೇಯ ಮಾಡಿ ॥ ೫ ॥

ಅಂತ್ಯ : ಸತಿಪತಿವೊಂದಾಗಿ ಹಸೆಮೇಲೆ ಕುಳಿತಾರು
ಸುತಗೆ ಮೌಂಜೀಯುಂನೆ ಕಟ್ಟೀ

ಅತಿಶಯದಲಿ ಅಗ್ನಿಕಾರ್ಯವನೇ ಮಾಡೀ
ಅರತಿಯನೆತ್ತಿದರು ಸಂಭ್ರಮದೀ ॥ ೪೪೪ ॥

× × × ×

ಪ್ರಾತಃಕಾಲದೊಳೆದ್ದು ವುದ್ದಾಳೀಕನ ಕಥೆಯಾನು
ಭಕ್ತಿಂದ ಹೇಳ್ ಕೇಳಿದವರೀಗೆ
ಯಿಷ್ಟಾರ್ಥವು ಶಿದ್ಧಿ ಆಗೋದುಯಂದು
ಕೋಟಾರೆ ಹರಿಹರ ವರವಾ ॥ ೪೪೭ ॥ ಶ್ರೀ ಶ್ರೀ ಶ್ರೀ

ವಿಷಯ : ಯೋಗಿವರನಾದ ಉದ್ದಾಳೀಕನ ಕಥೆ.

ವಿಶೇಷ : ಪ್ರತಿಯನ್ನು ಕೆಲವು ಕಡೆ ಹುಳು ತಿಂದಿದೆ. ಒಂದೆರಡು ಕಡೆಗಳಲ್ಲಿ ಬರೆದುದರ ಮೇಲೆ ಬೇರೆ ಕಾಗದದಲ್ಲಿ ಮತ್ತೆ ಬರೆದು ಅಂಟಿಸಿದೆ. ಎರಡು ಮೂರು ತರಹದ ಮಸಿಯನ್ನು ಬಳಸಿದೆ. ಗ್ರಂಥಾರಂಭದ ಪತ್ರದ ಮೊದಲಲ್ಲಿ "ಸಂನ್ ೧೮೮೫ನೆಲ್ಲು ೭ ಜುಲೈ ತಾರೀಖು ೨೩ಕ್ಕೆ ಸರಿಯಾದ ಪಾರ್ಥಿವ ಸಂವತ್ಸರದ ಆಷಾಡ ಶುದ್ಧ ೧೨ ಗುರುವಾರದಲ್ಲು ವುದ್ದಾಳೀಕನ ಕಥೆ ಬರೆಯುವದಕ್ಕೆ ಶುಭಮಸ್ತು" ಎಂದಿದೆ. ಕಾಗದ ಬಹು ತೆಳುವಾಗಿದೆ.

167

ಕೆ.ಎ. ೨೯೯	**ಉದ್ಬೋಧ ಪ್ರಜ್ಞ**	ಶ್ಲೋಕ, ಟೀಕು
೧೩.೨" × ೮.೩"	?	?
೧–೪೪ ಪತ್ರ	೨೨ ಪಂಕ್ತಿ	೨೩ ಅಕ್ಷರ

ಆದಿ : ಉದ್ಬೋಧ ಪ್ರಜ್ಞಃ ಪ್ರಾರಂಭಃ ॥ × × × ಉದ್ಬೋಧ ಪ್ರಜ್ಞವ ಬರೆಯುವದಕ್ಕೆ ಶುಭಮಸ್ತು ॥ ಆಯುರಾರೋಗ್ಯಮಸ್ತು ॥ ಐಶ್ವರ್ಯಮಸ್ತು ॥ ಉದ್ಬೋಧಪ್ರಜ್ಞವಂ ಪೇಳ್ವೆ ॥ ಶ್ರುತಿ ॥ ಪ್ರಜ್ಞಾನಮಾನಂದಂ ಬ್ರಹ್ಮಾ ॥ ಯಿದನು ಋಗ್ವೇದ ಹೊಗಳುವುದು ॥ ಅಹಮಸ್ಮಿ ಬ್ರಹ್ಮ ॥ ಯಿಂತೆಂದು ಯಜುರ್ವೇದ ಹೊಗಳುವುದು ॥ ಏಕಮೇವ ನ ದ್ವಿತೀಯಂ ಬ್ರಹ್ಮ ॥ ಇತಿ ತತ್ವಮಸ್ಯಾರ್ಥ ಸಾಮವೇದ ಶ್ರುತಿ ನುಡಿವುದು ॥ ಅಯಮಾತ್ಮಾ ಬ್ರಹ್ಮ ॥ ಯಿದು ಅಥರ್ವಣ ಶ್ರುತಿ ಸಾರುವುದು ॥ ಯಿಮಂ ನಾಲ್ಕು ವೇದದ ಅರುಹಗಳ ತೋರಿಕೊಡಲಿಕ್ಕೆ ಪ್ರಜ್ಞಾನವೇ ಕಾರಣವಾಗಿಪ್ಪುದು ॥ ಆ ಪ್ರಜ್ಞಾನ ಅದೆಂತೆಂದಡೆ ॥ ಅವಸ್ಥಾತ್ರಯಂಗಳಿಗೆ ॥ ಜಾಗ್ರತಿ ಅವಸ್ಥೆಯೇ ನೆನವು ॥

ಅಂತ್ಯ : ಶರಣು ಶಿವಸರ್ವೋತ್ತಮ || ಶರಣಂ ಭವಹರ ಭಕ್ತ ತಾರಿಪ || ಶರಣು ಅವನಿ ಜಲಾಗ್ನಿ | ಮಾರುತ ವ್ಯೋಮ ವೈಭವನೆ || ಶರಣು ಹಂಕೃತ ವ್ಯಕ್ತಿ ಸಾರನೆ || ಶರಣು ಸಾಕ್ಷಿ ಸಜಕ ಪ್ರಣವದೆ || ಕರುಣಸಾಗರೆನುತ ಗುರುವಿನ || ಚರಣಕ್ಕೆರಿಗಿದನು || ಇಂತಿ ಉದ್ಯೋಥ ಪ್ರಾಜ್ಞ ಗುರುಶಿಷ್ಯ ಸಂವಾದದ ಆದ ಕಾವ್ಯ ಸಂಹಾರ ಕ್ರಮ ಕಾರಣ ದೇಹನಿರಶನಂ ನಾಮ ಏಕಾದಶ ಪ್ರಕರಣ ಸಮಾಪ್ತಃ || ಮಂಗಳ || ಮಹಾಶಿವಾರ್ಪಣಮಸ್ತು ||

ವಿಷಯ : ವೇದಾಂತ.

ವಿಶೇಷ : ಅಕ್ಷರ ಸ್ಫುಟವಾಗಿವೆ.

168

ಕೆ.ಎ. ೨೧೧/೧	**ಉದ್ಯೋಗಸಾರ**	ಕಂದ
೧೩″ × ೮″	ನಂದಿಮುನಿ (?)	?
೧–೪೬ ಪತ್ರ	೩೦ ಪಂಕ್ತಿ	೧೭ ಅಕ್ಷರ

ಆದಿ : ಕ|| ಆ ನಮ್ರ ಭವ್ಯ ನಿವಹ
ಶ್ರೀ ನಂದಿ ಮುನೀಂದ್ರ ವಂದ್ಯಜಿನಪದಪದ್ಮ
ಕ್ಕಾನೆಱಗಿ ಭಕ್ತಿಯಿಂದ ಮ
ನೂನಮನುದ್ಯೋಗಸಾರಮಂ ಪ್ರಕಟಿಸುವೆಂ ||
ಮಾಗಿಯೊಳು ಮೂಗುವಟ್ಟಾ
ಕೋಗಿಲೆ ನವಚೂತಕಳಿಕೆಯಂ ಕರ್ಚಿಮನೋ
ರಾಗದೆ ದನಿಗೆಯ್ವಂತೆ ಜಿ
ನಾಗಮಸೇವಾನುರಾಗನಾನಿದನೊಣರ್ದೆಂ || ೨ ||

ಅಂತ್ಯ : ಕಂ || ಶ್ರುತನಿಧಿ ವಿಮಲದಯಾಂಬುಧಿ
ವಿತತ ಯಶೋದಾಮ ನೇಮಿಚಂದ್ರಯತೀಂದ್ರ
ಶ್ರುತಲಕ್ಷ್ಮಿ ದ್ವಿತಯಕ್ಕಂ
ಸುತನೆನೆಸಿ ಸುತತ್ವದರ್ಶಿಯೆನಿಸುವುದಱದೆ || ೪೫೩ ||
ವೃ || ಪರಮಾರ್ತ್ಥಂ ಭಾವತೀರ್ತ್ಥಂ ಕಲಿ ಕಲುಷ ರಜಃಕ್ಷಾಳಕಂ ಸದ್ಗುಣಾಬ್ಜಂ
ಸ್ಮರ ಸಂತಾಪಾಪನೋದಂ ಪ್ರಶಮರಸಹಿಮಂ ಸಾಧು ಹಂಸಾಳಿರಮ್ಯಂ

ನಿರವದ್ಯಂ ವಿಶ್ವಹೃದ್ಯಂ ಪರಮಸುಖಸುಧಾಸಾರಮುದ್ಯೋಗಸಾರಂ
ವರವಿದ್ಯಾವಾರಿಪೂರಂ ವಿಷಯವಿಷ ತೃಷೋಚ್ಛೇದಮಂ ಮಾಳ್ಕೆ ನಂ
ಮ್ಮೊಳ್ ॥ ೪೫೪ ॥

ವಿಷಯ : ಜೈನ ತತ್ತ್ವದ ನಿರೂಪಣೆ.

ವಿಶೇಷ : ಪುಸ್ತಕದ ಸ್ಥಿತಿಯು ಸಾಧಾರಣವಾಗಿದೆ. ಶಕಟ ರೇಫದ ಪ್ರಯೋಗವಿದೆ. ಒಂದೆರಡು ಕಡೆ ಗ್ರಂಥ ಲುಪ್ತವಾಗಿದೆ. ಈ ಗ್ರಂಥದ ಜೊತೆಯಲ್ಲಿ ಚಂದ್ರ ನಾಥಾಷ್ಟಕವಿದೆ. ಪತ್ರದ ಒಂದು ಕಡೆಯಲ್ಲಿ ಮಾತ್ರ ಬರೆದಿದೆ.

169

ಕೆ.ಬಿ. ૩૩೫	**ಉಪನಿಷತ್ತು**	ವಚನಗಳು
೭.೭" × ೬.૩"	ಶ್ರೀ ಗುರುಶಿವಸಿದ್ಧೇಶ್ವರ	?
೧–೪೫ ಪತ್ರ	೧೪ ಪಂಕ್ತಿ	૩೮ ಅಕ್ಷರ

ಆದಿ : ಸರ್ವಾಂಗ ಲಿಂಗಸ್ಥಲದ ಸ್ತೋತ್ರ ॥ ವಚನ ॥ ಶ್ರೀ ಗುರು ಶಿಷ್ಯಂಗೆ। ನಿರೂಪಿಸಿದ। ವುಪದೇಶಮದೆಂತೆಡೆ॥ ಪೃಥ್ವಿ । ಅಪ್ಪು। ತೇಜ। ವಾಯು। ಆಕಾಶ। ಆತ್ಮ। ರೆಂಬಾ। ಆರು ಭೂತಂಗಳು। ಆ ಶಿಷ್ಯನ। ಅವಗ್ರಹಿಸಿಕೊಂಡಿರಲು ಸದ್ಗುರು ಕಾರುಣ್ಯದಿಂದ ನೋಡಿ। ನಕಾರ। ಮಕಾರ। ಶಿಕಾರ। ವಕಾರ। ಯಕಾರ। ಓಂಕಾರ। ವೆಂಬಾರು ಬೀಜಾಕ್ಷರದಿಂ ಆ ಭೂತಂಗಳ ಗುಣಂಗಳ ಕೆಡಿಸಿ।

× × × ×

ಶ್ರೀ ಗುರುವಿನ ಶ್ರೀ ಮಹಾಪಾದಪದ್ಮಂಗಳಿಗೆ। ನಮೋನ ಮೋಯೆನು ತಿರ್ಪೆನಯ್ಯ ಶ್ರೀಗುರುಸಿದ್ಧೇಶ್ವರಃ ಪ್ರಭುವೇ ॥ ಶ್ರೀ ॥ ಆಚಾರಲಿಂಗ। ಗುರುಲಿಂಗ । ಶಿವಲಿಂಗ । ಜಂಗಮ ಲಿಂಗ । ಪ್ರಸಾದ ಲಿಂಗ । ಮಹಾಲಿಂಗ। ಯಿಂತಪ್ಪ ನವವಿದ ಲಿಂಗಕ್ಕೆ। ನಮೋನಮಃ ॥

ಅಂತ್ಯ : ತನು ಮನ ಧನಂಗಳ ವಂಚಿಸದಾತನೆ। ಸಕಲ ಸದಾಚಾರ। ಸಂಪಂನನಾಗಿ ಭಕ್ತಿಸ್ಥಲವನಂಗಂಗೊಂಡಿರ್ಪಾತನೆ ವಿಶೇಷ ವೀರಶೈವನಪ್ಪಂ।

× × × ×

ಜ್ಞಾನಿಗಳಿಗಿಂತಲುಂ ಶಿವಾರ್ಚಕರಧಿಕ ವಾ ಶಿವಾರ್ಚಕರಿಗಿಂತಲುಲಿಂಗಾಂಗ ಸಂಗಿಗಳಧಿಕ ವಾ ಲಿಂಗಾಂಗ ಸಂಗಿಗಳಿಂತಲು ಷಟ್‌ಸ್ಥಲ ಜ್ಞಾನಿಗಳಧಿಕವವರಿಗೆ ಮೂರು ಲೋಕದಲ್ಲಿ ಯು ಸಮಾನವಿಲ್ಲವಾಗಿ ಮುಮುಕ್ಷುಗಳಿಂದಷಟ್‌ಸ್ಥಲ ಜ್ಞಾನಿಗಳಾದ ವಿಶೇಷ ವೀರಶೈಯ್ಯರೆ ವಂದಿಸಲು।

ಪೂಜಿಸಲು ಭಾಗ್ಯಮಹುದೆಂದು ಮೊದಲಾದ ಅನೇಕ ಶ್ರುತಿಸ್ಮೃತಿ ಪುರಾಣೇತಿಹಾಸ ಮೊದಲಾದವೆಲ್ಲಂ ಕ್ರಿಯಾಪಾದದಲ್ಲಿ ಪ್ರತಿಪಾದ್ಯಮಕ್ಕುಂ ಇತಿ ಕ್ರಿಯಾಪಾದ ತ್ರಿವಿದ ಪ್ರಸಾದ ಸಂಪೂರ್ನ ಮಂಗಳಂ ॥ ಶ್ರೀ

ಶ್ರೀಗುರುಶಿವಶಿದ್ದೇಶ್ವರರು ವಿರಚಿಸಿದುಪನಿಷತ್ತು ಸಂಪೂರ್ನ ಮಂಗಳಂ ಶ್ರೀ ಶಿವಾಯ ಮಂಗಳಂ ॥

ವಿಷಯ : ವೀರಶೈವತತ್ತ್ವ ಪ್ರತಿಪಾದನೆ.

ವಿಶೇಷ : ಗ್ರಂಥದ ಆದಿಯ ಕೆಲವು ಪತ್ರಗಳ ಕೊನೆಯನ್ನು ಹುಳು ತಿಂದಿದೆ.

170

ಕೆ. ೩೫/೩	**ಉಮಾಮಾಹೇಶ್ವರ ಶತಕ**	ವೃತ್ತ
೧೨" × ೧.೪"	ವೀರಭದ್ರರಾಜ	ಸು. ೧೫೩೦
೧೩–೨೪ ಪತ್ರ	೭ ಪಂಕ್ತಿ	೪೮ ಅಕ್ಷರ

ಆದಿ : ಉಮಾಮಾಹೇಶ್ವರ ಶತಕ ॥

ಶ್ರೀ ಗಿರಿಜಾಲಲಾಮ ಘಸೃಣಂ ಭವದೀಯ್ಯ ಲಲಾಟಮಧ್ಯದೊಳ್
ಯೋಗಮದಾಗಿ ತೋಱಲುಮೆ ಮನ್ಮಥವೀರನ ರಕ್ಷೆಗಾಗಿ ಸಂ
ಭೋಗದೊಳೆಯ್ದೆ ನಿಂನ ನೊಸಲಕ್ಷಿಗೆ ಮುದ್ರಿಸಿದಂತಿರಲ್ಕೆ ಚೆ
ಲ್ವಾಗಿ ವಿರಾಜಿಸಿಪ್ಪ್ರ ಶಿವ ರಕ್ಷಿಸುದೆಂನನುಮಾಮಹೇಶ್ವರಾ ॥ ೧ ॥

ಅಂತ್ಯ : ಲಕ್ಷಣದಿಂದಲಂಕೃತಿಯಿನುಂನತ ಭಾವರಸಂಗಳಿಂ ವಿರೂ
ಪಾಕ್ಷ ಕುಮಾರನೀಶಪದಪಂಕಜಷಟ್ಪದ ವೀರಭದ್ರನಿಂ
ಲಕ್ಷಿಸಿದೀ ಪ್ರಬಂಧಮದು ಸದ್ಬುದಸಂಚಯ ಮಧ್ಯದೊಳ್ಮಹಾ
ದಕ್ಷನೆನಿಪ್ಪವಂಗೆ ಸೊಗಸೀವುದು ಚಿತ್ರಮುಮಾಮಹೇಶ್ವರಾ ॥ ೧೦ ॥

ಉಮಾಮಹೇಶ್ವರಾ ಶತಕ ಸಮಾಪ್ತ ಮಂಗಳ ಮಹಾ ಶ್ರೀ.

ವಿಷಯ : ಶಿವಸ್ತುತಿ ಹಾಗೂ ತತ್ವಬೋಧೆ.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀ ವಲ್ಲಭ ಶತಕ, ಪ್ರಾಣನಾಥಶತಕ, ಶ್ರೀಕಂಠ ಸೋಮೇಶ್ವರಶತಕ, ಕಂದಶತಕ, ಪ್ರಭು

ದೇವರ ಪುರಾಣದ ನಾಂದ್ಯಗಳು, ಮಹಿಮ್ನಸ್ತೋತ್ರ, ಶಿವಪೂಜಾವಿಧಾನ, ಚೇರಮಕಾವ್ಯಗಳೆಂಬ ಗ್ರಂಥಗಳಿವೆ.

171

ಕೆ. ೨೬೦/೨ ಉರಿಲಿಂಗ ಪೆದ್ದಯ್ಯನ ಕಥೆ ಷಟ್ಪದಿ

೧೬.೯" × ೧.೫" ಬಸವರಾಜ ? ?

೧–೧೫ ಪತ್ರ ೭ ಪಂಕ್ತಿ ೭೦ ಅಕ್ಷರ

ಆದಿ : ಉರಿಲಿಂಗ ಪೆದ್ದೈಯ್ಯನವರ ಕಥೆ ಬರೆಉದಕ್ಕೆ ಶುಭಮಸ್ತು॥ ಷಟ್ಪದಿ ವರ್ನಾ॥
ಶ್ರೀ ಗಿರಿಜೆವರಕಾಂತ ಶಂಕರ
ಭೋಗಿಭೂಷಣ ಭರ್ಗ ಪರಶಿವ
ಆಗಮಶೃತಿತತಿಗಳರಸುವೊ ನಿಂಮ್ಮ ಪದಯುಗವಾ ॥ ಪ ॥
ಜಾಗ ತೋರದ ಚಿಂನ್ಮಯಾತ್ಮಕ
ಯೋಗಿಜನ ಹೃತ್ಕಮಲ ವಾಸಕನೆ
ಬೇಗ........ನ್ನಯ ಚರಣಕ್ಕೆರಗುವೆ ಅಣುಗ ಬಾರೆಂದೂ ॥ ೧ ॥
ಕರದು ಮುಂನಿಸಿ ಶರಣ ಸತ್ಕೃತಿ
ವಿರಚಿಸುವ ಮತಿದೋರು ಮೂಡಗೆ
ಕರುಣವಾರುದಿ ಖಂಡಪರಶುವೆ ಕರ್ಥ ಜಗದ್ಭರಿತಾ
ಹರನೆ ನಿಂನ್ನಯ ಶರಣಲೀಲೆಯ
ವೊರೆದು ವರ್ನಿಸಲಾವ ಕವಿವರ
ಗರಿದು ನಿಂನ್ನಯ ಬಡವಭಕ್ತಿಯೊಳೊರವೆ ಬಲ್ಲತಾ ॥ ೨ ॥
× × × ಯುಕುತಿಯ ಪಡೆದು ಪೇಳುವೆ ಕರುಣವಾರುದಿ ಬಸವರಾಜನು
ತನ್ನ ಅಳಿಯನಿಗೆ ॥ ೪ ॥

ಅಂತ್ಯ : ಸಾಯುಜ್ಯಪದವಿಯ ಪ್ರೇಮದಿಂದಿತ್ತು ಸುಖದೊಳಿರುಸಿದ ಕೇಳು ಲಲಿತಾಂಗಿ ॥ ೨೫ ॥ ಕಲ್ಲಲೊಗೆಯುಲು × × × ಶಿವನು ತಂನಯ × × × ನಲ್ಲಳಿಗೆ ಬೋದಿಸಿದ × × × ಪುಲ್ಲ ಶರರಿಪು ಸುತನೆ ಚಂನ್ನಂಣಗೆಂದ ಬಸವೇಶಾ ॥ ೨೬ ॥ ಯಿದುವೆ ಉರುಲಿಂಗದೇವ ಶಿಷ್ಯನು ಉರುಲಿಂಗ ಪೆದ್ದೈಯನು ಶಿವಪದವ ಪಡದಂತ ಭಕ್ತಿಸಾರವ ಮುಕ್ತಿ ಅಮೃತರಸಾ । ಸದು ಹೃದೆಯ ಸದ್ಭಕ್ತರಾಲಿಸೇ ವದಗುವದು ಆಯುಂ ಆಯುಂ ಮದನಹರ ತಾನಿತ್ತ ಪೋಷಿವ ಬಿಡದೆ ಅನುಗಾಲಾ ॥ ೨೭ ॥ ಉರಿಲಿಂಗ ಪೆದ್ದೈಯ್ಯನವರ ಕಥೆ ಸಂಪೂರ್ನ ಮಂಗಳ ಮಹಾಶ್ರೀ ಶ್ರೀ ಅಧ್ಯಾಯ ಮೂರಕಂ ಪದನು ೧೭೫ ಕ್ಕಂ ಮಂಗಳ ಮಹಾಶ್ರೀ

ವಿಷಯ : ಉರಿಲಿಂಗ ಪೆದ್ದಿಯು ಗಣಪದವನ್ನು ಪಡೆದ ಕಥೆ.

ವಿಶೇಷ : ಹುಳುತಿಂದು ಪತ್ರಗಳು ಬಹು ಶಿಥಿಲವಾಗಿವೆ. ಈ ಪ್ರತಿಯೊಂದಿಗೆ ಏಕೋದೇವರ ತ್ರಿವಿಧಿಯ ೯ ಪತ್ರಗಳಿವೆ.

172

ಕೆ. ೩೬೬/೩	ಏಕಾಕ್ಷರ ನಿಘಂಟು (ಸಟೀಕು)	ಶ್ಲೋಕ, ಟೀಕು
೮.೭"×೨.೩"	?	?
೫-೧೨ ಪತ್ರ	೧೧ ಪಂಕ್ತಿ	೩೮ ಅಕ್ಷರ

ಆದಿ : ಏಕಾಕ್ಷರ ನಿಘಂಟು.

ಪೂರ್ವೇ ಸೂರ್ಯೇ ದಿಶ್ಯರ್ಹಂತೆ ಧ್ವಜೆ ಗಜೆ ಖಗೇಶ್ವರೆ
ಧರೇಂದ್ರಾಚ್ಯುತ ಭಾಗ್ಯೇಷು ....ರಾತ್ರ್ಥಶ್ಚ ದ್ವಾದಶೀ ॥

ಟೀಕು ॥ ಪೂರ್ವದಲ್ಲಿ। ಸೂರ್ಯ್ಯನಲ್ಲಿ। ಪೂರ್ವ್ವದಿಕ್ಕಿನಲ್ಲಿ। ಜಿನೇಶ್ವರನಲ್ಲಿ। ಧ್ವಜದಲ್ಲಿ। ಆನೆಯಲ್ಲಿ। ಗರುಡಪಕ್ಷಿಯಲ್ಲಿ। ಭೂಮಿಯಲ್ಲಿ। ದೇವೇಂದ್ರನಲ್ಲಿ ನಾರಾಯಣನಲ್ಲಿ। ಸಕಲಭಾಗ್ಯಂಗಳಲ್ಲಿ ಅಕಾರಾಕ್ಷರವು ವರ್ತ್ತಿಸುವುದು ॥ ೧ ॥

ಅಂತ್ಯ : ಯಿದಾಪ್ರದ್ಯೈಕಾಕ್ಷರೀ ಗ್ರಂಥ।
ಸಾಂದ್ರಸಾರ್ಣೋದ್ಧಾರಣಂ ಮಂತ್ರವತ್ ಕೃತಕೇಶ
ಯಶ್ಚಂದ್ರಪೂರ್ಯ್ಯ ಜಿರಂಜಯಾತ್ ॥

ಟೀ॥ ಸಾಂದ್ರ। ದಟ್ಟಿತಾಗಲು ಪಟ್ಟ ಅರ್ತ್ಥವನುಳ್ಳ ಯೇಕಾಕ್ಷರ ಗ್ರಂಥ ಪದ್ಧತಿಯನುಳ್ಳ ಯೇಕಾಕ್ಷರ ನಿಘಂಟು ಸಮಸ್ತ ಮಂಗಳ ಮಹಾಶ್ರೀ ॥

ವಿಷಯ : ಏಕಾಕ್ಷರ ನಿಘಂಟಿನ ಕನ್ನಡ ಟೀಕೆ.

ವಿಶೇಷ : ಇದೇ ಕಟ್ಟಿನಲ್ಲಿ ಶಬ್ದರತ್ನಾಕರ, ಪದ್ಯ ನಾನಾರ್ಥ, ನಾನಾರ್ಥ ರತ್ನಾಕರ, ಧನಂಜಯ ನಿಘಂಟು (ಸಟೀಕಾ), ಭಾರತ ನಿಘಂಟು, ಕರ್ಣಾಟಕ ಶಬ್ದ ಮಂಜರೀ ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧಪಡದ ೧೦ಳ ರಿಂದ ೧೧೦ ವರೆಗಿನ ಕ್ರಮಾಂಕವುಳ್ಳ ಆರು ಓಲೆಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದೂ ಅಪೂರ್ಣ.

173

ಕೆ. ೭೫/೯	ಏಕೋತ್ತರ ಶತಸ್ಥಲ	ಹಾಡು, ಗದ್ಯ
೧೦.೭" × ೨.೨"	ಮಹಲಿಂಗ	೧೪೩೦
೧೬೭–೨೨೩ ಪತ್ರ	೧೮ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ‖ ಏಕೋತ್ತರ ಶತಸ್ಥಲ | ಸ್ವಸ್ತಿ ಸಮಸ್ತ ಭುವನಜನತಿಮಿರ ಹರಣಕಾರಣ ಸ್ವರೂಪರುಂ । ಭಕ್ತ ದೇಹಿಕ ದೇವರುಂ । ಭಕ್ತಿವತ್ಸಲರುಂ । ಸರ್ವಾಂಗ ಪ್ರಾಣಲಿಂಗಮೂರ್ತಿ ವಿಲಾಸರುಂ × × × ಪ್ರಥಮದಲ್ಲಿ ಪಿಂಡಸ್ಥಲದ ವಚನ । ಕಲ್ಲೊಳಗಣ ಪಾವಕನಂತೆ। ವುದಕ ದೊಳಗಣ ಪ್ರತಿಬಿಂಬದಂತೆ। ಬೀಜದೊಳಗಣ ವೃಕ್ಷದಂತೆ | ಶಬ್ದದೊಳಗಣ ನಿಃಶಬ್ದದಂತೆ ಗೊಹೇಶ್ವರ ನಿಂಮ ಶರಣಸಂಮಂದಾ ‖ ೧ ‖

ಅಂತ್ಯ : ಶಬ್ದ ನಿಶಬ್ದವಾಗಿ ನಿಶಬ್ದ ವನಹತವಾಗಿ ಶಬ್ದ ನಿಶಬ್ದವೆಂಬ ಬುದ್ಧಿಯೂ ನಿರ್ವ್ಯಯಲಾಗಿಯಿದ್ದುದು ಹೋದುದೆಂಬುದನಱಯದೆ ಮೀರೆಗೆಟ್ಟ ನಿಶಬ್ದ ಗಂಭೀರ ಗೊಹೇಶ್ವರಾ ನಿಂಮ ಬಸವಂಣಾ ‖ ೭ ‖ ಅಂತೂ ಮಹಾಲಿಂಗಸ್ಥಲ ೯ ಕ್ಕೆ ಸೇರಿದ ವಚನ ‖ ೬೨ ‖ ಸ್ಥಲನಿರ್ದೇಶದ ಪದ ೪೭ | ವುಭಯಂವಚನ ‖ ೧೦೯ ಕ್ಕಂ ‖ ಶ್ರೀ ಶ್ರೀ ಶ್ರೀ ‖ ಸ್ವಸ್ತಿ ಸಮಸ್ತ ಭುವನಜನ ತಿಮಿರಹರಕಾರಣ ಸ್ವರೂಪರಂ | × × ಜ್ಯೋತಿಸ್ವರೂಪರುಮಪ್ಪ ಮಹಾಲಿಂಗದೇವರು ತಂಮ ದಿವ್ಯಗ್ನಾನಾನಂದ ಸಿದ್ಧವರ ಪ್ರಸಂನ ಪ್ರಸಾದವನು ನಿಜತಸ್ಯ ಭಕ್ತಿಭಂಡಾರಿ ಜಕ್ಕಂಣಂಗೆ ಸತ್ರೀಮ ಮಹಾನುಭಾವ ಸಂಬೋಧೆ ಸಂಬಂಧ ನಿರೂಪಣ ಕಾರ ಣಾರ್ಥ ವಿರಚಿತಮಪ್ಪ ಏಕೋತ್ತರ ಶತಸ್ಥಲದೊಳ್ಐಕ್ಯ ಸ್ಥಲಕ್ಕೆ ಸಂಬಂಧವಾದ ಲಿಂಗಸ್ಥಲ ,ನವಮದ್ವಾದಶ ಪರಿಚ್ಛೇದಃ ‖ ಅಂಗಸ್ಥಲ ನಾಲ್ವತ್ತನಾಲ್ಕಕ್ಕೆ ಸೇರಿದ ವಚನ ೪೬೫ ಕ್ಕಂ ಸ್ಥಲ ನಿರ್ದೇಶದ ಪದನ ೨೫೩ | ವುಭಯಂ ವಚನ ೭೧೮ | ಲಿಂಗಸ್ಥಲ ೫೭ | ಕ್ಕಂ ಸೇರಿದ ವಚನ ೪೬೨। ಕ್ಕಂ ಸ್ಥಲನಿರ್ದೇಶದ ಪದ ೨೯೫। ವುಭಯಂ ವಚನ ೭೫೭ ಯಿಂತೊ ಕೂಡಲು ೧೦೪೭೫ ಕ್ಕಂ ಪಿಂಡಾದಿ ಜ್ಞಾನಶೂನ್ಯಾಂತಮಾದ ಯೇಕೋತ್ತರ ಶತಸ್ಥಲ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ ಶ್ರೀ ‖

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಶಕಟರೇಫದ ಬಳಕೆಯಿದೆ. ಸಮಗ್ರ. ಈ ಗ್ರಂಥದೊಂದಿಗೆ ಸ್ವತಂತ್ರ ಸಿದ್ಧಲಿಂಗೇಶ್ವರ ವಚನ, ಷಟ್ಸ್ಥಲದ ಲಿಂಗಾಂಗ ಸಂಬಂಧದ ನಿರ್ವಚನ ವೊದ ಲಾದ ಇತರ ೧೨ ಗ್ರಂಥಗಳಿವೆ.

174

ಕೆ. ೧೬೪/೧೧ ಏಕೋತ್ತರ ಶತಸ್ಥಲ ಹಾಡು
೧೭.೬" × ೨" ಜಕ್ಕಣಾಚಾರ್ಯ ಸು ೧೪೩೦
೬೪–೧೬೭ ಪತ್ರ ೧೧ ಪಂಕ್ತಿ ೬೨ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯ ನಮಃ। ಟೀಕೆ ॥ ಶ್ರೀಜ್ಞಾನದಾನ್ಯೈಶ್ವರ್ಯ್ಯವನುಳ್ಳ ಗುರು। ಗೂಡಜ್ಞಾನ। ಜ್ಞಾನರುಂದ್ರಮೂರ್ತಿಯಾದ × × ಯೇಕೋತ್ತರಶತ ಸ್ಥಲ। ಜ್ಞಾನಶೂನ್ಯಸ್ಥಲವೊಂದೆ ವುತ್ತರವಾಗಿ। ನೂಱು ಸ್ಥಲವೆ ಕಡೆಯಾಗಿ ನೂಱೊಂದು ಸ್ಥಲವು ಶಿವನಿಂ ನಿರೂಪಿಸಲು ತಕ್ಕ ಕಾಮಿಕವೆಂಬ ಮಹಾ ಗಮದಲ್ಲಿಯ ಮೇಲುಭಾಗೆಯಲ್ಲಿ ಶ್ರೇಷ್ಟವಾದ ವೀರಶೈವಮತವ ಹೇಳಲ್ಪಟ್ಟಿತ್ತು॥ ಅದನೆ ರೇವಣಾಸಿದ್ದೇಶ್ವರನು ಅಗಸ್ತ್ಯಂಗೆ ಬೋಧಿಸಿದರು। ಆದೇ ವೀರಶೈವರು ಗಳಿಗೆ ಸ್ಥಲಭೇದದಿಂದ ಆ ಶಾಸ್ತ್ರವು ಆಱು ಪ್ರಕಾರವನುಳ್ಳದಹುದು। ಮೊದ ಲಲ್ಲಿ ಭಕ್ತಿಸ್ಥಲ ೧೫। ಮಹೇಶ್ವರಸ್ಥಲ ೯। ಪ್ರಸಾದಿಸ್ಥಲ ೭। ಪ್ರಾಣಲಿಂಗಿಸ್ಥಲ ೫। ಶರಣಸ್ಥಲ ೪। ಐಕ್ಯಸ್ಥಲ ೪। ಅನಂತರಂ। ಅಂಗಸ್ಥಲಂಗಳನಾಶ್ರೈಸಿದ್ದಲ್ಲಿ। ಲಿಂಗಸ್ಥಲಂಗಳೊಳಗೆ ಆಚಾರಲಿಂಗಸ್ಥಲ೯। ಗುರುಲಿಂಗಸ್ಥಲ೯। ಶಿವಲಿಂಗಸ್ಥಲ ೯। ಜಂಗಮಲಿಂಗಸ್ಥಲ ೧೨। ಪ್ರಸಾದಲಿಂಗಸ್ಥಲ೯। ಮಹಾಲಿಂಗಸ್ಥಲ೯। ಅಂಗಸ್ಥಲ ೪೪ ಲಿಂಗಸ್ಥಲ ೫೭ ॥ ವುಭಯಪಿಂಡಾದಿ ಜ್ಞಾನಶೂನ್ಯಾಂತವಾದ ೧೦೧ ಸ್ಥಲಂಗಳು ಅವನೆ ನಿರೂಪಿಸಿದ ಪುರಾತನರ ಮಹಾವಚನಂಗಳೊಳಗೆ ಜಕ್ಕಣಾಚಾರ್ಯ್ಯರು। ಅವಱೊಳಗೆ ಸಾರವಾದ ೧೦೧ ಸ್ಥಲವಚನಂಗಳ ತೆಗದುಕೊಂಡು ಸೂತ್ರವಿಟ್ಟು ಸಂಗ್ರಹಿಸಿದರು। ಅದೇನು ಕಾರಣವೆಂದೊಡೆ। ತಂಮ ವಂಶಿಕವಾದ ಶರಣಜನಂಗಳು। ಆಚರಿಸಿ ಮುಕ್ತಿಯನ್ನೈದಲೋಸ್ಕರ। ಯೀಶ್ವರ ಪ್ರಥಮದಲ್ಲಿ ಪಿಂಡ। ಶಿವಾಂಶಿಕವಾದಾತಂಗೆ ಶಿವ ತಾನೇ ಸ್ವಲೀಲೆ ಯಿಂದೆ ಪಂಚವಿಂಶತಿತತ್ವದೇಹಮಂ ಸಂಬಂಧಿಸಿ ದೇಹೋऽಹಂಮೆಂದು ತಂನ ನಿಜವಂ ಮರದು ಪ್ರಕೃತಿಪಿಂಡ ತದಾಕಾರವಾಗಿದ್ದುದಂ। ಪಿಂಡಸ್ಥಲವೆಂದು ಹೇಳಲ್ಪಟ್ಟಿತ್ತು ॥

ಶ್ಲೋಕಂ ॥ ಪರಮೇಶ್ವರೊ ಲೀಲಾತ್ಮ ಕೃಷ್ಟ್ವಾ ಸದ್ವಾಸನಾತ್ಮಿಕಿ।
ಚರವೋ ದೇಹಭಾವೋऽಯಂ ಪಿಂಡಶಬ್ದೇನ ಗೇಯತೇ ॥
ಟೀಕೆ ॥ × × × × × × ನಪಟಚೆಂನ ಬಂಣದ ಹಾಂಗೆ ಅಡಗಿಪ್ಪ್ಯ
ದನು ಚೆಂನ ಬಸವೇಶ್ವರನ ವಚನಂಗಳಿಂದ ಹೇಳಲ್ಪಡುತ್ತಿದ್ದಿತ್ತು ॥
ಪಲ್ಲವ ॥ ಬಿಂದುಬಿಂನಾಣದೊಳಗಂದವಿಟ್ಟಿಹ ಕಳಾ।
ನಂದಪಿಂಡೋದಯದ ಜ್ಞಾನನಿರುತಾ ॥

ಟೀಕೆ ॥ ಮಾಂಸಬಿಂದುಮಯವಪ್ಪ ಪಿಂಡವೆಂಬುದೀಗ । ಬಿಂದುವೆಂಬ ಶಬ್ದಕ್ಕರ್ಥ। ಚೈತನ್ಯಸ್ವರೂಪವಾದ ಆತ್ಮನೆಂಬುದೀಗ ಬಿಂನಾಣವೆಂಬ ಶಬ್ದಕ್ಕರ್ಥ। ಅಂತಪ್ಪ ಪಿಂಡ ಮಧ್ಯಸ್ಥವಾದ ಆತ್ಮನಲ್ಲಿ ವಪ್ಪವಾಗಿಹ ಅಖಂಡಚಿತ್ಪ್ರಭಾಲಿಂಗವೆಂಬುದೀಗ ಬಿಂದು ಬಿಂನಾಣ × × × ×

ಅಂತ್ಯ : (ತ್ರುಟಿತವಾದ ಅರ್ಧಪತ್ರ ಮಾತ್ರ) ಟೀಕೆ ॥ ಶಬ್ದ । ಶರಣನು । ನಿತ್ಯ........ಯಲಾಗಿ । ಜ್ಞಾನಸಮರಸವಾಗಿ । ಯಿದ್ದುದು ವೋದುದೆಂಬುದನರಿಯದೆ । ಶರಣಲಿಂಗವಾಗಾಚರಿಸುತಿರ್ದುದನು ಶರ..............ಶ್ಯಬ್ದಗಂಭೀರ। ಗೊಹೇಶ್ವರ ನಿಂಮ ಶರಣ ಬಸವಂಣ ಜ್ಞಾನಶೂನ್ಯವಾಗಿ ಮಹಾಲಿಂಗಲ್ಲೈಕ್ಯವಾಗಿರ್ಪನು ಬಸವಂಣನೆಂದ............ತು ಅಂಗಸ್ಥಲ ೪೪ಕ್ಕಂ ಸೇರಿದ ಪದನು ೨೫೩ಕ್ಕಂ ಲಿಂಗಸ್ಥಲ ೫೭ಕ್ಕಂ ಸೇರಿದ ಪದನು ೩೯೭ಕ್ಕಂ ಉಭಯಂ ೫೫೦ಕ್ಕಂ ಯೇಕೋತ್ತರ ಶ..........

ವಿಷಯ : ನೂರೊಂದು ಸ್ಥಲ ವಿವರಣೆ.

ವಿಶೇಷ : ೯೮, ೧೩೫, ೧೬೭ ನೆಯ ಪತ್ರಗಳು ಮುರಿದುಹೋಗಿವೆ. ಶಕಟರೇಫ ಪ್ರಯೋಗವಿದೆ. ಇದರೊಂದಿಗೆ ಕರಣಹಸಿಗೆ (ಸಟೀಕು), ಮಿಶ್ರಾರ್ಪಣ (ಸಟೀಕು) ಇತ್ಯಾದಿ ಇತರ ೧೫ ಗ್ರಂಥಗಳಿವೆ.

175

ಕೆ. ೨೯೯/೨	ಏಕೋತ್ತರ ಶತಸ್ಥಲ	ಹಾಡು, ಸೂತ್ರ
೮.೫"×೧.೫"	ಮಹಲಿಂಗ	೧೪೩೦
೧–೪೪ ಪತ್ರ	೧೨ ಪಂಕ್ತಿ	೪೯ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥
ಪಿಂಡಸ್ಥಲ ॥ ರಾಗ ಮಧುಮಾದವಿ । ತಾಳ ರೂಪಕ ।
ಪಲ್ಲವ ॥ ಬಿಂದುಬಿಂನಾಣದೊಳಗಂದವಿಟ್ಟಿಹ ಕಳಾ
ನಂದ ಪಿಂಡೋದಯದಜ್ಞಾನನಿರತಾ ॥
ಪದ ॥ ಕಾರಮೇಘದೊಳು ಮಿಂಚಡಗಿ ತೋರುವ ತೆರದಿ
ನೀರೊಳಡಕಂಗೆಯ್ದ ಕಿಚ್ಚಿನಂತೆ ॥
ಬೀರುತಿಹ ಪಳರಸದೊಳಿಪ್ಪನವರುಚಿಯಂತೆ
ವಾರಣದ ಮಸ್ತಕದ ಮುತ್ತಿನಂತೆ ॥ ೧ ॥

ಅಂತ್ಯ: ಜ್ಞಾನಶೂನ್ಯಸ್ಥಲ ॥ ೬ ॥ ಶಬ್ಧಂ ನಿಃಶಬ್ದವಾಗಿ ನಿಃಶಬ್ದವನಾಹತವಾಗಿ ಶಬ್ದನಿಃಶಬ್ದವೆಂಬ ಬುದ್ಧಿ ನಿರ್ವ್ವಯಲಾಗಿ ಯಿದ್ದುದಂ ಹೋದುದೆಂಬುದನರಿಯದೇ ವೇಱಿಗೆಟ್ಟ ನಿಃಶಬ್ದ ಗಂಭೀರ ಗೊಹೇಶ್ವರ ನಿಂಮ ಬಸವಂಣಾ ॥೭॥ ಅಂತೂ ಐಕ್ಯಸ್ಥಲಕ್ಕೆ ಸಂಬಂಧಿಸಿದ ಲಿಂಗಸ್ಥಲ ೯ ಕ್ಕಂ ಸೇರಿದ ಪದನು ೪೭ಕ್ಕಂ । ಅಂತೂ ಯೇಕೋತ್ತರಶತಸ್ಥಲ ೧೧೧ಕ್ಕಂ ಪದನು ೫೫೧ಕ್ಕಂ ಸೂತ್ರ ೧೦೦ಕ್ಕಂ ಸಂಪೂರ್ನ್ನ ಮಂಗಳಮಹಾ ಶ್ರೀ.

ವಿಷಯ: ವೀರಶೈವ ಸಿದ್ಧಾಂತ.

ವಿಶೇಷ: ಕೇವಲ ಸೂತ್ರ, ಹಾಡುಗಳು ಮಾತ್ರವಿವೆ. ವಚನಗಳಿಲ್ಲ. ಇದರೊಂದಿಗೆ ಕರಣಹಸಿಗೆಯ ಗ್ರಂಥವೂ ಇದೆ. ಶಕಟರೇಫ ಅಲ್ಲಲ್ಲಿ ಉಂಟು.

176

ಕೆ. ೪೫೦/೨	ಏಕೋತ್ತರ ಶತಸ್ಥಲ	ಸೂತ್ರ, ಹಾಡು, ವಚನ
೭.೫" × ೧.೮"	ಮಹಲಿಂಗ	೧೪೩೦
೧೨೨–೨೨೬ ಪತ್ರ	೧೪ ಪಂಕ್ತಿ	೫೬ ಅಕ್ಷರ

ಆದಿ: ಶ್ರೀ ಗುರುಬಸವಲಿಂಗಾಯ ನಮಃ । ನಿರ್ವಗ್ನಮಸ್ತು ಸುಭಮಸ್ತು ಏಕೋತ್ತರಶತಸ್ಥಲ ॥ ಗದ್ಯ ॥ ಸ್ವಸ್ತಿ ಸಮಸ್ತಭುವನಜನ ತಿಮಿರಹರಣ ಕಾರಣ ಸ್ವರೂಪರುಂ ಭಕ್ತದೇಹಿಕ ದೇವರುಂ × × × ಭಕ್ತಿಭಂಡಾರಿ ಜಂಕ್ಕಣನು ಆ ಶ್ರೀ ಗುರುರಾಯಂಗೆ ಬಿಂನಪಂಗೆಯ್ದು ಪರಮ ಗುರುವೆ ನಿಂಮಡಿಗಳು ಯೆಂನ ಪೂರ್ವ್ವಜನ್ಮ ನಿವೃತ್ತಿಯಂ ಮಾಡಿ ಪುನಾಜ್ಜಾತ ನೆನಿಸಿ ಅಂಗದಲ್ಲಿ ಲಿಂಗಪ್ರತಿಷ್ಟೆಯ ಮಾಡಿ ಪ್ರಣವಪಂಚಾಕ್ಷರಿಯ ಪ್ರಾಣಸ್ಥಳದಲ್ಲಿ ಸ್ಥಾಪಿಸಿ ಯೆಂನ ಕೃತಾರ್ತ್ಥನ ಮಾಡಿದಿರಿ ದೇವಾ ಯಿಂನು ಯೆಂನ ಷಡಂಗವೂ ಲಿಂಗದಲ್ಲಿ ಲೀಯ್ಯವಹ ಭೇದವ ನಿರೂಪವ ಕೊಟ್ಟು ಪಾಲಿಸೂದೆಂತೆದರೆ । ಆ ಶ್ರೀ ಗುರುಸ್ವಾಮಿ ತಂಮ ಪರಮಜ್ಞಾನಾನುಭವ ಪ್ರಸಂಗ ಪ್ರಕಾಶದಿಂ ಷಡುಸ್ಥಲವನು ಬಸವರಾಜ ದೇವರು ಚೆಂನಬಸವರಾಜ ದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಪರಮವಾಕ್ಯಾಮೃತವಪ್ಪ ವಚನಂಗಳಿಂದ ಆ ತತ್‌ಶಿಷ್ಯಂಗೆ ಬೋಧಿಸುತ್ತಿರಲು ಆ ಷಡುಸ್ಥಲದಲ್ಲಿ ॥ ಅಂಗಸ್ಥಲ ೪೪ ಲಿಂಗಸ್ಥಲ ೫೭ । ವುಭಯಸ್ಥಲ ಯೇಕೋತ್ತರಶತಸ್ಥಲಂಗಳಾದವು । ಆ ಭೇದವೆಂತೆಂದಡೆ ಪ್ರಥಮದಲ್ಲಿ ಪಿಂಡಸ್ಥಲ ॥ ವಚನ ॥ ಕಲ್ಲೊಳಗಣ ಪಾವಕನಂತೆ । ವುದಕದೊಳಗಣ ಪ್ರತಿಬಿಂಬದಂತೆ.

ಅಂತ್ಯ : ಮಹಲಿಂಗದೇವರು ತಂಮ ದಿವ್ಯಜ್ಞಾನಾನಂದ ಸಿದ್ಧ ವರ ಪ್ರಸಂಗ ಪ್ರಸಾದವನೂ ನಿಜತತ್ಶಿಷ್ಯ ಭಕ್ತಿಭಂಡಾರಿ ಜಕ್ಕಂಣಾಚಾರ್ಯ್ಯಂಗೆ ಸತ್ಪ್ರೇಮ ಮಹಾನುಭಾವ ಸಂಬೋಧೆ ಸಂಬಂಧನಿರೂಪಣ ಕಾರಣಾರ್ತ್ಥ ವಿರಚಿತಮಪ್ಪ ಯೇಕೋತ್ತರ..................ದ್ವಾದಶ ಪರಿಚ್ಛೇದ ॥ ಯೇಕೋತ್ತರ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ॥

ವಿಷಯ : ನೂರೊಂದುಸ್ಥಲ ಪ್ರತಿಪಾದನೆ.

ವಿಶೇಷ : ೧೭೪ ನೆಯ ಪತ್ರ ಲುಪ್ತ. ಹಾಡು, ಸೂತ್ರ, ವಚನಗಳಿಂದ ನೂರೊಂದು ಸ್ಥಲದ ವಿವರವನ್ನೀಯುವುದೇ ಈ ಗ್ರಂಥದ ವೈಶಿಷ್ಟ್ಯ. ಶಕಟರೇಫ ಪ್ರಯೋಗವಿದೆ. ಇದರೊಂದಿಗೆ ಪ್ರಭುದೇವರ ಟೀಕಿನ ವಚನ ಗ್ರಂಥವೂ ಇರುತ್ತದೆ. ಅಂಚಿನಲ್ಲಿ ಪ್ರತಿ ಸ್ವಲ್ಪ ತ್ರುಟಿತವಾಗಿದೆ.

177

ಕೆ. ೩೨೨/೩	ಏಕೋತ್ತರ ಶತಸ್ಥಲ	ವಾರ್ಧಕ ಷಟ್ಪದಿ
೧೩"×೭"	ಮೊಗ್ಗೆಯ ಮಾಯಿದೇವ	ಸು ೧೮೩೦
೭೪–೩೧ ಪತ್ರ	೧೭ ಪಂಕ್ತಿ	೪೭ ಅಕ್ಷರ

ಆದಿ: ಶ್ರೀಗುರು ಬಸವಲಿಂಗಾಯ ನಮಃ॥ ಮೊಗ್ಗೆಮಾಯಿದೇವಾಚಾರ್ಯರು ನಿರೂಪಿಸಿದ ಯೇಕೋತ್ತರ ಶತಸ್ಥಲದ ವಾರ್ಧಿಕ ॥

ಪಲ್ಲ॥ ದೇವಸಭೆಯೊಳಗೆ ದೇವರದೇವನೊಲಿದು ಗಿರಿ
ಜಾವನಿತೆಗೊರೆದನೇಕೋತ್ತರ ಶತಸ್ಥಲದ
ಭಾವದನುಭಾವಮಂ ಭೂಮಿಯೊಳ್ಪೇಳ್ದ ಬಸವೇಶ ಸದ್ಭಕ್ತ ಜನಕೆ॥××

ಅಂತ್ಯ: ವೀರಶೈವಾಂಬುರಾಸಿಯೊಳೊಗೆದ ವ್ರತ ನೇಮ
ಪಾರ ರತ್ನಂಗಳೊಳನರ್ಘ್ಯಮಣಿ ನೂರೊಂದ
ನಾರೈದು ತೆಗದು ಪರಿವಿಡಿದೋರಣಂಗೊಳಿಸಿ ಸಾರದನುಭವಸೂತ್ರವಾ
ಹಾರವಿಸಿ ಹರುಷದಿಂ ಪವಣಿಸಿದ ಹಾರವ ವಿ
ಕಾರವಳಿದಿರ್ದ ಶರಣರ್ಗೆ ತೊಡಲಿತ್ತನು
ದ್ಧಾರ ಬಸವೇಶ ನಂಬಿದ ಶರಣ ಸಹ ಕುಳವಾಸ
ಭಾಸನೇಕಫಣನಾಶನೂ ॥ ೨ ॥

ಮೊಗ್ಗೆಯ ಮಾಯಿದೇವಯ್ಯಗಳು ನಿರೂಪಿಸಿದ ಏಕೋತ್ತರ ಶತಸ್ಥಲಂಗಳು ಸಮಾಪ್ತಂ ಮಂಗಳಮಹಾ ಶ್ರೀ॥

ವಿಷಯ : ವೀರಶೈವ ಸಿದ್ಧಾಂತ ನೂರೊಂದು ಸ್ಥಲದ ವಿವರ.

ವಿಶೇಷ : ಇದರೊಂದಿಗೆ ಮಿಶ್ರಾರ್ಪಣದ ಟೀಕು, ಜಪಲಕ್ಷಣ ಮೊದಲಾದ ಗ್ರಂಥಗಳಿವೆ.

178

ಕೆ. ೧೮೮/೨	**ಏಕೋತ್ತರ ಶತಸ್ಥಲದ ಟೀಕೆ**	ಹಾಡು, ಟೀಕೆ
೧೭.೬"×೨"	?	?
೧–೫ ಪತ್ರ	೧೧ ಪಂಕ್ತಿ	೯೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ॥ ಯೇಕೋತ್ತರಶತಸ್ಥಲದ ಟೀಕೆ॥ ಶ್ರೀ ಐಶ್ವರಸ್ಯ ಸಮಗ್ರಸ್ಯ ವೀರಸ್ಯ ಯಶಃ। ಶ್ರೀಯಃ
ಜ್ಞಾನವೈರಾಗ್ಯಯೋಶ್ಚೈವಾ ಷಣ್ಣಾಂ ಭಗ॥ ಇತೀರಿತಃ
ಯೆಂದು ಶ್ರೀ ಷಡ್ಗುಣೇಶ್ವರ್ರವನುಳ್ಳಂಥ ಗುರು ಶಿಷ್ಯನ ಜ್ಞಾನಂದಕಾರಕ್ಕೆ ಬಾಲಭಾಸ್ಕರನಾದಂಥ ಬಸವ ಬಕಾರವೆ ಗುರು ಸಕಾರವೆ ಲಿಂಗ ವಕಾರವೆ ವರ್ತಿಸುವಡೆ ಜಂಗಮ ಯಿಂತೀ ಗುರು ಲಿಂಗ ಜಂಗಮ ಸ್ವರೂಪವಾದ.

ಅಂತ್ಯ : ॥ಟೀಕು॥ ಕರಕಮಲವ ಹಸ್ತಾರವಿಂದವನು ಶಿರದೊಳಿಟ್ಟು ಶಿಷ್ಯನ ಶಿರಸ್ಸಿನಲಿ ವೇದದೀಕ್ಷೆಯಿಂದೆ ಮಡಿಗಿ ದುರಿತ ಕೆಟ್ಟಂಥ ದುಃಸ್ಕೃತದ ಕೆಟ್ಟ ಕೃತ್ಯದ ಲಿಪಿಯ..................ವಿಧಿಲಿಕಿತವನು ನಷ್ಟವ ಮಾಡಿ ನರಜನ್ಮದ ಮನುಷ್ಯಜನ್ಮದ ಪೂರ್ವಾಶ್ರಯ ಜಾತಿ ವರ್ನಾಶ್ರಮ ಕುಲಗೋತ್ರ ನಾಮ ಸೀಮೆ ಬಂದೆಬಟ್ಟೆ ಕರಣಾದಿ ಪೂರ್ವಾಶ್ರಯದ ದೋಷಮ

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಇದು ಅಸಮಗ್ರ. ಆದಿಯ ಪತ್ರ ೧ನೇ ಸಂಖ್ಯೆಯದಾಗಿದ್ದು ಜೊತೆಯಲ್ಲಿ ತ್ರುಟಿತಗಳಾದ ಸಂಖ್ಯಾರಹಿತ ೪ ಪತ್ರಗಳಿದ್ದು ಒಟ್ಟು ೫ ಪತ್ರಗಳ ಗ್ರಂಥ. ಶಕಟರೇಫವನ್ನು ಬಳಸಿದೆ. ಈ ಗ್ರಂಥದೊಂದಿಗೆ ಪದಮಂತ್ರಗೋಪ್ಯ, ಪ್ರಭುದೇವರ ಮಂತ್ರಗೋಪ್ಯ ಮೊದಲಾದ ಇತರ ೧೫ ಗ್ರಂಥಗಳಿವೆ.

179

ಕೆ. ೬೨೮ ಏಕೋತ್ತರ ಶತಸ್ಥಲ (ಸಟೀಕು) ಶ್ಲೋಕ, ಟೀಕು

೧೦.೬"×೨.೧" ? ?

೮೧–೧೯೪ ಪತ್ರ ೯ ಪಂಕ್ತಿ ೫೦ ಅಕ್ಷರ

ಆದಿ : ಶ್ರೀಗುರು ಕಪಿಲಸಿದ್ಧಮಲ್ಲೇಶ್ವರಾ...

ಗುರೌ ಲಿಂಗೇ ಜಂಗಮೇ ಚ ಪ್ರಸಾದೇಪ್ಯೇಕದರ್ಶನಂ।
ಯತ್ತದಾಚರಣಂ ಪ್ರೋಕ್ತಂ ವೀರಶೈವಮಹಾಗಮೇ॥
ಗುರೌ ಗುರುವಿನಲ್ಲಿಊ ಲಿಂಗೇ ಲಿಂಗದಲ್ಲಿಊ ಜಂಗಮೇ ಚ ಜಂಗಮುದಲ್ಲಿಊ ಪ್ರಸಾದೇಪಿ ಪ್ರಸಾದದಲ್ಲಿ ಯತ್ ಆವುದಾನೊಂದು ಏಕದರ್ಶನಂ ಏಕವಾಗಿ ಕಾಣುಹ ಉಂಟು ತತ್ ಆದು ವೀರಶೈವಾಗಮೇ ವೀರಶೈವಶಾಸ್ತ್ರದಲ್ಲಿಯ ಆಚರಣಂ ಆಚರಣವೆಂದು ಪ್ರೋಕ್ತಂ ಹೇಳಲುಪಟ್ಟುತ್ತು ॥ ೧ ॥

ಅಂತ್ಯ : ಸ್ವಪ್ನರಾಜ್ಞಸ್ಥಲಂ॥ ದಿಕ್ಕಾಲಾದ್ಯನವಚ್ಛಿನ್ನ ತೇಜೋವಿಗ್ರಹವತ್ವತಃ।
ಸ್ವಪರಂ ಜನ ಜಾನಾತಿ ಸ್ವಪರಾಜ್ಞಸ್ಥಲಂ ತತಃ॥

ಅರ್ಥವೊಂದೇ ಪದನು ದಿಕ್ಕು ದಿಕ್ಕುಗಳೂ ಕಾಲಕಾಲವೂ ಆದಿ ಮೊದಲಾಗಿ ವುಳ್ಳವಱಿಂದ ಅನವಚ್ಛಿನ್ನ..................ತೇಜೋವಿಗ್ರಹವತ್ವತಃ ತೇಜಸ್ಸೆಂಬ ಮೂರ್ತಿವುಳ್ಳಾತನಹದಱಿಂದ ಸ್ವಂ ತಂನ್ನನೂ ಪರಂ ಚ ಪರನನೂ ನ ಜಾನಾತಿ ಅಱಿಯನು ತತಃ ಆದು ಕಾರಣದಿಂದ ಸ್ವಪ್ನರಾಜ್ಞಸ್ಥಲಂ ತಾನಃ ಪರನೆಂದು ಅಱಿಯದಾತನೆಂಬ ಸ್ಥಲವು ॥ ೧ ॥

ವಾಸಿಷ್ಠೆ ॥ ಆತ್ಮತಾ ಪರತೇತ್ಯುಕ್ತ್ವಾ ನಿರ್ವಿಭಾಗ ಜಗಜಗತ್ ಸ್ಥಿತೇ।
ಏಕಾನೇಕ ವಿಭಿನ್ನಸ್ಸನ್ ಸಂವಿನ್ಮಾತು ಪರಸ್ವಯಂ ॥
ಜಗತ್ ಜಗತ್ತಿನಲ್ಲಿ ಸ್ಥಿತೇ ಇದ್ದಂಥಾ ಆತ್ಮತಾ ಪರತೇ ಆತ್ಮತ್ವವು ಪರತ್ವವು ಯೆಂಬ ಈ ಯೆರಡನೂ ತ್ಯಕ್ತ್ವಾ ಬಿಟ್ಟು ನಿರ್ವ್ವಿಭಾಗ ಭೇದವಿಲ್ಲದಾತನಾಗಿ ಏಕಾನೇಕ ವಿಭಿನ್ನ ಏಕಾನೇಕ ವೊಂದೂ ಹಲವೂ ಯೆಂಬ ಈ ವಸ್ತುಗಳಿಂದವೂ ವಿಭಿನ್ನಸ್ಸನ್ ಬೇಱಾದಾತನಾಗುತಲು ಸ್ವಯಂ ತಾನೆ ಸಂವಿನ್ಮಾತೃತ ಜ್ಞಾನಸ್ವರೂಪನಾದಪರಃ ಪರಮಾತ್ಮನಹನು॥ ೨॥

ವಾಸಿಷ್ಠೇ ಸಾಹಂ ತತ್ವಂ ತ್ವಮಿತ್ಯಾದಿ ಸರ್ವತತ್ವಮಿಹಾಚರೇ।
ನ ಚೇಹತ್ವಾನ್ಯದೇಶತ್ವೆ ಶಂಖತ್ವಮಿವ ಕಜ್ಜಲೇ॥ ಅಹಂತತ್ವಂ ಅ.

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಪಿಂಡಸ್ಥಲಾದಿ ಪರಸ್ಥಲ ಪರ್ಯಂತವಾಗಿವೆ. ೧೩೭ ರಿಂದ ೧೫೨ ಪತ್ರಗಳು ಲೋಪವಾಗಿವೆ. ಶಕಟರೇಫವನ್ನು ಬಳಸಿದೆ. ೧೫೩ ರಿಂದ ೧೯೪ ಪೂರ್ತಿ ಪತ್ರಗಳಿವೆ. ೧೧೧ ರಿಂದ ೧೧೫ ಮತ್ತು ೧೧೭, ೧೧೮, ೧೨೬, ೧೨೭ ಪತ್ರಗಳು ಹುಳು ಹಿಡಿದಿವೆ. ೧೯೩, ೧೯೪ ಈ ಪತ್ರಗಳು ಅಂಚಿನಲ್ಲಿ ಸ್ವಲ್ಪ ಭಾಗ ಹೋಗಿದೆ.

180

ಕೆ. ಎ. ೭೭	ಏಕೋತ್ತರ ಶತಸ್ಥಲ (ಸಟೀಕು)	ಶ್ಲೋಕ, ಟೀಕು
೧೨.೪″ × ೭.೮″	ಶ್ರೀ ಗಿರೀಂದ್ರ	?
೧–೨೫೧ ಪತ್ರ	೨೦ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಗುರುಲಿಂಗಾಯ ನಮಃ ॥ ಏಕೋತ್ತರ ಶತಸ್ಥಲ ಪ್ರಾರಂಭಃ ॥

ಅಸ್ತಿ ಸ್ವಸ್ತಿಕರೋ ಭೂಮೇರಾಕಾರಶ್ಶಿವಸಂವಿದಾಂ ।
ನಾಮ್ನಾ ವಾರಾಣಸೀನಾಥೋ ನಿಯಮಾದಿ ಗುಣೈರ್ಗುರುಃ ॥ ೧ ॥

ಭೂಮೇಃ–ಭೂಮಿಗೆ । ಸ್ವಸ್ತಿಕರಃ = ಸ್ವಸ್ತಿ–ಮೋಕ್ಷವನು । ಕರಃ–ಮಾಡುವಾತನಾಗಿ । ಸ್ವಸ್ತಿ–ಮೋಕ್ಷಲಕ್ಷ್ಮಿ । ಕರಃ–ಹಸ್ತದಲ್ಲಿ ಉಳ್ಳಾತನಾಗಿ । ಶಿವ–ಪರಮೇಶ್ವರನ ವಿಷಯವಾದ । ಸಂವಿದಾಂ—ಜ್ಞಾನಂಗಳಿಗೆ । ಆಕರಃ—ಕರುಣೆಯಾದಾತನಾಗಿ । ನಿಯಮಾದಿ ಗುಣೈಃ । ನಿಯಮ–ವೀರಶೈವಾಚಾರ ನಿಯಮಂಗಳು । ಆದಿ–ಮೊದಲಾಗಿವುಳ್ಳ । ಗುಣೈಃ–ಗುಣಂಗಳೊಡನೆ ಕೂಡಿದಾತನಾಗಿ । ನಾಮ್ನಾ–ಹೆಸರಿನಿಂದ । ವಾರಾಣಸೀನಾಥಃ–ವಾರಾಣಶಿ ಒಡೆಯನೆಂಬ । ಗುರುಃ–ಶ್ರೀ ಗುರುವು । ಅಸ್ತಿ–ಉಂಟಾಗುತ್ತಿಹನು ॥ ಆ ಶ್ರೀ ಗುರು ವಾರೆಂದಡೆ ॥

ಶಿವ ಏವ ಸ್ವಯಂ ಲೋಕಾನ್ಭವ ಸಿಂಧೌ ನಿಮಜ್ಜಿತಃ ।
ಉದ್ಧರ್ತುರ್ಮತೀರ್ಣೋತ್ರ ವಾರಾಣಸಿ ವರಾತ್ಮನಾ ॥ ೨ ॥

× × × ×

ಶ್ರೀ ವೀರಶೈವಸಿದ್ಧಾಂತೇ ಏಕೋತ್ತರ ಶತಸ್ಥಲೀ ।
ಪ್ರಸಿದ್ಧಾ ಸದ್ಗುರೊ ತಸ್ಯಾಸ್ತ್ವತ್ತೋ ವಿವಿದಿಷಾಸ್ತಿ ನಃ ॥ ೭ ॥

× × × ×

ಇತಿ ವಿಜ್ಞಪ್ತಿಮಾಕರ್ಣ್ಯ ತಸ್ಯ ವಾರಾಣಸೀಶ್ವರಃ
ಸ್ವಾಂತೇವಾಸಿನಮಗ್ರಣ್ಯಂ ಶ್ರೀ ಗಿರೀಂದ್ರಂ ವ್ಯಲೋಕಯತ್ ॥ ೮ ॥

× × × ×

ಸ ಚ ವ್ಯಜಿಜ್ಞಿಪತ್ಪ್ರಾಜ್ಞೋ ಜಕ್ಕಣಾರ್ಯೈಣ ಧೀಮತಾ|
ಸಂಗೃಹೀತಾಮಿಮಾಂ ಸ್ವಾಮಿನ್ ವ್ಯಾಕರೋಮಿ ತ್ವದಾಜ್ಞಯಾ ॥೯॥

× × × ×

ಅಂತ್ಯ : ಶಾರ್ದೂಲವಿಕ್ರೀಡಿತವೃತ್ತ ॥

ವಾರಾಣಸ್ಯಧಿಪೋಪದೇಶ ಸುಲಭಾಂ ಶ್ರೀ ವೀರಶೈವಾಗಮೇ
ಸಿದ್ಧಾ ಮೇಕಶತಸ್ಥಲೀ ಮಯತಯಾ ಬದ್ಧಾ ಮಹಾಮಂಜರೀಂ|
ಮದ್ವ್ಯಾಖ್ಯಾ ಮಕರಂದ ಗಂಧ ಮಧುರಾಮಾಸಾದಯಂತೋಽನ್ವಹಂ
ಭೂ ಯಾಸಂ ಭುವಿ ಭಕ್ತಭೃಂಗನಿವಹಾ ಸತ್ಸಾಮರಸ್ಯೋದಯಾಃ ॥
ಹೇ ವಾರಾಣಸ್ಯಾಧಿಪ–ಎಲೆ ವಾರಣಸಿ ಒಡಯನೆ ತೇ = ನಿನ್ನ

× × × ×

ವಾರಾಣಸೀಂದ್ರ ಶಿಷ್ಯೇಣ ಶ್ರೀ ಗಿರೀಂದ್ರೇಣ ಸಂಭೃತಾ|
ವೀರಶೈವಾಗಮೇ ವ್ಯಾಖ್ಯಾ ಜಯತ್ವಾಚಂದ್ರತಾರಕಂ ॥

ವಾರಾಣಸೀಂದ್ರ ಶಿಷ್ಯೇಣ–ವಾರಾಣಸಿ ಒಡೆಯನ ಶಿಷ್ಯನಾದಂಥ। ಶ್ರೀ ಗಿರೀಂದ್ರೇಣ–ಶ್ರೀ ಗಿರಿನಾಥನಿಂದ। ವೀರಶೈವಾಗಮೇ–ವೀರಶೈವ ಶಾಸ್ತ್ರದ ವಿಷಯವಾಗಿ| ಸಂಭೃತಾಃ–ಸಂಪಾದಿಸಲ್ಪಟ್ಟದಾದ| ವ್ಯಾಖ್ಯಾ–ವ್ಯಾಖ್ಯಾನವು| ಆಚಂದ್ರತಾರಕಾ-ಚಂದ್ರನಕ್ಷತಾಗಳುಳ್ಳಲ್ಲಿ ಪರ್ಯಂತವೂ | ಜಯತು ಸರ್ವೋತ್ಕೃಷ್ಟವಾಗಲಿ ॥

ಸಮಾಪ್ತಮಿದಂ ವೀರಶೈವಶಾಸ್ತ್ರಂ ವ್ಯಾಖ್ಯಾನಂ ॥ ಶ್ರೀ ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಕವರ್ಷ ೧೮೧೨ ಸಂದ ಸಿದ್ಧಾರ್ಥಿ ಸಂವತ್ಸರದ ಆಶ್ವಯುಜ ಬಹುಳ ೧೦ಲ್ಲೂ। ಶಾಂತದೇವರಿಗೆ। ಲಿಂಗರಸಯ್ಯನು ಬರೆದುಕೊಟ್ಟ ಏಕೋತ್ತರ ಶತಸ್ಥಲಿಗೆ। ಮಂಗಳಮಹಾ ॥ ಶ್ರೀ ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಸಮಗ್ರವಾಗಿದೆ. ಅಕ್ಷರಗಳು ಸ್ಫುಟವಾಗಿವೆ.

181

ಕೆ. ೨೬೦/೧	ಏಕೋದೇವರ ತ್ರಿವಿಧಿ	ತ್ರಿಪದಿ
೧೭.೩" × ೧.೬"	?	?
೧–೯ ಪತ್ರ	೬ ಪಂಕ್ತಿ	೬೪ ಅಕ್ಷರ

ಆದಿ : ಶ್ರೀಗಣದ್ಧಿಪತೆಯಂ ನಮಃ ॥ ಯೇಕೋದೇವರ ತ್ರಿವಿಧಿ ಬರೆಯುಥಕ್ಕೆ ಶುಭಮಸ್ತು ॥

ಶ್ರೀ ಗುರುವೆ ಕರುಣಾಂಮೃತ ಸಾಗರವೆ ಅಭಯಕರಾ
ಶ್ರೀ ಗುರುವೆ ಮುಕ್ತಿಪ್ರದ ಗುರುವೆ ಸಲಹೆಂದು
ಶ್ರೀ ಗುರುವಿನ ಪದವ ಸ್ತುತಿಸುವೇ ॥ ೧ ॥
ಕೋಟಿದೇವನ ಶಿರವ। ಪಾಟಿಸುವ ಪದದಿಂದಾ
ಲಿ....ಟಿ ಘೆಘೆರರೇ। ಶಿರಮಾಲೆ ಕರದ ಕ
ರೋಟಿಯಂ ಮೆರೆದ ಪ್ರಭು ಶರಣು ॥ ೨ ॥
ಏಕೋದೇವನ ಪದವ ಏಕವಾಗರ್ಚಿಸದೆ
ಕಾಕುದೈವಗಳ ಭಜಿಸುತಿರೆ ವರವಿಧಿ
ಯೇಳ್ಕೊಪದೊಳಿರುವರ್ಮತಿಯ್ಯೊ ॥ ೩ ॥

ಅಂತ್ಯ : ಯೇಕೋಥೇವನ ತ್ರಿವಿಧೆ ಕಕ್ಷು ಪರವಾಧಿಗಳಾ
ಮುಖನ ಮಾಲೆ ಮೆರೆಯಿತು ಲೋಕದೊಳು
ಹಂಕಾರ ರೂಪ ಸಲಹೆಂನ್ನಾ ॥ ೧೩೦ ॥
ವಚನಾ । ಯಿಂತು ಮಹಥೇವ ಚರಣಾರವಿಂಥ ಮಕರಂಥಮಹ ಶ್ರೀಶ್ರೀ

ವಿಷಯ : ಶಿವಾಧಿಕ್ಯ ಸ್ಥಾಪನೆ.

ವಿಶೇಷ : ಎಲ್ಲಾ ಪತ್ರಗಳನ್ನೂ ಹುಳು ತಿಂದಿರುವುದರಿಂದ ತುಂಬ ಶಿಥಿಲವಾಗಿದೆ. ಮೂರನೆಯ ಪತ್ರದ ಕೊನೆಯ ಭಾಗ ಮುರಿದುಹೋಗಿದೆ. ಈ ಪ್ರತಿಯೊಂದಿಗೆ ಉರಿಲಿಂಗ ಪೆದ್ದಯ್ಯನ ಕಥೆಯಿರುವ ೧೫ ಪತ್ರಗಳಿವೆ.

182

ಕೆ.ಎ. ೩೦೭	**ಏಕೋರಾಮೇಶ್ವರ ದೇವರ ಪುರಾಣ**	ವಾರ್ಧಕ ಷಟ್ಪದಿ
೧೩.೨"×೮.೨"	ನಂಜಣಾರ್ಯ	?
೪೩೦ ಪುಟ	೨೧ ಪಂಕ್ತಿ	೧೮ ಅಕ್ಷರ

ಆದಿ : ರಾಗ, ಶಂಕರಾಭರಣ॥ ಹರದಿ ಹಳ್ಳಿಯ ನಂಜಣಾಚಾರ್ಯ ಗುರುಮೂರ್ತಿ ನಿರೂಪಿಸಿದ ಆರಾಧ್ಯ ಚಕ್ರವರ್ತಿ ಏಕೋರಾಮೇಶ್ವರ ದೇವರ ಪುರಾಣ ॥
॥ ಪಲ್ಲವ ॥ ಶ್ರೀಕರೇಕೋರಾಮ ಗುರುವರಚರಿತ್ರವನ
ನೇಕವಿಧ ಭಕ್ತಿಯಿಂ ವರ್ನಕಮದಾಗಿ ಮಿಗೆ
ಮಾಕುಮಾರ ಪ್ರಹರ ಭೋಗಮಲ್ಲಾಣತಿಯೊಳೊರದೆ ಶರಣರ್ಮೆಚ್ಚಲು ॥

॥ ಪದ ॥ ಶ್ರೀ ಕುವಲಯಾಪ್ತ ಚೂಡಾರತ್ನ ತದ್ರೂಪ
ಲೋಕತ್ರಯಾರಾಧ್ಯ ತ್ರಿಮಲ ಪ್ರಹರಣ ಸುವಿ
ವೇಕಿ ಶಿವಸಮಯ ರತ್ನಾಕರ ಕಲಾಮಾಲಿ ಪರಸಮಯ ತಿಮಿರಹಂಸ
ನಾಕಾಘದೂರ ಷಡ್ಲಿಂಗಾವರಣ ಸಚ್ಚಿ
ದಾಕಾರ ವೇದಾಗಮಾದಿ ಬಹು ಶಾಸ್ತ್ರಜ್ಞ
ಶ್ರೀ ಕಕೀಕೋರಾಮ ಮದ್ಗುರು ಸ್ವಾಮಿ ಜಯಜಯ ಕೃಪಾರತ್ನಾಕರ ॥ ೧ ॥

ಅಂತ್ಯ : ಈ ಮಹಾಕೃತಿ ತಂತ್ರ ವೇದ ಪೌರಾಣಾರ್ಥ
ರಾಮಣೀಯಕವಾಗಿರಲ್ಕರುಣದಿಂ ಸಿದ್ಧ
ರಾಮಗುರುವರನೆನ್ನ ಹೃನ್ಮಧ್ಯದೊಳಗಿರಿಸೆ ತಾನು ಪ್ರಸನ್ನನಾಗಿ
ಪ್ರೇಮದಿಂ ಹರದಿಹಳ್ಳಿಯ ನಂಜಣಾರ್ಯ ಜಿತ
ಕಾಮ ಸತ್ಶ್ರೀರಕದೊಳುಸುದರ್ನತ್ತ್ಯಾದರದೆ
ರಾಮನಾಥಾರ್ಯ ಪೌರಾಣ ಸತ್ಕಥೆಯೊಳಿಂತಿದು ವರಚತುಃಕಾಂಡವು ॥ ೭೦॥
ಕೃಷ್ಣ ಕಂಧರ ಕೃಷ್ಣವರ್ಣಾಂಗನಾಲೋಲ
ಕೃಷ್ಣಾಸುರಪ್ರಹರ ಕೃಷ್ಣಕಂಧರಹಾರ
ಕೃಷ್ಣ ಕಂಧರ ಶಯನ ನಯನ ಕೀಲಿತ ಪಾದ ಕೃಷ್ಣದೇವರ ಮಸ್ತಕ
ಕೃಷ್ಣಜೀಮೂತವಾಹನ ಕೃಷ್ಣ ಸಕಲತ್ರ
ಕೃಷ್ಣಕಂಧರ ಗಮನ ಜನಕೋಷ್ಣಕರ ತನಯ
ಕೃಷ್ಣ ಕಾದಂಬಿನೀ ಪಟುಪವನ ಕೃಷ್ಣವರ್ತ್ಮೇಂದು ಸೂರಾಕ್ಷ ಜಯತು ॥ ೭೧॥

ಅಂತು ಸಂಧಿ ೧೬ ಕ್ಕಂ ಪದನು ೧೪೬೩ ಕ್ಕಂ.

ಏಕೋರಾಮೇಶ್ವರದೇವರ ಪುರಾಣ ಸಮಾಪ್ತ ಶುಭಮಸ್ತು ಶೋಭನಮಸ್ತು ನಿರ್ವಿಘ್ನಮಸ್ತು ಕಲ್ಯಾಣಮಸ್ತು ನಮಸ್ತೆ ನಮಸ್ತೆ ನಮಸ್ತೆ ಶ್ರೀ ರುಧಿರೋದ್ಗಾರಿ ಸಂವತ್ಸರದ ವೈಶಾಖ ಶು ೭ ಶನಿವಾರದಲು ಪುಷ್ಪದ ದೇವರ ಕೊಮಾರರು ಮರಿಚೆನ್ನವೀರದೇವರು ನಂದೀಶ್ವರ ದೇವರಿಗೆ ಏಕೋರಾಮಿ ತಂದೆಗಳ ಪುರಾಣ ಬರೆದರು—ಏಕೋರಾಮಿ ತಂದೆಗಳ ಪುರಾಣ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಏಕೋರಾಮೇಶ್ವರ ದೇವರ ಚರಿತ್ರೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪದ್ಯಗಳಲ್ಲಿ ಪಾದವಿಭಾಗವಿದೆ. ಗ್ರಂಥದ ಆದಿಯಲ್ಲಿ "ಬಿಜಾಪುರದ ವಕೀಲ್ ರಾವ್ ಸಾಹೇಬ್ P. G. ಹಳಕಟ್ಟಿಯವರಿಂದ ಬಂದ ವೋಲೆ ಪುಸ್ತಕದ ಪ್ರತಿ" ಎಂದಿದೆ.

183

ಕೆ. [illegible]	ಐರಾವತ	ಭಾಮಿನೀಷಟ್ಪದಿ
೨೪.೩″ × ೨″	?	[illegible]
೧–೧೮ ಪತ್ರ	೧೧ ಪಂಕ್ತಿ	೧೨೦ ಅಕ್ಷರ

ಆದಿ : ಅಯಿರಾವತ ಬರವದಕ್ಕೆ ಶ್ರೀ ವೆಂಕಟಾಸ್ವಾಮಿಾಯವರ ಪದವೆ ಗತಿ ॥

ಯಿಂದ್ರನೈರಾವತವ ಧರಣಿಗೆ
ತಂದು........ಯನು ನೋಂಪಿಸ
ಲೆಂದು ಫಲುಗುಣ ಕೀರ್ತಿವಡೆದನು ಮೂರುಲೋಕದಲಿ ॥

ಪದನೂ ॥ ಕೇಳು ಜನಮೇಜಯ ಧರಿತ್ರೀ
ಪಾಲ ಹಸ್ತಿನಪುರಿಗೆ ಮುನಿಗಳ
ಮೌಳಿ ಬಿಜಯಂಗೈದ ವೇದವ್ಯಾಸನೊಂದು ದಿನಾ
ಕೇಳಿದನು ಧೃತರಾಷ್ಟ್ರ ಭೀಷ್ಮಗೆ
ಹೇಳಿದನು ರುಷಿ ಬರವ ಹರುಷದ
ಯೇಳಿಗೆಯಲಿದಿಗ್ಗೊಂಡು ತಂದರು ರಾಜಮಂದಿರಕೆ ॥ ೧ ॥

ಅಂತ್ಯ : ಗಂಗೆ ಗೋದಾವರಿಯು ನಿರ್ಮದ
ತುಂಗಭದ್ರೆಯುನೆನಿಪ ಸರಸ್ವತಿ
ಹಿಂಗದಿಹ ಪಾತಕವ ಕೆಡಿಸುವ ವಾರಣಾಸಿಯುಲಿ
ತುಂವಿಕ್ರಮೆಯೆನಿಪ ಕಾಶಿ ಶ್ರೀ
ರಂಗದಲಿ ವರಸ್ನಾನಫಲವೀ
ಮಂಗಳಾತ್ಮಕವೆನಿಪ ಸುರಗಜಕಥೆಯು ಕೇಳ್ದರಿಗೆ ॥ ೪೧೩ ॥

ಅಯಿರಾವತದ ಕಥೆ ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ಕುಂತಿಯು ಐರಾವತಪೂಜೆಯನ್ನು ಮಾಡಿದ ಕಥೆ.

ವಿಶೇಷ : ಕೆಲವು ಪತ್ರಗಳ ಅಂಚು ಮುರಿದಿದೆ. ಪತ್ರಗಳ ರಂಧ್ರವು ದೊಡ್ಡದಾಗಿ ಕೆಲವು ಅಕ್ಷರಗಳು ಹೋಗಿವೆ. ೭ ಮತ್ತು ೯ ನೆಯ ಓಲೆಗಳಿಲ್ಲ.

184

ಕೆ. ೧೮೪/೧೧	ಐರಾವತ	ಭಾಮಿನೀಷಟ್ಪದಿ
೧೩.೫" × ೧.೮"	?	?
೨೩೧–೨೪೨ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಇಂದ್ರಸ್ವೈರಾವತವ ಧರಣಿಗೆ
ತಂದು ನಿಜಮಾತೆಯನು ನೋನಿಸ
ಲೆಂದು ಫಲುಗುಣ ಕೀರ್ತಿ ಪಡದನು ಮೂರುಲೋಕದಲಿ।
ಕೇಳು ಜನಮೇಜಯ ಧರಿತ್ರೀ
ಪಾಲ ಹಸ್ತಿನಪುರಕೆ ಮುನಿಗಳ
ಮೌಳಿ ಬಿಜಯಂಗೈದು ವೇದೌವ್ಯಾಸನೊಂದು ದಿನಾ
ಕೇಳಿದನು ಧೃತರಾಷ್ಟ್ರ ಭೀಷ್ಮಗೆ
ಹೇಳಿದನು ಋಷಿ ಬರವ ಹರುಷದ
ಲೀಲೆಯಿಂದಿದಿಗ್ಗೊಂಡು ತಂದರು ರಾಜಮಂದಿರಕೆ ॥ ೧ ॥

ಅಂತ್ಯ : ಭೂತಳಾಧಿಪ ಧರ್ಮಜನು ನಿಜ
ಮಾತೆಗೆಂದನು ಮೂರುಲೋಕಕೆ
ಖ್ಯಾತಿಯಾದುದು ಇಂದ್ರಸ್ವೈರಾವತವ ಕಳುಹಿದರೇ
ನೋಂತಿರೈರಾವತವ ಗಂಗಾ
ಜಾತ ಸಲಹಿದ ನಂಮ್ಮುವನು ಸಂ
ಪ್ರೀತಿಯೆಂತುಟೋ ಕೇಳು ಗದುಗಿನ ವೀರನಾರಯಣನಾ ॥ ೧೨೯ ॥
ಅಂತು ಅಧ್ಯಾಯ ೧ ಕ್ಕಂ ಪದನು ೧೨೯ ಕ್ಕಂ ಮಂಗಳಮಹಾಶ್ರೀ ॥

ವಿಷಯ : ಕುಂತಿಯು ಐರಾವತ ಪೂಜೆಯನ್ನು ಮಾಡಿದ ಕಥೆ.

ವಿಶೇಷ : ೨೪೨ ನೆಯ ಪತ್ರ ಮುರಿದಿದೆ. ಇದರೊಂದಿಗೆ ಕಿರಾತಾರ್ಜುನರ ಕಾಳಗ, ಅಂಗದಸಂಧಾನ, ಸುಭಾಷಿತ(ಸಂ), ಸೋಮರಾಧ್ಯರ ಶತಕ, ರತ್ನಾಕರ ಶತಕ, ಅರವತ್ತುಮೂವರ ತ್ರಿವಿಧಿ, ಶಿವವಚನ, ವಿಷ್ಣು ಕೀರ್ತನೆಗಳು, ಮಾನಸಪೂಜೆ (ಸಂ), ಗುರುಶಿಷ್ಯವಾದ, ಸದ್ಗುರುರಹಸ್ಯ, ಭಾರತದಲ್ಲಿ ರಾಜನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

185

ಕೆ. ೩೮೮ ಐರಾವತ ಭಾಮಿನೀಷಟ್ಪದಿ
೧೬"×೧.೫" ? ?
೨–೧೭ ಪತ್ರ ೭ ಪಂಕ್ತಿ ೬೬ ಅಕ್ಷರ

ಆದಿ : ಕೇಳಿದನು ಹರುಷದಲಿ ಪುತ್ರರರ
ಯೇಳಿಗೆಯ ಮುತ್ತೈದೆತನದಲಿ
ಬಾ....ಸುಕೇತಂನೆಂದಳು ಕಮಲಮುಖಿ ನಗುತಾ ||........ || ೬ ||

ಅಂತ್ಯ : ತಿರುಗಿದಳು ಬಲಬಂದು ಅನೇ
ಕರವ ನೊಸಲೊಳು....ದಿಗುಪಾ
....ಲರಿಗೆ ಮ....ದಳು ಮುನಿಜನಕೆ ಕೈಮುಗ್ಗಿದು
ಹರುಷದ....ನ ಮಾಯು ತೊಟ್ಟಲಲಿ ಕು
ಳಿರಲು ತೆಗೆದರು....ಜದ ಮೇಲಕೇ
ಸರಸಿಜಾನನೆ ಕುಂತಿ ಐರಾವತವನೇರಿದಳೂ
|| ೧೪೨ ||

ವಿಷಯ : ಕುಂತಿಯು ಐರಾವತ ಪೂಜೆಯನ್ನು ಮಾಡಿದ ಕಥೆ.

ವಿಶೇಷ : ಹುಳುಗಳಿಂದ ತಿನ್ನಲ್ಪಟ್ಟು ಬಹಳ ಶಿಥಿಲವಾಗಿದೆ. ೧ ನೆಯ ಪತ್ರ ಲುಪ್ತವಾಗಿದೆ. ಇದರೊಂದಿಗೆ 'ಕಾಳಿಂಗಮರ್ದನ' (ತೆಲುಗು) ಮತ್ತು 'ಆಶ್ರಮವಾಸಿಪರ್ವ' (ತೆಲುಗು) ಎಂಬ ಕೃತಿಗಳಿವೆ.

186

ಕೆ. ४೯೪/೨ ಐರಾವತ ಭಾಮಿನೀಷಟ್ಪದಿ
೧೯.೧"×೨.೧" ? ?
೧–೯ ಪತ್ರ ೮ ಪಂಕ್ತಿ ೮೭ ಅಕ್ಷರ

ಆದಿ : ಶ್ರೀ ಗಣಾಧಿಪಾ ಶರದಾಂಬಾಯೈ ನಮಃ। ××× ಐರಾವತ ಪಸ್ತು ಪ್ರಜೋತ್ಪತ್ಯನಾದ ಸಂವತ್ಸರದ ಭಾದ್ರಾಪತ ಶು ೨ ಸೋಮವಾರದಲ್ಲು ದುಗ್ಗಪ್ಪೈಯನವರ ಮಗ ಗೋಪಾ........ಪಸ್ತಕ ಬರವುದನೆ ನಿರ್ವಿಗ್ನಮಸ್ತು ||
ಯಿಂದ್ರನೈರಾವತವ ಧರಣಿಗೆ
ತಂದು ನಿಜಮಾತೆಯನು ನೋನಿಸ
ಲೆಂದು ಫಲಗುಣ ಕೀರ್ತಿಪಡದನು ಮೂರುಲೋಕದಲಿ ||

ಕೇಳು ಜನಮೇಜಯ ಧರಿತ್ರೀ
ಪಾಲ ಹಸ್ತಿನಾಪುರಿಗೆ ಮುನಿಗಳ
ಮೌಳಿ ಬಿಜೆಯಂಗೈದ ವೇದೌವ್ಯಾಸನೊಂದು ದಿನಾ ॥ ಪಲಾ ॥
ಕೇಳಿದನು ದ್ರುತರಾಷ್ಟ್ರ ಭೀಷ್ಮಗೆ
ಹೇಳಿದನು ರುಷಿಭರವ ಹರುಷದ
ಲೀಲೆಯಿಂದಿದಿಗೊಂಡು ತಂದರು ರಾಜಮಂದಿರಕೆ ॥ ೧ ॥

ಅಂತ್ಯ : ಸುರಭಿಯು ಕರೆಯಲು ಧರಣಿ ಧಣಿಸದುದು
ನೆರದ ನರವೃಂದ ದಣಿಯಲು ಸುರ
ತರುವಿಸಿಂಧದಿ ಮೋದಕದ ಬಾಯು ಕಡೆಯು ಬಿಡಲು
ಸುರಪತಿಯುರ ಕಂಡರು ಕಂಗಳ
ವಾರಿದವು ಕೇಳು ಭೂಮಿಶ್ವರನೆ
ಎಯಿರಾವತದ ಸ....ಪಕೆ ಬಂದಳಾ ಕೊಂತಿ ॥ ೧೨೭ ॥
ಸುರಭಿ ಕರೆಯಲು ರಜತ ಹೇಮ ಪಾತ್ರೆ
ಯೊಳು ಬಡಿಸಿದುದು ಹೇಳಲೇನದು
ಅರಸಿ ಐರಾವತಕೆ ನಡೆತಂದಳಾ ಕೊಂತಿ
ತಿರುಗಿದಳು ಬಲವಂದಳಾನೆಗೆ
ಕರವ ನೊಸಲಿಗೆ ಚಾಚಿ ದಿಕ್ಪಾಲರಿಗೆ........

ವಿಷಯ : ಕುಂತಿಯು ಐರಾವತವನ್ನು ಪೂಜಿಸಿದ ಕಥೆ.

ವಿಶೇಷ : ಅಸಮಗ್ರ, ತ್ರುಟಿತ. ಇದೇ ಕಟ್ಟಿನಲ್ಲಿ ಮೊದಲು ತಿಮ್ಮಣ್ಣಕವಿಯ ಭಾರತ ವಿದೆ.

187

ಕೆ. ೧೦೩/೨	ಐರಾವತ	ಯಕ್ಷಗಾನ
೧೦"×೧.೨"	?	?
೧-೮೮ ಪತ್ರ	೪ ಪಂಕ್ತಿ	೩೬ ಅಕ್ಷರ

ಆದಿ : ಐರಾವತ ಬರೆಯುವದಕ್ಕೆ ನಿರ್ವಘ್ನಮಸ್ತು । ರಾಗಾ । ಸೌರಾಷ್ಟ್ರ । ತ್ರಿಉಡೆ ।
ಶರಣು ಶರಣು ಸದಾಸಿವಾಸುತ ಶರಣು
ಸುರಗಣಸೇವಿತಾ ಶರಣು ಸಕಲಾ ವಿದ್ಯಪಾಲಕ
ಶರಣು ಶ್ರೀಗಣನಾಯಕಾ ಶರಣು ಶರಣು ॥ ೧ ॥
× × × ×

ವಚನಾ ॥ ಯಿಾ ರೀತಿಯಿಂದಾ ಯಿಷ್ಟದೇವರಿಗೆ ನಮಿಸಿ ವೋರಂತೆ ಸಕಲ ಸುರರಿಗೆ ತಲೆವಾಗಿ ಗುಶ್ಯಾರದೆಯಂ ಕೊಂಡಾಡಿ ಹಿರಿಯರಿಗೆರಗಿ ಗಂಧರ್ವರಿಗೆ ಕರವಂ ಮುಗಿದು ಭಾರತದೊಳಗೆ ವಿಸ್ತಾರವಾಗಿ ಯಿರುವಂತಾ ಅರ್‍ಯೈರಾವತ ವೆಂಬ ಪ್ರಸಂಗವಂನ್ನು ಧಾರುಣಿಯೊಳರಿವಂತೆ ವರ್ನಿಸುವೆ ಕಂಣ್ವಪುರೀಶ ಕೃಷ್ಣನ ಕರುಣಕಟಾಕ್ಷದಿಂದಾ ॥

ಅಂತ್ಯ : ವಚನಾ ॥ ಹರಿಯು ಕಳುಹಿದರು ದ್ವಾರಕಾಪುರಕೆ ಪಾಂಡವರರಮನೆ ಯೊಳಿದರು ಅನುದಿನ ತರಳಚಂದ್ರಮನಂತೆ ನೆರೆ ಜನಮೇಜಯಕ್ಷಿತೀಪ ಕೇಳೀಗ ಯಿದೀಗ ಐರಾವತದ ಪ್ರಸಂಗವೆಂದೊರದ ವೈಶಂಪಾಯಮುನಿಪತಿ ಧರೆಯೊಳಗೆ ನಾ ವೊದಲರಿಯೆ ವರ್ನಿಸಿದೆನು ಕಣ್ವಪುರದ ಶ್ರೀಕೃಷ್ಣನ ಕಟಾಕ್ಷದಿಂದಾ ॥

ಅಂತು ಸಂಧಿ ೨ ಕಂ ಯಕ್ಷಗಾನ ಐರಾವತ ಸಂಪೂರ್ನಂ । ಮಂಗಳಮಹಾಶ್ರೀ ಕೆಸ್ತೂರು ಉಪಾಧ್ಯರ ಮಗ ರಂಗಪ್ಪ ಬರದುಕೊಟದು ತಳಕಾಡು ನಾಯಿ ಕಶ್ಯಾನಿ ಕೆಂಪಿಮಗಳು ನಂಜಿಗೆ ಬರದುಕೊಟ್ಟದ್ದು ಯಿಾಶ್ವರ ಸಂವತ್ಸರದ ಮಾಘ ಬ ೭ ಲೂ ಬರದ ಪುಸ್ತುಕಕ್ಕೆ ಜಯಮಂಗಳ ಮಹಾಶ್ರೀ ।

ವಿಷಯ : ಕುಂತಿಯು ಐರಾವತ ಪೂಜೆಯನ್ನು ಮಾಡಿದ ಕಥೆ.

ವಿಶೇಷ : ೨೯ ಮತ್ತು ೪೭ ನೆಯ ಪತ್ರಗಳು ಲುಪ್ತವಾಗಿವೆ. ಕೆಲವು ಪತ್ರಗಳ ತುದಿಗಳು ಮುರಿದಿವೆ. ಮತ್ತೆ ಕೆಲವು ಪತ್ರಗಳು ಹುಳುವಿನಿಂದ ಶಿಥಿಲವಾಗಿವೆ. ಈ ಕಟ್ಟಿನಲ್ಲಿ ವೊದಲು ಕುಶಲವರ ಕಥೆ ಎಂಬ ಯಕ್ಷಗಾನ ಪ್ರಸಂಗವಿದೆ.

188

ಕೆ. ೨೯೫/೧	ಐರಾವತ	ಯಕ್ಷಗಾನ
೧೬.೮" × ೧.೭"	?	?
೧–೬೯ ಪತ್ರ	೫ ಪಂಕ್ತಿ	೪೫ ಅಕ್ಷರ

ಆದಿ : ಇಂದ್ರನ್ಯೈರಾವತ ॥ ಶ್ಲೋಕಾ ॥

ಸುರಾಸುರ ಶಿರೋರತ್ನಂ ಮರೀಚಿತ್ಕೋತ್ತಿತಾಂಗ್ರಿಯೇ.
ವಿಗ್ನಾಂದಾಕಾರಾ ಸೂರ್ಯ್ಯಾಯಾ ವಿಜ್ನಾ ಶಾಯಂ ನಮೋನಮಹಃ ॥

ರಾಗಾ ॥ ಯರಕಲಕಾಂಬೋಧಿ ॥ ವಂದೇ ವಾರಿಜಾಲೋಚನಂ ತ್ರಿಣೆಯನಂ
ಪದ್ಮಾಸನಂ ಶ್ರೀರಾಮಂ ರೂದ್ರಾಣಿ ಮತ್ತೆಬಾರತ್ತಿಂ
ಗಣಪತ್ತೆ ಶೆಕ್ರದಿಧಿಕ್ಪಲಕಂ ಆದಿತ್ಯಾದಿ ನವಗ್ರಹಂ

ಸುರಗುರುಂ ಸರ್ವಸುರಂ ಸದ್ಗುರು ಬಕ್ತಾ ಬಾಗವತ್ತಾ
ಸಮಸ್ತ ಸುಜನಹಾ ಸರ್ವಾರ್ತಶಿಧಿಂ ಸದಾ ॥

ಅಂತ್ಯ : ಕರುಣಾಸಮೂದ್ರನಿಗೇ ಕಂಜಧಳನೇತ್ರನಿಗೆ
ಕಾಮನನು ಪೆತ್ತನಿಗೆ ಕಮಲಾಕ್ಷನಿಗೇ ।
ಶ್ರೀಮಹಾಗೋಪಾಲ ಆಶ್ರಿತಜನೋಧಾರಾ
ಬೇಡಿದೊರಗಳನೀವ ಕಂಣ್ವಪುರಿಯ ಶ್ರೀಕೃಷ್ಣನಿಗೆ
ಜಯ ಮಂಗಳಂ ನಿತ್ಯಂ ಶುಭಮಂಗಳಂ ॥ ಶ್ರೀ ॥

ಪರೀದಾವಿ ಸಂವತ್ಸರದಾ ಮಾರ್ಗಶಿರಾ ಬ ೭ ಯು ಭಾನುವಾರ ಯಿಂದ್ರ ನೈರಾವತ ಬರದಂತ್ತಾದ್ದೂ ಪೂರ್ತಿ ಆಗಿಯಿದೆ ॥ ಜಯಮಂಗಳ ಮಹಾಶ್ರೀ.

ವಿಷಯ : ಕುಂತಿಯು ಐರಾವತವನ್ನು ಪೂಜೆಮಾಡಿದ ಕಥೆ.

ವಿಶೇಷ : ಶಿಥಿಲಪ್ರತಿ. ಪತ್ರಗಳನ್ನು ಹುಳು ತಿಂದಿದೆ. ಕ್ರಮಾಂಕವಿಲ್ಲದ ಆದಿಯಲ್ಲಿರುವ ಒಂದು ಪತ್ರದಲ್ಲಿ ಈ ಐರಾವತವ್ರತದ ಸಂಕಲ್ಪವಿದೆ. ಸಂಕಲ್ಪಮಾಡಿದ ದಿನ ■ ಪೈಯಿಂಗಳನಾಮ ಸಂವತ್ಸರೇ ದಕ್ಷಿಣಾಯನೇ ವರುಷರುತೂ ಭಾದ್ರಪತ ಮಾಸೇ ಶುಕ್ಲಪಕ್ಷೇ ತದಿಗ್ಯೈ ಮಂ ೩ ಶುಭತಿಥೌವಾಸರಾ ಭಾನುವಾಸರ ಯುಕ್ತಾಯಾಂ " ಎಂದಿದೆ. ಇದರೊಂದಿಗೆ ಹಾಡುಗಳಿವೆ.

189

ಕೆ. ೩೦೩/೨	ಐರಾವತ	ಯಕ್ಷಗಾನ
೧೧.೭" × ೧.೫"	?	?
೧–೪೧ ಪತ್ರ	■ ಪಂಕ್ತಿ	೩೨ ಅಕ್ಷರ

ಆದಿ : ಶುಭಮಸ್ತೂ ॥ ಯಕ್ಷಗಾನದಲ್ಲಿ ಐರಾವತ ಬರೆಯುವುದಕ್ಕೆ ನಿರ್ವಿಘ್ನಮಸ್ತೂ.
ಅರ..................ವೇದ ದ್ವಿಜರಿಗೆ
ಪರಮ ವೇದದ ಸಾರ ಯೋಗೀ
ಶ್ವರ ತತ್ವವಿಚಾರ ಮಂತ್ರೀಜನಕೆ ಬ....ದಿಗಣಾ
ನಿಯೋಗಿಗಳ ಕಾರ್ಯಕ್ಕೆ ನೀತಿಸಾಧನ
ವಿರಹಿಗಳ ಶ್ರಿಂಗಾರ ವಿದ್ಯಾ
ಪರಿಣತರಲಂಕಾರ ಕರ್ನಾಟ್ಟಿಕ ಕಾವ್ಯರಚಿಸಿದ
ಕವಿ ಕುಮಾರವ್ಯಾಸಮುನಿ ಭಾರತವಾ ।

× × × ×

ಭಾರತಾಂಮ್ರುತವೆಂಬ ಶರಧಿಯ ಕಥೆಯೊಳಗೆ ವಿ
ಸ್ತಾರವಾಗಿರುವ ಐರಾವತ ಪ್ರಸಂಗವನ್ನು
ಧಾರುಣಿಯೊಳರಿವಂತೆ ವರ್ನಿಸುವೆ ಕಂಣ್ವ
ಪುರದ ಗೋಪಾಲಕ್ರಿಷ್ಣನ ಕಟ್ಯಾಕ್ಷದಿಂದಾ ॥

ಅಂತ್ಯ : ಕಾಲಭಯಹರನಿಗೆ ಕಮಲಾ...........
ಬಾಲಾರ್ಕ ಚಂದ್ರಾಕ್ಷಿ ಬಹುಕೊಟು ತೇಜನಿಗೆ
ಮೂಲೋಕ ರಾಕ್ಷಕಗೆ ಮುರವೈರಿಗೇ ॥ ೨ ॥
ಕರುಣಾ ಸಮೂದ್ರನಿಗೆ...........

ವಿಷಯ : ಕುಂತಿಯು ಐರಾವತವನ್ನು ಪೂಜೆ ಮಾಡಿದ ಕಥೆ.

ವಿಶೇಷ : ಕೊನೆಯಲ್ಲಿ ಮಂಗಳಪದ್ಯವು ಅಸಮಗ್ರವಾಗಿದೆ. ಇದರ ಮುಂದೆ ೨೬ ಗರಿಗಳಲ್ಲಿ ವಿವಿಧ ವಿಷಯುಗಳನ್ನೊಳಗೊಂಡ ಪದಗಳಿವೆ. ಅಲ್ಲಲ್ಲಿ ಹುಳು ತಿಂದಿದೆ. ಪತ್ರಗಳ ಕ್ರಮಸಂಖ್ಯೆ ೧೫ ರ ವರೆಗೆ ಮಾತ್ರವಿದ್ದು ಮುಂದೆ ಗುರು ತಿಸಿಲ್ಲ. ಇದೇ ಕಟ್ಟಿನ ಆದಿಯಲ್ಲಿ ಭಾಗವತಕಥೆಯೆಂಬ ಗ್ರಂಥವಿದೆ.

190

ಕೆ. ಎ. ೧೦೬/೧	ಐರಾವತ	ಯಕ್ಷಗಾನ
೧೨.೨"×೬.೮"	?	?
೧–೧೪ ಪತ್ರ	೩೩ ಪಂಕ್ತಿ	೩೦ ಅಕ್ಷರ

ಆದಿ : ಯಕ್ಷಗಾನದ ಭಾರತ ಆದಿಪರ್ವ ಮೊದಲಾದ ಕಥೆಗಳೂ ಬರೀಯುವುದಕ್ಕೆ ಶುಭಮಸ್ತು ॥ ಪ್ರಥಮದಲ್ಲಿ ಐರಾವತ ಪ್ರಾರಂಬಾ ॥ ರಾಗಾ ॥ ಸೌರಾಷ್ಟ್ರ ॥ ತಾಳ ತ್ರಿವುಡೆ ॥
ಶರಣು ಶರಣು ಸದಾಸಿವಾಸುತ । ಶರಣು ಸುರಗಣಶೇವಿತಾ
ಶರಣು ಸಕಲಾಭೀಷ್ಟದಾಯಕ ಶರಣು ಶ್ರೀ ಗಣನಾಯಕಾ ।
ಶರಣು ಶರಣೂ ॥ ೧ ॥

ಅಂತ್ಯ : ಸೀಮೇಯ ಭೂಪಾಲರೆಲ್ಲರೊಂದಾಗೀ
ಕಾಮಜನಕನೊಳಪ್ಪಣೆಗೊಂಡೂ ಸಾಗೀ ॥ ೪೯೨ ॥
ಆಮೇಲೆ ಬಂಧುಗಳೊಡನೆ ಪಾಂಡವರ್ರೂ
ಮಾಧವಸಹೀತರಮನೆಗೆ ತೆರಳಿದರೂ ॥ ೪೯೩ ॥

ಶ್ರೀಧ ವಿಟ್ಠಲನಾಮ ಸ್ಮರಣೆಯ ಮಾಡುತೊಲಿದೂ
ಪಾದಕ್ಕೇ ಮಂಗಳಾರತಿ ಯೆತ್ತಲಂದೂ ॥ ೪೯೪ ॥
ಅಂತೂ ಐರಾವತಸ್ಸಂದಿ ೧ ಕ್ಕಾಂ ಪದನು ೪೯೪ ಕ್ಕಂ ಮಂಗಳಂ ಮಹಾಶ್ರೀ.

ವಿಷಯ : ಕುಂತಿಯು ಐರಾವತ ಪೂಜೆಯನ್ನು ಮಾಡಿದ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ದ್ರೌಪದೀ ಕಲ್ಯಾಣ, ಸುಭದ್ರಾ ಕಲ್ಯಾಣ, ಕನಕಾಂಗೀ ಕಲ್ಯಾಣ, ಸಭಾಪರ್ವ, ಇಂದ್ರಕೀಲ, ಚಿತ್ರಸೇನನ ಕಾಳಗ ಎಂಬ ಆರು ಗ್ರಂಥಗಳಿವೆ. ೧೦೧ ನೇ ಪತ್ರದಲ್ಲಿ ವಿರಾಟಪರ್ವದ ಆರಂಭದ ಒಂದೇ ಒಂದು ಹಾಡು, ಗೌಳೀಫಲ ನಿರ್ಣಯ ಇವೆ.

191

ಕೆ. ಬಿ. ೩೫೪/೫	ಐರಾವತೆ	ಯಕ್ಷಗಾನ
೭.೧″×೫.೮″	?	?
೧–೭೭ ಪತ್ರ	೧೦ ಪಂಕ್ತಿ	೧೪ ಅಕ್ಷರ

ಆದಿ : ಐರಾವತ ಬರೆಯುವದಕ್ಕೆ ಶುಭಮಸ್ತು ॥
ಶರಣು ಶರಣು ಸದಾಸಿವಾಸುತ
ಶರಣು ಸುರಗಣಸೇವಿತಾ
ಶರಣು ಸಕಲಾಭೀಷ್ಟದಾಯಕ
ಶರಣು ಶ್ರೀಗಣನಾಯಕಾ ॥ ೧ ॥
ಕರಿವದನ ಕಮನೀಯಗಾತ್ರನ
ಕರುಣನಿಧಿ ಸುಪ್ರತಾಪನಾ
ಪರಮ ಪಾವನ ಪಂಕಜೇಕ್ಷಣ
ನಿರುತ ಭಕ್ತಾಪೋಷಣಾ ॥ ೨ ॥

ಅಂತ್ಯ : ಆಮೇಲೆ ಯಿಂತ್ತು ಲಕ್ಷಣದೀ ಪಾಂಡವರೂ ಶ್ರೀಧರ ಸಹಿತಾರಮನೆಗೆ ತೆರಳಿದರೂ ॥ ೮ ॥
ಮಾಧವ ಸ್ಮರಣೆಯ ಮಾಡುತ್ತಲಂದೂ
ಪಾದಾಕೆತ್ತಿದರ್ಮಂಗಳಾರಾತಿ ತಂದೂ ॥ ೯ ॥
ಅಂತು ಸಂಧಿ ೧ ಕಂ ಪದನು ೪೮೦ ಕಂ ಮಂಗಳ ಮಹಾಶ್ರೀ ॥ ಐರಾವತ ಸಂಪೂರ್ನ.

ವಿಷಯ : ಕುಂತಿಯು ಐರಾವತಪೂಜೆಯನ್ನು ಮಾಡಿದ ಕಥೆ.

ವಿಶೇಷ : ಪತ್ರಗಳಿಗೆ ಕ್ರಮಾಂಕವನ್ನು ಹಾಕಿಲ್ಲ. ಇದೇ ಪುಸ್ತಕದಲ್ಲಿ ಚಿತ್ರಸೇನನ ಕಾಳಗ, ವಿರಾಟಪರ್ವ, ಕರ್ಣಾರ್ಜುನರ ಕಾಳಗ, ಧ್ರುವಚರಿತ್ರೆ ಎಂಬ ನಾಲ್ಕು ಕೃತಿಗಳೂ ಇವೆ.

192

ಕೆ. ಬಿ. ४೦೧	ಐರಾವತ	ಯಕ್ಷಗಾನ
८ ೭″ × ೬.೧″	?	?
೧–४೦ ಪತ್ರ	೧೫ ಪಂಕ್ತಿ	೧೬ ಅಕ್ಷರ

ಆದಿ : ಐರಾವತ ಬರಿಯುವದಕ್ಕೆ ಶುಭಮಸ್ತು ॥ ಸೌರಾಷ್ಟ್ರ ತ್ರಿವುಡೆ॥

ಶರಣು ಶರಣು ಸದಾಸಿವಾಸುತ
ಶರಣು ಸುರಗಣಸೇವಿತಾ
ಶರಣು ಸಕಲಾಭೀಷ್ಟದಾಯಕ
ಶರಣು ಶ್ರೀಗಣನಾಯಕಾ ಶರಣು ಶರಣೂ ॥ ೧ ॥

× × × ×

ವಚನ ॥ ಯಿಾ ರೀತಿಯಿಂದ ಯಿಷ್ಟದೇವತೆಗೆರಗಿ ವಾರಂತೆ ಸಕಲ ಸುರರಿಗೆ ತಲೆವಾಗಿ ಗುರು ಶಾರದೆಯ ಕೊಂಡಾಡಿ ಹಿರಿಯರಿಂಗೆರಗಿ ಗಂಧರ್ವರಿಗೆ ಕರವಂ ಮುಗಿದು ಭಾರತಾಂಮೃತ ಶರಧಿಯೊಳಗೆ ವಿಸ್ತಾರವಾಗಿರುವ ಆೖರಾವತ ಪ್ರಸಂಗಮಂ ಧಾರುಣಿಯೊಳರಿವಂತೆ ವರ್ನಿಸುವೆ ಕಣ್ವಪುರ ಕೃಷ್ಣನ ಕಟಾಕ್ಷ ದಿಂದಾ ॥ ೫ ॥

ಅಂತ್ಯ : ಆಮೇಲೆ ಯಿಂತೂ ಲಕ್ಷಣದೀ ಪಾಂಡವರೂ
ಶ್ರೀಧರಸಹಿತಾರಮನೆಗೇ ತೆರಳಿದರೂ ॥ ೫೨೧ ॥
ಮಾಧವಸ್ಮರಣೆಯಾ ಮಾಡಿದಾರಂದೂ
ಪಾದಾಕೆತ್ತಿದರ್ಮಂಗಳಾರತಿ ಬಂದೂ ॥ ೫೨೨ ॥
ಐರಾವತಪ್ರಸಂಗ ಸಂಪೂರ್ಣಃ ಶ್ರೀ ॥

ವಿಷಯ : ಕುಂತಿಯು ಐರಾವತ ಪೂಜೆಯನ್ನು ಮಾಡಿದ ಕಥೆ.

ವಿಶೇಷ : ಪತ್ರಗಳು ತೆಳುವಾಗಿವೆ.

193

ಕೆ. ೬೩೨/೧ | ಐರಾವಣನ ಕಾಳೆಗ | ಭಾಮಿನೀ ಷಟ್ಪದಿ
೧೯.೨" × ೨.೨" | ಬತ್ತಲೇಶ್ವರ | ೧೭ನೆಯ ಶತಕ
೧–೫ ಪತ್ರ | ೧೦ ಪಂಕ್ತಿ | ೧೦೦ ಅಕ್ಷರ

ಆದಿ: ಶ್ರೀ....ಐರಾವಣನ ಪ್ರಸಂಗವ ಬರವದಕ್ಕವಿಘ್ನಮಸ್ತು.
ಪಲ್ಲ॥ ದೇವರಾಘವ ಲಕ್ಷ್ಮಣರನ್ನೈ
ರಾವಣನು ಕದ್ದೊಯ್ದುಡರಸಿದ
ರಾ ವಿಭೀಷಣ ಪೇಳೆ ಪತಿಗಳ ತಂದ ಹನುಮಂತಾ ॥ ಪದ ॥
ಧರಣಿ ಜಲ ಶಿಖಿ ವಾಯು ವ್ಯೋಮಕೆ
ಸರಸಿಜದ ಸಂಪಿಗೆ ದಶಾಂಗಧ
ಕೆ ಕೇದಗೆಯು ಪರಿಮಳ ದೊರಕಿದಂದದಲಿ
ಹರಿಕಥೆಗೆ ಸರಿ ಹುಟ್ಟಿತಿದನಾ
ದರಿಸಿದಪರಿಹಪರವ ಗೆಲುವಮ
ಧರೆಗೆ ಸೂರೆಯನಿತ್ತ ವರಕಪಿ ಬತ್ತಲೇಶ್ವರನೂ ॥ ೧ ॥

ಅಂತ್ಯ: ಇಂದಿನಿರುಳಿನ ಹದನಲೇಯೆನೆ ಮುದ
ದಿಂದ ರಾಘವ ಹನುಮನನು ತೆಗ
ದಂದು ತಕ್ಕೈಸಿದನು ಮಾರುತಿ ಶರಣು ಶರಣೆನುತಾ
ಬಂದನೋಲಗದೊಳಗೆ ವಾನರ
ವೃಂದ ನಲಿನಲಿದಾಡುತಿರಲಾ
ನಂದದಿಂ ವರವಿತ್ತ ರಘುಪತಿ ಬತ್ತಲೇಶ್ವರಗೆ ॥ ೧೨ ॥

ವಿಷಯ: ಹನುಮಂತನು ಐರಾವಣನನ್ನು ಕೊಂದು ರಾಮಲಕ್ಷ್ಮಣರನ್ನು ತಂದ ಕಥೆ.

ವಿಶೇಷ: ಇದು ಬತ್ತಲೇಶ್ವರ ರಾಮಾಯಣದ ಒಂದು ಭಾಗ. ಈ ಕಟ್ಟಿನಲ್ಲಿ ತೊರವೆ ರಾಮಾಯಣ, ಕಪೋತಚರಿತೆಗಳೂ ಇವೆ.

194

ಕೆ. ೫೪೯/೧ | ಐರಾವಣ ಮಾರೀಮುಖನ ಕಾಳೆಗ | ಭಾಮಿನೀ ಷಟ್ಪದಿ
೧೮.೧"×೨.೩" | ? | ?
೧–೧೮ ಪತ್ರ | ೧೧ ಪಂಕ್ತಿ | ೯೬ ಅಕ್ಷರ

ಆದಿ: ಶ್ರೀ...........ಯಪ್ಪತ್ತನಾಲ್ಕನೆ ಸಂಧಿ ಮೇಲೆ ಐರಾವಣ ಮಾರೀಮುಖನ ಕಾಳಗ ಶ್ರೀ ರಾಮಚಂದ್ರದೇವರ ಕಥಾಮೃತ ಬರಲುದಕ್ಕೆ ನಿರ್ವಿಘ್ನಮಸ್ತು॥

ಶ್ರೀ ಸೀತಾರಾಮಚಂದ್ರಾಯ ನಮಃ।
ದೇವರಾಮನ ಲಕ್ಷುಮಣನನ್ನ
ರಾವಣನು ಕೊಂಡೊಯ್ಯಲರಿದದ
ನಾ ವಿಭೀಷಣ ಪೇಳೆ ಪತಿಗಳ ತಂದನಾ ಹನುಮ।
ಪದ॥ ಶ್ರೀಮದಸಿತೋತ್ಪಲಿ ಫಲಾಶ
ಶ್ಯಾಮಳಾಂಗ ಶ್ರವಣ ಸೀಮಾ
ಗಾಮಿ ತಾಮರಸಾಕ್ಷಾದ್ಭುತ ಮಣಿಕನಕ ವರಭೂಷಾ
ಹೇಮ ಕಾರ್ಮುಖ ಬಾಣ ವಿಲಸಿತ
ವಾಮ ದಕ್ಷಿಣ ವರ ಕರತ್ರಯ
ರಾಮಣೀಯ್ಯಕ ರಾಮ ರಕ್ಷಿಸಲೊಲಿದು ರಘುರಾಮಾ॥೧॥

ಅಂತ್ಯ: ಬಳಿಕ ಕಪಿಬಲ ರಾಯರೊಳಗಳಿ
ದವರನೆಬ್ಬಿಸಿಕೊಳುತಲಾ ಭೂ
ಪಾಲ ಕುಲಮಣಿ ವೀರಲಕ್ಷ್ಮಣ ಸಹಿತ ಪಾಳಯಕೆ
ಲೀಲೆಯಿಂದೈದಿದನು ಲಂಕೆಗೆ
ಕಾವಲನು ಮಾಡುತ್ತ ಸಲೆ ದಿವಿ
ಜಾಳಿ ಹರದುದು ಮೇಲೆ ಪಡುವಣ ಜಲಧಿಗಿನನಿಳಿದಾ॥೧೯೫॥
ಅಂತು ಸಂಧಿ ೭೬ ಕ್ಕಂ ಪದ ೩೪೬೧ಕ್ಕಂ ಮಂಗಳ ಮಹಾಶ್ರೀ.

ವಿಷಯ: ರಾಮರಾವಣರ ಯುದ್ಧದ ಮಧ್ಯದಲ್ಲಿ ಐರಾವಣನು ರಾಮಲಕ್ಷ್ಮಣರನ್ನು ಕದ್ದೊಯ್ಯುವುದು, ಹನುಮಂತನು ಬಿಡಿಸಿತರುವುದು ಮತ್ತು ಮಾರೀಮುಖನ ಕಾಳಗ.

ವಿಶೇಷ: ತೊರವೆ ರಾಮಾಯಣದ ಕಟ್ಟಿನಲ್ಲಿಯೇ ಸೇರಿದ್ದರೂ ಪತ್ರಸಂಖ್ಯೆ ಬೇರೆಯಾಗಿದೆ.

195

ಕೆ. ೨೦೭/೮	**ಐರಾವತದ ಚೌಪದ**	ಚೌಪದ
೬.೬" × ೧"	?	?
೯೬–೧೦೪ ಪತ್ರ	೭ ಪಂಕ್ತಿ	೨೭ ಅಕ್ಷರ

ಆದಿ: ಐರಾವತದ ಚವುಪದ—
ಜಯತು ಶ್ರೀ ಗಿರಿಜೇಶ ವಿಷ್ಣು ನಂದಿತನೆ
ಜಯತು ಶ್ರೀಗಂಗೆಯನು ಶಿರದಿ ಧರಿಸಿದನೆ

ಜಯತು ಶ್ರೀಕರಿಗೊರಳ ಮದನರಿಪು ಹರನೆ
ಜಯತು ಶ್ರೀ ಭಕ್ತಜನ ಪಾರಿಜಾತಕನೆ ॥ ೧ ॥
ಶರಣು ಶೇಷ ವಿಭೂಷ ಶರಣು ಶಂಕರನೆ
ಶರಣು ಮತಿಗಳ ಕೊಡುವ ಶರಣು ಗಜಮುಖನೆ
ಶರಣು ಬ್ರಂಹ್ಮನ ರಾಣಿ ಶರಣು ಶಶಿವದನೆ
ಶರಣು ಗೋಪಿಕುಮಾರ ಶರಣು ಚಿನುಮಯನೆ ॥ ೨ ॥

ಅಂತ್ಯ : ವಾಸವನ ಮದಗಜವ ಸುರಪುರಕೆ ಕಳುಹಿದರು
ಬಂದ ದೇಶಾಧಿಪರನೆಲ್ಲರನು ಕಳುಹಿದರು
ಅಂತರಾತ್ಮಕ ಹರಿಯು ದ್ವಾರಕಿಗೆ ಕಳುಹಿದರು
ಬಂದು ತಾಯಡಿಗೆರಗಿ ಸಂತಸದೊಳಿಹರು ॥ ೪೪ ॥ ಶ್ರೀ ಶ್ರೀ.

ವಿಷಯ : ಕುಂತಿಯು ಇಂದ್ರನ ಐರಾವತವನ್ನೇ ತರಿಸಿ ಪೂಜೆ ಮಾಡಿದ ಕಥೆ.

ವಿಶೇಷ : ಈ ಕೃತಿಯೊಂದಿಗೆ ಸ್ತೋತ್ರಗಳು, ಪೂನೌಮಿಯ ಪದಗಳು ಮೊದಲಾದ ಇತರ ೮ ಗ್ರಂಥಗಳಿವೆ.

196

ಕೆ. ೨೦೭/೩	ಒಗಟಿ ಪದಗಳು	ಚೌಪದ
೬.೬" × ೧"	?	?
೩೧–೩೮ ಪತ್ರ	■ ಪಂಕ್ತಿ	೫ ಅಕ್ಷರ

ಆದಿ : ವಾಗಟಿ—
ಕಂನಡ ಸೂಜಾಣ ಕವಿಗಳ ದೇವ ಪೇಳು
ಬಿನ್ನಣದ ವಾಗಟಿಯ ತಿಳಿದು ನಮಿಗೆ ಹೇಳು ॥
ಕಾಲಾರು ತಲೆ ಮೂರು ತ್ರಯಿಮೂರ್ತಿಯಲ್ಲ
ಬಾಲಂಗಳೆರಡು ಕಿವಿ ನಾಲ್ಕು ಮೃಗವಲ್ಲಾ
ನಾಲಿಗೆಯು ನಾಲ್ಕುಂಟು ಏಪರೀತವಲ್ಲಾ
ಯಿದ ಹೇಳಬಲ್ಲ ಜಾಣರಿಗೆ ಅರಿದಲ್ಲಾ ॥ ೧ ॥

ಅಂತ್ಯೆ : ಕಾಲು ಒಂದರಲ್ಲಿ ಕುಣಿವವಳು ಸೂಳೆಯಲ್ಲ
ಮೇಲೆ ಯಡ ಬಾಲವುಂಟು ಅದು ನಾಗನಲ್ಲ
ಕಾಲು ಹೆಜ್ಜೆಯ ನೋಡಿ ಶ್ರೀಯರುಗಳೆಲ್ಲ ॥ ೪೪ ॥

ವಿಷಯ : ಒಗಟುಗಳು.

ವಿಶೇಷ : ಪ್ರತಿಯು ಉತ್ತಮವಾಗಿದೆ. ಆದರೆ ೧೯ನೇ ಒಗಟಿನಿಂದ ಮುಂದಕ್ಕೆ ಒಂದು ಭಾಗದ ಓಲೆಗರಿ ಖಾಲಿಯಿದೆ. ಒಗಟು ೨೦, ೨೧, ೨೨ ಮತ್ತು ೨೩ ಬಿಟ್ಟುಹೋಗಿವೆ. ಈ ಕಟ್ಟಿನಲ್ಲಿ ಹಾಡುಗಳು, ವೀರಸಂಗನ ಚೌಪದ ಮೊದಲಾದ ಇತರ ೮ ಗ್ರಂಥಗಳಿವೆ.

197

ಕೆ. ಬಿ. ೨೯೧	**ಕಂಸವಧೆ**	ಯಕ್ಷಗಾನ
೭.೫"×೬"	ಲಿಂಗರಾಜ	೧೮೫೦
೧–೫೩ ಪತ್ರ	೧೫ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ ಗುರು ಸಂಗಮನಾಥಾ ಪ್ರಸಂನಾ ॥ ಭಾಗವತ ದಶಮಸ್ಕಂಧದಲ್ಲಿ ಕಂಸವಧೆ ॥ ಪ್ರಾರಂಭಾ.

ನಾಂದಿ ॥ ಕಂದ ॥ ದಕ್ಷಾಧ್ವರ ವಿಧ್ವಂಸನ
ಸಾಕ್ಷಾತ್ಕೃತದೊಳಿ ಕೇಳಿ ಕೃತ್ಯಂ ನಿತ್ಯಂ
ತ್ರ್ಯಕ್ಷ ಕಪರ್ದ ಪ್ರಭವಂ
ರಕ್ಷಿಸಲೆಂಮನು ವೀರಭದ್ರಂ ಭದ್ರಂ ॥ ೧ ॥

ರಾ॥ ನಾಟಿ॥ ಆದಿತಾಳ ॥ ಜಯ ಭದ್ರಕಾಳೀಶ । ಜಯ ದಯಾಕೋಶಾ ॥ ಪ॥
ನೀಲ ನೀರದ ಕಾಯ । ಶೂಲಹತ ದೈತೇಯ
ಲೀಲಾಜಿತಾಪಾಯ । ಕೈಲಾಸನಿಲಯ ॥ ೨ ॥

× × × ×

ಕಂದ ॥ ಕಲಿಕಲ್ಮಷ ಕಾಂತಾರ
ಪ್ರಳಯಪ್ರದಮಲ್ತೆ ಕೃಷ್ಣವರ್ತ್ಮ...ಯದರಿಂ
ಸಲೆ ಭಾಗವತದಿ ಮೆರೆಯುವ
ಜಲಜಾಕ್ಷಂಗೈದ ಕಂಸವಧೆಯುಂ ಪೇಳ್ವೆಂ ॥ ೧೨ ॥

ಅಂತ್ಯ : ವಾರ್ಧಕ ॥ ಪರಮ ಸಂಭ್ರಮದಿಂದ ಸೆರೆಬಿಡಿಸಿ ಜನನಿಜನ
ಕರ ನಮಿಸುತವರಾಜ್ಞೆಯಿಂದುಗ್ರಸೇನಂಗೆ
ವಿರಚಿಸುತ ಮಧುರಾಧಿಪತ್ಯ ಪಟ್ಟಾಭಿಷೇಕವ ಜಯ ಜಯ ಧ್ವನಿಯೊಳು

ಸುರರರಳ ಸರಿಯು ಸುರಿಯಲ್ಬೆರಸುತಗ್ರಜನ
ಧರಣಿಯಂ ಪಾಲಿಸುತಿರ್ದನಾ ಮುರವೈರಿ
ಶರಣ ಸಂಸಾರಿ ಯನ್ನುತ ಪರೀಕ್ಷಿತಗೆ ಶುಕಯೋಗಿ ಪೇಳ್ದಂ ‖ ೪೫೩ ‖

× × × ×

ಮಂಗಳಾಂಗನಿಗೆ ಸಂಗತಸರ್ವ ಮಂಗಳಾಂಗನಿಗೆ
ಲಿಂಗೇಂದ್ರ ಕರಕಂಜ ಭೃಂಗ ಮಹಲಿಂಗಗೆ ‖
ಮಂಗಳಂ ಶಿವಗೆ ‖ ೪೫೫ ‖ ಶ್ರೀ

ಕಂದ ‖ ಕರಿ ರಸ ರಂದ್ರಾಬ್ಧೋನಿಧಿ
ಪರಿಮಿತ ಕಲ್ಯಬ್ದಿಮವನಿಯೊಳ್ಕಳಿಯಲ್ಕ್ರೀ ‖
ವರನೆಸಗಿದ ಕಂಸವಧಾ
ಚರಿತಮು ಭಾಪೆನಲು ಲಿಂಗಭೂಪತಿ ಪೇಳ್ದಂ ‖ ೪೫೭ ‖

ಕೃಷ್ಣಬಾಲಲೀಲಿ ಕಥೆ ‖ ೧ ಕ್ಕಾಂ ಪದನು ‖ ೪೫೭ ಕ್ಕಾಂ ಮಂಗಳ ಮಹಾಶ್ರೀ.

ವಿಷಯ : ಶ್ರೀಕೃಷ್ಣನು ಕಂಸನನ್ನು ಕೊಂದದ್ದು.

ವಿಶೇಷ : ಬರಹವು ಸುಂದರ. ತೆಳುವು ಕಾಗದ. ಅಂತ್ಯದ ಕೆಲವು ಪತ್ರಗಳ ಅಂಚಿನಲ್ಲಿ ಹುಳು ಕೊರೆದಿದೆ.

198

ಕೆ. ೧೫೬	ಕಕುದ್ಗಿರಿ ಮಾಹಾತ್ಮ್ಯೆ	ಗದ್ಯ
೧೪.೭″ × ೨″	ಕಳಲೆ ನಂಜರಾಜ	೧೭೪೦
೧—೭೯ ಪತ್ರ	೫ ಪಂಕ್ತಿ	೭೦ ಅಕ್ಷರ

ಆದಿ : ಕಕ್ಕುದ್ಗಿರಿ ಮಹಿಮೆಯ ಕಂನಡಿಶಿ ಬರವದಕ್ಕೆ ಶುಭಮಸ್ತು.
ವಂಶಾವಳಿಯ ಪದ್ಯಗಳು.
ಶ್ಲೋಕ ‖ ಅವ್ಯಾದವ್ಯಾಜ ಕರುಣಾಕೃತಿರುಮಾಪತೇಃ
ಸವ್ಯಾಪಸವ್ಯಯೋಸ್ತ್ರೇಣ ಪೌಸ್ತ್ರವ್ಯಂ ಜನರಂಜಿತಾ ‖ ೧ ‖

× × × ×

ಯಿಂತು ಮಹಾಮಾತ್ಯ ವಿಬುಧೋತ್ತಮೋದಿತ ಶ್ರುತಿಸುಧಾಧಾರಾಯಿತ ಮಧುರಭಾರತೀ ಸಂದರ್ಭಮಂ ಶ್ರೋತ್ರಕನಕಕೆ........ಂಗಳಂ ನೋಡಿ ನಾನತ್ಯಂತ ಸಂತೋಷದಿಂ ಪೇಳ್ವೆನೂ ಅಸಮಾನವೀರ ನೀ ದೇವನೀನಾಥಸುತ

ವಸುಧೆಯೊಳ್ ಕರ್ನಾಟಕಾಂಧ್ರ ಗೀರ್ವಾಣಾದಿ ರಸಭರಿತ ಕೃತಿರಚನೆಯೊಳ್ ನಿನಗೆ ಸರಿಯಾರು ಮತಿವಂತರೊಳ್ ಪರವರೂ॥ ಪೊಸಪರಿಯ ಕಂನಡದ ಸವಿನುಡಿಗಳಿಂ ಕಕುದ್ವಸುಮತಿಧರ ದಿವ್ಯಮಹಿಮೆಯಂ ವಿಸ್ತರಶಿ ಬೆಸಸೆಂಬ ಸಚಿವ ಪರಿಜನ ವಚನವಂ ಕೇಳಿ ವಿರಚಿಸುವೆನೀ ಕೃತಿಯನು ॥೧೯॥ ಯಿಂತು ನಿಜಚೈವಾತ್ಮಕಾನ್ವಯಮಂ ಜನರಖಿಲರರಿವಂತೆ ವಿರಚಿಶಿ ಮತ್ತಮಾ ಸ್ಕಾಂದ ಮಹಾಪುರಾಣ ಪ್ರತಿಪಾದಿತ ಮಂದಾಕಿನೀಧರ ಗಿರಿವರ ಚರಿತ್ರೆಯಂ ಕನ್ನಡಿಶಿ ಪೇಳ್ವೆನಾದರದಿಂದ ಕೇಳುವುದೆಲ್ಲರೂ॥ ಶ್ರೀ ಶಿವಾಯ ನಮಃ॥ ಪೂರ್ವದಲ್ಲಿ ವ್ಯಾಸಮುನಿಶಿಷ್ಯನಾದ ಸೂತಪೌರಾಣಿಕೋತ್ತಮನು

ಅಂತ್ಯ : ಸೂತಮುನಿ ಪೇಳುವನು ಕೇಳಿರೈ ಋಷಿಗಳಿರಾ ಈ ಪ್ರಕಾರವಾಗಿ ಕಕುದ್ಗಿರಿಯ ಪ್ರಭಾವಮಂ ಪೇಳುವ ನರನು ಸಕಲ ಜನರನು ಪಾವನಮಂ ಮಾಳ್ಪನು. ಯಿದನು ಕೇಳಿದವನು ಪಾಪನಿರ್ಮುಕ್ತನಾಗಿ ಯಿಹದಲ್ಲಿ ಸಕಲ ಭೋಗಂಗಳನನುಭವಿ........ವನೇರಿ ಶಿವಸನ್ನಿಧಿಯೊಳಧಿಕಸುಖವನನುಭವಿಸುವರೂ॥ = ॥ ಯಿಂತು ಶ್ರೀಮಸ್ಕಂದಪುರಾಣದಲ್ಲಿ ಕಲ್ಯಾಣಖಂಡದೊಳು ಶ್ರೀಶಿವಗಂಗಾಮಹಿಮೆಯಂ ಸಕಲ

× × × ×

ಮಹಾರಾಜಪರಂಪರಾ ಪರಿಪ್ರಾಪ್ತ ಸೇನಾಧಿಪತ್ಯಶ್ರೀಮತ್ಕಳಲೇದೊಡ್ಡರಾಜಸುತ ವೀರರಾಜನಂದನ ಸೇನಾಧೀಶ ದೇವರಾಜಾನುಜ ಶ್ರೀ ನಂಜರಾಜನಂ ಸಕಲ ಕರ್ನ್ನಾಟಕ ಜನರರಿವಂತ್ತೆ ಕಂನಡಿಶಿ ಪೇಳಿದೀವ........ಮಾದೀ ಸುಜನ ಕರ್ನ್ನರಸಾಯನವೆಂಬೀ ಟೀಕಿನಲ್ಲಿ ಆರನೇ ಅಧ್ಯಾಯದಥಃ॥ = ॥ ಯಿಾ ಕಕುದ್ಗಿರಿಮಹಿಮೆಯೊಳು ಸ್ಕಂದಪುರಾಣದಲ್ಲಿರ್ದ ತೀರ್ಥಖಂಡದ ದ್ವಾದಶಾಧ್ಯಾಯಮಂ ಭವಿಷ್ಯೋತ್ತರ ಪುರಾಣದಲ್ಲಿರ್ದ ಯರಡಧ್ಯಾಯಮಂ ಕಲ್ಯಾಣ ಖಾಂಡದಲ್ಲಿರ್ದ್ದ ಆರಧ್ಯಾಯಮಂ ಕರ್ನ್ನಾಟಕ ಸೂ....ದವಿಂಶತಿ ಅಧ್ಯಾಯಂಗಳಂ ಸಮಗ್ರಮಾಗಿ ಪೇಳಿಯಿರುವದು॥ = ॥ ಶ್ರೀ ಶಿವಗಂಗಾಮಹಿಮೆ ಸಂಪೂರ್ಣ ಮಂಗಳಮಹಾ॥

ವಿಷಯ : ಸ್ಕಾಂದಪುರಾಣ, ಭವಿಷ್ಯೋತ್ತರಪುರಾಣ ಕಲ್ಯಾಣಕಾಂಡಗಳಲ್ಲಿರುವ ಶಿವಗಂಗಾಮಹಿಮೆಯೇ ಕಥಾವಸ್ತು.

ವಿಶೇಷ : ಕೆಲವು ಪತ್ರಗಳ ಎರಡು ತುದಿಗಳೂ ಮುರಿದಿವೆ. ಇಪ್ಪತ್ತು ಅಧ್ಯಾಯಗಳಿವೆ.

199

ಕೆ. ಬಿ. ೨೮೬	**ಕಕುದ್ಗಿರಿ ಮಾಹಾತ್ಮ್ಯೆ**	ಗದ್ಯ
೮" × ೬.೩"	ಕಳಲೆ ನಂಜರಾಜ	೧೭೪೦
೧–೩೨೮ ಪುಟ	೧೬ ಪಂಕ್ತಿ	೧೬ ಅಕ್ಷರ

ಆದಿ: ಶ್ರೀಸಿವಗಂಗೆ ಗಂಗಾಧರಾಯ ನಮಃ ॥ ಕಕುದ್ಗಿರಿ ಮಹಿಮೆಯಂ ಕಂನಡಿಸಿ ಬರವುದಕ್ಕೆ ಶುಭಮಸ್ತು ॥ ಮಂಗಳಾಚರಣೆ ವಂಶಾವಳಿ ಪದ್ಯಗಳು.

ಶ್ಲೋಕಾ ॥ ಅವ್ಯಾಜವ್ಯಾಜ ಕಾರಣಾಭವ್ಯಾಕೃತಿರುಮಾಪತೇಃ ।
ಸವ್ಯಾಪಸವ್ಯಾಯೋಸ್ತ್ರಿನಾಪಾಸ್ತವ್ಯಾಂ ಜನರಂಜಿತಾ ॥ ೧ ॥

× × × × ×

(೯ನೆಯ ಪುಟದಿಂದ) ಇಂತು ಮಹಾಮಾತ್ಯ ವಿಬುಧೋತ್ತಮಾದಿತಮ್ರಿತಿ ಸುಧಾದಾರಯಿತ ಮಧುರ ಭಾರತಿಸಂದರ್ಭಮಂ ಶ್ರೋತ್ರ ಕನಕಪಾತ್ರಮಾ ಕರ್ನಾಟಕೇಂದ್ರ ಗೀರ್ವಾಣಾದಿ ರಸಭರಿತ ಕೃತಿರಚನೆಯೊಳ್ ನಿನಗೆ ಸರಿಯಾರು ಮತಿವಂತರೊಳ್ಪರಲೂವರೂ ॥ ಹೊಸಪರಿಯ ಕನ್ನಡದ ಸವಿನುಡಿಗಳಿಂ ಕಕುದ್ಭಸುಮತೀಧರ ದಿವ್ಯಮಹಿಮೆಯಂ ವಿಸ್ತರಿಸಿ ಬೆಸಸೆಂಬ ಶಚಿವ ಪರಿಜನಮಂ ಕೇಳಿ ವಿರಚಿಸುವೆಸೀಕೃತಿಯನು ಇಂತು ನಿಜಚೈವಾತ್ಮಕಾಶ್ರಯಯಜನರಭಿರರಿವಂತೆ ವಿರಚಿಸಿ ಮತ್ತಮಾ ಸ್ಕಾಂದಪುರಾಣ ಪ್ರತಿಪಾದಿತ ಮಂದಾಕಿನೀ ಧರಗಿರಿಚರಿತ್ರೆಯಂ ಕನ್ನಡಿಸಿ ಪೇಳ್ವೆ ನಾನಾದರದಿಂದ ಕೇಳುವುದಕ್ಕೆಲ್ಲರೂ ॥ ೨ ॥ ಶ್ರೀರಾಮಾಯ ನಮಃ ॥ ಪೂರ್ವದಲ್ಲಿ ವ್ಯಾಸಮುನಿ ಶಿಷ್ಯನಾದ ಪೌರಾಣೀಕೋತ್ತಮನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಮುನಿವರರುಗಳಿಗಿಳೆಯೊಳುತ್ತಮಂವಾದ ಶೈಲಮಹಿಮೆಯಂ ವಿಸ್ತರಿಸಿ ನಿರೂಪಿಸಿ ಬಳಿಕಿಂತೆಂದನೂ ॥

ಅಂತ್ಯ: ಸೂತಮುನಿ ಪೇಳುವನು ಕೇಳಿರೈ ಋಷಿಗಳಿರಾ ಈಪ್ರಕಾರಮಾಗಿ ಕಕುದ್ಗಿರಿ ಯಾತ್ರೆಯ ಪ್ರಭಾವಮಂ ಪೇಳುವ ನರನು ಸಕಲ ಜನರು ಪಾವನವಂ ಮಾಳ್ಪನೂ. ಇದನು ಕೇಳಿದವನೂ ಪಾಪನಿರ್ಮುಕ್ತನಾಗಿ ಇಹದಲ್ಲಿ ಸಕಲ ಭೋಗಂಗಳನನುಭವಿಸಿ ಕಡೆಗೆ ಶಿವಲೋಕವನ್ನೈದಿ ಶಿವಸನ್ನಿಧಿಯೊಳಧಿಕ ಸುಖವನನುಭವಿಸುವರೂ. ಇಂತು ಸ್ಕಂಧಪುರಾಣದಲ್ಲಿ ಕಲ್ಯಾಣಕಾಂಡದಲ್ಲಿ ಶ್ರೀಶಿವಗಂಗಾಮಹಿಮೆಯಂ ಸಕಲ ನೃಪವಿತತಿಮಸ್ತಕನ್ಯಸ್ತ ಮಕುಟತಟಸಂಘಟಿತ ವಿವಿಧ ಮಣಿಗಣ ವಿರಾಜಿತ ಪದಸರಸಿಜ ವಿತರಣಪರಿಭೂತ ಪರಿದ್ರುಮ ವಿಪಕ್ಷ ಪಕ್ಷ ವಿಕ್ಷೋಭನಾದ ಕ್ಷಣಕ್ಷಮಾವಲಯ ರಿಪುಕ್ಷಯನಕ್ಷಯಪ್ರತಾಪ ಶೌರ್ಯಧೈರ್ಯಗಂಭೀರ್ಯ ಸೌಂದರ್ಯಸೌಜನ್ಯಾದಿಗುಣ ಸಮುದಯಾ

ಶ್ರೀಮನ್ಮಹೀಶೂರನೃಪ ವಿಷ್ಟರಾದಿ ಅಷ್ಟಕಮಹಾಜಪರಾ ಪರಿಪ್ರಾಪ್ತ ಸೇನಾಧಿಪತ್ಯ ಶ್ರೀಮನ್ಮತ್ಕಳಲೇ ದೊಡ್ಡರಾಜಸುತ ವೀರರಾಜನಂದನ ಸೇನಾಧೀಶ ದೇವರಾಜಾನುಜಶ್ರೀನಂಜರಾಜನಂ ಸಕಲ ಕರ್ನಾಟಕರರಿವಂತೆ ಕನ್ನಡಿಶಿ ಪೇಳಿದೀ ವಚನಕಾವ್ಯಮಾದೀ ಸಜ್ಜನ ಕರ್ಣರಸಾಯನವೆಂಬೀ ಟೀಕಿನಲ್ಲಿ ಆರನೇ ಅಧ್ಯಾಯಾರ್ಥಃ ಶ್ರೀ. ಈ ಕಕುದ್ಗಿರಿಮಹಿಮೆಯೊಳು ಸ್ಕಂದಪುರಾಣದಲ್ಲಿರ್ದ್ದ ತೀರ್ಥಖಂಡ ದ್ವಾದಶಾಧ್ಯಾಯಮಂ ಕರ್ನಾಟಕ ಸೂಕ್ತಿಯಿಂದ ವಿಂಶತಿ ಅಧ್ಯಾಯಂಗಳಂ ಸಮಗ್ರವಾಗಿ ಪೇಳಿರುವುದು ಶ್ರೀಶಿವಗಂಗಾ ಮಹಿಮೆ ಸಂಪೂರ್ಣ ಮಂಗಳ ಮಹಾಶ್ರೀ ಶ್ರೀ .

ವಿಷಯ : ಶಿವಗಂಗೆಯ ಮಹಿಮೆ.

ವಿಶೇಷ : ಸ್ಕಾಂದಪುರಾಣದ ತೀರ್ಥಖಂಡದ ಹನ್ನೆರಡು ಅಧ್ಯಾಯಗಳ, ಭವಿಷ್ಯೋತ್ತರ ಪುರಾಣದ ತೀರ್ಥಖಂಡದ ಎರಡೂ ಅಧ್ಯಾಯಗಳ, ಸ್ಕಾಂದಪುರಾಣದ ಕಲ್ಯಾಣಖಂಡದ ಆರು ಅಧ್ಯಾಯಗಳ ಮೂಲ ಸಂಸ್ಕೃತ ಶ್ಲೋಕಗಳ ಕನ್ನಡ ಅನುವಾದ. ಗ್ರಂಥದ ಆದಿಯಲ್ಲಿ ಕೆಲವು ಪದ್ಯಗಳಿವೆ.

200

ಕೆ. ೫೨೧/೨	ಕೆಕ್ಕೋಕಶಾಸ್ತ್ರ	ಕುಸುಮಷಟ್ಪದಿ
೭.೨" × ೧.೯"	?	?
೧೨–೨೨ ಪತ್ರ	೧೦ ಪಂಕ್ತಿ	೩೨ ಅಕ್ಷರ

ಆದಿ :

ಶ್ರೀನಿದಗಂತವೋತ್ತಮಿ
ದೆನಿಪ ಉತ್ತಮಮಿಡೆಂ
ದೆನಿಪ ಮಧ್ಯಮನರಿಉದೆನಿಘೋಡಥಮ
ಇನಿತು ಗುಣವೆಸವ ಪ
ದ್ಮಿನಿಯು ಶಂಕಿನಿಯು ಚಿ
ತ್ತಿನಿಯು ಹಸ್ತಿನಿಯು ಜಾತಿಗಳನೊರವೆಂ ॥ ೧ ॥

ಅಂತ್ಯ : ಸಸನಿಪ । ಮಮಪನಿ । ಪಸಸನಿ ।
ಪಸನಿಂ ಸ । ಮಪನೀ ಮಾಪ ।
ಮಪಪಮರಿ । ರಿಗಗರಿಸ ।

ರಿರಿಮಮಪ । ರೀ ಮಮಪ |
ಮಪನಿನಿಸ | ನಿನಿಸ | ನಿಸರಿರೀಗರಿಸ |
ಸನಿಪ | ಮಪನಿನಿಸ ನಿಸಿಗರಿಸ ನಿನೀಸಾಸಾ ॥ ೫ ॥

ವಿಷಯ : ಕಾಮಶಾಸ್ತ್ರ.

ವಿಶೇಷ : ಇದರೊಂದಿಗೆ ಕವಿಜಿಹ್ವಾಬಂಧನವೆಂಬ ಗ್ರಂಥವೂ ಇದೆ. ೧೯, ೨೦ ಮತ್ತು ೨೧ ನೆಯ ಪತ್ರಗಳು ಲುಪ್ತವಾಗಿವೆ.

201

ಕೆ. ಬಿ. ೨೩೬	ಕೆಕ್ಕೋಕಶಾಸ್ತ್ರ	ಭಾಮಿನೀ ಷಟ್ಪದಿ
೮.೩" × ೬.೨"	?	?
೪೦ ಪತ್ರ	೨೨ ಪಂಕ್ತಿ	೨೦ ಅಕ್ಷರ

ಆದಿ : ಕಕೋಕಾಶಾಸ್ತ್ರ ಪ್ರಬಂಧವಂನ್ನು ಬರೆವದಕ್ಕೆ ಶುಭಮಸ್ತು.

ಸೂಚನೆ॥ ವ್ಯಾಸಗತ್ತಾ ನ್ರುಪೊತ್ತುಮಗೇ
ಮುನಿಗ್ಯಾನಾವಿಲ್ಲದೆ ಪೇಳ್ದಾ ಭು
ವನದ ಮಾನುನಿಯರೆಂಬಾವರಾ ಹೃದಯ
ದಾ ವಿನೆಯಪರನಾಗೀ ॥

ಅಂತ್ಯ :

ರಮಣಿ ಮೆಲ್ಲನೆ ಮಲಗಿ ಕಾಲನೂ
ಸಮಧಿ ನೀಡಲೂ ರಮಣಾ ನೋಡಿಯೇ
ಪ್ರೀತ್ಯಾದಿಲೋ ಕಾಲ್ಧಶಿಯಾ ಮಲಗಿಯೇ ಅವಳ ತಲೆದಶಿಗೇ
ರಮಣಗಾಲನೂ ನೀಡಿ ಮತ್ತಾ
ರಮಣಿ ಪುರುಷನಾ ಬೆಂನ್ನ ಕೆಳಯುತೇ
ಸಮದಲ್ಯೆರಡು ಕಾಲಗಿಡುವಳೂ ಕೊಡುತ ಪುರುಷ ॥ ೪೩ ॥

ವಿಷಯ : ಕಾಮಶಾಸ್ತ್ರ.

ವಿಶೇಷ : ಮೋಡಿಲಿಪಿ. ಗ್ರಂಥ ಅಸಮಗ್ರ.

202

ಕೆ.ಎ. ೧೪೦	**ಕಂಠೀರವ ನರಸರಾಜ ವಿಜಯ**	ಸಾಂಗತ್ಯ
೧೨.೫" × ೭.೯"	ಗೋವಿಂದವೈದ್ಯ	೧೬೪೪
೧–೭೦ ಪತ್ರ	೩೨ ಪಂಕ್ತಿ	೩೨ ಅಕ್ಷರ

ಆದಿ : ಶ್ರೀ × × ಕಂಠೀರವ ನರಸರಾಜೇಂದ್ರ ವಿಜಯ ಬರಿವರಿ ಶುಭಮಸ್ತು × ×

ಕಂದ ಪದ್ಯ॥ ಶ್ರೀರಮಣಿ ಗೌರಿ ಶಾರದೆ
ನಾರಾಯಣ ರುದ್ರ ಬ್ರಂಹ್ಮ ಸಕಲ ಸುರೌಘಂ
ಧಾರುಣಿಗಧಿಪತಿ ವರ ಕಂ
ಠೀರವ ನೃಪನೀಯಲೊಲಿದು ಗೆಲವಂ ಬಲವಂ

ಸಾಂಗತ್ಯ॥ ಶ್ರೀಮದಮರಗಣ ಮಕುಟರಂಜಿತ ದಿವ್ಯ
ರಾಮಣೀಯಕ ಶುಭಚರಣಾ
ಕಾಮಜನಕ ಕಾರುಣ್ಯಮೂರುತಿ ರಂಗ
ಧಾಮ ರಕ್ಷಿಸು ತ್ರೈಜಗವಾ ॥ ೧ ॥

ಅಂತ್ಯ :
ಅರಿನೃಪ ಗಜಕಂಠೀರವ ಮೈಸೂರ
ನರಸ ರಾಜೇಂದ್ರಚಂದ್ರಮನಾ
ಚರಿತೆಯ ಲಾಲಿಸಿದರಿಗೆ ಮನದಿಷ್ಟಾರ್ಥವ
ಕರುಣಿಸುತಿಹ ವರ ತ್ರಿಣೇತ್ರನು ವರಗಳನೂ ॥ ೪೪ ॥
× × ಸಂಧಿ ೨೬ಕ್ಕಂ ೨೪೭೦ಕ್ಕಾಂ ಮಂಗಳ ಮಹಾಶ್ರೀ

ವಿಷಯ : ಮೈಸೂರರಸರಾದ ಶ್ರೀ ಕಂಠೀರವ ನರಸರಾಜೇಂದ್ರರ ಚರಿತ್ರೆ.

ವಿಶೇಷ : ಪ್ರತಿ ಚೆನ್ನಾಗಿದೆ. ಕೊನೆಯಲ್ಲಿ "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ೧೫೭೦ ಸಂದ ಸರ್ವಧಾರಿ ಸಂವತ್ಸರದ ಜೇಷ್ಠ ಶುದ್ಧ ೧೧ ಚಂದ್ರವಾರದಲ್ಲೂ ಶ್ರೀಮನ್ಮಹಾದೇವ ದೇವೋತ್ತಮನಾದ ಶ್ರೀ ಲಕ್ಷ್ಮೀನರಸಿಂಹನು ಕಂಠೀರವ ನರಸರಾಜೇಂದ್ರನಿಗೆ × × × × ಶ್ರೀನಿವಾಸಪಂಡಿತರ ಮಗ ಗೋವಿಂದವೈದ್ಯನು ಕಂಠೀರವ ವಿಜಯವನ್ನು × × ಪದಪದ್ಮಗಳಿಗಭಿನವಿಸುವೆ" ಎಂದು ಬರೆದಿದೆ.

203

ಕೆ.ಎ. ೧೨೬	**ಕದಿರೇರಾಯರ ಪೂರ್ವವೃತ್ತಾಂತ**	ವಚನ
೧೩.೧" × ೮.೩"	?	೧೬೫೦
೧–೨೯ ಪತ್ರ	೩೨ ಪಂಕ್ತಿ	೩೬ ಅಕ್ಷರ

ಆದಿ : ಕದಿರೇರಾಯರ ಪೂರ್ವವೃತ್ತಾನ್ತಗಳು ಪ್ರಥಮಾ—ಶ್ರೀ ಸಿದ್ಧಿವಿನಾಯಕ ಸ್ವಾಮಿ ಪಾದಾರವಿಂದವೇ ಗತಿ ॥ ಶಾರದಾಂಬಾಯ ನಮಃ ಶ್ರೀಗುರುಭ್ಯೋ ನಮಃ ಶುಭಮಸ್ತು ॥ ನಿರ್ವಿಗ್ನಮಸ್ತು ॥ ಸ್ವಷ್ಥಿ ಶ್ರೀಮನ್ಮಹಾಮಂಡಲೇಶ್ವರ ರಾದ ಸಾಳುವ ಕೃಷ್ಣದೇವರಸವಡೆರು | ನಗರಿ | ಹೈಲೆ ತುಳು ಕೊಂಕಣ ಮುಂತಾದ ರಾಜ್ಯಂಗಳನ್ನು ಪರಿಪಾಲಿಸುತ್ತಂ | ಯಿದ್ದದಲ್ಲದೆ ಬಟ್ಟಕಳದಲ್ಲಿಹ ದೇಗೋವೆ ರಾಜ್ಯದ ಸಾಸಿಷ್ಠ ಪ್ರದೇಶಕ್ಕೆ ಮುಖ್ಯವಾದ ಅಷ್ಟಗ್ರಾಮದೊಳಗಣ ಲೊವಳಿಗ್ರಾಮದ ಭಾರ್ಗವ ಜಮದಗ್ನಿ ವಛಗೋತ್ರದ ಸಾತಕಿಣಿ ಮಗ ನರಸ ಕಿಣಿಯು ಗೋಕರ್ನದ ಶ್ರೀ ಮಹಾಬಲೇಶ್ವರ ದೇವರ ಸನ್ನಿಧಿಯಲ್ಲಿ ತಾನು ಮಾಡುವ ಸತ್ಯ ಧರ್ಮ ಬಟ್ಟಕಳದ ನೀರು ನಿವಾರಣ ಸ್ಥಳದಲ್ಲಿ ತಾನು ಕಟ್ಟಿ ಸಿದ ದೇವಸ್ಥಾನದ ಶ್ರೀ ಲಕ್ಷ್ಮೀನರಸಿಂಹ ದೇವರ ಅಂಗ ರಂಗ ವೈಭೋಗ ಮುಂತಾದ ನಡೆಸುವ ಬಗ್ಯೆ ಸಹಾ ಸೈಗನಹಳ್ಳಿ ಮಾಗಣೆ ಹರವರಿ ಹೆಗ್ಗರೆ ಗ್ರಾಮವು ಧರ್ಮಮೂಲವಾಗಿ ಹಡವ ಅರ್ಥವನ್ನು ತೆಗೆದುಕೊಂಡು ಗ್ರಾಮ ವನು ತನಗೆ ಪಾಲಿಸಬೇಕೆಂದು ಹೇಳಿಕೊಂಡಲ್ಲಿ ಶಾಲಿವಾಹನ ಶಖವರ್ಷ ೧೪೭೨ನೆಯ ಸೌಮ್ಯ ಸಂವತ್ಸರದ ಅಷಾಢ ಬ ೫ ಯಿಂದುವಾರದಲ್ಲೂ ಆ ಹೆಗ್ಗರೆ ಗ್ರಾಮವನು ಪಾಲಿಸಿಕೊಂಡು ಬರಶಿಕೊಟ್ಟ ಸಾಧನವಿಷ್ಟೆ ಪ್ರಮಾಣ.

ಅಂತ್ಯ : ಪುನಹ ಹೊಂನಾಳಿಯಂಬದಾಗಿ ದೊಡ್ಡದಾಗಿ ಕೋಟೇ ಕಟ್ಟಿದನು. ಯಿಾ ಸಂವತ್ಸರದ ವೈಶಾಖ ಶುದ್ಧ ೧ ಸೋಮವಾರ ಆರಂಭ ಮಾಡಿದರು. ಕೋಟೇ ಪೂರೈಶಿದ್ದು ಶಕ ವ ೧೨೮೭ನೇ ವಿಶ್ವಾವಸುವರಿಗೆ ವರುಷ ೫ಕ್ಕೆ ಕೋಟೆ ಕೆಲ್ಸ ಮುಗೀತು | ಚಲುವರಂಗಪ್ಪನಾಯ್ಕ ಹೊನ್ನಾಳಿ ಕಿಲ್ಲೇದ ಅಧಿಕಾರ ಮಾಡಿದ್ದು ಶಕ ೧೨೮೩ ಪ್ರವಸಂವತ್ಸರದ ಆರಭ್ಯ ಶಕ ೧೩೦೩ ದುರ್ಮತಿವರಿಗೆ ವರುಷ ೨೦ ಆಳಿದರು ಚಲುವ ರಂಗಪ್ಪನಾಯ್ಕರ ಮಗ ಮಾರಭೂಪರಾಯರು ಆಳಿದ ವರುಷ ಶಾಲೀವಾಹನಶಕ ೧೩೦೪ನೇ ದುಂದುಭಿ ವರುಷದಿಂದ ೫ ವರುಷ ಯಿಲ್ಲಿಗೆ ಬೆಳಗುತ್ತಿ ವಂಶಾವಳಿ ಆಕ್ಕೈರು. ಶ್ರೀರಂಗಪಟ್ಟಣದ ವೃತ್ತಾನ್ತ ಮೈಸೂರ ದೊರೆಗಳ ಪೂರ್ವಸಂಚಿತ ವೃತ್ತಾನ್ತ ಮತ್ತು ಮೈಸೂರುಕೋಟೆ ಮತ್ತು ಸಮಸ್ತ ನಿರೂಪಶಾಸನ, ದೇವಸ್ಥಾನ ವಗೈರೆ ಬರದಿರುತ್ತೆ. ಯಿದು ಬಿಟ್ಟು ಯಿಾ ೩ನೇ ಬರೀಯಂತ ಅಪ್ಪಣೆ ಆದರೇ ಬರಿಯುತ್ತೇನೆ. ಜಾಹಗೀರು

ಗೋಕರ್ನ ಕಂಪಿಸ್ಥಲ ಶಾಸನ ಪೂರ್ವ ಕದಿರೆರಾಜ ಪೂರ್ವದ ರಾಜರು ಕೊಟ್ಟ ದೇವಸ್ಥಾನ ಕಟ್ಟಿಸಿದ್ದು ಸಹಯಿವೆ. ಯಿದರಲ್ಲಿ ಬಿಟ್ಟು ಇದ್ದೇನೆ ಪರಾಂಬರಿಕೆ ಇರಲಿ.

ವಿಷಯ : ಕದಿರೆರಾಯರ ಆಳ್ವಿಕೆಗೆ ಸಂಬಂಧಪಟ್ಟ ಗ್ರಾಮಗಳು ಅವರ ಅಧೀನರು ಹುದ್ದೇದಾರರ ಅಧಿಕಾರದ ವಿವರಗಳು ಅವರ ವೇತನಾದಿಗಳು ಗ್ರಾಮದಾನ (ದೇವಸ್ಥಾನ ಮುಂತಾದುವುಗಳಿಗೆ) ವಿವರವು, ಸಾಳುವ ಕೃಷ್ಣದೇವರಸವಡೇರು ಮೊದಲು ಮಾಡಿ ಬೆಳಗುತ್ತಿ ವಂಶಾವಳಿಯಲ್ಲಿ ಚಲುವ ರಂಗಪ್ಪನಾಯಕರ ಮಗ ಮಾರಭೂಪರಾಯರ ವರೆಗೆ ವಿವರಗಳು.

ವಿಶೇಷ : ಸಾಳುವ ಕೃಷ್ಣದೇವರಸವಡೇರು ರಾಜ್ಯಸಂಪಾದನೆ ಮಾಡಿ ಆಳಿದುದು, ಗೋಪಿಯ ವೃತ್ತಾಂತ, ಪೂರ್ವದ ರಾಯರ ವೃತ್ತಾಂತ, ಗೋವೇ ಅರಸರ ಪೂರ್ವ ವೃತ್ತಾಂತ, ಗೋವೇ ಅಷ್ಟಗ್ರಾಮದ ವೃತ್ತಾಂತ, ಗೋವೆ ಸಂಸ್ಥಾನದ ವೃತ್ತಾಂತ, ಶಿವಮೊಗ್ಗೆ ಪೂರ್ವರಾಯರ ವೃತ್ತಾಂತ, ಪೂರ್ವರಾಯರ ಪೈಕಿ ನಗರದ ವೃತ್ತಾಂತ, ಸಾಗರದ ಪೂರ್ವರಾಯರ ವೃತ್ತಾಂತ, ಪೂರ್ವಿಕರ ಚಿತ್ರ ಕಲ್ಲುದುರ್ಗದ ವೃತ್ತಾಂತ, ಚಿತ್ರಕಲ್ಲುದುರ್ಗದ ವೃತ್ತಾಂತ, ಇದರ ಪೂರ್ವ ವೃತ್ತಾಂತ, ಹರಿಹರ ಮಹದೇವರಾಯರ ವೃತ್ತಾಂತ, ಸಂತೇಬೆನ್ನೂರ ವೃತ್ತಾಂತ, ಸಾಗರದ ಸಂತೇಬೆನ್ನೂರ ವೃತ್ತಾಂತ, ಚಿತ್ರಕಲ್ಲುದುರ್ಗದ ಸಂತೆ ಬೆನ್ನೂರ ವೃತ್ತಾಂತ, ಚಿತ್ರದುರ್ಗ ಸಂತೆಬೆನ್ನೂರ ವೃತ್ತಾಂತ, ಹೊದಿಗೆರೆ ವೃತ್ತಾಂತ, ಬೆಂಗಳೂರು ಕಲ್ಲೇನಹಳ್ಳಿ ವೃತ್ತಾಂತ, ಸೂಳೇಕೆರೆ ವೃತ್ತಾಂತ ವಿವರ, ಸೂಳೇಕೆರೆ ಪೂರ್ವರಾಯರ ವೃತ್ತಾಂತ, ಬೆಳಗುತ್ತಿ ಪೂರ್ವರಾಯರ ವೃತ್ತಾಂತ, ಬೆಳಗುತ್ತಿ ಅರಸರ ವೃತ್ತಾಂತ, ಬೆಳಗುತ್ತಿ ವೃತ್ತಾಂತ ಸಹ ವಿವರವಾಗಿ ಆಯಾ ಚರಿತ್ರೆಯ ಕಾಲನಿರ್ಣಯದ ಪೂರ್ವಕ ನಿರೂಪಿತವಾಗಿವೆ. ಪ್ರತಿಯು ಚೆನ್ನಾಗಿದೆ. ಅಕ್ಷರಗಳಲ್ಲಿ ಲೋಪದೋಷಗಳಿವೆ.

204

ಕೆ. ಎ. ೧೦೭/೪	**ಕನಕಾಂಗೀ ಕಲ್ಯಾಣ**	ಯಕ್ಷಗಾನ
೧೨.೧" × ೭.೮"	ನಿತ್ಯಾನಂದಾವಧೂತ	ಸು. ೧೮೦೦
೪೬–೫೭ ಪತ್ರ	೩೦ ಪಂಕ್ತಿ	೩೦ ಅಕ್ಷರ

ಆದಿ : ಯಕ್ಷಗಾನದಲ್ಲಿ ಕನಕಾಂಗೀ ಕಲ್ಯಾಣ ಬರಿಯುವದಕ್ಕೆ ನಿರ್ವಿಘ್ನಮಸ್ತು ॥ ನಾದಿವೃತ್ತಾ ॥

ಶ್ರೀ ಗೋಪಾಲಂ ಸುರವರ
ವಾಗೀಶಾದ್ಯಮಿತ ಮೌನಿನುತ ಪದಕಮಲಂ
ನಾಗಾರೀಧ್ವಜನೊಲಿದುಂ
ಬೇಗದೊಳಿಮಗೀಗ ಮುಕ್ತಿ ಸಾಂಬ್ರಾಜ್ಯವನೂಂ ॥ ೧ ॥
ರಾಗಾ ಸವುರಾಷ್ಠ ॥ ಆದಿ ॥
ಜಯ ಜಯ ಗಣನಾಥಾ। ದುರೀತಾಮಯವರ್ಜಿತ ಖ್ಯಾತಾ ಜಯ
ಜಯ ॥ ಪಲ್ಲ ॥

× × × ×

ಯಿಾ ಭಾರತದ ಕಥಾಸಾರದಲಿ ಬಳಿಕಾ
ಸವುಭದ್ರೆಯಾತ್ಮಜನೀಗಂದು ಜಿತ ನರಕಾ ॥ ೧೧ ॥
ಹಲಧರನ ಸುತೆಯ ಕನಕಾಂಗಿಯೆಂದೆಂಬಾ
ಚಲುವ ಕಂನ್ಯಾರತ್ನವಂನ್ನು ಮುದಗೊಂಬಾ ॥ ೧೨ ॥
ಜನರು ಹರುಷಿಸುವಂತ್ತೆ ಪರಿಣಯಂಗೈದಾ
ಘನತರದ ಚಾರಿತ್ರವುಂ ಪೇಳ್ವೆದೆಂದಾ ॥ ೧೩ ॥

ಅಂತ್ಯ : ಕಂದ ಪದ್ಯಾ ॥ ನಿತ್ಯಾನಂದಾವದೂತನೂ
ಮತ್ತಧಿಕೋಲ್ಲಾದಿಂದ ಹರಿಯಂ ನೆನದೂಂ
ಮತ್ತೀ ಕಥೆಯಂ ಕಂನಡ
ದರ್ಥದೊಳಿದ ಯಕ್ಷಗಾನದಿಂ ವಿರಚಿಸಿದೆಂ ॥ ೪೭೫ ॥

× × × ×

ದೈತ್ಯಾಬ್ಧಿಯ ವಡಭಾನಲಗೆ
ಪ್ರತೀಕ್ಷ ಸಾಕ್ಷಾತ್‌ನೆನಿಸಿದಗೇ
ನಿತ್ಯಾನಂದಾವಧೂತಾತ್ಮಕನಿಗೆ
ಕೃತ್ಯಾಕೃತ್ಯ ವಿವರ್ಜಿತಗೆ ॥ ಮಂಗಳಂ । ಜಯ ಮಂಗಳಂ ॥ ೪೮೦ ॥
ಅಂತು ಸಂಧಿ ೧ಕ್ಕಂ ಪದನೂ ನಾನೂರು ಯೆಂಬತ್ತುಕ್ಕಂ ಮಂಗಳಂ ಮಹಾಶ್ರೀ

ವಿಷಯ : ಬಲರಾಮನ ಮಗಳಾದ ಕನಕಾಂಗಿಯ ಮದುವೆ.

ವಿಶೇಷ : ಇದೇ ಪುಸ್ತಕದಲ್ಲಿ ಐರಾವತ, ದ್ರೌಪದೀ ಕಲ್ಯಾಣ, ಸುಭದ್ರಾ ಕಲ್ಯಾಣ, ಚಿತ್ರಸೇನನ ಕಾಳಗ, ಸಭಾಪರ್ವ, ಇಂದ್ರಕೀಲ ಎಂಬ ಗ್ರಂಥಗಳಿವೆ.

205

ಕೆ.ಬಿ. ೧೭೧ **ಕನಕಾಂಗೀ ಕಲ್ಯಾಣ** ಯಕ್ಷಗಾನ
೭.೫" × ೬.೩" ನಿತ್ಯಾನಂದಾವಧೂತ ಸು ೧೮೦೦
೧–೭೭ ಪತ್ರ ೧೧ ಪಂಕ್ತಿ ೧೭ ಅಕ್ಷರ

ಆದಿ : ಶ್ರೀಗುರುಭ್ಯೋಂ ನಮಃ ಕನಕಾಂಗಿ ಕಲ್ಯಾಣ ಬರೆವರೆ ಶುಭಮಸ್ತು ||

ನಾಂದಿ ಕಂದ || ಶ್ರೀಗೋಪಾಲಂ ಸುರವರ
ವಾಗೀಶಾದ್ಯಮಿತ ಮೌನಿನುತ ಪದಕಮಲಂ
ನಾಗಾರಿಧ್ವಜನೊಲಿದುಂ
ಬೇಗದೊಳೆನಗೀಗ ಮುಕ್ತಿಸಾಂಬ್ರಾಜ್ಯವನುಂ ||

× × × ×

ಕಂದ || ಗುರುಬ್ರಹ್ಮಾನಂದಮರೇಂದ್ರರ
ಸೆರೆ ಬಿಡದೆನ್ನ ಹೃದಯಕಮಲಂಗಳೊಳುಂ
ನಿರುತಂ ಧ್ಯಾನಿಸುತಂ ಹಲ
ಧರನಾತ್ಮಜೆಗಾದ ಪರಿಣಯವ ವಿರಚಿಸುವೇಂ ||೬||

ಅಂತ್ಯ : ಕಂದ || ನಿತ್ಯಾನಂದವಧೂತನು
ಮತ್ಯಧಿಕೋಲ್ಲಾಸದಿಂದ ಹರಿಯಂ ನೆನದಂ
ಮತ್ತೀ ಕಥೆಯೊಳಗಂ ಕನ್ನಡ
ದರ್ಥದೊಳಿದ ಯಕ್ಷಗಾನದಿ ವಿರಚಿಸಿದೇಂ ||೧||

× × × ×

ದೈತ್ಯಾಬ್ಧಿಯ ವಡಭಾನಳಗೆ
ಪ್ರತ್ಯೇಕ್ಷ ಸಾಕ್ಷತ ನೆಲಸಿದಗೆ
ನಿತ್ಯಾನಂದವಧೂತಾತ್ಮಕನಿಗೆ
ಕೃತ್ಯಾಕೃತ್ಯ ವಿವರ್ಜಿತಗೆ ಮಂಗಳಂ ಜಯಮಂಗಳಂ ||

ವೈಕುಂಠಭಾಗವತರು ವಿರಚಿಸಿದ ಕನಕಾಂಗಿಕಲ್ಯಾಣ ಸಂಪೂರ್ಣ ಮಂಗಳ ಮಹಾಶ್ರೀ ||

ವಿಷಯ : ಬಲರಾಮನ ಮಗಳಾದ ಕನಕಾಂಗಿಯ ಮದುವೆ.

ವಿಶೇಷ : ಪ್ರತಿಯು ಚೆನ್ನಾಗಿದೆ. ಆದಿಯ ಮಂಗಳ ಪದ್ಯದಲ್ಲಿ ಗೋಪಾಲಸ್ವಾಮಿಯನ್ನು ಸ್ತುತಿಸಿದ್ದಾನೆ. ಅಂತ್ಯದಲ್ಲಿ ನಾರಾಯಣನನ್ನು ಸ್ಮರಿಸಿರುವ ಮಂಗಳಾ

ರತಿ ಪದ್ಯಗಳ ರಚನೆಯಿದೆ. ಮೊದಲಿನಲ್ಲಿಯೂ ಕೊನೆಯಲ್ಲಿಯೂ ನಿತ್ಯಾನಂದಾವಧೂತ ರಚಿತವೆಂದು ಪದ್ಯಭಾಗಗಳಿಂದ ಕಂಡುಬರುತ್ತದೆ. ಆದರೆ ಕೊನೆಯಲ್ಲಿ ಮಾತ್ರ ವೈಕುಂಠಭಾಗವತರು ರಚಿಸಿದ್ದೆಂದು ಬರೆದಿರುತ್ತದೆ. ಇದರಿಂದ ಈ ಗ್ರಂಥಕಾರನಿಗೆ ವೈಕುಂಠಭಾಗವತರೆಂಬ ಹೆಸರೂ ಇತ್ತೆಂದು ಊಹಿಸಬಹುದಾಗಿದೆ. ಪ್ರತಿಯಲ್ಲಿ ಕವಿಯ ಕಾಲವಾಗಲೀ ಸ್ಥಳದ ವಿಷಯವಾಗಲೀ ಕಂಡುಬರುವುದಿಲ್ಲ.

206

ಕೆ. ಬಿ. ೩೧೪	ಕನಕಾಂಗೀ ಕಲ್ಯಾಣ	ಯಕ್ಷಗಾನ
೭.೭" × ೬.೩"	ನಿತ್ಯಾನಂದಾವಧೂತ	ಸ. ೧೮೦೦
೧–೩೨ ಪತ್ರ	೧೬ ಪಂಕ್ತಿ	೨೪ ಅಕ್ಷರ

ಆದಿ : ಕನಕಾಂಗಿ ಕಲ್ಯಾಣ ಬರಿಯುವುದಕ್ಕೆ ಶುಭಮಸ್ತು × ×

ನಾಂದಿಕಂದ ॥ ಶ್ರೀಗೋಪಾಲಂ ಸುರವರ
ವಾಗೀಶಾದ್ಯಮಿತ ಮೌನಿನುತ ಪದಕಮಲಂ
ನಾಗಾರಿಧ್ವಜನೊಲಿದುಂ
ಬೇಗದೊಳೀಯುವದು ಪರಮ ಸಾಂಬ್ರಾಜ್ಯವನು ॥೧॥

× × × ×

ಕಂದ ॥ ಗುರು ವಾಗೀಶಾದ್ಯಮರೇಂದ್ರರ
ನೆರ....ಯ ಬಿಡದೆ ಹೃದಯಕಮಲದೊಳಿಡುತಂ
ನಿರತದಿ ನೆನೆಯುತಲಾ ಹಲ
ಧರನಾತ್ಮಜೆಗಾದ ಪರಿಣಯವ ವಿರಚಿಪೆನು ॥೬॥

ಅಂತ್ಯ : ಕಂದ ॥ ನಿತ್ಯಾನಂದವಧೂತನು
ಮತ್ಯಧಿಕೋಲ್ಲಾಸದಿಂದ ಹರಿಯುಂ ನೆನೆದುಂ
ಮತ್ತೀ ಕಥೆಯುಂ ಕನ್ನಡ
ದರ್ಥದೊಳಿದ ಯಕ್ಷಗಾನದಿಂ ವಿರಚಿಸಿದೆಂ ॥೪೬೬॥

× × × ×

ದೈತ್ಯಾಬ್ಧಿಯ ವಡಬಾನಲಗೆ
ಸತ್ಯಾತ್ಮರಿಗೆ ಪ್ರತ್ಯೈಕ್ಷನಿಗೆ
ನಿತ್ಯಾನಂದಾವಧೂತಾತ್ಮಕನಿಗೆ
ಕೃತ್ಯಾಕೃತ್ಯ ವಿವರ್ಜಿತಗೆ ಮಂಗಳಂ ಜಯಮಂಗಳಂ ॥೪೭೧॥

ಅಂತು ಕನಕಾಂಗಿ ಕಲ್ಯಾಣದ ಕಥೆಗೆ ಮಂಗಳಮಹಾಶ್ರೀ.

ವಿಷಯ : ಬಲರಾಮನ ಮಗಳಾದ ಕನಕಾಂಗಿಯ ಮದುವೆ.

ವಿಶೇಷ : ಗ್ರಂಥದ ಆದಿಯಲ್ಲಿ ಕೆಲವು ಪತ್ರಗಳನ್ನು ಹುಳು ತಿಂದಿದೆ.

207

ಕೆ. ಬಿ. ೩೬೧	**ಕನಕಾಂಗೀ ಕಲ್ಯಾಣ**	ಯಕ್ಷಗಾನ
೭.೫"×೫"	ನಿತ್ಯಾನಂದಾವಧೂತ	ಸು. ೧೮೦೦
೧–೯೩ ಪತ್ರ	೧೨ ಪಂಕ್ತಿ	೧೪ ಅಕ್ಷರ

ಆದಿ : ಕನಕಾಂಗಿ ಕಲ್ಯಾಣ ಬರೆಯುವದಕ್ಕೆ ನಿರ್ವಿಘ್ನಮಸ್ತು.

॥ ನಾಂದಿ ॥ ಕಂದ ॥ ಶ್ರೀಮಂಜುನಾಥ ಪ್ರಸನ್ನ ॥

ಶ್ರೀ ಗೋಪಾಲಂ ಸುರವರ
ವಾಗೀಶಾದ್ಯಮಿತ ಮೌನಿನುತ ಪದಕಮಲಂ
ನಾಗಾರಿಧ್ವಜನೊಲಿದುಂ
ಜಿಗದೊಳೆನಗೀಗೆ ಮುಕ್ತಿಸಾಂಬ್ರಾಜ್ಯವನುಂ ॥ ೧ ॥

× × × ×

ಕಂದ ॥ ಗುರು ಬ್ರಹ್ಮಾನಂದಮರೇಂ
ದ್ರರ ನೆರಬಿಡದೆಂನ ಹೃದಯಕಮಲಂಗಳೊಳುಂ
ನಿರುತಂ ಧ್ಯಾನಿಸುತಂ ಹಲ
ಧರನಾತ್ಮಜೆಗಾದ ಪರಿಣಯುವ ವಿರಚಿಸುವೇಂ ॥ ೬ ॥

ಅಂತ್ಯ : ಕಂದ ॥ ನಿತ್ಯಾನಂದವಧೂತನು
ಮತ್ಯಧಿಕ್ಕೋಲ್ಲಾಸದಿಂದ ಹರಿಯುಂ ನೆನೆದಂ
ಮತ್ತೀ ಕಥೆಯೊಳಗಂ ಕನ್ನಡ
ದರ್ಥದೊಳಿದ ಯಕ್ಷಗಾನದಿಂ ವಿರಚಿಸಿದೇಂ ॥ ೬೦೭ ॥

× × × ×

ದೈತ್ಯಾಬ್ಧಿಯ ವಡಬಾನಳಗೆ
ಪ್ರತ್ಯಕ್ಷ ಸಾಕ್ಷತ ನೆಲಶಿದಗೆ
ನಿತ್ಯಾನಂದವಧೂತಾತ್ಮಕನಿಗೆ
ಕೃತ್ಯಾಕೃತ್ಯ ವಿವರ್ಜಿತಗೆ ॥ ೬೧೨ ॥ ಶ್ರೀ ಶ್ರೀ
ಕನಕಾಂಗೀ ಕಲ್ಯಾಣಂ ಸಂಪೂರ್ಣ ಶ್ರೀ

ಸೂರ್ಯನಾರಾಯಣಶಾಸ್ತ್ರಿ ಸ್ವದಸ್ತೂರ ಬರಹ— ಇಂತೀ ಸಂಪೂರ್ಣಂ.

ವಿಷಯ : ಬಲರಾಮನ ಮಗಳಾದ ಕನಕಾಂಗಿಯ ಮದುವೆ.

ವಿಶೇಷ : ಪ್ರತಿಯು ಚೆನ್ನಾಗಿದೆ. ಮಂಗಳಪದ್ಯ ಮತ್ತು ಕೊನೆಯ ಪದ್ಯಗಳಲ್ಲಿ ನಾರಾಯಣಸ್ತುತಿಯಿದೆ. ೫೭, ೫೮, ೫೯ ಸಂಖ್ಯೆಯ ಎರಡೆರಡು ಪತ್ರಗಳಿವೆ. ಕ್ರಮಸಂಖ್ಯೆ ೯೧ ಬಿಟ್ಟುಹೋಗಿದೆ.

208

ಕೆ. ಬಿ. ೪೦೩/೩	ಕನಕಾಂಗೀ ಕಲ್ಯಾಣ	ಯಕ್ಷಗಾನ
೮.೩" × ೬.೪"	ನಿತ್ಯಾನಂದಾವಧೂತ	ಸು. ೧೮೦೦
೨೦–೫೭ ಪತ್ರ	೨೩ ಪಂಕ್ತಿ	೨೩ ಅಕ್ಷರ

ಆದಿ : ಕನಕಾಂಗೀ ಕಲ್ಯಾಣ ಬರಿಯುವುದಕ್ಕೆ ಶುಭಮಸ್ತು ॥ ನಾಂದಿ । ಕಂದ ॥

ಶ್ರೀ ಗೋಪಾಲಂ ಸುರವರ
ವಾಗೀಶಾದ್ಯಮಿತ ಮೌನಿ ನುತಪದ ಕಮಲಂ
ನಾಗಾರಿಧ್ವಜನೊಲಿದುಂ
ಬೇಗದೊಳೆನಗೀಗೆ ಮುಕ್ತಿ ಸಾಮ್ರಾಜ್ಯವನು ॥ ೧ ॥

ನಾದನಾಮಕ್ರಿಯ ॥ ಏಕತಾಳ

ಜಯಜಯ ಗಣನಾಥ ದುರಿತಾ
ಮಯ ವರ್ಜಿತ ಖ್ಯಾತ ॥ ಪ ॥
ಉರಗಬಂಧನ ತೋಷ
ಕರಧೃತ ನಿರತಾಂಕುಶಪಾಶ
ಪರಮಪಾವನವೇಶ ಪಾಹಿ ಶ್ರೀ
ಕರಮೂರ್ತಿ ವಿಘ್ನೇಶ ॥ ೨ ॥
ಅಂಬಾಸುತಾದೇವ ದಿವಿಜ ಕ
ದಂಬ ಸನ್ನುಸಿದೇವ
ಕುಂಭಿನಿ ವಕ್ತ್ರಾವಲಂಬನ
ಕುಂಭಿನಿ ಜನಭಾವ ॥ ೩ ॥
ಸಿಂಧು ಸುಗಾಂಭೀರ್ಯಾ ಬಹುವಿಘ್ನಾಂಧ ಕರಾಳ ಸೂರ್ಯಾ
ಸುಂದರ ವರಶೌರ್ಯ ನಿತ್ಯಾನಂದಾವಧೂತಾರ್ಯ ॥ ೪ ॥

× × × ×

ನಿರುತಂ ಧ್ಯಾನಿಸುತಂ ಹಲಧರ
ನಾತ್ಮಜೆಗಾದ ಪರಿಣಯವ ವಿರಚಿಸುವೇಂ ॥ ೬ ॥

ಅಂತ್ಯ : ದುಷ್ಟರ ಮುಡುಹಲೋಸುಗವಾಗಿ
ಶ್ರೇಷ್ಟತರದ ವಾಜಿಯನೇರಿ
ಸೃಷ್ಟಿಯ ಭಾರವನಿಳುಹಿದ ಕಲ್ಕಿಗೆ
ಅಷ್ಟಮುಖ್ಯಾಂಗನೆಯರಿಗೆ ‖ ೬೦೮ ‖
ದೈತ್ಯಾಬ್ಧಿಯ ವಡವಾನಳಗೆ
ಪ್ರತ್ಯಕ್ಷ ಸಾಕ್ಷಾತ್ ನೆಲಸಿದಗೆ
ನಿತ್ಯಾನಂದಾವಧೂತಾತ್ಮಕನಿಗೆ
ಕೃತ್ಯಾಕೃತ್ಯವಿವರ್ಜಿತಗೆ ‖ ೬೦೯ ‖
ಕನಕಾಂಗೀ ಕಲ್ಯಾಣ ಸಪೂರ್ಣ ‖

ವಿಷಯ : ಬಲರಾಮನ ಮಗಳಾದ ಕನಕಾಂಗಿಯ ವಿವಾಹ.

ವಿಶೇಷ : ಇದೇ ಪುಸ್ತಕದಲ್ಲಿ ಪುತ್ರಕಾಮೇಷ್ಟಿ, ದೂರ್ವಾಸಭೋಜನ, ಅಂಬರೀಷ ಚರಿತ್ರೆ, ಮಾರ್ಕಂಡೇಯಚರಿತ್ರೆ ಎಂಬ ಈ ನಾಲ್ಕು ಕೃತಿಗಳಿವೆ.

209

ಕೆ. ಬಿ. ೧೫೬	ಕನ್ನಡ ಕಾದಂಬರೀ ವ್ಯಾಖ್ಯಾನ	ಗದ್ಯ
೭.೮″ × ೬″	?	?
೧–೯೯ ಪತ್ರ	೧೨ ಪಂಕ್ತಿ	೨೪ ಅಕ್ಷರ

ಆದಿ : ಕನ್ನಡ ಕಾಬದಂರೀ ವ್ಯಾಖ್ಯಾನ ಪ್ರಾರಂಭಃ।
ಉತ್ತರದೇಶದಲ್ಲಿ ನೇತ್ರಾವತಿಯೆಂಬ ನದೀತೀರದಲ್ಲಿ ಇರುವ ವಿದಿಶಾಪಟ್ಟಣದಲ್ಲಿ ಸಮಸ್ತಗುಣಸಂಪನ್ನನಾದ ಸೂದ್ರನೆಂಬ ಅರಸು।

ಅಂತ್ಯ : ವಿಲಾಸವತಿಯ ಅರಮನೆಗೆ ಹೋಗಿ ವಿಲಾಸವತಿಗೆ ಅಡ್ಡಬಿದ್ದು ಅಲ್ಲಿರುವ ಸಕಲ ಜನರುಗಳನು ಮನ್ನಿಸಿ ತನ್ನ ಅರಮನೆಯಲ್ಲಿ ಸ್ತ್ರೀಸಮೇತನಾಗಿ ಸುಖದಲ್ಲಿ ಇದ್ದನು। ಇತಿ ಕನ್ನಡ ಕಾದಂಬರೀ ಸಮಾಪ್ತಂ।

ವಿಷಯ : ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಕಥೆ.

ವಿಶೇಷ : ಸಂಸ್ಕೃತದ ಕಾದಂಬರಿಯ ಸರಳ ಕನ್ನಡ ಗದ್ಯಸಂಗ್ರಹವಿದು.

210

ಕೆ. ಎ. ೧೦	ಕನ್ನಡ ಗಾದೆಗಳು	ಗದ್ಯ
೧೨.೩"×೮.೪"	?	?
೧–೧೦೯ ಪುಟ	೩೩ ಪಂಕ್ತಿ	೧೬ ಅಕ್ಷರ

ಆದಿ : ಗಾದೆಗಳು ॥ ೧ ಅಆ ಬಾರದಿದ್ದರೆ ಅಮರವಾದರೂ ಹೇಳು.
೨ ಅಂಕಣದ ಮನೆಯಾದರೆ ಕೊಂಕಣಿಗನಿಗೆ ಆಗದೆ ?

ಅಂತ್ಯ : ೩೫೪೫ ಕ್ಷೇಮವಿಲ್ಲದಿದ್ದರೂ ಹೇಮದಾಶೆ ಬಿಡ.
೩೫೪೬ ಕ್ಷೌರಕತ್ತಿ ಚಲೋದು, ಯಾಕೆ ಅಳುತ್ತೀರಮ್ಮ
೩೫೪೭ ಕ್ಷೌರಕ್ಕೆ ಕೂತಲ್ಲಿ ಶೀನುಬಂದ ಹಾಗೆ.

ವಿಷಯ : ನಿತ್ಯೋಪಯೋಗಕ್ಕೂ ತಿಳಿವಳಿಕೆಗೂ ಜೋಡಿಸಿರುವ ವಾಕ್ಯಗಳು.

ವಿಶೇಷ : ಕ್ರಿ. ಶ. ೧೮೫೨ರಲ್ಲು ಮಂಗಳೂರಲ್ಲಿ ಕಲ್ಲಚ್ಚಿನಿಂದ ಛಾಪಿಸಿರುತ್ತೆ. "ಅ"ಕಾರಾದಿ ಕ್ರಮದಿಂದ "ಕ್ಷ"ಕಾರಾಂತ್ಯದವರೆಗೆ ಗಾದೆಗಳಿವೆ. ಕರ್ತೃವಿನ ಹೆಸರಾಗಲೀ ಕಾಲದೇಶವಾಗಲೀ ಎಲ್ಲಿಯೂ ಕಂಡುಬರುವುದಿಲ್ಲ. ಇದರಲ್ಲಿ ೧ ರಿಂದ ೩೫೪೭ ರವರಿವಿಗೆ ಗಾದೆಗಳನ್ನು ಸಂಗ್ರಹಿಸಿದೆ.

211

ಕೆ.ಬಿ.೪೨೯/೨	ಕನ್ನಡ ಧಾತುಪಾಠ	ಗದ್ಯ
೭.೭" × ೬"	ಕೇಶಿರಾಜ	ಸು. ೧೨೬೦
೧೫ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ಸುಕವಿ ಕೇಶಿರಾಜ ವಿರಚಿತಮಪ್ಪ ಪ್ರಾಕೃತ ಶಬ್ದಮಣಿದರ್ಪಣ ಧಾತುಃ ಪ್ರಾರಂಬಃ। ಕ್ರಿಯಾರ್ಥೇ ಧಾತುಃ। ಯೀ ಪ್ರದಾನೆ। ವೋ ಸ್ನೇಹೆ। ಕಾ ರಕ್ಷಣೆ।

ಅಂತ್ಯ : ನೆರೆಕೊಳ್ ಸರ್ವಸ್ವಹರಣೆ ಮರ್ಮಭೇದೇಚ।
ಮಾರ್ಕೊಳ್ ಸಂಮುಖೇ। ವಲವರಂಗಳ್ ಪಕ್ಷ ಕಾರೆ ॥ ೯೫೨ ॥
ಯಿತಿ ಧಾತು ಶಬ್ದಮಣಿದರ್ಪಣ ॥ ಮಂಗಳ ಮಹಾಶ್ರೀ ॥

ವಿಷಯ : ಕನ್ನಡ ಧಾತುಗಳು ಮತ್ತು ಅವುಗಳ ಅರ್ಥ.

ವಿಶೇಷ : ಪತ್ರಗಳ ಕ್ರಮಸಂಖ್ಯೆಯನ್ನು ಕೊಟ್ಟಿಲ್ಲ. ಇದರೊಂದಿಗೆ ಕನ್ನಡ ಧಾತು ಪಾಠ, ಭಾರತನಿಘಂಟು, ಶಬ್ದರತ್ನಾಕರ, ನಾನಾರ್ಥಕಂದ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ(ಸಟೀಕು), ಕರ್ನಾಟಕ ಧಾತು ನಿರ್ಣಯು ಎಂಬ ಗ್ರಂಥಗಳೂ ಇವೆ.

212

ಕೆ.ಬಿ. ೨೯೦/೭	**ಕನ್ನಡ ಶಬ್ದಮಂಜರೀ ಟೀಕು ಸುಧಾ**	ಗದ್ಯ
೭.೬." × ೬.೩"	?	?
೭೩—೧೪೪ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಕನಡು ಶಬ್ದಮಂಜರಿ ಟೀಕು ಸುದಾ ಬರೆಯುುವದಕ್ಕೆ ಶುಭಮಸ್ತು ॥

ಶ್ರೀಮದವಿರಳ ಸಕಲ ಗುಣಾತೀತ
ನಾಮರೂಪ ಕ್ರಿಯಾರಹಿತ ಶ್ರುತಿತತಿವಿನುತ
ಕಾಮಿಕಫಲಪ್ರದಾಯಕ ಸಕಲ ಲೋಕಾನಾಯಕ ನಿತ್ಯನಿರ್ಮ್ಮಾಯಕಾ
ರಾಮಣೀಯಕ ಯೋಗಿಜನ ಮನೋನಿಲಯ ಚಿ
ತ್ಕಾಮಿನೀಕಾಂತ ಕರುಣಿಸು ವಿಮಲ ಮತಿಯ ಮ
ತ್ಸ್ವಾಮಿ ವರ ಗುರು ನಿರಂಜನ ವೃಜಿನ ಮೋಘಪ್ರಭಂಜನ
ಮದನಭಂಜನಂ ॥ ೧ ॥

ವರ ಷಟ್ಸ್ಥಲಾಚಾರ ಸಂಸಿದ್ಧನಮಲ ಸು
ಸ್ತಿರ ಶೈವ ಪಂಚಾಕ್ಷರೀ ಮಂತ್ರ ಹೃದಯ
ನುರುತರ ಸತ್ಕ್ರಿಯಾ ಜ್ಞ್ಯಾನ ಸಂಪನನಖಿಳ ಶಾಸ್ತ್ರಾರ್ಥ ಕೋವಿದ
ಪಾವನಾ

ಚರಿತ ಘನಗುರು ನಿರಂಜನ ಲಿಂಗ
ಚರಣ ಸರಸಿರುಹ ಸೌರಭಾ ಮಧುಕರಂ ತೋಂಟ
ದಾರ್ಯಂ ಬಿತ್ತರಿಶಿದನೆನಲ್ಕೆ ಮೆ
ಚ್ಚರರೊಳರೆ ಕರ್ನಾಟ ಶಬ್ದಮಂಜರಿಯನಿದನೂ ॥ ೨ ॥

ಯಳೆದೇರ । ನೆಲದೇರನೆಂದು । ಗೊರವಂ । ಗುರುತ್ವಭಾವವುಳ್ಳಾತನೆಂದು ಗೌರವವುಳ್ಳಾತನೆಂದು ।

ಅಂತ್ಯ : ಕರಗಳೊಳು । ಕೈಯಲ್ಲಿಯು । ಕೆಳಗಿನೊಳು । ಕೆಳಗಿನಲ್ಲಿಯು । ಯಿ ೨ ರಲ್ಲಿಯು । ತಳ । ತಳವೇದಾಗುವದು । × × × ತರು । ಶ್ರೀತಾಳಿ ಮುಂತಾದ

ವಾಲೆಯು ‖೧೧೪‖ ಯಿಾ ಶಬ್ದಮಂಜರಿ ಟೀಕು ಸಂಪೂರ್ಣ ಮಂಗಳ ಮಹಃ ‖ ಶ್ರೀ ‖

ವಿಷಯ : ತೋಂಟದಾರ್ಯರ ಕನ್ನಡ ಶಬ್ದಮಂಜರಿಯ ಟೀಕು.

ವಿಶೇಷ : ತೆಳುವು ಕಾಗದ. ಇದರೊಡನೆ ಶಬ್ದ ರತ್ನಾಕರ, ಕನ್ನಡ ಶಬ್ದಮಂಜರಿ, ಪದ್ಯನಾನಾರ್ಥ ಮೊದಲಾದ ೭ ಕೃತಿಗಳಿವೆ.

213

ಕೆ. ೫೬	ಕಂದರ್ಪ ಕೊರವಂಜಿ	ಯಕ್ಷಗಾನ
೮.೮″ × ೨″	ಬ್ರಹ್ಮಣಾಂಕ	ಸು. ೧೮೦೦
೧೯೦-೨೪೦ ಪತ್ರ	೧೨ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ಚಂದ್ರನಾಥಾಯ ನಮಃ ‖ ಮನ್ಮಥ ಕೊರವಂಜಿ ‖ ಬರೆಉದಕ್ಕೆ ಶುಭಮಸ್ತು ‖ ತ್ರಿಹುಡೆ, ರೂಪಕ ತಾಳಾ ‖

ಶರಣು ಮದಮಾತಂಗಸಿಂಗನೆ
ದುರಿತ ಮೋಹ ವಿಭಂಗನೇ
ಶರಣು ದ್ವಾರಕ ಪುರದಧೀಶನೆ
ಶರಣು ನೇಮಿಜಿನೇಶನೇ ‖ ೧ ‖

ಕಂ ‖ ಸಂದಿಸಿ ಮುನಿಕುಲ ಚರಣ
ಕ್ಕೊಂದಿಸಿ ಪೇಳ್ದಪೆನು ಯಕ್ಷಗಾನದಿ ವಿಹರಿಸುತ
ಕಂದರ್ಪನು ಕೊರಚಿಯಾದುದ
ಚಂದದಿ ಲಾಲಿಪುದು ಸುಜನರನುಮತದಿಂದಂ ‖ ೧ ‖

ಅಂತ್ಯ : ವ‖ ಯಿಂತೆಂದು ಹರಕೆಯನಿತ್ತು ಚತುರ್ತ್ಥದಿನಾಂತ್ಯದೊಳ್ ನಾಗಬಲಿಯಂ ವಿರಚಿಸಿ ಶಾಂತಿಕರ್ಮಮಂ ಮಾಡಿಸಿ ಭೂಸುರರ್ಗ್ಗಂ ವಿಬುಧರ್ಗ್ಗಂ ಮಹಾ ವಿಭೂಷಣಮನಿತ್ತು ರಾಜರಂ ಮನ್ನಿಸಿ ಬೀಳ್ಕೊಟ್ಟು ದೀನರ ದಾರಿದ್ರಮಂ ಪರಿದು ರಾಜಮನ್ನಣೆಯಂ ಅಂತಃಪುರದ ಕಾಂತೆಯರ್ವೆರಸು ರುಕ್ಮಿಣಮಹಾ ರಾಜನಂ ಬೀಳ್ಕೊಟ್ಟು ಲಕ್ಷ್ಮೀಕಾಂತ ರುಕ್ಮಿಣಿ ಮೊದಲಾದ ಕಾಂತೆಯರೊಳುಂ ಕಂದರ್ಪ್ಪರತಿ ವಿದರ್ಭೆ ಮೊದಲಾದ ಕಾಂತೆಯರೊಳು ಹೊಂದಿದಾನಂದ ದೊಳಿರುತಿರ್ದ್ದರೂ ‖ ಗದ್ಯಾ ‖ ಶ್ರೀಮದಮರೇಂದ್ರ ಮಗುಟತಟಘಟಿತ ಮಣಿ ಗಣ ಕಿರಣರಂಜಿತ ಪುಂಜಾಯಮಾನ ಭಗವಚ್ಚರಣಾರವಿಂದದ್ವಂದ ವಂದಿತ

ಮತ್ತಮಧುಕರಾಯಮಾನ ಬ್ರಂಹ್ಮಣಾಂಕ ವಿರಚಿತಮಪ್ಪ ಶ್ರೀಮಹಾ ಹರಿ ವಂಶ ಪುರಾಣದೊಳ್ಕಂದರ್ಪ್ಪ ಕೊರವಂಜಿ ವಿವರ್ನ್ನನಂ ಯಕ್ಷಗಾನದಿಂದೀ ಕೃತಿಗೆ ಮಂಗಲಂ ಭೂಯಾತ್ ॥

ವಿಷಯ : ಮನ್ಮಥನು ಕೊರವಂಜಿಯಾದ ಕಥೆ .

ವಿಶೇಷ : ಪ್ರಾರಂಭದಲ್ಲಿ ನೇಮಿಜಿನೇಶನ ಸ್ತುತಿಯಿದೆ. ಇದರಲ್ಲಿ ೧ನೆಯ ಪತ್ರದಿಂದ ೧೪೯ ಪತ್ರಗಳು ಇಲ್ಲ. ಈ ಭಾಗ ಮಾತ್ರವೇ ಬೇರೆ ಪ್ರತಿಯಾಗಿರುವಂತೆ ಕಂಡುಬರುತ್ತದೆ. ಈ ಗ್ರಂಥಕ್ಕೆ ಪ್ರಾರಂಭದಲ್ಲಿ ಮನ್ಮಥ ಕೊರವಂಜಿ ಎಂದೂ ಅಂತ್ಯದಲ್ಲಿ ಕಂದರ್ಪ ಕೊರವಂಜಿ ಎಂದೂ ಹೆಸರು ಬರೆದಿದೆ.

214

ಕೆ. ೩೫/೬	**ಕಂದಶತಕ**	ಕಂದ
೧೨" × ೧.೪"	ವೀರಭದ್ರರಾಜ	ಸು. ೧೫೩೦
೪೬-೫೧ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಕಂದಶತಕ × × ×
ಶ್ರೀ ಗಿರಿಜಾವರ ಸಸಿಧರ
ನಾಗಾ ಜಿನವಸನ ವಿಷ್ಣುವಿಧಿಪೂಜಿತ ಪದ
ಭೋಗೀಂದ್ರಭೂಷ ಕರುಣಾ
ಸಾಗರ ರಕ್ಷಿಪ್ಪುದೆಂಮನಂಬಿಕೆಯರಸಾ ॥ ೧ ॥

ಅಂತ್ಯ : ವರ ಶೋಮೇಶ್ವರ ಶತಕಮ
ನಿರದಂಬಿಕೆಯರಸ ಎಂಬ ಕಂದಶತಕಮಂ
ಸ್ಮರರೂಪ ವಿರೂಪಾಕ್ಷನು
ದರಸಂಭವನೆನಿಪ ವೀರಭದ್ರಂ ಪೇಳ್ದಂ ॥ ೧೧೩ ॥

× × × ×

ಯೀ ಪಂಚಸ್ತವಮಂ ಬಿಡ
ದೆ ಪೊಳ್ತುಂ ಕೇಳ್ದವರ್ಗ್ಗಮೊದಲಿದವರ್ಗ್ಗಂ
ಶ್ರೀ ಪಾರ್ವ್ವತಿಯರಸಂ ತಾ
ನೆ ಪಾಲಿಸುತಿರ್ಪ್ಪನಾಗಳೀಪ್ಸಿತ ವರಮಂ ॥ ೧೧೫ ॥
ಪಂಚಸ್ತವಂ ಸಮಾಪ್ತಂ ಮಂಗಳಮಹಾಶ್ರೀ.

ವಿಷಯ : ಈಶ್ವರಸ್ತುತಿ ಹಾಗೂ ಬೋಧೆ.

ವಿಶೇಷ : ಅಸಮಗ್ರಪ್ರತಿ. ೫೦ ನೆಯ ಪತ್ರ ಲುಪ್ತ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಮಲ್ಲೇಶ್ವರ ಶತಕ, ಪಾರ್ವತೀವಲ್ಲಭ ಶತಕ, ಉಮಾಮಹೇಶ್ವರ ಶತಕ, ಪ್ರಾಣನಾಥ ಶತಕ, ಶ್ರೀಕಂಠ ಸೋಮೇಶ್ವರಶತಕ, ಪ್ರಭುದೇವರ ಪುರಾಣದ ನಾಂದ್ಯಗಳು, ಮಹಿಮ್ನಸ್ತೋತ್ರದ ಟೀಕು, ಶಿವಪೂಜಾವಿಧಾನ, ಚೇರಮ ಕಾವ್ಯ ಎಂಬ ಗ್ರಂಥಗಳಿವೆ.

215

ಕೆ. ೫೫೧/೧	**ಕಪೋತಚರಿತೆ**	ಭಾಮಿನೀ ಷಟ್ಪದಿ
೧೪.೮" × ೨"	?	?
೧–೧೩ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ....ವಾಲ್ಮೀಕಿ ರಾಮಾಯಣದಲ್ಲು ಸುಂಧರನಾಮ ಖಾಂಡ ಸಂಧಿ ೩ ನೆ ಪದ ೧೯ ರ ಮೇಲೆ ವಿಭೀಷಣನೂ ರಾವಣಗೆ ನೀತಿಯಂ ಹೇಳಿ ರಾವಣನು ಹೊರವಡಿಸಲೂ ಶ್ರೀರಾಮದೇವರ ಪಾದಾಕ್ರಾಂತನಾಗುವ ಯಂದು ಬರುವ ಸಮಯದಲ್ಲಿ ಸೂರ್ಯ್ಯಕುಮಾರನಾದಂಥಾ ಸುಗ್ರೀವಗೆ ಶ್ರೀರಾಮದೇವರು ಕಪೋತನ ಕಥೆಯಂನ್ನು ಅಪ್ಪಣೆಯಂ ಕೊಡುತಿದ್ಧಾರೂ.

ಪಲ್ಲಾವ ॥ ಹೊರಟು ಲಂಕೆಯನಾ ವಿಭೀಷಣ
ತರಣಿವಂಶಜನೆಡೆಗೆ ಬರೆ ರಘು
ವರನು ಸೂರ್ಯ್ಯಜಗೊರದನಾಗ ಕಪೋತಚರಿತವನೂ ॥

ಪದನೂ ॥ ದುರಿತಕುಲ ಜೀಮೂತಮಾರುತ
ಸರಸಿಜಾಕ್ಷ ನಗೇಂದ್ರಜಾವರ
ತರಣಿ ಸರಸಿಜ ಶ್ರುಂಗಮುನಿ ಸಂದೋಹ ಸಂಸ್ಥುತ್ಯ
ಧರಣಿಜಾ ಸಂತಾಪಹರ ತ
ಧರಣಿಜಾಪತಿ ಮಿತ್ರರಾಷಿಗಳ
ವರ ಶಿರೋಮಣಿಯುವಧರಿಸು ಬಾಲಕರ ಬಿಂನಪವಾ ॥ ೧ ॥

ಅಂತ್ಯ : ರವಿಸುತನ ನುಡಿಗಳಿಗೆ ಹರುಷಿಸಿ
ರವಿಕುಲಾಂಬುಧಿ ಸೋಮನೆನಿಪ ಭ
ವವಿದೂರನು ವೆಂಕಟಾಚಲವಾಸನತಿಮುದದೀ

ಅವದಿಗೊಂಡೈತಂದ ಶರಣನ
ದಿವಿಜರುಲಿಯಲು ಮಂನ್ನಿಸುವ ಬಹು
ತವಕದಲಿ ಪವನಜನ ಕಳುಹಿದನಾಗ ಕರೆಯಲ್ಕೇ ॥ ೧೨೭ ॥

ಅಂತೂ ಕಪೋತನ ಚರಿತೆ ಕಥೆ ೧ ರ ಸಂಧಿ ೧ ರ ಪದ ೧೨೭ ಕ್ಕಾಂ ಮಂಗಳ ಮಹಾಶ್ರೀ ಶ್ರಿ ರಾಮಾಯಣದಲ್ಲಿ ಖಾಂಡವಾರು ವಿವರಾ ॥ ಬಾಲಕಾಂಡ ಸಂಧಿ ೧೭ ಆಯೋದ್ಯಾ ನಾಮ ಖಾಂಡ ಸಂಧಿ ೬ ಅರಂಣ್ಯನಾಮಖಾಂಡ ಸಂಧಿ ೧೩ ಕಿಷ್ಕಿಂದಾವಖಾಂಡ ಸಂಧಿ ೨೧ ಸುಂದರಖಾಂಡ ಸಂಧಿ ೩ ಕ್ಕೆ ಸೇರಿಸೂ ॥

ವಿಷಯ : ಕಪೋತನ ಕಥೆ.

ವಿಶೇಷ : ಪ್ರತಿಯು ಚನ್ನಾಗಿದೆ. ಇದರ ಜೊತೆಗೆ ಕಿಂಚಿತ್ ಭಾರತ, ಹಾಸ್ಯಪತ್ರ, ಊಟದ ರಗಳೆ, ದರ್ಬಾರು ಲೆಖ್ಖಾ ಸಹ ಇವೆ.

216

ಕೆ. ೫೫೨	**ಕಪೋತ ಚರಿತೆ**	ಭಾಮಿನೀ ಷಟ್ಪದಿ
೧೪.೫" × ೨.೧"	?	?
೧—೧೪ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ: ಶ್ರೀ ವಾಲ್ಮೀಕಿರಾಮಾಯಣದಲ್ಲೂ ಶ್ರೀರಾಮಚಂದ್ರದೇವರು ಸುಗ್ರೀವಗೆ ಹೇಳಿದಂಥಾ ಕಪೋತನ ಕಥೆ ಬರಉದಕ್ಕೆ ನಿರ್ವಿಘ್ನಮಸ್ತು ॥

ಪಲ್ಲಾ ॥ ....ವಿಭೀಷಣ
ತರಣಿವಂಶಜನೆಡೆಗೆ ಬರೆ ರಘು
ವರನು ಸೂರ್ಯಜಗೊರದನಾಗ ಕಪೋತ ಚರಿತವನೂ ॥

ಪದನೂ ॥ ಧುರಿತಕುಲ ಜೀಮೂತಮಾರುತ
ಸರಸಿಜಾಕ್ಷನಗೇಂದ್ರಜಾ
ವರತ....ನರಸಿಜ ಸ್ರುಂಗಮುನಿ ಸಂದೋಹ ಸಂಸ್ತುತ್ಯಾ
ಧರಣಿಜಾ ಸಂತಾಪಹರ ತ
ಧರಣಿಜಾಪತಿ ಮಿತ್ರ ರಿಷಿಗಳ
ವರ ಸರೋಮಣಿಯುವಧರಿಸು ಬಾಲಕರ ಬಿಂನಪವಾ ॥ ೧ ॥

ಅಂತ್ಯ: ರವಿಸುತನ ನುಡಿಗಳಿಗೆ ಹರುಷಿಸಿ
ರವಿಕುಲಾಂಬುಧಿ ರಾಮಚಂದ್ರನು
ಭವವಿದೂರನು ವೆಂಕಟಾಚಲವಾಸನತಿ ಮುದದೀ

ಅವದಿಗೊಂಡೈತಂದ ಶರಣನ
ದಿವಿಜರುಲಿಯಲು ಮನ್ನಿಸುವ ಬಹು
ತವಕದಲಿ ಪವನಜನ ಕಳುಹಿದನಾಗ ಕರೆಯಲ್ಕೆ ॥ ೧೨೭ ॥
ಅಂತು ಕಪೋತನ ಚರಿತ್ರೆ ಕಥೆ ೧ ರ ಪದ ೧೨೭ ಕ್ಕಾಂ ಮಂಗಳಮಹಾಶ್ರೀ ॥

ವಿಷಯ : ಕಪೋತ ಚರಿತ್ರೆ.

ವಿಶೇಷ : ೧ ನೆಯ ಪತ್ರದ ಬಲಗಡೆಯ ಕೊನೆ ಲುಪ್ತವಾಗಿದೆ.

217

ಕೆ. ೬೩೨/೩	**ಕಪೋತ ಚರಿತೆ**	ಭಾಮಿನೀ ಷಟ್ಪದಿ
೧೯.೨" × ೨.೨"	?	?
೧–೯ ಪತ್ರ	೮ ಪಂಕ್ತಿ	೮೦ ಅಕ್ಷರ

ಆದಿ : ಶ್ರೀ........ಕಪೋತ ಚರಿತೆ ಬರವದಕ್ಕೆ ನಿರ್ವಿಘ್ನಮಸ್ತು ॥
ಹೊರಟು ಲಂಕೆಯನಾ ವಿಭೀಷಣ
ತರಣಿವಂಷಜನೆಡೆಗೆ ಬರೆ ರಘು
ವರನು ಸೂರ್‍ಯ್ಯಜಗೊರದನಾಗ ಕಪೋತ ಚರಿತೆಯನೂ ॥ ಪಲ್ಲ ॥
ದುರಿತಕುಲ ಜೀಮೂತ ಮಾರುತ
ಸರಸಿಜಾಕ್ಷನಗೇಂದ್ರಜಾವರ
ಚರಣಸರಸಿಜ ಭ್ರುಂಗ ಮುನಿ ಸಂದೋಹ ಸಂಸ್ತುತ್ಯಾ
ಧರಣಿಜಾ ಸಂತಾಪಹರ ತ
ದ್ಧರಣಿಜಾಪತ್ತಿ ಮಿತ್ರ ರುಷಿಗಳ
ವರ ಶಿರೋಮಣಿಯುವಧರಿಸು ಬಾಲಕರ ಬಿಂನಪಮಾ ॥ ೧ ॥

ಅಂತ್ಯ : ರವಿಸುತನ ನುಡಿಗಳಿಗೆ ಹರುಶಿಶಿ
ರವಿಕುಲಾಂಬುಧಿ ಸೋಮನೆನಿಪಾ
ಭವವಿದೂರನು ವೆಂಕಟಾಚಲವಾಸನತಿಮುದದಿ
ಅವಧಿಗೊಂಡೈತಂದ ಶರಣನ
ದಿವಿಜರುಲಿಯಲು ಮಂನಿಸುವ ಬಲು
ತವಕದಲಿ ಪವನಜನ ಕಳುಹಿದನಾಗ ಕರೆಯಲ್ಕೆ ॥ ೧೨೭ ॥
ಅಂತೂ ಕಪೋತಚರಿತಾ ಪ್ರಸಂಗ ಸಂಧಿ ೧ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ಕಪೋತನ ಕಥೆ.

ವಿಶೇಷ : ಭಾಮಿನೀ ಷಟ್ಪದಿ ಲಕ್ಷಣ । × × ×

ಲೀಲೆಯಿಂ ವಾರ್ಧಿಕ ಷಟ್ಪದಿಯ ಮೊದಲಪದ
ದೇಳಿಗೆಯುಮಿಪ್ಪತ್ತು ಮಾತ್ರೆಯಿಂದೆಸೆದಿರ್ಕು
ಮಾ ಲಲಿತಮೆನಿಪ ಮೂರಾರು ಪಾದಂಗಳೊಳ್ಮವತ್ತೆರಡು ಮಾತ್ರೆಯಿಂ
ಆಲಿಸಲ್ಕೆಸದಿರ್ಪ್ಪ ಪಾದಂಗಳಾರಕ್ಕೆ ತೋರಿಸುವ
ಮಾತ್ರೆಗಳ್ ನೂರನಾಲ್ವತ್ತರಿಂ ಮೇಲೆ ನಾಲ್ಕೆಸದಪವು
ಛಂದೋಂಬುರಾಶಿಯೊಳ್ ಸೀಂ ಕೇಳ್ವುದಿಂದುವದನೆ ॥ ೨॥

ಎಂದು ಕೊನೆಯಲ್ಲಿದೆ. ಇದೇ ಕಟ್ಟನಲ್ಲಿ ತೊರವೆ ರಾಮಾಯಣ, ಐರಾವಣನ ಕಾಳಗ ಇವೆ.

218

ಕೆ.ಎ. ೧೭೩/೮	**ಕಪೋತವಾಕ್ಯ**	ಯಕ್ಷಗಾನ
೧೧.೧"×೭.೪"	?	?
೧೪೮–೧೭೪ ಪತ್ರ	೨೦ ಪಂಕ್ತಿ	೩೨ ಅಕ್ಷರ

ಆದಿ : ಕಪೋತವಾಕ್ಯಾ । ದ್ವಿಪದೆ ।

ಶ್ರೀ ಗವುರೀ ಹೃತ್ಕಮಲ ಸ್ತಿರಕರಾಭೃಂಗಾ
ಭಾಗೀರತೀಧರನೆ ಭವಬಂಧುದೂರಾ
ಭಾನುಶಶಿ ಶಿಖಿನೇತ್ರ । ಭೌಪ್ಯಚಾರಿತ್ರಾ
ಘಾನ ನಾರದ ಪ್ರೀಯ ಕೈಲಾಸ ನಿಲಯಾ ॥
ಗಜ ಚರ್ಮಧರ ಯಿಾಸ ಕೈಲಾಸ ಯಿಾಶಾ
ಅಜಸಿರಾಕರಪಾತ್ರ ಅಮರ ಮುನಿಸ್ತೊತ್ರಾ
ಧನುಜಕುಲಸಂಹಾರ ದವಳಾಶರೀರಾ ॥

× × × ×

ವಚನಾ ॥ ಯಿಂತು ಸಕಲ ದೇವತಾ ಪ್ರಾರ್ತನೆಯಂ ಮಾಡಿ ಶ್ರೀಷ್ಠಿ ಗಾಶ್ಚರ್ಯ ಮಾದ ಕಪೋತವಾಖ್ಯದ ಕಥೆಯಂ ಕನ್ನಡದಿ ನಾನೆಕ್ಷಗಾನಮಂ ಪೇಳ್ದ ನದೆಂತೆನೆ.

ಅಂತ್ಯ : ಅಮಿತಗುಣನಾಮುನಿಗೆ ಅರ್ಧೇಂದುದರಗೆ
ಗರಳಪುರಿವಾಸನಿಗೆ ಕಪಟನಾಟಕನಿಗೆ
ನರನಿಸ್ತ್ರಿವಸಿತ್ತಾ ನಂಜುಂಡಲಿಂಗನಿಗೆ ॥

ಅಂಕಿತವಾಗಿ ಅವನಿಯೊಳು ಮುನ್ನ
ಪಂಕಜಾಸಿತಕುಲ ಸುಪಾವನದಿ ಪೇಳ್ದ
ವಸುದೆಯೊಳು ಕಪೋತ ವಾಕ್ಯದ ಕಥೆಯು
ಪೊಸತಾಗಿ ಕಂನ್ನಡದಿ ಪೇಳ್ದನು
ಕಡುಜಾಣಕೃತಿಯು ಮೇಲೆ ಕಶ್ಯಪಗೋತ್ರಾ ॥
ಕಪೋತವಾಖ್ಯ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಕಪೋತನ ಕಥೆ.

ವಿಶೇಷ: ಇದರೊಂದಿಗೆ ಸಾನಂದಗಣೇಶ ಸಾಂಗತ್ಯ, ಪ್ರಹ್ಲಾದ ಚರಿತ್ರೆ, ಶಾರದಾಂಬಾಷ್ಟಕ, ವಿನಾಯಕಾಷ್ಟಕ, ಮಲ್ಲಿಕಾರ್ಜುನಾಷ್ಟಕ I & II, ಪಂಚತಂತ್ರದ ಕಥೆ, ಪಾರ್ವತಿ ಕೊರವಂಜಿ, ವಾಲಿಸುಗ್ರೀವರ ಕಾಳಗ, ಕನ್ನಡ ಭಾರತದ ಸ್ವಲ್ಪ ಭಾಗ ಇವೆ.

219

ಕೆ.ಬಿ. ೨೩೫	**ಕಪೋತವಾಕ್ಯ**	ಸಾಂಗತ್ಯ
೮" × ೬.೭"	ಸಿದ್ಧವೀರಶಿಷ್ಯ	ಸು. ೧೭೦೦
೧–೫ ಪತ್ರ	೨೪ ಪಂಕ್ತಿ	៤೦ ಅಕ್ಷರ

ಆದಿ: ಕಪೋತವಾಕ್ಯ ಬರೆವರೆ ಶುಭಮಸ್ತು । ರಾಗ ॥ ಸಾಂಗತ್ಯ ॥
ಗುರುವ ನೆನೆದು ಶಿವನಡಿಯ ಕೊಂಡಾಡುವೆ
ಹರಶರಣರಿಗೆ ವಂದಿಸುವೆ
ಪರಮ ಪಾವನಮೂರ್ತಿ ಗುರುಸಿದ್ಧವೀರ
ಚರಣವ ನಾ ಬಲಗೊಂಬೆ ॥ ೧ ॥

× × × ×

ಮದ್ದುಮಂತ್ರವ ಬಲ್ಲ ವಿದ್ಯದಿ ಮೊದಲುಂಟು
ಸಿದ್ದರಸಂಗಳಲ್ಲಿಹವು
ಬುದ್ಧಿಯಾಗಮದಲ್ಲಿ ಇರುತಿರೆಯುರಮಲೆ
ಸಿದ್ಧ ಮುನಿಗಳಿಗೆರೆಗುವೆನು ॥ ೬ ॥

ಅಂತ್ಯ: ಧರೆಯೊಳು ಸನ್ಮೂಲ ಗಿರಿವಾಸನಿಗೆ
ಕರುಣೆ ಕಾಶಿ ವಿಶ್ವೇಶ್ವರಗೆ
ಗುರುತರವಹ ಚಂಪಕ ಶಿದ್ದಲಿಂಗೇಶ
ಗೆರೆಗಿ ಆರತಿ ಬೆಳಗುವೆನು ॥

ಕಪೋತ ಚರಿತ್ರೆ ಸಂಪೂರ್ಣ ಮಂಗಳ ಮಹಾಶ್ರೀ ॥

ವಿಷಯ : ಕಪೋತನ ಕಥೆ.

ವಿಶೇಷ : ಮೋಡಿಲಿಪಿ.

220

ಕೆ. ೧೭೪/೧	**ಕಬ್ಬಿಗರ ಕಾವ**	ಚಂಪು
೧೫.೩" × ೨.೪"	ಆಂಡಯ್ಯ	ಸು. ೧೨೩೫
೧೦೭–೧೨೧ ಪತ್ರ	೧೧ ಪಂಕ್ತಿ	೮೦ ಅಕ್ಷರ

ಆದಿ : ಆಂಡಯ್ಯನ ಕಾವ್ಯ.

ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪ್ಪುದುರ್ಕಿನಿಂ
ದಾವನ ಪೂವಿನಂಬಥಟರಂ ತಲೆವಾಗಿಸುತಿರ್ಪುದೇಳ್ಗೆಯಿಂ
ದಾವನ ಪಜ್ಜಳಿಪ್ಪ ಜಸವೆಣ್ದೆಸೆಯೊಳ್ ನೆಲೆಸಿರ್ಪುದಾತನಿ
ಗಾವಗಮೆಂನ್ನ ಜಾಂಣ್ನುಡಿಗೆ ಮೈಸಿರಿಯಂ ನನೆವಿಲ್ಲಬಲ್ಲಹಂ ॥ ೧ ॥

ಅಂತ್ಯ : ಪದಪಿಂ ಪೊರ್ದಿದರಿಚ್ಚೆಯೀವ ಪದಿನೆಂಟುಂ ದೋಸಮುಂ ಪೊರ್ದ್ದದಾ
ಡಿದ ಮಾತೆಲ್ಲರ....ವಿನೊಳ್ಮಾಲೋಕಮಂ ಕಾಣಹು
ಟ್ಟಿದವೊಲ್ಕಮದ್ದೊರ್ಪ್ಪಿ ತೋಱುವರಿಹಂತ ಸಲ್ಮೆಯುಂ ಜೇ
ಡಿದುದಂ ತನ್ನರಿವಟ್ಟಿಗರ್ಗೆ ನೆಲಸುಂ ಮುಂನ್ನೀರುಮಿರ್ಪ್ಪನ್ನೆಗಂ ॥ ೩೩೫ ॥
ಗದ್ಯ ॥ ಇದು ಹಸುಳೆವಿಸಿಲ ಮುಸಕದಿನೆಸಳ್ಮಸುಪ ಹೊಸದಾವರೆಯ ಹಸೆಯೊಳ ಸದಳಮೆಸೆವ ಸರಸತಿಯಾಡಿದಡಿಗೆ ತಲೆದುಡಿಗೆಯೆನೆ ಪೆಸರ್ವ್ವಡೆದ ವಿದ್ಯಾವಿನೋದಂ ಬಿನದದಿಂ ಸಮೆದ ಮದನವಿಜಯುಂ ಮೆಱವುತಿರ್ಪ್ಪುದು॥
ಮದನವಿಜಯುಂ ಸಮಾಪ್ತಂ ಮಂಗಳಮಹಾಶ್ರೀ.

ವಿಷಯ : ಮನ್ಮಥನ ವಿಜಯ.

ವಿಶೇಷ: ಪ್ರತಿ ಚೆನ್ನಾಗಿದೆ. ಪೂರ್ಣವಾಗಿಯೂ ಶುದ್ಧವಾಗಿಯೂ ಇದೆ. ಇದರೊಂದಿಗೆ ರಾಮನಾಥ ಚರಿತೆ ಎಂಬ ಮತ್ತೊಂದು ಗ್ರಂಥವಿದೆ.

221

ಕೆ. ಎ. ೨೩೪/೧	ಕಬ್ಬಿಗರ ಕಾವ	ಚಂಪು
೧೩" × ೭.೮"	ಆಂಡಯ್ಯ	ಸು. ೧೨೩೫
೧–೩೯ ಪುಟ	೨೯ ಪಂಕ್ತಿ	೨೪ ಅಕ್ಷರ

ಆದಿ : ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪ್ಪುದುರ್ಕ್ಕಿನಿಂ
ದಾವನ ಪೂವಿನಂಬಿದಡಿರಂ ತಲೆವಾಗಿಸುತಿರ್ಪ್ಪುದೆಲ್ಲಿಯುಂ
ದಾವನ ಪಜ್ಜಳಿಪ್ಪ ಜಸವೆಂಣ್ದೆಸೆಯೊಳ್ ನೆಲಸಿರ್ಪ್ಪುದಾತನಿ
ಗಾವಗಮೆಂಣ ಜಾಣ್ನುಡಿಗೆ ವೈಸಿರಿಯಂ ನನೆವಿಲ್ಲಬಲ್ಲಹಂ ॥ ೧ ॥

ಅಂತ್ಯ : ಪದಪಿಂ ಪೊದ್ದಿರ್ದರಿಚ್ಚೆಯಿಾವ ಪದಿನೆಂಟುಂ ದೋಸಮುಂ ಪೊರ್ದದಾ
ಡಿದ ಮಾತಿಲ್ಲದ ಬಾಳ್ಕೆಯುಪ್ಪರಿವಿನೊಳ್ ಮೂಲೋಕಮುಂ ಕಾಣಪು
ಟ್ಟಿದವೋಲ್ಕಂಣ್ಗಮರ್ದಪ್ಪಿ ಕೋರುವರುಹಂತಂ ನಲ್ಮೆಯಿಂ ಮಾಳ್ಕೆ ಬೇ
ಡಿದುದಂ ತಂನವರಟ್ಟಿಗಳ್ಗೆ ನೆಲನುಂ ಮುಂನೀರುಮಿರ್ಪ್ಪಂನೆಗಂ ॥ ೩೦೧ ॥

ಗದ್ಯ ॥ ಇದು ಪಸುಳೆವಿಸಲ ಮಸಕದಿನೆಸಳ್ಮಸುಪ ಪೊಸದಾವರೆಯ ಪಸೆಯೊಳ ಸದಳಮೆಸೆವ ಸರಸತಿಯಡಿದಳಿರ್ಗೆ ತಲೆದುಡುಗೆಯೆನೆ ಪೆಸರ್ವಡೆದ ಬಿಜ್ಜಾಬಿನ ದದಿಂ ಸಮೆದ ಕಾವನ ಗೆಲ್ಲಂ ಮೆರೆವುತಿರ್ಪ್ಪುದು ಆಂಡೆಯನ ಕಾವ್ಯಂ ಸಮಾಪ್ತಂ ಮಂಗಳ ಮಹಾಶ್ರೀ. ಕಬ್ಬಿಗರ ಕಾವಮೆಂಬ ಕಬ್ಬಂ ಶ್ರೀ.

ವಿಷಯ : ಮನ್ಮಥನ ವಿಜಯ.

ವಿಶೇಷ : ಶಕಟರೇಫ ಬಳಸಿದೆ. ಗ್ರಂಥಕ್ಕೆ ಮೊದಲು ಎರಡು ಪತ್ರಗಳಲ್ಲಿ ವಿಷಯ ಸೂಚಿಯಿದೆ. ಇದರೊಂದಿಗೆ ಪಂಪಕಂತಿಯರ ಸಮಸ್ಯೆಗಳು, ಮಿತ್ರವಿಂದಾ ಗೋವಿಂದ ಎಂಬ ಇತರ ಕೃತಿಗಳಿವೆ.

222

ಕೆ. ೪೮	ಕಬ್ಬಿಗರ ಕೈಪಿಡಿ	ವಾರ್ಧಕಷಟ್ಪದಿ
೧೧.೧" × ೧.೩"	ಲಿಂಗಮಂತ್ರಿ	ಸು. ೧೫೩೦
೧–೨೦ ಪತ್ರ	೬ ಪಂಕ್ತಿ	೫೪ ಅಕ್ಷರ

ಆದಿ : ಕಬ್ಬಿಗರ ಕೈಪಿಡಿ ॥ ವಾರ್ಧಿಕಷಟ್ಪದಿ ।
ಶ್ರೀರಮಣ ವಿಬುಧ ಪರಿವಾರಿಜ ಭವಾದಿ ವೃಂ
ದಾರಕಪ್ರಚಯ ಕೋಟೀರ ಮಾಣಿಕ್ಯಪ್ರ
ಭಾರಾಜಿತಾಂಘ್ರಿಯುಗ ಮಾರಘನ ದರ್ಪಾಂಧಕಾರ ಸಂಹಾರ ಸೂರ್ಯಾ

ಗೌರಿಮುಖೇಂದು ರುಚಿಮಧುರಸಸ್ವಾದನ ಚ
ಕೋರ ಪಂಪಾಪುರಾಗಾರ ಪಾಲಿಪುದೆನಗೆ
ಚಾರುಮತಿಯಂ ದುರಿತದೂರ ಶರಣಾಲಾಪಸಾರ ಕಾರುಂಣ್ಯದಿಂದಾ ॥ ೧ ॥

ಅಂತ್ಯ : ಭ್ರಮೆಯುಳಿದ ಮಲ್ಲಗಾಳಗ ಮಲ್ಲವಾತು ಮ
ಲ್ಲಮುರಾಂತಕಂ ತಾನಿವೆಂದು ಸೊಬಗಿಡಿದ ತ
ತ್ಸಮಕೆ ಕನ್ನಡ ಸಕ್ಕಧಂಗಳ ವಿಕ್ರಮದಿಂದ ತೋಪ್ಪುದಾಹರಣೆಯಕ್ಕುಂ
ವಿಮಲಾಂತರಂಗದಿಂದವಧರಿಸಿ ಕೇಳ್ವುದು
ತ್ತಮರಿಂತಿವಾದಿಯಾಗಿಪ್ಪ ಶಬ್ದಂಗಳಂ
ಸಮನಿಸಿದ ಪೂರ್ವ ಪ್ರಸಿದ್ಧಕವಿಗಳ ಸುಗಮವಾದ ಕಾವ್ಯಂಗಳರಿದೂ
॥ ೧೦೦ ॥

ಇಂತೀ ಕಬ್ಬಿಗರ ಕೈಪಿಡಿ ಸಮಾಪ್ತಂ ಮಂಗಳಮಹಾಶ್ರೀ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ಇದರೊಂದಿಗೆ ಚತುರಾಸ್ಯ ನಿಘಂಟಿಗೆ ಸಂಬಂಧಿಸಿದ ಮೂರು ಪತ್ರಗಳಿವೆ.

223

ಕೆ. ಬಿ. ೪೨೯/೬	**ಕಬ್ಬಿಗರ ಕೈಪಿಡಿ**	ವಾರ್ಧಕ ಷಟ್ಪದಿ
೭.೭" × ೬"	ಲಿಂಗಮಂತ್ರಿ	ಸು. ೧೫೩೦
೧_೧೪ ಪತ್ರ	೨೦ ಪಂಕ್ತಿ	೨೩ ಅಕ್ಷರ

ಆದಿ: ಕಬ್ಬಿಗರ ಕೈಪಿಡಿ ಪ್ರಾರಂಭಃ—
ಶ್ರೀರಮಣ ವಿಬುಧಪ್ರತಿಪಾರಿಜ ಭವಾದಿಬ್ರಂ
ದಾರಕ ಪ್ರಜೆಯ ಕೋಟೀರಮಾಣಿಕ್ಯ ಪ್ರ
ಭಾರಾಜಿತಾಂಘ್ರಿಯುಗ ಘನದರ್ಪಾಂಧಕಾರ ಸಂಹಾರ ಸೂರ್ಯ
ಗೌರೀಮುಖೇಂದುರುಚಿಸಾರ ಸುಸ್ವಾದಿತ ಚ
ಕೋರ ಪಂಪಾಪುರಾಗಾರ ಪಾಲಿಪುದೆನೆಗೆ
ಚಾರುಮತಿಯಂ ದುರಿತದೂರ ಶರಣಾಲಾಪಸಾರ ಕಾರುಣ್ಯದಿಂದ ॥೧॥
ಶಿವಚರಣಯುಗ ಸಮಾಕಲಿತಾಂತರಂಗ ಶಿವ
ಕವಿನಿಕರ ಪಂಕೇಜಾತ ಭೃಂಗ ಸ
ದ್ವಿವಿಧ ಮೃದುಶಬ್ದ ಸಾಹಿತ್ಯ ಪೀಯೂಷಾಬ್ಧಿ ಲಲಿತ ಲಹರಿತರಂಗಾ

ಅವಿರಳಾನಂದಯೋಗಿವ್ರಾತ ಸಂಗ ದು
ಷ್ಕವಿಚಯ ಹೃದಯಾಂಧಕಾರ ದೂರ ಪತಂಗ
ನವಮದನರೂಪ ವಿರುಪೆಯ ಲಿಂಗ ಪೇಳೆನಲ್ ಬಲ್ಲರಿದನಾಂ ಪೇಳ್ವೆನೂ ॥೨॥
ವಿಸುಪ ಗೂಢಪದಪ್ರಯೋಗದೊಳ್ಸಂತಸವಿ
ರ್ದೆಸೆವಚ್ಚಗಂನಡದ ಚೆಲ್ವಿವುಂ ತದ್ಭವದ ಬೆಸುಗೆಯುಂ
ದೇಶಿಯುಕವುರ್ದ ಸೊಂಪಂ ತೋಳಪ ತತ್ಸಮದ ಭಿಂನಣವನಾಲ
ಯಿಸುದೆಂದು ಕೋವಿದರ್ಬೆಸಸಲಾನಿದಕೆ ಶೋ
ಭಿಸುವ ಕಬ್ಬಿಗರ ಕೈಪಿಡಿಯೆಂದು ಪೆಸರನಿ
ತ್ತೊಸದು ಪೇಳ್ವೆನು ಲಾಲಿಸುವದೆಲ್ಲಾರ್ಗಳುಂ ರಶಿಕಜನರಕ್ತಿಯಿಂದಾ ॥ ೩ ॥

ಅಂತ್ಯ: ಧುರಧೀರ ನುಗ್ಗೆಹಳ್ಳಿಯ ರಾಯಭೂವರನ
ಪರಮ ಪ್ರಧಾನ ಸುಕಲಪ್ರವೀಣ ಕೀರ್ತಿ
ಭರಿತ ದಿಗ್ವಲಯಂ ವಿರೂಪಾಕ್ಷ ಪಾದಾರವಿಂದ ಮಕರಂದ ಭೃಂಗಂ
ಸರಸ ಸಂಗೀತ ನಿಪುಣಂ ಬಹುಲಿಪಿಜ್ಞ್ನ ಭೂ
ಸುರ ವಿರೂಪಾಕ್ಷಸುತ ಲಿಂಗಮಂತ್ರಿಪಂ
ವಿರಚಿಶಿಸಿದ ಕಬ್ಬಿಗರ ಕೈಪಿಡಿಯನಂಗೀಕರಿಪುದಖಿಳ ಸುಜನರ್ಕಳೂ ॥೧೦೧॥
ರಕ್ತಾಕ್ಷಿ ಸಂ॥ ಭಾದ್ರಪದ ಬ॥ ೧೩ ಬುಧವಾರದಲ್ಲೂ ಕಬ್ಬಿಗರ ಕೈಪಿಡಿಯೆಂಬ
ಗ್ರಂಥ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ: ಕನ್ನಡ ನಿಘಂಟು.

ವಿಶೇಷ: ಇದರೊಂದಿಗೆ ಭಾರತ ನಿಘಂಟು, ಶಬ್ದರತ್ನಾಕರ, ನಾನಾರ್ಥ ಕಂದ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕನ್ನಡ ಧಾತುಪಾಠ, ಕರ್ಣಾಟಕ ಧಾತುನಿರ್ಣಯ-ಎಂಬ ಗ್ರಂಥಗಳಿವೆ. ಈ ಗ್ರಂಥ ಮುಗಿದ ಮೇಲೆ ಕೆಲವು ಖಾಲಿ ಪತ್ರಗಳಿವೆ.

224

ಕೆ. ೨೭೯	**ಕಮಲಾಚಲಮಾಹಾತ್ಮ್ಯದ ಟೀಕು**	ಟೀಕು
೧೪.೪" × ೧.೯"	ಗೋಪಾಲರಾಜ	೧೮ನೆಯ ಶತಕ
೧-೬೧ ಪತ್ರ	೮ ಪಂಕ್ತಿ	೫೪ ಅಕ್ಷರ

ಆದಿ: ಮಹಾತ್ಮರಾದಿ ಸನಕಾದಿ ದೇವ ಋಷಿಗಳು ತತ್ಪದಾಂಬುಜವಂನ್ನೆ ಸ್ತ್ರೇವಿ ಸುತಂಯಿದ್ದಾರು........ಜ್ಞಾನಸಿದ್ಧಿಗೋಸ್ಕರ ನಿನ್ನನ್ನೇ ಉಪಾಸನೆ ಮಾಡುತ್ತಿದ್ದಾರು ॥ ೨೪ ॥

ಅಂತ್ಯ : ಕ್ಷತ್ರಿಯನಾದರು ನಿಷ್ಕಂಟಕ ರಾಜ್ಯಾನುಭವಮಾಡಿಯಾನು. ಅಂತ್ಯದಲ್ಲಿ ವಿಷ್ಣು ಪರಂಧಾಮುಸ್ಥಾನ........ಯಾನು ಯಂದು ಈ ರೀತಿಗೆ ನೈಮಿಷಾರಣ್ಯ ವಾಸಿಗಳಾದ ಶೌನಕಾದಿಗಳಂನ್ನು ಕುರಿತು ಸೂತಋಷೀಶ್ವರ ನಿರೂಪಿಸುತ್ತಿದ್ದಾ ಯಂಬಲ್ಲಿ ॥ ೧೬ ॥ ಇಂತು ಶ್ರೀಮತ್ಸಕಲ ವಿದ್ವಜ್ಜನಮನಃ ಪಾರಾವಾರ ಪೂರ್ಣ ಸುಧಾಕರ ಶ್ರೀಗೋಪಾಲಭೂಪಾಲೋಕ್ತಿವಿಲಾಸರೂಪ ಕರ್ನಾಟಭಾಷಾಯಾಂ ಶ್ರೀಭವಿಷ್ಯೋತ್ತರ ಪುರಾಣೋಕ್ತ ಕಮಲಾಚಲ ಮಾಹಾತ್ಮ್ಯಪ್ರಸಂಗಃ ॥ ದಶಮೋಧ್ಯಾಯಃ ॥ ಕಮಲಾಚಲಮಾಹಾತ್ಮ್ಯ ಸಂಪೂರ್ಣ ॥

ವಿಷಯ : ಶ್ರೀ ಭವಿಷ್ಯೋತ್ತರ ಪುರಾಣೋಕ್ತ ಕಮಲಾಚಲ ಮಾಹಾತ್ಮ್ಯ.

ವಿಶೇಷ : ಪುಸ್ತಕ ಅತ್ಯಂತ ಶಿಥಿಲವಾಗಿದೆ. ಆರಂಭದಲ್ಲಿ ೬ ಪತ್ರಗಳು ಲುಪ್ತವಾಗಿವೆ. ಇದಕ್ಕೆ ಗೋಪಾಲಭೂಪಾಲೋಕ್ತಿವಿಲಾಸವೆಂಬ ಹೆಸರೂ ಇದ್ದಂತೆ ತಿಳಿದು ಬರುತ್ತದೆ.

225

ಕೆ. ಬಿ. ೩೮	**ಕಮಲಾಚಲಮಾಹಾತ್ಮ್ಯ.** (ಭಾಗ ೧)	ಚಂಪು
೭.೬"×೬.೩"	ಚಿಕ್ಕುಪಾಧ್ಯಾಯ	೧೬೭೨
೧–೩೬೯ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಕಮಲಾಚಲಮಾಹಾತ್ಮ್ಯ ಬರೆಯುವದಕ್ಕೆ ಶುಭಮಸ್ತು ಪ್ರಥಮಾಶ್ವಾಸ ಪ್ರಾರಂಭಃ ಶ್ರೀವಿಷ್ಣು ಪುರಾಣ ಪುರಾಣಪುರುಷಂ ಪ್ರತಿಸ್ತುತಂ ॥

ವೃ ॥ ಶ್ರೀಶನಶೇಷ ಲೋಕನುತನಾರ್ಯ ಜನಪ್ರಿಯನುಲ್ಲಸತ್ಕೃಪಾ
ರಾಶಿ ಶುಭೋದಯಂ ಪ್ರಬಲಪ್ರಕ್ಷನುದಂಚಿತ ಚಕ್ರನರ್ಕಸಂ
ಕಾಶನಹೀನ ಭೋಗಚಣನಪ್ರತಿಮಂ ಮಹನೀಯ ವೈಭವಂ
ಶೈಶವಲೀಲೆವೆತ್ತಿಸೆವ ಕೃಷ್ಣಾನಲರ್ಚುಗೆ ಮನ್ಮನೋಬ್ಜಮಂ ॥ ೧ ॥

ಅಂತ್ಯ : ಹರಿಚರಣಾಂಬುರುಹಸ್ಮರಣರತಂ
ಗುರುಪೂಜನಾತಿ ತತ್ಪರನೆಸೆದಂ
ತರುಣತ್ವದೊಳಖಿಳ ಕಳಾ
ಯರಣಂ ಮದನಂ ನಿಜಾಶ್ರಿತಾಮೃತ ಸದನಂ ॥ ೧೫೫ ॥

ಗದ್ಯ॥ ಇದು ಸತತ ನತ ಶಿತಿಗಳ ಶತಮುಖಮುಖ ಸುರತತಿ ವಿತತ ಕೋಟೀರ ಕೋಟಿ ಘಟಿತ ಮಂಜುಮಾಣಿಕ್ಯ ಪ್ರಭಾಪುಂಜರಂಜಿತ ಕಂಜಗಿರಿಗೋಪಾಲ

ಚರಣಸರಸಿಜ ಸುರುಚಿರನಖಮಯೂಖ ನಿಸ್ತಂದ್ರಸಾಂದ್ರಚಂದ್ರಿಕಾಲೋಕ ಚಕೋರ ರಾಜಾಧಿರಾಜ ರಾಜಪರಮೇಶ್ವರಾಪ್ರತಿಮ ಪ್ರೌಢಪ್ರತಾಪ ಬಿರುದೆಂತೆಂಬರಗಂಡ ಯಾದವಕುಲಾಂಬರದ್ಯುಮಣಿ ಯಶೋವಿಮಲ ಸುಮನಸ್ಸಮುದಯ ಸುರಭಿತ ಹರಿದಂತವೀರ ಶ್ರೀನರಪತಿ ಚಿಕ್ಕದೇವರಾಜ ರಾಜಿತ ಸುರಭೂಜ ಸಮಾಶ್ರಯನಿರತ ಶ್ರೀಚಿಕ್ಕುಪಾಧ್ಯಾಯ ವಿರಚಿತ ಕಮಲಾಚಲಮಾಹಾತ್ಮ್ಯದೊಳ್ × × × ಏಕಾದಶಾಶ್ವಾಸಂ ॥

ವಿಷಯ : ಹಿಮವದ್ಗೋಪಾಲಸ್ವಾಮಿಕ್ಷೇತ್ರಮಾಹಾತ್ಮ್ಯ.

ವಿಶೇಷ : ಇದರ ಮುಂದಿನಭಾಗ ಕೆ. ಬಿ. ೪೨ ರಲ್ಲಿದೆ.

226

ಕೆ. ಬಿ. ೪೨	ಕಮಲಾಚಲಮಾಹಾತ್ಮ್ಯ (ಭಾಗ ೨)	ಚಂಪು
೭.೬" × ೬.೩"	ಚಿಕ್ಕುಪಾಧ್ಯಾಯ	೧೬೭೨
೩೭೦–೫೬೪ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ದ್ವಾದಶಾಶ್ವಾಸ ಪ್ರಾರಂಭಃ—

ಕಂ ॥ ಶ್ರೀ ಲಲನಾಮುಖಪಂಕಜ
ರೋಲಂಬಂ ರಿಪುಮಹೀಂದ್ರಶಂಬಂ ಮುದಮಂ
ಲೀಲಾ ವಿಗ್ರಹನಂಬುದ
ನೀಲಂ ಕುಡುಗೆಮಗೆ ಕಮಲಗಿರಿಗೋಪಾಲಂ ॥ ೧ ॥

ಅಂತ್ಯ : ಬಲಭದ್ರಾನುಜನೊಲ್ದು ಭದ್ರತತಿಯಂ ಕಲ್ಯಾಣಚೇಲಂ ಮಹೋ
ಜ್ವಲ ಕಲ್ಯಾಣಮನೊಲ್ಪಿನಿಂದೆ ಶಿವಮುಂ ಶಂಭುಸ್ತುತಂ ನಿತ್ಯಮಂ
ಗಲಮುಂ ಮುಂಗಳ ದೇವತಾಪತಿಯೊರಲ್ದನೀ ಲಸದ್ವಾರಿಜಾ
ಚಲ ಮಾಹಾತ್ಮ್ಯಕೆ ಸತ್ಕವಿಪ್ರಸರದೊಳ್ ಸುಶ್ರಾವ್ಯಮಪ್ಪಂತೆವೋಲ್
॥ ೩೩೫ ॥

ಗದ್ಯ ॥ ಇದು ಸತತ ಷೋಡಶಾಶ್ವಾಸಂ ॥ ಅಂತು ಆಶ್ವಾಸ ೧೬ ಕ್ಕಂ ॥ ಕಂ ೨೫೯೧ ವೃ ॥ ೧೧೬೧ ವ ॥ ೨೭೯ ಅಂತು ವಟ್ಟು ೪೦೩೧ ಕ್ಕೆ ಸಂಪೂರ್ಣಃ ॥

ವಿಷಯ : ಹಿಮವದ್ಗೋಪಾಲಸ್ವಾಮಿಕ್ಷೇತ್ರಮಾಹಾತ್ಮ್ಯ.

ವಿಶೇಷ : ಇದರ ಮೊದಲ ಭಾಗ ಕೆ. ಬಿ. ೩೮ ರಲ್ಲಿದೆ.

227

ಕೆ. ೧೮೮/೧೨	**ಕರಣಹಸಿಗೆ (ಸಟೀಕು)**	ಶ್ಲೋಕ, ಗದ್ಯ
೧೭.೬"×೨"	ಚನ್ನಬಸವೇಶ್ವರ	ಸು. ೧೧೬೦
೧೬೮–೨೦೯ ಪತ್ರ	೧೧ ಪಂಕ್ತಿ	೮೫ ಅಕ್ಷರ

ಆದಿ : ಶ್ರೀ ಗುರು ಬಸವಲಿಂಗಾಯ ನಮಃ ×××× ಚಂನಬಸವರಾಜದೇವರು × × × × ನಿರೂಪಿಸಿದ | ಮಂದಾನೊಂದು ಮರುಗದ ಗಿಡದೋಪಾದಿಯಲ್ಲಿ ಹಾಲುಕ್ಕಿ ಮೇಲುವರಿದೋಪಾದಿಯಲ್ಲಿ ತಂಮ ತಂಮಂತರಂಗದಲ್ಲಿ ಪುಟ್ಟಿತದ ಸ್ವಾತ್ಮಜ್ಞಾನವೆ ವುತ್ಕಟಿಸಿ ತಂಮ ಚಿದಂಗಸ್ವರೂಪರಾದ ಜ್ಞಾನಿಗಳು ಅಱಿದಾನಂದಿಸಿ ಮುಕ್ತರಾಗಲೆಂದು ಹೇಳಿದಂಥ ‖ ಕರಣಹಸಿಗೆ ‖ ತತ್ವವಿಭಾಗೆಯೆಂತೆಂದೊಡೆ | ವೊಕ್ಕಲಿಗನು ಮಳೆಯು ಹದ ಭೂಮಿಯ ಬೆದೆಯನಱಿದು ಹದಿನೆಂಟುದಾನ್ಯಂಗಳಂ ಬಿತ್ತಿ ಬೆಳದು ಕೊಯಿದು ವೊಕ್ಕಿ ತೂರಿ ರಾಸಿಯಂ ಮಾಡಿ ನೆಲ್ಲು ಗೋದುವೆ ವುದ್ದು ಕಡಲೆ ಹೆಸರು ವೊದಲಾದುವು ಇಷ್ಟಿಷ್ಟೆಂದು ಅಳೆದು ಹಸುಗೆಯ ಮಾಡುವ ಹಾಂಗೆ | ಪರಶಿವನು ತಂನ ಪಂಚಮುಖಗಳಿಂದೆ ಪಂಚಭೂತಂಗಳಂ ಪುಟ್ಟಿಸಿ | ಆ ಪಂಚಭೂತಂಗಳ ಮಿಶ್ರದಿಂದಿಪ್ಪತ್ತೈಯಿದು ತತ್ವಂಗಳಂ ಪುಟ್ಟಿಸಿ | ಆ ತತ್ವಾತ್ಮಕ ಶರೀರವನು ತಂನಂಶವಾದಾತ್ಮಂಗೆ ಸಂಬಂಧಿಸಿದನಾಗಿ | ಆತ್ಮನ ದೇಹ ಭಾಗವೆ ಭಾವದ ಮಱವೆಯಿಂ ನಿಜವಂ ಮರೆದು ಪರಿಭವಂಗಳೊಳು ಹುಟ್ಟಿ ಬರುವಲ್ಲಿ ಪುಣ್ಯದಿಂ ದೇವತಾ ಜನ್ಮ | ಪಾಪದಿಂ ಸ್ಥಾವರ ಜನ್ಮ | ಪುಣ್ಯಪಾಪಂಗಂಗಳ ಸಮಾನತ್ವದಿಂ ಮಾನುಷ್ಯಜನವಹುದು | ಆ ಸಾಸ್ಥೂಲವಲ್ಲದ ಪ್ರಮಾಣಿನ ದೇಹದಲ್ಲಿ ಮೂಱುಮಾನ ಪಿತ್ತ | ಆಱುಮಾನ ಶ್ಲೇಷ್ಮ | ಆಱುಬಳ್ಳೆ ರಕ್ತ |

ಅಂತ್ಯ : ‖ ವೃತ್ತಂ ‖

ಭಾರ್ಯಾವಿಯೋಗಂ ಸುಜನಾಪವಾದಂ | ಕುಜನಸ್ಯ ಸೇವಾವೃಣಂ ವಿಶೇಷಂ |
ದಾರಿದ್ರಕಾಲೇ ಪ್ರಿಯದರ್ಶನೇನ | ವಿನಾಗ್ನಿನಾಪಂಪಚಹಂತಿಕಾಯಂ ‖

ಯೆಂದು ಶರೀರವನು ದಹಕತನದಿಂದ ಸುಡಲ್ಪಟ್ಟ ಅಯ್ದು ಪ್ರಕಾರವಾದಗ್ನಿಗಳ ಹಸಿಗೆಗಳು ‖ ಚಂನ | ಕಾಯ ಕಾಂತಿ ಲಾವಣ್ಯವನುಳ್ಳಂಥಾ | ಬಸವ | ತ್ರೈಲಿಂಗಸ್ವರೂಪವಾದ | ಈಶ್ವರ | ಷಟ್ಸ್ಥಲಜ್ಞಾನ ಚಕ್ರವರ್ತಿಗಳಾದಂಥಾ | ದೇವರು | ದಿವ್ಯಕಾಂತಿಸ್ವರೂಪವಾದ ವಸ್ತುವು | ನಿರೂಪಿಸಿದ | ಸ್ವಾಂಸೀಭೂತರಾದವರಱಿದಾನಂದಿಸಿ ಮುಕ್ತಿಯ ಪಡೆವುದಕ್ಕೆ ಸಾಧನವಾಗಿ ಸ್ವಾತ್ಮಜ್ಞಾನಾನುಭವದಿಂದೆ ಹೇಳಿದಂಥಾ | ಮತ್ತಂ | ತಂಮಂಸೀಭೂತರಾದ ಮರ್ತ್ಯಲೋಕದ ಮಹಾಗಣಂಗಳು ಬರೆದೋದಿ ಹಾಡಿ ಕೇಳಿ ಅಱಿದು ಆನಂ

ದಿಸಿ ನಿತ್ಯ ಶಿವಸುಖಿಗಳಾಗಲೆಂದು ವುಪದೇಶಿಸಿದಂಥಾ। ಕರಣಹಸಿಗೆ। ತತ್ವ ವಿಭಾಗೆಯು। ಸಮಾಪ್ತಂ॥ ಶ್ರೀ ವೀರಮಾಹೇಶ್ವರಾಧ್ವ ಪ್ರವರ್ತಕ ಷಟ್ಸ್ಥಲ ವಿದ್ಯಾ ಪ್ರಮೋದಿತ ಶ್ರೀ ಬಾಲೇಂದುಪುರಹರೀಶ್ವರ ಪರ್ವ್ವತ ಶಿವಯೋಗೀಶ್ವ ರೇಣ ಸಂಗ್ರಹಾರ್ತ್ಥ ತತ್ವವಿಭಾಗ ಟೀಕಾ ಲೇಖನಂ ಕೃತ್ವಾ ಶಿವಮಸ್ತು॥ ಸಂಪೂರ್ಣಂ। ಮಂಗಳವೆಂದೊಡೆ। ಕಲ್ಯಾಣಂ ಮಂಗಲಂ ಶುಭಂ। ಯೆಂದು ಮೋಕ್ಷಕ್ಕೆ ಪೆಸರು। ಮಹಪೂಜಾಯಾಂ ಯೆಂದು। ಮಹಾ। ಪೂಜ್ಯವಾ ಯಿತ್ತು। ಶ್ರೀ ಯೆಂದೊಡೆ ಜ್ಞಾನಕ್ಕೆ ಪೆಸರು। ಯಿದ ಬರೆದು ವೋದಿ ಹಾಡಿ ಗುರುಮುಖದಿಂದೆ ಕೇಳಿದವರು ನಿಜಮೋಕ್ಷದ ನಿರತಿಶಯ ಜ್ಞಾನವನೆಯ್ದಿ ನಿತ್ಯರಾಗಿ ಬಾಳುವರೆಂಬುದೀ ಶಾಸ್ತ್ರದ ಫಲಶೃತಿಯೆಂಬುದೀಗ ಮಂಗಳಮಹಾ ಶ್ರೀ ಶ್ರೀ ಶ್ರೀ॥ ಗುರೂಪದೇಶದಿಂದೆ ಈ ಶಾಸ್ತ್ರವ ಕೇಳಿ ವೋದಿ ಸಂತೃಪ್ತರಾದ ವರ್ಗ್ಗ ಮಂಗಳ। ಮುಕ್ತಿ ದೊರೆಕೊಂಬುದು। ನಿಜಮುಕ್ತಿ ದೊರೆಕೊಂಡ ನಂತರದೊಳ್ ಮಹಾಪೂಜ್ಯವಾದ॥ ಶ್ರೀ॥ ಸಮರಸಜ್ಞಾನ ದೊರೆಕೊಂಬುದು। ಸಮರಸಜ್ಞಾನ ದೊರೆಕೊಂಡನಂತರ ವಿದ್ಯಾ ಬುದ್ಧಿ ಅಮಿತೈಶ್ವರ್ಯಂಗಳಾಗು ವವು ಯೆಂಬುದೀಗ ಮಂಗಳ ಮಹಾ ಶ್ರೀಶ್ರೀಶ್ರೀ ಯೆಂಬ ಶಬ್ದಕ್ಕೆಂದರ್ತ್ಥ॥

ವಿಷಯ : ವೀರಶೈವ ವೇದಾಂತ.

ವಿಶೇಷ : ಇದರಲ್ಲಿ ಪರ್ವತ ಶಿವಯೋಗೀಶ್ವರರು ಮಾಡಿದ ಟೀಕೆಯಿದೆ. ಶಕಟ ರೇಫದ ಬಳಕೆಯಿದೆ. ಸಮಗ್ರ. ಇದರೊಂದಿಗೆ ಮಿಶ್ರಾರ್ಪಣ ಟೀಕೆ ಮೊದ ಲಾದ ಇತರ ೧೫ ಗ್ರಂಥಗಳಿವೆ.

228

ಕೆ. ೨೯೯/೧	ಕೆರಣಹಸಿಗೆ (ಸಟೀಕು)	ಶ್ಲೋಕ, ಗದ್ಯ
೮.೫"×೧.೫"	ಚನ್ನಬಸವೇಶ್ವರ	ಸು. ೧೧೬೦
೧– [illegible] ಪತ್ರ	೮ ಪಂಕ್ತಿ	೩೯ ಅಕ್ಷರ

ಆದಿ : ಶ್ರೀ ಗುರುಬಸವಲಿಂಗಾಯ ನಮಃ॥ ಚೆಂನಬಸವರಾಜ ದೇವರು ನಿರೂಪಿಸಿದ ಕರಣಹಸಿಗೆ॥ ಟೀ॥ ಶ್ರೀ ಗುರು ಬಸವಲಿಂಗಾಯ ನಮಃ ಯೆಂದೊಡೆ। ಶ್ರೀ ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳದು। ಗುರು। ಮುಕ್ತಿಪ್ರದಾಯಕನಾದಾತನು। ಬಕಾರವೇ ಗುರು। ಸಕಾರವೇ ಲಿಂಗ। ವಕಾರವೆ ಜಂಗಮ। ಅಂತೂ ಗುರು ಲಿಂಗಜಂಗಮಸ್ವರೂಪವಾದ ಶ್ರೀ ಗುರುಮಿಂಗೋಸ್ಕರ ನಮಃ ನಮಸ್ಕಾರವು ಯೆಂದೂ ಯಿ ಶಾಸ್ತ್ರದ ಪ್ರಥಮ ಪ್ರಾರಂಭದಲ್ಲಿ ಆಚಾರ್ಯ್ಯರು ಗುರು ನಮಃ

ಸ್ಕಾರವಂ ಮಾಡಿ ವುದ್ಧರಿಸಿದರಾದ ಕಾರಣ ಶ್ರೀ ಗುರುಬಸವಲಿಂಗಾಯ ನಮಃ ಯೆಂಬ ಶಬ್ದಕ್ಕರ್ಥ ॥ ಕರಣಹಸಿಗೆಯೆಂದೊಡೆ ತತ್ವವಿಭಾಗೆಯೆಂಬುದೊಂದು ಶಾಸ್ತ್ರ ಮತ್ತೆಯುಸಾರವಾದ ವಾಚ್ಯಗ್ರಂಥಂಗಳು.

ಅಂತ್ಯ : ಶಿಕಾಗ್ನಿ। ದುಃಖಾಗ್ನಿ। ಎಲ್ಲ ಸಿಡಿಮಿಡಿಗೊಂಬನೂ। ವಡಬಾಗ್ನಿ ಸಂಸಾರ ವಿಷಯ ಸುಖದಲ್ಲಿದ್ದರ್ೂ ಸಾಲದೆಂಬ ತೃಷ್ಣಾತುರನಾಗಿಹನೂ। ಯಿಂತಿವು ಪಂಚಾಗ್ನಿಗಳೂ। ಯಿಂತಿವು ಪಂಚಾಗ್ನಿಗಳ ಹಸಿಗೆಗಳೂ। ಶ್ರೀ ಚೆನ್ನ ಬಸವೇಶ್ವರ ದೇವರು ನಿರೂಪಿಸಿದ ಕರಣಹಸಿಗೆ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಶ್ರೀ ॥ ಷಟ್ಸ್ಥಲ ಗ್ನಾನ ಚಕ್ರವರ್ತಿಯಾದ ಚೆಂನಬಸವೇಶ್ವರ ದೇವರು ನಿರೂಪಿಸಿದ। ತತ್ವ ವಿಭಾಗೆಯೆಂಬ ಶಾಸ್ತ್ರವೂ। ಮುಕ್ತವಾಇತ್ತು। ಯಿಾ ಶಾಸ್ತ್ರವನು ವೋದಿ।ಹೇಳಿ ಕೇಳಿದವರು ಮಂಗಳವೆಂದೊಡೆ। ಮೋಕ್ಷ ಶ್ರೀ ಯಂದೊಡೆ। ಗ್ನಾನ ನಿಜಮೋಕ್ಷದ। ನಿರತಿಶಯ ಗ್ನಾನವನೈಯಿದಿ। ನಿತ್ಯರಾಗಿ ಬಾಳ್ವರೆಂಬುದು। ಯಿಾ ಶಾಸ್ತ್ರದ ಫಲಸ್ರುತಿ। ಶ್ರೀ ಶ್ರೀ ॥ ಶ್ರೀ ಶ್ರೀ ॥

ವಿಷಯ : ವೀರಶೈವ ವೇದಾಂತ.

ವಿಶೇಷ : ಸಮಗ್ರ. ಸಟೀಕು. ಈ ಗ್ರಂಥಕ್ಕೆ ತತ್ತ್ವವಿಭಾಗ ಎಂಬ ಹೆಸರೂ ಉಂಟು. ಇದರೊಂದಿಗೆ ಮಹಲಿಂಗದೇವರು ನಿರೂಪಿಸಿದ ಏಕೋತ್ತರಶತಸ್ಥಲವೂ ಇದೆ. ೫ ಮತ್ತು ೬೬ನೆಯ ಬೇರೆ ಪತ್ರಗಳು ಗ್ರಂಥದ ಆದಿಯಲ್ಲಿವೆ. ಅವೆರಡನ್ನೂ ಕಾಪಿಮಾಡಿ ಗ್ರಂಥದಲ್ಲಿ ಸೇರಿಸಿದೆ.

229

ಕೆ. ೩೯	**ಕರಸ್ಥಲದ ನಾಗಲಿಂಗದೇವರ ಚಾರಿತ್ರ**	ಸಾಂಗತ್ಯ
೧೨.೩" × ೧.೧"	ರುದ್ರ	ಸು. ೧೬೫೦
೧–೧೧೮ ಪತ್ರ	೫ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ ಗಣಾಧಿಪತಯೇಂ ನಮಃ ॥ ಕರಸ್ತಲದ ನಾಗಲಿಂಗೈಯ್ಯನ ಪುಸ್ತಕ। ಬರಉದಕ್ಕೆ। ಶುಭಮಸ್ತು ಅವಿಘ್ನಮಸ್ತು। ಸ್ತುಉತ್ಯವಚನಲು। ಶ್ರೀಸರ್ವೇಶ್ವರ ಸಕಲಲೋಕಾದ್ಯಾ। ವೇದ ವೇದಾಂತಾತ್ತಾ ವೇದ್ಯಾ। ಅಂಭವ ಮಾಹಾದೇವಾ। ಆದಿಮುನಿಗಣವಂದ್ಯೆ ಸರ್ವಗ್ನಾ। ಸರ್ವಾತ್ಮ ಸಕಲ ಲೋಕೇಶ। ಶ್ರೀರಜತಾಚಲನಿವಾಸಾ। ನಾರಾಯಣನೇತ್ರ ಕಮಲಪೂಜಿತಾ ॥ ಫಣಿಕುಂಡಲ। ಮಂಡಿತ ಭಾಳಲೋಚನಾ। ಭಸಿತಾಂಗವಿಲೇಪನಾ।

ಶುದ್ಧ ಕರ ಜಟಮುಗುಟ। ಸೇಕರ ಕಮುಲಭಾಂಧುವ| ಕೋಟಿತೇಜ | ಪಾರ್ವ.... ಮುಖಾಂಬುಜಾರಸಾ್ವಮ್ರುತ ಭ್ರಮರ । ನಿಂಮ್ಮಯ ಪಾದ ನಮುಸ್ತೇ ನಮೋಂ ನಮಃ ||

ಕಂದ || ಶ್ರೀಪಾರ್ವತ್ತೀಶ ನಿಂಮುಯ
ಶ್ರೀಪಾದವ ಸ್ತುತಿಸಿ ಮುಂನ್ನಮುಕ್ತಿಯನೆಯಿದಿದರು
ಭೂಪಾರದಿ ಮೆರದುದ ಕೇ
ಳೀ ಪರಿಕ್ರುತ್ತಿಯಿಂದ ಪೊಗಳ್ವೆನವರ ಮೈಹಿಮೆಯನೂ || ೧ ||
ಭೂಮಿಯೊಳ್ಮೆಸವ ಕರಸ್ತಲದ ಮ
ಹಿಮನ ಕೀರ್ತ್ತಿಯಂಬ ಪರಿಮಳದುಂಬಿ
ವಾಮಾಂಗ ವರ್ಣಮುದ್ರೆಯ
ಹೇಮಕಾರಂಡದವೊಲು ಕ್ರುತಿಯದನೊರವೆ || ೨ ||

ಅಂತ್ಯ : ಶ್ಚ || ವದಗಿಬಂದರೆ ಹರಹ್ರುದಯ ನಿರ್ವಯಲಾಗೆ
ಮುದದಿ ನಡೆ.... ನಂತೆ
ಪದರವಿಲ್ಲದಲ್ಲಿಂತು ಕದಲಿಯೋಜನದಲ್ಲಿ
ಚದುರ ತಂನ್ನಿರವ ತೋರಿದನೂ || ೬೦ ||
ಕರಸ್ಥಲನಾಗೈಯ್ಯ ಗುರುಶಾಂ

ವಿಷಯ : ಕರಸ್ಥಲದ ನಾಗಲಿಂಗದೇವರ ಚರಿತ್ರೆ.

ವಿಶೇಷ : ೧—೧೦ ಸಂಧಿ ಪೂರ್ತಿ ಮತ್ತು ೧೧ನೆಯ ಸಂಧಿಯಲ್ಲಿ ೬೦ನೆಯ ಪದ್ಯದ ವರೆಗಿದ್ದು ಅಸಮಗ್ರವಾಗಿದೆ. ಓಲೆ ಅತಿ ಶಿಥಿಲ. ಅಲ್ಲಲ್ಲಿ ತ್ರುಟಿತ. ಗರಿಗಳು ಹುಳುಹಿಡಿದು ಅಂಚುಗಳು ಮುರಿದುಹೋಗಿವೆ.

230

ಕೆ. ೬೩೬	**ಕರಸ್ಥಲದ ನಾಗಲಿಂಗದೇವರ ಚಾರಿತ್ರ**	ಸಾಂಗತ್ಯ
೧೭.೬" × ೧.೫"	ರುದ್ರ	ಸು. ೧೬೫೦
೧—೭೩ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಕರಸ್ತಲದ ನಾಗಲಿಂಗಪನ ಪುಸ್ತ ಶ್ರೀಗುರು ಬಸವಲಿಂಗಾಯನಮಃ || ಸ್ವಸ್ತಿಶ್ರೀ ವಿಜಯಾಭ್ಯೋದಯ ನೃಪ ಶಾಲಿವಾಹನ ಶಖ ವರ್ಷಂಗಳು ೧೭೬೨ ನೇ ಪ್ಲವಸಂವತ್ಸರದ ಫಾಲ್ಗುಣ ಶುದ್ಧ ೭ ಶನಿವಾರ ಕ್ರುತ್ತಿಕಾನಕ್ಷತ್ರ

ದಲ್ಲು ಬಾಳವಡೇರ ಬಸವಲಿಂಗದೇವರ ಗರ್ಭಾಬ್ಧಿಚಂದ್ರನಾದ ಸಿದ್ಧ ರಾಮೈಯ್ಯನು ಬರದಂತ ನಾಗಲಿಂಗಪನ ಸಂಗತ್ಯಕ್ಕೆ ಶುಭಮಸ್ತು ॥

× × × ×

ಕಂದ ॥ ಶ್ರೀಪಾರ್ವತೀಶ ನಿಂಮ್ಮಯ
ಶ್ರೀಪಾದವ ಸ್ತುತಿಸಿ ಮುಂನ್ನಾ ಮುಕ್ತಿಯನ್ನೈದಿದ
ಭೂಪರದಿ....ರದುದನು ಕೇ
ಳಿಪುದೀಕೃತಿಯಿಂದ ಪೊಗಳ್ವೆ ನಾನವರ ಮಹಿಮೆಯಂ ॥ ೧ ॥

ಭುವಿಯೊಳೆಸವ ಕರಸ್ತಲ
ದಾ ಮಹಿಮನ ಕೀರ್ತಿಯಂಬ ಪರಿಮಳ ದುಂಬೇಂ
ಪಾವಮಾಂಗಪರ್ಣ ಮುದ್ರೆಯ
ಹೇಮಕರಂಡಕದವೊಲು ಕ್ರುತಿಯಿದನೊರವೇಂ ॥ ೨ ॥

ಅಂತ್ಯ : ಯಿಂದೂಧರನಿಂದಾಲಿ ಬಂದೂ ನಾಗೈಯ್ಯಾನು
ತಂದೆ ಗುರುಶಾಂತಾನಾ ಕರದೊಯ್ವಾ
ಅಂದಾದಾ ಕ್ರುತಿಯಾನುಯಿಂದೂ ಲಾಲಿಸಿದಗ್ಗೆೞ
ಸಂದೇಹಾವಿಲ್ಲಾ ಮುಕ್ತಿಗಳು ॥ ೬೭ ॥

ಅಂತು ಸಂಧಿ ೧೧ ಕಂ ಪದನು ೯೪೦ ಕ್ಕಂ ಮಂಗಳ ಮಹಾಶ್ರೀ. ಯೀ ನಾಗ ಲಿಂಗಪ್ಪನವರ ಸಂಗತ್ಯ ಸಂಪೂಣಂ ಮಂಗಳ ಮಹಾಶ್ರೀ ॥ ತಪ್ಪಂ ಬರದಾತಂ ಕಡುಜಡನಪ್ಪಾತಂ × × × ದುತ್ತಮ ಪುರುಷರೂ ॥ ಯೀ ಸಂಗತ್ಯ ಬರೆದಾತ ಗುಡಿಕೋಟಿ ಬೋಳವಡೇರ ಮಠದಾ ಗುರಪ್ಪ ದೇವರಕುಮಾರು ಶಾಂತವೀರವಡೇರ ಕುಮಾರು ಬಂಡೇವಡೇರವರ ಕುಮಾರು ಚೆಂನ್ನಾ ಬಸವದೇವರು ವರಕುಮಾರು ಬಸವಲಿಂಗದೇವರ ಕುಮಾರ ಸಿದ್ಧರಾಮೈ ಯ್ಯಾನು ಬರೆದ ನಾಗಲಿಂಗಪ್ಪನವರ ಸಂಗತ್ಯಕ್ಕೆ ಶುಭಮಸ್ತು ॥ ಸಮಾಪ್ತ ಮಂಗಳಮಹಾಶ್ರೀ ॥

ಶುಭಕ್ರುತು ಸಂವತ್ಸರದಾ ಜೇಷ್ಠ ಬಹುಳ ೧೦ ಶನಿವಾರದಲು ರೇವತೀ ನಕ್ಷತ್ರದಲ್ಲಿ ಶುಭವ್ಯಾಳ್ಯದಲ್ಲಿ ಸಂಗತ್ಯ ಮುಕ್ತಾಯವಾಯಿತು ॥

ವಿಷಯ : ಕರಸ್ಥಲದ ನಾಗಲಿಂಗದೇವರ ಚರಿತ್ರೆ.

ವಿಶೇಷ : ಗ್ರಂಥಾಂತ್ಯದಲ್ಲಿ ಖಾಲಿ ಪತ್ರಗಳೂ ಇವೆ.

231

ಕೆ.ಬಿ. ೨೬೭	**ಕರಸ್ಥಳದ ನಾಗಲಿಂಗ ದೇವರ ಚಾರಿತ್ರ**	ಸಾಂಗತ್ಯ
೮.೪″ × ೬.೬″	ರುದ್ರ	ಸು. ೧೬೫೦
೧–೩೦ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಶ್ರೀ ಗಣಾಧಿಪತಯೆ ನಮಃ ॥ ಶ್ರೀ ಸಂಗಮೇಶ್ವರ ಸಕಲಲೋಕಾರಾಧ್ಯ । ವೇದವೇದಾಂತವೇದ್ಯಾ । ಅಭವಮಹಾದೇವ ಆದಿಮುನಿಗಣವಂದ್ಯ ಸರ್ವಜ್ಞ ಸರ್ವಾತ್ಮಕ ಸಕಲಜನಪೂಜಿತ । ಫಣಿಕುಂಡಲಲೋಕೇಶಾ । ಶ್ರೀ ರಜತಾಚಲ ನಿವಾಸ । ನಾರಾಯಣನೇತ್ರ ಕೋಮಲಪೂಜಿತ ಫಣಿಕುಂಡಲಮಂಡಿತ ಬಾಳ ಲೋಚ । ಭಸಿತಾಂಗವಿಲೇಪನ । ಸುಧಾಕರ ಜಟಾಮುಕುಟಕರ ಕಮಲಬಾಂಧವ ಕೋಟಿತೇಜ ಪಾರ್ವತೀ ಪ್ರಾಣೇಶಭಕ್ತ ಹೃತ್ಕಮಲಸಾರಾಮೃತ ಭ್ರಮರ ನಿಂದು ಪಾದ ನಮಸ್ತೇ ನಮಸ್ತೇ ನಮಃ ॥

ಕಂದಾ ॥ ಪಾರ್ವತಿ ನಿಂಮಯ
ಶ್ರೀಪಾದವ ನಮಿಸಿ ಸ್ತುತಿಸಿ ಮುಂನ ಮುಕ್ತಿಯನೈದುದ
ಬೂಪರು ಮೆರೆದುದ ಕೇ
ಳೀಪರಿಯ ಕೃತಿಯಿಂ
ದ ಪೊಗಳುವೆನವರ ಮಹಿಮೆಗಳನೂ, ॥ ೧ ॥

ಭೂಮಿಯೊಳೆಸೆವ ಕರಸ್ಥಳ
ದ ಮಹಿಮನ ಕೀರ್ತಿಯಂಬ ಪೊಮಳದುಂಬಿ
ವಾಮಾಂಗದ ಸಾರಮುದ್ರಿಯ
ಹೇಮಕರಂಡಕದ ವೊಲೀಂ ಕೃತಿಯಂನೊರವೆ ॥

॥ ಸಾಂಗತ್ಯ ॥ ಶರಷಟ್ಪದ ಬೋಗಭಾಮಿನಿ
ವರವಾರ್ದಿನಿ ವರವಾರ್ದಿಕ ಷಟ್ಪದಗಳನು
ಸರಿಗೆಂದು ಕಥೆಯನೊರವೆನೂ
ಮೆರವ ಷಟ್ಪಪದ್ಮ ಕರಂಡಾದಿಗಳ ಮುಂದೆ
ತರಳನೊರದನುತಿಯಂತೆ
ಹರನಾಕ್ಷಮಣಿ ಪಂಚಸರಮಾಲೆಗಳ ಮುಂದೆ
ಯರದ ಬೀಜಸಾಗರದಂತೆ
ಮರದ ಬೀಜವು ಯಂದು
ಕಿರಿದು ನೋಡಲಿ ಬ್ಯಾಡ
ಹಿರಿಯರು ತಿಳಿದು ಕೇಳುವದೂ ॥ × × × ×

ವರಕವಿ ಬಾಣನು ಹರಿದೇವ ರಾಘವಾಂಕ
ಸ್ತಿರಕಾಳಿದಾಸ ಶಂಕರನಾ
ಹರಕವಿಗಳಿಗೆಲ್ಲ ಮರೆಯಾದೆ ಶಿರಬಾಗಿ
ವರದಶಿವನಾಗಮಕೃತಿಯಾ ॥

ಅಂತ್ಯ : ನಿತ್ಯಸುಮತಿಯನು ಯಿತು ಮಲ್ಲೇಶನ್ನು
ಅರ್ತಿಯಿಂ ಮಾಡಿಸಿ ಕೃತಿಯ
ಕರ್ತ ಶ್ರೀ ವೀರಶಾಂತಯ ಕರಸ್ಥಳದ ನಾಗೈಯ್ಯರು
ಅರ್ತಿಯಿಂ ಕೈಲಾಸಪುರದಿ ॥
ಯಿರುತ್ತಿರೆ ಹರಗಣದೊಡನೆ ನಾಗಯ್ಯನು
ಗುರುಶಾಂತಯ್ಯ ಸಹವಾಗಿ
ಪರಮ ಹರುಷದೊಳಗಿರುತಿರುವದ ಕೇಳಿ
ಯರಕವಾಯಿತು ಸೌಮಸಂಧಿ ॥ ೭೫ ॥

ಅಂತು ಸಂಧಿ ೯ ಕಂ ಪದನು ೮೯೦ ಕ್ಕಂ ಮಂಗಳಮಹಾ ಜಯಮಂಗಳ ಮಹಾ ಶ್ರೀಶ್ರೀಶ್ರೀ ಲಿಂಗಯ್ಯಚರಿತ್ರೆ ಸಂಪೂರ್ನಮಂಗಳಂ ॥ ಶ್ರೀ ॥

ವಿಷಯ : ಕರಸ್ಥಳದ ನಾಗಲಿಂಗದೇವರ ಚರಿತ್ರೆ.

ವಿಶೇಷ : ಒಟ್ಟು ಒಂಭತ್ತು ಸಂಧಿಗಳಿದ್ದು ಸಮಗ್ರವಾಗಿದೆ.

232

ಕೆ. ಬಿ. ೪೩೩	**ಕರಸ್ಥಲದ ನಾಗಲಿಂಗದೇವರ ಚಾರಿತ್ರ**	ಸಾಂಗತ್ಯ
೮.೧" × ೬.೩"	ರುದ್ರ	ಸು. ೧೬೫೦
೧–೩೦ ಪತ್ರ	೨೫ ಪಂಕ್ತಿ	೨೦ ಅಕ್ಷರ

ಆದಿ : ಶ್ರೀಗುರು ಮಲ್ಲಿಕಾರ್ಜುನಲಿಂಗಾಯ ನಮಃ । ಶುಭಮಸ್ತು ॥

ಕರಸ್ಥಲದ ನಾಗಲಿಂಗದೇವರಚಾರಿತ್ರೆ ಬರೆಯುವದಕ್ಕೆ ಆಯುರಾರೋಗ್ಯ ಐಶ್ವರ್ಯಮಸ್ತು ॥ ಶ್ರೀ ಕಾಳಿಕದೇವಿ ಕಮಟ್ಟೇಶ್ವರ ಸ್ವಾಮಿಯವರ ಪಾದಾರ ವಿಂದ್ಯಸ್ತವೃತ್ಯ ॥

ಅಜಮುಹಾದೇವ ಆದಿಮುನಿಗಣವಂದ್ಯ । ಸರ್ವಗ್ನಸರ್ವಾತ್ಮ ಸಕಲ ಲೋಕೇಶಾ । ಶ್ರೀರಜತಚಲವಾಸ ನಾರಾಯಣನೇತ್ರ ಕಮಲಪೂಜಿತ । ಫಣಿಕುಂಡಲಮಂಡಿತ । ಬಾಳಲೋಚನ ಭಶಿತಾಂಗವಿಲೇಪನಾ । ಸುಧಾಕರ

ಜಟಾಮುಕುಟಶೇಖರ। ಕಮಲಬಾಂಧವ ಕೋಟಿತೇಜ। ಪಾರ್ವತಿಮುಖಂಬುಜ।
ರಸಾಂಮ್ರುತಭ್ರುಮರ ನಿಂಮ್ಮಯ ಪಾದಕೆ ನವೋ ನಮಸ್ತೇ ನಮಃ ॥

ವೃತ್ತಾ॥ ಕಂದಾ ॥ ಶ್ರೀಪಾದವ ಸ್ತುತಿಸಿ ಮುನ್ನ ಮುಕ್ತಿಯನ್ನೈದರು ।
ಭೂಪರದಿ ಮೆರದುದ ಕೇಳೀ ಪರಿಕೃತಿಯಿದ ಪೊಗಳ್ವನವರ ಮಹಿಮೆಯ ।
ಭೂಮಿಯೊಳೆಸವ ಕರಸ್ಥಲದ ಮಹಿಮನ ಕೀರ್ತಿಯೆಂಬ ಪರಿಮಳದುಂಬಿ ।
ವಾಮಾರ್ಪಣಮುದ್ರೆ । ಹೇಮಕರಂಡಲೊಲೆಸವ । ಕೃತಿಯಿದನೊರವೆ ॥

ಬಂದಕಿವೆಂಣಿನ ವಿರಹ
ಕೊಂದಾಗದೆ ತನ್ನ ರೂಪು ಕುಲಸತಿಯನಗಲ್ದಾ
ಮುಂದೆ ಪರಮಾತ್ಮಯೋಗದಿ
ನಂದೀಶಳೈಕ್ಯವಡದಕೃತಿಯಿದಪ್ಪೊಗಳ್ವೆ ॥
ವೃತ್ತಾ॥ ಯಿಂತು ಮಹತ್ಮೆಯುಳ್ಳ ಶರಣೈಕ್ಯ ಕ
ರಸ್ಥಲದ ನಾಗನಾಂದ್ಯರಿಂತಮನೆಲದ
ವಿಸ್ತರಿಸಿ ಪೇಳುವರೆನ್ನಳವಲ್ಲಾ ॥ ೧ ॥
ಕೇಳಿಕಂಡಿಂತು ಪಾವಾಡ ಕೀರ್ತಿಪನ ಯೋಗಶಿವೈಕ್ಯರ ಲೀಲೆಯೆನುಸುವೇಂ
ಕೃಪಾವಲೋಕನದಿ ರಕ್ಷೀಸೂ ॥ ಶ್ರೀ ಮಲ್ಲಿಕಾರ್ಜುನಲಿಂಗಾಯನಮಃ ॥
ರಾಗ॥ ತಸ್ನಿಚ್ಛೆಪದಾ॥

ಗುರುಸಾಧನೆ॥ ಆಗಾಮಭೇದ್ಯಾನೆ ಸಾಗಾರಗುಣ ಅಲ್ಪಹರನೇ
ನಾಗಭೂಷಣನೆ ರಕ್ಷಿಪುದೂ
ಯೋಗಿವಂದಿತನೆ ಬಂದೀಗೆನ್ನ ಗ್ನಾನಾವಾ
ನೀಗೀ ಸುಮತಿಯ ಪಾಲಿಪುದೂ ॥ ೧ ॥

ಅಂತ್ಯ : ನಿತ್ಯಸುಮತಿ ನಿಜವಿತ್ತು ರಕ್ಷಿಸು ದೇವಾ
ಕರ್ತು ಶ್ರೀಗಿರಿಯ ಮಲ್ಲೇಶಾ
ಚಿತ್ತಾದೊಳನುದೀನ ವರ್ತಿಸುವದು ನಿಮ್ಮ
ಭಕ್ತಾರ ಶಿಶುವು ಶಿವನಣುಗಾನೋ ॥ ೭೧ ॥
ಅಂತ್ತೂ ಸಂಧಿ ೧೧ಕ್ಕಂ ಪದನೂ ೧೦೧೭ಕ್ಕಂ ಮಂಗಳಮಹಾಶ್ರೀ.
ಕಂದ ಪದ್ಯ॥ ಕರಸ್ತಲದ ನಾಗಲಿಂಗನ
ಕರುಣದ ಸ್ತುತಿವಾಃಖ್ಯ ಕಾವ್ಯಪದಪಗಣಿತಮದೆಂತೆಂದೊಡೇ
ವಿರಚಿಸಿದ ಶಿವನ ಶಶತ
ಸ್ಥಿರನು ಹದಿನೇಳು ರುದ್ರಸಂಧಿ ಸಮಾಯುಕ್ತಂ ॥
ಕರಸ್ತಲದ ನಾಗಲಿಂಗದೇವರ ಚರಿತ್ರೆ ಸಂಪೂರ್ಣವಾಯಿತೂ ॥

ವಿಷಯ : ಕರಸ್ಥಲದ ನಾಗಲಿಂಗದೇವರ ಚರಿತ್ರೆ.

ವಿಶೇಷ : ಸಮಗ್ರವಾಗಿದೆ. ಸಂಧಿ ೧ರಲ್ಲಿ ಪದ್ಯ ೬ ರ ಕೊನೆಯಲ್ಲಿ

ಶರಕುಸುಮಭಾಮಿನಿ ಪರಿವರ್ಧಿನಿ ಭೋಗ
ಮೆರವ ವಾರ್ಧಿಕಷಟ್ಪದವೆಂಬಾ
ವರಕೃತಿಗಳ ಮುಂದೆ ಶರಷಟ್ಪದಿಗಳನೂ
ಪೆರಿಗೆಂದೀ ಕಥೆಯನೊರವೆನೂ ॥ ೬ ॥

ಸಂಧಿ ೧ ಪದ್ಯ ೮ರಲ್ಲಿ—ರುದ್ರಾನ ಕೃತಿಯೊಳು ಬಿದ್ದ ತಪ್ಪುಗಳನು
ತಿದ್ದಾಲು ದೋಶನಾಶನವೂ
ಕ್ಷುದ್ರದಿಂ ಕೃತಿಯಾನಬದ್ಧಾ ಮಾಡಲು ಆಗಾ
ಹೊದ್ದಿ ಬಿಡದು ಭವ ಭವದೀ ॥ ೯ ॥

ಈ ಎರಡರಿಂದ ಕೃತಿಯಂ ರಚಿಸಿದವನು ರುದ್ರನೆಂದೂ, ಶರಷಟ್ಪದಿಯಲ್ಲಿ ರಚಿತವಾಗಿರುವುದೆಂದೂ ವಿಶದವಾಗುತ್ತದೆ.

ಈ ಪ್ರತಿಯು "ಎ. ಚನ್ನಬಸವೇಗೌಡ ಪೋಲೀಸ್ ಪಟೇಲ್, ಅಂಬಳೆ ಚಿಕ್ಕಮಗಳೂರು ತಾಲ್ಲೂಕು ಕಡೂರು ಡಿಸ್ಟ್ರಿಕ್ಟ್" ಇವರದೆಂದು ಅಲ್ಲಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ರುಜು ಮಾಡಿರುವುದರಿಂದ ತಿಳಿಯುತ್ತದೆ.

233

ಕರಸ್ಥಲದನಾಗಲಿಂಗದೇವರ ತ್ರಿವಿಧಿ (ಸಟೀಕು)

ಕೆ. ೧೮೮/೧೦		ತ್ರಿವಿಧಿ, ಗದ್ಯ
೧೭.೬"×೨"	?	?
೫೯_೬೩ ಪತ್ರ	೧೧ ಪಂಕ್ತಿ	೯೨ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ ॥ ಟೀಕೆ ಶ್ರೀ ಷಡ್ಗುಣೈಶ್ವರ್ಯ ಸಂಪತ್ಕರವನುಳ್ಳಂಥಾ । ಗುರು । ಮುಕ್ತಿಪ್ರದಾಯಕನಾದಂಥ । ಬಸವಚಿಂನಾದ। ಚಿದ್ಬಿಂದು ಚಿತ್ಕಲಾ ಸ್ವರೂಪನಾದಂಥಾ × × × ಕರಸ್ಥಲದ ನಾಗಲಿಂಗದೇವರ ತ್ರಿವಿಧಿ। ಕರಸ್ಥಲದ । ಹಸ್ತಾರವಿಂದವೆಂಬ ಪಟ್ಟಣವನುಳ್ಳಂಥಾ । ನಾಗ । ಸರ್ಪಾಭರಣಂಗಳನುಳ್ಳಂಥಾ । ಲಿಂಗದೇವರ । ತ್ರಿವಿಧ ಲಿಂಗವನೊಳಕೊಂಡು ತೋಱುವ ಯಿಷ್ಟಲಿಂಗದೇವರ । ತ್ರಿವಿಧಿ । ತ್ರಿಪದಿಯೆಂಬುದರ್ತ್ಥ । ಇದರೊಳು ಶ್ರೀಗುರು ನಿರೂಪಿಸಿದ ತತ್ವಾರ್ತ್ಥವನೆ ಬರೆವೆನು ॥

ಪದ॥ ಗುರುಸ್ಥಲದನುಭಾವದ ತೇಜನ ವರ್ಣಿಸುವಡೆ
ಧರೆಯೊಳಪ್ಪಂಥಾ ಶರಣರು
ಧರೆಯೊಳಿಪ್ಪಂಥಾ ಶರಣರು ತತ್ವದ
ಕುಱುಹುವಿದೆಂದು ತಿಳಿವುದೂ ॥

ಟೀಕೆ॥ ಗುರುಸ್ಥಲದ। ಶ್ರೀ ಗುರುವಿನ ಸ್ಥಾನವಾದ ಆಜ್ಞಾಚಕ್ರದನು ಭಾವದ। ಜ್ಞಾನಾನುಭಾವದ। ತೇಜನ। ಮಹಾಲಿಂಗದ ವಿಸ್ತಾರವನು। ವರ್ನ್ನಿಸುವಡೆ।

ಅಂತ್ಯ: ಪರಿಮಳವಕೊಂಬಂಥ ವರಭೃಂಗನಂದಾದಿ
ಪರಮಹಂಸನೊಳೊಡವೆರದು
ಪರಮಹಂಸನೊಳೊಡವೆರದು ಕರಸ್ಥಲದ
ಗುರುಶಾಂತನೊಳಗೆ ಬಯಲಾದೆ ॥

ಟೀಕೆ॥ ಪರಿಮಳವ ಕೊಂಬಂಥಾ ವರಭೃಂಗನಂದಾದಿ। ಭ್ರಮರನು ಕೆಂಡ ಸಂಪಗೆಯ ಪರಿಮಳಕ್ಕೆರಗಿ ಅಲ್ಲಿಯೇ ಮಗ್ನವಾದ ಹಾಂಗೆ ಹೃದಯ ಕಮಲದಧೋಮುಖವಾದಷ್ಟದಳಂಗಂಗಳಲ್ಲಿ ಪೂರ್ವಗುಣ ದುರ್ವಾಸನೆ ಗೆಱಗಿ ಕರ್ಮಫಲವನನುಭವಿಸದೆ ಜೀವನ ಗುಣವಳಿದು ಸಜ್ಜೀವನಾಗಿ। ಪರಮಹಂಸನೊಳ್। ಊರ್ಧ್ವಮುಖವಾದ ಚತುಃಕಮಲದಲ್ಲಿದ್ದ ಪರಮಾತ್ಮನಲ್ಲಿ। ವೊಡವೆರದು। ಸಮರಸವಾಗಿ। ಕರಸ್ಥಲದ। ಷಡ್ವಿಧ ಲಿಂಗ ಷಡ್ವಿಧಶಕ್ತಿ ಷಡ್ವಿಧಭಕ್ತಿ ಷಡ್ವಿಧ ಪದಾರ್ತ್ಥ ಷಡ್ವಿಧ ಪ್ರಸಾಂದಂಗಳ ನೊಳಕೊಂಡು। ವೃತ್ತಗೋಮುಖ ಗೋಳುಕಂಗಳಿಂದ ವ್ಯಕ್ತೀಕರಿಸಿ ಹಸ್ತಕಮಲದ ಪೀಠಿಕಾಗ್ರದಲ್ಲಿ ವಪ್ಪುತ್ತಿರ್ದ್ದ। ಗುರುಶಾಂತನೊಳಗೆ। ಗುರುತತ್ವ ಶಿವತತ್ವ ಸದಾಶಿವತತ್ವ ಮಾಹೇಶ್ವರ ತತ್ವಂಗಳ ಗರ್ಭೀಕರಿಸಿ ಕೊಂಡು ಹೃತ್ಕಮಲದ ಚಿತ್ಕಲಾಲಿಂಗವೆ ಗುರುಮುಖದಿಂದ ಯಿಷ್ಟ ಲಿಂಗವಾಗಿ ಬರಲು। ಬಯಲಾದೆ। ಸಮರಸಭಕ್ತಿಯುಕ್ತವಾಗಿ ನಿಷ್ಪತಿ ಯಾದ ಶರಣನು ಲಿಂಗದಲ್ಲಿ ಪ್ರಶ್ನಿಗೆ ಗೆಯ್ದುತಿರ್ದ್ದನೆಂಬುದರ್ತ್ಥ ॥ ೩೧ ॥

ವಿಷಯ: ವೀರಶೈವ ಸಿದ್ಧಾಂತ.

ವಿಶೇಷ: ಅಸಮಗ್ರ. ಶಕಟರೇಫವನ್ನು ಬಳಸಿದೆ. ಇದರೊಂದಿಗೆ ಏಕೋತ್ತರ ಶತ ಸ್ಥಲ, ಕರಣ ಹಸಿಗೆ (ಸಟೀಕು) ಮೊದಲಾದ ಇತರ ೧೫ ಗ್ರಂಥಗಳಿವೆ.

234

ಕೆ. ೪೧೮/೨	ಕರಿಯಭಂಟನ ಕಥೆ	ಯಕ್ಷಗಾನ
೧೪.೫"×೧.೨"	ಭಾಳಾಕ್ಷ	ಸು. ೧೮೦೦
೬೫–೧೧೮ ಪತ್ರ	೬ ಪಂಕ್ತಿ	೮೦ ಅಕ್ಷರ

ಆದಿ : ಸೂಚನೆ॥ ಕರಿಯಭಂಟನ ಕಥೆ ಬರೆಯುವದಕ್ಕೆ ಶುಭಮಸ್ತು॥

ಶ್ರೀ ಗಿರಿಜೇಶ ಶಂಕರೇಶ ಭಾನುಪ್ರಕಾಶ
ಭಾಗೀರಥೀಧರನೆ ಭವರೋಗವೈದ್ಯನೆ ॥
ಮಂನ್ಮತಾಭಷಿತಾಂಗ ಮಾಯಾಮದಭಂಗ
ಮುನಿಜನಾವನ ಚೈತ್ರ ಅನಲ ಸೂನೇತ್ರಾ॥
ಕರಿದಾನವಾನಾಶ ಕೈವಲ್ಯಕೋಶಾ
ಹರಿಯಜನತಿಪಾತ್ರಾ ವರಪುಣ್ಯಪಾತ್ರಾ ॥

ಅಂತ್ಯ : ಸೂಕ್ಷ್ಮದೊಳೀ ಕೃತಿ ಸುಲಭವಾಗಿರಲು
ಯಕ್ಷಗಾನವ ಮಾಡಿದವರಾರೆನಲು ॥
ಸವುಭಾಗ್ಯ ಸಕಲಗುಣ ಸಂಪನ್ನ
ಸುವೇವಿಕಿ ಕೆಂಪಣ್ಣ ಗೌಡನದೆಂನ್ನಿ ॥
ಲಲನೆರತ್ನವೆನಿಪ ಹಲಗಂಮ್ಮನ ಗರ್ಭ
ಲಲಿತಾಕ್ಷೀರ ಕಳೆಚಂದ್ರಮನೆನಿಸಿ ॥
ಭಾವಜಾಧಿಪರೂಪ ಭಾಳಾಕ್ಷ ಪೇಳಿದ
ಕೋವಿದರು ಕೇಳುವುದು ಕೃಪೆಯಿಂದ ಯಿಾ ಕೃತಿಯ ॥ × × ×
ಕರಿಯ ಭಂಟನ ಕಥೆ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಕರಿಯಭಂಟನ ಕಥೆ.

ವಿಶೇಷ : ಇದರೊಂದಿಗೆ ಚೋರ ಚಿತ್ರಶೇಖರ ಸೋಮಶೇಖರರ ಕಥೆ ಎಂಬ ಗ್ರಂಥವೂ ಇದೆ.

235

ಕೆ. ಬಿ. ೧೭೦	ಕರಿಯಭಂಟನ ಕಥೆ	ಯಕ್ಷಗಾನ
೭.೫" × ೬.೨"	ಭಾಳಾಕ್ಷ	ಸು. ೧೮೦೦
೧–೧೪೩ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ಕರಿಯ ಭಂಟನ ಕಥೆ ಬರೆಯುವದಕ್ಕೆ ಶುಭಮಸ್ತು.

ದ್ವಿಪದೇ ॥ ಶ್ರೀಗಿರಿಜೇಶ ಶಂಕರೇಶ ಭೂತೇಶ ।
ಭಾಗೀರಥಿ ಧರನೆ ಭವರೋಗ ಹರನೆ ॥ ೧ ॥

ಅಂತ್ಯ : ಧರೆಯೊಳಗೆ ಕಾಶ್ಮೀರ ದೇಶದಿ
ಯಿರುವ ಭೂಸುರ ನರಹರಿಯು ಕಿಂ
ಕರನು ಪೇಳಿದ ಚರಿತೆಯನು ಸುಮನಸರೆ ನಮಿಪೆ ॥ ೬ ॥

× × × ×

ಯಲ್ಲಿ ಕುಳಿತಿರಲಲ್ಲಿಯ ಲೀಲೆಯಿಂ
ದಲ್ಲಿ ಕಾಣುವ ಚಿತ್ರವು
ಬಲ್ಲದತನದಿಂದ ರುಷಿ ಸೊಲ್ಲು ನಿಲ್ಲುವ ತೆರದಿ
ವುಲ್ಲಾಸ ಕೊಡುವ ಶಿವಗೆ ॥ ೩ ॥
ಅಂತು ಕರಿಯಭಂಟನ ಕಥೆ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಕರಿಯಭಂಟನ ಕಥೆ.

ವಿಶೇಷ : ಪ್ರತಿ ಚೆನ್ನಾಗಿದೆ.

236

ಕೆ. ೬೩೧	ಕರೆಕಂಠಶತಕ	ವೃತ್ತ
೧೩.೮" × ೨."	ಶ್ರೀಕಂಠ	?
೮೦–೮೬ ಪತ್ರ	೧೧ ಪಂಕ್ತಿ	೬೭ ಅಕ್ಷರ

ಆದಿ : ಕರೆಕಂಠಶತಕಾ ॥
ಶ್ರೀ ರಮಣಂ ಪಯೋಜ ಭವತಿಂತಿವರಂ ನೆರೆ ಕಾಣ್ಬೆವೆಂದೊಡಂ
ದಾರಿಗೆ ರೂಪುದೋರದಿಪ್ಪ್ರ ಮಹಾಪರಬೊಂಮ್ಮ ವೇದಗ
ಳ್ದಾರದೊಳಿರ್ದ್ದ ಸಾರುತಿಹವಾಗಮಶಾಸ್ತ್ರ ಪುರಾಣವೇದಿಸ
ಲ್ಪಾರದು ಮೂರ್ತ್ತಿ ಮೂಜಗವ ರಕ್ಷಿಪುದೈ ಕರೆಕಂಠಸೋಮಯಾ ॥ ೧ ॥

ಅಂತ್ಯ : ಇಂತಿವನೋದಿ ಪೇಳ್ವ ಮನುಜಾಳಿಯ ದುಃಖ ಚಯಂಗ....
....ಂತರುವಾಗಿ ನೀತಿವಿಧರಾಗಿ ನಿಗರ್ವಿಗಳಾಗಿ ಲೋಕದೊ
ಳ್ಸಂತತ ಪೂಜ್ಯರಾಗಿ ಸುಖದಿಂದಿರುತಿಪ್ಪ್ರರವಗ್ಗ್ರಳಿಷ್ಟಮಂ
ಕಂತು ಮದಾಂತಕಂ ಕರುಣಿಸುತ್ತಿಹನಾ ಕರೆಕಂಠ ಸೋಮಯಾ ॥ ೧೦೭ ॥
ಕರ ಕಟಮಾ........

ವಿಷಯ : ಕೆಲವು ಪ್ರಸಿದ್ಧ ಐತಿಹಾಸಿಕ ಕಥೆಗಳ ಸೂಚನಾರೂಪವಾದ ಪದ್ಯಗಳು.

ವಿಶೇಷ : ೮೦ ನೆಯ ಓಲೆಯ ಕೊನೆಯಲ್ಲಿ ಈ ಶತಕ ಪ್ರಾರಂಭವಾಗಿ ೮೬ ನೆಯ ಓಲೆಯಲ್ಲಿ ೧೦೭ ನೆಯ ಪದ್ಯವು ಮುಗಿದಿದೆ. ೮೭ ನೆಯ ಓಲೆ ಇಲ್ಲ. ಇದರಲ್ಲೂ ಈ ಕೃತಿಯ ಒಂದೆರಡು ಪದ್ಯಗಳಿದ್ದಿರಬಹುದು. ೮೦ ನೆಯ ಓಲೆಯಲ್ಲಿ ಶಂಕರೇಶ್ವರ ಶತಕದ ಕೊನೆಯ ೧೩ ಪದ್ಯಗಳಿವೆ. ಕರೆಕಂಠಶತಕದ ಕರ್ತೃ ಚಾಮಸೂನು ಶ್ರೀಕಂಠ ಎನ್ನುವುದು ೬ ನೆಯ ಪದ್ಯದಲ್ಲಿದೆ. ಈ ಕೃತಿಯ ಪ್ರತಿಪದ್ಯವೂ "ಪೂರ್ವಕಲ್ಪನೆಯ ವಿೂರುವರಾರ್ ಕರೆಕಂಠ ಸೋಮಯಾ" ಎಂದು ಮುಗಿಯುತ್ತದೆ.

237

ಕೆ. ಎ. ೨೩	**ಕರ್ಣವೃತ್ತಾಂತಕಥೆ**	ಸಾಂಗತ್ಯ
೧೨.೫" × ೭.೮"	ತಿರುಮಲ್ಯೆಯಂಗಾರ್	ಸು. ೧೬೦೦
೧–೪೦ ಪತ್ರ	೨೧ ಪಂಕ್ತಿ	೨೪ ಅಕ್ಷರ

ಆದಿ : ಮೈಸೂರು ಸಂಸ್ಥಾನದ ಪ್ರಧಾನಿ ತಿರುಮಲ್ಯೆಂಯಗಾರ್‌ರೆಂಬ ಕವಿ ರಚಿತಮಾದ ಕರ್ಣವೃತ್ತಾಂತ ಕಥಾ ||

ಶ್ರೀಶನು ಸಕಲಕಲ್ಯಾಣಗುಣಾಮೃತ
ರಾಶಿ ಚರಾಚರಶೇಷಿ
ಈಶಾದಿ ಸುರವಂದಿತಾಂಘ್ರಿ ಪಶ್ಚಿಮರಂ
ಗೇಶನೆನ್ನನು ಸಲಹಿದನೂ || ೧ ||

ಶರೀರಾಣಿಯರಸನ ಚಿದಚಿದಧೀಶನ
ಪರಮಯೋಗೀಂದ್ರವಂದಿತನ
ನಿರುಪಧಿ ಸದ್ಗುಣ ನಿಧಿಯ ನಿರ್ಮಲನ
ಶ್ರೀಚರಣಂಗಳೆ ಶರಣೆನಗೆ || ೨ ||

ಅಂತ್ಯ : ನೀನುಪದೇಶವಿತ್ತುದನಾಲಿಪಿವೆಲ್ಲಿ
ನೀನರಿಯದ ದಾರಿಯಿಲ್ಲಾ
ನೀನು ಜಿಸೆಸಿದಂತೆ ನಡೆವೆವೆನಲು ಪಕ್ಕಿ
ಯಾ ನಿಜವನು ಬಿತ್ತರಿಸಿತೂ || ೧೪ ||

ವಿಷಯ : ಕರ್ಣನ ಕಥೆ.

ವಿಶೇಷ: ಅಸಮಗ್ರ. ೧೨ ನೆಯ ಅಧ್ಯಾಯದ ೧೪ ನೆಯ ಪದ್ಯದವರೆಗಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಆದಿಯಲ್ಲಿ ಈ ಗ್ರಂಥದ ವಿಷಯಸೂಚಿ ಇರುವ ಪ್ರತ್ಯೇಕವಾದ ಒಂದು ಪತ್ರವಿದೆ.

8.6 238

ಕೆ. ಎ. ೨೩೨	ಕರ್ಣಾಟಕ ಕಲ್ಯಾಣಕಾರಕ	ಕಂದ, ವೃತ್ತ
೧೩" × ೮"	ಜಗದ್ದಳ ಸೋಮನಾಥ	ಸು. ೧೧೫೦
೧–೪೯ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ: ಕನ್ನಡ ಕಲ್ಯಾಣಕಾರಕ ||

ವೃ|| ಶ್ರೀಮನ್ನಮ್ರಾರೀಲೋಚನ ರುಚಿಧವಳ ಛತ್ರರುಗ್ಮಾಲೆಪುಷ್ಪ
ಸ್ತೋಮಂ ಸಾರಾಂಶುಭಾಮಂಡಲಕರಮನದೀ ಪಂಚಿತಾಘೋ
ದ್ದಾಮಾಂಗ ಜ್ಯೋತಿಯೋಳ್ತಕ್ಕಿಸೆಯೆ ತೊಳಗುವನ್ವರ್ಥನಾಮಂ
ತ್ರಿಲೋಕೀ
ಧಾಮಂ ಶ್ರೀಚಂದ್ರನಾಥಂ ಬುಧಕುಮುದಮಕಾನಂದಮಾಡುಗೆಂದುಂ||

× × × ×

ಸುಕರಂ ತಾನೆನೆ ಪೂಜ್ಯಪಾದ ಮುನಿಗಳ್ ಮುಂಪೇಳ್ದ ಕಲ್ಯಾಣಕಾ
ರಕಮಂ ಬಾಹಟ ಸಿದ್ಧಸಾರ ಚರಕಾದ್ಯುತ್ಕೃಷ್ಟಮಂ ಸದ್ಗುಣಾ
ನ್ವಿತಂ ವರ್ಜಿತ ಮದ್ಯಮಾಂಸ ಮಧುವಂ ಕರ್ಣಾಟದಿಂ ಲೋಕರ
ಕ್ಷಣಂ ಚಿತ್ರಮದಾಗೆ ಚಿತ್ರ ಕವಿಸೋಮಂ ಪೇಳ್ದನಿಂತರ್ಥಿಯಿಂ || ೯ ||

ಅಂತ್ಯ: ಕೊಡೆಪಾಲೊಳು ಪೆದ್ದುಂಬೆಯ
ನೊಡೆಯೇರಿಸಿದ ಬೆಣ್ಣೋಳಕ್ಕುಮಂದವಿರೇಕಂ
ಕೊಡಪೆಡತಲೆಯೊಳು ಛರ್ಧಿಯ
ನೊಡರಿಸುಗುಂಕೊಳೆದು ಕಳೆಯೆ ಮಾಣದುವೆರಡುಂ || ೨೧ ||

ಇದು ವಿಚಿತ್ರ ಕವಿ ಜಗದ್ದಳ ಸೋಮನಾಥ ವಿರಚಿತಮಪ್ಪ ಕರ್ಣಾಟ ಕಲ್ಯಾಣ ಕಾರಕದೊಳುದರಾದಾನ ಚಿಕಿತ್ಸಾ ನಿರೂಪಣಂ ಸಪ್ತಮಃ || ೨೨ ||
ಗುಲ್ಮನಿದಾನ ಜ್ವರಮೋಕ್ಷಾನಂತರಂ ಕ್ಷೀಣತೆವಡೆದಿರೆ ತದ್ಧಾತುಗಳು ದುರ್ಮಲಂಬೆತ್ತಿರೆಯುಂ ಮತ್ತುಂಡು ನೀರಂ ಕುಡಿ........

ವಿಷಯ : ವೈದ್ಯ.

ವಿಶೇಷ: ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಅಸಮಗ್ರ. ಗ್ರಂಥದ ಆದಿಯ ಪ್ರತ್ಯೇಕ ಪತ್ರದಲ್ಲಿ ವಿಷಯಾನುಕ್ರಮಣಿಕೆಯಿದೆ.

239

ಕೆ. ಬಿ. ೨೯೦/೪	ಕರ್ಣಾಟಕ ಧಾತುಗಳು	ಗದ್ಯ
೭.೬" × ೬.೩"	ಕೇಶಿರಾಜ	ಸು. ೧೨೬೦
೧೧–೨೭ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಕರ್ಣಾಟಧಾತು ಬರೆಯುವದಕ್ಕೆ ನಿರ್ವಿಘ್ನಮಸ್ತು ||
ಕಂದಾ || ವೇದ ಸಮನಾಗಿ ಭೀಮುನಿ
ನಾದುದು ಸಂಸ್ಕೃತದ ಧಾತುವಾ ತೆರದಿಂದಂ
ಯಾದವ ಕಟಕಾಚಾರ್ಯನಿ
ನಾದುದು ಕರ್ಣಾಟಧಾತು ಕವಿಕೇಶವನಿಂ ||

× × × ×

ಕ್ರಿಯಾರ್ಥೋಧಾತುಃ || ಈ ಪ್ರದಾನೆ । ಓ । ಹಸ್ನೇಹೆ । ಕಾ । ರಕ್ಷಣೇ । ಕಿ । ರಕ್ತಪಕ್ವೆ ।

ಅಂತ್ಯ : ಮನಂಗೊಳ್ । ಚಿತ್ತವಿಮೋಹನೇ । ಅಸುಂಗೊಳ್ । ಪ್ರಾಣಾಪಹರಣೇ। ಬಳಿಕೊಳ್ । ಕ್ರಮಸಂಧಾನೆ । ನೆರೆಕೊಳ್ । ಸರ್ವಸ್ವಹರಣೆ । ಮರ್ಮ ಭೇದೇ ಚ । ಮಾರ್ಕೊಳ್ । ಸಂಮುಖೆ । ವಲವರಂಗೊಳ್ । ಪಕ್ಷಸ್ವೀಕಾರೇ || ೯೪೭ || ಗದ್ಯ|| ಯಿದು ಸಮಸ್ತ ಶಾಬ್ದಿಕ ಜನಮನೋಜನಿತ ಶಬ್ದಸಂದೇಹ ಶಲ್ಯಚಾರುಚುಂಬಕಾಯಮಾನಾನೂನಕ ಕರ್ಣಾಟಕ ಲಕ್ಷಣ ಶಿಕ್ಷಾಚಾರ್ಯರ್ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಧಾತುನಿರ್ಣಯಂ ಷಷ್ಠ ಪ್ರಕರಣಂ ಸಂಪೂರ್ಣ ಮಂಗಳಮಹಾ || ಶ್ರೀ ||

ವಿಷಯ : ಶಬ್ದಮಣಿದರ್ಪಣದ ಆರನೆಯ ಪ್ರಕರಣದಲ್ಲಿರುವ ಧಾತುಪಾಠ.

ವಿಶೇಷ : ತೆಳುವು ಕಾಗದ. ಇದರೊಂದಿಗೆ ಶಬ್ದರತ್ನಾಕರ, ಪದ್ಯ ನಾನಾರ್ಥ, ಏಕಾಕ್ಷರ ನಿಘಂಟು, ಧನಂಜಯ ನಿಘಂಟು, ಕನ್ನಡ ಶಬ್ದಮಂಜರೀ ಟೀಕು ಸುಧಾ, ಶಬ್ದಮಂಜರೀ, ವಿಶೇಷ ವಿಷಯಗಳು ಎಂಬ ಗ್ರಂಥಗಳೂ ಇವೆ.

240

ಕೆ.ಬಿ. ೪೨೯/೮ ಕರ್ಣಾಟಕ ಧಾತುನಿರ್ಣಯ ಗದ್ಯ

೭.೭"×೬" ಕೇಶಿರಾಜ ಸು. ೧೨೬೦

೧–೨೧ ಪತ್ರ ೧೬ ಪಂಕ್ತಿ ೧೪ ಅಕ್ಷರ

ಆದಿ : ಕರ್ಣಾಟಕಧಾತಪೋಲಿಖ್ಯಂತೆ ||
ವೇದಸಮನಾಗಿ ಭೀಮನಿ
ನಾದುದು ಕರ್ನಾಟ ಧಾತುವಾ ತೆರ
ದಿಂದಂ ಯಾದವ ಕಟಕಾಚಾರ್ಯನಿ
ನಾದುದು ಕರ್ನಾಟಧಾತು ಕವಿಕೇಶವನಿಂ || ೧ ||

ಅಂತ್ಯ : ಒಲವರಂಗೊಳ್ ಪಕ್ಷಸ್ವೀಕಾರೇ || ಇತಿಳಾಂತಾಃ || ೯೪೭ ||

ಇದು ಸಮಸ್ತಶಾಬ್ದಿಕ ಜನಮನೋಜನಿತ ಶಬ್ದಸಂದೇಹ ಶಲ್ಯಚಾರುಚುಂಬ ಕಾಯಮನಾನೂನ ಕರ್ಣಾಟಕ ಲಕ್ಷಣಶಿಕ್ಷಾಚಾರ್ಯ ಸುಕವಿ ಕೇಶಿರಾಜ ವಿರಚಿತಮಪ್ಪ ಶಬ್ದಮಣಿದರ್ಪಣದೊಳ್ ಕರ್ಣಾಟಕ ಧಾತು ನಿರ್ಣಯಂ ನಾಮ ಷಷ್ಠಪ್ರಕರಣಂ ಸಂಪೂರ್ಣಂ ||

ವಿಷಯ : ಕನ್ನಡ ಧಾತುಪಾಠ.

ವಿಶೇಷ : ಕೊನೆಯಲ್ಲಿ ಕೆಲವು ಪತ್ರಗಳು ಖಾಲಿಯಿವೆ. ಇದು ಶಬ್ದಮಣಿದರ್ಪಣದ ಒಂದು ಭಾಗ. ಇದರೊಂದಿಗೆ ಭಾರತನಿಘಂಟು, ಕನ್ನಡ ಧಾತುಪಾಠ, ಶಬ್ದ ರತ್ನಾಕರ, ನಾನಾರ್ಥಕಂದ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರೀ (ಸಟೀಕು) ಎಂಬ ಗ್ರಂಥಗಳೂ ಇರುತ್ತವೆ.

241

ಕೆ. ೪೧ ಕರ್ಣಾಟಕ ಭಾಷಾಭೂಷಣ ಸೂತ್ರ, ವೃತ್ತಿ

೧೩.೩"×೨.೪" ನಾಗವರ್ಮ ೧೧೪೫

೨೬೨–೨೭೪ ಪತ್ರ ೧೬ ಪಂಕ್ತಿ ೫೪ ಅಕ್ಷರ

ಆದಿ : ಸರ್ವಜ್ಞಂನ್ತಮಹಂ ವನ್ದೇ ಪರಂಜ್ಯೋತಿಸ್ತಮೋಪಹಂ |
ಪ್ರವೃತ್ತಾಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ ||
ಅಥ ಕರ್ನಾಟಕ ಶಬ್ದಸಿದ್ಧಿಃ || ೧ ||

ಅಂತ್ಯ : ಅರೆ....ಮಕ್ವಚಿತ್ಕದಾಚಿದತ್ಥಯೋಃ। ಅರೆ ಅರಮೆ ಇತ್ಯೇತೌ ಶಬ್ದೌ ಕ್ವಚಿತ್ಕದಾಚಿದತ್ಥಯೋರ್ಭವತಃ। ಯಥಾ ಸಂ.... ಯೆಡೆಯೊಳ್ ಅರೆ ಉಳ। ಅರೊಯೆನ್ದಡಿ। ಅರಮೆ ಎತ್ತಾನುವೊಮ್ಮೆರ್ ॥೧೩॥ ಅಲ್ತೆ ಸಂಪ್ರಶ್ನಾನುಮಾನಯೋಃ। ಅಲ್ತೆ ಇತ್ಯ... ಶಬ್ದಃ ಸಂಪ್ರಶ್ನೇನುಮಾನೇ ಚ ವರ್ತ್ತತೇ॥ ನೀನು ಪೇಳ್ವಿಯಳ್ತೆ। ಇದಲ್ತೆ। ಎಂದೂಡಿತು ॥ ೧೪ ॥

ಕರ್ನ್ನಾಟಶಬ್ದ ಶಾಸ್ತ್ರಾಣಿ ಲೋಕವ್ಯ.... ಹೇತವೆ।
ರಚಿತಾನಿ ಸ್ಫುಟಾತ್ಥಾನಿ ಕೃತಿನಾ ನಾಗವರ್ಮಣಾ ॥೧॥
ತದ್ಭವಂ ತತ್ಸಮಂ ದೇಶೀತ್ಯನೇಕ ಕ್ರಮತಸ್ಥಿತಾಃ॥
ಶಬ್ದಾಃ ಕರ್ನಾಟಭಾಷಾಯಾಂ ದಿಙ್ಮಾತ್ರಂ ಸೂಚಿತಂ ಕಿಯತ್ ॥ ೨ ॥

ಇತಿ ಕರ್ನಾಟಕ ವ್ಯಾಕರಣೇ ನಾಗವರ್ಮ್ಮ ವಿರಚಿತೇ ನಿಪಾತ ಪ್ರಕರಣಂ ನಾಮ ದಶಮಃ ಪರಿಚ್ಛೇದಃ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಮಲಯಾಳಿ ಲಿಪಿ. ಇದನ್ನು ನೋಡಿಯೇ ಕೆ. ಎ. ೧೯೩/೨ ನೆಯ ನಂಬರಿನ ಪ್ರತಿಯನ್ನು ಬರೆದಿರುವಂತೆ ತಿಳಿದುಬರುತ್ತದೆ. ಕೆಲವು ಪತ್ರಗಳು ಶಿಥಿಲವಾಗಿವೆ. ೨೬ ನೆಯ ಪತ್ರ ಲುಪ್ತವಾಗಿದೆ. ಆದಿಯಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ತೆಲಗು ಲಿಪಿಯ ಎರಡು ಪತ್ರಗಳೂ, ಅಂತ್ಯದಲ್ಲಿ ಒಂದು ಪತ್ರವೂ ಹೀಗೆ ಒಟ್ಟು ಮೂರು ಬೇರೆ ಪತ್ರಗಳಿವೆ.

517

242

ಕೆ. ಎ. ೧೯೩/೧	ಕರ್ಣಾಟಕ ಭಾಷಾಭೂಷಣ	ಸೂತ್ರ, ವೃತ್ತಿ
೧೩" × ೮"	ನಾಗವರ್ಮ	೧೧೪೫
೧–೪೯ ಪತ್ರ	೨೧ ಪಂಕ್ತಿ	೧೯ ಅಕ್ಷರ

ಆದಿ : ಕರ್ನ್ನಾಟಕ ಭಾಷಾಭೂಷಣಂ।

ಶ್ಲೋಕ ॥ ಶುಕ್ಲಾಂಬರಧರಂ ವಿಷ್ಣುಂ ಶಶಿವರ್ನ್ನಂ ಚತುರ್ಭುಜಂ।
ಪ್ರಸನ್ನವದನಂ ಧ್ಯಾಯೇತ್ಸರ್ವವಿಘ್ನೋಪಶಾಂತಯೇ ॥

ಸೂತ್ರ ॥ ಅಥ ಕರ್ನ್ನಾಟಶಬ್ದಸಿದ್ಧಿಃ ॥೧॥

ವೃತ್ತಿ ॥ ಅಥ ಶಬ್ದೋಽಯಂ ಮಂಗಳಾರ್ತ್ಥಃ। ಮಂಗಳಾದೀನಿ ಶಾಸ್ತ್ರಾಣಿ ಪ್ರಥಂತೇ। ಇತಿ ಕಾರಾರ್ಥೋವಾ। ಇಹ ಕರ್ನ್ನಾಟವಿಷಯೇ ಶಬ್ದಸಿದ್ಧಿರಧಿಕ್ರಿಯತೆ ಇತ್ಯರ್ತ್ಥಃ॥

ಸೂತ್ರ ॥ ಅಕಾರಾದಯಃ ಪ್ರಸಿದ್ಧಾವರ್ಣ್ಣಾಃ ॥೨॥

ಅಂತ್ಯ : ಸೂ ॥ ಅರೆ, ಅರಮೆ, ಕ್ವಚಿತ್ ಕದಾಚಿದರ್ತ್ಥೆ ॥ ೨೮೭ ॥
ವೃ ॥ ಕ್ವಚಿತ್, ಕದಾಚಿತ್ ಇತ್ಯರ್ತ್ಥೇ ಅರೇ ಅರಮೆ ಇತಿ ನಿಪತಿತೌ ॥
ಪ್ರ ॥ ಅರೆಯೆಡೆಯೊಳು ॥ ಅರೆಮೆಯೆತ್ತಾನುಮೊಮ್ಮೆ ।
ಸೂತ್ರ ॥ ಅಲ್ತೆ ಸಂಪ್ರಶ್ನಾನುಮಾನಯೋಃ ॥ ೨೮೮ ॥
ವೃ ॥ ಸಂಪ್ರಶ್ನೇ ಅನುಮಾನೇಚ ಅಲ್ತೆ ಇತಿ ನಿಪಾತ್ಯತೆ ॥
ಪ್ರ ॥ ನೀನಿದಂ ಪೇಳ್ದೆಯಲ್ತೆ ॥ ಇದಲ್ತೆ ಆಂ ಮಾಡಿದಚ್ಛತ್ರಂ ॥
ಇತಿ ಕರ್ಣಾಟಶಬ್ದ ಸೂತ್ರಾಣಿ ಲೋಕವ್ಯುತ್ಪತ್ತಿ ಹೇತವೇ ।
ರಚಿತಾನಿ ಸ್ಫುಟಾರ್ಥಾನಿ ಕೃತಿನಾ ನಾಗವರ್ಮಣಾ ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಅಕ್ಷರಗಳು ಸುಂದರವಾಗಿವೆ. 'ಸೂ–ವೃತ್ತಿ–ಪ್ರ' ಈ ವರ್ಣಗಳನ್ನೂ ಸೂತ್ರಕ್ರಮಾಂಕವನ್ನೂ ಕೆಂಪುಮಸಿಯಲ್ಲಿ ಬರೆದಿದೆ. ಗ್ರಂಥಾರಂಭಕ್ಕೆ ಮೊದಲು ಇದನ್ನು ಗ್ರಂಥಲಿಪಿಯ ಪ್ರತಿಯಿಂದ ಪ್ರತಿ ಮಾಡಿದೆ ಎಂದು ಆಂಗ್ಲ ಭಾಷೆಯಲ್ಲಿ ಬರೆದಿದೆ. ಇದೇ ಪುಸ್ತಕದಲ್ಲಿ ಇದೇ ಗ್ರಂಥದ ಎರಡು ಪ್ರತ್ಯಂತರಗಳಿವೆ.

243

ಕೆ. ಎ. ೧೯೩/೨	**ಕರ್ಣಾಟಕ ಭಾಷಾಭೂಷಣ**	ಸೂತ್ರ, ವೃತ್ತಿ
೧೩"×೮"	ನಾಗವರ್ಮ	೧೧೪೫
೧–೫೪ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ಸರ್ವಜ್ಞಂತ್ಮಮಹಂ ವನ್ದೇ ಪರಂಜ್ಯೋತಿಸ್ತಮೋಪಹಂ ।
ಪ್ರವೃತ್ತಾ ಯನ್ಮುಖಾದ್ದೇವೀ ಸರ್ವಭಾಷಾ ಸರಸ್ವತೀ ॥
ಅಥ ಕರ್ನಾಟಕ ಶಬ್ದಸಿದ್ಧಿಃ ॥ ೧ ॥
ಅಥ ಶಬ್ದೋಯಮಾಙ್ಮಙ್ಗಳಾರ್ಥ್ಥಃ । ಮಙ್ಗಳಾದೀನಿ ಶಾಸ್ತ್ರಾಣಿ ಪ್ರಥನ್ತೆ ಅಧಿಕಾರಾರ್ತ್ಥೋವಾ ಇಹ ಕರ್ನಾಟವಿಷಯೆ ಶಬ್ದಸಿದ್ಧಿಃ ಕ್ರಿಯೇತ ಇತಿ ॥ ಅಕಾರಾದಯಃ ಪ್ರಸಿದ್ಧಾವರ್ನಾಃ ॥ ೨ ॥

ಅಂತ್ಯ : ಅರೆ....ವ ಕ್ವಚಿತ್ಕದಾಚಿದರ್ತ್ಥಯೋಃ ॥ ಅರೆ ಅರಮೆ ಇತ್ಯೇತೌ ಶಬ್ದೌ ಕ್ವಚಿತ್ಕದಾಚಿದರ್ತ್ಥಯೋರ್ಭವತಃ । ಯಥಾಸಂ.... ಯೆಡೆಯೊಳ್ । ಅರೆ ಉಳಿ । ಅರೆಯೆನ್ದಡಿ । ಅರಮೆ ಎತ್ತಾನುಮೊಮ್ಮೆ ॥ ೧೩ ॥
ಅಲ್ತೆ ಸಂಪ್ರಶ್ನಾನುಮಾನಯೋಃ । ಅಲ್ತೆ ಇತ್ಯ........ಶಬ್ದ ಸಂಪ್ರಶ್ನೇನುಮಾನೇ ಚ ವರ್ತ್ತತೆ । ನೀನು ಪೇಳ್ದೆಯಲ್ತೆ । ಇದಲ್ತೆ । ಎಂದೂಡಿತು ॥ ೧೪ ॥

ಕರ್ನ್ನಾಟಶಬ್ದಶಾಸ್ತ್ರಾಣಿ ಲೋಕವೃ....ತ್ತಿ ಹೇತವೆ ।
ರಚಿತಾನಿ ಸ್ಫುಟಾರ್ತ್ಥಾನಿ ಕೃತಿನಾ ನಾಗವರ್ಮ್ಮಣಾ ॥ ೧ ॥
ತದ್ಭವಂ ತತ್ಸಮಂ ದೇಶಿತ್ಯನೇಕ ಕ್ರಮ ಪಸ್ಥಿತಾ ॥
ಶಬ್ದಾಃ ಕರ್ನಾಟಭಾಷಾಯಾಂ ದಿಙ್ಮಾತ್ರಂ ಸೂಚಿತಂ ಕಿಯತ್ ॥ ೨ ॥

ಇತಿ ಕರ್ನ್ನಾಟಕ ವ್ಯಾಕರಣ ವಿವರಣೆ ನಾಗವರ್ಮ ಕವಿ ರಚಿತ ನಿಪಾತ ಪ್ರಕರಣಂ ನಾಮದಶಮಃ ಪರಿಚ್ಛೇದಃ ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಮೋಡಿ ಅಕ್ಷರ. ಮಧ್ಯೆ ಮಧ್ಯೆ ಅಕ್ಷರಗಳು ಲುಪ್ತವಾಗಿವೆ. ಇದನ್ನು ಮಲೆಯಾಳಿ ಲಿಪಿಯ ಕೆ. ೪೧ ನೆಯ ಪ್ರತಿಯಿಂದ ಬರೆಯಲಾಗಿದೆ. ಇದಕ್ಕೆ ಮೊದಲು ಮತ್ತು ಇದಾದ ಮೇಲೆ ಇದೇ ವ್ಯಾಕರಣದ ಒಂದೊಂದು ಪ್ರತಿ ಇವೆ.

5.7 244

ಕೆ. ಎ. ೧೯೩/೩	ಕರ್ಣಾಟಕ ಭಾಷಾಭೂಷಣ	ಸೂತ್ರ, ವೃತ್ತಿ
೧೩" × ೮"	ನಾಗವರ್ಮ	೧೧೪೫
೧–೪೫ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ : ಕರ್ನಾಟಕ ಭಾಷಾಭೂಷಣಂ ॥
................ತಿಸ್ತ್ರಮೋಽಪಹಂ ।
ಪ್ರವೃತ್ತ್ಯಾಯನ್ಮುಖಾದೇವೀ ಸರ್ವಭಾಷಾ ಸರಸ್ವತೀ ॥
ಅಥ ಕ........ಗಳಾದೀನಿ ಶಾಸ್ತ್ರಾಣಿ ಪ್ರಥಂತ ಇತಿ ॥
ಅಧಿಕಾರಾರ್ಥೋಽವಾ ॥
ಇಹ ಕರ್ನಾಟಕ ವಿಷ...............॥
ಅಕಾರಾದಯಃ ಪ್ರಸಿದ್ಧಾವರ್ಣಾಃ ॥

ಅಂತ್ಯ : ಅರೆ ಅರಮೆ ಕ್ವಚಿತ್ಕ್ವಚಿದರ್ಥಯೋಃ ॥
ಅರೆ ಅರಮೆ ಇತ್ಯೇತೌ ಕ್ವಚಿತ್ಕ್ವಚಿದರ್ಥಯೋರ್ವರ್ತ್ತೇತೇ। ಅ....ಡೆಯೊಳ್ ಅರೆ ಉಳಿದಂ ॥
ಅರಮೆ ಎತಾನುಮೊರ್ಮೆ । ಅರಮೆ ಅರಲ್ದ ।
ಅಲ್ತೆ ಸಂಪ್ರಶ್ನಾನುಮಾನಯೋಃ ॥

ಅಲ್ತೆ........ಪ್ರಶ್ನೆ ಅನುಮಾನೇ ಚ ವರ್ತತೆ ।
ನೀನಿದಂ ಪೇಳ್ದೆಯಲ್ತೆ । ಇದಲ್ತೆ ಅನ್ದುಮಾಡಿದ ಸೂತ್ರಂ ॥
ಶ್ಲೋಕ ॥ ಕರ್ನ್ನಾಟಕ ಶಬ್ದಸೂತ್ರಾ........ವ್ಯಾವೃತ್ತಿ ಹೇತವೆ॥
ರಚಿತಾನಿ ಸ್ಫುಟಾರ್ಥಾನಿ ಕೃತಾನಿ ನಾಗವರ್ಮಣಾ ॥

ಇತಿ ಕರ್ಣಾಟಕ ವ್ಯಾಕರಣೆ ನಿಪಾತ ಪ್ರಕ....ನಾಮ ದಶಮಃ ಪರಿಚ್ಛೇದಃ ನಾಗವರ್ಮ್ಮನಿಂ ಪೇಳಲ್ಪಟ್ಟ ಭಾಷಾಭೂಷಣಕ್ಕೆ ಸಮಾಪ್ತಂ ॥ ಶ್ರೀ ॥

ವಿಷಯ : ಹಳಗನ್ನಡ ವ್ಯಾಕರಣ.

ವಿಶೇಷ : ಅಕ್ಷರಗಳು ಸುಂದರವಾಗಿವೆ. ಸೂತ್ರಗಳನ್ನು ಮಾತ್ರ ಕೆಂಪು ಮಶಿಯಲ್ಲಿ ಬರೆದಿದೆ. ಅನೇಕ ಕಡೆ ಗ್ರಂಥಪಾತವಿದೆ. ಇದಕ್ಕೆ ಮೊದಲು ಇದೇ ಕೃತಿಯ ಎರಡು ಪ್ರತ್ಯಂತರಗಳಿವೆ.

245

ಕೆ. ೧೩೧	ಕರ್ಣಾಟಕ ಶಬ್ದಮಂಜರಿ	ವಾರ್ಧಕಷಟ್ಪದಿ
೧೪.೫" × ೧.೪"	ವಿರಕ್ತತೋಂಟದಾರ್ಯ	೧೫೬೦
೧–೧೫ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ : ....ಂಜನಜಂಗಮಚಕ್ರವರ್ತಿ ಶರಣಾಗತವಜ್ರಪಂಜರ ಮದನ ಮರ್ದನ ಮಾಯಾಕೋಳಾಹಳ ಅಲ್ಲಮಪ್ರಿಯ ಕೃಪಾಪ್ರಸನ್ನರಾದ ತೋಂಟದ ಸಿದ್ಧಲಿಂಗಸ್ವಾಮಿಯವರು ನಿರೂಪಿಸಿದ ಕರ್ನಾಟಕ....ಟ್ಪದಿ ॥

ಶ್ರೀಮದವಿರಳ ಸಕಳ ನಿಃಕಲ ಗುಣಾತೀತ
ನಾಮರೂಪಕ್ರಿಯಾರಹಿತ ಶ್ರುತಿತತಿ ವಿನುತ
ಕಾಮಿತಫಲದಾಯಕ ಸಲಕಲೋಕನಾಯಕ ನಿತ್ಯನಿರ್ಮಾಯಕಾ
ರಾಮಣೀಯಕ ಯೋಗಿಜನಮನೋ............
................ಕಾಂತ ಕರುಣಿಸುವ ವಿಮಲಮತಿಯ ಮ
ತ್ಸ್ವಾಮಿ ವರಗುರು ನಿರಂಜನ ಪ್ರ........ಪ್ರಭಂಜನ ಮದನಭಂಜನ
॥ ೧ ॥

ವರಪಟ್ಟಸ್ಥಲಾಚಾರಸಂಸಿದ್ಧನನಮಲ ಸು
ಸ್ಥಿರಶೈವ ಪಂಚಾಕ್ಷರೀಮಂತ್ರಹೃ.......
...........ಜ್ಞಾನಸಂಪನ್ನನಖಿಳಶಾಸ್ತ್ರಾರ್ಥಕೋವಿದ ಪಾವನ
ಚರಿತ ಘನಗುರು ನಿರಂಜನ ಲಿಂಗಚರಣಸರ
ಸಿರುಹ ಸೌರಭ ಮಧುಕರಂ ತೋಂಟದಾರ್ಯ ಬಿ
ತ್ತರಿಸಿದನೆನಲ್ಕೆ ಮೆಚ್ಚದರೊಳರೆ ಕರ್ನಾ....... ॥ ೨ ॥

ಅಂತ್ಯ : ಇಂತು ನೆಱೆ ಕರ್ಣಾಟಕಭಾಷೆಯೊಳ್ತರಿಸಂದ
ನಂತನಾಮಂಗಳೊಳ್ ದೇಶೀಯ್ಯಪಲವುಳೆಱಿ
...........ಪಗಂತಿಳಿಯಲಳವಲ್ತವಱೊಳು ಪಲಕೆಲಶಬ್ದವಂ
ಸಂತಸದೊಳಚ್ಚಗನ್ನಡ ಗೂಢಪದ ತದ್ಭ
ವಂ ತತ್ಸಮಂಗಳೆಂದೆಂಬ ನಾಮಂಗಳನೋ
ರಂತೆ ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣ ಸನ್ಮಾರ್ಗವಿಡಿದೂ॥೧೨೦॥
ಕರ್ಣ್ನಾಟಕ ಶಬ್ದಮಂಜರಿ ಸಂಪೂರ್ನ್ನ ಮಂಗಳ ಮಹಾಶ್ರೀ.

ವಿಷಯ : ಕನ್ನಡ ನಿಘಂಟು.

ವಿಶೇಷ : ಆರಂಭಪತ್ರ ಶಿಥಿಲ. ಶಕಟರೇಫ ಪ್ರಯೋಗವಿದೆ.

5.4 246

ಕೆ. ೩೬೬/೭ ಕರ್ಣಾಟಕ ಶಬ್ದಮಂಜರಿ ವಾರ್ಧಕಷಟ್ಪದಿ
೮.೭" × ೨.೩" ವಿರಕ್ತತೋಂಟದಾರ್ಯ ೧೫೬೦
೧೦೧–೧೨೧ ಪತ್ರ ೧೧ ಪಂಕ್ತಿ ೪೦ ಅಕ್ಷರ

ಆದಿ : ....ಗಾರ ನಾಮದೊಳಗಂಗರಂ ಕೆಂಡವಿಂಗಳವೆನಿಪ್ಪವು ॥ ೧೨ ॥
ಸುಡವುದೆನೆ ಚುಚಿಂಬುದರ್ಕ್ಕನ್ನಿ ಕಣದಲ್ಲಿ
ಕಿಡಿಯುಕ್ಕು ಕಾಳ್ಕಿಚ್ಚೆನಲ್ ದವಂ ಕಡಲ್ಗಿಚ್ಚು
ಬಡಬಾಗ್ನಿಯುಕ್ಕು ಬೂದಿಯು ಭೂಥಿಯುಕ್ಕು ಮತ್ತಂ ಜವನದಿಂದಂ ಮಾನೂ
ದಡಿಗೈಯ್ಯ ಜಕ್ಕಂದೊಳಲಿದೆರನೆಯ್ದೆ ಕಾ
ರ್ಮ್ಮಡುವಿನಂಣಂ ನೇಸಱಣುಗನೆನಲಂತಕನೊ
ಳಿಡಿವಿಡದ ನಾಮ ಮಾಸುಸದೇರ ಕೊಂತಗಯ್ಯಂ ಪಿಚ್ಚವಣಿಗನೆನಲೂ॥೧೩॥

ಅಂತ್ಯ : ಯಿಂತು ನೆಱೆ ಕರ್ಣಾಟಭಾಸೆಯೊಳ್ ತಱಿಸಂದ
ನಂತ ನಾಮಂಗಳೊಳ್ದೇಶಿಯ್ಯ ಪಲವು ತೆರ
ನಂತವು ಮಹಾಶೇಷಗಂ ತಿಳಿಯಲಳವಲ್ಲವಱೊಳು ಪಲಕೆಲ ಶಬ್ದಮಂ
ಸಂತಸದೊಳಚ್ಚಗಂನಡ ಗೂಡಪದ ತದ್ಭ
ವಂ ತತ್ಸಮಂಗಳೆಂದೆಂಬ ನಾಮಂಗಳನೋ
ರಂತೆ ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣ ಸನ್ಮಾರ್ಗ್ಗವಿಡಿದೂ ||೧೨೦||
ಕರ್ನಾಟಕ ಶಬ್ದಮಂಜರಿ ಸಮಾಪ್ತ ಮಂಗಳಾ ಮಹಾಶ್ರೀ ||

ವಿಷಯ : ಕನ್ನಡ ನಿಘಂಟು.

ವಿಶೇಷ : ಶಕಟರೇಫದ ಬಳಕೆ ಇದೆ. ಅಕ್ಷರಗಳು ದಪ್ಪವಾಗಿಯೂ ಸ್ಫುಟವಾಗಿಯೂ ವಿರಳವಾಗಿಯೂ ಇವೆ. ಈ ಕೃತಿಯ ಆರಂಭದ ಪತ್ರ ಇಲ್ಲ. ೧೩ನೆಯ ಪದ್ಯದಿಂದ ಮುಂದಕ್ಕೆ ಇದೆ. ೧೦೩, ೧೦೪, ೧೧೨, ೧೧೭ ರಿಂದ ೧೨೦ ಈ ಪತ್ರಗಳಿಲ್ಲ. ೧೦೭ ನೆಯ ಪತ್ರವಲ್ಲಿ ಅರ್ಧಭಾಗ ಇದೆ. ಇದೇ ಕಟ್ಟಿನಲ್ಲಿ ಶಬ್ದಾರ್ಥರತ್ನಾಕರ, ಪದ್ಯನಾನಾರ್ಥ, ಏಕಾಕ್ಷರ ನಿಘಂಟು, ನಾನಾರ್ಥ ರತ್ನಾಕರ(ಸಟೀಕಾ), ಧನಜಯನಿಘಂಟು (ಸಟೀಕಾ), ಭಾರತ ನಿಘಂಟು ಎಂಬ ಕೃತಿಗಳಿವೆ. ಕೊನೆಯಲ್ಲಿ ಈ ಕಟ್ಟಿಗೆ ಸಂಬಂಧಪಡದ ೧೦೪ ರಿಂದ ೧೧೦ ರ ವರೆಗಿನ ಕ್ರಮಾಂಕವುಳ್ಳ ಪತ್ರಗಳಲ್ಲಿ ಕೆಲವು ಪದಗಳಿಗೆ ಅರ್ಥವಿದೆ. ಇದೂ ಅಪೂರ್ಣ.

247

ಕೆ. ೩೭೦/೪	**ಕರ್ಣಾಟಕ ಶಬ್ದಮಂಜರಿ**	ವಾರ್ಧಕಷಟ್ಪದಿ
೭.೪" × ೨"	ವಿರಕ್ತತೋಂಟದಾರ್ಯ	೧೫೬೦
೧೪–೫೫ ಪತ್ರ	೬ ಪಂಕ್ತಿ	೧೩ ಅಕ್ಷರ

ಆದಿ : ಕರ್ನಾಟಶಬ್ದಮಂಜರಿ | ವಾರ್ದಿಕಷಟ್ಪದಿ ||
ಶ್ರೀಮದವಿರಳ ಸಕಲ ನಿಃಕಲ ಗುಣಾತೀತ
ನಾಮರೂಪಕ್ರಿಯಾರಹಿತ ಶ್ರುತಿತತಿವಿನುತ
ಕಾಮಿತ ಫಲಪ್ರದಾಯಕ ಸಕಲಲೋಕನಾಯಕ ನಿತ್ಯನಿರ್ವಾಯಿಕಾ
ರಾಮಣೀಯಕ ಯೋಗಿಜನಮನೋನಿಲಯ ಚಿ
ತ್ಕಾಮಿನೀಕಾಂತ ಕರುಣಿಸು ವಿಮಲಮತಿಯ ಮ
ತ್ಸ್ವಾಮಿವರ ಗುರು ನಿರಂಜನ ವೃಜನ ಮೇಘಪ್ರಭಂಜನ ಮದನಭಂಜನಾ
|| ೧ ||

ವರಪಟ್ಟಸ್ಥಲಾಚಾರ ಸಂಸಿದ್ಧನಮಲ ಸು
ಸ್ಥಿರ ಶೈವಪಂಚಾಕ್ಷರೀ ಮಂತ್ರಹೃದೆಯು
ನುರುತರಸತ್ಕ್ರಿಯಾಗ್ನ್ಯಾನ ಸಂಪಂನನಖಿಳ ಶಾಸ್ತ್ರಾರ್ಥಕೋವಿದ ಪಾವನಾ
ಚರಿತ ಘನ ಗುರುನಿರಂಜನಲಿಂಗ ಚರಣ
ಸರಸಿರುಹ ಸೌರಭಮಧುಕರಂ ತೋಂಟದಾರ್ಯ್ಯ ಬಿ
ತ್ತರಿಸಿದನೆನಲ್ಕೆ ಮೆಚ್ಚದರೊಳರೆ ಕರ್ನಾಟಶಬ್ದಮಂಜರಿಯನಿದನೂ ॥ ೨ ॥
ಎಳದೇರ ಗೊರವನ್ಯೆಮೊಗ ಕಂದುಗೊರಲ × × × × ಪಂ
ದಲೆವಚ್ಚಗಂಧರಗಿಯ ನೀ ಸರಂದೇಸಿಗಂ ॥ ೩ ॥

ಅಂತ್ಯ : ಸಂತಸದೊಳಚ್ಚಗಂನಡಗೂಡಪದ ತದ್ಭ
ವಂ ತತ್ಸಮಂಗಳೆಂದೆಂಬ ನಾಮಗಳನೋ
ರಂತೆ ವಿರಚಿಸಿದೆನೆಲ್ಲಾ ಕವೀಶ್ವರರುದಾಹರಣ ಸನ್ಮಾರ್ಗವಿಡಿದೂ
॥ ೧೧೧ ॥

ಕರ್ಣಾಟಕ ಶಬ್ದಮಂಜರೀ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ೪೦ನೆಯ ಪತ್ರದಲ್ಲಿ ಒಂದು ಕಡೆ ಮಾತ್ರ ಬರವಣಿಗೆ ಇದೆ. ೩೩ನೆಯ ಪತ್ರ ಮುಂದಿನ ಪತ್ರಗಳಿಗೆ ಕ್ರಮಾಂಕ ಇಲ್ಲ. ೫೧ ನೆಯ ಪತ್ರದ ಒಂದು ಕಡೆ ಮುರಿದಿದೆ. ಇದರೊಂದಿಗೆ ಶಬ್ದರತ್ನಾಕರ, ಪದ್ಯನಾನಾರ್ಥ, ಅಮರಸಿಂಹ (ಸಂ. ಜೈ) ಕರ್ಣಾಟಕ ಶಬ್ದಮಂಜರೀ ಎಂಬ ಗ್ರಂಥಗಳೂ ಇವೆ.

248

ಕೆ. ಎ. ೨೮	**ಕರ್ಣಾಟಕ ಶಬ್ದಮಂಜರಿ**	ವಾರ್ಧಕಷಟ್ಪದಿ
೧೧.೨" × ೮"	ವಿರಕ್ತತೋಂಟದಾರ್ಯ	೧೫೬೦
೧–೬ ಪತ್ರ	೨೦ ಪಂಕ್ತಿ	೨೫ ಅಕ್ಷರ

ಆದಿ : ಶ್ರೀಮದವಿರಳ ಸಕಳನಿಖಿಲಗುಣಾತೀತಾ
ನಾಮರೂಪ ಕ್ರಿಯಾರಹಿತ ಶ್ರುತಿತತಿವಿನುತ
ಕಾಮಿತಫಲಪ್ರದಾಯಕ ಸಕಲಲೋಕನಾಯಕ ನಿತ್ಯನಿರ್ಮಾಯಕಾ

ರಾಮಣೀಯಕ ಯೋಗಿಜನ ಮನೋನಿಲಯ ಚಿ
ತ್ಕಾಮಿನೀಕಾಂತ ಕರುಣಿಸುವ ವಿಮಲಮತಿಯ ಮ
ಸ್ವಾಮಿ ವರಗುರುನಿರಂಜನ ಮದನಭಂಜನ ॥ ೧ ॥

ಅಂತ್ಯ : ತಲ್ಲರಿಂ ತಳವೆಳಗು ಬಕ್ಕುಡಿಬೆಗಳುಪ್ಪುರ್
ಮಲ್ಲರೆ ಬಿಗುರ್ಬೆಬ್ಬಿಗಳಂ ತಳಮುಳಮೆನಲ್ಕೆ
ಸೊಲ್ಲಿಪುದು ಬೆರಗಪ್ಪಭಾಳದೊಳು ಜಂಗಳಬಳಲುಸೊರುಸಳಿಲ್ದುದಕ್ಕುಂ
ತೆಲ್ಲೈಸಿತೆಂದು ಮುಂದೈಸಿತಕ್ಕೆ ನಾಮುವದು
ಕೆಲ್ಲೆಯೆನೆ ಸಿಗರು ಪೆಂಕುಳಿಯನೆ ಮುರುಳನಂ
ಚೆಲ್ಲೆಯೆನೆ ನಿಡಿದುದು ವಿಷ್ಟೂರ ಪೊಲ್ಲೆಯಮೆನಲ್ಕೆ ನಿಷ್ಟುರಕೆ ನಾಮು-
ಮಕ್ಕುಂ ॥ ೫೦ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ೩೧ ನೆಯ ಪದ್ಯದ ಉತ್ತರಾರ್ಧದಿಂದ ೩೪ ನೆಯ ಪದ್ಯದವರೆಗೆ ಗ್ರಂಥ ಲೋಪ.

249

ಕೆ. ಬಿ. ೨೯೦/೮	**ಕರ್ಣಾಟಕ ಶಬ್ದಮಂಜರಿ**	ವಾರ್ಧಕಷಟ್ಪದಿ
೭.೬" × ೬.೩"	ವಿರಕ್ತತೋಂಟದಾರ್ಯ	೧೫೬೦
೧೪೫–೧೭೦ ಪತ್ರ	೧೭ ಪಂಕ್ತಿ	೧೮ ಅಕ್ಷರ

ಆದಿ : ಶಬ್ದಮಂಜರಿ ॥ ವಾರ್ಧಿಕ ಷಟ್ಪದಿ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ಶ್ರೀಮದವಿರಳ ಸಕಲ ನಿಃಕಲ ಗುಣಾತೀತ
ನಾಮರೂಪಕ್ರಿಯಾರಹಿತ ಶೃತಿತತಿ ವಿನುತಾ
ಕಾಮಿತ ಫಲಪ್ರದಾಯಕ ಸಕಲ ಲೋಕನಾಯಕ ನಿತ್ಯ ನಿರ್ಮಾಯಕ
ರಾಮಣೀಯಕ ಯೋಗಿಜನ ಮನೋನಿಲಯ ಚಿ
ತ್ಕಾಮಿನೀಕಾಂತ ಕುರುಣಿಸು ವಿಮಲಮತಿಯ
ತ್ಯಾಮಿ ವರಗುರು ನಿರಂಜನ ವೃಜಿನ ಮೇಘ ಪ್ರಭಂಜನ ಮದನಭಂಜನಾ ॥ ೧ ॥

× × × ×

ತೋಂಟದಾರ್ಯ ಬಿತ್ತರಿಶಿದನೆನಲ್ಕೆ ಮೆಚ್ಚದರೊಳರೆ ಕರ್ಣಾಟಕಶಬ್ದ ಮಂಜರಿಯನಿದನೂ ॥ ೨ ॥

ಯೆಳೆದೇರ ಗೊರವನ್ನೈವೊಗ ಕಂಮುಗೊರಲ ಮುಪ್ಪೊಳಲುರಿಕ
ನೆಲರುಣುವೆದೆಯ ಬಾನ್ನವಿರಗೊಂದೆ

ಅಂತ್ಯ : ಸಂತಸದೊಳಚ್ಚಗಂಡಗೂಡಿ ಪದ ತದ್ಭ
ವಂ ತತ್ಸಮಾನಂಗಳೆಂದೆಂಬ ನಾಮಗಳನೋ
ರಂತೆ ವಿರಚಿಶಿದೆನೆಲ್ಲಾ ಕವೀಶ್ವರರುದಾಹರಣ ಸಂನ್ಮಾರ್ಗವಿಡಿದೂ ||೧೨೦||

ಇಂತು ಕರ್ನಾಟಕ ಶಬ್ದಮಂಜರಿ ಸಮಾಪ್ತ ಮಂಗಳಮಹಾಶ್ರೀ || ಯಿಾ ಆಂಗಿರಸ ಸಂ| ರದ ಫಾಲ್ಗುಣ ಬ ೧೨ ಬುಧವಾರದಲ್ಲೂ ಸಂಪೂರ್ಣ| ಮಂಗಳ ಮಹಾಶ್ರೀ. ||

ವಿಷಯ : ಕನ್ನಡ ನಿಘಂಟು

ವಿಶೇಷ : ಇದರೊಂದಿಗೆ ಶಬ್ದರತ್ನಾಕರ, ಪದ್ಯನಾನಾರ್ಥ, ಏಕಾಕ್ಷರ ನಿಘಂಟು, ಕರ್ಣಾಟಕಧಾತುಗಳು, ಭಾರತ ನಿಘಂಟು, ಧನಂಜಯ ನಿಘಂಟು, ಕನ್ನಡ ಶಬ್ದಮಂಜರೀ ಟೀಕುಸುಧಾ, ವಿಶೇಷ ವಿಷಯಗಳು ಎಂಬ ಗ್ರಂಥಗಳೂ ಇವೆ. ಈ ವಿಶೇಷ ವಿಷಯಗಳಲ್ಲಿ ನವಖಂಡಗಳು ಮೊದಲಾದುವುಗಳ ವಿವರವಿದೆ.

250

ಕೆ.ಬಿ. ೪೨೯/೭	**ಕರ್ಣಾಟಕ ಶಬ್ದಮಂಜರಿ (ಸಟೀಕು)**	ವಾರ್ಧಕಷಟ್ಪದಿ
೭.೭" × ೬"	ವಿರಕ್ತತೋಂಟದಾರ್ಯ	೧೫೬೦
೧–೮೪ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ : ಸಟೀಕು ಸಹಿತವಾಗಿ ಕರ್ನಾಟಕ ಶಬ್ದಮಂಜರಿ ಪ್ರಾರಂಭ
ಶ್ರೀಮದವಿರಳ ಸಕಲ ನಿಷ್ಕಳ ಗುಣಾತೀತ
ನಾಮರೂಪಾ ಕ್ರಿಯಾರಹಿತ ಶ್ರುತಿತತಿವಿನುತ
ಕಾಮಿತ ಫಲಪ್ರದಾಯಕ ಸಕಲ ಲೋಕನಾಯಕ ನಿತ್ಯನಿರ್ಮಾಯಕಾ
ರಾಮಣೀಯಕ ಯೋಗಿಜನ ಮನೋನಿಲಯ ಚಿ
ತ್ಕಾಮಿನೀಕಾಂತ ಕರುಣಿಸು ವಿಮಲಮತಿಯ ಮ
ತ್ಸ್ವಾಮಿ ಶ್ರೀಗುರು ನಿರಂಜನ ವೃಜಿನ ಮೇಘ ಪ್ರಭಂಜನ ಮದನ
ಭಂಜನ || ೧ ||

ವರಪಟ್ಸ್ಥಲಾಚಾರಸಂಸಿದ್ಧ × × ×
ಮೆಚ್ಚದರೊಳರೆ ಕರ್ನಾಟ ಶಬ್ದಮಂಜರಿಯನಿದನೂ ॥ ೨ ॥
× × × ಟೀಕು॥ ಯಳದೇರ | ಭುರಥನು | ಭೂಮಿತತ್ವಾಕರ್ಪಣಾಂಗ
ಳೊಳೆಳೆಯುಂದು |

ಅಂತ್ಯ : ಬಂತು ನೆರೆ ಕರ್ನಾಟಭಾಷೆಯೊಳಮಿಸಂದ
ನಂತ ನಾಮಂಗಳೊಳೆಯ ಫಲವು ತೆವಿ
ನಂತಗು ಮಹಾಶೇಷಗೂ ತೀಳಿಯಲಳವಲ್ಲಾವರೊಳು ಫಲಕೆಲಶಬ್ದಮಯಿ
ಸಂತಸದೊಳಚ್ಚಗಂನಡ ಗೂಢಪದ ತದ್ಭ
ವಂ ತತ್ಸಮಂಗಳೆಂದೆಂಬರಂತ್ರೆ ವಿರಚಿಸಿದೆನೆಲ್ಲಾ
ಕವೀಶ್ವರರುದಾಹರಣ ಸಂನ್ಮಾರ್ಗ ಹಿಡಿದೂ ॥ ೧೨೦ ॥

ಅಂತೂ ಕರ್ನಾಟಕ ಶಬ್ದಮಂಜರೀ ವಾರ್ಥಿಕ ಷಟ್ಪದಿ ಟೀಕು ಸಹಿತ ಶ್ರೀನಿವಾಸನು ಬರದದ್ದು. ಅಂತ್ತು ಕರ್ನಾಟಕ ಶಬ್ದನುಂಜರಿ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಕನ್ನಡ ನಿಘಂಟು.

ವಿಶೇಷ : ೪೭ನೆಯ ಪತ್ರದನಂತರ ಮತ್ತು ೫೩ನೆಯ ಪತ್ರದನಂತರ ಕ್ರಮಸಂಖ್ಯೆಗೆ ಸೇರದ ಖಾಲಿ ಪತ್ರಗಳಿವೆ. ಗ್ರಂಥ ಮುಗಿದ ಮೇಲೂ ಕೆಲವು ಖಾಲೀ ಪತ್ರಗಳಿವೆ. ಇದರೊಂದಿಗೆ ಭಾರತ ನಿಘಂಟು, ಶಬ್ದರತ್ನಾಕರ, ನಾನಾರ್ಥಕಂದ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ, ಕನ್ನಡ ಧಾತುಪಾಠ, ಕರ್ನಾಟಕ ಧಾತುನಿರ್ಣಯ ಎಂಬ ಗ್ರಂಥಗಳೂ ಇವೆ.

251

ಕೆ. ಎ. ೨೫೩/೨	**ಕರ್ಣಾಟಕ ಶಬ್ದಸಾರ**	ಗದ್ಯ
೮"×೧೨.೯"	?	?
೧–೧೭ ಪತ್ರ	೧೯ ಪಂಕ್ತಿ	೧೫ ಅಕ್ಷರ

ಆದಿ : ಕಣ್ನಾ೯ಟಕ ಶಬ್ದಸಾರ—

ಮೆಣ್ಮೆಯ್ಯಂ। ಗೊಂದೆ ವಳಯಿಗೆಯಂ | ಯೆಳೆದೇರಂ | ಪಿರಿತಿನಿಯಾಣ್ಮಂ।
ಸೊಡಬಲಿವನೆಯಂ | ಯೆಲರುಣಿವೆದೆಯಂ। ಅರುಮೊಗನ್ನೆಯ್ಯಂ |
ಪೊಂಬೆಟ್ಟವಿಲ್ಲಂ | ಯಿಂಗಳಗಂಣಂ। ಈಸರಂ | ಪಂದಲೆವೆಚ್ಚಂ |

ಬಾಂಬೊಚ್ಚದಲೆಯುಂ | ಸಬ್ಬಂ । ಬಗ್ಗದೊವಲುಡಿಯುಂ । ಬಾನವಿರಂ।
ದಪ್ಪಕವಗೆಯುಂ| ಅವುದ್ಬರ್ವೆಂಣೋಪಂ| ಕಂದುಗೊರಲಂ । ಮಾದೇವಂ ।
ಬಾಂಬೊಳಲುರಿಕಂ| ದೇಸಿಗಂ| ಗಂಧರಗಿವಿಯುಂ| ಬೆಳ್ಳಡಿ । ಮಿಗಗಯ್ಯಂ |
ಕಂಣಡಿಗಂ । ಕಿಸುಳಿ । ಪೆಣ್ದೊಡೆಯುಂ । ಯಿಾಸಂ ಗೊರವಂ । ಚಳ
ವೆಟ್ಟಳಿಯುಂ । ಸಸಿದಲೆಯುಂ । ಗನಹಂ | ಆಯ್ಮೊಗಂ | ಈ ೩೩ ಈಶ್ವರಂಗೆ
ಪೆಸರು॥ ಮುಂವೊನೆಗೆಯ್ದುದೆಂದು ತಿಸುಳಿವೆಂದು ಸಿವಂ ಪಿಡಿದ ತ್ರಿಶೂಲ ॥

ಅಂತ್ಯ: ಬಂಬಲ್ | ತರುಗಲ್ | ವಂಗಡಂ । ಗಡಣಂ | ವೊಗ್ಗರಂ | ಬಿಂದಂ ।
ವೊಬ್ಬುಳಿ । ಜಂಗುಳಿ । ದೊಂದುಳಿ | ಸಂದಣಿ | ವೊಗ್ಗರ್ | ಪಸರಂ |
ಇಟ್ಟಳಂ । ಲಾವಣಿ । ವೋಳಿ । ಗೊಂಚಿ | ವೊಟ್ಟಲ್ । ವೊಟ್ಟಜೆ ।
ತಿಂತಿಣಿ | ಹೊರಳಿ । ಕದಲೆ | ಸಂತೆ । ಜಾಳಿಗೆ । ಕಿಕ್ಕಿದಂ । ನೆರವಿ |
ಬಳಗಂ । ವೊತ್ತಂ । ಸಣಿ । ತಂಡಂ । ಕುಂಡಿ । ಪಿಂಡಿ । ತೆರಳ್ಕೆ ।
ಹಂತಿ | ಸಾಲ್ । ವೊಕ್ಕಳಂ । ತೋವಂ । ತೇವಲ್ । ಗುಂಪಿ । ಯಿಾ
ಳಂ ಸಮೂಹಂ ||

ವಿಷಯ : ಕನ್ನಡ ನಿಘಂಟು.

ವಿಶೇಷ : ಅಸಮಗ್ರ ಪ್ರತಿ. ಪತ್ರದ ಒಂದೇ ಕಡೆ ಬರೆದಿದೆ. ಒಂದೆರಡೆಡೆಗಳಲ್ಲಿ ಶಕಟರೇಫದ ಬಳಕೆ ಇದೆ. ಇದೇ ಪುಸ್ತಕದಲ್ಲಿ ಶಬ್ದಾಗಮ, ರನ್ನ ನಿಘಂಟು, ಕರ್ಣಾಟಕ ಸಂಜೀವಿನಿ, ಭಾರತ ನಿಘಂಟು, ಕವಿ ಕಂಠಹಾರ, ನಾನಾರ್ಥ ರತ್ನಾಕರ ಎಂಬ ಕೃತಿಗಳಿವೆ.

252

ಕೆ.ಎ. ೨೫೩/೪	ಕರ್ಣಾಟಕ ಸಂಜೀವಿನಿ	ವಾರ್ಧಕಷಟ್ಪದಿ
೮" × ೧೨.೯"	ಶೃಂಗಾರಕವಿ	?
೧_೧೪ ಪತ್ರ	೨೦ ಪಂಕ್ತಿ	೧೬ ಅಕ್ಷರ

ಆದಿ : ಕರ್ಣಾಟಕ ಸಂಜೀವಿನಿ.

ಪಾಲ್ಗಮಿಗೆ ರಳ ಕುಳದ ಶಬ್ದಂಗಳೊಳಗೈದು
ಸೂಳಿಗೆಗವವರ್ಥ್ಥವಂ ಷಟ್ಪದ್ಯದಿಂದೆ ರಸ
ವಾಳೆರೆಯ ಬೊಂಮರಸನಾಯಕ ಸುತನೆ ನಾಂ ಶೃಂಗಾರಕವಿ ವಿರಚಿಸಿದೆಂ

ಪದ ॥ ಷಟ್ಪದಿ ॥ ಶ್ರೀ ದಿವಿಜವಲ್ಲಭ ಕಿರೀಟಚುಂಬಿತ ದಿವ್ಯ
ಪಾದಕಮಲಂ ವಿಶ್ವವಿಸ್ತಾರೀಕೃತ ವಚಃ
ಶ್ರೀಧವವಿರಾಜಿತ ಶ್ರೀಮುಖಂ ರಾಗದಿ ಪದಿನೆಂಟು ದೋಷರಹಿತಂ
ಪೋದ ವರ್ತ್ತಿಪ ಬರ್ಪ್ಪ ಕಾಲದನುಭವಮುಖ್ಯ
ವಾದ ಸಕಲಾರ್ತ್ಥಮಂ ಕರತಳಸ್ಪಟಿಕದಂ
ತಾದರಿಪ ಮೋಕ್ಷಲಕ್ಷ್ಮೀಕಾಂತನೆನಗೀಗೆ ರತ್ನತ್ರಯಾಭರಣಂ ॥ ೧ ॥

ಅಂತ್ಯ : ಈವಿಧಾನಮನಱಿದು ರಬಿಕುಳ ಭೇದಮಂ
ತೀವಿ ಬಣ್ಣಿಸಲಗಣಿತಂ ಪೂರ್ವಕವಿಮತದ
ಭಾವಂ ತಕ್ಕಂತೆಂದುದ್ದೆನಿವ ಅಂತೆ ಮುಂದರಿಗೆ ಬುಧರಿಂಗುಳಿದರಂ ॥

ಆವನುಂ ಕರ್ಣದೊಳೊರೆವುದಿದು ಲಕ್ಷಣಕೆ
ಜೀವನಂ ಸದ್ಗುಣದಿನಾಮ ಕರ್ಣಾಟಸಂ
ಜೀವನ ಶೃಂಗಾರಕವಿ ವಿರಚಿತಂ ಭದ್ರಂ ಶುಭಂ ಮಂಗಳ ॥ ೩೨ ॥
॥ ಸಂಪೂರ್ಣಂ ॥

ವಿಷಯ : ಕನ್ನಡ ನಿಘಂಟು.

ವಿಶೇಷ: ಗ್ರಂಥಾರಂಭಕ್ಕೆ "ಮೊದಲು ಕರ್ಣಾಟಕಸಂಜೀವಿನಿ. ಇದು ಕನ್ನಡ ನಿಘಂಟು ಕವಿ ಹೆಸರು ಶೃಂಗಾರಕವಿ. ಈ ಕವಿಯು ತಂನ ಹೆಸರನ್ನು ೧ ನೇ ೩೦ ನೇ ೩೨ ನೇ ಪದ್ಯಗಳಲ್ಲಿ ಹೇಳಿಧಾನೆ. ಮತ್ತು ೧ ನೇ ಪದ್ಯದಲ್ಲಿ ತಾನು ಬೊಂಮರಸನಾಯಕನ ಮಗನೆಂದು ಹೇಳಿ ಧಾನೆ. (ಬೊಂಮರಸನೆಂಬುವನು ಕನ್ನಡ ಚತುರಾಸ್ಯನಿಘಂಟನ್ನು ಮಾಡಿಧಾನೆ) ಈ ಗ್ರಂಥವು ಷಟ್ಪದಿರೂಪವಾಗಿದೆ "ಎಂದಿದೆ.

ಈ ನಿಘಂಟಿನಲ್ಲಿ ಱಬಿ, ಕುಳ, ಕ್ಷಳ, ಗಳು ಬರುವ ಪದಗಳನ್ನು ಅವುಗಳಿಗೆ ಅರ್ಥವನ್ನು ಹೇಳಿ ಪ್ರಾಸಾಕ್ಷರನಿಯಮಕ್ಕೆ ಮೇಲೆ ಹೇಳಿದ ಅಕ್ಷರಗಳನ್ನು ಉಪಯೋಗಿಸಿದರೆ ಆದರ ಫಲವನ್ನು ಸಹ ಹೇಳಿದೆ " ಎಂದಿದೆ. ಇದೇ ಪುಸ್ತಕದಲ್ಲಿ ಶಬ್ದಾಗಮ, ಕರ್ಣಾಟಕಶಬ್ದಸಾರ, ರನ್ನನಿಘಂಟು, ಭಾರತನಿಘಂಟು, ಕವಿಕಂಠಹಾರ, ನಾನಾರ್ಥರತ್ನಾಕರ ಎಂಬ ಕೃತಿಗಳಿವೆ. ಪತ್ರಗಳ ಒಂದೇ ಕಡೆ ಬರೆದಿದೆ.

253

ಕೆ. ಬಿ. ೧೩೩	**ಕರ್ಣಾರ್ಜುನರ ಕಾಳಗ**	ಯಕ್ಷಗಾನ
೭.೭" × ೬.೩"	?	?
೧–೩೮ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಕರ್ನಾರ್ಜುನರಕಾಳಗ ॥ × × ×

ವಾರ್ಧಿಕ ॥ ಧರಣಿಪತಿ ಲಾಲಿಸೈ ಮುಂದಣ ಪ್ರಸಂಗವಂ
ಗುರುಕರುಣಾಗ್ರದೊಳಳಿಯಲಾಗಿ ನಿಮ್ಮವರೆಲ್ಲ
ರಿರುಳಿನೊಡ್ಡೋಲಗಕೆ ನಡೆತಂದು ಸಂತಾಪದಿಂ ಬಳಲುತಿರ್ದು
ಬಳಿಕ
ಗುರುಜ ಕೃಪ ಮುಖ್ಯರಭಿಮತದಿಂದ ನಿಶ್ಚೈಸಿ
ತರಣಿಯಕುಮಾರಂಗೆ ಸೇನಾಧಿಪತ್ಯಮಂ
ವರ ವಿವಿಧ ವೈದಿಕ ಲೌಕಿಕವಿಧಾನದಿಂ ರಚಿಸಿದಂ ಕುರುರಾಯನು

ಅಂತ್ಯ : ಈ ಮಹಾಕೃತಿ ರಚಿಸುವರೆ ತಾ
ಕ್ಷೇಮನಗರಾಧಿಪತಿ ವೇಂಕಟ
ಧಾಮನೆನ್ನಯ ಹೃದಯಕಮಲದಿ ವಾಸವಾಗಿರ್ದು
ಪ್ರೇಮದಿಂದಲೆ ರಚಿಸಲಾತನ
ನಾಮಸಂಕೀರ್ತನವನೆಂದೇ
ಭೂಮಿಯೊಳು ಪಠಿಸಿದರಿಗಿಷ್ಟಾರ್ಥಸಿದ್ಧಿಸುವುದು ॥ ೪೨೧ ॥

ಅಂತು ಸಂಧಿ ಒಂದಕ್ಕೆ ಪದಗಳು ನಾನೂರಹನ್ನೆರಡಕ್ಕೆ ಕರ್ನಾರ್ಜುನರ ಕಾಳಗಂ ಸಮಾಪ್ತಿಯಾದುದು ॥

ವಿಷಯ : ಕರ್ಣಾರ್ಜುನರ ಯುದ್ಧ.

ವಿಶೇಷ : ೨ನೆಯ ಪತ್ರದ ಹಿಂಭಾಗದಲ್ಲಿ ಸ್ವಲ್ಪ ಗ್ರಂಥಲೋಪವಿದೆ.

254

ಕೆ. ಬಿ. ೩೫೪/೩	ಕರ್ಣಾರ್ಜುನರ ಕಾಳಗ	ಯಕ್ಷಗಾನ
೭.೧" × ೫.೮"	?	?
೧–೩೪ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಭಾರತದೊಳಗಣ ಕರ್ನಾ ಅರ್ಜುನರ ಕಾಳಗಾ ಬರೆಯುವದಕ್ಕೆ ಸುಭಮಸ್ತು ॥

ವೃತ್ತಾ ॥ ಶ್ರೀವಾಣಿಯು ರಮಣಾರ್ಚಿತಪದಂ ಶಿವಸಖಂ ಸದ್ಭಕ್ತ ಸಂರಕ್ಷಕಂ
ಗೋವಿಂದಕರುಣಾರ್ನವಂ ಶುಭಕರಂ ದೈತ್ಯಾಳಿ ಸಂಹಾರಕಂ
ಶ್ರೀವತ್ಸಾಂಕಮನಂತಹಂಸರುಚಿರಂ ಶೌರೀಂ ಸರೋಜಾಂಬಕಂ
ದೇವೇಂದ್ರಾದಿ ಸುರೌಘ ಸೇವ್ಯಚರಣಂ ವಂದೇ
ಜಗನ್ನಾಯಕಂ ॥ ೧ ॥

ದ್ವಿಪದೆ ॥ ಪರಮ ಸದ್ಗುರುವಿನಡಿಗೆರಗಿ ತೋಷದಲಿ
ಸ್ಮರಿಸಿ ಕವಿಜನರ ಭಾರಥ ಪುರಾಣದಲೀ ॥ ೧ ॥
ಧುರದಿ ವೃಷಸೇನ ಧುಶಶ್ಯಾನಾಧ್ಯರನ್ನೂ
ಮರುತಜಾರ್ಜುನರು ಸಂಹರಿಸಿದಂದವನು ॥ ೨ ॥
ಕರ್ನಾಟಕಾವ್ಯದಿಂದೆಕ್ಷಗಾನದಲೀ
ವರ್ನಿಸುವೆ ಶ್ರೀವೆಂಕಟೇಶನೊಲುವೆಯಲೀ ॥ ೩ ॥

ಅಂತ್ಯ: ವಾರ್ಧಿಕ್ಯಾ॥ ಪರಿಪೂರ್ನದಯಾದಿ ಗುರು ಕರುಣಿಸಿದ ಸುಜ್ಞಾನ
ಕರವ ವರ್ನಿಸಿದೆನೀ ಕಥಾಕೌತುಕವ ತಿಳಿದಂತೆ ಗಜ
ಪುರದಿ ನೆಲಸಿರುವ ಶ್ರೀ ಮಹಾಗಣೇಶನೊಲುವೆಯಲೀ
ಧರೆಯೊಳುದ್ಭವಿಸಿರುವ ಕವಿಕುಶಾಲಾಧಿಗಳ ಸಂಘಣಿಯು
ನಿರುತ ಬಲ್ಲಂತ್ತೆ ವೆರಸುವದು ಕರ್ನಾರ್ಜು
ನರ ಕಾಳಗದ ವಿಸ್ತಾರವಂ ಶ್ರೀ ವಿರುಪಾಕ್ಷನ ಕರುಣ
ಕಟಾಕ್ಷದಲಿ ॥

ಶ್ರೀ ವೆಂಕಟೇಶಾಯಂ ನಮಃ ಕರ್ನಾಅರ್ಜುನರ ಕಾಳಗ ಸಂಪೂರ್ನಾ.
ಅಂತು ಸಂಧಿ ೧ಕಂ ಪದನು ೩೫೧ ಕಾಂ ಮಂಗಳಮಹಾ ಶ್ರೀ ॥

ವಿಷಯ : ಕರ್ಣಾರ್ಜುನರ ಯುದ್ಧ.

ವಿಶೇಷ : ಪತ್ರಗಳಿಗೆ ಕ್ರಮಾಂಕವನ್ನು ಹಾಕಿಲ್ಲ. ಇದೇ ಪುಸ್ತಕದಲ್ಲಿ ಚಿತ್ರಸೇನನ ಕಾಳಗ, ವಿರಾಟಪರ್ವ, ಧ್ರುವಚರಿತ್ರೆ, ಐರಾವತ ಎಂಬ ಈ ನಾಲ್ಕು ಕೃತಿಗಳೂ ಇವೆ.

255

ಕೆ. ಎ. ೨೦೯/೨ **ಕರ್ಮಪ್ರಕೃತಿ** ಗದ್ಯ
೧೨.೮″ × ೮″ ? ?
೪೬–೫೪ ಪತ್ರ ೪೦ ಪಂಕ್ತಿ ೨೬ ಅಕ್ಷರ

ಆದಿ: ಕರ್ಮ್ಮ ಪ್ರಕೃತಿ ||
ಶ್ರೀ ವರ್ಧಮಾನಮಾನಮ್ಯ ಸ್ಪೃಷ್ಟಾನಂತ ಚತುಷ್ಟಯಂ |
ವಿಶುದ್ಧಜ್ಞಾನ ಸಿಧ್ಯರ್ತ್ಥಂ ಕರ್ಮಣಾಂ ಪ್ರಕೃತಿಂಬ್ರುವೇ ||
ಕಿಚ್ಚಿಂದಂ ಬೆಂದೆರಡಾಗವ । ನೀರಿಂದಂ ನೆನೆದೆರಡಾಗದ । ಕೆಸರಿಂದಂ ಕೊಳೆದೆರಡಾಗದ ವಜ್ರಾದಿಗಳಿಂದೊಡೆದೆರಡಾಗದ ಕಡುಗಿರಿದಪ್ಪ ಪುದ್ಗಲಂಗಳಂ ಪರಮಾಣುವೆಂಬುದು.

ಅಂತ್ಯ: ಅಮೂರ್ತ್ತನುಂ | ಜ್ಞಾನ ಸ್ವರೂಪನುಂ | ಸುಖದ ಕಣಿಯುಮಪ್ಪ ಸಿದ್ಧ ಪರಮೇಷ್ಠಿಯಕ್ಕುಂ | ಶ್ರೀ ವೀತರಾಗಾಯ ನಮಃ | ಕರ್ಮ್ಮಪ್ರಕೃತಿ ಸಂಪೂರ್ಣಮಾಸೀತ್ | ಚಿರಂಜೀಯಾತ್ ಭದ್ರಂ ಭೂಯಾತ್ ವರ್ಧತಾಂ ಜಿನಶಾಸನಂ || ಶಾಲಿವಾಹನ ಶಕಾಬ್ದಾಃ ೧೭೯೬ || ಯುವ ಸಂ ಭಾದ್ರಪದ ಶು ೧೦ ಶುಕ್ರವಾರ ಪದ್ಮರಾಜ ಪಂಡಿತೇನ ಲಿಖಿತಂ ||

ವಿಷಯ: ಜೈನಸಿದ್ಧಾಂತದ ಕರ್ಮಪ್ರಕೃತಿಗಳ ವರ್ಣನೆ.

ವಿಶೇಷ: ಶಿಥಿಲಪ್ರತಿ. ಮೋಡಿ ಬರಹ. ಪತ್ರದ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಇದೇ ಪುಸ್ತಕದಲ್ಲಿ ಲೋಕಸ್ವರೂಪ, ಪರಮಾಗಮಸಾರ, ರತ್ನಕರಂಡಕಗಳೆಂಬ ಇತರ ಗ್ರಂಥಗಳಿವೆ.

8.23

256.

ಕೆ. ಬಿ. ೨೮೯/೩ **ಕಲ್ಯಾಣಪಟ್ಟಣದ ಮಹಾತ್ಮ್ಯೆ** ಗದ್ಯ
೬.೧″×೩.೮″ ? ?
೬೨–೬೪ ಪತ್ರ ೧೫ ಪಂಕ್ತಿ ೧೬ ಅಕ್ಷರ

ಆದಿ: ಶ್ರೀ ಕಲ್ಯಾಣ ಪಟ್ಟಣದ ಮಹಾತ್ಮ್ಯವೆ || ಸ್ವಸ್ತಿ || ಶ್ರೀ || ಶ್ರೀ ಸಮಸ್ತ ಪ್ರಸ್ಯಸ್ಥಸಹಿತ ಶ್ರೀ ನಂದಿನಾಥದೇವರು । ಶ್ರೀ ಭೃಂಗಿನಾಥದೇವರು । ಶ್ರೀ ವೀರಭದ್ರದೇವರು । ಮುಖ್ಯವಾದ ಶ್ರೀ ಕಲ್ಯಾಣದ ಮಹಾತ್ಮೆಯಂತೆಂದರೆ ವಿಸ್ತರಿಸಿ ಪೇಳುವೆನು ಯಲ್ಲಾ ಗಣಂಗಳು ಕೇಳಿ । ಕೃತಾರ್ಥರಾಗಿರೈಯ್ಯ ।

ಅಂತ್ಯ: ಚಂನ್ನಬಸವೇಶ್ವರದೇವರು ಲಕ್ಷದ ಮೇಲೆ ತೊಂಬತ್ತಾರುಸಾವಿರ ಗಣಂಗಳು ಯೇಳುನೂರೆಪ್ಪತ್ತು ಅಮರಗಣಂಗಳು ಅರುವತ್ತುಮೂರು ಪುರಾತನರು ಶಿವಶರಣರು ರುದ್ರಮುನಿ ಶಿದ್ಧರಾಮ್ಮೈಯನವರ ಕೂಡೆ ಕಲಿಯುಗದ ಮಹತ್ಮೆಯನು ಅಪ್ಪಣೆಕೊಡಿಸುತ್ತ ಯಿದ್ದರೂ ॥ ಶ್ರೀ ಬಸವನೆ ಗತಿಯೆಂದು ಬೇಡಿಕೊಳ್ಳುತ್ತೇನೆ ॥ ಶ್ರೀ ॥

ವಿಷಯ: ಬಸವಕಲ್ಯಾಣದ ಮಹಾತ್ಮ್ಯೆ.

ವಿಶೇಷ: ಇದೇ ಪುಸ್ತಕದಲ್ಲಿ ಗಣಸಹಸ್ರನಾಮ, ಬಸವಲಿಂಗ ನಾಮಾಷ್ಟೋತ್ತರ, ಹಾಡುಗಳು ಇವೆ. ಬಳಿಕ ೬೪ನೆಯ ಪತ್ರದಿಂದ ೬೭ನೆಯ ಪತ್ರದವರೆಗೆ ಬಸವಣ್ಣನವರಿಗೆ ಸಂಬಂಧಪಟ್ಟ ಹಾಡುಗಳಿದ್ದು ಅನಂತರ ನುಲಿಯ ಚಂದಯ್ಯನ ಕಥೆ ಎಂಬ ಕೃತಿ ಇದೆ.

257

ಕೆ. ೩೬/೩	ಕಲ್ಯಾಣೇಶ್ವರ	ಪರಿವರ್ಧಿನೀಷಟ್ಪದಿ
೧೪.೭" × ೨.೩"	ಗುರುಬಸವೇಶ	೧೪೩೦
೪೭–೫೧ ಪತ್ರ	೧೩ ಪಂಕ್ತಿ	[illegible] ಅಕ್ಷರ

ಆದಿ: ಶ್ರೀ ಗುರುಬಸವಲಿಂಗಾಯ ನಮಃ ॥ ರಾಗ ಶಾಂತಮಲಹರಿ ॥ ಕಲ್ಯಾಣೇಶ್ವರ ಪಲ್ಲವ ॥ ಶ್ರೀ ಕಲ್ಯಾಣಿ ॥ ಪರಿವರ್ಧಿನಿಷಟ್ಪದ ॥

ಶ್ರೀ ಕಲ್ಯಾಣೇಶ್ವರನಾಮ್ನಾಯಾ ವಿ
ವೇಕವಿದೂರನ ಸಜ್ಜಡಮಾಯಾ
ಭೀಕರನಾನತಜನ ಹೃದ್ದಿವ್ಯಸುಧಾ ಪಾರಾವಾರಾ
ರಾಕನಖಂಡ ಸುಖಾಸ್ಪದ ಸಗುಣನ
ನೇಕಜಗಂ ನಟನಾಶ್ರಯ ವಿಮಳ ಚಿ
ದಾಕಾಶಾಂಗನಿಪ ಗುರು ಬಸವನು ನೆಲಸಿರಲೆಂನೊಳಗೆ ॥ ೧ ॥

ಅಂತ್ಯ: ಈ ಕಲ್ಯಾಣೇಶ್ವರ ಮೂರ್ತಿಯನಾ
ಲೋಕಿಸಿದವನತಿಮುದದಿಂ ತಿಳಿಯಲ
ನೇಕ ಭವಾಶ್ರಯವಹ ಭೌತಿಕ ಸಂಸಾರಿಕ ಜಾಲವನೂ
ನೀಕರಿಸಿಯೆ ನಿರ್ಮಲವಹ ಲಿಂಗದೊ
ಳೇಕೀಕರಿಸಿ ನಿರಂತರ ಪರಮ ಚಿ
ದಾಕಾಶಾಂಗನೆನಿಸಿ ಸುಖಿಸುತ್ತಿಹುದೆಂದನು ದೇಶಿಕನೂ ॥ ೧೦೨ ॥

ಗ್ರಂಥ ॥ ಕಲ್ಯಾಣೇಶ್ವರಮದ್ವಂದ್ವಂ ಶತಸಂಖ್ಯಾಪದಾನ್ವಿತಂ।
ಜ್ಞಾನಂ ಸಮುಭ್ಯಸೇನ್ನಿತ್ಯಂ। ದೇಶಿಕೇಂದ್ರ ಪ್ರಸಾದತಃ ॥೧॥
ಕಲ್ಯಾಣೇಶ್ವರ ಸಂಪೂರ್ನ್ನ ಮಂಗಳಮಹಾ ಶ್ರೀ ಅಂತು ತೃತೀಯ ಕಾವ್ಯಕ್ಕೆ ಪದನು ೬೦ಕ್ಕಂ ಮಂಗಳಮಹಾ ಶ್ರೀ.

ವಿಷಯ : ತತ್ತ್ವಬೋಧೆ.

ವಿಶೇಷ : ಶಕಟರೇಫದ ಬಳಕೆಯಿದೆ. ಸ್ವರೂಪಾಮೃತ, ವೃಷಭಗೀತೆ ಮೊದಲಾದ ಇತರ ೬ ಗ್ರಂಥಗಳಿವೆ.

258

ಕೆ. ಬಿ. ೩೨೩/೩	**ಕಲ್ಯಾಣೇಶ್ವರ**	**ಪರಿವರ್ಧಿನಿಷಟ್ಪದಿ**
೮.೨" × ೬.೪"	**ಗುರುಬಸವೇಶ**	**೧೪೩೦**
೬೭–೭೯ ಪತ್ರ	**೧೮ ಪಙ್ಕ್ತಿ**	**೨೨ ಅಕ್ಷರ**

ಆದಿ : ಶ್ರೀ ಗುರುಸಿದ್ಧಾಲಿಂಗಾಯ ನಮಃ ॥ ಕಲ್ಯಾಣೇಶ್ವರ ಪ್ರಾರಂಭಃ ॥
ರಾಗಾ ॥ ಶಾಂತಮುಲಹರಿ ॥ ಪದ ॥
ಶ್ರೀ ಕಲ್ಯಾಣೇಶ್ವರನಾಮಮ್ನಾಯ ವಿ
ವೇಕವಿದೂರನ ಸಜ್ಜಡಮಾಯಾ
ಭೀಕರನಾನತಜನ ಹೃದಿವ್ಯ ಸುಧಾ ಪಾರಾವಾರಾ
ರಾಕನಖಂಡ ಸುಖಾಸ್ಪದಸಗುಣವ
ನೇಕ ಜಗಂನ್ನಟನಾಶ್ರಯ ವಿಮಳ ಚಿ
ದಾಕಾಶಾಂಗನೆನಿಪ ಗುರುಬಸವನು ನೆಲಸಿರಲೆಂನೊಳಗೆ ॥೧॥

ಅಂತ್ಯ : ಯಿಾ ಕಲ್ಯಾಣೇಶ್ವರ ಮೂರ್ತಿಯನಾ
ಲೋಕಿಸಿದವನತಿ ಮುದದಿಂದ ತಿಳಿಯಲ
ನೇಕ ಭವಾಶ್ರಯವಹ ಭೌತಿಕ ಸಂಸಾರಿಕ ಜಾಲವನೂ
ನೀಕರಿಸಿಯೆ ನಿರ್ಮಳವಹ ಲಿಂಗದೊ
ಳೇಕೀಕರಿಸಿಯೆ ನಿರಂತರ ಪರಮು ಚಿ
ದಾಕಾಶಾಂಗನೆನಿಸಿ ಸುಖಿಸುತ್ತಿಹುದೆಂದನು ದೇಶಿಕನೂ ॥೧೦೨॥
ಗ್ರಂಥ ॥ ಕಲ್ಯಾಣೇಶ್ವರ ಮದ್ವಂದ್ವಂ ಶತಸಂಖ್ಯಾಪದಾನ್ವಿತಂ।
ಜ್ಞಾನಂ ಸಮುಭ್ಯಸೇ ನಿತ್ಯಂ ದೇಶಿಕೇಂದ್ರ ಪ್ರಸಾದತಃ ॥೧೦೩॥

ಅಂತ್ರ್ಯ ಸಂಧಿ ೧ ಕ್ಕಾಂ ಪದನು ೧೦೩ ಕ್ಕಾಂ॥ ಅಂತು ಕಾವ್ಯ ೩ ಕ್ಕಾಂ ಪದ ೬೧೮ ಮಂಗಳಮಹಾ ಶ್ರೀ.

ವಿಷಯ : ವೇದಾಂತ (ಧರ್ಮರಹಸ್ಯ).

ವಿಶೇಷ : ಮಧ್ಯೆ ೭೩, ೭೪ ಈ ಎರಡು ಪತ್ರಗಳು ಲೋಪವಾಗಿವೆಯಾಗಿ ೪೪ನೆಯ ಪದ್ಯ ಸೇರಿ ೫೬ ಪದ್ಯಗಳು ಪೂರ್ತಿ ಇಲ್ಲ. ಅಸಮಗ್ರ. ಇದರೊಂದಿಗೆ ಶಿವಯೋಗಾಂಗ ವಿಭೂಷಣ, ಸದ್ಗುರುರಹಸ್ಯ, ಸ್ವರೂಪಾಮೃತವೆಂಬ ಗ್ರಂಥಗಳೂ ಇವೆ.

259

ಕೆ. ೬೩೯/೩	**ಕಲ್ಮಾಲಾವೃತ್ತ**	ವೃತ್ತ
೮.೫" × ೧.೯"	?	?
೩೫–೩೭ ಪತ್ರ	೮ ಪಂಕ್ತಿ	೩೦ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ। × × ×

॥ ಶ್ಲೋಕಾ ॥ ಕಲಿಮಾಲಿಕವೃತ್ತ । ಶಾರ್ದೂಲ।
ವಾಶ್ಚಾರೇಡ್ವಜದುಗ್ಧ್ರತೋಡ್ವದಿಪತಿಃ। ಕೃದ್ರೇಡ್ಜಜಾನಿರ್ಗಣೇ
ಡ್ಗೋರಾಡಾರುಡುರಸ್ಸ್ವರೇಡುರುತರ ಗ್ರೈವೇಯಕಭೃಡ್ವರಂ
ವೂಡ್ಭೇದಡ್ದ್ರುಂಗ್ನರಕಾಸ್ಥಿ ದೃಕ್ತ್ರೀದೃಗಿಭೇದಾದ್ರ್ಯಜನನಾಚ್ಚಛದೇ
ಸಸ್ರ್ಯದಂಭುಮದಂಭುಡಾಳಿಗಳರಗ್ದೇವೋಮುದೇವೋವ್ಯಡಾಃ ॥೧॥

ಅಂತ್ಯ : ಚತುರ್ಗನೆಯಿಂದ ಜಿಂಹ್ವೆಯೊಳೋದುತಲಿರ್ಪ್ಪುದು ವೇದಮಂತ್ರಮಂ। ವೃತಿರಪಿಯೋಮ ಝೇಂಕರಿಸಿ ನಾದದ ಶೃತಿಗಳಿಂದಲ್ಸಾಮತು ಋತು ಮದಿರ್ಣತು ಮದಿರ್ಣತು ಮದಿರ್ಣತು ಮದಿರ್ಣತು ಮದಿರ್ಣದದಿರ್ಣದಿಂ ಸಥ ಶುಥ ಶುಥಿರ್ಣದದಿರ್ಣದ ತುದತುದದಿರ್ಣಮದಿರ್ಣವತಿಶಯದಿಂದ ಬಾರಿಸುತಿರ್ದುದು ರುದ್ರನ ನಾಟ್ಯರಂಗದೋಳ್ ॥೧೫॥ ಕಲಿಮಾಲಿಯ ವೃತ್ತ ಸಂಪೂರ್ನ ಮಂಗಳಮಹಾ ಶ್ರೀ॥

ವಿಷಯ : ಶಿವಸ್ತೋತ್ರ.

ವಿಶೇಷ : ಸಮಗ್ರ. ಇದರೊಂದಿಗೆ ಭದ್ರಕಾಳೀ ಅಷ್ಟಕ (ಸಂಸ್ಕೃತ), ಮಹಾನಾಟಕ ವೃತ್ತಂ (ಸಂಸ್ಕೃತ) ಮೊದಲಾದ ಇತರ ೪ ಗ್ರಂಥಗಳಿವೆ.

260

ಕ. ಬಿ. ೫೦೭ ಕಲ್ಮಾಲಾವೃತ್ತ (ಸಟೀಕು) ವೃತ್ತ, ಟೀಕು

೮.೨" × ೬.೪" ? ?

೧–೧೩ ಪತ್ರ ೧೮ ಪಂಕ್ತಿ ೨೦ ಅಕ್ಷರ

ಆದಿ: ಶ್ರೀ ಶಿವಾಯ ನಮಃ। ಶ್ರೀ ಗುರುಬಸವಲಿಂಗಾಯ ನಮಃ। ಕಾಳಿದಾಸ ಮಾಡಿದ ಕಲ್ಮಾಲೆವೃತ್ತ। ಪಾಷಾಣಮಾಲೆ ವೃತ್ತ।

ಸ್ಫೂರ್ಜತ್ಸ್ವಭ್ರೇಭರಾಟ್ತ್ವಿಟ್ಕ್ಷಿತಿಭೃದುರುಧನುರ್ಭೃತ್ಪುರಸ್ಫೂರ್ತಿಯು
ದ್ಧುಲ್ಕೃಭ್ರಾಟ್ಪ್ರತ್ಯೇಡ್ರತ್ ಟ್ಪ್ಲುಟ್ಪ್ರಮಥಪರಿವೃಢ ಭ್ರಾಡ್ವೃಷಾರುಟ್ಪ್ರದ್ವಿಟ್
ಕ್ಷ್ಮಾಭೃದ್ಭಿದ್ವಿಣ್ಮದದ್ರೀಟ್ಕ್ಷಿಪಿತರುಡರಿಭಿದ್ವ್ಯಾಘ್ರದೃತ್ಯೇಟ್ಕ್ಷಣದ್ವಿಡ್ವಿ
ಶ್ರೇಟ್ಪ್ರೋದ್ಯಜ್ಜಟಾಭೃತ್ಫಣಧೃದಿನಭೃದಿಷ್ವಾರ್ಥದೋऽಸ್ತ್ವೀಶ್ವರೋ ವಃ॥ (1)

ಟೀಕು–ಸ್ಫೂರ್ಜತ್ಸ್ವಭ್ರೇಭರಾಟ್ತ್ವಿಟ್=ಸ್ಫೂರ್ಜತ್–ಪ್ರಕಾಶಿಸುತಿರ್ದಂಥ। ಸ್ವಭ್ರೇಭರಾಟ್ ಸು = ವಳ್ಳಿತಾದಂಥ। ಅಭ್ರ = ಆಕಾಶದಲ್ಲಿರುವಂಥ। ಯಿಭರಾಟ್ = ಗಜಶ್ರೇಷ್ಠವಾದಂಥ ಐರಾವತದ, ತ್ವಿಟ್ = ಕಾಂತಿಯೋಪಾದಿಯಲ್ಲಿ ಕಾಂತಿಯುಸುಳ್ಳಂಥ। ಕ್ಷಿತಿಭೃದುರುಧನುಭೃತ್ = ಕ್ಷಿತಿಭೃತ್ = ಭೂಮಿಯನ್ನು ಧರಿಸಲ್ಪಟ್ಟಂಥ ಪರ್ವತವಾದ ಮಹಾಮೇರುವೆಂಬ ವುರು = ದೊಡ್ಡಿತ್ತಾದಂಥ, ಧನುಃ = ಬಿಲ್ಲನ್ನು। ಭೃತ್ = ಧರಿಸಿಕೊಂಡಿರುವಂಥ × × ಅರ್ಥ ಫಲಂಗಳನ್ನು, ದಃ = ಕೊಡುವಂತ್ಥಾತನು, ಅಸ್ತು = ಆಗಲಿ. (1)

ಅಂತ್ಯ: ದತಿಶಯದಿಂದಂ ಬಾರಿಸುತಿರ್ದುದು ರುದ್ರನಾಟ್ಯರಂಗದೊಳ್॥

ಕೋಕಾಂಡಂ ವಾರಣಾಂಡಂ ಪರಿಪರಿವಿರಿಟಂ ದರ್ಪಣಾಂಡಂ ವ್ಯಾಡಾಂಡಂ
ಡಿಂಭಿಂ ಡಿಂಭಿಂ ಡಿಡಿಂಭಿಂ ಜಹಮುಪಿ ಜಹಮುಪಿ ಜಘಂಪ್ರೈ ಜಘಂಪ್ರೈ
ಸ್ತ್ರಿಲ್ಲಾಖಿ ಸ್ತ್ರಿಲ್ಲಾಖಿ ಸ್ತ್ರಿದಲ್ಲಾಖಿ ಸ್ತ್ರೀ ಕುರುಕುರುಮಾಂಕಂ
ಕುಮಾಂಕುಂ ಕುಮಾಂಕಂ

ಇತ್ಯೇವಂ ಶೈಲಕನ್ಯಾ ಪ್ರತಿವಚನ ಜಡಃ ಪಾತು ಮಾಂ ಪಾರ್ವತೀಶಃ॥
(ಇದನ್ನು ೧೯೫೪ ರಲ್ಲಿ ಕಾಪಿ ಮಾಡಲಾಗಿದೆ.)

ವಿಷಯ: ವೇದಾಂತ ರಹಸ್ಯ.

ವಿಶೇಷ: ೨ ನೆಯ ಪತ್ರ ೪ ನೆಯ ಪತ್ರದ ನಂತರವಿದೆ. ಕೆಂಪು ಮಸಿಯಿಂದ ತಿದ್ದಿದೆ.

261

ಕೆ. ಎ. ೨೫೩/೬	ಕವಿಕಂಠಹಾರ	ಕಂದ
೧೨.೯″ × ೮″	ಸೂರ್ಯಕವಿ	?
೧–೩೫ ಪತ್ರ	೨೧ ಪಂಕ್ತಿ	೧೮ ಅಕ್ಷರ

ಆದಿ : ಕವಿಕಂಠಹಾರಃ ॥

ವೃತ್ತಾ ॥ ಶ್ರೀಮತ್ಪ್ರಾಲೇಯ ಶೈಲಾಧಿಪ ವರ ತನಯಾನೇತ್ರ ನೀರೇಜಮಿತ್ರಂ
ಸೋಮಪ್ರದ್ಯೋತನಾಗ್ನಿ ತ್ರಿತಯ ತತಲಸದ್ಭದ್ರಸದ್ಭಾಗನೇತ್ರಂ
ಸಾಮ ಪ್ರೋದ್ಭೂತ ನೂತ್ನಾಜಿನಲುೃತ ವಿಶದಾತರ್ಕ್ಯ ಶುಭ್ರಾಭ್ರಗಾತ್ರಂ
ಕಾಮಪ್ರಧ್ವಂಸನೆಮ್ಮಂ ಸಲಹುಗೆ ಮುದದಿಂ ಪಾಪವಲ್ಲೀ ಸವಿತ್ರಂ ॥ ೧ ॥

ಕಂದಾ ॥ ರಾಮಂ ವೈಭವಜಿತ ಸೂ
ತ್ರಾಮಂ ಸಂಗ್ರಾಮಭೀಮನಧಿಕ ಸುನಾಮಾ
ಪ್ರೇಮಂಬೆತ್ತೆಂಮ್ಮಂ ನಿ
ಸ್ಸೀಮಾ ಸಲೆ ಸಲಹುಗೊಲಿದು ಸುಗುಣೋದ್ದಾಮಂ ॥ ೨ ॥

ಅಂತ್ಯ : ಗಲ್ಲ ಮಣಿ ಪಟ್ಟ ತೋರಣ
ಮಲ್ಲಂ ತಾನೆನಲಿವಿನಿತು ಸಕ್ಕವಿವರರಿಂ
ಸಲ್ಲಲಿತಮಪ್ಪ ಶಬ್ದವಿ
ವೆಲ್ಲಿಯು ತಾಂ ತತ್ಸಮಕ್ಕೆ ಸಲ್ಗುಂ ಧರೆಯೋಳ್ ॥ ೨೭೨ ॥

ಅಂತು ಪದ್ಯಗಳು ೨೭೨ ಕೆ ಮಂಗಳಮಸ್ತು ॥ ಕವಿಕಂಠಹಾರಾ ಸಂಪೂರ್ನ ಮಂಗಳಮಹಾ ಶ್ರೀ॥ ಯಿಾ ಕವಿಕಂಠಹಾರ ನಿಘಂಟನ್ನು ೨ ದಿವ್ಸದಲ್ಲಿ ನಿಶ್ಚಯವಾಗಿ ಪೂರೈಸಿ ಯಿರುತ್ತೇನೆ । ಕಾರಣ ಸಂವತ್ಸರದ ಜೇಷ್ಠ ಶುದ್ಧ ೩ ಲ್ಲೂ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ಗ್ರಂಥಾರಂಭಕ್ಕೆ ಮೊದಲ್ಲುಒಂದು ಪತ್ರದಲ್ಲಿ ಆರಂಭದ ೧೮ ಪದ್ಯಗಳ ವಿಷಯಾನುಕ್ರಮಣಿಕೆ ಇದೆ. ‘ಇದರ ಮೂಲಪ್ರತಿ ಮಾಗಡಿಯ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಕೆ. ರಾಮಸ್ವಾಮಯ್ಯಂಗಾರ್ಯರವರಲ್ಲಿದ್ದುದ್ದು, ಈಗ ಕಾವ್ಯ ಕಲಾನಿಧಿ ಪ್ರಕಾಶನಾಲಯಕ್ಕೆ ೧೯೦೭ ರಲ್ಲಿ ಕಳುಹಿಸಿಕೊಟ್ಟದೆ’ ಎಂದು ಅದೇ ಪುಟದಲ್ಲಿ ಆಂಗ್ಲ ಭಾಷೆಯಲ್ಲಿ ಬರೆದಿದೆ. ಈ ಪುಸ್ತಕದಲ್ಲಿ ಶಬ್ದಾಗಮ, ಕರ್ಣಾಟಕ ಶಬ್ದಸಾರ, ಕರ್ಣಾಟಕ ಸಂಜೀವಿನಿ, ರನ್ನ ನಿಘಂಟು, ಭಾರತ ನಿಘಂಟು, ನಾನಾರ್ಥ ರತ್ನಾಕರ ಎಂಬ ಕೃತಿಗಳಿವೆ.

262

ಕೆ. ೫೨೧/೧	ಕವಿಜಿಹ್ವಾಬಂಧನ	ಕಂದ, ವೃತ್ತ
೭.೨" × ೧.೯"	ಈಶ್ವರಕವಿ	ಸು. ೧೫೦೦
೧–೧೨ ಪತ್ರ	೧೦ ಪಂಕ್ತಿ	೩೨ ಅಕ್ಷರ

ಆದಿ : ಕವಿಜಿಹ್ವಾಬಂಧವ—
ನುತಿಸಲ್ಕವಿವರರೆಲ್ಲಂ
ಪ್ರತಿಯಿಲ್ಲದ ತೆರದಿ ಸರ್ವಲಕ್ಷಣವಂ ಬಾ
ರತಿಯ ವರಡಿಂದ ತನ್ನಯ
ಸತಿಗುಸುರಿದನೀಶ್ವರಾಂತ ಸತ್ಕುವಿರಾಯುಂ ॥೧॥
ಕವಿಜಿಹ್ವಾಬಂಧನವುಂ
ಭುವನ ಜನಂಗಳಿಗೆ ಪೇಳ್ವ ಲಕ್ಷಣವುಂ ಸ
ದ್ವಿವರವ ಬರವರ್ಮೆಚಲ್
ಸವಣರಿತುಂ ವಾಣಿವರಡಿ ಈಶಕವೀತ್ತಂ ॥೨॥

ಅಂತ್ಯ : ಶಾರದೆ ಇರಲಾದಿಯೊಳುಂ
ಕ್ರೂರ ವಿಷಾಕ್ಷರಗಳಂ ತದಾ ನಿರ್ಜೀವಂ
ನೀರಸಮೆಂಬವನುಗ್ರಂ
ಕ್ರೂರ ವಿಪಕ್ಷಕಣಂದಲಿದಿಯಂತಕ್ಕುಂ ॥೧೨೧॥ ಶ್ರೀ॥

ವಿಷಯ : ಕನ್ನಡ ಛಂದಶ್ಶಾಸ್ತ್ರ.

ವಿಶೇಷ : ಇದೇ ಕಟ್ಟಿನಲ್ಲಿ ಕಕ್ಕೋಕಶಾಸ್ತ್ರವೆಂಬ ಮತ್ತೊಂದು ಗ್ರಂಥವೂ ಇದೆ.

263

ಕೆ. ಎ. ೨೩೬/೩	ಕವಿಜಿಹ್ವಾಬಂಧನ	ಕಂದ, ವೃತ್ತ
೧೩" × ೭.೯"	ಈಶ್ವರಕವಿ	ಸು. ೧೫೦೦
೧–೨೧ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಕವಿಜಿಂಹಾಬಂಧನ ಬರೆಯುಂವದಕ್ಕೆ ನಿರ್ವಿಘ್ನಮಸ್ತು.

ಕಂದಾ॥ ಯೇಣಾ ವೃದುಕರ ವೀಣಾ
ವಾಣೀ ಕಳಶ್ರೇಣಿ ಪ್ರಾಸುವಡಿಭೇದಗಳಂ
ಜಾಣಿ ಮಿಗಿಲರಿಯ ಪೇಳ್ವೆನು
ಗ್ರಾಣಿತಮನಕಪ್ಪ ತೆರದಿ ಸತ್ಕವಿಗಳ್ಗೆ ॥೧॥

ಅಂತ್ಯ : ಆಶೀರ್ವಾದದೊಳೂರ್ವಿಯಂ ಪರಬಲಂ ಮುತ್ತಿದ್ದಡಾ ತೋಯಮಂ
ಕ್ಲೇಶಂ ವ್ಯಾಧಿಯೊಳಿಪ್ಪವಂಗೆ ಪವನಂ ದೀರ್ರೋನ್ನತಂಗಗ್ನಿಸಂ
ತೋಷಂ ತ್ಯಾಗಿಗೆ ಇಂದು ಧಾಳಿ ಇಡುವಂಗಂದಂಬರಂ ಕಾಮಿಗಂ
ಭಾಸ್ಕರ್ದೇವಗಣಂಗಳೆಂದರಿದು ಪೇಳಲ್ಬಲ್ಲಿಗಬ್ಜಾನನೇ ॥ ೨ ॥
ಇತಿ ಬಾಣಕವಿ ನಿರ್ಮಿತಮಪ್ಪ ಛಂದಾಂಬುರಾಶಿ ಪ್ರಥಮ ಪರಿಚೇದ
ಸಮಾಪ್ತಃ ॥ ಸಂಪೂರ್ಣಂ ॥

ವಿಷಯ : ಕನ್ನಡ ಛಂದಶ್ಯಾಸ್ತ್ರ.

ವಿಶೇಷ : ಮಧ್ಯಮಧ್ಯದಲ್ಲಿ ಟೀಕು ಇದೆ. ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಇದರೊಂದಿಗೆ ಮಾಧವಾಲಂಕಾರ ಮತ್ತು ಶಾರದಾವಿಲಾಸವೆಂಬ ಗ್ರಂಥಗಳೂ ಇವೆ.

264

ಕೆ. ೧೧೦	ಕವಿರಾಜಮಾರ್ಗ	ಕಂದ, ವೃತ್ತ
೧೪.೫″ × ೧.೩″	ನೃಪತುಂಗ	೮೫೦
೧–೨೬ ಪತ್ರ	೮ ಪಂಕ್ತಿ	೮೦ ಅಕ್ಷರ

ಆದಿ : ಕವಿರಾಜಮಾರ್ಗ್ಗ ॥
ಶ್ರೀತಳ್ಪುರದೊಳ್ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲ
ಳ್ನೀತಿ ನಿರಂತರನುದಾರನಾ ನೃಪತುಂಗಂ ॥ ೧ ॥

ಅಂತ್ಯ : ನಿರವದ್ಯಾನ್ವಯುನುದ್ಭವುದ್ಧತಮ....ರಾಬ್ಧಿ ಡಿಂಡೀರ ಪಾಂ
ಡುರಮಾಕ್ರಂತಸಿಶೈಲ ಸಾಗರ ದರಾಶಾಚಕ್ರವಾಳಂಬರಂ
ಪರಮ ಶ್ರೀವಿಜಯ ಪ್ರಭೂತಿಜಯ ಶಶ್ರೀವಾಲ ವೃದ್ಧಾಹಿತಂ
ಪರಮಾನಂದಿತ ಲೋಕಮೊಪ್ಪೆ ನೆಲೆಗೊಳ್ಗಾಚಂದ್ರತಾರಾಂಬರಂ ॥ ೨೩೪ ॥

ಇದು ಪರಮಸರಸ್ವತಿ ತೀರ್ಥಾವತಾರ ನೃಪತುಂಗದೇವಾನುಮತಮಪ್ಪಕವಿ ರಾಜಮಾರ್ಗದೊಳರ್ಥಾಲಂಕಾರಂ ತ್ರಿತೀಯ ಪರಿಚ್ಛೇದಂ ಕವಿರಾಜಮಾರ್ಗಾ ಲಂಕಾರಂ ಸಮಾಪ್ತಂ ಶ್ರೀ.

ವಿಷಯ : ಕನ್ನಡ ಅಲಂಕಾರಶಾಸ್ತ್ರ.

ವಿಶೇಷ : ೧೩ ಮತ್ತು ೧೪ ನೆಯ ಪತ್ರಗಳು ಸ್ವಲ್ಪ ಶಿಥಿಲವಾಗಿವೆ.

265

ಕೆ. ೧೨೫	ಕವಿರಾಜಮಾರ್ಗ	ಕಂದ, ವೃತ್ತ
೧೧.೫″ × ೧.೩″	ನೃಪತುಂಗ	೮೫೦
೧_೪೯ ಪತ್ರ	[illegible] ಪಂಕ್ತಿ	೫೨ ಅಕ್ಷರ

ಆದಿ : ಶ್ರೀತಳ್ತುರದೊಳ್ಕ್ಯಾಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವಗನಗಲ
ಳ್ನೀತಿ ನಿರಂತರನುದಾರನಾ ನೃಪತುಂಗಂ ॥ ೧ ॥

ಅಂತ್ಯ : ಅಂತು ಬಿ......................
.................................ಣೋದಯ್ಯೆ
ಕಾಂತವಿಷಯಾಶಯರಾಗಿ ನಿರಾಕುಳಂ
ಸಂತತಂ ನುಡಿಗಳೊಳ್ ಬಗೆವೆರ್ಚಿರೆ.......॥

ವಿಷಯ : ಕನ್ನಡ ಅಲಂಕಾರಶಾಸ್ತ್ರ.

ವಿಶೇಷ : ಶಿಥಿಲಗ್ರಂಥ. ಅಸಮಗ್ರ.

266

ಕೆ. ಎ. ೧೭೫	ಕವಿರಾಜಮಾರ್ಗ	ಕಂದ, ವೃತ್ತ
೧೨.೭″ × ೭.೮″	ನೃಪತುಂಗ	೮೫೦
೧_೬೮ ಪತ್ರ	೨೦ ಪಂಕ್ತಿ	೨೨ ಅಕ್ಷರ

ಆದಿ : ಕವಿರಾಜಮಾರ್ಗಾಲಂಕಾರ
ಕವಿರಾಜಮಾರ್ಗಾ ॥
ಶ್ರೀತಳ್ತುರದೊಳ್ಕ್ಯಾಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವನನಗಲ
ಳ್ನೀತಿನಿರಂತರನುದಾರನಾ ನೃಪತುಂಗಂ ॥ ೧ ॥

ಅಂತ್ಯ : ನಿರವದ್ಯಾನ್ವಯನುದ್ಭವಮುದ್ಧತಮ....ರಾಬ್ಧಿ ಡಿಂಡೀರ ಪಾಂ
ಡುರ ಮಾತ್ರಾಂತಸಿಶ್ಶೈಲ ಸಾಗರ ಧರಾಶಾಚಕ್ರವಾಳಂಬರಂ
ಪರಮ ಶ್ರೀವಿಜಯ ಪ್ರಭೂತಿಜಯಶಸ್ತ್ರೀಬಾಲವೃದ್ಧಾಹಿತಂ
ಪರಮಾನಂದಿತಲೋಕಮೊಪ್ಪಿ ನೆಲೆಗೊಳ್ಗಾಚಂದ್ರತಾರಾಂಬರಂ
|| ೨೩೪ ||

ಯಿದು ಪರಮ ಸರಸ್ವತಿ ತೀರ್ಥಾವತಾರ ನೃಪತುಂಗದೇವಾನುಮತಮಪ್ಪ ಕವಿರಾಜಮಾರ್ಗದೊಳರ್ಥಾಲಂಕಾರಂ ತೃತೀಯ ಪರಿಚ್ಛೆದಂ || ಕವಿರಾಜ ಮಾಗಾರ್ಲಂಕಾರಾಂ ಸಮಾಪ್ತಂ ||

ವಿಷಯ : ಕನ್ನಡ ಅಲಂಕಾರಶಾಸ್ತ್ರ.

ವಿಶೇಷ : ಪ್ರತಿಯ ಕೊನೆಯಲ್ಲಿ ತಾ || ೩೦–೯–೮೬ಲ್ಲು ಎಂದಿದೆ. ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ.

267

ಕೆ. ಎ. ೨೮೮	**ಕವಿರಾಜಮಾರ್ಗ**	ಕಂದ, ವೃತ್ತ
೧೨.೭" × ೮.೧"	ನೃಪತುಂಗ	೮೫೦
೧–೪೬ ಪತ್ರ	೨೪ ಪಂಕ್ತಿ	೨೦ ಅಕ್ಷರ

ಆದಿ : ಕವಿರಾಜಮಾರ್ಗ ||
ಶ್ರೀತಳ್ತುರದೊಳ್ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ
ಪ್ರೀತಿಯಿನಾವಗಮಗಲ
ಲ್ನೀತಿ ನಿರಂತರನುದಾರನಾ ನೃಪತುಂಗಂ || ೧ ||

ಅಂತ್ಯ : ದಿವಸಕರನುದಯಗಿರಿ ಶಿಖ
ರ ವಿಶೇಷಭೂಷಣಂ ತಮೋರಿಪುಬಲಮಂ
ಪ್ರವಿಲೀನಂ ಮಾಡಿದನವ
ಯವದೊಳ್ತಾರಾವಿತಾನ ತೇಜಮನಳಿದಂ || ೫೭ ||

ವಿಷಯ : ಕನ್ನಡ ಅಲಂಕಾರಶಾಸ್ತ್ರ.

ವಿಶೇಷ : ಮೂರನೆಯ ಪರಿಚ್ಛೇದದ ೫೭ನೆಯ ಪದ್ಯದವರೆಗೆ ಇದೆ. ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಅಸಮಗ್ರ.

268

ಕೆ. ೧೪೩	**ಕಾದಂಬರಿ**	ಚಂಪೂ
೨೦.೫" × ೨.೩"	ನಾಗವರ್ಮ	ಸು. ೧೯೯೦
೧_೬೨ ಪತ್ರ	೧೧ ಪಂಕ್ತಿ	೧೧೦ ಅಕ್ಷರ

ಆದಿ : ವೃತ್ತಾ॥ ಶ್ರೀಮನ್ನಾಗೇಂದ್ರಭೋಗಸ್ಫುರದರುಣ ಮಣಿದ್ಯೋತಿಸಂಧ್ಯಾನಿಬದ್ಧ
ಪ್ರೇಮಂ ಪ್ರೋದ್ಯತ್ತರಂಗೋಚ್ಚರದಮರನದೀಶೀಕರೋದಾರತಾರಾ
ರಾಮಂ ಹೇಮಪ್ರಭಾಪ್ರಸ್ಫುರಿತ ಗಿರಿಶ ಚಂಚಜ್ಜಟಾಜಾಳಜೂಟ
ವ್ಯೋಮಂ ಪ್ರೋದ್ಭಾಸಿ ಚಂದ್ರಂ ತ್ರಿಭುವನ ಜನಕಾನಂದಮಂ
ಮಾಡುಗೆಂದುಂ ॥ ೧ ॥

ಅಂತ್ಯ : ವೃ॥ ಯಿದು ಚೋದ್ಯಂ ಕವಿಹೃದ್ಗತಂ ನವರಸಂ ನಿರ್ದೋಷಮೆಂದೀಗಳಾ
ಮದು ಕಾದಂಬರಿ ಸೇವೆವೊಂದದನಿತುಂ ತಾನೆಯ್ದೆ ಭೂಭಾಗದೊಳ್
ವಿದಿತ ಶ್ರೀಕವಿನಾಗವರ್ಮನ ವಚಸ್ಸಂದೋಹದಿಂ ದೋಷವೆ
ತ್ತದುಳುತ್ತಾರದ ವಸ್ತುಬಂಧಮದು ತಾನೇಂ ಮಾಡದೇಂ ಗೆಯ್ಯದೋ
॥೮೩೮ ॥

ಆಂ ಕಾದಂಬರಿಕಾವ್ಯಂ ಕಂದ ವೃತ್ತವಚನಂಗಳು ।ಸಹ ೨೦೦೦ ಸಾವಿರಕ್ಕಂ ಸಂಪೂರ್ಣಂ ಮಂಗಳಮಹಾ ಶ್ರೀ ॥

ವಿಷಯ : ಕಾದಂಬರಿಯ ಕಥೆ.

ವಿಶೇಷ : ೨೫, ೨೯, ೬೨, ಮತ್ತು ೬೮ನೆಯ ಪತ್ರಗಳಲ್ಲಿ ಗ್ರಂಥಲೋಪವಿದೆ. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ಸಾವಿರದಯೇಳನೂರನಲ್ವತ್ತ ನಾಲ್ಕಕ್ಕೆ ೧೭೪೪ ಕ್ಕೆ ಪ್ರವರ್ತಮಾನವಾದ ಚಿತ್ರಭಾನು ನಾಮ ಸಂವತ್ಸರ ಜೇಷ್ಠ ಶುದ್ಧ ಬಿದಿಗೆ ಸೌಮ್ಯವಾರ ಮೃಗಶಿರ ನಕ್ಷತ್ರಯುಕ್ತ ಚಂದ್ರೋಚ್ಚ ಶುಭಮುಹೂರ್ತದಲ್ಲಿ ಈ ಪ್ರತಿಯನ್ನು ಬರೆದಿರುವದಾಗಿ ಕೊನೆಯಲ್ಲಿ ಹೇಳಿದೆ.

269

ಕೆ.ಬಿ. ೨೭೬	ಕಾಮು ಚರಿತ್ರೆ	ಸಾಂಗತ್ಯ
೮.೧" × ೬.೬"	ಕಲ್ಯಾಣಕೀರ್ತಿ	೧೪೩೯
೧–೧೨ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ಕಾಮುಚರಿತ್ರೆ ಜೈನಗ್ರಂಥಾ × × × × ರಾಗ ಸಾಂಗತ್ಯ ।
ಕಾಮನ ಕಥೆಯನು ಭಾವಿಸಿ ಭವ್ಯರು
ಕಾಮಿತಫಲವನು ಭಜಿಸೀ ॥ ಪಲ್ಲವೀ ॥
ಸುರನರಪತಿನುತ ಪಾದಪಯೋಜನ
ಹರಿಕುಲಕಮಲದಿನಪನಾ
ಪರಮಜಿನೇಶ್ವರಸ್ವಾಮಿಯ ಚರಣವ
ನುರು ಮುದದಿಂ ಭಜಿಸುವೆನೂ ॥ ೧ ॥

ಅಂತ್ಯ : ಲಕ್ಷ ಯಂಬತ್ತುನಾಲ್ಕು ಲಕ್ಷ ಪೂರ್ವಾ
ಯುಷ್ಯ ಸುಕ್ಷೇಮದಲ್ಲಿ
ಸುಖಿಸುತ್ತ ಮುಂದಕ್ಕೆ
ಮೋಕ್ಷಕೆಯ್ದುವನು ಮುನಿಯಾಗಿ ॥ ೭೦ ॥

ಅಂತು ಸಂಧಿ ೪೭ಕ್ಕಾಂ ಪದ ೩೩೧ಕ್ಕಾಂ ಮಂಗಳಮಹಾ ಶ್ರೀ ॥ ಕಾಮು ಚರಿತ್ರೆ ಸಂಪೂರ್ಣ ॥ ಮಂಗಳ ಮಹಾ ಶ್ರೀ.

ವಿಷಯ : ಮನ್ಮಥನ ಕಥೆ.

ವಿಶೇಷ : ಮೋಡಿ ಲಿಪಿ.

270

ಕೆ.ಬಿ. ೩೪೧/೬	ಕಾಮನ ವಚನಗಳು	ವಚನ
೮.೨" × ೬.೧"	?	?
೧೨೧–೧೨೪ ಪತ್ರ	೨೦ ಪಂಕ್ತಿ	೨೧ ಅಕ್ಷರ

ಆದಿ : ಕಾಮನ ವಚನಂಗಳ ಬರದಕ್ಕೆ ಶುಭಮಸ್ತು ॥
ಲಿಂಗನಗರವಾಸ ಪೇಮ
ಲಿಂಗ ಗುರು ಪರೇಶ ಜಯತು
ಸಂಗರಹಿತ ಸಲಹೊ ನಾಗ
ಲಿಂಗ ನಗರವಾಸನೆ ॥ ೧ ॥

ತ್ರಿಣಯತನ ಯತ್ರಿಜಗವಂದ್ಯ
ಅಜಸುರಾಸುರಾದಿ ನಮಿತ
ನಿಜದಿ ನಂಮ್ಮ ಪಾಲಿಸೈಯ್ಯ
ಗಜದ ಮುಖದ ಗಣಪತಿ ॥ ೨ ॥

ಅಂತ್ಯ : ತಂದಿಯ ಸತಿಯಾಳ ಮಗನೀಗೆ ಕೊಟ್ಟಾ
ಕಂದನ ಸತಿ ತಂದ್ದಿಗೊಪ್ಪಿಶಿಬಿಟ್ಟಾ
ವಂದಾದ ಸುದ್ದಿಗೆ ತವಿಲ್ಲ ಮುಟ್ಟ
ಹೊದಿಗೆ ದೊರಕಾದು ಜನರಿಗೆ ಗುಟ್ಟ ॥ ೧೪ ॥
ತಂನ್ನತ್ತ್ರಿ ಮಾಡಿದಾ ಸದ್ಗುರುರಾಯ
ಸನ್ನುತ ಧರೆಯಳಗ್ಯೆನೇವೆ ನೆವೇಯಾ
ಚನ್ನವೀರದೇವ ಮೋಕ್ಷ ಪ್ರದಯಾ
ಉನ್ಮನೆ ಗಿರಿಯೊಳು ತೋರಿದ ಚ್ಛಾಯಾ ॥ ೧೫

ವಿಷಯ : ಕಾಮನ ವಚನ.

ವಿಶೇಷ : ಮೋಡಿ ಅಕ್ಷರ. ಇದೇ ಪುಸ್ತಕದಲ್ಲಿ ಪ್ರಸಾದವಾಕ್ಯ ಮೊದಲಾದ ಇತರ ೭ ಗ್ರಂಥಗಳಿವೆ.

271

ಕೆ. ಎ. ೧೪೬	**ಕಾಮಂದಕ ನೀತಿ**	ಚಂಪು
೧೩"×೮.೩"	ಚಿಕ್ಕುಪಾಧ್ಯಾಯ	೧೬೭೨
೪೦ ಪತ್ರ	೩೨ ಪಂಕ್ತಿ	೩೨ ಅಕ್ಷರ

ಆದಿ : ಕಾಮಂದಕೀಯ ನೀತಿ ಚಂಪೂಗ್ರಂಥಾ ॥ × × ಕಾಮಂದಕ ನೀತಿ ಬರೆವುದಕ್ಕೆ ಶುಭಮಸ್ತು × × ×

ಶ್ರೀಮದಪಾಂಗಲಬ್ಧ ವಿಭವಾಜ ಭವೇಂದಿರೆಯಾಣ್ಮನಾತ್ಮದಾ
ಮಾಮಳ ಪುಷ್ಪಲೋಲ ಮುನಿಪಾಳಿಸು ಕೌಸ್ತುಭಹಾರನಚ್ಯುತಂ
ಭೂಮನಿಜಾತಿ ಶುಪುಲ್ಲಯದ ಸ್ಯೆಂನ್ಯ ಮುಖಾಂಬುಜ ಚಕ್ರಧಾರಿಯು
ದ್ದಾಮ ಪವಿತ್ರಸಿಂದು ಪದನೀಗೆ ವಿನೋದಿ ಜಗಕ್ಕೆ ರಾಗಮಂ ॥ ೧ ॥

ಅಂತ್ಯ : ಸಮ್ಯಕ್‌ಸಾಧನಮೇತೇಷಾಮಿತಿ ಮಂಡಲಶೋಧನಂ ಪ್ರತಿಪಾದಿತಮೆಂದು ವಾಕ್ಯಶೇಷಂ ವುಪಸಂಹರಿಸುತ ಪೇಳ್ದಪಂ

ಯಿತಿ ಸ್ಮರಾಜಾನಯವರ್ತನಾ ಪ್ರಜನ್ ಸಮುದ್ಯಮೀ ಮಂಡಲಶುದ್ಧಿ ಮಾಚರೇತ್ |
ವಿರಾಜತೇ ಸಾಧು ವಿಶುದ್ಧ ಮಂಡಲಶ್ಶರಚ್ಛಶೀವಪ್ರತಿನಂದಯನ್ ಪ್ರಜಾಃ ಯಿತಿ ಉಕ್ತನ್ಯಾಯದಿಂ ನಯವರ್ತ್ಮನಿ ನೀತಿಮಾರ್ಗದಿಂ ಪ್ರಜನ್ ಮಂಡಲ ಶುದ್ಧಿಯನಾಚರಿಸುತ ಪೇಳ್ದಪಂ| ರಾಜತೆ ಸಾಧು ವಿಶುದ್ಧಮಂಡಲಃ ಶರಚ್ಛಶೀವಪ್ರತಿನಂದಯನ್ ಪ್ರಜಾಃ ಯಿತಿಪ್ರತಿತಂ| ಯಿತಿ ಶ್ರೀಮತ್ಕಾಮಂದಕೀಯ ನೀತಿಸಾರ ಟೀಕಾಯಾಮುಪಾಧ್ಯಾಯ ನಿರಪೇಕ್ಷಾಯಾಂ ಅಷ್ಟಮಃ ಸರ್ಗಃ ॥ ಗದ್ಯ ॥ ಯಿದು ಸತತ ನತಶತದೃತಿ ಶತಮುಖ × × × × ಚಿಕುಪಾಧ್ಯಾಯ ಸಚಿವ ಶಿರೋಮಣಿ ವಿರಚಿತಮಪ್ಪ ಕಾಮಂದಕೀಯ ನೀತಿಯೊಳ್ ಮಂಡಲ ಯೋಗವರ್ಣನಮಪ್ಪವಾಶ್ವಾಸಂ| ಕಂದಪದ್ಯ—
ಸಿಂಧು ಬಂಧನನ ವಿದ್ವಟ್
ಸಿಂಧುರಪಂಚಯನ ಮೃಗೇಂದ್ರನಡಿದಾವರೆಯಂ
ವಂದಿಸಿ ಮನದೊಳ್ವೇಳ್ವೆಂ
ಸಂಧಿವಿಕಲ್ಪಾಕ್ಯಮೆನಿಪ ನೀತಿಯನಿದರೊಳ್ ॥
ಅದೆಂತನೆ ಕಂದಪದ್ಯ ॥ ನಂದಕಮುರು ಕೀರ್ತಿಲತಾ
ಕಂದಕಮುರಿದರ್ಪಿತಾರಿ ಭೂಭೃದ್ವನಿತಾ
ಕ್ರಂದಕಯಾಶ್ರುತ ವಿಬುಧ
ನಂದಕಮಿಖಿಳ್ಗಮವನಿ ಸಂಕಂದನಾ ॥
ಯಿತಿ ಕಾಮಂದಕೀ ನೀತಿ ಸಂಪೂರ್ಣ.

ವಿಷಯ : ಅರ್ಥಶಾಸ್ತ್ರ (ನೀತಿ).

ವಿಶೇಷ : ಮೋಡಿಲಿಪಿ.

272

ಕೆ. ಬಿ. ೩೦೬	**ಕಾಮಶಾಸ್ತ್ರ**	ಗದ್ಯ
೮" × ೬.೪"	?	?
೧–೨೬ ಪತ್ರ	೩೩ ಪಂಕ್ತಿ	೩೫ ಅಕ್ಷರ

ಆದಿ : ಕಾಮಶಾಸ್ತ್ರ ಬರೆಯುವುದಕ್ಕೆ ಶುಭಮಸ್ತು ॥ × × ×

ಟೀಕು ॥ ಕಳಾಶಾಸ್ತ್ರ ಪುಟ್ಟಿದ ಮೂಲ| ಈ ಶಾಸ್ತ್ರ ಪ್ರಯೋಜನ ವಿವರ ಪದ್ಮಿನಿ ಮೊದಲಾದ ನಾಲ್ಕು ಜಾತಿ ಸ್ತ್ರೀಯರುಗಳ ಲಕ್ಷಣಗಳು ॥ ಯರಡನೆ ಅಧ್ಯಾಯದಲ್ಲಿ ಶ್ರೀಯುತರುಗಳ ಕಳಾಸ್ಥಾನಂಗಳು.

ಅಂತ್ಯ : ಆತಂಗೆ ಅಗಸ್ತ್ಯವಿದ್ಯಾಧರನೆಂಬ ಕವಿಯ ಮಗಂ। ಯಿತಿ ಸಿಹ್ಮಳ ಪರ ಕ್ರೀಯ್ಯ ಮಹಾಪಂಡಿತ ಮಹಾಕವಿ। ನಿರವದ್ಯ ಗದ್ಯವಿದ್ಯಾಧರತನಯ ಕಕೋಕ ಮಹಾಕವಿವಿರಚಿತೇ ಕಮಳಾ ರತಿರಹಸ್ಯಶಾಸ್ತ್ರೇ ಸರ್ವರತಿ ಯೋಗಾಧಿಕಾರೋ ನಾಮ ಏಕಾದಶಾಧ್ಯಾಯಃ ॥ಕಾಮಶಾಸ್ತ್ರ ಸಂಪೂರ್ನ ಕಂನಡ ಟೀಕು ಗ್ರಂಥಕಕೋಕ ಕವಿ ವಿರಚಿತಾಯಃ ಮಂಗಳಮಹಾ.

ವಿಷಯ : ಕಾಮಶಾಸ್ತ್ರ.

ವಿಶೇಷ : ಮೋಡಿಲಿಪಿ, ಪುಸ್ತಕವು ಅತ್ಯಂತ ಶಿಥಿಲ.

273

ಕೆ. ಬಿ. ೪೬೨	**ಕಾಮಶಾಸ್ತ್ರ**	ಗದ್ಯ
೮.೩″ × ೬.೫″	?	?
೨೮೦ ಪುಟ	೧೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀ × × × ಕೊಕೊ ಕವಿ ವಿರಚಿತವಾದ ಕಾಮಶಾಸ್ತ್ರದ ಟೀಕು ಬರೆಯು ವುದಕ್ಕೆ ನಿರ್ವಿಘ್ನಮಸ್ತು.

ಕಳಾಶಾಸ್ತ್ರ ಪುಟ್ಟಿದ ಮೂಲ | ಈ ಶಾಸ್ತ್ರದ ಪ್ರಯೋಜನ ಪದ್ಮಿನಿ ಮೊದಲಾದ ನಾಲ್ಕು ಜಾತಿ ಸ್ತ್ರೀಯರ ಲಕ್ಷಣಂಗಳು | ಎರಡನೆ ಅಧ್ಯಾಯದಲ್ಲಿ। ಸ್ತ್ರೀಯರು ಗಳ ಕಳಾಸ್ಥಾನಂಗಳು.

ಅಂತ್ಯ : ಅಳಶುಂಠಿ ಆಷಾಢಿಬೇರು ಇವುಗಳ ಚೂರ್ಣವಂ ಮಾಡಿ ಜೇನುತುಪ್ಪ ಕೆಳಗೆ ಮೇಲೆ ಹಾಕಿ ತೆಗೆದುಕೊಳ್ಳುವುದು ಸರ್ವ ಸಿದ್ಧಿ। × × × ಪದ್ಯ ಗದ್ಯ ವಿದ್ಯಾಧರತನಯ ಕಕೋಕ ಕವಿ ವಿರಚಿತೇ ಕಮಳಾ ರತಿರಹಸ್ಯ ಶಾಸ್ತ್ರೇ ಸರ್ವ ರತಿ ಯೋಗಾಧಿಕಾರೋ ನಾಮ ಏಕಾದಶೋಧ್ಯಾಯಃ (ಸಂಪೂರ್ಣವು).

ವಿಷಯ : ಕಾಮಶಾಸ್ತ್ರ.

ವಿಶೇಷ : ಪ್ರತಿಯ ಮೊದಲಲ್ಲಿ "ಲೈಬ್ರೇರಿಗೆ ಶೇರಿದ ಕೆ. ಬಿ. ೩೦೬ ನೆ ನಂಬರ್ ಪುಸ್ತಕದ ಕಾಪೀ" ಎಂದಿದೆ.

274

ಕೆ. ಬಿ. ೩೨೮/೨	ಕಾಯೆಪುರಿವಾಸ ಪ್ರಕರಣ	ಗದ್ಯ
೭" × ೬"	?	?
೮—೧೩ ಪತ್ರ	೧೮ ಪಂಕ್ತಿ	೧೯ ಅಕ್ಷರ

ಆದಿ : ಶ್ರೀ ಪರಮೇಶ್ವರನು ತಂನ ಲೀಲಾವಿನೋದದಿಂದ ಐಕಮೇವದ್ವಿತಿ ಇಲ್ಲೆಂಬಾ ಪರಬ್ರಹ್ಮಸ್ವರೂಪನಾಗಿ ಮುಗುಳುನಗೆಯಂ ನಕ್ಕು ಆ ಮುಗುಳುನಗೆಯಿಂದ ಪರಃಭಾವದೇವಿ ಕಲ್ಪಿಶಿ ಆ ಪರಾಂಬದೇವಿಯು ಯಿಾ ಬ್ರಹ್ಮಾಂಡವನ್ನು ಕಲ್ಪಿಸಿದಳು. ಯಿಾ ಬ್ರಹ್ಮಾಂಡದೊಳಗಣ ಸೃಷ್ಟಿಯಂನು ತೋರಬೇಕೂ ಯಂದೂ ಆ ಮಹಾಪಾರ್ವತಿಯು ಶ್ರೀ ಪರಮೇಶ್ವರಗೆ ಬಿಂನಹಂ ಮಾಡಲಾಗಿ ಶ್ರೀ ಪರಮೇಶ್ವರನು ಯಲೆ ಪಾರ್ವತಿಯೇ ಕೇಳು ಯಂದು ಆ ಬ್ರಹ್ಮಾಂಡ ದೊಳಗಣ ಸೃಷ್ಟಿಯಂನ್ನು ಯಿಾ ಪಿಂಡಾಂಡದಲ್ಲಿ ತೋರಿಸುತ್ತಾಯಿದ್ದಾನೂ. ಕಾಯಪುರಿ ವಿವರಾ ಅದು ಹ್ಯಾಗೆ ಯೆಂದರೆ ಮೂಡಣ ಆಧಾರವಾಗಿ ಕಾಯಾ ಪುರಿಯಂಬ ಪಟ್ಟಣವಿಹುದು. ಚತುರ್ದಶ ಭುವನಂಗಳೆಂಬಾ ಹದಿನಾಲ್ಕು ಲೋಕಗಳು.

ಅಂತ್ಯ : ಅಷ್ಟಮದಂಗಳೂ ಯಂಬ ಆನೆಗಳೂ ಗರಿಯ ಬಾಗಿಲ ಮುಚ್ಚಿ ಆ ಪರಬ್ರಹ್ಮವು ಆ ಗವಿಯಲ್ಲಿ ಇರುತ್ತಿರಲೂ ಜನರು ಮದಾಂಧರಾಗಿ ತಥ್ಯ ಮಿಥ್ಯವ ಮರತು ನಿತ್ಯವೆನಿಸಿಕ್ಕೊಂಡು ಸತ್ಯವಂ ಮರತು ಮಿಥ್ಯವ ಸ್ಥಿರ ವೆಂದುಕೊಂಡು ಯಿಾ ಪ್ರಕಾರದಲ್ಲಿ ಒಬ್ಬರಿಗೊಬ್ಬರು ಸಂಮತವಿಲ್ಲದೆ ವಬನವೆ ....ಲೆವ....ಸ....ಂತ್ರರಾಗಿ ಇದ್ದುಕ್ಕೊಂಡು ಇಹರೂ ಯಂಬ ಯಿತ್ಯಾದಿ ಪಿಂಡಾಂಡ ವಿಸ್ತಾರ ವಿಸ್ತಾರ ಲಕ್ಷಣವಂನ್ನುತಿ ಮಹಾಪರಮೇಶ್ವರನೂ ಪಾರ್ವತಿಗೆ ನಿರೂಪಿಸಿದ ಕಾಯಾಪುರಿ ಪ್ರಕರಣ ಸಮಾಪ್ತ ಮಂಗಳಮಹಾಶ್ರೀ.

ವಿಷಯ : ವೀರಶೈವ ವೇದಾಂತ.

ವಿಶೇಷ : ಪತ್ರಗಳು ಹರಿದಿವೆ. ಈ ಪುಸ್ತಕದಲ್ಲಿ ಅಕ್ಷರದ ಚೌಪದ, ಗುರುಶಿಷ್ಯರ ಸಂವಾದ ಎಂಬ ಕೃತಿಗಳೂ ಇವೆ.

275

ಕೆ. ೧೬೯/೨೨ ಕಾರಣಾಗಮ ವಾರ್ಧಕಷಟ್ಪದಿ
೯.೬" × ೨" ಕಲ್ಯಾಣದಸ್ವಾಮಿ ಸು. ೧೫೦೦
೧೧೫–೧೧೯ ಪತ್ರ ೧೦ ಪಂಕ್ತಿ ೫೦ ಅಕ್ಷರ

ಆದಿ : ಕಲ್ಯಾಣದ ಸ್ವಾಮಿಗಳು ಕಾರಣಾಗಮದ ಗಂಥವನು ಕಂನಡದ ವಾರ್ಧಿಕ ಪದಂಗಳೂ ||

ಪಲ್ಲ || ಶ್ರೀಮದಗನಂದನಗೆ ಸೋಮಶೇಖರನೊರೆದ
ನಾ ಮಹಾಕಾರಣಾಗಮದಿ ಜಂಗಮದಿರವ
ಪ್ರೇಮದಿಂದದನು ಕಂನಡಿಸುವೆನು ಸಜ್ಜನರ್ಕ್ಷೇಮದಿಂ ಲಾಲಿಸುವದು ||

ಪದ || ಸಕಲಲೋಕಾರಾಧ್ಯ ಸುಕರನಿಗಮಾಭೇದ್ಯ
ಮಕರಕೇತನ ವೈರಿಯ ಮನುಮಯ ಮಹಾಶೂರಿ
ನಿಕರ ಸಂನುತಿಪಾತ್ರ ನಿರ್ಮ್ಮಲಕತಗಾತ್ರ ನವ್ಯ ಫಣಿಯಜ್ಞಸೂತ್ರ
ಅಕುಟಿಲಜನಪ್ರೇಮ ಅಸಮಾಕ್ಷವರಸೋಮ
ಶಕಲಭೂಷಿತಮೌಲಿ ಶರಣಗಣ ಪರಿಪಾಲಿ
ಪ್ರಕಟಮಹಿಮೋತ್ತುಂಗ ಪರಮ ಕರುಣಾಪಾಂಗ ಪಾಹಿಮಾಂಮಿಷ್ಟ
ಲಿಂಗ || ೧ ||

ಅಂತ್ಯ : ಯಿಂತನಾದಿಯ ಜಂಗಮದ ಲಕ್ಷಣಂಗಳನು
ಕಂತುಹರನೊಲಿದುಮಾಕಾಂತೆಯೊಡನುಸಿರ್ದ್ದನಿದ
ಸಂತೋಷದಿಂದೋದಿದವರ ಕೇಳ್ದವರು ನಿಶ್ಚಿಂತೆಯಿಂ ಪಠಿಸಿದವರೂ
ಮುಂತೆ ನಿತ್ಯಾನಂದ ಸರದಿಯೊಳಗೋಲಾಡಿ
ಅಂತ್ಯದೊಳು ಶಿವಪದವನೆಯ್ದುವರು ಸತ್ಯವಿದು
ಯಿಂತಿದರ ಪರಿಗಣನೆ ಪಂಚವಿಂಶತಿಯ ಪದಗಳಿಂ ತೋರುತಿಹುದೊ
ಲವಿನಿಂ || ೨೫ ||

ಕಾರಣಾಗಮದ ವಾರ್ಧಿಕ ಪದಂಗಳು ಸಂಪೂರ್ನ್ನ ಮಂಗಳಮಹಾಶ್ರೀ.

ವಿಷಯ : ಕಾರಣಾಗಮದಂತೆ ಅನಾದಿ ಜಂಗಮದ ಲಕ್ಷಣ.

ವಿಶೇಷ : ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನಲ್ಲಿ ಷಟ್ಸ್ಥಲ ತಿಲಕದ ಸಾಂಧ್ಯ, ವೈರಾಗ್ಯಷಟ್ಪದಿಗಳೆಂಬ ಇನ್ನೂ ೨೩ ಗ್ರಂಥಗಳಿವೆ. ಕ್ರಮಾಂಕದಲ್ಲಿ ವ್ಯತ್ಯಾಸ ಇದೆ.

276

ಕೆ. ೧೮೪/೧೩	ಕಾಲಜ್ಞಾನ	ಗದ್ಯ
೧೩.೫" × ೧.೮"	ಕೃಷ್ಣಮಾಚಾರ್ಯ	?
೨೫೧–೨೫೪ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಕೃಷ್ಣಮಾಚಾರ್ಯರು ನಿರೂಪಿಸಿದ ಕಾಲಜ್ಞಾನ ॥ ದೇವಕಪಟನಾಟಕ ಸೂತ್ರ ದಾರಿಯಾಗಿ ಕೃತಿಯುಗ ತ್ರೇತಾಯುಗ ದ್ವಾಪರಯುಗಗಳು ಸಂದ ಬಳಿಕ ಕಲಿಯುಗಪ್ರಮಾಣ ನಾಲ್ಕುಲಕ್ಷಊ ಮೂವ್ವತ್ತುಯೆರಡು ಸಾವಿರ ವರುಷ ನಡವ ಹಾಗೆ ಮಾಡಿಯಿದ್ದೀರಿ ॥

ಅಂತ್ಯ : ತಾನು ಹೇಳಿದ ಕಾಲಜ್ಞಾನ ತಪ್ಪುದಿಲ್ಲ ತಂಮ್ಮನಾರಣ್ಯನ ಆಣೆ। ಅನಾಧಿ ಪತಿ ಸಿಂಹಗಿರಿ ಕೃಷ್ಣಮಾಚಾರ್ಯರು ನಿರೂಪಿಸಿದ ಕಾಲಜ್ಞಾನ ಸಂಪೂರ್ಣ ಮಂಗಳಮಹಾ ಶ್ರೀ........ಲೇಖವಾಗಿ ೧೮ ಪುರಾಣಕ್ಕೆ ಯಿರುವ ವಾಲೆ ೩೧೪ ಯಾಚೆಗೆ ಬರದ ವಾಲೆ ವಿವರಾ। ಶಂಕರಾಚಾರ್ಯರ ನಿರೂಪಣ ಮಾನಸಪೂಜೆ ಗ್ರಂಥಕ್ಕೆ ವಾಲೆ ೩, ಶಿವಸ್ತುತಿ ಪದಗಳಿಗೆ ವಾಲೆ ೩, ಸದ್ಗುರುರಹಸ್ಯ........... ಲೆ ೧೦, ಗುರುಶಿಷ್ಯವಾದದ ಬಗೆ ೧ ಕ್ಕೆ ವಾಲೆ ೩, ಕನ್ನಡಭಾರತದಲ್ಲಿ ಇಂದ್ರ ನೈರಾವತ ಬಗೆ ೧ ಕ್ಕೆ ವಾಲೆ ೧೦, ಭಾರತದಲ್ಲಿ ರಾಜನೀತಿ ಬಗೆ ೧ ಕ್ಕೆ ವಾಲೆ ೯, ಕೃಷ್ಣಮಾಚಾರ್ಯರ ಕಾಲಜ್ಞಾನದ ಬಗೆ ೧ ಕ್ಕೆ ವಾಲೆ ೨ ಅಂತು ಈಚೆಗೆ ಬರೆದ ಶಾಸ್ತ್ರ ೭ ಕ್ಕೆ ವಾಲೆ ೪೦ ಉಭಯಂ ಪ್ರಾಕು ಸಹಾ ಶಾಸ್ತ್ರ ಬಗೆ ೨೫ ಕ್ಕೆ ಯೀ ಪುಸ್ತಕ ೧ ಕ್ಕೆ ಯಿರುವ ಬರೆದ ವಾಲೆ ೩೫೪ ಚೆನ್ನಾಗಿ ನೋಡಿ ಬರೆದು ಯಿರುವಂಥಾದ್ದರಿಂದ ಯೀ ಕೃತಿಗೆ ಆಚಂದ್ರಾರ್ಕವಾಗಿ ಸದ್ಗುರು ಸಿದ್ಧಿವಿನಾ ಯಕರು ಬಸವರಾಜರು ಸಾಂಬಶಿವ ಷಣ್ಮುಖರು ಭದ್ರಕಾಳಿಮನೋಹರ ಶ್ರೀ ಪಾರ್ವತಿ ಕ್ರುಪೆಯಿರಬೇಕೆಂಬ ಗಣಂಗಳ ಆಶೀರ್ವಾದ ಕಟಾಕ್ಷಸಿದ್ಧಿರಸ್ತು ॥

ವಿಶ್ವೇಶವಿಶ್ವವಿಲಯಸ್ಥಿತಿ ಜನ್ಮಹೇತೊ ।
ವಿಶ್ವೈಕವಂದ್ಯ ಶಿವಶಾಶ್ವತ ವಿಶ್ವರೂಪಾ ॥
ವಿಧ್ವಸ್ತಕಾಲ ಭಯವೀತ ಗುಣಾವಭಾಷಾ ।
ಸ್ವಾಮಿನ್ ಮಹೇಶ ಮಯಿದೇಹಿ ಕೃಪಾಕಟಾಕ್ಷಂ ॥
ಗೋವಿಂದ ಮಾಧವ ಮುಕುಂದ ಹರೆ ಮುರಾರೆ ।
ಶಂಭೋ ಶಿವೇಶ ಶಿಶೇಖರ ಶೂಲಪಾಣೇ ॥
ದಾಮೋದರಾಚ್ಯುತ ಜನಾರ್ದನ ವಾಸುದೇವಾ ।
ತ್ಯಾಜ್ಯಭಟಾಯಯಿತಿ ಸಂತತಮಾಮನಂತಿ ॥

ಯೀಪುಸ್ತಕದಲ್ಲಿ ಯಿರುವ ಬರೆದ ವ್ಯಾಲಿಲೇಖವಾಲೆ ೧೫೪ಕ್ಕೆ ಅಷ್ಟಕದ ವಾಲೆಗೆ

ಈಚೆಗೆ ತೆಗೆದುಕೊಂಡದ್ದರಿಂದಾ ಯಿಗ ಯಿ ಪುಸ್ತಕದಲ್ಲಿ ಬರೆದು ಕಪ್ಪುನಿಟ್ಟು ಯಿರುವ ವಾಲೆ ೨೫೩ ನಿಧಾನವಾಗಿದೆ. ಶ್ರೀನಿರ್ವಿಘ್ನದಾಯಕನೆ ನಮಃ|| ಶ್ರೀ ಸರ್ವಸಿದ್ಧಿವಿನಾಯಕರೆ ನಮಃ| ಯಿ ಪುಸ್ತಕದಲ್ಲಿ ತುಂಬಾ ಬರೆದಿರುವಂಥಾ ಕೃತಿಗಳವಿವರಾ||ಮೊದಲಲ್ಲಿ ಅನುಭವಾಮೃತ ೧, ದಕ್ಷಿಣಾಮೂರ್ತಿಸ್ತೋತ್ರ೧, ಗಜಾರಣ್ಯಕ್ಷೇತ್ರಮಹಿಮೆ೧, ಯೀಶ್ವರಗೀತೆ೧, ರಾಮಗೀತೆ೧, ನಲಿಸ್ತೋತ್ರ೧, ಸರಸ್ವತೀಸ್ತೋತ್ರ ೧, ರುಗ್ವೇದಸ್ತೋತ್ರ ೧, ಚಾತುರ್ನದಿ ಸ್ತೋತ್ರ ೧, ಅಜ್ಞಾ ಪದ್ಧತಿ ೧, ವಿಶ್ವಪದ್ಧತಿ ೧, ಮಾನಶಲಾದಿ ಪದ್ಧತಿ ೧, ಸಜ್ಜನಪದ್ಧತಿ ೧, ಪರೋಪಕಾರ ಪದ್ಧತಿ ೧, ಕ್ರಿಯಾಪದ್ಧತಿ ೧, ಜೀವಪದ್ಧತಿ ೧, ಸುಭಾಷಿತ ಪದ್ಧತಿ ೧, ಕಾಳಿದಾಸರ ಸ್ತುತಿ ೧, ಶಿವಸ್ತೋತ್ರ ೧, ಬಾಲರಾಮಾಯಣ ೧, ಕಿರಾತಾರ್ಜುನರ ಕಾಳಗ ೧, ಅಂಗದ ಸಂಧಾನ ೧, ಮತ್ತಂ ಸುಭಾಷಿತ ೧, ಸೋಮಾರಾಧ್ಯಶತಕ ೧, ರತ್ನಾಕರಶತಕ ೧, ಅರವತ್ತುಮುರು ಮಂದಿ ಶಿವ ಪ್ರಮಥಗಣಂಗಳ ಮೇಲಣ ಸ್ತುತಿ ೧, ಶಂಕರಾಚಾರ್ಯರ ನಿರೂಪಣೆ ಮಾನಸ ಪೂಜೆ ಶಾಸ್ತ್ರ ೧, ಗುರುಶಿಷ್ಯವಾದ ೧, ಶಿವಕೀರ್ತನೆ ೧, ಸದ್ಗುರುರಹಸ್ಯ ೧, ಭಾರತದಲಿ ರಾಜನೀತಿ, ಯಿಂದ್ರ ಐರಾವತ ೧, ಕೃಷ್ಣಮಾಚಾರ್ಯರ ಕಾಲ ಜ್ಞಾನ ೧|| ಅಂತು ಕಾವ್ಯ ೩೩ ಕ್ಕಂ ಮಂಗಳ ಮಹಾಶ್ರೀ| ಶ್ರೀ ಸರ್ವಸಿದ್ಧಿ ವಿನಾಯಕರೆನ್ನಮಃ| ಶ್ರೀ ಶಿವಶಂಭೋ ಮಹಾದೇವನೆ ನಮಃ| ಶ್ರೀ ಕಂಚೀ ಪುರದ ಮಾದಪ್ಪ ಮತ್ತಿತಾಳ ಮಾದಪ್ಪ ಮಲೆಮಾದಪ್ಪ ಕೊಂಗದ ಮಲ್ಲಪ್ಪ ಚಿಕ್ಕನಹಳ್ಳಿ ಮಲ್ಲಪ್ಪ, ಶ್ರೀ ಶಂಭುಲಿಂಗ ನಿಜಗುಣಾರ್ಯರ ಚರಣಾರವಿಂದಗಳೇ ಗತಿ ||

ವಿಷಯ : ಕಾಲಜ್ಞಾನ. (ದೇಶದಲ್ಲಿ ಮುಂದಾಗುವ ಫಲಗಳ ವಿವರ)

ವಿಶೇಷ : ಇದರೊಂದಿಗೆ ಮೇಲೆ ಹೇಳಿರುವ ೩೩ ಗ್ರಂಥಗಳ ಪೈಕಿ ಕಿರಾತಾರ್ಜುನರ ಕಾಳಗ ಆದಿಯಾಗಿ ಇತರ ೧೨ ಗ್ರಂಥಗಳಿವೆ.

277

ಕೆ.ಬಿ. ೧೩೦/೧	ಕಾಲಜ್ಞಾನ	ಗದ್ಯ
೭.೯″×೬.೪″	ಕೃಷ್ಣಮಾಚಾರ್ಯ	?
೧–೪ ಪತ್ರ	೧೨ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ ಕೃಷ್ಣಮಾಚಾರ್ಯರು ನಿರೂಪಿಸಿದ ಕಾಲಜ್ಞಾನ.

ದೇವಕಪಟನಾಟಕ ಸೂತ್ರಧಾರಿಯಾಗಿ–ಕೃತಿಯುಗ–ತ್ರೇತಾಯುಗ ದ್ವಾಪರಾ
ಯುಗಗಳು ಸಂದ ಬಳಿಕ| ಕಲಿಯುಗ ಪ್ರಮಾಣ ನಾಲ್ಕು ಲಕ್ಷವು
ಮೂವತ್ತುಯರಡು ಸಾವಿರ ವರುಷ ನಡವ ಹಾಗೆ ಮಾಡಿ ಇದ್ಧೀರಿ|

ಅಂತ್ಯ : ಈ ರೀತಿಯಲ್ಲಿ ತಾನು ಹೇಳಿದ ಕಾಲಜ್ಞಾನ ತಪ್ಪುವದಿಲ್ಲ। ತಮ್ಮ ನಾರಣೈಯ್ಯನ ಆಣೆ | ಅನಾಧಿಪತಿ ಸಿಂಹಗಿರಿ ಕೃಷ್ಣಮಾಚಾರ್ಯರು ನಿರೂಪಿಸಿದ ಕಾಲಜ್ಞಾನ ಸಂಪೂರ್ನ್ಣ ಮಂಗಳ ಮಹಾಶ್ರೀ ||

ವಿಷಯ : ಕಾಲಜ್ಞಾನ. (ದೇಶದಲ್ಲಿ ಮುಂದಾಗುವ ಫಲಗಳ ವಿವರ)

ವಿಶೇಷ : ಇದರೊಂದಿಗೆ ಅರವತ್ತುಮೂರು ಪುರಾತನರ ಶ್ರೀವಿಧಿ ಎಂಬ ಗ್ರಂಥವೂ ಇದೆ.

278

ಕೆ. ೨೧೫	ಕಾಲಜ್ಞಾನ	ಗದ್ಯ
೧೨.೬" × ೧·೩"	?	?
೫೮+೯೩ ಪತ್ರ	೧೦ ಪಂಕ್ತಿ	೭೦ ಅಕ್ಷರ

ಆದಿ : ಬದರಿಕಾಶ್ರಮದಲ್ಲಿ ಶ್ರೀಮನ್ನಾರಾಯಣನೆ ವ್ಯಾಸಾದಿಗಳಿಗೆ....ಟ್ಟದ್ದು ಕಾಲಜ್ಞಾನ × × × ಕಾಶಿ ವಿಶ್ವೇಶ್ವರಸ್ವಾಮಿವಾರಿಯೊಕ್ಕ ಸಮ್ಮುಖ ಸ್ವಾಮಿಯ್ಯೆನ ವೀರ × × × (೧೧ ನೆಯ ಪತ್ರದಿಂದ) ಕಾಲಜ್ಞಾನಯನು ಕಾರಣ ಹೇಳಿಮಿಾಚೋದ್ಯಾ ಶಿವ ತಾನೆ ಮರ್ತ್ಯಕ್ಕೆ ಬಂದು ಕೊಟ್ಟೂರೊಳಗೆ ನಿಂದು....ಣ ಹೇಳಿರೊ

ಅಂತ್ಯ : ಪಾಂಚಾಲ ಕುಲಮೆಲ್ಲಿ ಪ್ರಖ್ಯಾತ ಮ್ಯೆಯುನಿ ಭಾನುತೇಜಲು ಪಟ್ಟಮೆಕ್ಕಿನಿದು ಪಂಚಮುಖ ಬ್ರಹ್ಮ ಪಾರುಪತ್ಯಮುಜೇಸಿ ಕುರಂಜ್ಯೋತಿಧ್ಯಾನಮುನ ಚೆಸಿರುಮಾ ಹರಿಗೋವಿಂದ ಹರಿಗೋವಿಂದ ಕಾಳಿದಾಸ ಕಾಲಜ್ಞಾನ ಸಂಪೂರ್ಣ.

ವಿಷಯ : ಕಾಲಜ್ಞಾನ. (ದೇಶದಲ್ಲಿ ಮುಂದಾಗುವ ಫಲಗಳ ವಿವರ)

ವಿಶೇಷ : ಘಟ್ಟಿವಾಳಯ್ಯ, ನಂದಿಧ್ವಜ, ಅಭಿನವಪುರಂದರದಾಸ, ನೀಲಲೋಚನೆ, ಉಗ್ರಾಣದ ರುದ್ರಯ್ಯ, ವೀರವಸಂತ ಮೊದಲಾದವರ ಹಲವು ಕಾಲಜ್ಞಾಗಳ ಸಂಗ್ರಹ. ಗ್ರಂಥದ ಆದಿಯಲ್ಲಿ ಕ್ರಮಾಂಕವಿಲ್ಲದ ಮೂರು ಪತ್ರಗಳಲ್ಲಿ ಶ್ರೀಕೃಷ್ಣ ನೃಪನ ಜಾತಕದ ಅಷ್ಟಕವರ್ಗ ವಿವರವಿದೆ. ೧ ರಿಂದ ೧೦ ಮತ್ತು ಕೊನೆಯ ನಾಲ್ಕು ಪತ್ರ ಗ್ರಂಥಲಿಪಿಯಲ್ಲಿ ತೆಲುಗು ಭಾಷೆಯಲ್ಲಿವೆ. ೧೧ ರಿಂದ ೫೮ ಮತ್ತು

೩೫ ರಿಂದ ೯೩ ಪತ್ರ ಗ್ರಂಥಲಿಪಿಯಲ್ಲಿದ್ದು ಕನ್ನಡ ಭಾಷೆಯಾಗಿದೆ. ಮತ್ತೆ ೧ ರಿಂದ ೩೪ ಪತ್ರ ಕನ್ನಡಲಿಪಿ ಕನ್ನಡ ಭಾಷೆಯಲ್ಲಿವೆ. ಗ್ರಂಥ ಸ್ವಲ್ಪ ಶಿಥಿಲ.

279

ಕೆ. ೨೫೭/೧	ಕಾಲಜ್ಞಾನ	ಹಾಡು
೧೫.೯" × ೧.೫"	ಚನ್ನಬಸವಣ್ಣ	?
೧–೧೯ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ: ಶ್ರೀ ಗಣಾದ್ಧಿಪತಯೇಂನಃ × × × ಶ್ರೀ ಗುರು ಚಂನಬಸವಂಣನವರು ನಿರುಪಿಸಿದಂತಾ ಕಾಲಾಗ್ನಾನವ ಭರೆಯುವುಧಕ್ಕೆ ನಿರ್ವಿಗ್ನಾನಮಸ್ತು। ವಚನಾ॥ ಮುಂದೆ ಚಂನಭಸವಂಣನವರು ನಿರುಪಿಶಿಥ ಕಾಲಗ್ನಾನ ವಚನಾ ಪೇಳುತಿರ್ಧರದೆಂತೆನೆ॥

ಜಂಪೆ॥ ಸಿದ್ಧರಾಮ್ಯೆಯುಗಳೆ
ರುದ್ರಮುನಿಶ್ವಾಮಿಗಳೆ
ಯುದ್ಧ ಶರಣರು ಕೇಳಿ ಸಿಧಾಂತ ಪದವಾ॥

ಅಂತ್ಯ: ....ದೊಳಗೆ ತಿಳಿದುಕೊಂಬುದು
ಭಕ್ತಶರಣರು ಮಹೇಶ ಮಹಿಮರು
ಫಾಲಿಸೆಮುಗಪ್ಪಣೆಯನೆಂಡರು ಯರಗಿ ಚಂನ್ನಣಾ ॥೨೦॥
ಕಾಲಗ್ನಾ್ಯನದ ವಾಕ್ಯ ಸಂಪೂರ್ನ ಮಂಗಳಮಹಾ॥ ಯಂದು ಆನಂದ ಸಂವತ್ಸರದ ಭಾದ್ರಪತ ಶುಧ್ಧ ೧೩॥ ಯು ಆದಿವಾರ ಚಂನಬಸವಂಣನವರು ನಿರೂಪಿಶಿದಂತ ಕಾಲಗ್ನೀನವೂ ಸಂಪೂರ್ನ ಮಂಗಳಮಹಾ॥ ಶ್ರೀ

ವಿಷಯ: ಕಲಿಯುಗದಲ್ಲಿ ನಡೆಯುವ ಶುಭಾಶುಭ ಸೂಚನೆಗಳ ವಿವರ.

ವಿಶೇಷ: ಪ್ರತಿಯು ಹುಳುಗಳಿಂದಾದ ರಂಧ್ರಗಳೊಂದಿಗೆ ಕೂಡಿದೆ. ಇದರಲ್ಲಿ ಗ್ರಂಥಾಂತ್ಯದಲ್ಲಿ ವಿವರಿಸಿರುವ ಸಂವತ್ಸರ ಮಾಸ ತಿಥಿ ವಾರಗಳಿಗೆ ಕ್ರಿ. ಶ. ೧೩೭೪ ನೆಯ ಇಸವಿ ಆಗಸ್ಟ್ ಮಾಹೆ ೨೦ ನೆಯ ದಿನಾಂಕವಾಗುತ್ತದೆ. ಈ ಗ್ರಂಥಾನಂತರ ಈ ಪುಸ್ತಕದಲ್ಲಿಯೇ (ರುದ್ರಮುನಿಸ್ವಾಮಿಗಳ) ಕಾಲಜ್ಞಾನ, (ಕರಸ್ಥಲದ ನಾಗಲಿಂಗಸ್ವಾಮಿಗಳ) ಕಾಲಜ್ಞಾನ, (ಎಮ್ಮೆಬಸವಣ್ಣನವರ) ಕಾಲಜ್ಞಾನ, (ಚನ್ನಬಸವೇಶ್ವರದೇವರ) ಕಾಲಜ್ಞಾನ (ರುದ್ರಮುನಿಸ್ವಾಮಿಗಳ) ಕಾಲಜ್ಞಾನ ಗ್ರಂಥಗಳೂ ಸಹ ಇವೆ.

280

ಕೆ.೨೫೭/೨	ಕಾಲಜ್ಞಾನ	ಹಾಡು
೧೫.೯" × ೧.೫"	?	?
೧೯–೨೦ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ : ಶ್ರೀಗುರುವೇ ಗತಿ ॥ ರುದ್ರಮುನಿಸ್ವಾಮಿಗಳು ನಿರೂಪಿಸಿದಂತಾ ಕಾಲಜ್ಞಾನ
ಯೆಂದಿಗಾಗುವದೆಂದು ಕುಂದು ನುಡಿಯಲು ಬೇಡಿ
ನಂದನದ ಸಂವತ್ಸರಥ ಮುಂದೆ ಪಿಕಬಾಲಕನ
ಕೊಂದಮೇರ್ಲ್ಲ ವರುಷ ೧೫ ಸಂದಾಉ ಉತ್ತರ ದಿಕ್ಕಿನಲ್ಲಿ ನವಕೋಟಿದಂಡ
ಕಂದು ಹಪ್ಪೆಯ ಸುತ್ತ ನೆರಶುವನು ನೂರಕೊಬ್ಬ
ನಿಂದಾವಾಭಾಲೆ............ಶರಣರು ಮುನ್ನ ಪೇಳ್ವರು ಕಾಲಾಗ್ನಾನ ದಂಡ
ವನ್ನು ಕೇಳಿರಂಣಾ ॥೧॥

ಅಂತ್ಯ : ಯಿರುಳ್ಳೈದು ಗ್ರ್ರಾಹ ತಾರೆ ಕುಡಿದುದೆ ಸಾಕ್ಷಿ ಮುಂ
ದಿರುವಾ ಮಾಗಕ್ಕೆ ಧೂಮಕೇತು ಮೂಡುವದೂ
ಯ್ಯರಡರ ನಡುವೆ ಉಲುವೊರದಿ ನೃಪನಿಗೆ ಜಯವೆಂಧು
ತರುಣಿ ಕೇಳ್ ಕಿಂನ್ನಾರೇಶ ಶಿಥರಾಮ್ಯೆಯನ
ವರ ಕಾಲಗ್ನಾನ ಸಂಪುರ್ನ ಮಂಗಳಮಹಾ॥ ಶ್ರೀ

ವಿಷಯ : ಮುಂದಿನ ಕಾಲದಲ್ಲಿ ನಡೆಯುವ ಶುಭಾಶುಭಗಳ ಸೂಚನೆ.

ವಿಶೇಷ : ಪ್ರತಿಯು ಹುಳುಗಳಿಂದಾದ ರಂಧ್ರಗಳಿಂದ ಕೂಡಿದೆ. ಈ ಗ್ರಂಥ ಆದಿ ಅಂತ್ಯಗಳಲ್ಲಿರುವ ಕರ್ತೃಗಳ ಹೆಸರುಗಳಿಂದ ಇಂಥವರೇ ಗ್ರಂಥಕರ್ತೃವೆಂದು ಊಹಿಸಲು ಆಧಾರ ಸಾಲದ್ದಾಗಿದೆ. ಈ ಗ್ರಂಥಕ್ಕಿಂತ ಮುಂಚೆ ಈ ಪುಸ್ತಕ ದಲ್ಲಿಯೆ (ಚನ್ನಬಸವಣ್ಣನವರ) ಕಾಲಜ್ಞಾನ, ಈ ಗ್ರಂಥಾನಂತರ (ಕರಸ್ಥಲದ ನಾಗಲಿಂಗಸ್ವಾಮಿಗಳು ಹೇಳಿದ) ಕಾಲಜ್ಞಾನ, (ಎಮ್ಮೆಬಸವಣ್ಣನ) ಕಾಲ ಜ್ಞಾನ, (ಚನ್ನಬಸವಣ್ಣನವರ) ಕಾಲಜ್ಞಾನ, (ರುದ್ರಮುನಿಸ್ವಾಮಿಗಳ) ಕಾಲಜ್ಞಾನ ಗ್ರಂಥಗಳೂ ಇವೆ.

281

ಕೆ. ೨೫೭/೩	**ಕಾಲಜ್ಞಾನ**	ಹಾಡು
೧೫.೯″ × ೧.೫″	ಕರಸ್ಥಲದ ನಾಗಲಿಂಗ	ಸು. ೧೨೦೦
೨೦–೨೬ ಪತ್ರ	೬ ಪಂಕ್ತಿ	೬೦ ಅಕ್ಷರ

ಆದಿ: ಶ್ರೀ ಗುರುಬಸವಲಿಂಗಾಯನಮಃ ॥ ಕರಸ್ಥಲದ ನಾಗಲಿಂಗಾಶ್ವಮಿಗಳು ಹೇಳಿದಂತ ಕಾಲಗ್ನಾನಕ್ಕೆ ಶುಭಮಸ್ತು ॥

ಕದನಕ್ಕೆ ಮೊದಲಾದ ಶಿಥುರುರ ಕೇರಿಲ್ಲಿ
ಹುಯಿಲೋ ಡಂಗುರವಾ
ಮದವೆದ್ಧ ಆನೆ ಮಾಉತನೆದ್ದು ಕೊಲುತಿಥೆ
ಹೊಯಿಲೋ ಡಂಗುರವಾ ॥ ೧ ॥

ಅಂತ್ಯ : ಮಂಗಳವೆನಿಸುವ ಸಂಗಮೆಶ್ವರ ಶಿದ್ಧಾ ॥
ದಿಂ....ನಾ........ಗಾನೆನಂಗಾದೊಳುಹಿಗಾದೆ ನಾರಿದಾಧಿಂಮಿಸಾಲೆ ॥ ೨೫ ॥
ಕರಸ್ಥಲದ ನಾಗಲಿಂಗೈಯನವರ ಕಾಲಗ್ನಾನ ಸಂಪೂರ್ನಾ ಮಂಗಳಮಃ ॥

ವಿಷಯ : ಕಲಿಯುಗದ ಮುಂದಿನ ಆಗುಹೋಗುಗಳ ಸೂಚನೆ.

ವಿಶೇಷ : ಪ್ರತಿ ಹುಳುಗಳಿಂದ ತಿಂದು ರಂಧ್ರಗಳಾಗಿವೆ. ಈ ಕಟ್ಟಿನಲ್ಲಿ ಈ ಗ್ರಂಥಾರಂಭಕ್ಕಿಂತ ಮುಂಚೆ, (ಚನ್ನಬಸವಣ್ಣನ) ಕಾಲಜ್ಞಾನ, (ಎಮ್ಮೆಬಸವಣ್ಣನ) ಕಾಲಜ್ಞಾನ, (ಚನ್ನಬಸವೇಶ್ವರನ) ಕಾಲಜ್ಞಾನ, (ರುದ್ರಮುನಿಗಳ) ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

282

ಕೆ. ೨೫೭/೪	**ಕಾಲಜ್ಞಾನ**	ಹಾಡು
೧೫.೯″ × ೧.೫″	ಎಮ್ಮೆಬಸವಣ್ಣ	[redacted]
೨೬–೪೬ ಪತ್ರ	೬ ಪಂಕ್ತಿ	[redacted] ಅಕ್ಷರ

ಆದಿ: ಶ್ರೀ॥ ಗಣದ್ಧಿಪತೆಯಂ ನಮಃ ॥ ಯಂಮೆ ಬಸವಂಣನವರು ನಿರೂಪಿಶಿದಂತಾ ಕಾಲಗ್ನಾನಕ್ಕೆ ನಿರ್ವಿಗ್ನಾನಮಸ್ತು ॥ = ॥

ಹೊಯಲೋ ಡಂಗುರವಾ
ಯಿದ ಉಶಿಯುಂಭ ಪರವಾದಿಯು ಭಾಯಿಮೇಲೆ
ಉಯಲೋ ಡಂಗುರವಾ
ಹಬ್ಬಿದ ಬೇಟಕೆ ತೊಟ್ಟೇಲ ಕಟ್ಯಾರೂ ಹ್ಯೊ ॥

ಅಂತ್ಯ : ಭಕ್ತರು ನಂಮುವರು ನತ್ಯಾವ ತಪ್ಪರು
ಕರ್ತುf ಶಿವನ ಭೆರದರೂ ಸ........
ಕರ್ತುf ಶಿವನಾ ಭೆರಧಾರು ಶ್ಯರಣರ
ಭೃತ್ಯಾರಿಗಿಂನು ತೊತ್ತು ನಾನು ॥ ಸೂ ॥ ೫೧ ॥ ಯ

ವಿಷಯ : ಕಲಿಯುಗದಲ್ಲಿ ಮುಂದಿನ ಆಗುಹೋಗುಗಳ ಸೂಚನೆ.

ವಿಶೇಷ : ಪ್ರತಿಗಳನ್ನು ಹುಳುಗಳು ತಿಂದು ರಂಧ್ರಗಳಾಗಿವೆ. ಈ ಪುಸ್ತಕದಲ್ಲಿಯೇ ಈ ಗ್ರಂಥಾರಂಭಕ್ಕಿಂತ ಮೊದಲು (ಚನ್ನಬಸವಂಣನ) ಕಾಲಜ್ಞಾನ, (ಕರಸ್ಥಲದ ನಾಗಲಿಂಗನ) ಕಾಲಜ್ಞಾನ, (ಚನ್ನಬಸವೇಶ್ವರನ) ಕಾಲಜ್ಞಾನ, (ರುದ್ರಮುನಿಸ್ವಾಮಿಗಳ) ಕಾಲಜ್ಞಾನ ಸಹ ಇವೆ. ಈ ಗ್ರಂಥವಾದ ಮೇಲೆ ೪೭ ನೆಯ ಸಂಖ್ಯೆಯುಳ್ಳ ಪತ್ರದಲ್ಲಿ ಆಯನಿರ್ಣಯ ಗಣಿತವು ಆದಿ ಮತ್ತು ಅಂತ್ಯ ರಹಿತವಾಗಿದೆ.

283

ಕೆ. ೨೫೭/೫	ಕಾಲಜ್ಞಾನ	ವಚನ
೧೫.೯″ × ೧.೫″	ಚನ್ನಬಸವೇಶ್ವರ	೧೧೬೦
೪೮–೫೨ ಪತ್ರ	೭ ಪಂಕ್ತಿ	೫೦ ಅಕ್ಷರ

ಆದಿ : ಶ್ರೀ ಗಣಧಿಪತಯೇಂ ನಮಃ ॥ ಬಸವಲಿಂಗಯೇಂ ನಮಃ ॥ ಶ್ರೀ ಬಸವೇಕರಾದಂತಾ । ಮಂತ್ರ ಪಂಕಜಾಕ್ಷರಕ್ಕೆ ಉಪಮಂತ್ರ । ಕೋಟಾನುಕೋಟಿ ಮಂತ್ರಂಗಳಿಗೆ । ರಾಜವಡೆಯನಾದಂತ । ಪಂಚಾಕ್ಷರವೇ ಅಂಗವಾದಂತ ಚಂನ್ನ ಬಸವೇಶ್ವರದೇವರು ಪ್ರಮತರು । ಕಲ್ಯಾಣ ಬಿಟ್ಟುಹೋದಂತಾವರು । ಮತ್ತು ಕಲ್ಯಾಣ ಬಿಟ್ಟುಹೋದಂತಾವರು ಮರಳಿ ಬರುವ ಕಾಲ ಸೂಚನೆ । ಗುರು ಚಂನ್ನಬಸವೇಶ್ವರ ದೇಶಿಕರಾದಂತಾ । ಶಿವಯೋಗಮಂಟಪದಲ್ಲಿ । ಬಿಲ್ವವೃಕ್ಷದ ವನಾಂತ್ರದಲ್ಲು । ಅಪ್ಪಣೆಯಂ ಕೊಟ್ಟು । ಕಳುವಿಸಲಾಯಿತ್ತು । ಶೋಭಕೃತು ನಾಮ ಸಂವತ್ಸರದ ಆದಿಯಾಗಿ ಅನಂದ ರಾಕ್ಷಸ ಕಡೆಯಾಗಿ ಆಗುವ ಕಾಲ ಸೂಚನೆ.

ಅಂತ್ಯ : ಯಿದನ್ನು ದಾವಗಣಾಧೀಶ್ವರರು ತೆಗೆದುಕೊಂಡು ಬಂದಾರೋ। ಆವರ್‍ರಿಗೆ ನಿಂಮು ನಿಂಮು। ಆಪಾನಶಕ್ತಿ ಮನೆಮನೆಗೆ। ಆರಾಧನೆ ಮಾಡಿಸುವುದು ಯಂದು। ಶ್ರವಣದಲ್ಲಿ ಕೇಳಿಧರೆ। ಯೀ ಪ್ರಕಾರ ಮಾಡಿಧರೆ ಧೋಷ ನಿವರ್ತಿ ಯಾದಿತೂ। ಯಂದು ಅಪ್ಪಣೆಯ ಕೊಟ್ಟು ಯಿದ್ಧೀತೂ। ಯಿದನ್ನು ಅರಿದು ನಡದುಕೊಳ್ಳುವುದು ಮಧ್ಯಮಂ ಬೇಶಿಗೆ ವಳಗೆ ೪ ವರುಷ। ಕನಿಷ್ಟಮಂ ಬೇಷಿಗೆ ವಳಗೆ ವರುಷ ಹಂನೆರಡು ವರುಷದ ವಳಗಾಗಿ ಯೀ ಕುರುಉಗಳೆಲ್ಲ ನಡೆದಾಉೂ॥ ಗುರುವೇ ಗತಿ ॥ ಶ್ರೀ ಗುರು ಬಸವಲಿಂಗಾಯಂ ನಮಹಾ ಶ್ರೀ.

ವಿಷಯ : ಕಲಿಯುಗದ ಮುಂದಿನ ಆಗು ಹೋಗುಗಳ ವಿವರ.

ವಿಶೇಷ : ಈ ಗ್ರಂಥಾರಂಭಕ್ಕೆ ಮೊದಲು (ಚನ್ನಬಸವಣ್ಣನ ಕಾಲಜ್ಞಾನ), (ಕರಸ್ಥಲದ ನಾಗಲಿಂಗ) ಕಾಲಜ್ಞಾನ, ಅನಂತರ (ರುದ್ರಮುನಿಸ್ವಾಮಿಗಳ) ಕಾಲಜ್ಞಾನವೂ ಇವೆ.

284

ಕೆ. ೨೫೭/೬	**ಕಾಲಜ್ಞಾನ**	ಗದ್ಯ
೧೫.೯" × ೧.೫"	ರುದ್ರಮುನಿಸ್ವಾಮಿ	?
೫೩–೬೫ ಪತ್ರ	೬ ಪಂಕ್ತಿ	೫೦ ಅಕ್ಷರ

ಆದಿ : ಶ್ರೀಗಣಾಧಿಪತಯ ನಮಹಾ ಶ್ರೀ॥ × × × ರುದ್ರಮುನಿಸಾಮಿಗಳ ಕಾಲ ಜ್ಞಾನ ಬರೆಯುವುದಕ್ಕೆ ನಿರ್ವಿಗ್ನಮಸ್ತು ॥ ಶುಭಮಸ್ತು ॥ ಆದೀ। ಅನಾದೀ ಆದಂತ ತಮಂದ । ತಾರಜ। ಕಂಡಜ। ಭಿಂನ್ನಾಯುಕ್ತಾ। ಮಣಿರಣಾ। ಮಾನ್ಯಾರಣ। ವಿಶ್ವಾರಣ। ವಿಶ್ವಾಲಾಂಕೃತಾ। ಕೃತಾಯುಗಾ। ತೇತ್ರಾ ಯುಗಾ। ದ್ವಾಪರಾಯುಗಾ। ಕಲಿಯುಗಾ । ಯಿಂತೀವಿಪ್ಪತೊಂದುಯುಗ ದಲ್ಲಿ। ಬಸವಂಣನೇ ಭಕ್ತ ಪ್ರಭುದೇವರೇ ದೇವರು। ಯಿಂತೀ ಯಂಭೋ ಭೇದ ವಿಲ್ಲದೇ। ನೋಡಿರೈಯ್ಯ ಭಕ್ತಿಪ್ರಭಲವಿಲ್ಲಾ ವುಂಟುಮಾಡಬೇಕೆಂದು ಮುಡಿಗೆ ಮಾದಲಾಂಬಿಕೆ ಗರ್ಭದಲ್ಲಿ। ಉದ್ಭವಿಸಿದಂತಾ। ಕಂಡಕಂಡ। ನಾಮಾಂಕಿತವ ಕೈಕೊಂಡು। ಬಸವಪ್ರಿಯಾ। ಕೂಡಲ ಚಂನಸಂಗೈಯ್ಯನ ದಿವ್ಯಶ್ರೀ ಪಾದ ಕ್ಕೆರಗಿ ಕಲಿಯುಗದ ಪ್ರಮಾಣ ಯೆಷ್ಟು ಯಂದರೆ। ಬಸವೇಶ್ವರದೇವರು। ಸಂಗಮೇಶ್ವರನ ಗುಡಿಗೆ। ಹೋಗುವಂತಾ ವ್ಯಾಳ್ಯದಲ್ಲಿ ಹೇಳಿದ್ದು। ನಾಲ್ಕು ಸಾವಿರದ ನೂರುತೊಂಭತ್ತು। ವರುಷ। ಬಸವೇಶ್ವರದೇವರು ಹೋದದ್ದು ರಾಕ್ಷಸ ನಾಮಸಂವತ್ಸರದ ಫಾಲ್ಗುಣ ಶುದ್ಧ ೧೧ ಸೋಮವಾರ ಯಿಪ್ಪತ್ತೆಂಟ್ಕು ಘಳಿಗೆಮೇಲೆ। ಹೋದರು। ಹಡಪದಪ್ಪಣನ ಸಂಗಾತ। ಕಪ್ಪಡಿ ಸಂಗಮೇಶ್ವರ

ದೇವರೊಳಗೆ। ಐಕ್ಯವಾದರು। ನಳನಾಮ ಸಂತ್ಸರದ ವೈಶಾಕ ಬಉಳ ೨ ರೋಹಿಣಿನಕ್ಷತ್ರದಲ್ಲಿ। ಯೇಳುನೂರು ಯಪ್ಪತ್ತು। ಅಮರಗಣಗಳು। ಅರುವತ್ತುಮೂರು ಪುರಾತರು। ಹಂನೆರಡುಸಾವಿರ ಜಂಗಮದ ಸಂಗಾತ। ಚಂನಬಸವೇಶ್ವರ ದೇವರು ಬಿಜ್ಜಳನ ವಧೆಯಂ ಮಾಡಿಶೀ। ಉಳುವಿಗೆ ಹೋದರೂ। ಯಿಂತಾಕಡೆ ಹಿಂದಕ್ಕೆ ಹತ್ತು। ಮುಂದಕ್ಕೆ ಹನ್ನೊಂದು। ಆನಂದನಾಮ ಸಂವತ್ಸರಕ್ಕು। ವೀರ ವಸವಂತರಾಯನು ಹುಟ್ಟುವುದು ಸತ್ಯವೂ।

ಅಂತ್ಯ : ಯಿಂತಪ್ಪ ರುದ್ರಮುನಿಸ್ವಾಮಿಗಳೂ ನಿರೂಪಿಶಿದಂತಾ ಕಾಲಜ್ಞಾನವು। ಉದಯುಸಮಾಯುಕಾಲದಲ್ಲಿ ವೋದಿದರೆ। ಧನಧಾನ್ಯಾ। ಧನಕನಕವಸ್ತು ವಾಹಾನ ಚತ್ರಚಾಮರ ಮೊದಲಾದ। ಅಷ್ಠಮಹಾ ಐಶ್ವರ್ಯ ಚಂದ್ರನ ಕಂಡ ಅಂಬುಧಿಯಂತೆ। ದಿನದಿನಕ್ಕೆ ಗುರುಕೃಪೆ ಆದೀತು। ಯಿದಂನ್ನು ಬ್ರಾಹ್ಮಣರು ನಿಂಧ್ಯಾಮಾಡಿದರೆ ಕಾಶಿಯಲ್ಲಿ ಆಕಳ ಕೊಯಿದಷ್ಟು ದೋಷಾ। ಯಿಾ ಮಾತನ್ನು ಶಿವಭಕ್ತರು। ನಿಂದ್ಯಮಾಡಿದರೆ ಲಿಂಗದ್ರೋಹ ಜಂಗಮದ್ರೋಹ ಮಾಡಿದಷ್ಟು ದ್ರೋಷಾ। ಯಿದು ಸಿದ್ಧಾಂತವೆಂದು ರುದ್ರಮುನಿಸ್ವಾಮಿಗಳು ನಿರೂಪಿಸಿದಂತಾ ಕಾಲಗ್ನ್ಯಾನ ಸಂಪೂರ್ನ ಮಂಗಳಂ ಮಹಾಶ್ರೀ ಗುರುವೇ ಗತಿ ॥ ಸಾಧಾರಣ ಸಂವತ್ಸರದ ವೈಶ್ಯಾಕ ಬಹುಳ ೧೩ವರ್ರಿಗೆ ಕಳಲೇ ವಡೇರ ರೇವಣಸಿದ್ಧೇಸ್ವಾರಸ್ವಾಮೀ ಪೂಜೇಮಾಡುವ ವಡೇರು ಬೋಗೈಯನು ಬರೆದು ಯಿದೇನೆ ತಪ್ಪುಗಳಿದ್ದಲ್ಲಿ ತಿದ್ದಿಕೊಳ್ಳುವುದು ಬಾಲಕ ಬರೆದು ಯಿದೇನೆ ಶ್ರೀ ಶುಭಮಸ್ತು ॥

ವಿಷಯ : ಭವಿಷ್ಯಕಾಲದ ಸೂಚನೆಗಳ ವಿವರಣೆ.

ವಿಶೇಷ : ಪತ್ರಗಳನ್ನು ಅಲ್ಲಲ್ಲಿ ಹುಳುಗಳು ತಿಂದಿವೆ. ಈ ಗ್ರಂಥದಲ್ಲಿ ಬಸವೇಶ್ವರ ದೇವರು ಸಂಗಮೇಶ್ವರ ದೇವರ ಗುಡೀಗೆ ಹೋದ ಸಂವತ್ಸರ ಮಾಸ ತಿಥಿ ವಾರಗಳಿಗೆ ತಾ॥ ೧೨-೨-೧೧೯೭ರ ದಿನಕ್ಕೆ ಸರಿಯಾಗಿರುತ್ತದೆ. ಉಳಿದ ಸಂವತ್ಸರಾದಿಗಳು ಸರಿಹೋಗುವುದಿಲ್ಲ. ಈ ಗ್ರಂಥಾರಂಭಕ್ಕಿಂತ ಮುಂಚೆ ಇದರಲ್ಲಿಯೇ (ಚನ್ನಬಸವಂಣನ) ಕಾಲಜ್ಞಾನ, ಮತ್ತೊಂದು ಕಾಲಜ್ಞಾನ, (ಕರಸ್ಥಲದ ನಾಗಲಿಂಗನ) ಕಾಲಜ್ಞಾನ, (ಎಂಮ್ಮೆ ಬಸವಂಣನ) ಕಾಲಜ್ಞಾನ, (ಚನ್ನಬಸವೇಶ್ವರದೇವರು ಸೂಚಿಸಿದ) ಕಾಲಜ್ಞಾನವೂ ಸಹ ಇವೆ.

285

ಕೆ. ೩೩೯	ಕಾಲಜ್ಞಾನ	ವಚನ
೧೦.೫" × ೧.೩"	ಚನ್ನಬಸವಣ್ಣ	?
೧_೩೦ ಪತ್ರ	೫ ಪಂಕ್ತಿ	೪೦ ಅಕ್ಷರ

ಆದಿ : ಶ್ರೀಗಣಾಧಿಪತಯೇಂ ನಮಃ ॥ ಶುಭಮಸ್ತು ॥ ಯಿಶ್ವರ ಸಂವತ್ಸರದ ಕಾರ್ತಿಕ ಶುದ್ಧ ೪ ಯಲ್ಲು ಚಂನಬಸಪ್ಪನವರ ಕಾಲಗ್ನಾನ ಬರೆಯುವುದಕ್ಕೆ ಶುಭಮಸ್ತು ॥ ಸ್ವಸ್ತಿಶ್ರೀ ಸಮಸ್ತ ನಂದಿನಾಥದೇವರು ಬೃಂಗಿನಾಥ ದೇವರೂ ಶ್ರೀ ವೀರಭದ್ರದೇವರೂ ಮುಕರವಾಥ ಕಲ್ಯಾಣದ ಮಾಹಾತ್ಮೆಯೇನಂದಡೆ ವಿಸ್ತರಿಸಿ ಪೇಳೂವೆನೂ ಯಲ್ಲಾ ಗಣಗಳೂ ಕೇಳಿ ಕೃತಾರ್ಥರಾಗಿರ್ರೈಯಾ ರುದ್ರಲೋಕದ ರುದ್ರಗಣಂಗಳು ಕೇಳಿರೈಯಾ. ಕೃತಾರ್ತರಾಗಿರ್ರೈಯಾ ಮರ್ತ್ಯ ಲೋಕದ ಮಹಾಗಣಂಗಳೂ ಕೇಳಿ ಕೃತಾರ್ತರಾಗಿರ್ರೈಯ್ಯ ಅಂತಪ್ಪ ರುದ್ರ ಲೋಕದವನೂ ಮರ್ತ್ಯಲೋಕದಿಂದಿಳೂಹಿತಂದೂ ಕಲ್ಯಾಣವೆಂದೂ ರಚಿಶಿ ದಾತಾ ಬಸವಂಣನೂ ಅಂತಪ್ಪ ಕಲ್ಯಾಣಮಹಾತ್ಮೆ ವಿಸ್ತೀರ್ನಾವೆಂತೆಂದೆಡೆ ×× (೩ ನೆಯ ಪತ್ರದಲ್ಲಿ ನೋಡಿ) ಕೂಡಲಸಂಗಮದೇವರಾ ದೇವ ಚಂನ ಬಸವೇಶ್ವರದೇವರು ಲಕ್ಷದಮೇಲೆ ೯೦ ಆರೂ ಸಾವಿರಾ ಗಣಂಗಳೂ ರುದ್ರ ಮುನಿಸ್ವಾಮಿ ಶಿದ್ದರಾಮೈಯನ ಕೂಡೆ ಕಲಿಯುಗದ ಮಹಾತ್ಮೆಯಂ ಪೇಳೂ ತಿರ್ದಾರಾದೆಂತೆನೆ ಶ್ರೀ ಗುರುವೇಗತ್ತಿ ಶ್ರೀ ಗುರು ಪರಬ್ರಂಹಸ್ವರೂಪ ಹಾದಿ ಮಧ್ಯಾಂತರಹಿತ ಅವಿರಳ ಪರಜೋತಿ ಮಂಟೇದ ಲಿಂಗಾಯಂ ನಮಾಃ ॥ ಶ್ರೀಗಣಾದಿ ಶ್ರೀ ಶಾರದಾಗುರುಭ್ಯೋಂ ನಮಃ ಬಸವಲಿಂಗಾಯಂ ನಮಃ ಚಂನಬಸವಂಣನವರ ಕಾಲಗ್ನಾನ ಬರೆಯುವುದಕ್ಕೆ ಶುಭಮಸ್ತು ॥ ನಿರ್ವಿಗ್ನ ಮಸ್ತು ॥ ವಚನಾ ॥ ಚಂನಬಸವೇಶ್ವರದೇವರೂ ಶಿದ್ದರಾಮೈಯ್ಯನವರಿಗೆ ಪೇಳೂತಿರ್ದಾರಾದೆಂತೆನೆ ॥ ಜೆಂಪೆ ॥ ಶಿದ್ದರಾಮೈಯಗಳೆ ರುದ್ರಮುನಿಸ್ವಾಮಿ ಗಳೆ ಅಲ್ಲಿದ್ದ ಶರಣರೂ ಕೇಳಿ ಶಿದ್ಧಾಂತದರೆಗೆ ॥ ೧ ॥

ಅಂತ್ಯ : ವಚನಾ ॥ ಹೀಗೆಂದು ಚಂನಬಸವಂಣನವರೂ ಶಿದ್ದರಾಮೈಯ್ಯ ರುದ್ರಾ ಮುನಿಸ್ವಾಮಿಗಳ ಕೂಡೆ ಪೇಳಿ ಯೇನೆಂನೂತಿರ್ದಾರೂ ದ್ವಿಪದೆ ॥ ಶ್ರೀ ಬಸಿತ ರುದ್ರಾಕ್ಷಿ ಶಿವಪೂಜೆ ಹಾಧಿ । ಶಿವಷಡಾಕ್ಷರಿಯ ಮಂತ್ರಾ ಶಿವಲಿಂಗಾಗ್ನ್ಯನಾ ಶಿವಗಣಂಗಳ ಶೇವೆ ಆವಕಾಲದಲೀ ಶಿವಾತತ್ತ್ವ ಅನೂಭವಾ ಶಿವಗಣಂಗಳ ಗೋಷಯಿಂತ್ತಿಯಿವೂ ಚಂನಬಸವಂಣನವರು ಪೇಳಿದರೂ ॥ ೧ ॥ ಸಂಪೂರ್ನ ಮಂಗಳಮಹಾಃ ॥ ಶ್ರೀ ಯಿಶ್ವರಸಂವತ್ಸರದ ಮಾರ್ಗಶಿರ ಶುದ್ಧದಲ್ಲು ಸಂಪೂರ್ನ ಶ್ರೀ

ವಿಷಯ : ಕಲಿಯುಗದಲ್ಲಿ ಮುಂದಾಗುವುದನ್ನು ಪ್ರಪಂಚಕ್ಕೆ ತಿಳಿಯಪಡಿಸಿರುವುದೇ ಕಥಾವಸ್ತುವಾಗಿದೆ.

ವಿಶೇಷ : ೧೪ನೆಯ ಪತ್ರ ಮುರಿದಿದೆ.

286

ಕೆ. ಎ. ೩೨೯	ಕಾಲಜ್ಞಾನ	ಕಂದ, ಗದ್ಯ
೧೩.೧" × ೮.೧"	?	?
೧_೪೪ ಪುಟ	೨೧ ಪಂಕ್ತಿ	೧೭ ಅಕ್ಷರ

ಆದಿ : ನಮಃ ಸಿದ್ಧೇಭ್ಯಃ ॥ ಕಾಲಜ್ಞಾನ ॥ ಶ್ರೀ ವೀತರಾಗಾಯ ನಮಃ ॥
ನಮಸ್ಕೃತ್ಯ ಮಹಾವೀರಂ ಕೇವಲಂ ಜ್ಞಾನಲೋಚನಂ ।
ವಕ್ಷ್ಯೇ ಕರ್ಮಸ್ವರೂಪಂ ಚ ಬಂಧಂ ಚಾತುರ್ಗ್ಗತೇರಹಂ ॥ ೧ ॥
ಪ್ರಕೃತಿಬಂಧಮುಂ ಸ್ಥಿತಿಬಂಧಮುಂ ಪ್ರದೇಶಬಂಧಮುಂ
ಅನುಭಾಗಬಂಧಮುಂಮೆಂಬಿವು ಕ್ರೋಧಾದಿ ಕಷಾಯದತ್ತಣಿಂದಪ್ಪುವು.

ಅಂತ್ಯ : ತಲೆಯು ಬಲಗೈಯೆಡಗೈ
ಗೆಲೆ ಮತ್ತಂ ಬಲದ ಕಾಲುಮಂ ಕಾಣದೊಡಂ
ಸಲೆ ಮೂಱು ಎರಡು ತಿಂಗಳೊ
ಳಳಿವಕ್ಕುಂ ಬೇಗದಿ ಜೈನಾಗಮದೋಳ್ ॥
ಎರಡು ಕರದಿಂದಂ ವಿಂಶತಿ
ಶಿರಮೈದು ದಿನಂ ಬಲಗೈಗಳಿಂದ ಪದಿನೈದು ದಿನಂ
ಪರಮಾತ್ಮನ ಚಿಹ್ನಮಿದಂ
ಪರಮ ಮುನೀಂದ್ರರ್ಕಳಿರದೆ ನೋಡುತ್ತಿರ್ಪರು ॥ ೫೪ ॥
ಪರಮಾರ್ಥಮಿದು ಸತ್ಯಂ ॥ ನಮಃ ಸಿದ್ಧೇಭ್ಯಃ ॥ ಶ್ರೀ ॥ ಕಾಲಜ್ಞಾನ ಸಂಪೂರ್ಣಂ ॥

ವಿಷಯ : ಕರ್ಮ, ಧ್ಯಾನ, ಮರಣ ಸೂಚನೆಗಳು.

ವಿಶೇಷ : ಮೂಲ ಪ್ರತಿಯ ೯ನೆಯ ಓಲೆ ಲುಪ್ತವಾಗಿದ್ದುದರಿಂದ ೩೨,೩೩,೩೪ ನೆಯ ಪುಟಗಳನ್ನು ಖಾಲಿಬಿಟ್ಟಿದೆ. ಶಕಟರೇಫವನ್ನು ಬಳಸಿದೆ. ಗ್ರಂಥದ ಆದಿಯಲ್ಲಿ ಬೇರೆ ೫ ಪುಟಗಳಲ್ಲಿ ಗ್ರಂಥವಿಮರ್ಶೆಯಿದೆ.

287

ಕೆ. ಬಿ. ೨೩೪	ಕಾಲಜ್ಞಾನ ಸಂಗ್ರಹ	ವಚನ, ಹಾಡು
೮" × ೬.೭"	ಸೊಡ್ಡಳ ಬಾಚರಸ, ಇತ್ಯಾದಿ	?
೧೩ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ : ವಚನ ॥ ಸಿದ್ಧರಾಮೇಶ್ವರದೇವರು ಸೊಂನಲಾಪುರಕ್ಕೆ ಬಿಜಯಂ ಮಾಡು ವಂದಿಗೆ ಸಾಸಲ ಸೋಮೇಶ್ವರದೇವರಿಗೆ ನೊಸಲಕಂಣು ನೆತ್ತಿಯಲ್ಲಿ ಅಮೃತ ಬಂದೀತೆಂಬ ಸುದ್ದಿಯು ಹುಟ್ಟಿತು. ಕಲ್ಲುಕೋಳಿ ಕೂಗಿತೆಂಬುದಾಗಿ ನುಡಿದೇರು ಹುಲಿಗೆರೆಯ ಸೋಮೇಶ್ವರದೇವರ ಬಲದಭಾಗದಲ್ಲಿ ಅಭಯಹಸ್ತ ತೋರಿ ತೆಂದು ನುಡಿದಾರು ಬಿದಿರುಕೊಟೆಯ ಹೊರಟ ಪೇಟೆಯಲ್ಲಿ ವಬ್ಬ ಶಿವಶರ ಣೆಯ ಗರ್ಭದಲ್ಲಿ ವಂಬತ್ತುವರುಷವಿದ್ದ ವಬ್ಬ ಪುರಾತನಾಗಿ ಹುಟ್ಟಿಯಾನು। ನಿಂಮ ಪಾದವ ಕಂಡಾನು ಸೊಂನಲಪುರಕೆ ಬಾಹಂದಿಗೆ ಕುರಿಗಳಿಗೆಲ್ಲ ತಲೆ ಬಿಳಿದು ಮೈ ಕರಿದಾಗಿ ಹುಟ್ಟಿಯಾವು ನಮ್ಮ ಸೊಡಲದೇವರ ಸಾಕ್ಷಿಯಾಗಿ ಚೆಂನಯ್ಯಗಳು ಮರ್ತ್ಯಕ್ಕೆ ಬಂದದ್ದೆ ಕುರುಹು। ಮಂಗಳ ಮಹಾಶ್ರೀ। ಮಡಿವಾಳಯ್ಯಗಳ ವಚನ ॥ ಯಲ್ಲಾ ಗಣಂಗಳಿಗೆ ಬಿಂನಹ ಮಾಡುವೆನು ಅನೇಕ ಲಿಂಗನಿಷ್ಠೆಗಳದಾವು ಮಹಾ ಪವಾಡದ ಪುರುಷರು ಹುಟ್ಟಿಯಾರು ಅವರ ನಿಂದ್ಯಯ ಮಾಡ್ಯಾರು ನಿಂದ್ಯವನಾಡಿದವರಿಗೆ ನಂಮ ಪುರಾತರು ಮಹಾ ಪವಾಡವಂ ತೋರಿ ಮೆರದಾರು ನಂಮ ಕಲಿದೇವರು ಸಾಕ್ಷಿಯಾಗಿ ನಿಂಮ ಪುರಾತರು ಮರ್ತ್ಯ ಕಲಿಹಾರಿದಲ್ಲದೆ ಬಾರರೂ ಮಂಗಳ ಮಹಾಶ್ರೀ ವುರಿಲಿಂಗದೇವರ ವಚನ ॥

ಅಂತ್ಯ : ರಾಮರಾಮರ ತಲೆಯು ಕಾಸಿಯ
ಪ್ರೇಮದ ಲಿಂಗವಾಗೆ
ಕಾಮಿತ ಫಲವೀವ ಬಸವಂಣ ಬಂದಾನು
ಹೇಮದ ಬೊಬ್ಬೆ ಕೇಳಿ
ಸೋಮನ ಸೂಡಿದವನು ಮುಂದೆ
ಕಾಮನ ಭಸಿತವಿಟ್ಟು
ಆ ಮಹಾ ಜಂಬುಲಿಂಗನು ಪೇಳಿದ
ಯಂಮೆಯ ಬಸವಂಣನೊಡನೆ ॥ ೧೩ ॥
ಸೊಂಡ್ಡಾಳ ಬಾಸರಸರ ವಚನ ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಭವಿಷ್ಯತ್ಫಲ ಸೂಚಕ ವಚನಗಳು ಮತ್ತು ಹಾಡುಗಳು.

ವಿಶೇಷ : ಮೋಡಿ ಅಕ್ಷರ. ಸೊಡ್ಡಳ ಬಾಚರಸ ಮಡಿವಾಳಯ್ಯಗಳು, ವುರಿಲಿಂಗ ದೇವರು, ಹಡಪದಪ್ಪಣ್ಣಗಳು, ಎಮ್ಮೆಬಸವಣ್ಣ, ನೀಲಮ್ಮ ಮೊದಲಾದವರು ನಿರೂಪಿಸಿರುವ ಕಾಲಜ್ಞಾನದಲ್ಲಿ ಕೆಲವನ್ನು ಇಲ್ಲಿ ಸಂಗ್ರಹಿಸಿ ಹೇಳಿದೆ. ಆದರೂ ಅಂತ್ಯದಲ್ಲಿ ಸೊಂಡಾಳ ಬಾಸರಸರ ವಚನ ಸಂಪೂರ್ಣ ಎಂದೇ ಲಿಪಿಕಾರರು ಬರೆದಿರುತ್ತಾರೆ.

288

ಕೆ. ೫೭೫	ಕಾವೇರಿ ಮಾಹಾತ್ಮ್ಯೆ	ಪದ್ಯ
೧೫.೮"×೧"	ರಂಗ	ಸು. ೧೭೩೦
೧+೧—೨೧೨ ಪತ್ರ	೧೦ ಪಂಕ್ತಿ	೭೫ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ । × × × ×

ಸ್ಕಂದಪುರಾಣೋಕ್ತ ಕಾವೇರಿಯ ಮಹಾತ್ಮೆಯ ಬರೆವುದಕ್ಕೆ ಶುಭಮಸ್ತು ॥ ಶೋಭನಮಸ್ತು ॥ ನಿರ್ವಿಘ್ನಮಸ್ತು ॥ ಆಚಂದ್ರಾರ್ಕಮಸ್ತು ॥ ವಚನಾ ॥ ಭಾಮಿನಿಯ ಷಟ್ಪದಿಯಲ್ಲಿ ಸ್ಕಂದಪುರಾಣೋಕ್ತ ಕಾವೇರೀ ಮಾಹಾತ್ಮೆಯುಂ ಕಂನಡಿಸಿ ಜನಾನಂದಮಪ್ಪಂತೆ ಪುಂಣ್ಯಕಥಾವಿಶೇಷಮುಂ ಪೇಳಲ್ಪಟ್ಟತು । ಯಿದರಲ್ಲಿ ವಂದರೆ ತಪ್ಪು ತಡೆಗಳಿದ್ದಲ್ಲಿ ವಪ್ಪವಿಟ್ಟು ಗ್ರಹಿಸವೇಳ್ಕುಮೆಂದಶೇಷ ವಿದ್ವತ್ಸಭೆಗೆ ನಮಸ್ಕರಿಸಿ ಪೇಳ್ವೆನದೆಂತೆನೆ ॥ ಮತ್ತಮದಲ್ಲದೆ ॥ ಶೃಂಗಾರಾದಿ ರಸೋಜ್ವಲ ಭಾವಗರ್ಭಿತ ಲಲಿತಪದ ವಿಶಿಷ್ಟಾಷ್ಟಾದಶವರ್ನನಾತ್ಮಕ ವೃತ್ತಿ ರೀತಿ ಗುಣಾಲಂಕಾರ ಲಕ್ಷಣಲಕ್ಷಿತ ಮುಕ್ತಪದಗ್ರಸ್ತ ಸರ್ವಲಘು ಪ್ರಶಸ್ತ ಯುಗಳೋಚ್ಚರಣ ಪ್ರಾಕೃತಪ್ರತ್ಯಯ ಪ್ರಾಸಾನುಪ್ರಾಸಭೇದ ವಿಸಂಧಿ ಪೌನರುಕ್ತ್ಯಾದಿ ದೋಷವಿವರ್ಜಿತಾರ್ಥ ಗೌರವಶಬ್ದಶ್ಲೇಷೋತ್ಪ್ರೇಕ್ಷಾದಿಮೋಹ- ನೀಕೃತಮಪ್ಪಂತೊಪ್ಪುವೀ ಮಹಾಪ್ರಬಂಧದಲ್ಲೀ ॥—॥ ಪೀಠಿಕೆ ॥

ಶ್ರೀ ವಿಧುಕಳಾ ವಿಮಲಭೂಷಣ
ದೇವಪೂಜಿತವಿಜಯವರದ ಮ
ಹಾವಿಲಾಸಾಸ್ಪದ ಸದಾಶಿವಮೂರ್ತಿ ಶುಭಕೀರ್ತಿ
ನೀವಲಿದು ಮಚ್ಚಿತ್ತಪದ್ಮದೊ
ಳಾವಹಿಸಿ ನೆಲಸೀ ಕೃತಿಗೆ ಕರು
ಣಾವನಧಿ ಸುಖವಿತ್ತು ಸಲಹೈ ಶ್ರೀ ಗಿರೀಶ್ವರನೇ ॥ ೧ ॥

× × × ×

ಅವನಿಯೊಳಗಾತ್ರೇಯ ವಂಶೋ
ದ್ಭವಿಯುಮಾಪಸ್ತಂಬರುಷಿ ಸೂ
ತ್ರವನಮರ್ದಾ ರಂಗಣಾರ್ಯಂಗೀರ್ವರಾತ್ಮಜರೂ
ಭವಿಸೆ ಕೋನಯ ರಂಗಣಾಂಹ್ವಯ
ದವರ ವರ್ಗದೊಳುದರಾಬ್ಧಿಯೊಳು ನಾ
ನವತರಿಸಿ ಕವಿರಂಗನೆಂಬಭಿಧಾನವೆನಗಾಯ್ತು ॥ ೧೭ ॥

ಯಂನ ಪೋಷಣೆಗೈದ ಮತ್ಪಿತ
ಗುಂನ್ನತಾನುಜ ರಂಗಣಾರ್ಯನು
ಮಂನೆಯಂ ಸ್ಕಾಂದೋಕ್ತ ಕಾಶೀಕಾಂಡ ಮಹಿಮೆಯನೂ
ಕನ್ನಡಿಸಲವರನುಮತದಿ ನಾಂ
ವರ್ನಿಸಿದೆನುಂ ಸ್ಕಾಂದವುಸುರಿದು
ದಂನೇ ದಕ್ಷಿಣ ಕಾಸಿಯಹ ಕಾವೇರಿಕಾ ಕಥೆಯಾ ॥ ೧೮ ॥

ಅಂತ್ಯ : ಮಂಗಳಂ ಶ್ರೀಶೈಲನಾಥಗೆ
ಮಂಗಳಂ ಶ್ರೀ ರಂಗನಾಥಗೆ
ಮಂಗಳ........ರಿಗಜಪತಿಗಗಜೆಗಬ್ಧಿಜೆಗೇ
ಮಂಗಳಮಗಸ್ತ್ಯೇಶಗಂ ಜಯ
ಮಂಗಳಮಗಸ್ತ್ಯಗೆ ಮಹಾ ಜಯ
ಮಂಗಳಂ ಮಂನಾಥ ಹಿರಿಯ ಪುರೀಶನಡಿಗಳಿಗೇ ॥ ೮೭ ॥

ಅಂತೂ ಅಧ್ಯಾಯ ೭೧ ಕ್ಕಂ ಪದನೂ ೩೯೯೭ ಪೀಠಿಕೆ ೧ ಕ್ಕೆ ೨೫ ॥
ಅಂತೂ ೪೦೨೨ ಕ್ಕಂ ಮಂಗಳಮಹಾ ॥ × × × ॥ ಕಾವೇರೀ ಮಹಾತ್ಮೆ
ಮುಗಿಯಿತು ॥

ವಿಷಯ : ಸ್ಕಾಂದಪುರಾಣದ ಸಂಸ್ಕೃತ ಶ್ಲೋಕಗಳಲ್ಲಿರತಕ್ಕ ಕಾವೇರೀ ಮಹಾತ್ಮೆಯ ಕನ್ನಡ ಅನುವಾದ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ. ಪತ್ರಗಳು ಚೆನ್ನಾಗಿವೆ. ಆದಿಯಲ್ಲಿಯೂ ಅಂತ್ಯದಲ್ಲಿಯೂ ಈಶ್ವರನ ಸ್ತುತಿಯಿದೆ. ಕವಿಯು ತನ್ನ ಗೋತ್ರವನ್ನೂ ತಂದೆಯ ಹೆಸರನ್ನೂ, ಅಣ್ಣನ ಮತ್ತು ತನ್ನ ಹೆಸರುಗಳನ್ನೂ ಹೇಳಿಕೊಂಡಿದ್ದಾನೆ. ಇವನು ತನ್ನ ಸ್ಥಳದ ಹೆಸರನ್ನು ಸ್ಫುಟವಾಗಿ ಸೂಚಿಸಿಲ್ಲ. ಆದಿಯಲ್ಲಿ ಬೊಬ್ಬೂರ ರಂಗನಾಥಸ್ವಾಮಿಗೂ ಅಂತ್ಯದಲ್ಲಿ ಹಿರಿಯ ಪುರೀಶನಿಗೂ ನಮಸ್ಕರಿ

ಸಿದ್ದಾನೆ. ಮೊದಲ ಒಂದು ಪತ್ರದಲ್ಲಿ ಪೀಠಿಕಾ ಪ್ರಕರಣವು ಅಸಮಗ್ರವಾಗಿದೆ. ಆದರೆ ತಿರುಗಿ ಗ್ರಂಥಾರಂಭಮಾಡಿ ಪೀಠಿಕಾ ಪ್ರಕರಣದ ಅನುಪೂರ್ವಿಯನ್ನೇ ಪ್ರಾರಂಭ ಮಾಡಿರುವುದರಿಂದ, ಅದರ ಸಂಖ್ಯೆಯನ್ನು ಸೇರಿಸಿಲ್ಲ. ಮುದ್ರಿತ ಮೂಲಕಾವೇರಿ ಮಹಾತ್ಮೆಯನ್ನು ಕಥಾಭಾಗವು ಹೋಲುತ್ತದೆ.

289

ಕೆ. ೪೯೧	ಕಾವೇರೀ ಮಾಹಾತ್ಮ್ಯ (ಸಟೀಕು)	ಶ್ಲೋಕ, ಗದ್ಯ
೧೪.೮"×೨"	ಶ್ರೀನಿವಾಸದಾಸ	?
೧–೧೮೭ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ಗುರುವೇ ನಮಃ ॥ ಕಾವೇರೀ ಪುರಾಣ ॥ ಕರ್ನಾಟ ಭಾಷಾಟೀಕಿನ ಅವತಾರಿಕೆಯು ॥

ಶ್ಲೋಕ॥ ಕಾವೇರೀಂ ಕನಕಾಂ ಪುಣ್ಯಾಂ ಸುಜ್ಯೋತೀಂಬ್ರಹ್ಮಕುಂಡಿಕಾಂ ।
ಧಾತ್ರೀಂ ವಲಂಬುರೀಂ ನಿತ್ಯಂ ವಂದೇ ಸ್ಕಂಡವನಂ ಮಹತ್ ॥ ೧ ॥

ಟೀಕು॥ ಕಾವೇರೀ ಪುರಾಣಕ್ಕೆ ಕರ್ನಾಟಕ ಭಾಷಾ ಟೀಕನ್ನು ಮಾಡುವ ಕವಿಯು ತಾನು ಉದ್ಯೋಗಿಸಿರವ ಟೀಕು ನಿರ್ವಿಘ್ನದಿಂದ ಪರಿಸಮಾಪ್ತಿಯಾಗಲೋಸುಗಂ ಇಷ್ಟದೇವತಾ ನಮಸ್ಕಾರರೂಪಕವಾದ ಮಂಗಳ ಮಂಗೈಯ್ವಂ ॥ ಅದಂ ನೀನು । ಪುಣ್ಯಾಂ ಪವಿತ್ರವಾದಂಥಾ ಕಾವೇರೀಂ ಕಾವೇರೀ ನದಿಯಂ । ಕನಕಾಂ । ಕನಕಾನದಿಯಂ । ಸುಜ್ಯೋತೀಂ । ಸುಜ್ಯೋತಿಕಾ ನದಿಯಂ। ಬ್ರಹ್ಮಕುಂಡಿಕಾಂ । ಬ್ರಹ್ಮಕುಂಡಿಕೆಯಂ। ಧಾತ್ರೀಂ ಧಾತ್ರೀವೃಕ್ಷಮಂ । ವಲಂಬುರೀಂ ಬಲಮುರಿಯಂ। ಮಹತ್ । ಘನವಾದ । ಸ್ಕಂದವನಂ । ಸ್ಕಂದವನವೆಂಬ ಕ್ಷೇತ್ರಮಂ । ವಂದೇ ನಮಸ್ಕರಿಪೆನ್ ॥ ೧ ॥

ಶ್ಲೋ । ಶ್ರೀಬಿಟ್ಟಿಯಂಡನಂಜಪ್ಪನಾಮಾ ಕ್ರೋಡಕುಲೋದ್ಭವಃ ।
ತದ್ದೇಶ ಲೇಖಕ ಶ್ರೇಷ್ಠಃ ಸ್ಕಾಂದ ಪೌರಾಣಸಂಯುತಂ ॥ ೨ ॥
ಕಾವೇರೀ ವೈಭವಂ ದಿವ್ಯಂ ಸಂಸ್ಕೃತೋಕ್ತ್ಯಾ ವಿರಾಜಿತಂ ।
ಕರ್ನಾಟಭಾಷಾ ವ್ಯಾಖ್ಯಾನ ರೀತ್ಯಾ ಲೋಕೇ ಪ್ರಕಾಶಿತುಂ ॥ ೩ ॥
ಇಚ್ಛನ್ನು ವಾಚಶಾಂಡಿಲ್ಯ ಗೋತ್ರೋದ್ಭೂತೆ ನಿಜಾಶ್ರಿತೇ ।
ಶ್ರೀನಿವಾಸಾಖ್ಯವಿಪ್ರೇತು ಸ್ವಾಭಿಪ್ರಾಯಂ ಮನೋಹರಂ ॥ ೪ ॥
ಸೋಪಿ ಸಂತೋಷ ಚಿತ್ತಾನುಕರಿಷ್ಯತಿ ತದಾಜ್ಞಯಾ ।
ತದ್ವ್ಯಾಖ್ಯಾನಂ ಪ್ರಸಾದೇನ ಶುದ್ಧೀ ಕುರ್ವಂತು ಸಜ್ಜನಾಃ ॥ ೫ ॥

ಟೀಕು॥ ಕ್ರೋಡ ಕುಲೋದ್ಭವಃ । ಕೊಡಗರ ಕುಲದಲ್ಲಿ ಹುಟ್ಟಿರುವಂಥ । ತದ್ದೇಶಲೇಖಕ ಶ್ರೇಷ್ಠಃ । ಆ ಕೊಡಗು ದೇಶದ । ನಾಯಿಬು ಶಿರಸ್ತಾರರಾದ

ಶ್ರೀ ಬಿಟ್ಟಿಯಂಡ। ನಂಜಪ್ಪನಾಮಾ। ಶ್ರೀ ಬಿಟ್ಟಿಯಂಡನಂಜಪ್ಪರೆಂಬ ಹೆಸರುಳ್ಳವರು.

ಅಂತ್ಯ: ಶ್ಲೋ॥ ಶ್ರೀಬಿಟ್ಟಿಯಂಡ ನಂಜಪ್ಪೋ ಜೀಯಾತ್ಕೊ[ಡ]ಡಕುಲೋದ್ಭವಃ।
ಶ್ರೀನಾಯಿಬಶಿರಸ್ತಾರೋ ಧೀಮಾನಾಚಂದ್ರತಾರಕಂ ॥ ೧ ॥
ಕಾವೇರಿಕಾ ಪುರಾಣೇಯಂ ಕರ್ನಾಟೋಕ್ತ್ಯರ್ಥಶೋಭಿತಾ।
ಶ್ರೀನಿವಾಸೇನ ಸುಕೃತಾ ನಂಜಪ್ಪಸ್ಯಾಜ್ಞಯಾ ಮುದಾ ॥ ೨ ॥
ವರ್ಣಾದಿಷು ಪದಾರ್ಥೇಷು ವ್ಯತ್ಯಸ್ಥಾನ್ಕ್ಷಮಯಾಧುನಾ।
ವಿಚಾರ್ಯ ತ್ಯಕ್ತ್ವಾ ಮಾತ್ಸರ್ಯಂ ಶುದ್ಧೀಕುರ್ವನ್ತು ಹಿ ಸಜ್ಜನಾಃ ॥ ೩ ॥

ಸ್ಕಾಂದಪುರಾಣದಲ್ಲಿರುವ ಕಾವೇರೀ ಮಹಾತ್ಮೆಯು ಕರ್ನಾಟಕಭಾಷಾ ಸವ್ಯಾಖ್ಯಾನವ ಮುಗಿಯಿತು ॥

ವಿಷಯ: ಸ್ಕಾಂದಪುರಾಣಾಂತರ್ಗತ ಕಾವೇರೀ ಮಾಹಾತ್ಮ್ಯೆ.

ವಿಶೇಷ: ೧೦೮ರಿಂದ ೧೧೦ ಪತ್ರಗಳ ಮಧ್ಯೆ ಕೆಲವು ಭಾಗ ತ್ರುಟಿತ. ಮೂಲ ಸಂಸ್ಕೃತ ಶ್ಲೋಕಗಳಿಗೆ ಪ್ರತಿಪದಾರ್ಥ ಕನ್ನಡ ಭಾಷಾ ಟೀಕೆದೆ. ಈ ಕವಿಯು ಕೊಡಗು ದೇಶದಲ್ಲಿದ್ದ ನಾಯಿಬ ಶಿರಸ್ತಾರ ಶ್ರೀ ಬಿಟ್ಟಿಯಂಡ ನಂಜಪ್ಪನವರ ಆಶ್ರಿತನಾಗಿದ್ದು ಅವರ ಆಜ್ಞೆಯಿಂದ ವ್ಯಾಖ್ಯಾನ ಮಾಡಿದ್ದೇನೆ ಎಂದು ಬರೆದಿದ್ದಾನೆ. ಸ್ಕಾಂದಪುರಾಣದಲ್ಲಿನ ಮಾಹಾತ್ಮ್ಯೆಯು ಇದರಲ್ಲಿ ಹದಿನೈದು ಅಧ್ಯಾಯಗಳು ಮಾತ್ರವೇ ಇದ್ದು ಗ್ರಂಥ ಸಮಾಪ್ತಿ ಎಂದು ಬರೆದಿದೆ. ಮುದ್ರಿತ ಮೂಲ ಸಂಸ್ಕೃತ ಪ್ರತಿಯಲ್ಲಿ ಸ್ಕಾಂದಪುರಾಣಾಂತರ್ಗತ ಕಾವೇರೀ ಮಹಾತ್ಮ್ಯೆಯು ೭೮ ಅಧ್ಯಾಯಗಳನ್ನೊಳಗೊಂಡಿದೆ.

290

ಕೆ. ಎ. ೧೧	**ಕಾವ್ಯಸಾರ**	ಕಂದ, ವೃತ್ತ
೧೨.೬" × ೭.೮"	ಅಭಿನವವಾದಿವಿದ್ಯಾನಂದ	೧೫೩೩
೧–೧೯೬ ಪುಟ	೨೯ ಪಂಕ್ತಿ	೨೪ ಅಕ್ಷರ

ಆದಿ: ಕಾವ್ಯಸಾರ ॥

ಶ್ರೀರಾಮಾ ನಟಕೌಸ್ತುಭದ್ಯುತಿ ಕಿರತ್ಪುಷ್ಪಾಂಜಲೀಕ್ಷೇಪ ಪ
ಕ್ಷೋರಂಗಸ್ಥಿತಿಯಾದ ಪಾದ ನಖರೋಚಿರ್ಗಂಗೆ ಪೃಥ್ವೀಶ ಕೋ
ಟೀರವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ
ಭಾರಚ್ಛೇದ ವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ॥೧॥

ಜನನುತ ರಾಜಹಂಸನಯನಂ ಕಮಳಾವಸಥಂ ಕಳಾನಿಕೇ
ತನನೆನಿಸಿರ್ದ ಪೆಂಪುಪಮೆವೆತ್ತೊಡಮೆನೊ ಹಿರಣ್ಯಗರ್ಭನೆಂ
ದೆನಿಸದುದಾರಮೆಂಬ ರಜಮೊಂದದ ಸತ್ತ್ವನಿದಾನಮೆಂ........
....ಸುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ ॥೨॥

ಅಂತ್ಯ : ಸೂಸುವ ಕಣ್ಣಕೆಂಪು ಪೊಸ ಬಾಸುಳು ಮೈ ಜಡ ಬಿಟ್ಟುಮುಂಡೆ ಬೆಂ
ನ್ನೆಸಳು ತೋಳಕಚ್ಚು ಕಿಱುಲಜ್ಜೆ ತೊಡಳ್ನುಡಿ ದೊರೆವಲ್ಲು ಕೈ
ಬಾಸಿಕೆ ಕೊಯ್ದು ಮುಂದಲೆ ಜುಱುಂಬಿದ ಕೆಂದುಟಿಯೊಪ್ಪಿ ಬ
ಪ್ಪ ಸಂತೋಷದ ಲೇಸು ಬಾಸಣಿಸಿತೋ ಕವಿರಾಜ ಕಲಾವಿಲಾಸನಾ ॥೬॥
ಕಲಾವಿಲಾಸ ವರ್ಣನೇ ಸಮಾಪ್ತಮಾದುದು—

ವಿಜಯಸಂವತ್ಸರದ ಭಾದ್ರಪದ ಬ ೩ರಲ್ಲೂ ಶ್ರೀಮದಭಿನವವಾದಿವಿದ್ಯಾನಂದ ಸ್ವಾಮಿಗಳು ಭಲ್ಲಾತಕೀಪುರವರಾಧೀಶ್ವರ ಬೈರಾಗಿಗೆ ಬರಸಿಕೊಟ್ಟ ಕಾವ್ಯ ಸಾರಕ್ಕೆ ಮಂಗಳ ಮಹಾಶ್ರೀ—ವೊಟ್ಟು ಪದ್ಯಸಂಖ್ಯೆ ೧೧೪೭ ಕಾವ್ಯಸಾರ ಸಮಾಪ್ತಮಾದುದು.

ವಿಷಯ : ಹಳಗನ್ನಡ ಕಾವ್ಯಗಳಲ್ಲಿರುವ ಅಷ್ಟಾದಶವರ್ಣನೆಯ ಪದ್ಯಗಳು.

ವಿಶೇಷ : ಪದ್ಯಗಳ ಮೇಲ್ಭಾಗದಲ್ಲಿ ಆ ಪದ್ಯ ಯಾವ ಗ್ರಂಥಕ್ಕೆ ಸಂಬಂಧಪಟ್ಟದ್ದು ಎನ್ನುವುದನ್ನು ಕೆಲವು ಕಡೆ ಕೆಂಪುಮಶಿಯಿಂದ ಬರೆದಿದೆ. ಶಕಟರೇಫದ ಬಳಕೆ ಯಿದೆ. ಪದ್ಯಗಳನ್ನು ಬೇರೆ ಬೇರೆ ಬಿಡಿಸಿ ಬರೆದಿದೆ. ಆದಿಯ ಮೂರು ಪ್ರತ್ಯೇಕ ಪತ್ರಗಳಲ್ಲಿ ವರ್ಣನೆಗಳು ಮತ್ತು ಗ್ರಂಥಗಳ ಹೆಸರನ್ನು ಕೊಟ್ಟಿದೆ.

291

ಕೆ. ಎ. ೧೮೦	ಕಾವ್ಯಸಾರ	ವೃತ್ತ, ಕಂದ
೧೨.೫"×೭.೭"	ಮಲ್ಲಿಕಾರ್ಜುನ	೧೨೬೦
೧—೨೯೫ ಪತ್ರ	೨೦ ಪಂಕ್ತಿ	೧೮ ಅಕ್ಷರ

ಆದಿ : ಕಾವ್ಯಸಾರ ಬರೆಯುವದಕ್ಕೆ ಶುಭಮಸ್ತು.
ಶ್ರೀ ದಿವಿಜೇಂದ್ರವಂದಿತ ಪದಾಂಬುಜನಾನತ ಹೃತ್ಪಯೋಜ ಯಿ
ಷ್ಟೋದಯನತ್ಯನೂನ ಸಕಲಾಗಮಶಾಸ್ತ್ರ ವಿರಾಜಿತೇಜ ಬೋ
ಧೋದಯನುನ್ನತೋನ್ನತ ದಯಾರಕ್ಷಿತ ಧರ್ಮಸುಧಾಬ್ಧಿ ಪೂರ್ಣಚಂ
ದ್ರೋದಯನಾದನಾದಿ ಪರಮೇಶ್ವರನೀಗೆಮಗಿಷ್ಟಸಿದ್ಧಿಯಂ ॥ ೧ ॥

ಅಂತ್ಯ : ಚತುರ್ದಶಾಸ್ವಾಸಂ ‖ ಮಂಗಳಮಹಾಶ್ರೀ × × × ‖ ಪೂರ್ವಾನುರಾಗ ‖
ಇನಿಯಂ ಪ್ರಾಣಮುಗಲ್ದು ಪೋಪ ತೆರದಿಂದೆನ್ನಿಂದಗಲ್ದಿರ್ದನಾ
ತನ ಪೋಗಿಂಗೆನಗಕ್ಕನೊನಿನಿಸುವಿಲ್ಲೇಕಿಂದಡೊಂದುಂಟು ನ
ಲ್ಲನ ಚಿತ್ತಂ ಪೆರಪಿಂಗದೆ ತಗುಳ್ದೋರಂತೆ ನಿಷ್ಕಾರಣಂ
ನೆನೆವೀ ಚಿತ್ತದವಾಯ್ದ ನಾಣಿಂ ತನಕ್ಕಾಂ ನೋಂತೆನಬ್ಜಾನನೆ ‖ ೫ ‖
‖ಮಾನಾಖ್ಯಾ‖ ಪ್ರಿಯೆಯೊಡನಾಡಿ ಕೂಡಿರಲು ಕೂಟದೊಳಗಲ್ಕೆಯೊಳಾರಯಿ
ಕೂಟದಿಂದಗಲ್ಕೆಯೆ ಕರವೊಳ್ಳಿ

ವಿಷಯ : ಹಳಗನ್ನಡ ಕಾವ್ಯಗಳಲ್ಲಿರುವ ಹದಿನೆಂಟು ವಿಧವಾದ ವರ್ಣನೆಯ ಪದ್ಯಗಳು.

ವಿಶೇಷ : ಈ ಗ್ರಂಥದ ವಿಷಯ ಕೆ. ಎ. ೧೮೦ ಭಾಗ I ಮತ್ತು II ರಲ್ಲಿ ಮುಂದುವರಿದಿದ್ದರೂ ಅಸಮಗ್ರ.

292

ಕೆ. ಬಿ. ೪೦	ಕಾವ್ಯಸಾರದಲ್ಲಿ ಚಂದ್ರೋದಯವರ್ಣನೆ	ಕಂದ, ವೃತ್ತ
೭.೯" × ೬.೪"	ಮಲ್ಲಿಕಾರ್ಜುನ	೧೨೬೦
೧–೪೫ ಪತ್ರ	೨೯ ಪಂಕ್ತಿ	೧೮ ಅಕ್ಷರ

ಆದಿ : ಶ್ರೀಮತ್ಪಂಚಗುರುಭ್ಯೋ ನಮಃ ‖ ಕಾವ್ಯಸಾರದಲ್ಲಿ ಚಂದ್ರೋದಯವರ್ಣನೆ‖
............ಗಂಕೊಳಚ ಸದ್ಮಂ ತಮಂ
ಪುದಿದಾಸಂಜೆಯುತೂರ್ಯ್ಯವಾಕುಲಡೆಯುತ್ತಾರ್ರಾಳಿದಿಪಂ ಬಳಿ
ಕ್ಕುದಯಂ ಕೆಂಪ್ಪು ಚಂದ್ರಿಕೆ ಚಕೋರಂ ನೆಯ್ದಿ ವಿಂದೋಘಳಂ
ಮದಿರಾಂದೋಳ ವಿಹಾರಲಿಲೆಯಿನಿತುಂ ಚಂದ್ರೋ....ದಯಕ್ಕಾಸ್ಪದಂ ‖ ೧ ‖

ಅಂತ್ಯ : ಕಂ ‖ ವೋರಂತೆ ಮೆಚ್ಚಿದಂ ಕೃತಿ
ಸಾರಂ ಶಶಿವರ್ನ್ನನಕ್ಕೆ ಹೊಯ್ಸಳ ವಂಶೋ
ದ್ಧಾರಂ ನರಸಿಂಹಸುತಂ
ದೋರಸಮುದ್ರಾದಿನಾಯಕಂ ಸೋಮನೃಪಂ ‖ ೬೩೫ ‖
ಗದ್ಯ ‖ ಯಿದು ಸರಸ್ವತಿಸರ್ವಾಂಗದರ್ಪ್ಪಣಾಯಮಾನ ಪ್ರತಿಭಾಷ ನೂತನ
ಪುರಾತನ ಪ್ರಮಾಣ ಸುಕವಿಪುಂಗವ ಮಲ್ಲನಿರ್ಮಿತ ಕಾವ್ಯಸಾರ ಮಹಾ

ಬಂಧದೊಳ್ ಚಂದ್ರೋದಯ ವರ್ನ್ನನಂ ಅಷ್ಟಮಾಸ್ವಾಸಂ ಸಂಪೂರ್ಣ್ಣ ಮಂಗಳಮಹಾಶ್ರೀ.

ವಿಷಯ : ಚಂದ್ರೋದಯಾದಿ ವರ್ಣನೆ.

ವಿಶೇಷ : ಕಾವ್ಯಸಾರದಲ್ಲಿನ ಭಾಗ ಮಾತ್ರ. ಪ್ರತಿ ಚೆನ್ನಾಗಿದೆ. ಅಲ್ಲಲ್ಲಿ ಗ್ರಂಥ ಲುಪ್ತ ವಾಗಿದೆ.

293

ಕೆ. ೫೨೭	ಕಾವ್ಯಾವಲೋಕನ	ಕಂದ, ವೃತ್ತ
೧೩.೭" × ೧.೬"	ನಾಗವರ್ಮ	೧೧೫೦
೭೪–೧೧೭ ಪತ್ರ	೮ ಪಂಕ್ತಿ	೭೨ ಅಕ್ಷರ

ಆದಿ :...........ಬುದೋತ್ಕರಮಾನಸಾಬ್ಜವಾಸಿನಿ ಸರಸ್ವತೀದೇವಿ ವರದೆಯಕ್ಕೆಮ ಗೆಂದುಂ ||

ಸಕಲಬುದಸಮಿತಿ...........
...........ನದು ನಲವಿಂದೆ ಕೀರ್ತಿಸುತ್ತಿರೆ ಮುದದಿಂ
ಸುಕರಮದಾಗಿರೆ ಕರ್ನಾ
ಟಕದಿಂ ಕಾವ್ಯಾವಲೋಕಮಂ ವಿರಚಿಸುವೆಂ ||
ಕವಿಗಳ್ಗಿದು ಕೈಗಂನಡಿ
ಕವಿತೆಗೆ ಬಾಳ್ಮೊದಲುದಾತ್ತವಾಗ್ದೇವತೆಗು
ದ್ಭವಹೇತು ಕೋಶಗೃಹಮೆನೆ
ಭುವನದೊಳಿದು ಪರೆದು ನಿಲ್ವುದೊಂದಚ್ಚರಿಯೋ ||

ಅಂತ್ಯ : ಮನೋಜಸಂಬರಾದಿಗಳ್ಗೆ ||
ಸುರಭಿಶಯಂಗಳಂ ನಯ.........ಡುವುರ್ಬಿನೊಳಿಕ್ಷುಚಾಪಮಂ
ಪರಿಚಿತ ಮೀನಕೇತನಮನಾವಗಮೊಪ್ಪುವ ಕೇಶಹಸ್ತದೊ
ಳ್ಪಿರವಿಸಿ ಬಯ್ತು ಮೆಯ್ಗರೆದು ಶೂಲದ ರಂಗಗಿದಿರ್ಪನಲ್ಲಿ ಪೆಂ
ಡಿರ ಮುಱಿಯೊಳ್ಮನೋಜನೆವೆ ಚೆಲ್ವಿಸೆವರ್ಕಡುಗಾಡಿಕಾರ್ತಿಯರ್ ||

ದ್ರವ್ಯ|| ಮುಕುಳನನಿಮಿಳ....ಕಾಸ ಹಾಸಪ್ರಬೋದನೋನ್ಮೇಷಂಗ
ಳ್ಪ್ರಕಟಿಸುಗುಮೈಕ್ಯಮಂ ನಿರ್ವಿಕಲ್ಪದಿಂ ಗೌಣಮುಖ್ಯವೃತ್ತಿ ಕೃತಂಗಳ್

ಮುಕುಳನ ನಿಮಿಾಳನಂಗಳ್ಗೆ
ಮುಕುಳಿತ ವಿಲೋಚನಂ ಕಂಟಕಿತಾಂಗಂ ಸ್ವೇದಬಿಂದುದಂತುರಿತ
ಮುಖಂ ಪ್ರಕಟಿಶಶಿತೋತ್ಕಂದಂ ಪಂ
ನಿಕಾಮ.................. ॥

ವಿಷಯ : ಕಾವ್ಯದ ಅಲಂಕಾರಗಳ ಲಕ್ಷಣ ಮತ್ತು ಲಕ್ಷ್ಯ.

ವಿಶೇಷ : ಅಸಮಗ್ರ ಪ್ರತಿ, ಶಕಟರೇಫದ ಬಳಕೆ ಇದೆ. ಕಟ್ಟಿನ ಆದ್ಯಂತ್ಯಗಳಲ್ಲಿ ಗ್ರಂಥಕ್ಕೆ ಸಂಬಂಧಪಡದ ಮೂರು ಮೂರು ಪತ್ರಗಳಿವೆ. ಪತ್ರಗಳ ಅಂಚು ಮುರಿದಿದೆ. ೮೨, ೮೮, ೧೦ಳ ನೆಯ ಪತ್ರಗಳು ಮುರಿದು ತುಂಡಾಗಿವೆ.

294

ಕೆ. ಎ. ೧೭೬	**ಕಾವ್ಯಾವಲೋಕನ**	ಕಂದ, ವೃತ್ತ
೧೩.೩" × ೮.೨"	ನಾಗವರ್ಮ	೧೧೫೦
೧–೧೦೧ ಪುಟ	೨೮ ಪಂಕ್ತಿ	೨೩ ಅಕ್ಷರ

ಆದಿ : ಶ್ರೀಗುರುಭ್ಯೋ ನಮಃ ಕಾವ್ಯಾವಲೋಕನ
ಪದ॥ ಶ್ರೀವರ್ಧಮಾನನಾನತ
ದೇವಾಧಿಪ ಮಕುಟಕೋಟಿ ಘಟ್ಟಿತ ಚರಣಂ
ಕೇವಲ ವಿಬೋಧಲೋಚನ
ನಾವಗಮೊಲ್ದೀಗೆ ಕಾವ್ಯದೊಳ್ನಮಗಱಿವಂ ॥ ೧ ॥

× × × ×

ಸಕಲ ಬುಧ ಸಮಿತಿ ನೆರೆ ಕೊಂ
ಡು ಕೊನೆದು ನಲವಿಂದೆ ಕೀರ್ತಿಸುತ್ತಿರೆ ಮುದದಿ
ಸುಕರಮುದಾಗಿರೆ ಕರ್ನಾ
ಟಕದಿಂ ಕಾವ್ಯಾವಲೋಕಮುಂ ವಿರಚಿಸುವೆಂ ॥ ೨ ॥

ಅಂತ್ಯ : ವೃ॥ ಸಕಳ ಕಳಾವಿದಂ ಮದವಿದೂ............
.........ನಭಿಮಾನಿ ತುಂಗನವದಾತಯಶಂ ವಿಬುಧೈಕವತ್ಸಳಂ
ಸುಕವಿ ಸರಸ್ವತಿವದನ ಮಂಗಳ ದರ್ಪಣನೆಂದು ಕೂರ್ತು ಕೀ
ರ್ತಿ............ವಳಯುಂ ಕವಿನಾಗವರ್ಮ್ಮನಂ ॥ ೯೭೧ ॥

ಗದ್ಯ॥ ಇದು ಸರಳ ಸುಕವಿಜನ ಮನಸ್ಸರೋಜಿನೀ ರಾಜಹಂಸಾಯ ಮಾನಾನೂನ ಗುಣೋದಯು ಶ್ರೀ ನಾಗವರ್ಮ ವಿರಚಿತಮಪ್ಪ ಶ್ರೀ ಕಾವ್ಯಾವಲೋಕನದೋಳ್ ಕವಿಸಮಯಂ ಪಂಚಮಾಧಿಕರಣಂ ॥ ಶ್ರೀ.

ವಿಷಯ : ಕಾವ್ಯದ ಅಲಂಕಾರಗಳ ಲಕ್ಷಣ ಮತ್ತು ಲಕ್ಷ್ಯ.

ವಿಶೇಷ : ಶಕಟರೇಫವನ್ನು ಬಳಸಿದೆ.

295

ಕೆ. ೪೫೩	**ಕಾಶಕೃತ್ಸ್ನಧಾತುವ್ಯಾಖ್ಯಾ**	ಟೀಕು
೧೩.೩" × ೧.೮"	ಚೆನ್ನವೀರಕವಿ	ಸು. ೧೫೦೦
೧–೮೦ ಪತ್ರ	೧೨ ಪಂಕ್ತಿ	೬೨ ಅಕ್ಷರ

ಆದಿ : ಶ್ರೀಯಾಗಂಟಿ ಶರಭಾಯ ನಮಃ॥ ಕಾಶಿಕೃತ್ಸ್ನಶಬ್ದ ಕಲಾಪಧಾತು ಪಾಠಃ ॥
ಧಾತುಪಾಠಃ ಕೃತೋಯೇನ ಬಾಲವ್ಯುತ್ಪತ್ತಿ ಸಿದ್ಧಯೇ।
ನಮಸ್ತಸ್ಮೈ ಕಾಶಿಕೃತ್ಸ್ನ ಗುರವೇ ಶಿವರೂಪಿಣೇ ॥೧॥
ಸತ್ತಾಯಾಂ ಮಂಗಲೇ ವೃದ್ಧೌ ನಿವಾಸೇ ಕಾಪ್ತಿ ಸಂಪದೋಃ।
ಅಭಿಪ್ರಾಯೇಚ ಶಬ್ದೇಚ ಪ್ರಾದುರ್ಭಾವೇಗತೌ ಚ ಭೂಃ ॥ ೩ ॥
ಭೂಸತ್ತಾಯಂ ಚಿತೀ ಸಂಜ್ಞಾನೇ। ××× (೨ನೆಯ ಪತ್ರ) ಅತ್ಮಸಾಂತತ್ಯಗಮನೇ ॥ ಎಡವಿಡದ ನಡೆ। ಯಲ್ಲಿ। ಆತತಿನಡೆದಪಂ। ಆತ್ಮ। ಸರ್ವತ್ರ ಸಂಚಾರೀ ॥

ಅಂತ್ಯ : ಅಸ್ತ್ಯಲ್ಲಮೋ ವೃಷಸ್ವಾಂತೇ ಪೂಜಯತ್ಯಲ್ಲಮಂ ವೃಷಾ।
ವೃಷಭಂ ಯಾಚತೇ ಭಿಕ್ಷಾಂ ಭುಜ್ಕ್ತೇ ದತ್ತಂ ಗುಹೇಶ್ವರಃ॥
ತನುರ್ಮನೋಧನಂ ಭಕ್ತ್ಯಾ ದೀಯತೇ ವೃಷಭೇಣ ವೈ।
ಭುಜ್ಯತೇ ಪ್ರಭುಲಿಂಗೇನ ಪುನರ್ಭವನಿವೃತ್ತಯೇ॥
ಇತಿ ಶ್ರೀಯಾಗಂಟಿ ಶರಭಲಿಂಗ ಪ್ರಸಾದಿನಸ್ತಿತ್ತಿರ ಯಜುಃಶಾಖಾಧ್ಯಯನಸ್ಯ ವಾಮದೇವ ಮುಖೋದ್ಭೂತಸ್ಯ ಗಜಕರ್ಣಪುತ್ರ ಸ್ವಾತ್ರಿ ಗೋತ್ರಸ್ಯ ವೀರಮಾಹೇಶ್ವರತಂತ್ರ ಸೂತ್ರಸ್ಯ ಶಿವಲಂಕಮಂಚನ ಪಂಡಿತಾರಾಧ್ಯ ಪ್ರವರಸ್ಯ ಕೋಕಿಲಾಕುಂಡ ಪುರಸ್ಯ ಮಹಾಮಠಸ್ಯ ಸಂಗನ ಗುರುಲಿಂಗನಂದ್ಯಂಬಾ ಕುಮಾರಸ್ಯ ತುಮಕೂರ ಮಹಾಮಠ ಕಂಥಾಚಾರ್ಯ ಪಿತೃವ್ಯ ನಂಬ್ಯಣಗುರು ಕರಜಾತಸ್ಯ ಸಹ್ಯಾದ್ರಿಕಟಕ ಕೆಳದಿನಗರ ಸಮೀಪಸ್ಯ ಷಡ್ದೇಶಸ್ಯ ಕುಂಟಿಕಾಪುರಸ್ಯ ಕಾಶೀಕಾಂಡ ಚೆನ್ನವೀರಕವಿಕೃತಾ ಕಾಶಿಕೃತ್ಸ್ನ ಶಬ್ದಕಲಾಪಸ್ಯ ದ್ವಾದಶ ಸಹಸ್ರಧಾತುಪಾಠಸ್ಯ ಕರ್ಣಾಟ ಟೀಕಾಯಾಂ ಇಸ್ವಿಕರಣಶ್ಚುರಾದಿಃ॥ ಸಮಾಪ್ತಃ॥ ಮಂಗಳಾ ಮಹಾ ॥

ವಿಷಯ : ಆದಿವ್ಯಾಕರಣಗಳ ಎಂಟು ಸಂಖ್ಯೆಯಲ್ಲಿ ಮೂರನೆಯ ವ್ಯಾಕರಣವಾದ ಕಾಶಕೃತ್ಸ್ನವ್ಯಾಕರಣಶಾಸ್ತ್ರದ ಧಾತುಪಾಠ.

ವಿಶೇಷ : ಪ್ರತಿಯು ಶುದ್ಧವಾಗಿದೆ. ಚೆನ್ನಾಗಿದೆ. ಮೊದಲನೆಯ ಸಂಖ್ಯೆಯ ಪತ್ರಗಳೆರಡಿವೆ. ಈ ಎರಡು ಪತ್ರಗಳಲ್ಲಿಯೂ ಗ್ರಂಥವು ಒಂದೇ ರೀತಿ ಪ್ರಾರಂಭವಾಗಿರುವುದರಿಂದ ಮೊದಲನೆಯ ಪತ್ರವನ್ನು ಸೇರಿಸಿಲ್ಲ. ಈ ಕವಿಯು ಮೈಸೂರು ಸಂಸ್ಥಾನದ ತುಮಕೂರು ಡಿಸ್ಟ್ರಿಕ್ಟಿನ ಗೂಳೂರಿಗೆ ಅಯಿದು ಮೈಲಿ ದೂರದಲ್ಲಿ ಕೊಂಡಾಪುರ ಗ್ರಾಮಸ್ಥನೆಂದು ತುಮಕೂರ ಮಹಾಮಠ ಇತ್ಯಾದಿ ವಾಕ್ಯಗಳಿಂದ ಊಹಿಸಬಹುದಾಗಿದೆ. ಇವನ ಕಾಲವು ಗ್ರಂಥದಲ್ಲಿ ಹೇಳಿಲ್ಲ. ಈ ಕೋಶವನ್ನು ಉಪಯೋಗಿಸಿಕೊಂಡು ಪೂನಾ ಡೆಕ್ಕನ್ ಕಾಲೇಜಿನ ಪೋಸ್ಟ್‌ಗ್ರಾಜುಯೇಟ್ ರಿಸರ್ಚ್ ಇನ್‌ಸ್ಟಿಟ್ಯೂಟನಲ್ಲಿ ಶ್ರೀ॥ ಡಾ॥ ಎ. ಎನ್. ನರಸಿಂಹಯ್ಯನವರಿಂದ ಸಂಶೋಧಿತವಾಗಿ ಕ್ರಿ.ಶ. ೧೯೫೨ ನೆಯ ಇಸವಿಯಲ್ಲಿ ಮುದ್ರಿತವಾಗಿದೆ. ಕನ್ನಡ ಮತ್ತು ನಂದಿನಾಗರೀ ಲಿಪಿಯಲ್ಲಿದೆ.

296

ಕೆ. ೩	ಕಾಶೀಮಹಿಮಾರ್ಥದರ್ಪಣ	ಗದ್ಯ
೨೫" × ೨.೪"	ಕಳಲೆ ನಂಜರಾಜ	೧೭೪೦
೧–೧೧೦ ಪತ್ರ	೮ ಪಂಕ್ತಿ	೧೦೬ ಅಕ್ಷರ

ಆದಿ : ಕಾಶೀಕಾಂಡ. ಶ್ರೀ ಗಣಾಧಿಪತಯೇ ನಮಃ॥ ಶ್ರೀ ಕಾಶೀ ವಿಶ್ವನಾಥಾಯ ನಮಃ॥ ಶ್ರೀ ಪಾರ್ವತ್ಯೈ ನಮಃ॥ ಕಾಶೀಕಾಂಡ ಕನ್ನಡಿಸಿದದು॥
ಯಂ ಬ್ರಹ್ಮವೇದಾಂತವಿದೋ ವದಂತಿ ಪರಂ ಪ್ರಧಾನಂ ಪುರುಷಂ ತಥಾನ್ಯೇ।
ವಿಶ್ವೋದ್ಗತೇ ಕಾರಣಮೀಶ್ವರಂ ವಾ ತಸ್ಮೈ ನಮೋ ವಿಘ್ನವಿನಾಶನಾಯ॥....
ಆವುದಾನೊಂದು ಕಾಶೀಪಟ್ಟಣ....ಖುಲ್ಲಿದ್ದಂಥಾದ್ದಾದರೂ....ಅಧ್ಯಾಯ ೩೮

ಅಂತ್ಯ : ಕಟ್ಟಿಗೆ ಮೊದಲಾದ ವಸ್ತುಗಳಂ ಕತ್ತರಿಸಿದರೆ ಮೆಣಸು ಮೊದಲಾಗಿಯಿರುವ × × × ಪಂಚಜಪಾಗಲಂ ಮಾಡಬೇಕು.

ವಿಷಯ : ಸಂಸ್ಕೃತ ಸ್ಕಾಂದಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ : ಗ್ರಂಥಾರಂಭದಲ್ಲಿ ಗಣೇಶ ಪ್ರಾರ್ಥನೆಯಿದೆ. ಇದರಲ್ಲಿ ೩೭ ಅಧ್ಯಾಯ ಸಂಪೂರ್ಣವಿದ್ದು, ೩೮ ನೆಯ ಅಧ್ಯಾಯದಲ್ಲಿ ಸ್ವಲ್ಪಭಾಗ ಮಾತ್ರವಿದೆ. ಈ ಪ್ರತಿ

ಯಲ್ಲಿ ಕವಿಯ ಹೆಸರು, ದೇಶ, ಕಾಲಗಳನ್ನು ಹೇಳಿಲ್ಲ. ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ "ಯಿಂತೀ ಕನ್ನಡ ಭಾಷೆಯಿಂ ವಿರಚಿಸಿದ ಕಾಶೀಮಹಿಮಾರ್ಥದರ್ಪಣದಲ್ಲಿ ನಿರೂಪಿಸಿದ ಅಧ್ಯಾಯಾರ್ಥ ಮಂಗಳಮಹಾ" ಎಂದಿದೆ. ನಂದಿನಾಗರಿ ಮತ್ತು ಕನ್ನಡ ಲಿಪಿ ಇದೆ. ೫೩ ನೆಯ ಪತ್ರಸಂಖ್ಯೆಯ ಎರಡು ಪತ್ರಗಳಿವೆ.

297

ಕೆ. ೩೦	ಕಾಶೀಮಹಿಮಾರ್ಥದರ್ಪಣ	ಗದ್ಯ
೧೭.೬" × ೧.೫"	ಕಳಲೆ ನಂಜರಾಜ	೧೭೪೦
೧–೭೯ ಪತ್ರ	■ ಪಂಕ್ತಿ	೪೮ ಅಕ್ಷರ

ಆದಿ: ಶ್ರೀ ಗಣಾಧಿಪತಯೇ ನಮಃ ॥ ಶುಭಮಸ್ತು ॥
ಕಾಶೀಖಾಂಡಾ ಬರವದಕ್ಕೆ ನಿರ್ವಿಘ್ನಮಸ್ತು ॥
ಭೂಮಿಷ್ಟಾ ಪಿ ನಯಾತ್ರಾ ಭೂಸ್ತ್ರಿ ದಿವತೋಽಪ್ಯುಚ್ಚೈ ರಥ ಸ್ಥಾಪಿತಾ ।
ಯಾ ಬದ್ಧಾ ಭುವಿ ಮುಕ್ತಿ ದಾಸ್ಯುರಾಮ್ರುತಾಯಸ್ಯಾಂಮ್ರುತಾಂಜಂತವಃ ॥
ಯಾ ನಿತ್ಯಂ ತ್ರಿಜಗತ್ಪವಿತ್ರ ತಟನಿತಿರೆ ಸುರ್ರೈಸ್ಯೇವ್ಯತೆ ।
ಸಾಕಾರೆ ತ್ರಿಪುರಾತಿ ರಾಜನಗರಿ ಪಾಯಾದಪಾದಾ ಜಗತ್ ॥
ಆವದಾನೊಂದು ಕಾಶಿಪಟ್ಟಣ ಭೂಮಿಯಲ್ಲಿ ಯಿದ್ದಂಥಾದರೂ ।

ಅಂತ್ಯ: ಹಲಿಗೊಲು ಮೊದಲಾದುದರಿಂ........ಖವಂ ಬಿಡಿಸಿದವರೂ । ಜಲಾರ್ಥಿಗಳಾದ ಪ್ರಾಣಿಗಳೆ ಜಲತೀರದಲ್ಲಿ ಕಲ್ಲಡೋಣಿಗಳಂ ಮಾಡಿ........ಲೋಕದಿಂ ಸುಖಿಯಾಗಿಯಿಹರೂ । ಯಿದಕ್ಕೆ ಅಧಿಪತಿಯಾದ । ವರುಣನ

ವಿಷಯ: ಸ್ಕಾಂದಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ: ೨, ೧೬, ೭೭, ೭೮ ನೆಯ ಪತ್ರಗಳು ಲುಪ್ತವಾಗಿವೆ. ಅಲ್ಲಲ್ಲಿ ಕೆಲವು ಪತ್ರಗಳ ಅಂಚು ಮುರಿದಿದೆ. ಈ ಕೋಶದಲ್ಲಿ ಒಂದರಿಂದ ಹನ್ನೊಂದನೆಯ ಅಧ್ಯಾಯ ಅರ್ಧ ಭಾಗ ಮಾತ್ರವಿದೆ.

298

ಕ. ೭೧ | ಕಾಶೀಮಹಿಮಾರ್ಥದರ್ಪಣ | ಗದ್ಯ
೧೭.೭" × ೧.೫" | ಕಳಲೆ ನಂಜರಾಜ | ೧೭೪೦
೧–೨೨೨ ಪತ್ರ | ೯ ಪಂಕ್ತಿ | ೬೫ ಅಕ್ಷರ

ಆದಿ: ಶ್ರೀ ಶಾರದಾಂಬಾಯ ನಮಃ॥ ಶ್ರೀ ರಾಮಚಂದ್ರಾಯ ನಮಃ॥
ಭೂಮಿಷ್ಠಾಪಿನಯಾತ್ರಭೂ। ಸ್ತ್ರಿದಿವತೋಽಹಚ್ಚೈರವ ಸ್ಥಾಪಿಯಾ।
ಯಾ ಬದ್ಧಾ ಭುವಿ ಮುಕ್ತಿ ದಾಸ್ಸ್ಯುರಮೃತಂ। ಯಸ್ಯಾಂಮ್ರುತಾಜಂತವಃ॥
ಯಾ ನಿತ್ಯಂ ತ್ರಿಜಗತ್ಪವಿತ್ರತಟಿನೀಂ। ತೀರಸ್ಸುರೈಸ್ಸೇವ್ಯತೇ।
ಸಾಕಾಶೀ ತ್ರಿಪುರಾರಿ ರಾಜನಗರೀ ಪಾಯಾ........ಯಾಜ್ಜಗತ್॥
ಶುಭಮಸ್ತು। ಆವದಾನೊಂದು ಕಾಶೀಪಟ್ಟಣ। ಭೂಮಿಯಲ್ಲಿ ಯಿದ್ದಂಥಾದಾ ದರೂ ಅಲ್ಲಿ ವಾಸವಂ ಮಾಡಿದವರ್ಗೆ। ಪುನರುತ್ಪತ್ತಿಯಿಲ್ಲವಾದ ಕಾರಣ।

ಅಂತ್ಯ: ಭಕ್ತಿಯಿಂದ। ಯಿಾ ಮಹಾತ್ಮೆಯಂ ಕೇಳಲು ಪರಮೇಶ್ವರನನುಗ್ರಹದಿಂದ। ಪುತ್ರವಂತರಹರೂ। ಕೇಳೈ ಸೂತ! ಹಲವು ಪ್ರಕಾರವಾಗಿ ಹೇಳ್ವರೇನು ಯಿದ್ಧೀತು। ಯಿಾ ಮಹಾತ್ಮೆಯಂ ಕೇಳಲು। ಆರಾರಿಗೆ। ಯೇನೇನು ಮನೋ ರಥವುಂಟು। ಆ ಮನೋರಥ ಸಿದ್ಧಿಗಳಹವೂ। ದೂರದೇಶದಲ್ಲಿ ಯಿದ್ದಾದರೂ ಯಿಾ ಮಹಾತ್ಮೆಯಂ ಕೇಳಲು। ಸದಾಶಿವನ ಆಜ್ಞೆಯಿಂದ ನಿರಂತರವೂ। ಕಾಶೀವಾಸವಮಾಡಿದ ಫಲವಹುದು। ವಿಜಯ ಸೌಭಾಗ್ಯ ನಿರ್ಮಲ ಮನಸ್ಸ ಹುದೂ। ವಿಶ್ವೇಶ್ವರನ ಅನುಗ್ರಹವುಳ್ಳ ಪುಣ್ಯಾತ್ಮರಿಗಲ್ಲದೆ। ಯೀ ಮಹಾ ತ್ಮ್ಯವಂ ಕೇಳುವುದಕ್ಕೆ। ಯಿದೇ ಹುಟ್ಟು.........ಪುಸ್ತುಕವಂ। ಮನೆಯಲ್ಲಿ। ನಿತ್ಯವೂ ಪೂಜಿಸಲು ಸಕಲೈಶ್ವರ್ಯಗಳು ಸಮೃದ್ಧಿಯಹವೂಯೆಂದು ವ್ಯಾಸರು ಸೂತಂಗೆ ನಿರೂಪಿಸಿ....ಷೆಯಿಂದ ವಿರಚಿಸಿದ। ....ಂದ ಪುರಾಣೋಕ್ತ। ಕಾಶೀ ಮಹಿಮಾರ್ಥದರ್ಪಣದಲ್ಲಿ। ಅನುಕ್ರಮಣಿಕಾಧ್ಯಾಯ ನಿತ್ಯಯಾತ್ರೆಯಂ ಪೇಳ್ವದು। ಅಧ್ಯಾಯನೂ....ಮಹಾಶ್ರೀ. ವಿಭವಸಂವತ್ಸ....ಶ್ರಾವಣ ಶು ೧೪ ಬೊಕ್ಕ....ಕ್ಕಸದ ನರಸೈಯ್ಯನವರಿಗೆ ತಾಯೂರು ಉಪಾಧ್ಯರು ಬರದ ಕಾಶೀ ಖಾಂಡ ಪೂರ್ನ್ನವಾಗಿ ಮುಗಿಯಿತು. ಬೊಕ್ಕಸದ ನರಸೈಯ್ಯನವರಿಗೆ ದೀರ್ಘಾಯುಷ್ಯಮಸ್ತು॥

ವಿಷಯ: ಸ್ಕಾಂದ ಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ: ನೂರು ಅಧ್ಯಾಯಗಳಿವೆ. ೨೨೨ ಗರಿಯಾದ ಮೇಲೆ ಸಂಖ್ಯಾರಹಿತವಾದ ಒಂದು ಗರಿಯಲ್ಲಿ ಗಂಗಾಸಹಸ್ರನಾಮಸ್ತೋತ್ರ ಪಾರಾಯಣದ ಅಂಗನ್ಯಾಸ

ಕರನ್ಯಾಸಗಳ ವಿಚಾರ ಸಂಸ್ಕೃತಭಾಷೆಯಲ್ಲಿದೆ. ಪತ್ರಸಂಖ್ಯೆ ೧-೨೨೨ ಇದ್ದರೂ ೨೯ ನೆಯ ಪತ್ರ ೨, ೬೩ನೆಯ ಪತ್ರ ೪, ೮೧ ನೆಯ ಪತ್ರ ೩ ಮತ್ತು ೧೮೪ನೆಯ ಪತ್ರಗಳು ಎರಡೆರಡಿದ್ದು ಒಟ್ಟು ಪತ್ರಸಂಖ್ಯೆ ೨೨೯ ಆಗುತ್ತದೆ.

299

ಕೆ. ೧೮೬	**ಕಾಶೀಮಹಿಮಾರ್ಥದರ್ಪಣ—ಭಾಗ ೧**	ಗದ್ಯ
೧೭.೭" × ೧.೫"	ಕಳಲೆ ನಂಜರಾಜ.	೧೭೪೦
೧—೨೬೦ ಪತ್ರ	೬ ಪಂಕ್ತಿ	೬೬ ಅಕ್ಷರ

ಆದಿ: ಶುಭಮಸ್ತು ॥ ವಿಂಧ್ಯನಾರದ ಸಂವಾದ ॥ × × × ಶ್ರೀ ಕಾಶೀಖಾಂಡದ ಪುಸ್ತುಕ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥

ಟೀಕು ॥ ಆವುದಾನೊಂದು ಕಾಶೀಪಟ್ಟಣ ಭೂಮಿಯಲ್ಲಿ ಯಿದ್ದಂಥಾದ್ದಾದರೂ ಅಲ್ಲಿ ವಾಸವಂ ಮಾಡಿದವರ್ಗೆ ಪುನರುತ್ಪತ್ತಿಯಿಲ್ಲವಾದ ಕಾರಣ ತಾನು ಸ್ವರ್ಗಕ್ಕಿಂದಲೂ ಕೆಳಗಾಗಿ ಯಿದ್ದಂಥಾದಾದರೂ ಮೇಲಾದುದು.

ಅಂತ್ಯ : ಯಿಾಖಕೋಲ್ಕಾದಿತ್ಯ ಗರುಡೇಶ್ವರರ ಕಥೆಯಂ ಕೇಳಲು ಸಕಲ ಪಾಪ ಕ್ಷಯವೆಂದು ಕುಮಾರಸ್ವಾಮಿಯೂ ಅಗಸ್ತ್ಯಂಗೆ ನಿರೂಪಿಸಿದನೂ ॥ ಯಿಂತೀ ಕನ್ನಡ ಭಾಷೆಯಿಂ ವಿರಚಿಸಿ ಸ್ಕಂದಪುರಾಣೋಕ್ತಮಾದ ಕಾಶಿಮಹಿಮಾರ್ಥ ದರ್ಪಣದಲ್ಲಿ ಖಕೋಲ್ಕಾದಿತ್ಯ ಗರುಡೇಶ್ವರರ ವರ್ನನೆಯಂ ಪೇಳ್ದುದು ಪಂಚ ದಶೋಧ್ಯಾಯಃ ಅಧ್ಯಾಯ ೫೦ಕ್ಕಂ.

ವಿಷಯ : ಸ್ಕಾಂದ ಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ: ೧ ರಿಂದ ೫೦ ಅಧ್ಯಾಯಗಳು ಮಾತ್ರ ಇವೆ. ಇದರ ಮುಂದಿನ ಭಾಗ ಕೆ. ೧೮೭ ರಲ್ಲಿದೆ. ಇದರಲ್ಲಿ ಗರಿಗಳ ಸಂಖ್ಯೆಯು ೨೬೦ ಎಂದು ಇದೆ. ಆದರೆ ೧೬೪ನೆಯ ಪತ್ರಸಂಖ್ಯೆಯ ೨ ಪತ್ರಗಳಿರುವುದರಿಂದ ೨೬೧ ಪತ್ರಗಳಾಗುತ್ತವೆ. ಇದರಲ್ಲಿ ಗಂಗಾ ಸಹಸ್ರನಾಮಾವಳಿಯು ಕನ್ನಡ ಭಾಷೆಯಲ್ಲಿ ಬೇರೆ ಬೇರೆ ಬರೆದಿದೆ.

300

ಕೆ. ೧೮೭	ಕಾಶೀಮಹಿಮಾರ್ಥದರ್ಪಣ—ಭಾಗ ೨	ಗದ್ಯ
೧೯.೩" × ೧.೫"	ಕಳಲೆ ನಂಜರಾಜ	೧೭೪೦
೨೬೧_೪೬೮ ಪತ್ರ	೭ ಪಂಕ್ತಿ	೮೨ ಅಕ್ಷರ

ಆದಿ : ಮಂಗಳ ಮಹಾ ॥ ಶ್ರೀ × × × ಅನಂತರದಲ್ಲಿ ಮತ್ತು ಅಗಸ್ತ್ಯ ಬಿಂನ್ನೈಸಿದನು। ಯೆಲೆ ಪಾರ್ವತಾ ದೇವಿಯರ ಹೃದಯಕ್ಕೆ ಆನಂದಕರನಾದಂಥಾ ಸರ್ವಜ್ಞನಾದ ಪರಮೇಶ್ವರನ ಕುಮಾರನಾದಂಥಾ ಯೆಲೆ ಕುಮಾರಸ್ವಾಮಿಯೆ ವೊಂದು ಬಿನ್ನಹ ಉಂಟು.

ಅಂತ್ಯ : ಯಿಾ ಮಹಾತ್ಮೆಯಂ ಕೇಳಲು। ಸದಾಶಿವನ ಆಜ್ಞೆಯಿಂದ। ನಿರಂತರವಾಗಿ ಕಾಶೀವಾಸವ ಮಾಡಿದ ಫಲವಹದೂ। ವಿಜಯ ಸೌಭಾಗ್ಯನೆರ್ಮಲ। ಮನಸ್ಸಹುದು। ವಿಶ್ವೇಶ್ವರನನುಗ್ರಹವುಳ್ಳ ಪುಂಣ್ಯಾತ್ಮರಿಗಲ್ಲದೆ। ಯಿಾ ಮಹಾತ್ಮೆಯಂ ಕೇಳುವದಕ್ಕೆ ಯಿಚ್ಛೆಹುಟ್ಟೊದು। ಯಿಾ ಪುಸ್ತಕಮಂ ಮನೆಯಲ್ಲಿ। ನಿತ್ಯವೂ ಪೂಜಿಸಲೂ ಸಕಲೈಶ್ವರ್ಯಗಳು ಸಮೃದ್ಧಿಯಹವೂ ಯೆಂದು ತಂದು ಗುರುಗಳಾದ ವೇದವ್ಯಾಸ ಮುನೀಶ್ವರರೂ ಬುಧಿಗಲಿಸಿದರೂ ಯೆಂದು। ಸೂತ ಪುರಾಣೀಕರು। ನೈಮಿಷಾರಂಣ್ಯವಾಸಿಗಳಾದ। ಶೌನಕಾದಿರುಷೀಶ್ವರರುಗಳಿಗೆ ನಿರೂಪಿಸಿದನೂ। ಯಿಂತೀ ಕಂನ್ನಡ ಭಾಷೆಯಂ ವಿರಚಿಶಿದ ಸ್ಕಂದ ಪುರಾಣೋಕ್ತ ಕಾಶೀಮಹಿಮಾರ್ಥ ದರ್ಪಣದಲ್ಲಿ ಕಥಾ ಸಂಗ್ರಹಮಂ ಪೇಳ್ದುದು। ಅಧ್ಯಾಯ ೧೦೦ಕ್ಕಂ ಮಂಗಳ ಮಹಾ ಶ್ರೀ × × × ಶೋಭಕೃತು ಸಂವತ್ಸರದ ಜೇಷ್ಠ ಬಹುಳ ೮ ಮಂಗಳವಾರ ದಿನ ಮಧ್ಯಾಂನಕ್ಕೆ ಸಂಪೂರ್ನ। ಯಿದ ಬರದಂಥಾವನು। ಭಾರದ್ವಾಜ ಗೋತ್ರದವ ಜೆಂನ್ನೈನವರ ಅಳೀಮೈಯನ ಮಗ ಸುಬರಾಯನ ಸ್ವಸ್ತ ಅಕ್ಷರ × × × ಆರೇಪುರದ ಬಸ್ಸಪ್ಪಾಜಿಗಳ ಕಾಶೀಕಾಂಡಕ್ಕೆ ಮಂಗಳ ಮಹಾಶ್ರೀ. ಕಾಶೀಕಾಂಡ ಸಂಪೂರ್ನವಾಗಿ ಯಿಥೆ॥

ವಿಷಯ : ಸ್ಕಾಂದ ಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ : ೫೦ನೆಯ ಅಧ್ಯಾಯದಿಂದ ೧೦೦ ಅಧ್ಯಾಯಗಳು ಇವೆ. ಈ ಪ್ರತಿಯ ಪೂರ್ವಾರ್ಧ ಕೆ. ೧೮೬ರಲ್ಲಿದೆ. ಇದರಲ್ಲಿ ಪತ್ರ ಸಂಖ್ಯೆ ೪೬೮ ಎಂದು ಇದ್ದರೂ ೩೭೬ನೆಯ ಸಂಖ್ಯೆಯು ಎರಡು ಪತ್ರಗಳಿರುವುದರಿಂದ ೪೬೯ ಪತ್ರಗಳಾಗುತ್ತವೆ.

301

ಕೆ.ಎ. ೯೦	**ಕಾಶೀಮಹಿಮಾರ್ಥ ದರ್ಪಣ**	ಗದ್ಯ
೧೧" x ೭.೭"	ಕಳಲೆ ನಂಜರಾಜ	೧೭೪೦
೪–೨೪೯ ಪತ್ರ	೨೩ ಪಂಕ್ತಿ	೩೩ ಅಕ್ಷರ

ಆದಿ : ಶುಭಮಸ್ತು ಕಾಶೀಖಾಂಡ ಬರಯುವದಕ್ಕೆ ನಿರ್ವಿಘ್ನಮಸ್ತು x x x ಕಾಶೀ ಕಾಂಡವನು ವಿಸ್ತರಿಶಿಸದನು x x ಅವುದಾನೊಂದು ಕಾಶೀಪಟ್ಟಣವು. ಭೂಮಿಯಲ್ಲಿಯಿದ್ಧಂಥಾದ್ದಾದರು ಅಲ್ಲಿ ವಾಸಂ ಮಾಡಿದವರ್ಗೆ ಪುನರುತ್ಪತ್ತಿಯಿಲ್ಲವಾದಕಾರಣ.

ಅಂತ್ಯ : ವೇದೌವ್ಯಾಸ ಮುನೀಶ್ವರರು ಬುಧಿಗಲಿಸಿದರೂ ಯಂದ್ದು ಸೂತ ಪುರಾಣೀಕನು ನೈಮಿಷಾರಣ್ಯವಾಸಗಳಾದ ಶೌನಕಾದಿ ಮುನಿಗಳಿಗೆ ಹೇಳಿದರು ಯಂದ್ದು ಕುಮಾರಸ್ವಾಮಿಯು ಅಗಸ್ತ್ಯಂಗೆ ನಿರೂಪಿಸಿದರೂ। ಯಿಂತೀ ಕಂನಡ ಭಾಷೆಯಿಂ ವಿರಚಿಶಿಸಿ ಸ್ಕಾಂದ ಪುರೋಣೋಕ್ತ ಕಾಸಿ ಮಹಿಮಾರ್ಥ ದರ್ಪಣದಲ್ಲಿ ಕಥಾ ಸಂಗ್ರಹವಂ ಪೇಳ್ದುದು ಅಧ್ಯಾಯಾ ೧೦೦ಕ್ಕಂ ಮಂಗಳಮಹಾಶ್ರೀ ಕಾಸಿಖಾಂಡ ಮಹಾತ್ಮೆ ಸಂಪೂರ್ನ. ಜಯಮಂಗಳ ಮಹಾ॥ ಶ್ರೀ........ ರಾಕ್ಷಸನಾಮ ಸಂವತ್ಸರದ ಜೇಷ್ಠ ಬಹುಳ ೬ ಬುಧವಾರದಲ್ಲು॥ ಮಹಾರಾಜಶ್ರೀಯವರ ಸಂನ್ನಿಧಾನಕೆ ಶಿವಗಂಗೆ ಹೊಂನಪ್ಪನ್ನು ಬರದು ವಪ್ಸಿದ ಕಾಶಿಕಾಂಡದ ವೈಯ್ಸಿ.

ವಿಷಯ : ಸ್ಕಾಂದ ಪುರಾಣೋಕ್ತ ಕಾಶಿಯ ಮಹಿಮೆ.

ವಿಶೇಷ : ಗ್ರಂಥದ ಕೊನೆಯಲ್ಲಿ ಮೂಲಪ್ರತಿಯ ವಿವರಣೆಯಿದೆ. ಗ್ರಂಥದ ೨, ೩ನೆಯ ಪತ್ರಗಳಲ್ಲಿ ಬರವಣಿಗೆಯಿಲ್ಲ. ೧ನೆಯ ಪತ್ರದಲ್ಲಿ ೬ ಪಂಕ್ತಿ ಬರವಣಿಗೆಯಿದೆ.

302

ಕೆ. ೫೬೫/೩	**ಕಿಂಚಿತ್ ಭಾರತ**	ಭಾಮಿನೀಷಟ್ಪದಿ
೫.೧" x ೨.೨"	?	?
೧೨–೧೫ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಭಾರತ ಹದಿನೆಂಟು ಪರ್ವಕ್ಕೆ ಹದಿನೆಂಟು ಪದ ಬರವುದಕ್ಕೆ ಶುಭಮಸ್ತು.

ಕೇಳು ಜನಮೇಜಯನೆ ಮುನಿ ಶಿರಿ
ಲೋಲ ವೇದವ್ಯಾಸ ದೇವರು
ತಾಳಿಸಿದನವತಾರ ಪಾಂಡವ ಕೌರವರ ಜನಿತಾ

ಶ್ರೀ ಲತಾಂಗಿಯ ರಮಣ ಕೃಷ್ಣನು
ಪಾಲಿಸಿದನರಗಿನಲಿ ಐವರ
ಮೇಲೆ ಮದುವೆಯ ಮಾಡಿ ಕಾಯ್ದನು ಆದಿಪರ್ವದಲಿ ॥ ೧ ॥

ಅಂತ್ಯ : ವೀರಸ್ವರ್ಗಕೆ ಹೋಗಲೈವರು
ಸೇರಿದರು ಗೋವಿಂದನಂಘ್ರಿಯ
ಲೋರಂತೆ ಯಮತನಯ ಕ್ರೂರವನು ಮರದೂ
ತೋರಿದನು ಲೀಲಾವಿನೋದವ
ಸಾರಿದನು ಕಪಟಾದಿ ನಾಟಕ
ಧಾರ ಗದುಗಿನ ವೀರನಾರಾಯಣ ಜಗದ್ಚರಿತಃ ॥ ೨೦ ॥
ಭಾರತ ಹದಿನೆಂಟು ಪರ್ವ ಸಮಾಪ್ತ.

ವಿಷಯ : ಭಾರತದ ಸಂಗ್ರಹ ಕಥೆ.

ವಿಶೇಷ : ಈ ಕಟ್ಟಿನಲ್ಲಿ ಹಾಡುಗಳು, ಕಿಂಚಿತ್ ರಾಮಾಯಣ, ಸುಭಾಷಿತಗ್ರಂಥ, ಸರ್ವಜ್ಞ ಪದಗಳು ಎಂಬ ಇತರ ಗ್ರಂಥಗಳಿವೆ.

303

ಕೆ. ೫೫೧/೨	**ಕಿಂಚಿತ್ ರಾಮಾಯಣ**	ಭಾಮಿನೀಷಟ್ಪದಿ
೧೪.೮" × ೨"	?	?
೨೧–೨೨ ಪತ್ರ	೭ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ರಾಮಚಂದ್ರಾಯ ನಮಃ ॥ ಕಿಂಚಿತ ರಾಮಾಯಣ ಬರವುದಕ್ಕೆ ಶುಭಮಸ್ತು ॥
ರಾಯ ಜನಮೇಜಯಗೆ ವೈಶಂ
ಪಾಯ ಮುನಿ ಹೇಳಿದನು ಕಿಂಚಿತದಿ ರಾ
ಮಾಯಣ ಸುಧಾಂಮೃತ ಸಾರಸಂಗತಿಯಾ ॥

ಪದನು ॥ ಅನಿಮಿಶರ ದೂರಿನಲಿ ರಾಮನು
ಜನಿಸಿದನು ದಶರಥನ ಗರ್ಭದೊ
ಳನುಜ ಲಕ್ಷ್ಮಣ ಭರತ ಶತ್ರುಘ್ನರ ಸಮೇತದಲೀ

ಮುನಿಯ ಯಜ್ಞವ ಕ್ಯಾದು ಶೂಲಿಯ
ಧನುವನೆತ್ತಿಯೆ ಜನಕಸುತೆಯನು
ಘನ ಹರುಷದಲಿ ಮದುವೆಯಾದನು ರಾಯ ಕೇಳೆಂದ ‖ ೧ ‖

ಅಂತ್ಯ : ಯಂದು ರಾಮಾಯಣದ ಕಥೆಯನು ವಿಸ್ತರ
ದಿಂದ ಪೇಳಲು ಸಂತಸದಿ ಮನ
ದಂದು ಮುನಿಪನ ಚರಣಕೆರಗಲು ಭಾವಶುದ್ಧಿಯಲಿ
ಯಿಂದಿರೇಶನ ಕರುಣದಲಿ ಬಾ
ಳೆಂದು ಹರಕೆಯನಿತ್ತು ಪರಮಾ
ನಂದ ಪದವಿಯನೀವ ಗದುಗಿನ ವೀರನಾರೆಯಣ ‖ ೧೫ ‖

ಕಿಂಚಿತ ರಾಮಾಯಣಾ ಸಮಾಪ್ತ । ಶ್ರೀ ರಾಮಚಂದ್ರಾಯ ನಮಃ । ಶ್ರೀ ವಾಲ್ಮೀಕಿ ರಾಮಾಯಣದಲ್ಲೂ ಖಾಂಡವಾರು ಸಂದಿವಾರು ವಿವರ ಯಂದರಿಉದೂ‖ ಶ್ರೀ ಗುರುವೇ ಗತಿ. ಬಾಲಖಾಂಡ ೧೨ ಸಂಧಿ ೧೭ಕ್ಕೆ ೬೦೨ ಆಯೋಧ್ಯಾನಾಮ ಖಾಂಡ ೧೨ ಸಂಧಿ ೬೩ಕ್ಕೆ ಪದ ೨೪೫ ಅರಣ್ಯನಾಮ ಖಾಂಡ ೧೯ ಸಂಧಿ ೧೩೨ ಪದ ೫೪೭ ಕಿಷ್ಕಿಂದಾವಖಾಂಡ ೧೨ ಸಂಧಿ ೨೧ಕ್ಕೆ ೯೧೫ ಸುಂದರನಾಮ ಖಾಂಡ ೧೨ ಸಂಧಿ ೧೧೨ ಪದ ೬೪೭ ಯುದ್ಧಖಾಂಡ ೧ ಸಂಧಿ ೫೦೨ ಪದ ೨೭೯ಲ ಉತ್ತರನಾಮಖಾಂಡ ಸಂಧಿ ೪೭೨ ಪದ ೨೧೧೫ಕ್ಕಾಂ ಮಂಗಳಮಹಾಶ್ರೀ.

ವಿಷಯ : ರಾಮಾಯಣ.

ವಿಶೇಷ : ಈ ಕಟ್ಟಿನಲ್ಲಿ ಕಪೋತಚರಿತೆ ಎಂಬ ಗ್ರಂಥವಿದೆ. ಇದಲ್ಲದೆ ಹಾಸ್ಯಪತ್ರ, ಊಟದ ರಗಳೆ, ದರ್ಭಾರು ಲೆಕ್ಕವಿರುವ ಕೆಲವು ಪತ್ರಗಳಿವೆ.

304

ಕೆ. ೫೬೫/೨	ಕಿಂಚಿತ್ ರಾಮಾಯಣ	ಭಾಮಿನೀಷಟ್ಪದಿ
೫.೧" × ೨.೨"	?	?
೧೦_೧೨ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ : ಕಿಂಚಿತ ರಾಮಾಯಣ ಬರವುದಕ್ಕೆ ಆಚಂದ್ರಾರ್ಕವಸ್ತು.
ರಾಯ ಜನಮೇಜಯಗೆ ವೈಶಂ
ಪಾಯಮುನಿ ಹೇಳಿದನು ಕಿಂಚಿತದಿ ರಾ
ಮಾಯಣ ಸುಧಾಂಮೃತ ಸಾರಸಂಗತಿಯಾ ‖ ಪಲ್ಲ ‖

ಅನಿಮಿಶರ ದೂರಿನಲಿ ರಾಮನು
ಜನಿಸಿದನು ದಶರಥನ ಗರ್ಭದೊ
ಳನುಜ ಲಕ್ಷುಮಣ ಭರತ ಶತ್ರುಘ್ನರ ಸಮೇತದಲಿ
ಮುನಿಯ ಯಜ್ಞವ ಕಾಯ್ದು ಶೂಲಿಯ
ಧನುವನೆತ್ತಿಯೆ ಜನಕಸುತೆಯನು
ಘನ ಹರುಷದಲಿ ಮದುವೆಯಾದನು ರಾಯ ಕೇಳೆಂದಾ ॥ ೧ ॥

ಅಂತ್ಯ : ಯಿಂತು ರಾಮಾಯಣದ ಕಥೆಯನು
ಸಂತಸದಿ ಮನದಂದು ಮುನಿಪನ
........ಚರಣಕೆರಗಲು ಭಾವಶುದ್ಧಿಯಲಿ
ಯಿಂದಿರೇಶನ ಕರುಣದಲಿ ಬಾ
ಳೇಂದು ಹರಕೆಯನಿತ್ತು ಪರಮಾ
ನಂದ ಪದವಿಯನೀವ ಗದುಗಿನ ವೀರನಾರಾಯಣಾ ॥
ಯಿಂತೀ ಕಿಂಚಿತ ರಾಮಾಯಣ ಪದ ೧೫ಕ್ಕಾಂ ಮಂಗಳ ಮಹಾಶ್ರೀ.

ವಿಷಯ : ರಾಮಾಯಣ.

ವಿಶೇಷ : ಈ ಕಟ್ಟಿನಲ್ಲಿ ಹಾಡುಗಳು, ಕಿಂಚಿತ್ ಭಾರತ, ಸುಭಾಷಿತ ಗ್ರಂಥ, ಸರ್ವಜ್ಞನ ಪದಗಳು ಎಂಬ ಇತರ ಗ್ರಂಥಗಳಿವೆ.

305

ಕೆ. ೧೮೪/೧	**ಕಿರಾತಾರ್ಜುನರ ಕಾಳಗ**	ಭಾಮಿನೀಷಟ್ಪದಿ
೧೩.೫" × ೧.೮"	ಕುಮಾರವ್ಯಾಸ	ಸು. ೧೪೩೦
೧೫೪—೧೬೩ ಪತ್ರ	■ ಪಂಕ್ತಿ	೬೦ ಅಕ್ಷರ

ಆದಿ : ಕದನಮುಖದ ವಿಭೋದಿ ಇಲ್ಲದೆ
ಬೆದರೊದದಗಿದ ನರಗೆ ಕಾರುಂ
ಣ್ಯದಲಿ ಕಾಮವಿರೋಧಿ ಕೊಟ್ಟನು ಪಾಶುಪಥ ಶರವಾ ॥ ಪಲ್ಲ ॥

ಯೆಲೆ ಕಿರಾತ ಮದೀಯಬಾಣದ
ಬೆಲಗೆ ನೀ ಮೃಗವಾಗದಿರು ನಿಂ
ನಳವ ಮೆರೆಯಾ ಬನದ ನರಿ ಮೊಲ ಹುಲ್ಲೆ ಹರಿಣನಲಿ

ಗೆಲಿದ ಗರುವನು ನೀನು ನಿಂನ
ಗ್ಗಳಿಕೆಗಾವಂಜುವೆಲು ನಿಂನಯ
ದಳಕೆ ಪತಿಯುಂಟಾದಡಾತನ ಕೊಂಡುಬಾರೆಂದಾ ॥ ೧ ॥

ಅಂತ್ಯ : ದೇವಿಯರು ಗುಹಗಣಪ ಮುಖ್ಯಗ
ಣಾವಳಿಗೆ ಹೊರವಂಟ್ಟನವರ ಕೃ
ಪಾವಲೋಕನದಿಂದ ಹೊಂಪುಳಿಯೋದನಡಿಗಡಿಗೆ
ದೇವ ಬಿಜಯಂಗೈದು ರಜತಾ
ಗ್ರಾವಶಿಖರಕೆ ಮನದೊಳಗೆ ಸಂ
ಭಾವಿಸಿದನೈ ವೀರನಾರಾಯಣನ ಮೈದುನನಾ ॥ ೧೦೬ ॥
ಅಂತು ಅಧ್ಯಾಯ ೧ಕ್ಕಂ ಪದನು ೧೦೬ಕ್ಕಂ ಮಂಗಳಮಹಾಶ್ರೀ ॥

ವಿಷಯ : ಅರ್ಜುನನು ಪಾಶುಪತಾಸ್ತ್ರವನ್ನು ಪಡೆದದ್ದು.

ವಿಶೇಷ : ೧೬೦ನೆಯ ಪತ್ರ ಲುಪ್ತವಾಗಿದೆ. ಮಹಾಭಾರತದ ಒಂದು ಭಾಗವಿದು. ಇದರೊಂದಿಗೆ ಅಂಗದ ಸಂಧಾನ, ಸುಭಾಷಿತ (ಸಂ), ಸೋಮಾರಾಧ್ಯ ಶತಕ, ರತ್ನಾಕರ ಶತಕ. ಆರವತ್ತುಮೂವರ ತ್ರಿವಿಧಿ, ಶಿವವಚನವಿಷ್ಣು ಕೀರ್ತನೆಗಳು, ಮಾನಸಪೂಜೆ (ಸಂ), ಗುರುಶಿಷ್ಯವಾದ, ಸದ್ಗುರುರಹಸ್ಯ, ಐರಾವತ, ಭಾರತದಲ್ಲಿ ರಾಜನೀತಿ, ಕೃಷ್ಣಮಾಚಾರ್ಯರ ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

306

ಕೆ. ಎ. ೮೭/೪	ಕಿರಾತಾರ್ಜುನೀಯ	ಯಕ್ಷಗಾನ
೧೫.೨" × ೯.೫"	ಶ್ರೀನಿವಾಸ	೧೮೮೧
೬೨–೭೩ ಪತ್ರ	೨೭ ಪಂಕ್ತಿ	೨೫ ಅಕ್ಷರ

ಆದಿ : ಕಿರಾತಾರ್ಜುನೀಯ ಕಥೆ ಪ್ರಾರಂಭ

ಶ್ಲೋಕಂ ॥ ಶ್ರೀರಾಮಾನೇತ್ರನೀಲೋತ್ಪಲದಳನ ಕಳಾನಾಥನಾರ್ತಾರ್ಥಿಹಾರಿ
ಸ್ಫಾರಪ್ರಾಗ್ರ್ಯ ಪ್ರಕಾಶದ್ಯುತಿಹಸನರುಚಿ ಜ್ಯೋತ್ಸ್ನಯುಂ
ವರ್ಧಿಕಾರ್ವೀ
ಸಾರೈಶ್ವರ್ಯಾಬ್ಧಿ ಭಕ್ತಪ್ರಕರ ವರಚಕೋರಾನುಸೇವ್ಯಾಮೃತಂಮ್ಯೋಂ
ಕಾರಾದ್ಯಷ್ಟಾಕ್ಷರಂ ತತ್ಪಠನಮುನೆಮುಗೀಗಾವಗಂ ಶ್ರೀನಿವಾಸಂ
॥ ೧ ॥

ರಾಗ ಬೇಹಾಗ್ ॥ ಅಟತಾಳಂ ॥
ಪಾಹಿ ಪಾಹಿ ವಿನಾಯಕ ವಾಹನ ಶ್ರೀಸಖ
ದೇಹಿಮೇ ತವನಾಮಸೇವನಂ ॥ ಪಲ್ಲ ॥
ಮಾಧವ ಮಧುಹರಭೇದಿತ ದಶಶಿರ
ಭೂದರ ಧರ ಕಂಸಸೂದನ ॥ ೧ ॥
ಪಾಲಿತ ಪಾಂಡವ ಲಾಲಿತ ಲಕ್ಷ್ಮತ
ನೀಲ ಲೋಹಿತಮುಖ ಪಾಲಕ ॥ ೨ ॥
ದಾನವದರ್ಪ ದವಾನಲ ವಸುಧೇಶ
ಶ್ರೀನಿವಾಸ ಸುಭಕ್ತ ಸನ್ನುತ ॥ ೩ ॥

ಅಂತ್ಯ : ರಾಗ । ದರಬಾರ್ । ತಾಳ
ಮಂಗಳ ಶ್ರೀ ಪಾರ್ವತೀಶ
ಜಯಮಂಗಳ ರವಿಕೋಟಿ ಪೂರ್ಣಪ್ರಕಾಶ ॥ ಪಲ್ಲ ॥
ಆಗಮವಂದ್ಯ ಪುರಾರಿಶರಣಾಗತ ಪರಿಪಾಲ ಭಕ್ತಸಂಸಾರಿ
ಭೋಗೀಂದ್ರಾಭರಣ ಗಜಾರಿದಕ್ಷಯಾಗನಾಶನಮಾರಗರ್ವ ಕುಠಾರಿ ॥೧॥

× × × ×

ರಾಗ । ಅಠಾಣ
ಭವತು ಮಂಗಳಂತೇ ಶ್ರೀಗಿರಿಜಾತೆ
ಪಾವನಗುಣಸಂಯುತೆ ॥ ಪಲ್ಲ ॥
ಕುವಲಯಲೋಚನೆ ಕುಂಕುಮಾಂಕಿತಫಾಲೆ
ಭವಭಯನಾಶಿನಿ ಭಕ್ತೇಷ್ಟ ಫಲದಾತೆ ॥ ಅ ॥
ತ್ರೈದಶ್ಯ ಸಂಸೇವ್ಯಪಾದಪಂಕಜೆ ಮಾರ
ಸೂದನ ವಲ್ಲಭೇ ಆದಿದೇವತೆ ಪೂತೇ ॥

ವಿಷಯ : ಕಿರಾತವೇಷದ ಈಶ್ವರನೊಡನೆ ಅರ್ಜುನನು ಹೋರಾಡಿ ಪಾಶುಪತಾಸ್ತ್ರವನ್ನು ಪಡೆದುದು.

ವಿಶೇಷ : ಇದರೊಂದಿಗೆ ಸಮುದ್ರಮಥನ, ಪ್ರಹ್ಲಾದ ಚರಿತ್ರೆ, ಗಿರಿಜಾ ಪರಿಣಯ, ಹರಿಶ್ಚಂದ್ರ ವಿಳಾಸ, ನಳೋಪಾಖ್ಯಾನ, ಹರಿಲೀಲಾ ವಿಲಾಸವೆಂಬ ಗ್ರಂಥಗಳೂ ಇವೆ.

307

ಕೆ. ಬಿ. ೧೦೨	ಕೀಚಕವಧೆ	ನಾಟಕ
೮" × ೬.೫"	?	?
೧–೫೨ ಪತ್ರ	೧೯ ಪಂಕ್ತಿ	೧೮ ಅಕ್ಷರ

ಆದಿ : ವೃತ್ತಂ॥ ಶ್ರೀಮನ್ಮಙ್ಗಳದೇವತಾ ವಿಹರಣೈಕಾಂತಃ ಪುರೋರಸ್ಥಲಂ
ಸೀಮಾತೀತ ಗುಣಾನ್ವಿತಂ ಯದುಕುಲ ಕ್ಷೀರಾಬ್ಧಿ ತಾರಾಧಿಪಂ
ಶ್ಯಾಮಾಂಭೋರುಹದಾಮ ಸನ್ನಿಭ ತನುಚ್ಛಾಯಂ ಕೃಪೈಕಾಶ್ರಯಂ
ಚಾಮೋರ್ವೀಪತಿಗೀಗೆ ಭದ್ರತತಿಯಂ ದಾಮೋದರಂ ಸುಂದರಂ ॥

ಅಂತ್ಯ : ಧರ್ಮ–ಕಂ॥ ಉಪಚಾರವೇತಕಿನಿತಕೆ
ನೃಪ ನಿನ್ನಯ ವಿನಯ ಸುಗುಣ ಸಂತೋಷವನಾ
ನಪರಿಮಿತವಾಗಿ ಪಡೆದೆನು
ಚಪಲತೆಯೇಕಿಳೆಯಿದೆಮ್ಮದೆ ತಿಳಿಯೈ ॥
ಷಷ್ಠಾಂಕಂ ಸಂಪೂರ್ಣಂ × × ×

ರಾಗ॥ ದೇಶಿ॥ ಕಾವಿ॥ ರೂಪಕ॥
ಮಂಗಳಂ ಮಹಾಬಲಾಚಲೇನ್ದ್ರವಾಸಗೆ ಶುಭ
ಮಂಗಳಂ ಜಪಾಸುಮಾಭಿ ರಾಮಭಾಸೆಗೆ ॥ ೧ ॥
ಬಾಲಚನ್ದ್ರಫಾಲಗೆ ಕರುಣಾಲವಾಲೆಗೆ
ಕಾಲಕಾಲ ಲೋಲೆಗೆ ಹಿಮಶೈಲಬಾಲೆಗೆ ॥ ೨ ॥
ಶ್ರೀಮಹೀಶೂರಪಾಲ ಚಾಮರಾಜಗೆ
ಪ್ರೇಮದಿಂದ ಸುತನಿತ್ತ ಚಾಮುಂಡಾಂಬೆಗೆ ॥ ೩ ॥ ಶ್ರೀ ಶ್ರೀ

ವಿಷಯ : ಭೀಮಸೇನನಿಂದ ಕೀಚಕನ ಸಂಹಾರ.

ವಿಶೇಷ : ಪ್ರತಿಯು ಚೆನ್ನಾಗಿದೆ. ತಪ್ಪಿಲ್ಲದ ಬರವಣಿಗೆ. ಆರಂಭದಲ್ಲಿ ಕೃಷ್ಣನ ಸ್ತುತಿಯೂ ಕೊನೆಯಲ್ಲಿ ಚಾಮುಂಡಾಂಬಿಕೆಯ ಸ್ತುತಿಯೂ ಇದೆ. ಈ ಗ್ರಂಥವು ೧೯ನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದೂಹಿಸಬಹುದಾಗಿದೆ. ಇದರಲ್ಲಿ ಮಹಿಶೂರ ಪುರಾಧಿಪ ಚಾಮಭೂಪಾಲನ ಆಶ್ರಯವನ್ನೂ ಅವನ ಶ್ರೇಯಸ್ಸನ್ನೂ ಕೋರಿ ಪೂರ್ವೋಕ್ತ ಸ್ತುತಿಯಿರುವುದರಿಂದ ಈ ಕವಿಯು ಆತನ ಆಸ್ಥಾನದಲ್ಲಿದ್ದಿರಬಹುದೆಂದು ಊಹಿಸಬಹುದಾಗಿದೆ. ಹೊಸಗನ್ನಡ ಪದಗಳು ಹೆಚ್ಚಾಗಿ ಕಾಣುತ್ತವೆ. ಪುಟಸಂಖ್ಯೆಯನ್ನಾಗಲೀ ಪತ್ರಸಂಖ್ಯೆಯನ್ನಾಗಲೀ ಬರೆದಿಲ್ಲ.

308

ಕೆ. ಬಿ. ೧೧೮	**ಕೀಚಕವಧೆ**	ಯಕ್ಷಗಾನ
೭.೮" × ೬.೨"	?	?
೧–೨೪ ಪತ್ರ	೧೫ ಪಂಕ್ತಿ	೨೩ ಅಕ್ಷರ

ಆದಿ : ಶ್ರೀರಾಮ ಸಹಾಯಂ ವಿರಾಟಪರ್ವ ಕೀಚಕವಧ ॥ ಯಕ್ಷಗಾನ ನಾಟಕ ॥

ನಾಂದೀ॥ ಶ್ರೀಲಕ್ಷ್ಮೀಕಾಂತಂ ವನಮಾಲಂ
ವೃಂದಾರಕೇಂದ್ರವಂದಿತಪಾದಂ
ಬಾಲಾರ್ಕಾಮಿತಭಾಸಂ
ನೀಲನಿಭಾಂಗಂ ಕಟಾಕ್ಷದಿಂ ಪೊರೆಗೆಮ್ಮಂ ॥ ೧ ॥

ಅಂತ್ಯ : ಭಾಮಿನೀ ॥ ಧರಣಿಪತಿ ನೀನಾಲಿಸೀಪರಿ
ರಣದಿ ಕೀಚಕನಳಿದ ಭೀಮನ
ಕಲಹದಲಿ ಸಂಶಯ ನಿವೃತ್ತಿಯದಾಯ್ತೆ ನಿನಗೆನಲು
ತಿಳಿದೆನೀಪರಿಯುಂತಲೆಲೆ ಮುನಿ
ತಿಲಕ ಮುಂದಣ ಕಥೆಯ ಪೇಳಿದು
ಸಲಹು ತನ್ನನೆನುತ್ತಲೆರಗಿದನಂದು ಧರಣೀಶಾ ॥ ೨೨೬ ॥
ಮಂಗಳಮಸ್ತು ॥ ಶ್ರೀರಾಮಸಹಾಯಂ ॥ ಶ್ರೀ

ವಿಷಯ : ಭೀಮಸೇನನಿಂದ ಕೀಚಕನ ಸಂಹಾರ.

ವಿಶೇಷ : ಬರಹಗಾರನದಾಗಲೀ, ಕವಿಯದಾಗಲೀ ಕಾಲದೇಶಾದಿಗಳಿಲ್ಲ. ೨೨೬ ಪದ್ಯಗಳಿವೆ. ಆರಂಭದಲ್ಲಿ ನಾರಾಯಣ ಸ್ತುತಿಯಿದೆ. ಅಂತ್ಯದಲ್ಲಿ ಮುಂದಿನ ಕಥೆಯನ್ನು ಹೇಳಬೇಕೆಂಬ ಬೇಡಿಕೆಯು ಮಾತ್ರವಿದೆ.

309

ಕೆ. ೫೬೦	**ಕೀರ್ತನೆಗಳು**	ಹಾಡು
೯.೮" × ೨"	ಪುರಂದರದಾಸಾದಿಗಳು	?
೧–೫೨ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ಗಣಪತಿಕೀರ್ತನೆ ॥ ರಾಗಾ॥ ನಾಟೀ॥ ಜಂಪೆ

ಶರಣು ಶ್ರೀಗಣನಾಥ ಶರಣು ಶ್ರೀಫಲದಾತ
ಶರಣು ಅಂಬಿಕಜಾತ ಶರಣು ಯಿಲಿವರೂಥಾ
ಶರಣು ಶರಣೂ ॥ ೧ ॥

ಅಂತ್ಯ : ಗಿಡ್ಡ ಬ್ರಾಂಹ್ಮಣನಾಗಿ ದೊಡ್ಡದಾನವ ಬೇಡಿ
ಖಡ್ಡಾಯದಲಿ ಭೂಮಿ ಅಳಕೊಂಡಗೇ
ದುಡ್ಡುವಡೆವೆಗಳ ಅಡ್ಡೆಯಲಿ ತರಿಸುವ
ಬಡ್ಡಿಕಾರ ಶ್ರೀ ಪುರಂದರ ವಿಠಲಾಗೇ
ಜಯಮಂಗಳಂ ನಿತ್ಯ ಶುಭಮಂಗಳಂ ॥ ೫ ॥ ಶ್ರೀ.

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ಗ್ರಂಥದ ಕೊನೆಯಲ್ಲಿ ಕ್ರಮಸಂಖ್ಯೆಯಿಲ್ಲದ ಮತ್ತೊಂದು ಪತ್ರವಿದೆ. ಅಸ್ಪಷ್ಟವಾಗಿ ಕಾಣುವ ಒಂದೆರಡು ಹಾಡುಗಳಿವೆ.

310

ಕೆ. ೫೬೧	ಕೀರ್ತನೆಗಳು	ಹಾಡು
೬.೨″ × ೧.೭″	ಪುರಂದರದಾಸಾದಿಗಳು	?
೧—೩೫ ಪತ್ರ	೧೦ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ ಗಣಾಧಿಪತಯೇನಮಃ ॥ ಹರಿಕೀರ್ತನೆ ಬರಉದಕ್ಕೆ ಶುಭಮಸ್ತು ॥
ಗಣಪತಿ ಸ್ತುತೀ ॥
ಶರಣು ಶ್ರೀಗಣನಾಥ ಶರಣು ಶ್ರೀಪಲಧಾತ
ಶರಣು ಅಂಬಿಕಜಾತ ಶರಣು ಯಿಲಿವರೂಥಾ
ಶರಣೂ ಶರಣೂ ॥ ಪಲ್ಲ ॥
ಶರಣು ಯಿಶಾನಪುತ್ರ ಶರಣು ಕೇಶವಮಿತ್ರ
ಶರಣು ಬ್ರಂಹ್ಮನ ಸ್ತೋತ್ರ ಶರಣು ವಾಸವನಮಂತ್ರಾ
ಶರಣು ಶರಣೂ ॥ ೧ ॥

ಅಂತ್ಯ : ಪಂನ್ನಗಶಯನನಿಗೆ ಪಾವಂನ್ನ ಚರಿತನಿಗೇ
ಸಂನ್ನುತಾನಂತ ಸಜ್ಜನಪಾಲಗೆ
ಯಂನ್ನೊಡೆಯ ಶ್ರೀ ಲಕ್ಷ್ಮಿಯರಸ ಪುರಂದರವಿಠ್ಠಲ
ತಂನ್ನ ನಂಬಿರ್ದ ಭಕ್ತರ ಸಲಹುವ ದೇವಗೆ
ಜಯಮಂಗಳಂ ನಿತ್ಯ ಶುಭಮಂಗಳಂ ॥ ೩ ॥
ಪದ ೩೦೫ ಕ್ಕಾಂ ಮಂಗಳಮಹಾ ॥ ಶ್ರೀ.

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ೧೩ನೆಯ ಪತ್ರವು ಆದಿ ಮತ್ತು ಅಂತ್ಯಗಳಲ್ಲಿ ಮುರಿದಿದೆ. ೧೪ನೆಯ ಪತ್ರದಿಂದ ೧೭ನೆಯ ಪತ್ರದವರೆವಿಗೂ ಕೆಳಗಡೆಯ ಭಾಗಗಳು ಮುರಿದಿವೆ. ೧೭ನೆಯ ಪತ್ರದಿಂದ ೨೪ನೆಯ ಪತ್ರಗಳ ಅರ್ಧಭಾಗವು ತೀರ ಮುರಿದಿವೆ. ೨೫–೨೮ ನೆಯ ಪತ್ರ ಗಳ ತುದಿಗಳು ಮುರಿದಿವೆ. ಕವಿಯದಾಗಲೀ ಬರಹಗಾರನದಾಗಲೀ ಕಾಲದೇಶಗಳನ್ನು ಹೇಳಿಲ್ಲ. ಕವಿಯ ಹೆಸರನ್ನು ಸ್ಪಷ್ಟವಾಗಿ ಹೇಳದಿದ್ದರೂ ಪುರಂಧರವಿಠಲ ಇತ್ಯಾದಿ ಅಂಕಿತಗಳಿಂದ ಗ್ರಂಥಕರ್ತೃವಿನ ಹೆಸರು ಪುರಂದರ ದಾಸಾದಿಗಳು ಎಂದು ಹೇಳಬಹುದು.

311

ಕ. ಬಿ. ೨೦೪	**ಕೀರ್ತನೆಗಳು**	ಹಾಡು
೮" × ೬.೧"	?	?
೫–೪೮ ಪತ್ರ	೨೦ ಪಂಕ್ತಿ	೨೩ ಅಕ್ಷರ

ಆದಿ : ರಾಗ ನಾಟ ॥ ಸಲಹೋ ನಂದಾಕುಮಾರ ಸಲಹೋ ಗೋಪೀತನಯ
ಸಲಹೋ ವಸುದೇವಗೆ ಪುತ್ರನೆನಸೀದನೆ ॥ ಪ ॥
ಸಲಹೋ ದೇವಕಿಜಠರದಲ್ಲಿ ಬಂದನೆ....ಸೀದನೆ
ಸಲಹೋ ಶ್ರೀರಾಮಾ ಶ್ರೀಕೃಷ್ಣಾ ಜಯಕೃಷ್ಣಾ
ನಂದನನೆ ಸಕಲ ಸಂಪತ್ತು ಸೂಚಿಶಿಸುತಿಹುದು
ಚಂದದಿಂದಣಿಮಾದಿ ಸಿದ್ಧಿಯಿರಲಾಗೀ
ಬಂದವಿದ್ದೆಯು ಮುಚ್ಚಲಾ ಶಕ್ತಿ ಕುತ್ಸಿತವೂ
ಹಿಂದುಗಳೆವದರಿಂದ ನಂದನಕುಮಾರಾ ॥ ೧ ॥

ಅಂತ್ಯ : ಮಂಗಳಂ ಮಂಗಳಂ ಶಿವಗೆ
ಮಂಗಳಂ ಮಂಗಳಂ ಭವಗೆ ॥ ಪ ॥
ಸೋಮಶೇಖಶಿಖಾಮಣಿಗೆ
ಯೋಲಾಘ್ರಾಣಿ ನೀಲಾಘ್ರಣಿಗೆ
ಕಾಮಲಾಂಗೋಲ್ಲಾಸನಿಗೆ
ಕಾಮದಹನವಾರಣಿಗೆ ॥ ೧ ॥

ವಿಷಯ : ಭಕ್ತಿಯ ಹಾಡುಗಳು.

ವಿಶೇಷ: ಪ್ರತಿಯನ್ನು ಹುಳುಗಳು ಸ್ವಲ್ಪ ತಿಂದಿವೆ. ೬ನೆಯ ಪತ್ರಸಂಖ್ಯೆಯ ಎರಡು ಪತ್ರಗಳಿವೆ. ಪ್ರಾರಂಭವು ೫ನೆಯ ಸಂಖ್ಯೆಯಿಂದಲೇ ಇದೆ. ೧೧, ೧೩, ೩೯ನೆಯ ಪತ್ರಗಳು ಲುಪ್ತವಾಗಿವೆ.

312

ಕೆ. ಬಿ. ೨೬೪	ಕೀರ್ತನೆಗಳು	ಹಾಡುಗಳು
೭.೫" × ೬.೩"	?	?
೨೦ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ: ಕೀರ್ತನೆಗಳು ಬರಿಯುವುದಕ್ಕೆ ನಿರ್ವಿಘ್ನಮಸ್ತು ॥
ರಾಗ ॥ ನಾದನಾಮಕ್ರಿಯ ॥

ಗೋವಿಂದ ಸಲಹೆಂನನೂ
ಗೋವಿಂದ ಸಲಹೆಂನ ಕುಮುದಲೋಚನ ನಿಂನ
ಸೇವಕರಾ ಪಾದಸೇವಕನಯ್ಯ ಶ್ರೀ
ಗೋವಿಂದ ಸಲಹೆಂನನೂ ॥ ಪಲ್ಲವಿ ॥
ತಮನ ಸಂಹರಿಸಿ ವೇದವ ತಂದ ಗೋವಿಂದ
ಅಮರಾರಿಗಮೃತಪಾನವನಿತ್ತ ಗೋವಿಂದ
ಧರಣಿಯ ತಂದ ವರಹರೂಪ ಗೋವಿಂದ
ಭ್ರಮಿಶಿ ಕಂಭದೊಳು ಉದ್ಭವಿಸಿದ ಗೋವಿಂದ
× × × ×
ದಶಾವತಾರವ ತಾಳ್ದ ಗೋವಿಂದ ॥ ೧ ॥

ಅಂತ್ಯ: ಈಷಣ ತ್ರಯಗಳನೆಲ್ಲವ ಬಿಡಿಶೀ
ವಿಷಯದ ಭಾಗ್ಯವ ತ್ಯಜಿಶೀ
ವಾಸುದೇವ ವೈಕುಂಠ ನಾರಾಯಣ
ನಾಮವ ಜಿಹ್ವೆಯೊಳಿರಿಶೀ ॥ ೨ ॥

ಷಣ್ಮತಗಳ ಪರಿಶೋಧಿಸಿ ಸ್ಥಾಪಿಶಿ
ಸದ್ಗುರು ಶಂಕರನೆನಿಶೀ
ಚಿನ್ಮಯಾತ್ಮ ಗುರು ದತ್ತಾತ್ರೇಯ ರೂಪದಿ
ಚಂದ್ರಮೌಳೀಶನ ಭಜಿಶೀ ॥ ೩ ॥

ಕೀರ್ತನೆಗಳು ಸಮಾಪ್ತವು ॥

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ಹಾಡುಗಳಲ್ಲಿ ಪಾದಗಳ ನಿಲುಗಡೆಯನ್ನು ಸೂಚಿಸುವ ಗೀಟುಗಳಿವೆ. ಇದರಲ್ಲಿ ಜೋಗಿ ಹಾಡುಗಳು, ಕೆಲವು ಚಂದಮಾಂಕಿತ ಪದ್ಯಗಳೂ, ಕೆಲವು ಸಂಸ್ಕೃತ ಶ್ಲೋಕಗಳೂ ಇವೆ.

313

ಕೆ. ಬಿ. ೨೭೮	ಕೀರ್ತನೆಗಳು	ಹಾಡು
೮.೧" × ೬.೫"	ರಂಗನಾರಾಯಣ	?
೧–೯ ಪತ್ರ	೨೫ ಪಂಕ್ತಿ	೩೨ ಅಕ್ಷರ

ಆದಿ: ಶೃಂಗಾರಪದ ರಂಗನಾರಾಯಣ ವಿರಚಿತ। ಶ್ರೀ ಸರ್ವಸಿದ್ಧಿಪ್ರದಾಯಕ ವಿನಾಯಕಾಯ ನಮಃ ॥ ಶ್ರೀಶಾರದಾಂಬಾಯ ನಮಃ ॥ ಶ್ರೀಲಕ್ಷ್ಮೀನರಶಿಂಹ್ಮಾಯ ನಮಃ ॥ ರಾಗ ॥ ಗಣಪತಿ ಸ್ತುತಿ ॥

ಗಜಗೌರೀತನಯಾ ಗಣೇಶಾ । ಅಜ ಅಮರ ಸಂನುತನೆ ವಿಘ್ನೇಶಾ ॥ ಪ ॥
ತ್ರಿಜಗಾದಿ ಪೂಜಿತ ತ್ರಿಣೆಯ ಪದಾರ್ಚಿತ
ಭಜಕರ ಮನೋರಥದಾತ
ಭುಜಗಭೂಷಣ ನಿಂನ್ನ ಚರಣಾಂ
ಬುಜದ ಸ್ಮರಣೆಯ ನಿರುತ ಗೈಯ್ಯುವ
ಸುಜನರಡಿ ಸೇವಕರ ಸೇವಕನೆನೆಸಿ ಯಂನನು
ನಿಜದಿ ಪೊರೆಯ್ಯೆ ॥ ೧ ॥

ಅಂತ್ಯ : ಮುನಿಪತಿಮುಖ ಪರಿಪಾಲ ಮನಸಿಜ ಅಜಜನಕ ಸುನೀಲಾ
ಅನಗ ನಿರ್ಗುಣನಪ್ರಮೇಯ ಚಿನುಮಯಾತ್ಮಕ ಚಿಂತೆ ತೊಲಗಿಸಿ
ವನಜಮಾಲ ಭಕತಪಾಲ
ಯದುಗಿರಿಯ ನಾರಾಯಣಾನೇ
ಶ್ರೀ ಕರಿವರದನೆ ಕಾಯೋ ಯೆಂನ
ಹರಿದುರಿತ ಸಂಹ್ಮರಮೂರ್ತಿ ನಿಂನಾ ॥ ೩ ॥ ಶ್ರೀ

ವಿಷಯ : ಭಕ್ತಿಯ ಹಾಡುಗಳು.

ವಿಶೇಷ : ಇದರಲ್ಲಿ ಚಿಕ್ಕದೇವರಾಜರ ಕಾಲದ ಶೃಂಗಾರದ ಪದಗಳೂ, ಭಕ್ತಿಪರ ಕೀರ್ತನೆಗಳೂ, ರಾಮಾಯಣದ ಪಂಚರತ್ನದ ಆರತೀ ಕೀರ್ತನೆಗಳೂ ಕೆಲವು ಸಂಸ್ಕೃತ ಭಾಷೆಯಲ್ಲಿರುವ ಕೀರ್ತನೆಗಳೂ ಇವೆ.

314

ಕೆ. ಎ. ೩೦೮	**ಕುಮಾರೇಶ್ವರ ಪುರಾಣ**	ವಾರ್ಧಕ ಷಟ್ಪದಿ
೧೩.೧" × ೮.೪"	ಕುಮಾರವಿಭು	೧೮೨೧
೧–೪೪೫ ಪುಟ	೨೪ ಪಂಕ್ತಿ	೧೬ ಅಕ್ಷರ

ಆದಿ : ಶ್ರೀವಾಚ್ಯದ ಕುಮಾರಾರ್ಯವಿರಚಿತ ಕುಮಾರೇಶ್ವರಪುರಾಣದೊಳ್ ಪ್ರಥಮ ಸಂಧಿ ॥ × × ಕುಮಾರೇಶ್ವರ ಪುರಾಣ ಬರೆವುದಕ್ಕೆ ಶುಭಮಸ್ತು ॥ × × ವಾರ್ಧಿಕ ಷಟ್ಪದಿ ॥ ಪಲ್ಲ —

ಶ್ರೀಶಿವನಿರೂಪದಿಂದವತರಿಸಿ ಸಿದ್ಧವೀ
ರೇಶನಿಂ ಷಟ್ಸ್ಥಳವ ನೆರೆತಿಳಿದ ಗುರು ಕುಮಾ
ರೇಶನುರುಚರಿತಮಂ ವಿರಚಿಸುವೆ ನಾನೊಲಿದು ಸದ್ಭಕ್ತರಾಲಿಪುದಿದಂ ॥

ಪದ ॥ ಶ್ರೀಮದಗವರಸುತಾಬಾಹು ಚಂಪಕ ಕುಸುಮ
ದಾಮನಿಯುತಪ್ರೆಗಳನತ್ಯಧಿಕ ಪ್ರಮಥ ವರ
ಸ್ತೋಮ ಪರಿವೃತನಖಿಲ ಲೋಕಪಾಲನ ಶೀಲನುರಗಪತಿ ಹಸ್ತಕಟಕಂ
ತಾಮರಸಲೋಚನ ಪಿತಾಮಹ ಸುರೇಶ ಪ್ರಮು
ಖಾಮರವಿತಾನ ಮಣಿಮುಕುಟಪಟತಟ ಘಟಿತ ಪದ
ತಾಮರಸಯುಗಳನಭಯಂಗೊಟ್ಟು ರಕ್ಷಿಸುಗೆದೋರುಮಂದಿರನುಮೇಶಂ ॥ ೧ ॥

ಅಂತ್ಯ : ಇದು ಸಕಲ ವೀರಮಾಹೇಶ್ವರರ ಮೃದುಲತರ
ಪದಪದ್ಮ ಮಕರಂದ ಷಟ್ಪದಂ ಷಟ್ಸ್ಥಲದ
ಸದಮಲಾಚಾರ ಸಂಸಿದ್ಧನನ್ವಿತ ಕ್ರಿಯಾಜ್ಞಾನ ಸಂಪದ್ವಿಭೂಷಂ
ವಿದಿತ ಶಿವಮತವಾರ್ಧಿವರ್ಧನ ಸುಧಾಂಶುವಾ
ಚ್ಯದ ಕುಮಾರಾರ್ಯನೆಂದೆಂಬ ಶಿವಯೋಗಿಕವಿ
ಮುದದಿ ವಿರಚಿತ ಕುಮಾರೇಶ್ವರ ಪುರಾಣದೊಳು ರಾಜಿಪೊಂಭತ್ತು
ಸಂಧಿ ॥ ೧೭೧ ॥

ಅಂತು ಸಂಧಿಗಳೊಂಭತ್ತಕ್ಕಂ ಪದಗಣನೆ ೧೭೫೫ ಕ್ಕಂ ಮಂಗಳಮಹಾಶ್ರೀ.

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಮೂಲಪ್ರತಿಯಲ್ಲಿ ಅಲ್ಲಲ್ಲೇ ಬಿಟ್ಟುಹೋಗಿರುವ ಪದ್ಯಭಾಗಗಳನ್ನು ಸೀಸದ ಕಡ್ಡಿಯಲ್ಲಿ ಬರೆದಿದೆ.

315

ಕೆ. ಎ. ೬೧ **ಕುಮುದೇಂದು ರಾಮಾಯಣ** ವಿವಿಧಷಟ್ಪದಿ
೧೨.೭" × ೭.೬" ಕುಮುದೇಂದು ಸು. ೧೨೭೫
೧–೨೬೯ ಪತ್ರ ೨೭ ಪಂಕ್ತಿ ೨೮ ಅಕ್ಷರ

ಆದಿ : ಕುಮುದೇಂದು ರಾಮಾಯಣ | ರಾಗ ಫಳಮಂಜರಿ—

ರಾಮಕಥೆಯಂ ಮನಃ
ಪ್ರೇಮದಿಂ ಕೇಳ್ವರಿಗೆ
ಕಾಮಿತಾರ್ಥಂ ತಪ್ಪದಪ್ಪುದರಿದೆ
ಶ್ರೀಮಹಿತನಖಿಳಸುಖ
ದಾಮನನವದ್ಯತರ
ಸಾಮನವನತ ಸುರೋರಗೇಂದ್ರಂ ॥೧॥

× × × ×

ಚರಿತರಘುವಂಶ ಕೃತಿ
ಚರಿತಾರ್ಥರಂತವರು
ಚರಿತಾದಿ ನಾಯಕಂ ರಾಮಚಂದ್ರಂ
ಚರಿತ ಕವಿ ಕುಮುದೇಂದು
ಪರವಾದಿ ಗಿರಿವಜ್ರ
ವಿರಚಿಸಿದನಿದನನ್ಯಸಾಮಾನ್ಯನೆ ॥೮॥

ಅಂತ್ಯ : ಕಡಲ್ಗಳೆಯ್ದೊಂದಾಗೆ ಮಾಣದೆ
ಘುಡುಘುಡಿಪ ಕಡೆಗಾಲದಭದ್ರ
ಗಡಣದೊಳು ಗಡಣಿಸಿ ಬಿಡದೆ ಪುರಿವುತ್ತಯಿದ್ರ್ದದೆನೆ
ಸಿಡಿಲುಮಿಂಚಿನ ಮೊಳಗಿನುರುವಣಿ
ಪಡೆಯೆ ಭಯಮಂ ದಹನಶರಲಂ
ಕಿಡಿಸುತಂ ಬಂದುದು ಮುಕುಂದನತೊರದಾರುಣ ವಾರುಣಾಸ್ತ್ರಂ ॥೭೦॥

ವಿಷಯ : ಜೈನರಾಮಾಯಣ ಕಥೆ.

ವಿಶೇಷ : ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಅಸಮಗ್ರ. ಶಕಟರೇಫ ಪ್ರಯೋಗ ವಿದೆ.

316

ಕೆ. ಬಿ. ೧೪೨	**ಕುಂಭಕರ್ಣಯುದ್ಧ**	ಯಕ್ಷಗಾನ
೭.೭"×೬.೩"	ಬ್ರಹ್ಮಣಾಂಕ(?)	?
೧–೩೬ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ : ಯಕ್ಷಗಾನ ಕುಂಭಕರ್ನರಾಮಯುದ್ಧ ನಾಟ್ಕ ನಾಂದೀವೃತ್ತ—
ಶ್ರೀರಾಮಂ ಸನಕಾದಿವಂದಿತಪದಂ ಶ್ರೀ ಜಾನಕೀವಲ್ಲಭಂ
ಸಾರಬ್ಜಾಸನಪೂಜಿತಾಂಘ್ರಿ ಕಮಲಂ ಸಾಕೇತವಾಸಂ ಹರಿಂ
ಕಾರುಣ್ಯಾಂಬುಧಿ ರಾಘವಂ ಶುಭಕರಂ ಕಾಮಾರಿಮಿತ್ರಂ ವಿಭೋ
ಕ್ಷೀರಾಂಭೋ ನಿಧಿವಾಸ ಶೇಷಶಯನಂ ಶ್ರೀ ವೇಂಕಟೇಶಂ ಭಜೇ ॥೧॥

ಅಂತ್ಯ : ಕಂದ ಪದ್ಯ॥ ಶ್ರೀರಾಮಂ ನತಜನ ಸೌ
ಖ್ಯಾರಾಮಂ ಮನ್ಮಥಶತಸುಂದರ ಶ್ರೀಸೀ
ತಾರಾಮಂ ಪಾಲಿಸುವಂತಾ
ನಾರೈದು ಭಜಕರಿಷ್ಟಾರ್ಥಂಗಳನೆಂದುಂ ॥ ೪೩೨ ॥

ಸಂಪೂರ್ಣಂ ॥

ಕಂದ॥ ಅಂಗಜಗರ್ವವಿಭಂಗಂ
ಮಂಗಳಗಂಗಾಲಂಕೃತ ಸದುತ್ತಮಾಂಗಂ
ಭೃಂಗಿಮುಖಾನತಸಂಗಂ
ತುಂಗಸುಖ ಕರುಣಿಸಲಿ ವೃಷಭತುರಂಗಂ ॥ ೪೩೩ ॥

ಸಂಪೂರ್ಣಂ ॥

ವಿಷಯ : ರಾಮ ಕುಂಭಕರ್ಣರ ಯುದ್ಧ.

ವಿಶೇಷ : ಪ್ರತಿ ಚೆನ್ನಾಗಿದೆ. ಬೈಂಡನ್ನು ಮಾತ್ರ ಅಲ್ಲಲ್ಲಿ ಹುಳು ತಿಂದಿದೆ.

317

ಕೆ. ಬಿ. ೪೭೮	**ಕುರುಕುಲಕಲಹಂ**	ನಾಟಕ
೮.೩" × ೬.೭"	ವೆಂಕಟರಾಯ	೧೯೪೨
೧–೫೯ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ವೆಂಕಟರಾಯಕವಿ ವಿರಚಿತಂ ಕುರುಕುಲಕಲಹಂ।
(ಮಧ್ಯಮವ್ಯಾಯೋಗಂ, ಪ್ರಥಮರೂಪಕಂ)

ನಾಂದ್ಯಂತದೊಳ್ ಸೂತ್ರಧಾರಂ ಪ್ರವೇಶಿಪಂ ॥

ಸೂತ್ರಧಾರಂ॥ ಕಂ॥ ತ್ರಿಜಗತ್ಕ್ರಮಣದೊಳಂಬರ
ಜಲಧಿಗಳಂ ಸೇರ್ಚಿ ನಿಮಿರ್ದ ವೈಡೂರ್ಯಂಬೊಲ್
ಮೆಱವಚ್ಯುತಪದವೋವುಗೆ
ದನುಜಸ್ರೀ ಹೃದಯಭೇದಿ ಕುವಲಯನೀಲಂ ॥೧॥

ಅಂತ್ಯ : ಕಂದ॥ ನೆಗಳ್ದಂ ಭಾರದ್ವಾಜ
ಪ್ರಬುದ್ಧಗೋತ್ರಂ ಹನೂಮದಾತ್ಮಜನೊವಜಂ
ವರಶಾತ್ವಾದ ಶ್ರೀವೈ
ಷ್ಣವಕುಲಜಂ ವೇಂಕಟಾರ್ಯಕವಿ ಕವಿರಾಜಂ ॥೭೦॥

(ಸಮಾಪ್ತಮೂರುಭಂಗಂ)

ಕಂದ॥ ಕವಿಕುಲತಿಲಕನ ಭಾಸನ
ವರಭಾರತ ಕಥೆಯ ರೂಪಕಂಗಳನಯ್ದಂ
ನೆರೆ ಸಂಯೋಜಿಸೆ ನೆಗಳ್ದುದು
ಬುಧರೊಪ್ಪುವ ತೆರದಿನಿಂತು ಕುರುಕುಲಕಲಹಂ ॥೭೧॥
(ಸಂಪೂರ್ಣಮಿಂತು ಕುರುಕುಲಕಲಹಂ)

ವಿಷಯ : ಮಹಾಭಾರತದ ಕಥಾಭಾಗ.

ವಿಶೇಷ : ಭಾಸಕವಿಯ ಮಧ್ಯಮವ್ಯಾಯೋಗ, ಕೃಷ್ಣದೌತ್ಯ, ದೂತಘಟೋತ್ಕಚ, ಕರ್ಣಭಾರ, ಊರುಭಂಗವೆಂಬ ರೂಪಕಗಳನ್ನು ಹಳಗನ್ನಡಕ್ಕೆ ಪರಿವರ್ತಿಸಿ 'ಕುರುಕುಲಕಲಹಂ' ಎಂಬ ಹೆಸರಿನಲ್ಲಿ ಒಂದೇ ಗ್ರಂಥವಾಗಿ ರಚಿಸಿರುವದಾಗಿ ಗ್ರಂಥಕರ್ತನೇ ಮುನ್ನುಡಿಯಲ್ಲಿ ಹೇಳಿಕೊಂಡಿರುವನು. ಮೊದಲೆರಡು ಪತ್ರಗಳಲ್ಲಿ ಮುನ್ನುಡಿ ಮತ್ತು ಪಾತ್ರ ವಿವರವಿದೆ.

318

ಕೆ. ಎ. ೩೦೦	**ಕುವಲಯಾನಂದ**	ವಾರ್ಧಕಷಟ್ಪದಿ, ಇತ್ಯಾದಿ
೧೩" × ೮"	ಜಾಯೆಂದ್ರ	ಸು. ೧೭೩೪
೧–೭೫ ಪತ್ರ	೨೫ ಪಂಕ್ತಿ	೨೨ ಅಕ್ಷರ

ಆದಿ : ಕನ್ನಡ ಕುವಲಯಾನಂದಾಲಂಕಾರಶಾಸ್ತ್ರವಂ ಬರೆಯುವದಕ್ಕೆ ಶುಭಮಸ್ತು.

× × × ×

ವಾರ್ಧಿಕ॥ ಶ್ರೀವರಶಿವಾಲಪನಶಶಿಹರಿ ಚಕೋರ ಸಂ
ಭಾವಿತಜನಪ್ರಕರಪಾಲನ ಧುರೀಣ ರಾ
ಜೀವಸಖಕೋಟಿಸಂಕಾಶ ಶತಮನ್ಯುನುತ ಚರಣಪಾಪಾ-
-ಘಹರಣಾ

ಭೂವಲಯಮಧ್ಯಕೈಲಾಸಗಿರಿನಿಲಯ ಭೂ
ಪಾವನಚರಿತ್ರ ನಿಗಮಸ್ತೋತ್ರಪಾತ್ರ ಮಾ
ದೇವವಕ್ಷೇಶಪತ್ರಕಾಕ್ಷದಕ್ಷದೀಕ್ಷಾಸೀಕ್ಷ ರಕ್ಷಿಸೆಮ್ಮ ॥೧॥

ಅಂತ್ಯ : ಇರುವ ತೊರಗಲ್ ಸೀಮೆಗರಸಾದ ಲಿಂಗಭೂ
ವರನ ಸತ್ಪುತ್ರ ಜಾಯೇಂದ್ರನಿನ್ನಿರ್ಮಿಸಿದ
ಸರಸ ವರ್ಣಕ ಕಾವ್ಯಮಿದನೊಲಿದು ಲಾಲಿಪುದು ಪಾಲಿಪುದ ಲೀಲೆಯಿಂದ
ವರುಷವಾನಂದ ಮಾಧವಮಾಸದಲ್ಲಿ ಭಾ
ಸುರ ಶುಕ್ಲ ಪಕ್ಷ ಪ್ರತಿಪದಿಯು ರವಿವಾಸರದಿ
ಪರಿಪೂರ್ಣವಾಗಿಸುಮಲೆಗಳ ಕರಣಂಗಳಿಗೆ ಪರಮಮಂಗಳವೀವರು ॥೨॥
ಇತಿ ಕುವಲಯಾನಂದಾಲಂಕಾರ ಶಾಸ್ತ್ರಕರ್ಣಾಟಕ ಭಾಷಾಯಾಂ ಜಾಯ
ಗೊಂಡ ದೇಶಾಯ ವಿರಚಿತ ಕವನಂ ಸಂಪೂರ್ಣಮಸ್ತು॥

ವಿಷಯ : ಅಲಂಕಾರಶಾಸ್ತ್ರ.

ವಿಶೇಷ : ಕೊನೆಯ ೧ ಪತ್ರದಲ್ಲಿ ವಿಷಯಾನುಕ್ರಮಣಿಕೆಯನ್ನು ಕೊಡಲಾಗಿದೆ. ಗದುಗಿನ ಶ್ರೀ ತೋಂಟದಾರ್ಯಸ್ವಾಮಿಗಳ ಮಠದಿಂದ ತಂದ ಪುಸ್ತಕದ ಮರು ಪ್ರತಿ ಇದೆಂದು ಇದರಲ್ಲಿ ಬರೆದಿದೆ.

319

ಕೆ. ೧೦೩/೧	**ಕುಶಲವರ ಕಥೆ**	ಯಕ್ಷಗಾನ
೧೦.೧″ × ೧.೩″	?	?
೧–೪೬ ಪತ್ರ	೪ ಪಂಕ್ತಿ	೨೬ ಅಕ್ಷರ

ಆದಿ : ಕುಶಲವರ ಕಥೆ ಬರೆಯುವದಕ್ಕೆ ನಿರ್ವಿಘ್ನಮಸ್ತು॥
ರಾಗಾ॥ ನಾಟಿ ॥ ತ್ರಿಉಡೆ ॥

ಶರಣು ಮಂಗಳ........ತ್ರಿ........ಶೇವಕಾ
ಜ........ಪಾಲಿಪ ದಾಯಕಾ
ಶರಣು ದುರಿತಂಗಳಿಗೆ ಪಾವಕಾ
ಶರಣು ನಿರ್ವಿಘ್ನದಾಯಕಾ ಶರ........ಶರಣೂ ॥ ೧ ॥

ಶರಣು ಅರುಣ ಕಿರೀಟ ಕೀರ್ತಿ ಕಾಲಾಪಘನಸುಂವ್ಮಾನಕಾ
ಶರಣು ಸುರಮುನಿ ವರದಪಾಲಕಾ
ಶರಣು ಶ್ರೀಗಣನಾಯಕಾ ॥ ೨ ॥

ಅಂತ್ಯ : ವಚನಾ ॥ ಯಿಂತು ।ಶೀತಾಮಹಾಲಕ್ಷ್ಮಿಯು। ಲಕ್ಷ್ಮಣರೊಡನೆ ನಂನ್ನ ಪ್ರಾಪ್ತಿಯಿಷ್ಟಾಯಿತು ಲಕ್ಷ್ಮಣಾ। ನೀನು ಅಯೋಧ್ಯಾ ಪಟ್ಟಣಕೆ ಪೋಗು ಲಕ್ಷ್ಮಣಾಯೆಂದು ಪೇಳಲಾಗಿ ಲಕ್ಷ್ಮಣನು ಅಲ್ಲಿಯಿರುವಂತ್ತಾ ವನಾಂತರಕ್ಕು ವೃಗಜಾತಿಗಳಿಗು ಹಕ್ಕಿ ಪಕ್ಷಿಗಳಿಗು ಯೇನೆಂದು ಪೇಳುತಿರ್ದ್ದನದೆಂತೆನೆ॥

ವಿಷಯ : ಕುಶಲವರು ಶ್ರೀರಾಮನೊಡನೆ ಯುದ್ಧಮಾಡಿದ ಉತ್ತರರಾಮಾಯಣದ ಕಥೆ.

ವಿಶೇಷ : ೧ ನೆಯ ಕ್ರಮಸಂಖ್ಯೆಯುಳ್ಳ ಎರಡು ಪತ್ರಗಳಿವೆ. ಪತ್ರಗಳ ತುದಿಗಳು ಮುರಿದಿರುವುವಲ್ಲದೆ ಕೆಲವು ಪತ್ರಗಳು ಹುಳುವಿನಿಂದ ಶಿಥಿಲವಾಗಿವೆ. ಅಸಮಗ್ರ ಪ್ರತಿ. ಇದೇ ಕಟ್ಟಿನಲ್ಲಿ ಈ ಕೃತಿಯು ಬಳಿಕ ಐರಾವತವೆಂಬ ಗ್ರಂಥವಿದೆ.

320

ಕೆ. ೩೪೦	**ಕುಶಲವರ ಕಥೆ**	ಯಕ್ಷಗಾನ
೧೦.೩" × ೨.೨"	?	?
೧–೪೭ ಪತ್ರ	೯ ಪಂಕ್ತಿ	೩೩ ಅಕ್ಷರ

ಆದಿ : ಯಕ್ಷಗಾನದ ಕುಶಲವರ ಕಥೆ ಬರೆಯುವುದಕ್ಕೆ ನಿರ್ವಿಘ್ನಮಸ್ತು ಶ್ರೀ ರಾಮಾ
ಪಲ್ಲವೀ ॥ ರಾಗಾ ॥
ದ್ವಿಪದೇ ॥ ಗಜಮುಖಗೆ ತಲೆವಾಗಿ ಗೌರಿಗೊಂದಿಸುತಾ
ಅಜನರಸಿ ಶ್ಯಾರಥೆಯಲಿಂತು ಮಂನಿಸುತಾ ॥ ೧ ॥

× × × ×

ಯಿಾ ಕಥೆಯಂನ್ನು ವೈಶಂಪಾಯಮುನೀಶ್ವರರು ಜನಮೇಜಯರಾಯಗೆ ಪೇಳುತಿರ್ದರದೆಂತೆನೇ ॥

ಅಂತ್ಯ : ವಾರ್ಧಿಖ್ಯಾ ॥ ಭೂಮಿಪತಿ ಕೇಳ್ಬಳಿಕಾ । ಶ್ರೀರಾಮಚಂದ್ರನು ತಂನ್ನ ಸತಿ ಸಹ ಪುತ್ರರು ಸಹಾ। ಪ್ರೇಮದಿ ಆಯೋಧ್ಯಾಪುರದ ರಾಜ್ಯವಂನಾಳುತಿರಲು। ವಾಲ್ಮೀಕಿ ಮುನೀಶ್ವರನು ಬೀಳ್ಕೊಂಡು । ತಂನ ಆಶ್ರಮಕ್ಕೆ ತೆರಳಲಾ। ಅತ್ತಲಾ ಜನಮೇಜಯ ಕ್ಷಿತಿಪಾಲ ಕೇಳಿದ ಕುಶಲವರ ಕಾಳಗವೆಂದೊರೆದ ವೈಶಂಪಾಯಮುನೀಶ್ವರನ ಮೊದಲು ಆರಿದ ವರ್ನಿಸಲು ಶ್ರೀ ಕಣ್ವಾಪುರಿ ಕ್ರಿಷ್ಣಸ್ವಾಮಿಯ ಕಟಾಕ್ಷದಿಂದಾ ಸುಖಸಾಂಬ್ರಾಜ್ಯವಾಳುವರೂ ॥ ಕುಶಲವರ ಕಥೆ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಕುಶಲವರು ಶ್ರೀರಾಮನೊಡನೆ ಯುದ್ಧಮಾಡಿದ ಉತ್ತರರಾಮಾಯಣದ ಕಥೆ.

ವಿಶೇಷ : ಮೂರನೆಯ ಗರಿ ಇಲ್ಲ. ನಾಲ್ಕನೆಯ ಗರಿಯು ಒಂದು ತುಂಡು ಇದೆ. ಇದೇ ಕಟ್ಟಿನಲ್ಲಿ ಪಾರ್ವತೀ ಕೊರವಂಜಿ ಎಂಬ ಇನ್ನೊಂದು ಕೃತಿಯಿದೆ.

321

ಕೆ. ಬಿ. ೪೮೩/೧	ಕುಶಲವರ ಕಥೆ	ಯಕ್ಷಗಾನ
೭.೬" × ೬"	ಲಿಂಗರಾಜ	೧೮೫೦
೧–೬೯ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ಕುಶಲವರ ಕಥೆ ॥ ನಾಂದಿ ಕಂದಾ ॥

ಶ್ರೀ ಗಿರಿಜಾಲಿಂಗನ ಸುಖ
ಸಾಗರ ಸಾಮೋದಜನಕ ಹೃದಯ ಶಶಾಂಕಂ
ಭೋಗೀಂದ್ರಭೂಷಣಂ ನಿಖಿ
ಲಾಗಮನುತನಿರದೆ ಸಲಹಲೀ ವೀರೇಶಂ ॥ ೧ ॥

× × × ×

ಕಂದ॥ ಮುನಿ ವೈಶಂಪಾಯನನಾ
ಜನಮೇಜಯನುಸುರ್ದ ಕುಶಲ ಕುಶಲವ ಕಥೆಯಂ
ಮನವಲಿಯೆ ಪೇಳ್ವೆನಾನದ
ರನುಗೆಡದಂತಿರದೆ ಯಕ್ಷಗಾನ ಕ್ರಮದಿಂ ॥ ೧೨ ॥

ದ್ವಿಪದೆ॥ ಜನಮೇಜಯಂಗೆ ಜೈಮಿನಿ ಭಾರತವನು
ವಿನಯದಿಂದುಸುರುತಿರೆ ಮನದಂದು ನೃಪನೂ ॥ ೧೩ ॥

ಶ್ರೀ ರಾಮಚಂದ್ರನು ಕುಮಾರ ಕುಶಲವರು
ಆ ರಣದೊಳಿಂತು ಕಾಯ್ಪೇರಿ ಕಾದಿದರು ॥ ೧೪ ॥

ಅಂತ್ಯ : ವಾರ್ಧಕ ॥ ಘನದಿ ವೀಣೆಯೊಳು ರಾಮಾಯಣವ ಬಾಜಿಸುತ
ಅನುವಿಂದ ಪಾಡಿಸಲ್ತನುಜರಂ ತಳ್ಕೈಸಿ
ವನಿತೆಯಂ ಸಂತೈಸಿ ವಾಲ್ಮೀಕಿಯಂನು ಮಂನಿಸುತಲಾಶ್ರಮಕೆ ಕಳುಹಿ
ಮನುಕುಲನು ತನುಜರಂ ಬೆರದು ಸತಿಸಹಿತ ರಥ
ವನು ಹತ್ತಿ ನಗರವಂ ಪೊಕ್ಕು ಸುಖದಿಂದಿರ್ದ
ನೆನುತ ವೈಶಂಪಾಯನನು ಕುಶಲವರ ಕಥೆಯು ಜನಮೇಜಯಂಗುಸುರಿದಂ
॥ ೪೩೯ ॥

× × × ×

ಮಂಗಳಪುಂಗವ
ತುಂಗತುರಂಗಮು
ಲಿಂಗನೃಪಾರ್ಚಿತ ವರ ಮಹಲಿಂಗ ॥ ೪೪೩ ॥

ಕಂದ ॥ ತುರಗ ರಸ ರಂಧ್ರಸಾಗರ
ಪರಿಮಿತ ಕಲ್ಯಾಬ್ದಮರತಿ ಪಿಂದಾಗುತಿರ
ಲ್ವಿರಚಿಸಿದಂ ಲಿಂಗನೃಪಂ
ಸರಸೋಕ್ತಿಗಳಿಂದ ಕುಶಲ ಕುಶಲವ ಕಥೆಯಂ ॥ ೪೪೪ ॥ ಶ್ರೀ

ವಿಷಯ : ಕುಶಲವರು ಶ್ರೀರಾಮನೊಡನೆ ಯುದ್ಧಮಾಡಿದ ಉತ್ತರ ರಾಮಾಯಣದ ಕಥೆ.

ವಿಶೇಷ : ಸ್ಫುಟಾಕ್ಷರ, ತೆಳವು ಕಾಗದ. ಲಿಂಗನೃಪನು ಈ ಕೃತಿಯನ್ನು ಕಲಿ ೪೯೬೭ನೆಯ ವರ್ಷದಲ್ಲಿ ರಚಿಸಿದನೆಂದು ಕೊನೆಯ ಪದ್ಯದಿಂದ ತಿಳಿದು ಬರುತ್ತದೆ. ಇದೇ ಪುಸ್ತಕದಲ್ಲಿ 'ದ್ರೌಪದೀ ಸ್ವಯಂವರ' ಎಂಬ ಮತ್ತೊಂದು ಕೃತಿ ಇದೆ.

322

ಕೆ. ೨೦೧/೧	**ಕುಶಲವರ ಕಾಳಗ**	ಯಕ್ಷಗಾನ
೬.೫" × ೧.೬"	?	?
೧–೫೭ ಪತ್ರ	೯ ಪಂಕ್ತಿ	೩೦ ಅಕ್ಷರ

ಆದಿ : ಕುಶಲವರ ಕಾಳಿಗ ಬರೆಯುವದಕ್ಕೆ ಶುಭಮಸ್ತು × × ×

ದ್ವಿಪದೆ॥ ಗಜಮುಖಗೆ ತಲೆವಾಗಿ ಗೌರಿಗೊಂದುಸುತಾ
ಅಜನರಸಿ ಶಾರದೆಯ ಅರಿತು ಮನ್ನಿಸುತಾ
ಪರಶಿವಗೆ ಕೈಮುಗಿದು ಪಾರ್ವತಿಗೆ ನಮಿಸಿ
ಸಿರಿದೇವಿಯರಸನಂ ಶೀಗ್ರದಿಂ ಭಜಿಸಿ
× × × ×
ರಾಮಾಯಣದೊಳಗೆ ಕುಶಲವರ ಕಾಳೆಗವಾ
ಭೂಮಿಯೊಳು ಪೇಳ್ವನಾ ಬಹುಪರಾಕ್ರಮವಾ
ಬಾಲಕರು ನುಡಿಯಂದು ಬರಿದೆ ನಿಂದಿಸದೆ
ಲಾಲಿಸುವೆನು ಜನರಿಗೆ ಅರಿತು ಮಂನಿಸುವೆ ॥ × × ×
ಆಗ ಮುನಿ ಕರುಣಿಸಿದ ಕುಶಲವ
ರಾಘವರ ಸಂಗ್ರಾಮ ಕಥೆಯನು
ಇೀಗ ಭೂಮಿಯೊಳೊರವೆ ಯಕ್ಷಗಾನದಿಂದ ॥ ೩ ॥

ಅಂತ್ಯ : ಸಕಲರು ಜಾನಕಿ ಸಹಿತ ಬಂದವಗೆ
ಭಾರ್ಗವನ ಗರ್ವಾಪಹಾರನಿಗೆ
ನಾಕರುಷಿ ಜನಪಾಲನಿಗೆ
ಅಯೋದ್ಯಪುರದೀಶ ಶ್ರೀರಾಮನಿಗೆ
ಜಯಮಂಗಳಂ ನಿತ್ಯ ಶುಭಮಂಗಳಂ ॥ ೪ ॥
ಕುಶಲವರ ಕಾಳೆಗ ಸಂಪೂರ್ಣಂ ॥

ಪರಿಧಾವಿ ಸಂವತ್ಸರದ ಚೈತ್ರ ಬ ೧೨ ಭಾರ್ಗವವಾರದಲ್ಲು ಬರದು ಹೆಚ್ಚಿದಂತ್ತಾ ಕುಶಲವರ ಕಾಳಗಕ್ಕೆ ಶುಭಮಸ್ತು.

ವಿಷಯ : ಕುಶಲವರು ಶ್ರೀ ರಾಮನೊಡನೆ ಯುದ್ಧ ಮಾಡಿದ ಉತ್ತರ ರಾಮಾಯಣದ ಕಥೆ.

ವಿಶೇಷ : ಇದರೊಂದಿಗೆ ಸಾರಂಗಧರನ ಕಥೆಯೆಂಬ ಗ್ರಂಥವೂ ಇದೆ.

323

ಕೆ. ೨೪೨ **ಕುಶಲವರ ಕಾಳೆಗ** ಯಕ್ಷಗಾನ
೧೩.೮" × ೧.೫" ? ?
೧–೩೦ ಪತ್ರ ೭ ಪಂಕ್ತಿ [illegible] ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ॥ ಕುಶಲವರ ಕಳಗ ಬರಉದಕ್ಕೆ ಸುಭಮಸ್ತು.

ರಾಗ ಘಂಟರವ ಯೇಕತಾಳ |
ಭಜಿಸುವೆ ಮನದಲಿ ನಿತ್ಯಭಜಕರ ಕುಬ್ಜೈವವಸುತ
ವ್ರಜಸೇವಿತನೆಂದೆನಿಸುವ ಗಜವದನಾ × ×
ವಾಲ್ಮೀಕಿ ಮುನಿಪತಿಗೆ ವಂದನೆ ಮಾಡಿ
ನಾಲ್ವೆಯಿ ಸಕಲ ಸುರರೊಳು ಮತಿಯ ಬೇಡಿ ‖ ೩ ‖
ರಾಮಾಣದೊಳು ಕುಶಲವರ ಕಾಳಗವ ಭೂ
ಯೊಳು ಪೇಳ್ವೆ ಬಹುವಿಧ ಪರಕ್ರಮಾ
ಬಾಲಕರ ನುಡಿಯಿಂದ ಜರಿದೆ ನಿಂದಿಸದೆ
ಕೇಳಿ ಸಂತೋಷವ ಸುಜನರೆಲ್ಲರಿಂಗೆ ‖ ೩ ‖

ಅಂತ್ಯ : ನಾಳೆ ಬಾ ಕಂಡ್ಯಾ ದಾಸ್ಯೆಯಾ
ಕಪ್ಪು ಬಾಲುಲೀ ಕೊಡುವೆನು ದಾಸ್ಯೆಯ್ಯ
ನಾ ನಿಂನ್ನ ಕಾಲಿಗೆರಗುವೇ ದಾಸ್ಯೆಯ್ಯ
ನಂಮ ಮುದ್ದುವಿಟ್ಟಲನೆಂಬ ದಾಸ್ಯೆಯ್ಯ ‖ ೫ ‖

ವಿಷಯ : ಕುಶಲವರು ಶ್ರೀರಾಮನೊಡನೆ ಯುದ್ಧಮಾಡಿದ ಉತ್ತರ ರಾಮಾಯಣದ ಕಥೆ.

ವಿಶೇಷ : ಶಿಥಿಲ ಪ್ರತಿ. ೧೨ನೆಯ ಪತ್ರದ ಒಂದೇ ಪಾರ್ಶ್ವದಲ್ಲಿ ಬರೆಯಲ್ಪಟ್ಟಿದೆ. ೧೯ನೆಯ ಪತ್ರವಿಲ್ಲ.

324

ಕೆ. ೪೫೭	**ಕುಸುಮಾವಳಿ**	ಚಂಪು
೧೮.೨" × ೨"	ದೇವಕವಿ	ಸು. ೧೨೦೦
೧–೧೦೮ ಪತ್ರ	೧೧ ಪಂಕ್ತಿ	೮೫ ಅಕ್ಷರ

ಆದಿ : ಕುಸುಮಾವಳೀಕಾವ್ಯ ‖

ಶ್ರೀಮನ್ಮಾಂಗಲ್ಯಗಾತ್ರಾವಯವ ನಿವಹದೊಳ್ತೆತ್ತ ಹರ್ಷೋದಬಿಂದು
ಸ್ತೋಮಂ................ಬುಧನದೀವಾಕಣಾನೀಕಜಾಳಂ
ತಾಮಾಕಾರಂಕರಂ ಮಾರ್ಪೊಳೆಯೆ ಸಕಲಶಕ್ಯಾಂಗನಾದಂತಿರೊಪ್ಪಿ
ಪ್ಪಾರ್ವತ್ಯೈಮಂದಿಶ್ವನಾಥಂ ಕುಡುಗಖಿಳ ಜನಾನಂದಮಂ ನಲ್ಮೆಯಿಂದಂ ‖

ಅಂತ್ಯ: ವೃ॥ ತರುಣಾರ್ಕಂ ಚಕ್ರವಾಕಾವಳಿಗೆ ತುಹಿನದಾಮಂ ಚಕೋರಾಳಿಗೋರಂ
ತಿರೆ ಚಿತ್ತಾನಂದಮಂ ತಂಮುದಯದ ಮುಖದಿಂ ನಾಡೆಯುಂ
ಮಾಡುವಂತಾ

ಗುರುವರ್ಗಕಾರ್ಯವಗ್ಗ್ರಕೆಸೆವಭಿ ಜಿನವರ್ಗಕ್ಕೆ ತರ್ಕ್ಯಾನುರಾಗೋ
ತ್ಕರಮಂ ತಾನೀಉತಿರ್ದ್ದಂ ಕೃತಿರತಿರಮಣಂ ಸಾಹಸೋ
ದ್ಧಾಮಭೀಮಂ ॥ ೧೬೫ ॥

ಗದ್ಯ॥ ಯಿದು ಕಮನಕುದರೇಂದ್ರನಂದನಾಲೋಲಲೋಚನ × × × ×
ದೇವಪ್ರಭಾವ ಪ್ರಸಂಸೋಲ್ಲಶಿತ ಕುಸುಮಾವಳಿ ಮಹಾ ಪ್ರಬಂಧದೊಳು × ×
× × ಪಂಚದಶಾಶ್ವಾಸಂ ಸಂಪೂರ್ಣಂ ॥

ವಿಷಯ: ಮದನಾವತೀಪುರದ ಮಣಿಕುಂಡಲರಾಜನ ಕಥೆ.

ವಿಶೇಷ: ೧೮, ೩೩, ೪೧, ೫೫, ೬೯, ೭೮, ೮೭ನೆಯ ಪತ್ರಗಳ ಹಿಂಭಾಗ ಖಾಲಿ
ಯಾಗಿದೆ. ಆದರೂ ಗ್ರಂಥ ಲೋಪವಿಲ್ಲ. ೬೩ ರಿಂದ ೬೭ ಪತ್ರಗಳು
ಎರಡೆರಡಿವೆ.

325

ಕೆ. ಬಿ. ೬೨	**ಕುಸುಮಾವಳಿ**	ಚಂಪು
೭.೫″ × ೬″	ದೇವಕವಿ	ಸು. ೧೨೦೦
೩೪೮ ಪತ್ರ	೧೧ ಪಂಕ್ತಿ	೨೪ ಅಕ್ಷರ

ಆದಿ: ಕುಸುಮಾವಳಿ ಕಾವ್ಯ ಪ್ರಾರಂಭಃ × × ×
ಶ್ರೀಮನ್ಮಾಂಗಲ್ಯಗಾತ್ರಾವಯವ ನಿವಹದೊಳ್ತಳ್ತ ಹರ್ಷೋದಬಿಂದು
ಸ್ತೋಮಂ ತಾಮೆಂಬಿನಂ ತೀವಿದ ವಿಬುಧನದೀವಾಕಣಾನಿಕ ಜಾಳಂ
ಕಾಮಾಕಾರಂ ಕರಂ ಮಾರ್ಪೊಳೆಯೆ ಸಕಲ ಶಕ್ತ್ಯಂಗನಾದಂತಿರೊಪ್ಪಿ
ರ್ಪಾವ್ಯೆಮಂ ವಿಶ್ವನಾಥಂ ಕುಡುಗಖಿಳ ಜನಾನಂದಮಂ ನಲ್ಮೆಯಿಂದಂ ॥೧॥

ಅಂತ್ಯ: ವೃ॥ ಕರುಣಾರ್ಕ್ಕಂ ಚಕ್ರವಾಕಾವಳಿಗೆ ತುಹಿನಧಾಮಂ ಚಕೋರಾಳಿ
ಗೋರಂ
ತಿರೆ ಚಿತ್ತಾನಂದಮಂ ತಂಮುದಯದ ಮುಖದಿಂ ನಾಡೆಯುಂ
ಮಾಡುವಂತಾ

ಗುರುವರ್ಗಕಾರವರ್ಗಕೆಸೆವಭಿ ಜಿನವರ್ಗಕ್ಕೆ ತರ್ಕ್ಕಾನುರಾಗೋ
ತ್ಕರಮು ತಾನೀವುತಿರ್ದ್ದಂ ಕೃತಿರತಿರಮಣಂ ಸಾಹಸೋದ್ದಾಮ
ಭೀಮಂ ॥ ೧೬೫ ॥

ಗದ್ಯ॥ ಇದು ಕಮನ × × × ಕುಸುಮಾವಳಿ ಮಹಾಪ್ರಬಂಧದೊಳು ಚಂದ್ರಧ್ವಜ ಸಮಾಗಮವರ್ನ್ನನಂ ವಿಶ್ವಂಭರನರೇಂದ್ರ ಕಂದರ್ಪದೇವದರ್ಶನ ವರ್ನ್ನನಂ ಕಪಿಲ ಮಹಾಚಾರ್ಯ ದರ್ಶನವರ್ನ್ನನಂ ಪಂಚದಶಾಶ್ವಾಸಂ ಸಂಪೂರ್ಣಂ. ಅಂತೂ ಆಶ್ವಾಸ ೧೫ಕ್ಕಾಂ ಪದನೂ ೨೦೬೮ಕ್ಕಾಂ ಮಂಗಳ ಮಹಾಶ್ರೀ—

ವಿಷಯ : ಮದನಾವತೀಪುರದ ಮಣಿಕುಂಡಲ ರಾಜನ ಕಥೆ.

ವಿಶೇಷ : ಪ್ರತಿ ಚೆನ್ನಾಗಿದೆ.

326

ಕೆ. ೭೬/೨	**ಕೃಷ್ಣ ಕಥಾರತ್ನಾಕರ**	ಗದ್ಯ
೧೭.೧"×೧.೫"	ಮುಮ್ಮಡಿ ಕೃಷ್ಣರಾಜ	೧೮೫೦
೪೦–೧೨೬ ಪತ್ರ	೭ ಪಂಕ್ತಿ	೭೦ ಅಕ್ಷರ

ಆದಿ : ಶ್ರೀ ಕೃಷ್ಣರಾಜಮಹಾರಾಜ ಕಂಠೀರವರಿಂದ ಶಕ ೧೭೮೭ನೆ ರಕ್ತಾಕ್ಷಿಸಂವತ್ಸರದ ಚೈತ್ರ ಶುದ್ಧ ೧೫ ಗುರುವಾರದಲ್ಲೂ ವಿರಚಿತವಾದ ಶ್ರೀ ಕೃಷ್ಣಕಥಾರತ್ನಾಕರವೆಂಬ ಗ್ರಂಥಪ್ರಾರಂಭಃ ॥ × × ×
ಜಯತ್ವಂ ದೇವಿಚಾಮುಂಡೀ ಜಯಭೂತಾಪಹಾರಿಣಿ ।
ಜಯಸರ್ವಗತೇದೇವಿ ಭದ್ರಕಾಳಿ ನಮೋಸ್ತುತೇ ॥

× × × ×

ಮುಮ್ಮಡಿ ಶ್ರೀಕೃಷ್ಣರಾಜವಡೆಯರವರು ಶ್ರೀಮದ್ಭಾಗವತ ದಶಮ ವಿಷ್ಣುಪುರಾಣ ಹರಿವಂಶ ಭಾರತಾದ್ಯನೇಕ ಗ್ರಂಥಗಳಂ ಪರಿಶೀಲ್ಲೀಥನೆಯಂ ಮಾಡಿ

ಅಂತ್ಯ : ಸೂರ್ಯಕೋಟಿ ಪ್ರಕಾಶಮಾನನಾಗಿ ಸಾಧುಜನಳಂ ರಕ್ಷಿಸಿ ದುಷ್ಟರಾದ ದುಷ್ಟರಾದ ಅಸುರಾಂಶ ಸಂಭೂತರಾದ ಕಂಸ ಮುರ ನರಕ ಮೊದಲಾದವರಂ ಸಂಹರಿಸಿ

ವಿಷಯ : ಕೃಷ್ಣಚರಿತ್ರೆ.

ವಿಶೇಷ : ಅಸಮಗ್ರ, ೧೦೫, ೧೦೬ನೆಯ ಪತ್ರಗಳು ಮುರಿದಿವೆ. ಕೆಲವು ಕಡೆ ಹುಳು ತಿಂದಿದೆ. ಇದರೊಂದಿಗೆ ರಾಮಕಥಾಕಲ್ಪವೃಕ್ಷವೆಂಬ ಗ್ರಂಥವಿದೆ.

327

ಕೆ. ೪೪೧	ಕೃಷ್ಣಕಥಾರತ್ನಾಕರ	ಗದ್ಯ
೧೭.೮" × ೧.೫"	ಮುಮ್ಮಡಿ ಕೃಷ್ಣರಾಜ	೧೮೫೦
೩೩—೯೫ ಪತ್ರ	೮ ಪಂಕ್ತಿ	೮೨ ಅಕ್ಷರ

ಆದಿ: ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರಿಂದ ಶಕ ೧೭೮೭ ನೇ ರಕ್ತಾಕ್ಷಿ ಸಂವತ್ಸರದ ಚೈತ್ರ ಶುದ್ಧ ೧೫ ಗುರುವಾರದಲ್ಲೂ ವಿರಚಿತವಾದ ಶ್ರೀ ಕೃಷ್ಣ ಕಥಾರತ್ನಾಕರವೆಂಬ ಗ್ರಂಥ ಪ್ರಾರಂಭಃ|

ಜಯತ್ಯಂದೇವಿ ಚಾಮುಂಡೀ ಜಯ ಜಯ ಭೂತಾಪಹಾರಿಣೀ|
ಜಯ ಸರ್ವಗತೇ ದೇವಿ ಭದ್ರಕಾಳೀ ನಮೋಽಸ್ತುತೇ ॥ ೧ ॥

× × × ×

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನೇತ್ಯಾದ್ಯನೇಕ ಬಿರುದಾಂಕಿತ ರಾದ ಶ್ರೀ ಚಾಮುಂಡಾಂಬಾ ವರಪ್ರಸಾದೋದ್ಭವರಾದ ಆತ್ರೇಯ ಸಗೋತ್ರ ಆಶ್ವಲಾಯನಸೂತ್ರ × × × ಕ್ಷೀರ ಸಮುದ್ರ ಮಥನವಂಗೈದು ಅಮೃತವಂ ತೆಗದಂತೆ

ಅಂತ್ಯ: ಪರಲೋಕಗಳಲ್ಲಿ ಸಮಸ್ತ ಭೋಗಗಳಂ ಪೊಂದಿ ಬ್ರಹ್ಮಾದಿಗಳಿಂ ಪಡೆ ಯಲಶಕ್ಯವಾದ ಶ್ರೀ ಮಹಾವಿನ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಮೊದಲಾದ ಮುಕ್ತಿಯಂ ಪಡೆಯುವರೆಂಬಲ್ಲಿಗೆ ಗದ್ಯ॥ ಶ್ರೀ ಮದ್ರಾಜಾಧಿರಾಜ ರಾಜಮಾರ್ತಾಂಡ ಕಂಠೀರವಾದ್ಯನೇಕ ಬಿರುದಾಂಕಿತ ಚಂಡಪ್ರಚಂಡೋದ್ದಂಡ ರಿಪುತಿಮಿರಮಾರ್ತಾಂಡ ಸರಸ ಕವಿತಾ ಚಮತ್ಕಾರ ಚತುರ ಶಿವಪೂಜಾ ಬದ್ಧ ದೀಕ್ಷಾ ಧುರಂಧರ ನಂಜರಾಜಾಭಿದ ಮುಂಮಡಿ ಶ್ರೀ ಕೃಷ್ಣರಾಜ ವಡಯರವರಿಂ ಪ್ರಕಾಶಿತವಾದ ಶ್ರೀ ಕೃಷ್ಣಕಥಾ ರತ್ನಾಕರ ವೆಂಬ ಗ್ರಂಥದೊಳ್ ಉತ್ತರ ಕಲ್ಲೋಲದಲ್ಲಿ ಶ್ರೀಕೃಷ್ಣನು ದ್ವಾರಕಾಪುರದೊಳ್ × × × × ಕುಚೇಲನಿಗೆ ಐಶ್ವರ್ಯವಂನಿತ್ತು ಸಲಹಿದ್ದು. ಮೊದಲಾದ ಕಥೆಯಂ ಬಂ....ರುವ ಹಂನೆರಡನೆ ತರಂಗಕ್ಕೆ ಮಂಗಳ ಮಹಾಶ್ರೀ.

ವಿಷಯ: ಕೃಷ್ಣ ಚರಿತ್ರೆ.

ವಿಶೇಷ: ಪ್ರತಿ ಸಮಗ್ರವಾಗಿದೆ. ಕೊನೆಯ ಪತ್ರಗಳನ್ನು ಅಲ್ಲಲ್ಲಿ ಹುಳು ಹೊಡೆದಿದೆ. ಕೊನೆಯಲ್ಲಿ 'ಪ್ರಕಾಶಪುರಂ ಶ್ರೀ ತಿರುಮಲೆ ಶ್ರೀನಿವಾಸಚಾರ್ಯರಿಂ ಯಿಾ ಶ್ರೀ ಕೃಷ್ಣಕಥಾರತ್ನಾಕರವೆಂಬ ಗ್ರಂಥವು ಸ್ವಹಸ್ತದಿಂ ಬರದು ಸ್ವಂತ ಕಾಲಕ್ಷೇಪಕ್ಕೋಸುಗ ಬರದುಕೊಂಡು ಯಿಧಾರೆ' ಎಂದಿದೆ.

328

ಕೆ.ಬಿ. ೧೨೩/೨	ಕೃಷ್ಣಕಥಾರತ್ನಾಕರ	ಗದ್ಯ
೮" × ೬.೩"	ಮುಮ್ಮಡಿ ಕೃಷ್ಣರಾಜ	೧೮೫೦
೭೬–೧೯೬ ಪತ್ರ	೧೫ ಪಂಕ್ತಿ	೧೯ ಅಕ್ಷರ

ಆದಿ : ಶ್ರೀಕೃಷ್ಣರಾಜ ಮಹಾರಾಜ ಕಂಠೀರವರಿಂದ ಶಕ ೧೭೮೭ ನೆ ರಕ್ತಾಕ್ಷಿ ಸಂವತ್ಸರದ ಚೈತ್ರ ಶುದ್ಧ ೧೫ ಗುರುವಾರದಲ್ಲೂ ವಿರಚಿತವಾದ ಶ್ರೀ ಕೃಷ್ಣ ಕಥಾರತ್ನಾಕರವೆಂಬ ಗ್ರಂಥ ಪ್ರಾರಂಭಃ × × × ಮುಂಮಡಿ ಶ್ರೀ ಕೃಷ್ಣ ರಾಜವಡೆಯರವರು ಶ್ರೀಮದ್ಭಾಗವತ ವಿಷ್ಣುಪುರಾಣ × × × ಕೂಡಿದ ಶ್ರೀ ಕೃಷ್ಣಕಥಾರತ್ನಾಕರವೆಂಬ ಗ್ರಂಥವು ಸರ್ವೋತ್ಕೃಷ್ಟವಾಗಿ ಪ್ರಕಾಶಿಸಲಿ.

ಅಂತ್ಯ : ಸಭೆಯೊಳ್ ಸಮಸ್ತ ವೈಭವದಿಂ ಕುಳಿತಿರುವಾಗ ಬಂದ ಬಾಲ್ಯಮಿತ್ರನಾದ ಕುಚೇಲನಿಗೆ ಐಶ್ವರ್ಯವಂನಿತ್ತು ಸಲಹಿದ್ದು ಮೊದಲಾದ ಕಥೆಯಂ ಬಂಣಿಶಿರುವ ಹಂನೆರಡೆನೆಯ ತರಂಗಕ್ಕೆ ಮಂಗಳ ಮಹಾಶ್ರೀ ॥

ವಿಷಯ : ಕೃಷ್ಣಚರಿತ್ರೆ.

ವಿಶೇಷ : ಈ ಗ್ರಂಥದಲ್ಲಿ ಬಣ್ಣಬಣ್ಣದ ಪತ್ರಗಳಿವೆ. ಇದರೊಂದಿಗೆ ರಾಮಕಥಾ ಕಲ್ಪವೃಕ್ಷವೆಂಬ ಗ್ರಂಥವೂ ಇದೆ.

329

ಕೆ. ೨೩೨	ಕೃಷ್ಣಕಥಾಸಾರ ಸಂಗ್ರಹ	ಗದ್ಯ
೩೪.೫" × ೨.೨."	ಮುಮ್ಮಡಿ ಕೃಷ್ಣರಾಜ	೧೮೫೦
೧–೪೧೮ ಪತ್ರ	೧೧ ಪಂಕ್ತಿ	೧೫೦ ಅಕ್ಷರ

ಆದಿ : ಶ್ರೀ ವಾಸುದೇವಾಯ ನಮಃ । ಶುಭಮಸ್ತು । ಶ್ರೀ ಕೃಷ್ಣಕಥಾಸಾರ ಸಂಗ್ರಹದೊಳ್ ಮೊದಲನೆಯ ಉತ್ಪತ್ತಿಕಾಂಡ ಪ್ರಾರಂಭಃ ।

ಶುಕ್ಲಾಂಬರಧರ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ॥ × × ×

ಲಕ್ಷ್ಮೀಧಾಮ ಸಮಾಮನಂತಿ ಯದುರೋಯದ್ಭವ್ಯನಾಮಾಗ್ರಹಂ
ಪಾಪಧ್ವಾಂತ ದಿವಾಕರಂ ಪರತರಾನಂದೈಕಹೇತುಂ ಸತಾಂ
ಪ್ರಾದುರ್ಭೂಯ ಚ ದೇವಕೀ ಜಠರತೋ ಯದ್ವಾಸುದೇವಾಖ್ಯಯಾ
ಖ್ಯಾತಂ ದಾಂತಮಪಾರ ಪುಣ್ಯಚರಿತಂ ಧಾಮಶ್ರಯಾಮಶ್ರಿಯೈ ॥ ೯ ॥

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೭೬೧ ನೆ ಸಂದ ವರ್ತಮಾನವಾದ ವಿಕಾರಿನಾಮಸಂವತ್ಸರದ ಮಾಘ ಶುದ್ಧ ೧ ಲ್ಲು ಮಂಗಳವಾರ ಯಿಾ ಶುಭದಿವಸದಲ್ಲೂ

ಅಂತ್ಯ : ಮಹೀಶೂರ ಪುರವರಾಧೀಶ ಮಹಾರಾಜ ಶ್ರೀ ಕೃಷ್ಣರಾಜ ಸಾರ್ವಭೌಮರಿಂದ ಲೋಕೋಪಕಾರಾರ್ಥವಾಗಿ ವಿರಚಿತವಾದ ಶ್ರೀ ಕೃಷ್ಣಕಥಾಸಾರ ಸಂಗ್ರಹವೆಂಬ ಗ್ರಂಥದೊಳ್ ಅವತಾರ ಕಾಂಡದಲ್ಲಿ ಶ್ರೀ ಕೃಷ್ಣನ ಅವತಾರ ಭೇದ ನಿರೂಪಣಕಥಾ ಶ್ರವಣಫಲಕಥನವೆಂಬ ನೂರನೆ ಅಧ್ಯಾಯಕ್ಕೆ ಮಂಗಳ ಮಹಾಶ್ರೀ ಶ್ರೀ.

ವಿಷಯ : ಕೃಷ್ಣಚರಿತ್ರೆ.

ವಿಶೇಷ : ಇದರಲ್ಲಿ ೧೧೫, ೧೬೬, ೧೭೦, ೩೨೬, ೩೩೯, ೩೯೨, ೪೦೧ ನೆಯ ಪತ್ರಗಳು ಒಡೆದಿವೆ. ೨೩, ೪೭, ೧೧೩, ೨೮೬, ೩೧೮, ೩೪೬, ೩೪೭, ೩೪೮, ೩೫೮, ೪೧೮ ನೆಯ ಪತ್ರಗಳಲ್ಲಿ ಸ್ವಲ್ಪ ಭಾಗ ಮುರಿದು ಲುಪ್ತವಾಗಿವೆ.

330

ಕೆ. ಬಿ. ೩೬	ಕೃಷ್ಣಕರ್ಣಾಮೃತ	ಭಾಮಿನೀಷಟ್ಪದಿ
೭.೬" × ೬.೧"	ಕೃಷ್ಣ	ಸು. ೧೭೦೦
೧–೨೬೫ ಪತ್ರ	೧೨ ಪಂಕ್ತಿ	೧೫ ಅಕ್ಷರ

ಆದಿ : ದೇವಸಚ್ಚಿನ್ಮಾತ್ರ ಮಾರುತಿ
ದೇವಜಗದಾನಂದನಿರುತಂ
ದೇವಪಾಲಿತ ಬ್ರಹ್ಮಸಾರಥಿದಳಿತ ದುರ್ವೃತ್ತ
ದೇವಬ್ರಹ್ಮಾದ್ಯಮರಸನ್ನುತ
ಪಾಲಿತಾಖಿಳ ಭೂತಸಂತತಿ
ದೇವಪಾಲಿತ ಭುವನತತಿ ಸಲಹೆಂದನೊಸುದೇವಾ ॥ ೨೬ ॥

ಅಂತ್ಯ : ಅರಿವರಾರೀ ಬ್ರಹ್ಮರುದ್ರಾ
ದ್ಯರನು ಪಾಲಿಪ ಪರಮಪುರುಷನ
ವರಮಹಾಮಹಿಮೆಗಳನೆನುತಾನಂಡಬಾಷ್ಪದಲೀ

ತರುಣಿಸಹಿತಂದಾ ಕುಚೇಲನು
ನಿರತಕೃಷ್ಣನ ಪಾಡಿಪೊಗುಳುತ
ಪರಮ ಸೌಭಾಗ್ಯಾನುಭವದಿಂದಿರ್ದನಾಪುರದೀ ॥ ೧೨೫ ॥

ವಿಷಯ : ಕೃಷ್ಣಚರಿತ್ರೆ.

ವಿಶೇಷ : ೭೯ ನೆಯ ಪತ್ರದ ಒಂದು ಭಾಗ ಖಾಲಿಯಾಗಿದ್ದರೂ ಗ್ರಂಥಲೋಪವಿಲ್ಲ. ೧೧೬, ೧೪೪, ೧೬೨ ಪತ್ರ ಖಾಲಿ ಮತ್ತು ಗ್ರಂಥಲೋಪ.

331

ಕೆ. ೧೩೬	**ಕೃಷ್ಣಗೋಪೀವಿಲಾಸ**	**ಸಾಂಗತ್ಯ**
೭.೭" × ೧.೬"	**?**	**?**
೧–೪೪ ಪತ್ರ	**೭ ಪಂಕ್ತಿ**	**೩೪ ಅಕ್ಷರ**

ಆದಿ : ಸಂಗತ್ಯ॥ ಶ್ರೀಮನೋಹರ ದಿವ್ಯಮೂರ್ತಿ ಸಂತತ ಪುಣ್ಯ
ನಾಮಸದ್ಗುಣಗಣಕೀರ್ತಿ
ರಾಮ ನಿಂನೆಯ ಹೃದಯದೊಳಿದ್ದು ಕೃತಿಯನು
ನೇಮಿಶಿದಂತೆ ಪೇಳುವೆನು ॥ ೧ ॥

× × × ×

ಪಂಕಜಾಕ್ಷನ........ಪಾದವನು ಕಾಬ ಮಾರ್ಗವ
ಶಂಕೆಯಿಲ್ಲದೆ ಕೃಪೆಯಿಂದಾ
ಬಿಂಕದಿಂದುಪದೇಶಗೈದ ಶ್ರೀಮದ್ಗುರು
ವೆಂಕಟಾರ್ಯರಿಗೆ ವಂದಿಸುವೆ ॥ ೫ ॥

ಅಂತ್ಯ : ಶುಕಮುಖಗಳಿತಫಲವನು ವಂಚಿಸದೆ ಮ
ತ್ಸಕರುಂಡು ಸುಖಿಯಾಗಲೆಂಬ ಆ
ಸಕತಿಯಿಂದೆ ತಿಲಾನೆಂಬ ವ್ಯಾಜದಿಂ
ಭಕತವತ್ಸಲ ತಾನೆ ಪೇಳ್ದಾ ॥ ೭೦ ॥

ಯಿತಿ ಶೃಂಗಾರ ತುರೀಯಾತೀತ ಸಪ್ತತಿ ಸಂಪೂರ್ನಂ॥ ಅಂತು ಕೃಷ್ಣ ಗೋಪಿಕಾವಿಲಾಸ ಸಂಧಿ ೫ ಕಂ ಪದ ೪೫೧ ಕಂ ಮಂಗಳ ಮಹಾಶ್ರೀ॥ ಕೃಷ್ಣ ಗೋಪಿಕಾ ಸಂಗತ್ಯ ಸಂಪೂರ್ನ ಮಂಗಳ ಮಹಾಶ್ರೀ ॥

ವಿಷಯ : ಕೃಷ್ಣನ ಚರಿತ್ರೆ.

ವಿಶೇಷ : ಪುಸ್ತಕ. ಶಿಥಿಲ ೧, ೫ ನೆಯ ಪತ್ರಗಳ ಅಂಚು ಮುರಿದಿವೆ. ೧೭ ನೆಯ ಪತ್ರದಲ್ಲಿ ಅರ್ಧ ಮಾತ್ರ ಉಳಿದಿದೆ. ೨೦ ನೆಯ ಪತ್ರ ಲುಪ್ತ. ಇದರೊಂದಿಗೆ ಪದ್ಮಪುರಾಣಾಂತರ್ಗತವಾದ ಸ್ವಪ್ನಾಧ್ಯಾಯವೆಂಬ ಸಂಸ್ಕೃತ ಗ್ರಂಥಕ್ಕೆ ಸಂಬಂಧಿಸಿದ ೬ ಪತ್ರಗಳಿವೆ.

332

ಕೆ. ಬಿ. ೪೭೩	**ಕೃಷ್ಣಗೋಪೀವಿಲಾಸ**	ಸಾಂಗತ್ಯ
೮.೩" × ೬.೬"	?	?
೧–೧೪೯ ಪುಟ	೧೨ ಪಂಕ್ತಿ	೧೪ ಅಕ್ಷರ

ಆದಿ : ಕೃಷ್ಣಗೋಪೀವಿಲಾಸ ಸಾಂಗತ್ಯ ಶ್ರೀ ವೆಂಕಟಾರ್ಯ ಶಿಷ್ಯ ಕೃತವಾದುದು ಕ್ರಿ. ಶ. ಸು. ೧೭೦೦ × × × ಕೃಷ್ಣಗೋಪೀ........ದಕ್ಕೆ ನಿರ್ವಿಘ್ನಮಸ್ತು॥

ಸಾಂಗತ್ಯ॥ ಶ್ರೀ ಮನೋಹರ ದಿವ್ಯಮೂರ್ತಿ ಸಂತತ ಪುಣ್ಯ
ನಾಮ ಸದ್ಗುಣಗಣಕೀರ್ತಿ
ರಾಮ ನಿಂನೆಯ ಹೃದಯದೊಳಿದ್ದು ಕೃತಿಯನು
ನೇಮಿಸಿದಂತೆ ಪೇಳುವೆನು ॥೧॥

ಅಂತ್ಯ : ಶುಕಮುನಿಗಳೀತ ಫಲವನು ವಂಚಿಸದೆ ಮು
ತ್ಸಕರುಂಡು ಸುಖಿಯಾಗಲೆಂಬಾ
ಆಸಕತಿಯಿಂದೆ ತಿಲಾನೆಂಬ ವ್ಯಾಜದಿಂ
ಭಕತವತ್ಸಲ ತಾನೆ ಪೇಳ್ದಾ ॥೬೭॥

ಯಿತಿ ಶೃಂಗಾರ ತುರೀಯಾತೀತ ಸಪ್ತತಿ ಸಂಪೂರ್ಣಂ.

ವಿಷಯ : ಕೃಷ್ಣನ ಚರಿತ್ರೆ.

ವಿಶೇಷ : ಸಂದೇಹ ಬಂದೆಡೆಗಳಲ್ಲಿ ಪ್ರಶ್ನಾರ್ಥ ಚಿಹ್ನೆಗಳನ್ನು ಹಾಕಿದೆ.

333

ಕೆ. ಬಿ. ೧೩೮/೨ | ಕೃಷ್ಣಗೋವರ್ಧನ | ಯಕ್ಷಗಾನ
೭.೭" × ೬.೩" | ವಿಷ್ಣುದಾಸ | ಸು. ೧೮೦೦
೨೪–೩೬ ಪತ್ರ | ೧೫ ಪಂಕ್ತಿ | ೨೫ ಅಕ್ಷರ

ಆದಿ : "ಶ್ರೀಕೃಷ್ಣಗೋವರ್ಧನ ಯಕ್ಷಗಾನ" ನಾಟ್ಕ ಶ್ರೀರಾಮುಪ್ರಸನ್ನಾಯ ನಮಃ

ನಾಂದೀವೃತ್ತ ॥ ಶ್ರೀಪದ್ಮೋದ್ಭವ ವಂದಿತಾಂಘ್ರಿಕಮಲಂ ಶ್ರೀವಾಯುಜಾತಪ್ರಿಯಂ
ಗೋಪಾಲಂ ವರಗೋಪಿಕಾಗ್ರಹಶುಭಂ ವೃಷ್ಟಿಸ್ತದಾ ಸೌಖ್ಯದಂ
ಆಪದ್ಬಂಧಂ ಸುರೇಂದ್ರವಂದಿತಪದಂ ಆನಂದ ಸನ್ಮೋಹನಂ
ರೂಪಂ ಸೂರ್ಯ ಸಹಸ್ರಕಾಂತಿ ಸದೃಶಂ ಶ್ರೀ ರಂಗನಾಥಂ ಭಜೇ ॥

ಅಂತ್ಯ : ಭಾಮಿನೀ ॥ ವರಮಹಾಭಾಗವತ ಚರಿತೆಯ
ನರಿತು ಧರೆಯೊಳು ಮೆರೆವ ಪಂಡರ
ಪುರರಮಣನನ ಚರಣ ಸೇವಾಸಕ್ತರಾದವರ
ಚರಣಸೇವಕ ವಿಷ್ಣುದಾಸನು
ಹರುಷದಿಂದಾ ಹರಿಯ ಚರಿತೆಯ
ವಿರಚಿದೆನಾ ವೆಂಕಟೇಶನ ಪರಮನುಜ್ಞೆಯಲಿ ॥ ೧೭೪ ॥

ರಾಗ । ಸುರುಟಿ । ಆದಿತಾಳ × ×
ಕಂಸ ವಿಧ್ವಂಸನಿಗೆ । ಸಂಸಾರದೂರನಿಗೆ
ಹಿಂಸೆಮಾಳ್ಪರ ಕೊಲ್ವ ಪರಮಹಂಸನಿಗೆ ॥ ೧೭೭ ॥
ಅಜನತಾತನಿಗೆ । ಸುಜನಪಾಲಕೆ । ವಿಜಯಸಾರಥಿಯಾಗಿ
ನಿಜಸ್ವರೂಪದಿ ಮೆರದ ಚಿನ್ಮೂರ್ತಿಗೆ ॥ ೧೭೮ ॥

ವಿಷಯ : ಶ್ರೀಷ್ಣನು ಗೋವರ್ಧನಗಿರಿಯನ್ನೇ ಎತ್ತಿ ಮಳೆಗೆ ಅಡ್ಡವಾಗಿ ಹಿಡಿದ ಕಥೆ.

ವಿಶೇಷ : ಗ್ರಂಥ ಸುದೃಢವಾಗಿದೆ, ಆದರೆ ಪತ್ರದ ಅಂಚಿನಲ್ಲಿ ಹುಳು ತಿಂದಿದೆ. ಈ ಗ್ರಂಥದೊಡನೆ ಗಜೇಂದ್ರ ಮೋಕ್ಷವೆಂಬ ಮತ್ತೊಂದು ಗ್ರಂಥವಿದೆ.

334

ಕೆ. ಎ. ೨೪೭/೩	**ಕೃಷ್ಣಪಾರಿಜಾತ**	ಹಾಡು
೧೨.೯"×೮"	?	?
೧–೧೧ ಪತ್ರ	೧೪ ಪಂಕ್ತಿ	೧೮ ಅಕ್ಷರ

ಆದಿ : ಕೃಷ್ಣಪಾರಿಜಾತ ॥
ಶ್ರೀ ಬ್ರಹ್ಮಾದಿ ಸುರೇಂದ್ರ ವೃಂದಸಮಿತಾ ಲೋಕೇ ಸದಾಪೂಜಿತಾ
ಭಾರದ್ವಾಜ ಪರಾಶರಾದಿ ನಮಿತಾ ಕರುಣಾಕರದಚ್ಯುತಾ
ಕ್ಷೀರವಾರುಧಿಶಯನ ಗೋಪಿಯ ಸುತಾ ಅಂಭಾರೀಶನ ಪಾಲಿತಾ
ನೀರಜಾಕ್ಷನೆ ಯೆನ್ನ ಸಲಹೊ ಸತತ ಸಾಂಬ್ರಾಜ್ಯಗಳ ನೀವುತ ॥ ೧ ॥

ಅಂತ್ಯ : ಮಂಗಳಂ ಜಯಾ ಮಚ್ಛಾವತಾರಗೆ
ಮಂಗಳಂ ಜಯಾ ಮಧುಸೂದನಿಗೆ
ಮಂಗಳಂ ಜಯಾ ದ್ರೌಪದಾಂಗನೆ
ಯಳಾ ಭಂಗವ ಕಾಯ್ವ ವೆಂಕಟೇಶ್ವರನಿಗೆ ॥ ೫೫ ॥
॥ ಕೃಷ್ಣಪಾರಿಜಾತ ಸಮಾಪ್ತ ಮಂಗಳಮಹಾಶ್ರೀ ॥

ವಿಷಯ : ಶ್ರೀಕೃಷ್ಣನು ಪಾರಿಜಾತ ಪುಷ್ಪವನ್ನು ಸತ್ಯಭಾಮೆಗೆ ತಂದುಕೊಟ್ಟ ಕಥೆ.

ವಿಶೇಷ : ೪ ನೆಯ ಪುಟದಲ್ಲಿ ಗ್ರಂಥಲೋಪ. ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ. ಇದರೊಂದಿಗೆ ಸೀತಾಕಲ್ಯಾಣ, ಚಂದ್ರಹಾಸನ ಕಥೆ, ವಿನಾಯಕಾಷ್ಟಕ, ಹಾಡುಗಳು, ಶಂಕರ ವಿಜಯಸಂಗ್ರಹದ ೧, ೨, ೩ ನೆಯ ಭಾಗಗಳೂ ಇವೆ.

335

ಕೆ.ಬಿ. ೨೩೭	**ಕೃಷ್ಣಬಾಲಲೀಲೆ**	ಯಕ್ಷಗಾನ
೭.೮"×೬.೨"	?	?
೧–೭೬ ಪತ್ರ	೧೬ ಪಂಕ್ತಿ	೨೨ ಅಕ್ಷರ

ಆದಿ: ದೊಡ್ಡ ಬಾಲಲೀಲೆ ಬರಿಯುವದಕ್ಕೆ ಶುಭಮಸ್ತು ॥
ಶ್ರೀ ಕೃಷ್ಣಾ ಕಮಲಾವಧೂ ಕುಮುದನಯನಾನಂದಚಂದ್ರಾಸನಾ
ಲೋಕಾನೇಕ ಚರಾಚರಸ್ತುತಿ ಗತಿ ವ್ಯಾಪಾರ ಪಾರಾಯಣಾ

ನಾ ಕೇಶ ಪ್ರಮುಖಾ ಮಹಾಮುನಿಗಣ ಸಂಸೇವ್ಯ ನಾರಾಯಣಾ
ಯೇಕಾನ್ತಾನತ ಬನ್ಧುಸಿನ್ಧು ಶಯನಾ ಗೋಪಾಲ ಮಾಂ ಪಾಲಯಾ ॥
ರಾಗ, ಸೌರಾಷ್ಟ್ರ ॥ ಶ್ರೀ ಗಿರಿಜಾಸುತ ಗಜಾನನಾ ॥ ಪ ॥
ದೃಢವಾಗಿ ಭಜಿಪೆ ಆಖುವಾಹನಾ ॥ ಅ ॥ ಪ ॥

ಅಂತ್ಯ : ಕಂದಪದ್ಯ ॥ ಇಂತೆಂದು ಪೇಳಲುದ್ಧವ
ಸಂತೋಷದಿ ನೋಡಿ ಕ್ರಿಷ್ಣ ಸಭೆಯೊಳಗಿರುತಿರೆ
ತಮತಮಗೆ ಬೆದರಿ ಪುರಜನ
ಪಂಥಾನವ ನೋಡುತಿರಲು ಬಂದನು ಮಗಧಾ ॥
ಕಂ ॥ ಅಪರಮಿತವಾಗಿ ಧೊರೆಗಳು
ವಿಪರೀತವಾಗಿ ಬಲವಕೂಡಿ ಬಂದರು ಯುದ್ಧಕೇ
ತಪಿಸುತಿರೆ ಜನರು ಭಯದಲಿ
ರಿಪುಕಾಳಕರಿದಿರಿದು ಶೀಳು ಕೃಷ್ಣಕೃಪಾಳು ॥
ಶ್ರೀ ಕೃಷ್ಣಬಾಲಲೀಲೆಯು ಸಮಾಪ್ತವಾದುದು. ಶ್ರೀ

ವಿಷಯ : ಶ್ರೀ ಕೃಷ್ಣನ ಬಾಲಲೀಲಾ ವರ್ಣನೆ.

ವಿಶೇಷ : ಈ ಕೃತಿಗೆ ದೊಡ್ಡ ಬಾಲಲೀಲೆ ಎಂಬ ಮತ್ತೊಂದು ಹೆಸರಿದೆ. ಆದಿ, ಅಂತ್ಯದ ಕೆಲವು ಪತ್ರಗಳಲ್ಲಿ ಹುಳು ಕೊರೆದು ರಂಧ್ರ ಬಿದ್ದಿವೆ. ಆದರೂ ಗ್ರಂಥ ಲೋಪವಿಲ್ಲ.

336

ಕೆ.ಎ. ೧೭೧	**ಕೃಷ್ಣರಾಜ ವಿಲಾಸ**	ವಾರ್ಧಕ ಷಟ್ಪದಿ
೧೧"×೭.೯"	ಮದ್ದಗಿರಿ ನಂಜಪ್ಪ	೧೮೪೦
೧_೭೫ ಪತ್ರ	೧೭ ಪಂಕ್ತಿ	೨೪ ಅಕ್ಷರ

ಆದಿ : ಶ್ರೀ × ×ಮದ್ದಗಿರಿ ನಂಜಪ್ಪನವರು ಹೇಳಿರುವ ಕೃಷ್ಣರಾಜವಿಲಾಸವೆಂಬ ಗ್ರಂಥವ ಬರಯುವದಕ್ಕೆ ಶುಭಮಸ್ತು ॥ ಪಾರ್ಧಿಕ ಷಟ್ಪದಿ ॥
ಶ್ರೀ ಶೈಲಜಾರಮಣನಂಘ್ರಿಗಭಿನಮಿಸಿ ವಾ
ಗೀಶನರಸಿಯ ನುತಿಸಿ ಕರಿಮುಖನ ಪೂಜಿಸಿ ಪ್ರ
ಕಾಶಮಯರಾದ ಸುಕವೀಂದ್ರರಂ ಬೇಡಿಕೊಂಡಾನಂದಹೃದಯನಾಗಿ

ದೇಶಗಳೊಳಧಿಕ ಮಹಿಶೂರನಗರದೊಳತಿ ಪ್ರ
ಕಾಶವಡೆದಿಹ ರತ್ನಸಿಂಹಾಸನದಿ ಧರಾ
ದೀಶ ಶ್ರೀ ಕೃಷ್ಣರಾಜೇಂದ್ರ ಧರಣಿಯನಾಳ್ವ ಚರಿತೆಯನು ವರ್ನಿಸುವೆನು ॥

ಅಂತ್ಯ: ತಾನೇ ಜಗಮುಂ ಸೃಜಿಸಿ ತನ್ನ ತಾನರಿಯದಂ
ತಾನೇ ಕವಿಭವದೊಳಜ್ಞಾನ ಮಯಾವಶದಿ
ಹೀನ ಜೀವನದೆನಿಸಿ ಪುಟ್ಟಿಸಿ ನಾಟಕವನಾಡಿಸುತ ನೋಡಿ ಮತ್ತೆ
ತಾನೇ ಗುರುರೂಪಿಂದದಂ ತಿಳಿಪಿ ಸುಜ್ಞಾನ
ದಾನವಿತ್ತೆಲ್ಲರಂ ಮುಕ್ತಜೀವರ ಮಾಳ್ಪ ದಾನಿ ಕರುಣಾ
ವನಧಿ ನಂಜುಂಡ ಕೃಷ್ಣನೃಪವಾನನಿಧಿಯುಂ ಸಲಹಲೀ ॥ ೭೮ ॥

ಗದ್ಯ ॥ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ಕೃಷ್ಣರಾಜ ಯಶೋ ವರ್ಣನಾತ್ಮಕವಾದ ಆಂಧ್ರಕರ್ನಾಟಕ ಕವಿತಾ ವಿಶಾರದನಾದ ಮದ್ದಗಿರಿ ನಂಜಪ್ಪನಿಂ ವಿರಚಿತವಾದ ಕೃಷ್ಣರಾಜ ವಿಳಾಸವೆಂಬ ಗ್ರಂಥದಲ್ಲಿ ಪುತ್ರೋತ್ಸ ವಾದಿ ವರ್ಣನಂ ಷಷ್ಠಪ್ರಕರಣಂ ಸಂಪೂರ್ಣಂ ಮಂಗಳ ಮಹಾಶ್ರೀ ॥

ವಿಷಯ: ಮುಮ್ಮಡಿ ಕೃಷ್ಣರಾಜರ ಚರಿತ್ರೆ.

ವಿಶೇಷ: ೩೨, ೬೧ ನೆಯ ಪತ್ರಗಳ ಒಂದು ಪಾರ್ಶ್ವದಲ್ಲಿ ಮತ್ತು ೪೩ ನೆಯ ಪತ್ರದ ಎರಡು ಪಾರ್ಶ್ವಗಳಲ್ಲಿ ಬರವಣಿಗೆ ಇಲ್ಲದಿದ್ದರೂ ಗ್ರಂಥ ಲೋಪವಿಲ್ಲ.

337

ಕೆ. ಬಿ. ೪೬೦	**ಕೃಷ್ಣರಾಜ ಶತಕಂ**	ಕಂದ, ವೃತ್ತ
೮.೩"×೬.೬"	?	?
೧–೪೭ ಪುಟ	೧೨ ಪಂಕ್ತಿ	೧೪ ಅಕ್ಷರ

ಆದಿ: ಶ್ರೀ ಕೃಷ್ಣರಾಜಶತಕಂ ॥
ಶ್ರೀವಧುರಾಜಂ ನಿತ್ಯಂ
ಶ್ರೀವರನಂ ನದಿಯ ಪೊಕ್ಕುಳೊಳ್ ಮೆಲ್ಲಡಿಯಿಂ
ಭಾವದೆ ಸ್ಮರನಂ ಪಡೆದಾ
ಭೂವನಿತಾಧೀಶ ಕೇಶವಂ ರಕ್ಷಿಸಲೀ ॥ ೧ ॥

ಅಂತ್ಯ : ಈ ಕಾವ್ಯಕೆ ಜಯ ಜಯ ಮಂಗಳ
ವೀ ಕಾವ್ಯಾಧೀಶ್ವರಂಗೆ ಶುಭಮಂಗಳಮಂ
ಲೋಕದ ಜನರುಂ ತಿಳಿಯಲ್
ಶ್ರೀಕಾಂತನೆ ಚೆನ್ನರಾಯ ಕರುಣಿಸು ನಿತ್ಯಂ ॥ ೪೧ ॥

ಗದ್ಯ॥ ಶ್ರೀಮನ್ಮಹಾರಾಜಾಧಿರಾಜ × × × × ಶ್ರೀಕೃಷ್ಣರಾಜೇಂದ್ರನ ಕೃಷ್ಣರಾಜಶತಕದೊಳ್ ಆಶ್ವಾಸಂ ೩ಕ್ಕಂ ವೃತ್ತಕಂದ ಪದ್ಯಂ ೧೧೧॥ ವಚನರಗಳೆ ದಂಡಕರಗಳೆಯೂ ಕೆಲವಿರ್ಪುದು ಯಿನಿತಕ್ಕಂ ಮಂಗಳಂ ॥ ಶ್ರೀ ಕೃಷ್ಣರಾಜಶತಕಂ ಸಂಪೂರ್ಣಂ ॥

ವಿಷಯ : ಮುಮ್ಮಡಿ ಕೃಷ್ಣರಾಜರ ಚರಿತ್ರೆ.

ವಿಶೇಷ : ಬೇಲೂರು ಆಗಮಿಕ ಮುತ್ತುಭಟ್ಟರ ಪುಸ್ತಕದ ಮರುಪ್ರತಿಯಿದೆಂದು ಆರಂಭದಲ್ಲಿ ಬರೆದಿದೆ. ೪, ೧೦, ೧೨, ೨೬ನೆಯ ಪುಟಗಳಲ್ಲಿ ಗ್ರಂಥ ಲೋಪ. ೫, ೬ನೆಯ ಪುಟಗಳು ಖಾಲಿಯಿವೆ.

338

ಕೆ.ಎ. ೯೩ ಕೃಷ್ಣರಾಜೇಂದ್ರ ಭಕ್ತಿಸಾರಾಷ್ಟೋತ್ತರಶತಕ ಭಾಮಿನೀಷಟ್ಪದಿ

೧೨.೩"×೭.೭" ದೇವಲಾಪುರದ ನಂಜುಂಡ ಸು. ೧೮೪೧

೧–೫ ಪತ್ರ ೨೬ ಪಂಕ್ತಿ ೩೪ ಅಕ್ಷರ

ಆದಿ : ಶ್ರೀ × × × ಶ್ರೀ ಕೃಷ್ಣೇಂದ್ರ ಭಕ್ತಿಸಾರಾಷ್ಟೋತ್ತರ ಶತಕಮಂ ಬರೆಯುವದಕ್ಕೆ ನಿರ್ವಿಘ್ನಮಸ್ತು

ಶ್ರೀ ರಜತಗಿರಿಯರಸನಡಿಗಳ
ಸೇರಿಸೆಂನಯ ಹೃದಯಮಧ್ಯದಿ
ಗೌರಿಯಡಿಗಳಗೆರಗಿ ಕರಿಮುಖನಂನು ಬಲವಂದು
ವೀರಭದ್ರ ಮಯೂರರಥರನು
ಸೇರಿ ನಾಂ ಕೃಷ್ಣೇಂದ್ರಭಕ್ತಿಯ
ಸಾರದಷ್ಟೋತ್ತರಶತಕವ ವಿರಚಿಸುವೆ ಭಕ್ತಿಯೊಳು ॥ ೧ ॥

ಅಂತ್ಯ : ಧರಣಿ ಸೂರ್ಯ ಸುಧಾಂಶು ತಾರಗ
ಳಿರುವವರೆಗೀ ರಾಜ್ಯವೆಲ್ಲವ
ಗರಳಪುರದೊಳಗಿರುವ ಶ್ರೀಕಂಠನ ಕೃಪಾಬಲದೀ

ಸ್ಥಿರದಿಯಾಳುವದೆಂದು ನೀಂ ಭೂ
ಸುರರು ಜಯ ಜಯವೆಂದು
ಹರಸುತ್ತಿರುವರೈ ಕೃಷ್ಣೇಂದ್ರ ರಕ್ಷಿಸು ನಂಮ್ಮನನವರತಾ ॥ ೧೦೮ ॥

ಕಂ॥ ಶರಧಿ ಕರಿ ತುರಗ ಧರಣೀ
ಪರಿಮಿತ ಶಕವರ್ಷ ಮಾಘಸಿತ ದಶಮೀ ಭಾ
ಸ್ಕರವಾರದಿ ಕೃಷ್ಣೇಂದ್ರನ
ವರಭಕ್ತಿಯಸಾರ ಚರಿತೆ ಮೆರದುದು ಧರೆಯೋಳ್ ॥

ಕೃಷ್ಣೇಂದ್ರ ಭಕ್ತಿಸಾರಾಷ್ಟೋತ್ತರಶತಕಂ ಸಂಪೂರ್ಣಮುಗಮುತ್ ॥

ವಿಷಯ : ಮುಮ್ಮಡಿ ಕೃಷ್ಣರಾಜರ ಮಹಿಮೆ.

ವಿಶೇಷ : ಕೊನೆಯಲ್ಲಿ ೯೮ರಿಂದ ೧೦೭ನೆಯ ಪದ್ಯದವರೆಗೆ ಗ್ರಂಥ ಹಿಂದುಮುಂದಾಗಿದೆ.

339

ಕೆ. ೩೩೭ **ಕೃಷ್ಣಸಂಧಾನಕೀರ್ತನೆಗಳು** ಹಾಡು

೧೧.೩" × ೧.೮" ? ?

೩–೨೨ ಪತ್ರ ೯ ಪಂಕ್ತಿ ೪೬ ಅಕ್ಷರ

ಆದಿ : ವನೀಕ್ಷಸುತಾ ಹರಹರಾ ನೀವಿಬ್ಬರೊಂದಾಗಿ ಬಂದೂದಚ್ಚರಿಯೆಂದೂ ತೋರ್ಪುದಿಂದಿನಲೀ ॥ ೨ ॥

ನೂತಾನವಿದು ನಂಮ್ಮಾ ಹಿರಿಯಾ ಭಾವಯ್ಯ ನೀ
ವೈತಂದೂದಪುರೂಪ ಸ್ವಾರೀ
ಸಾತಿಶಯದೊಳಿರ್ದಪರೆ ನಿಂಪಾವರು ಪಾಂಡು
ಜಾತರೊಳ್ನಿಮಗಾಯ್ತೆ ಕರುಣಾ ॥ ೩ ॥

ಅಂತ್ಯ : ಯೆಲೆ ಧರಾದಿಪ ಕೇಳು ಕುರುಮಂ
ಡಲದಿ ಪಶ್ಚಿಮದೆಸೆಯೊಳಿಮಜನ
ಜಲ ಸಮೂಹಕೆ ಬೇರೆ ಬೇರೆಸಗಿದರು ಮಂದಿರವಾ
ಜಲಜಭವಪಿತ ಭಕ್ತವತ್ಸಲ
ಕಲುಷದರ ಶ್ರೀ ವೆಂಕಟೇಶನ
ನೊಲಿದು ಪೂಜಿಸುತಿರ್ದನವನಿಪನೆಂದನಾ ಮುನಿಪಾ ॥ ೧ ॥
ಅಂತು ಸಂಧಿ ೧ಕ್ಕಂ ಪದ ೫೨ಕ್ಕಂ ಮಂಗಳಮಹಾಶ್ರೀ ॥

ವಿಷಯ : ಶ್ರೀ ಕೃಷ್ಣನು ಪಾಂಡವರ ದೂತನಾಗಿ ಸಂಧಾನ ಮಾಡಲು ಕೌರವರ ಬಳಿಗೆ ತೆರಳಿದ ಕಥೆ.

ವಿಶೇಷ : ಆದಿಯ ೨ ಪತ್ರಗಳು ಲುಪ್ತವಾಗಿವೆ. ೯ನೆಯ ಪತ್ರದ ಹಿಂಭಾಗದಲ್ಲಿ ೧ ಪಂಕ್ತಿ ಮಾತ್ರ ಬರೆದಿದೆ. ಕೊನೆಯಲ್ಲಿ ಪ್ರತ್ಯೇಕವಾಗಿರುವ ೪ ಪತ್ರಗಳಲ್ಲಿ ಕೆಲವು ಕೀರ್ತನೆಗಳಿವೆ. ಆರಂಭದಲ್ಲಿ ಒಂದು ಪ್ರತ್ಯೇಕ ಪತ್ರದಲ್ಲಿ ಸನ್ ೧೮೩೪ನೆಯ ಸಂವತ್ಸರದ ಉಲ್ಲೇಖವಿದೆ.

340

ಕೆ.ಬಿ. ೪೩೯	**ಕೃಷ್ಣಾರ್ಜುನರ ಕಥೆ—ಭಾಗ ೧**	ಭಾಮಿನೀಷಟ್ಪದಿ
೮" × ೬.೩"	ವಿಮಲಾನಂದ	ಸು. ೧೬೮೫
೧–೩೮೮ ಪುಟ	೯ ಪಂಕ್ತಿ	೧೮ ಅಕ್ಷರ

ಆದಿ : ಸ್ವಸ್ತಿ × × × ಶ್ರೀ ಕೃಷ್ಣಾರ್ಜುನರ ಕಥೆ ಬರೆಯುವದಕ್ಕೆ ಶುಭಮಸ್ತು.

ಸಕಲನಿಗಮರಹಸ್ಯ ಹೃದಯ
ಪ್ರಕರಣವ ಪರಮಾರ್ಥತತ್ವವ
ಪ್ರಕಟಿಸೆಂದೆನಲೊರದೆನ್ನೈ ಸದ್ಗುರು ನಿರೂಪದಲೀ ॥

ಪದ॥ ಗುರುನಿರೂಪವ ಧರಿಸಿ ಕರಿಮೊಗ
ಶಿರಗೆ ಶಿರದಿಂದೆರಗಿ ದುರ್ಗಾ
ಚರಣ ಶರಣೆಂದೆನುತ ಜೀವಶಿವಾಚ್ಯುತನ ಪರತರವಾ
ಹರುಷರಸದಿಂ ನೆನದು ಕಮಲಜ
ಗಿರಿಜೆ ಲಕ್ಷ್ಮೀದೇವಿಯಭಿಮತ
ವೆರದಿ ವಾಣಿಯ ನಟಿಸುವೆನು ವಾಕ್ನಾಟ್ಯಶಾಲೆಯಲೀ ॥ ೧ ॥

ಅಂತ್ಯ : ತನ್ನ ಕೊಲಬಂದುದನು ಮಾತಿಗೆ
ಮುನ್ನ ಹರಿಯನು ಬೈದುದನು ಹಲ
ವಂಣಿಗೆಯಲೆಂಟೊಂದಗೂಡಿಸಿ ವಂದಕೊಂಬತ್ತಾ
ನೆಂಣಿದಂದದಿ ನುಡಿದು ಕಲಹವ
ಹಂಣಿದನು ದಾರುಕನು ಪೂರ್ವಜ
ಪುಣ್ಯನಿಧಿ ಶ್ರೀ ಗುರುಚಿದಾನಂದಾತ್ಮನಿಶ್ಚೆಯಲೀ ॥ ೫೨ ॥

ಅಂತ್ಯಾ ಸಂಧಿ ೧೫ಕ್ಕಂ ಪದ ೮೩೪ಕ್ಕಂ ಮಂಗಳ ಮಹಾಶ್ರೀ ॥

ವಿಷಯ : ಕೃಷ್ಣಾರ್ಜುನರ ಕಥೆ.

ವಿಶೇಷ : ಗ್ರಂಥದ ಮೊದಲ ಸ್ವಲ್ಪ ಭಾಗವನ್ನು ಕೆಂಪು ಮಸಿಯಿಂದ ತಿದ್ದಿದೆ. ಇದು ಕೆ. ಬಿ. ೪೪೦ನೆಯ ಪುಸ್ತಕದ ಪೂರ್ವಭಾಗ.

341

ಕೆ. ಬಿ. ೪೪೦	ಕೃಷ್ಣಾರ್ಜುನರ ಕಥೆ—ಭಾಗ ೨	ಭಾಮಿನೀಷಟ್ಪದಿ
೮" × ೬.೩"	ವಿಮಲಾನಂದ	ಸು. ೧೬೮೫
೩೮೯—೯೦೭ ಪುಟ	೯ ಪಂಕ್ತಿ	೧೮ ಅಕ್ಷರ

ಆದಿ : ಪಲ್ಲಾ ॥ ನಚ್ಚುಮೆಚ್ಚಿನ ಬೀಯಗರ ಮನ
ಹುಚ್ಚುಗೊಂಡುದನರಿದು ತಾನದ
ಬೆಚ್ಚಿಬೆರದಿಹೆನೆಂಬ ರೋಷದಿ ನಡದನಾಹವಕೇ॥
ಪದ ॥ ಚಿತ್ರಶೋಭಿತ ರಚನೆವಿಡಿದ ವಿ
ಚಿತ್ರ ಸಂಮೋಹನವ ಪರಮ ಪ
ವಿತ್ರನಂದದಿ ಧರಿಸಿ ಪರಮೇಶ್ವರನ ಧ್ಯಾನಿಸುತಾ
ಚಿತ್ರಚಿತ್ರ ವಿಚಿತ್ರ ಕಲೆಗಳ
ಸೂತ್ರಿಕೆಯ ಸಲೆ ಬಲ್ಲ ಗುರುವೇ
ಕತ್ರ ಪರಿಪೂರ್ಣಾತ್ಮ ಕರುಣಿಸು ಮುಂದಣನುಭವವಾ ॥ ೧ ॥

ಅಂತ್ಯ : ಸ್ವಸ್ತಿಶ್ರೀಮತು ಶಾಲಿವಾಹನ
ಗುಪ್ತ....................
....ಸಾವಿರದಾರುನೂರಾರೊ ರುಷಿಕ್ರೊಧನದಾ
ವತ್ಸರದಲಾಷಾಡಮಾಸವ
ನುತ್ತರಿಸಿ ಶ್ರಾವಣದ ಬಿದಿಗೆಯ
ನಿತ್ಯಶುದ್ಧದಿ ಗುರು ಚಿದಾನಂದಾತ್ಮನಂಘ್ರಿಯಲೀ ॥ ೬೬ ॥
ಉಭಯ ಸಂಧಿ ೩೦ಕ್ಕಂ ಪದ ೧೮೨೫ಕ್ಕಂ ಮಂಗಳ ಮಹಾಶ್ರೀ॥ ಪ್ರಾಕೃತ ಕೃಷ್ಣಾರ್ಜುನರ ಕಾಳಗ ಸಂಪೂರ್ಣಂ.

ವಿಷಯ : ಕೃಷ್ಣಾರ್ಜುನರ ಕಥೆ.

ವಿಶೇಷ : ಇದು ಕೆ. ಬಿ. ೪೩೯ನೆಯ ಪುಸ್ತಕದ ಉತ್ತರ ಭಾಗ. ಇದರಲ್ಲಿ ೧೬ನೆಯ ಸಂಧಿಯಿಂದ ೩೦ನೆಯ ಸಂಧಿಯವರೆಗೆ ಇದೆ.

342

ಕೆ. ಬಿ. ೧೧೩	ಕೃಷ್ಣಾರ್ಜುನರ ಕಾಳಗ	ಯಕ್ಷಗಾನ
೭.೬" × ೬.೧"	ಲಿಂಗರಾಜ	೧೮೫೦
೧–೪೦ ಪತ್ರ	೧೬ ಪಂಕ್ತಿ	೨೦ ಅಕ್ಷರ

ಆದಿ: ಶ್ರೀ ಕೃಷ್ಣಾರ್ಜುನರ ಕಾಳಗ
ಶ್ರೀ ಕಾಳೀ ನವಯೌವ್ವನ
ಮಾಕಂದ ಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾಕರಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ ‖ ೧ ‖

ಅಂತ್ಯ: ತಿಂಗಳ ತಳೆದವಗೆ ಸಂಗತಸಾ
ರಂಗ ಕರಾಂಗುಳಿಗೆ ಗಂಗೋತ್ತುಮಾಂಗಗೆ
ಪುಂಗವಾಹಗೆ ಲಿಂಗೇಂದ್ರಕರಕಂಜ
ಭೃಂಗ ಮಹಲಿಂಗಗೆ ‖ ೪೨೩ ‖ ಸಂಪೂರ್ಣಂ

ವಿಷಯ: ಕೃಷ್ಣ ಮತ್ತು ಅರ್ಜುನರ ಯುದ್ಧ.

ವಿಶೇಷ: ಅಕ್ಷರಗಳು ಸುಂದರವಾಗಿಯೂ ವಿರಳವಾಗಿಯೂ ಇವೆ.

343

ಕೆ. ಬಿ. ೩೫೫/೩	ಕೃಷ್ಣಾರ್ಜುನರ ಕಾಳಗ	ಯಕ್ಷಗಾನ
೮.೩" × ೬.೫"	?	?
೧–೩೧ ಪತ್ರ	೧೬ ಪಂಕ್ತಿ	೨೪ ಅಕ್ಷರ

ಆದಿ: ಕ್ಯಾಳಾಯುಕ್ತಿನಾಮ ಸಂವತ್ಸರದ ಕಾರ್ತೀಕ ಶ್ಧ ೨ ಮಂಗಳವಾರದಲ್ಲು ಭಾಗವಥದೊಳಗಣ ಕೃಷ್ಣಾ ಅರ್ಜುನರ ಕಾಳಗಾ ಬರ್ರೆಯುುವದಕ್ಕೆ ಶುಭ ಮಸ್ತೂ ‖

ಕಂದಾ ‖ ಶ್ರೀಮದ್ಗುರು ಗಣಪತಿಯಂ
ಭಾವಿಸುವೆನು ಮನ್ಮನದೊಳ್ ಭಾರತಿಯಂ

ಪ್ರೇಮದ ಮತಿಯಂ ಬೇಡುವೆ
ಕೊಡು ಯನಗನುದಿನ ದ್ರುಡತರ ಸಂಪದವಂ ||೧||

× × × ×

ಶೂತನಭಿವರ್ನಿಸಿದ ಮಹ ವಿ
ಖ್ಯಾತ ಶೌನಕ ಮುಖ್ಯ ಮುನಿಗಳಿ
ಗೋತು ಕ್ರಿಷ್ಣಾರ್ಜುನರ ಸಮರದಾ ಕೌತುಕವನೂ || ೫ ||

ರಾಯ ಜನಮೇಜಯಗೆ ವೈಶಂ
ಪಾಯ ಮುನಿ ಭಾರಥ ಚರಿತ್ರವಾ
ಪ್ರೀಯದಿಂದಲೆ ಪೇಳ್ದನೀ ಮಹ ದಿವ್ಯ ಕಥೆಯಾ || ೬ ||

ಅಂತ್ಯ : ಪಶ್ಚಿಮಾಂಬುದಿಯ ತಡಿಯಲಿ ಬಂದು ಮಾರುತಿಗೆ
ನಿಶ್ಚಯತೋರಿ ಪೂಜೆಯಗೊಂಬಗೆ
ಆಶ್ಚರ್ಯ ಮಹಿಮನಿಗೆ ಆನಂತಭರಿತನಿಗೆ
ಸಚ್ಚರಿತಮ್ಮದ್ವಪತಿ ಶ್ರೀ ಕೃಷ್ಣಗೆ
ಜಯ ಮಂಗಳ ನಿತ್ಯ ಶುಭಮಂಗಳಂ || ೪ ||

ಅಂತು ಪದನೂ ೩೦೧೫ ಕೃಷ್ಣಾರ್ಜುನರ ಕಾಳಗ ಸಂಪೂರ್ನಂ ಮಂಗಳ ಮಹಾಶ್ರೀ ||

ವಿಷಯ : ಕೃಷ್ಣಾರ್ಜುನರ ಯುದ್ಧ.

ವಿಶೇಷ : ಪತ್ರಗಳಿಗೆ ಕ್ರಮಾಂಕವಿಲ್ಲ. ಇದರೊಂದಿಗೆ ಚಂದ್ರಾವಳಿ ಕಥೆ ಮತ್ತು ನಳ ಕೂಬರ ವಿಳಾಸವೆಂಬ ಗ್ರಂಥಗಳೂ ಇವೆ. ಕೊನೆಯ ಒಂದು ಪತ್ರದಲ್ಲಿ ಶೋಭಾನೆಯ ಹಾಡಿದೆ.

344

ಕೆ.ಬಿ. ४೯೮	**ಕೃಷ್ಣಾರ್ಜುನರ ಕಾಳಗ**	ಯಕ್ಷಗಾನ
೮″ × ೬.೩″	ಲಿಂಗರಾಜ	೧೮೫೦
೧–೫೮ ಪತ್ರ	೧೩ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗುರುವೇ ಗತಿ | ಕೃಷ್ಣಾರ್ಜುನರ ಕಾಳಗ | ಶುಭಮಸ್ತು |

ನಾಂದಿ | ಕಂದ | ಶ್ರೀ ಕಾಳೀ ನವಯೌವನ
ಮಾಕಂದ ಶುಕಂ ಶುಕಾದಿ ಮುನಿಜನ ಹೃದಯಾ
ಬ್ಜಾಕರ ಹಂಸಂ ಕರುಣಾ
ಕೇಕರನೆಮಗೀಗೆ ಸೌಖ್ಯಮಂ ಕಾಳೀಶಂ ॥ ೧ ॥

ರಾಗ | ನಾಟಿ | ಝಂಪೆ |
ಜಯತು ಕಾಳೀಕಾಂತ ಜಯತು ರಹಿತಾದ್ಯಂತ
ಜಯವಲಯಿತಾನಂತ ಜಯ ದಯಾಕ್ರಾಂತ
ಜಯತು ಜಿತಸಾಮಂತ ಜಯ ನತವನ ವಸಂತ
ಜಯತು ನುತನಿಗಮಾಂತ ಜಯತು ನಿರಹಂತ ॥ ೨ ॥

× × × ×

ಕಂದ ॥ ಮರೆಯೊಕ್ಕ ಗಯನ ಸಲಹಲು
ಹರಿಯೊಳ್ ಧುರದೆಸಗಿ ಛಲದಿ ಜಯವಂ ಪಡದಾ
ನರನ ರಿಪುವಿಪಿನ ವೈಶ್ವಾ
ನರನ ಚರಿತ್ರವನು ಜಗಮುಘೇಯೆನೆ ಪೇಳ್ವೆಂ ॥ ೧೪ ॥

ಅಂತ್ಯ : ವಾರ್ಧಕ ॥
ಕಂದ ಬಾಬಾ ಪಾರ್ಥ ಮುಂದೆ ನಿಂನಿಂದ ಕುರು
ವೃಂದವಂ ಗೆಲುವ ಪಂನತಿಕೆಯಂ ನೋಡೆ ಗಯ
ನೊಂದು ನೆವದಿಂದಿನಿತು ಗೈವೆನೆಂದಪ್ಪುತ್ತ ಗಯುಗಭಯವಿತ್ತು ಕಳುಹಿ
ಅಂದು ಪಾಂಡವರೊಡನೆ ಸವಿಯೂಟವೆಸಗುತ ಮು
ಕುಂದಂ ತೆರಳಲಿತ್ತ ಪಾಂಡವರ ವನದಿ ಸುಖ
ದಿಂದಿರ್ದ್ದರೆಂದು ವೈಶಂಪಾಯನಂ ಜನಪ ಜನಮೇಜಯಂಗುಸುರಿಸಿದಂ
॥ ೪೨೧ ॥

× × × ×

ತಿಂಗಳ ಕಳೆದವಗೆ ಸಂಗತ ಸಾ
ರಂಗ ಕರಾಗುಳಿಗೆ ಗಂಗೋತ್ತಮಾಂಗಗೆ
ಪುಂಗವವಾಹಗೆ ಲಿಂಗೇಂದ್ರಕರಕಂಜ
ಭೃಂಗಮಹಲಿಂಗಗೆ ॥ ૩ ॥
ಕೃಷ್ಣಾರ್ಜುನರ ಕಾಳಗ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಗಯನ ಕಥೆ.

ವಿಶೇಷ : ಅಕ್ಷರ ಸ್ಫುಟ, ಸುಂದರ. ಪ್ರತಿ ಸಮಗ್ರ.

345

ಕೆ. ಬಿ. ೨೬೧ **ಕೆಂಪರಾಯರ ಜಯಸ್ತುತಿ** ಹಾಡು

೬.೧" × ೬.೬" ? ?

೧–೬ ಪತ್ರ ೨೫ ಪಂಕ್ತಿ ೩೨ ಅಕ್ಷರ

ಆದಿ : ಯಿಮ್ಮಡಿ ಕೆಂಪರಾಯರ ಪದಗಳೂ ಯುದ್ಧ × × × ರಾಗ ಕನ್ನಾಡ್ ಕಾಂಬೊದೀ ||

ದಕ್ಕಿತೊ ನಿನಗೆ ಪಂಥಾ ದಕ್ಕಿತೊ ನಿನಗೆ ಪಂಥಾ
ಧೀರುರೆ ರೂಪ ಜಯಂತದಿಕ್ಕೆಂ
ಪರವಿ ಜಸಗಂಪ ಯಿಮ್ಮಡಿ ಕೆಂಪ
ದಂಕಿತೊ ನಿನಗೆ ಪಂಥಾ ||

ಪಲ್ಲ || ಮಂಡಲಪತಿ ವೇಂಕಟರಾಯರ ಭುಜ
ದಂಡಸ್ವಾಮಿದ್ರೋಹರ ಗಂಡನೆನಿಪ ಕಾ
ಲ್ಪೆಂಡೆಯುವನು ಯಿಟ್ಟು ಚಿಕ್ಕರಾಯನೆನಿಸಿಯೆ
ಖಂಡೇಂದುಧರನೆಡಿಗ್ಹೆದಲಾತನ ರಾಜ್ಯ
ಭಂಡಾರ ಬೊಕ್ಕಸವಧಿಕಾನೆ ಕುದುರೆಯ
ತಂಡ ಮುಂತಾಗಿ ಯಲ್ಲವನು ಆಯಿಯುವುಗೌಡ
ಲಂಡತನದಿ ಗ್ರಹಿಸಿ ದುರ್ಗಗಳ ಪ್ರಚಂಡತೆಯಿಂ ಬರಿಸಿ ||

ಅಂತ್ಯ : ದರಣಿತರಣಿಯು ತಾರಕಿಯು ಚಂದ್ರರುಳ್ಳನಕ
ವರ ಮೇರುಗಿರಿ ಸಪ್ತವಾರುಧಿಗಳುಳ್ಳನಕ
ಮೆರೆವ ನವನಿಧಿ ಕನಕ ರಜತಾದ್ರಿಯುಳ್ಳನಕ
ಸುರರು ದಿಕ್ಪಾಲರುಳ್ಳನಕ
ಸ್ಥಿರದಿ ರಾಯರ ಸಿಂಹಾಸನವನಿವಿಸಿದೆ ಕೆಂಪ
ದೊರೆರಾಯ ನಿಂಮ ಚಾರಿತ್ರವನು
ಹರುಷದಲಿ ಬರೆದೋದಿ ಕೇಳ್ವೈ ಜಾಣರಿಗೆ ಯಿಹ
ಪರಸುಖವ ಪರಮೇಶನೀವ ಕರುಣದಲಿ ಕೆಂಪ
ದೊರೆರಾಯ ಬಾಳು ಸಾಂಬ್ರಾಜ್ಯ ಪದವಿಯಲಿ
ಧಾರುಣಿಯೊಳಿದಿರಾರು ನಿನಗೆ || ೩೯ ||

ಅಂತು ಕೆಂಪರಾಯರ ಪದ ಸಂಪೂರ್ಣ ||

ವಿಷಯ : ಬೆಂಗಳೂರು ಇಮ್ಮಡಿ ಕೆಂಪರಾಜನ ಸ್ತುತಿ.

ವಿಶೇಷ : ಮೋಡಿ ಲಿಪಿ.

346

ಕೆ. ೨೬	**ಕೆಳದಿನೃಪವಿಜಯ**	ಚಂಪು
೧೪.೩" × ೨.೨"	ಲಿಂಗಣ್ಣ	ಸು. ೧೭೯೦
೧–೯೧ ಪತ್ರ	೮ ಪಂಕ್ತಿ	೬೦ ಅಕ್ಷರ

ಆದಿ : ಶ್ರೀ ಗುರುವೆ ನಮಃ ಕೆಳದಿನೃಪ ವಿಜಯ ಬರವುದಕ್ಕೆ ಶುಭಮಸ್ತು.

ವತ್ತ ॥ ಯಿಾ ಕೃತಿಗಾವುದೆನಲುಜ್ವಲ ತುಂಗತರಂಗ ಸಂಚರ
ದ್ಭೀಕರ ಮಿಾನ ಕರ್ಕಟಕ ಕೂರ್ಮಕನತ್ಸಲೀಲೆ ಭನಕ್ರದ
ರ್ವೀಕರ ಶೀಶುಮಾರ ಮುಖಮಾಶ್ವರ ಸಂಚಯ ಚಾಲನೋಜ್ವಲ
ಛೀಕರ ಫೇನ ಕಂಬುಕುಲರತ್ನಗಳಿಂದೆಸೆದತ್ತು ಸಾಗರಂ ॥

ಅಂತ್ಯ : ಖಂಡಿತ ಕಾಯಕಂ ಮಾಡ್ಸಿ ಕೊಟ್ಟು ಮೇಲೆನಿಪುಡುಗರೆ ಉಚಿತ ಮುಂತಾದುಪಚಾರಂಗಳಿಂ ಪಿರಿದು ಸನ್ಮಾನಾಗಿಸಿ ಸಂತಸಂಪಡಿಸಿ ತೆರಳ್ಚಿಸಿ ಕಳುಪಿದರಂತುಮಲ್ಲದೆಯುಂ ॥ ೧೧ ॥

ಶಕವರ್ಷ ೧೬೮೫ ನೆಯ ಚಿತ್ರಭಾನುಸಂವತ್ಸರದ ಮಾಘ ಶುಶಿಯೊಳ್ ನಗರ ಸಂಸ್ಥಾನ ವಿಸ್ಖಲಿತಮಾಗಿ ಯೀ ಶಿವಭಕ್ತರ ಸಂಸ್ಥಾನ ಯಿಲ್ಲಿಗೆ ಸಮಾಪ್ತಿ ಯೀ ವೀರಂಮಾಜೀ ಸೋಮಸೇಖರ ನಾಯಕರು ರಾಜಮಾಳಿದ್ದು ಯೀಶ್ವರ ಸಂ ॥ ಶ್ರಾವಣ ಬ ೫ ಆರಭ್ಯ ಚಿತ್ರಭಾನು ಸಂ ಮಾಘ ಶು.... ವರೆಗೆ ವರು ೫ ತಿಂ ೬ ಪರಿಯಂತರಂ ॥

ವಿಷಯ : ಕೆಳದಿರಾಜರ ಚರಿತ್ರೆ.

ವಿಶೇಷ : ೨೧, ೩೩, ೫೪, ೭೪, ೮೦ ಮತ್ತು ೮೮ನೆಯ ಪತ್ರಗಳಲ್ಲಿ ಒಂದು ಕಡೆ ಮಾತ್ರ ಬರೆದಿದೆ. ೬೬ ನೆಯ ಪತ್ರ ಲುಪ್ತ.

347

ಕೆ. ಎ. ೧೧೬	**ಕೆಳದಿನೃಪವಿಜಯ**	ಚಂಪು
೧೩" × ೮.೨"	ಲಿಂಗಣ್ಣ	ಸು. ೧೭೯೦
೧–೪೭ ಪತ್ರ	೩೨ ಪಂಕ್ತಿ	೩೫ ಅಕ್ಷರ

ಆದಿ : ಕೆಳದಿ ನೃಪವಿಜಯ × × ×

ವೃತ್ತಂ ॥ ಯೀ ಕೃತಿಗಾವುದೆನಲುಜ್ವಲ ತುಂಗತರಂಗಸಂಚರ
ದ್ಭೀಕರ ಮೀನ ಕರ್ಕಟಕ ಕೂರ್ಮ ಕನತ್ಸಲೀಲೆ ಭನಕ್ರದ

ರ್ವೀಕರ ಶಿಂಶುಮಾರ ಮುಖವಾಶ್ಚರ ಸಂಚಯಜಾಲನೊಚ್ಚಲ
ಭೇಕರಫೇನ ಕಂಬುಕುಲರತ್ನಂಗಳಿಂದೆಸದತ್ತುಸಾಗರಂ ‖ ೧ ‖

ಅಂತ್ಯ : ಕಂದ ‖ ಅಡಸಿದಾರೆಯರ ಪೌಜಂ
ಕಡೆದೆಗಸುತ್ತೆ ವೀರಭದ್ರಪೇಂದ್ರನ ಮುಖದಿಂ
ಪಡುಗಡಲೆಡೆಯೊಳಗೊಪ್ಪುವ
ಮಿಡಿಜೆಯ ಕೋಂಟೆಯನ ಮಗುಳೆ ತಾಂ ವಶಗೈದು ಸುಖ
ದಿಂರ್ದರ್‖

ಯಿಂತೀ ಕೆಳದಿ ನೃಪವಿಜಯು ಸಮಾಪ್ತ ಮಂಗಳ ಮಹಾಶ್ರೀ ‖ × × × ‖ ಶಕವರ್ಷ ೧೬೮೫ ನೆಯ ಚಿತ್ರಭಾನು ಸಂವತ್ಸರದ ಮಾಘ ಶುದ್ಧ ೯ರವರಿಗೆ ವರ್ಷ ೯೫ ತಿಂಗಳು ೫ ದಿನ ೧೯ ಪರಿಯಂತ್ರ ಶಿವಭಕ್ತರ ಸಂಸ್ಥಾನ ಸಮಾಪ್ತಿ. ಆ ತರುವಾಯ ಮ್ಲೇಂಚರ ಹೈದರು ನವಾಬು ಶುಭಕೃತು ಸಂವತ್ಸರ ಪಾಲ್ಗುಣ ಶುದ್ಧ ೧೫ವರಿಗೆ ವರುಷ ೨೦ ತಿಂಗಳು ೧ ದಿನ ಆರು ಪರಿಯಂತ್ರ ಶ್ರೀರಂಗಪಟ್ಟಣದ ರಾಜ ಆಳಿದ ಅನಂತರ ಮೈಸೂರವರಿಗೆ ಸೇರಿತು ಸಮಾಪ್ತ ಮಂಗಳ ‖

ವಿಷಯ : ಕೆಳದಿರಾಜರ ಚರಿತ್ರೆ.

ವಿಶೇಷ : ಮೋಡಿಲಿಪಿ. ೧೧ ಆಶ್ವಾಸಗಳಿವೆ. ೪, ೨೨ ಮತ್ತು ೩೦ನೆಯ ಪತ್ರಗಳಲ್ಲಿ ಸ್ವಲ್ಪ ಗ್ರಂಥಲೋಪ.

348

ಕೆ. ಎ. ೨೬೫	ಕೆಳದಿಸಂಸ್ಥಾನದ ರಾಯರ ವಂಶಾವಳಿ	ಗದ್ಯ
೧೩.೧″ × ೮.″	?	?
೧–೬೦ ಪುಟ	೨೦ ಪಂಕ್ತಿ	೨೨ ಅಕ್ಷರ

ಆದಿ : ಕೆಳದಿಸಂಸ್ಥಾನದ ರಾಯರ ವಂಶಾವಳಿ ‖

ಕೆಳದಿಯಂಬ ಗ್ರಾಮದಲ್ಲಿ ಹಳೆಜೈಲುಯಂಬ ಭೂಮಿಯಲ್ಲಿ ಒಂದು ಹುತ್ತ ಯಿತ್ತು. ಆ ಹುತ್ತದಲ್ಲಿ ರಾಮಲಿಂಗದೇವರು ಉದ್ಭವವಾಗಿ ಆ ಸ್ಥಳದ ಗೌಡ ಬಸವಪ್ಪಯಂಬವನು ಗದ್ದೆ ಹೂಡಿಕೊಂಡು ಕೃಷಿರೂಪದಿಂದ ಕಾಲಕ್ಷೇಪ ಮಾಡಿಕೊಂಡು ಇರುತ್ತಾ ಇದ್ದಲ್ಲಿ—

ಅಂತ್ಯ : ಚನ್ನಮ್ಮಾಜಿಗೆ ಭುವನಗಿರಿದುರ್ಗದಲ್ಲಿ ರಾಜ್ಯಪಟ್ಟವಾದ್ದು ಶಾಲಿವಾಹನಶಕ ವರ್ಷ ೧೬೩೨ ನೇ ವಿರೋಧಿಕೃತ್ ಸಂವತ್ಸರದ ಫಾಲ್ಗುಣ ಶುದ್ಧ ೧೦ ರ ಲಾಗಾಯ್ತು ಈಶ್ವರ ಸಂವತ್ಸರ ಶ್ರಾವಣ ಶುದ್ಧ ೧೪ ರ ವರೆಗೆ ವರ್ಷ ೨೫ ತಿಂಗಳು ೪ ದಿನ ೨೫ ರ ವರೆಗೆ ಸಧರ್ಮದಿಂದ ರಾಜ್ಯಭಾರ ಮಾಡಿ ಸಾಯುಜ್ಯ ಸಂಪಾದಿಸಿದಳು.

ವಿಷಯ : ಕೆಳದಿರಾಜರ ವಂಶಾವಳಿ.

ವಿಶೇಷ : ಕೆಂಪು ಮಸಿಯಲ್ಲಿ ಅಲ್ಲಲ್ಲಿ ತಿದ್ದಿದೆ.

349

ಕೆ. ಎ. ೯೧	ಕೇರಳೆಪ್ರಶ್ನೆ	ಭಾಮಿನೀಷಟ್ಪದಿ
೧೨.೬" × ೭.೮"	?	?
೧–೭೨ ಪತ್ರ	೧೯ ಪಂಕ್ತಿ	೨೪ ಅಕ್ಷರ

ಆದಿ : ಕೇರಳೀಯ ಪ್ರಾಕೃತ ಜಾತಕ ಗ್ರಂಥ ಬರೆಯುವದಕ್ಕೆ ನಿರ್ವಿಘ್ನವಸ್ತು × ×

ಕಂದನೇ ತಿಳಿ ಜನನಕಾಲವ
ನಂದದಿಂ ಗ್ರಹಬಲವ ಶುಭವನು
ಹೊಂದಿರಾಜಿಪರವುಲ ಕೇಂದ್ರತ್ರಿಕೋಣದಲ್ಲಿರುವಾ
ಸ್ವಚ್ಛಸ್ವರ್ಕ್ಷದ ಪರಿಯ ಶುಭದೊಳು
ಹೆಚ್ಚಿ ರಾಜಿಪ ಯೋಗಕಾರಕ
ರಚ್ಚರಿಯ ದೃಷ್ಟಿಯನು ಮತ್ತೆ ತ್ರಿಕೋಣ ಕೇಂದ್ರಗಳೂ ‖ ೧ ‖

ಅಂತ್ಯ : ಮೃತ್ಯುಪರಿಹರಿಸುತ್ತಲಾಯುವ
ನಿತ್ತುಸಲಹುವದಧಿಕ ಧನ ಸಂ
ಪತ್ತು ಸಕಲಾಭೀಷ್ಟಗಳ ಕರುಣಿಪುದು ತಿಳಿಯಂದಾ

ಅಂತು ಅಧ್ಯಾಯ ೧೯ ಕ್ಕ್ಯಾಂ ಪದ ೮೦೪ ಕ್ಕ್ಯಾಂ ಮಂಗಳ ಮಹಾಶ್ರೀ । ಇತಿ ಕೆರಳೀಯ ಜಾತಕ ಗ್ರಂಥ ತತ್ಕಾಲಾನುಕೂಲ ರಾಹುದಶಾ ಪರಿಯಂತಂ ಲಿಖಿತ ಗ್ರಂಥಃ ಸಮಾಪ್ತಃ ‖

ವಿಷಯ : ಪ್ರಶ್ನಶಾಸ್ತ್ರ.

ವಿಶೇಷ : ಪ್ರತಿ ಚನ್ನಾಗಿದೆ.

350

ಕೆ. ೪೬	**ಕೈವಲ್ಯಪದ್ಧತಿ**	ಹಾಡು
೯.೨" × ೧.೫"	ನಿಜಗುಣಶಿವಯೋಗಿ	ಸು. ೧೫೦೦
೧–೬೨ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ಶ್ರೀ ನಿಜಗುಣ ಶಿವಯೋಗಿ ವಿರಚಿತವಾದ ಕೈವಲ್ಯಪದ್ಧತಿ ಸ್ವರ ವಚನಂಗಳು । ರಾಗಾ ನಾದ ರಾಮಕ್ರಿ । ಚೌಪಾದಿ ವರ್ನ ॥ ಶ್ರೀ ಗುರು ವಚನೋಪದೇಶವ ನಾಲಿಶಿದಾಗಳಹುದು ನರರಿಗೆ ಮುಕ್ತಿ । ಪಲ್ಲ ।

ದುರಿತ ಕರ್ಮವನೊಲ್ಲದಿರು ಪುಣ್ಯಾವನೆ ಮಾಡು
ಹರನಡಿವಿಡಿ ಶಾಂತರೊಡನಾಡೂ
ಕರುಣಾವೀರಲಿ ಜೀವರೊಳು ನೀತಿವಿಧನಾಗು
ಪೊರ್ದಿಧರನೆಂದು ಬೆಸಸುವಾ ॥ ೧॥

ನಿಂದಿಸಿ ನುಡಿಯದಿರಾರನು ಮನಶಿಗೆ
ಬಂದಂತೆ ನಡೆಯದಿರಿಹದಲ್ಲೀ
ಕುಂದುವಡೆಯದಿರು ಕಾಮಾದಿಯನು ಜಯಿ
ಸೆಂದು ಕೈವಿಡಿದನು ಗ್ರಹಿಸುವಾ ॥ ೨ ॥

ಅಂತ್ಯ : ನಲಿದು ಮಧ್ಯಮುನಿಗೆ ನಿರೂಪಿಸಿದಾತ್ಮವಿದ್ಯೆಕಂಜ
ದೆಲೆದಳೆದ ಜಲದಂತೆ ಮುಕ್ತಾತ್ಕೃತಿಯೊಳಿಹುದೂ ॥ ೨ ॥
ವರವಿಶಿಷ್ಟನೊಳೊರೆದ ಶಂಭುಲಿಂಗದರಿಹು ಚಿಪ್ಪ
ಮೆರದು ಮುತ್ತಾದಂತೆ ವಾರಿಯದಹುದು ಸಫಲಾ ॥ ೩ ॥ ॥ ೧೫೪ ॥

ರಾಗಾ ಪಹಾಡಿ॥ ಗ್ನಾನಿ ಮೋಹಿಪುದಂದವೆ ಪರತತ್ವ
ಜ್ಞಾನಿ ಮೋಹಿಪುದಂದವೆ ತಾನೆ ನಿತ್ಯಾನಂದ ನಿಜರೂಪ
ನೆನಿಪಾ ।
ಪದಾ ॥ ತನು ಮೂರು ಕರಣಾಳಿ ಮನಸಾದಿಗಳನು
ತನಗೆ ವಿಲಕ್ಷಣವಹುದೆಂದು ತಿಳಿದಾ
ಭವಭಾರವಿಳಿದ ಜೀವತ್ವವ ॥

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಇದು ಅಸಮಗ್ರ ಪ್ರತಿ. ಆರಂಭದಲ್ಲಿ ಪ್ರತ್ಯೇಕವಾದ ೨ ಪತ್ರಗಳಲ್ಲಿ 'ಪುಣ್ಯಾರ್ಜನಕ್ರಮಂ' ಎಂಬ ಕೃತಿ ಇದೆ.

351

ಕೆ. ೧೯೦/೧ ಕೈವಲ್ಯಪದ್ಧತಿ ಹಾಡು

೧೩.೩″ × ೧.೭″ ನಿಜಗುಣಶಿವಯೋಗಿ ಸು. ೧೫೦೦

೧-೪೭ ಪತ್ರ ೮ ಪಂಕ್ತಿ ೬೨ ಅಕ್ಷರ

ಆದಿ : ॥ ಶ್ರೀ ನಿಜಗುಣಶಿವಯೋಗಿ ವಿರಚಿತಮಪ್ಪ ಶಟ್ಶಾಸ್ತ್ರಂಗಳ ಬರೆಯುವದಕ್ಕೆ ನಿರ್ವಿಘ್ನಮಸ್ತು ॥ ನಾದನಾಮಕ್ರಿಯ ॥ ಚೌಪದಿವರ್ನ ॥

ಶ್ರೀ ಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕ್ತಿ ॥ ಪಲ್ಲ ॥
ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡೂ
ಕರುಣವಿರಲಿ ಜೀವರೊಳು ನೀತಿವಿಧನಾಗು
ಪೊರೆ ಪೊರ್ದ್ದಿದರನೆಂದು ಬೆಸಸೂವಾ ॥ ೧ ॥

ಅಂತ್ಯ : ಮುಸುಕುವ ವಿಷಯ ಪತಂಗ ಬಿದ್ದುರುಳೆ ತಾ
ಮಸ ಬುದ್ಧಿಯೆಂಬ ಕತ್ತಲೆಯಳಿಯೆ
ಮಸಗೆ ಸುಜ್ಞಾನವೆಂದೆಂಬ ಮಹಾಪ್ರಭೆ
ಪಸರಿಸಿ ತನುಗಳ್ಗೆ ಪರಿಯುದನುಪಮಾ ॥ ೨ ॥
ಪ್ರಣವಾಕಾರದಿಂ ಗುಣ ಮೂರ ಮುಟ್ಟದೆ
ಗಣನೆಗತೀತಗಳನೆ ತೋರುವಾ
ಅಣಿಮ ಯೋಚನೆಗಳಿಲ್ಲದ ಮೋಕ್ಷಚಿಂತಾ
ಮಣಿಯೆನಿಸುವ ಶಂಭುಲಿಂಗವೆ ತಾನಾಗಿ ಜ್ಯೋತಿ ಬೆಳಗುತಿದೆ ॥ ೩ ॥

ಇತಿ ನಿಜಸ್ಥಿತಿನಿರೂಪಣಂ ॥ ಇತಿ ಜೀವನ್ಮುಕ್ತಿ ಪ್ರಕರಣಂ ॥ ಶ್ರೀ ॥ ಯಿಂತು ನಿಜಗುಣ ಶಿವಯೋಗಿ ವಿರಚಿತವಾದ ಕೈವಲ್ಯಪದ್ಧತಿಯೆಂಬೀ ಪ್ರಕರಣದಲ್ಲಿ ಜ್ಞಾನ ಪ್ರತಿಪಾದನಾಸ್ಥಲ ಸೇರಿದ ವಚನಂಗಳ ಜೋಡು ೫೫ ಕ್ಕಂ ಮಂಗಳ ಮಹಾಶ್ರೀ ಬಸವಾದಿ ಪ್ರಮಥಗಣಂಗಳ ದಿವ್ಯಶ್ರೀ ಚರಣಾರವಿಂದಂಗಳಿಗೆ ನಮೋ ನಮಃಸ್ತೇ ನಮಃ ॥ ಗದ್ಯಾ ॥ ಯಿಂತು ಶ್ರೀ ಗುರು ಶಂಭುಲಿಂಗ ದೊಲವಿಂ ಶ್ರೀ ನಿಜಗುಣ ಶಿವಯೋಗೀಂದ್ರ ವಿರಚಿತವಾದ ಆಬಾಲಯವ್ವನ ವೃದ್ಧರಿಗಾಯಾಸವಿನಿಸಿಲ್ಲದಂತೆ। ಸಮ್ಯಜ್ಞಾನಿಗಳೊಡಂಬಡುವಂತೆ ಸಕಲವೇದ ವೇದಾ ಆಗಮ ಸ್ಮೃತಿ ಪುರಾಣೇತಿಹಾಸಸೂತ್ರಾದಿ ಶಾಸ್ತ್ರ ಸಂಮತದಿಂ। ಪುರಾತನ ಗೀತಾನುಗುಣ್ಯವೆನಿಸಿ ಕೈವಲ್ಯ ಪದ್ಧತಿಯೆಂಬ ಪೆಸರನಿಟ್ಟೊ। ವೃದು ಮಧುರ ಲಕ್ಷಣಯುಕ್ತಮಾದ ಪಂಚಸ್ಥಲ ಪರಿವಿಡಿದು ಜೋಡು

ಗಣನೆಯನುಳ್ಳ ಸ್ವರವಚನ ಸಂಗ್ರಹಂ ಪೇಳ್ದಂ ॥ ವಚನ ಪದಗಳ ಸಂಖ್ಯೆ ॥ ಕ್ರಿಯಾಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೨೮ ಕ್ಕೆ ಪದ ೧೦೬ ಶಿವಸಂಬೋಧನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೨೨ ಕ್ಕೆ ಪದ ೭೦ ನೀತಿ ಕ್ರಿಯಾಚಾರ್ಯ್ಯ ಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೨೬ ಕ್ಕೆ ಪದ ೯೮ ಯೋಗ ಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೩೯ ಕ್ಕೆ ಪದ ೧೯೪ ಜ್ಞಾನ ಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೫೯ ಕ್ಕೆ ಪದ ೨೨೩ ಅಂತೂ ಸ್ಥಲ ೫ ಕ್ಕೆ ವಚನಂಗಳ ಜೋಡು ೧೭೪ ಕ್ಕೆ ಪದಗಳೂ ೬೪೮ ಕ್ಕೆ ಮಂಗಳ ಮಹಶ್ರೀ.

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಅಕ್ಷರಗಳು ಬಹು ಸ್ಫುಟ. ಇದರೊಂದಿಗೆ ಅರವತ್ತು ಮೂವರ ತ್ರಿವಿಧಿಯೂ ಸೇರಿದೆ. ಅಲ್ಲದೆ ಷಟ್ಶಾಸ್ತ್ರಗಳೆಂದು ಪರಿಗಣಿತವಾಗಿರುವ ಇದೇ ಗ್ರಂಥ ಕಾರನ ವಿವೇಕ ಚಿಂತಾಮಣಿ, ಪರಮಾರ್ಥ ಗೀತೆ, ಅನುಭವಸಾರ, ಪರಮಾನು ಭವಬೋಧೆ, ಪರಮಾರ್ಥ ಪ್ರಕಾಶಿಕೆಗಳೆಂಬ ಗ್ರಂಥಗಳೂ ಇವೆ. ಪ್ರತಿ ಮಾಡಿದ ಕಾಲಾದಿಗಳನ್ನು ಪರಮಾರ್ಥ ಪ್ರಕಾಶಿಕೆಯ ಅಂತ್ಯದಲ್ಲಿ ನೋಡು ವುದು.

352

ಕೆ. ೩೧೨/೧	**ಕೈವಲ್ಯಪದ್ಧತಿ**	ಹಾಡು
೧೮.೨" × ೨"	ನಿಜಗುಣಶಿವಯೋಗಿ	ಸು. ೧೫೦೦
೧–೩೪ ಪತ್ರ	೧೦ ಪಂಕ್ತಿ	೮೨ ಅಕ್ಷರ

ಆದಿ : ಶುಭಮಸ್ತು ॥ ಶ್ರೀ ಹಯಗ್ರೀವಾಯನಮಃ ॥ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರ್ಷಂಗಳು ೧೭೪೯ರಲ್ಲಿ ಸಂದು ವರ್ತಮಾನವಾದ ಸರ್ವಜಿ ನ್ನಾಮ ಸಂವತ್ಸರಾಷಾಢ ಶುಧ ೧ ಸೋಮವಾರ ದಿವದಲ್ಲಿ ಮಹಾರಾಜಶ್ರೀ ನಾರಣರಾಜಯ್ಯ ಅರಸಿನವರ ಪುಸ್ತಕದಲ್ಲಿ ಕೈವಲ್ಯಪದ್ಧತಿ ಬರೆಯುವದಕ್ಕೆ ಪ್ರಾರಂಭ ॥ ಶ್ರೀ ನಿಜಗುಣಶಿವಯೋಗಿಗಳಿಂ ವಿರಚಿತಮಪ್ಪ ಷಟ್ಶಾಸ್ತ್ರಂಗಳ ಬರೆಯುವುದಕ್ಕೆ ನಿರ್ವಿಘ್ನದಾಯಕರ ಕೃಪಾಕಟಾಕ್ಷ ಸಿದ್ಧಿರಸ್ತು ॥ – ॥
ರಾಗ ॥ ನಾದರಾಮಕ್ರಿಯಾ ॥ – ॥ ಚೌಪದಿವರ್ನಾ ॥
ಶ್ರೀ ಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕ್ತಿ ॥ ಪಲ್ಲ ॥

ದುರಿತ ಕರ್ಮವನೊಲ್ಲದಿರು ಪುಂಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡೂ
ಕರುಣವಿರಲಿ ಜೀವರೊಳು ನೀತಿವಿದನಾಗು
ಪೊರೆಪೊರ್ದಿದರನೆಂದು ಬೆಸಸುವಾ ॥ ೧ ॥

ಅಂತ್ಯ : ರಾಗ ನಾದರಾಮಕ್ರಿ ॥ ಜ್ಯೋತಿ ಬೆಳಗುತಿದೆ । ವಿಮಲ ಪರಂಜ್ಯೋತಿ ಬೆಳಗುತಿದೆ ॥ ಪಲ್ಲ ॥ × ×
ಪ್ರಣವಾಕಾರದ ಗುಣ ಮೂರು ಮುಟ್ಟದೆ
ಗಣನೆಗತೀತಗಳನೆ ತೋರುವಾ
ಅಣಿಮಯೋಚನೆಗಳಿಲ್ಲದ ಮೋಕ್ಷಚಿಂತ್ರಾ
ಮಣಿಯೆನಿಸುವ ಶಂಭುಲಿಂಗವೆ ತಾನಾಗಿ ಜ್ಯೋತಿ ಬೆಳಗುತಿದೆ ॥ – ॥ ೩ ॥
ಇತಿ ನಿಜಸ್ಥಿತಿ ನಿರೂಪಣಂ ॥ ಇತಿ ಜೀವನ್ಮುಕ್ತಿ ಪ್ರಕರಣಂ ॥ * ॥
ಇಂತು ನಿಜಗುಣಶಿವಯೋಗಿ ವಿರಚಿತಮಾದ ಕೈವಲ್ಯಪದ್ಧತಿಯೆಂಬೀ ಪ್ರಕರಣದಲ್ಲಿ ಜ್ಞಾನಪ್ರತಿಪಾದನಾ ಸ್ಥಲ ಸೇರಿದ ವಚನಂಗಳ ಜೋಡು ೪೯ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ ॥ ನಾರಾಯಣ ಪ್ರಭುರ್ಜಯತಿ ॥ ಗದ್ಯಾ ॥ * ॥
ಯಿಂತು ಶ್ರೀಗುರು ಶಂಭುಲಿಂಗದೊಲವಿಂ ಶ್ರೀ ನಿಜಗುಣಶಿವಯೋಗೀಂದ್ರ ವಿರಚಿತಮಾದ ಆಬಾಲ ಯೌವನ ವೃದ್ಧರಿಗಾಯಾಸವಿನಿತಿಲ್ಲದಂತೆ ಸಮ್ಯಜ್ಞಾನಿಗಳೊಡಂಬಡುವಂತೆ ಸಕಲ ವೇದಾಂತಾಗಮ ಸ್ಮೃತಿ ಪುರಾಣೇತಿಹಾಸ ಸೂತ್ರಾದಿ ಶಾಸ್ತ್ರ ಸಂಮತದಿಂ ಪುರಾತನ ಗೀತಾನುಗುಣ್ಯವೆನಿಸಿ ಕೈವಲ್ಯಪದ್ಧತಿಯೆಂಬ ಪೆಸರನಿಟ್ಟು ಮೃದುಮಧುರ ಲಕ್ಷಣಯುಕ್ತಮಾದ ಪಂಚಸ್ಥಲ ಪರಿವಿಡಿದು ಜೋಡುಗಣನೆಯನುಳ್ಳ ಸ್ವರವಚನ ಸಂಗ್ರಹಂ ಪೇಳ್ದಂ ॥ ॥ * ॥
ವಚನಂಗಳ ಸಂಖ್ಯೆ ಕ್ರಿಯಾಪ್ರತಿಪಾದನಾ ಸ್ಥಳಕ್ಕೆ ಸೇರಿದ ವಚನಂಗಳ ಜೋಡು ೯ಕ್ಕಂ ಪದ ೧೦೬ ಜೀವಸಂಬೋಧನಾ ಸ್ಥಲಕ್ಕೆ ಸೇರಿದ ವಚನಂಗಳು ೨೨ಕ್ಕಂ ಪದ ೭೦ ನೀತಿಕ್ರಿಯಾಚಾರ್ಯ ಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೨೬ಕ್ಕಂ ಪದ ೯೮ಕ್ಕಂ ಯೋಗಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೂಡು ೩೯ಕ್ಕೆ ಪದ ೧೪೯ ॥ ಜ್ಞಾನಪ್ರತಿಪಾದನಾಸ್ಥಲಕ್ಕೆ ಸೇರಿದ ವಚನಂಗಳ ಜೋಡು ೪೯ಕ್ಕಂ ಪದ ೨೨೩ ಅಂತು ಸ್ಥಲ ೫ಕ್ಕಂ ವಚನಂಗಳ ಜೂಡು ೧೭೪ಕ್ಕೆ ಪದಗಳೂ ೬೪೮ಕ್ಕಂ ಮಂಗಳಾಮಹಾ ಶ್ರೀಶ್ರೀಶ್ರೀಶ್ರೀ ॥

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಪ್ರತಿ ಸುಸ್ಥಿತಿಯಲ್ಲಿದೆ. ಲಿಪಿ ಸಣ್ಣದಾದರೂ ಸ್ಫುಟವಾಗಿವೆ. ಎಲ್ಲ ಸ್ವರವಚನಗಳೂ ಶಂಭುಲಿಂಗಾಂಕಿತಗಳಾಗಿವೆ. ಆದಿಯ ಪತ್ರದ ಎಡಪಕ್ಕದಲ್ಲಿ

'ಶ್ರೀ ನಿಜಗುಣಶಿವಯೋಗಿಗಳಿಂ ವಿರಚಿತಮಪ್ಪ ಕೈವಲ್ಯಪದ್ಧತಿ ಸ್ವರವಚನಂಗಳೂ' ಎಂದಿದೆ. ಈ ಗ್ರಂಥದೊಂದಿಗೆ ಇದೇ ನಿಜಗುಣಶಿವಯೋಗಿ ರಚಿತವಾದ ಪ್ರಥಮಗಣಂಗಳ ಸ್ತುತಿ ತ್ರಿವಿಧಿ (ಪುರಾತನ ತ್ರಿವಿಧಿ), ಪರಮಾರ್ಥ ಗೀತೆ, ಅನುಭವಸಾರ, ಪರಮಾನುಭವಬೋಧೆ, ಪರಮಾರ್ಥಪ್ರಕಾಶಿಕೆ, ವಿವೇಕ ಚಿಂತಾಮಣಿ—ಮೊದಲಾದುವೂ, ಅರುವತ್ತುಮೂರು ಪುರಾತನರ ತ್ರಿವಿಧಿಯೂ ಇವೆ.

353

ಕೆ.೫೯೮	**ಕೈವಲ್ಯಪದ್ಧತಿ (ಸಟೀಕು)**	ಹಾಡು, ಟೀಕು
೧೪.೧" × ೨.೨"	ನಿಜಗುಣಶಿವಯೋಗಿ	ಸು. ೧೫೦೦
೧–೯೭ ಪತ್ರ	೧೪ ಪಂಕ್ತಿ	[illegible] ಅಕ್ಷರ

ಆದಿ : ಶ್ರೀ × × × ನಿಜಗುಣಶಿವಯೋಗಿ ವಿರಚಿತಮಪ್ಪ ಕೈವಲ್ಯಪದ್ಧತಿ ಟಿಪ್ಪಣ ಲೇಖನಂ ಕೃತಸ್ಯ ಭದ್ರಂ ಭೂಯಾತ್ × ×

ರಾಗ ನಾದನಾಮಕ್ರಿ ॥

ಶ್ರೀಗುರು ವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕ್ತಿ ॥

ಟೀಕು ॥ ಶ್ರೀ ಷಡ್ಗುಣೈಶ್ವರ್ಯಸಂಪತ್ಕರವನುಳ್ಳ ಗುರು ಗುರುಸ್ವಾಮಿಯ ವಚನ ವಾಕ್ಯವ ಉಪದೇಶವಂ ಅನುಗ್ರಹವನ್ನು ಆಲಿಸಿದಾಗಳೆ ಕೇಳಿದಾಕ್ಷಣದಲ್ಲಿಯೇ ನರರಿಗೆ ನರಜನ್ಮದ ಭಕ್ತರಿಗೆ ಮುಕುತಿ ಮೋಕ್ಷಲು ಅಹುದು ಆಗುವದು ॥

ಪದ ॥ ದುರಿತಕರ್ಮವನೊಲ್ಲಿದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡು
ಕರುಣವಿರಲಿ ಜೀವರೊಳು ನೀತಿವಿಧನಾಗು
ಪೊರೆಪೊರ್ದಿದರನೆಂದು ಬೆಸಸೂವ ॥

ಟೀಕು॥ ದುರಿತಕರ್ಮವಂ। ಪಾಪದ ಕೃತ್ಯವನ್ನು ವಲ್ಲಿದಿರು ಅಂಗೀಕರಿಸಬ್ಯಾಡ। ಪುಣ್ಯವನೆ। ಸತ್ಕರ್ಮವನೆ। ಮಾಡು.

ಅಂತ್ಯ : ಯಿಂತು ಕರ್ಮಭೇದವೆಂತು ಫಲಿಸುತ್ತಿಹವು
× × × ×
ವಂತೆವರಿಗೆ ಸಮಾನವೇಯಹುದು ॥

ಟೀಕು॥ ಯಿಂತು ಈ ಪ್ರಕಾರಲು ಕರ್ಮದ ಪ್ರಾರಬ್ಧ ಕರ್ಮದ ಭೇದಲು ಭಿನ್ನತ್ವವು ಯೆಂತು ಯಾವ ಪ್ರಕಾರಲು × × × × ಅಂತವರಿಗೆ ಹಾಗಾದಂಥಾ

ನಾಲ್ವರಿಗೆ ಸಮಾನವೆ ಸರಿಯಹತನವೆ ಅಹುದು ಆಗುವದು। ಪ್ರಾರಬ್ಧಕರ್ಮ ವಾಸನೆಯೊಂದೆ ॥ ೫ ॥ ೨೨೦ ॥ ೫೮ ॥ ಶ್ರೀ ॥ × × × × ಯಿಂತು ನಿಜಗುಣ ಶಿವಯೋಗಿ ವಿರಚಿತವಾದ ಕೈವಲ್ಯಪದ್ಧತಿಯೆಂಬ ಶಾಸ್ತ್ರದಲ್ಲಿ × × × × ಸ್ಥಳ ೫ಕ್ಕೆ ವಟ್ಟು ಪದಜೋಡು ೧೭೫ ಬಿಚ್ಚಿದ ಪದ ೬೪೯ಕ್ಕಂ ಮಂಗಳಮಹಾಶ್ರೀ ॥ ಸ್ವಸ್ತಿ ಶ್ರೀ ವಿಜಯಾಭ್ಯದಯ ಶ್ರೀಮನ್ನೃಪ ಶಾಲಿವಾಹನ ಶಕ ವರುಷಂಗಳು ೧೭೭೫ನೆಯ ಪ್ರವರ್ತಮಾನಕ್ಕೆ ಸಲುವ ಪ್ರಮಾದೀಚ ಸಂವತ್ಸರದ ಶ್ರಾವಣ ಬ ೮ ಲು ನಿಜಗುಣಶಿವಯೋಗಿ ವಿರಚಿತ ಕೈವಾಲ್ಯಪದ್ಧತಿಯನ್ನು ಲಿಖಿಸಿದಾತ ಗಿಳಲಗುಂಡಿಮಠದ ಕಮರಗಟ್ಟಿ ಮರಿವಡೆಯರವರು ಮುಗಿಸಿದ್ದು.

ವಿಷಯ: ವೀರಶೈವ ತತ್ವಬೋಧೆ.

ವಿಶೇಷ: ಅಕ್ಷರ ಸ್ವಲ್ಪ ಸಣ್ಣದಾಗಿವೆ.

354

ಕೆ. ಎ. ೧೫೮/೧	**ಕೈವಲ್ಯಪದ್ಧತಿ**	ಹಾಡು
೧೨" × ೮.೩"	ನಿಜಗುಣಶಿವಯೋಗಿ	ಸು. ೧೫೦೦
೧–೨೭ ಪತ್ರ	೩೪ ಪಂಕ್ತಿ	೩೪ ಅಕ್ಷರ

ಆದಿ: ಶ್ರೀಗಣಾಧಿಪತಯೆನ್ನಮಃ। × × × ನೀಲವೃಷಭರೂಢನಾದಾ। ಶ್ರೀ ನಿಜ ಗುಣಶಿವಯೋಗಿ ವಿರಚಿತವಾದ ಕೈವಲ್ಯಪದ್ಧತಿಯಂಬಾ ಸ್ವರವಚನಂಗಳೂ ॥ ರಾಗಾ ॥ ನಾದರಾಮಕ್ರೀ ॥ ಚೌಪಾಧಿವರ್ನ ॥

ಶ್ರೀಗುರು ವಚನೋಪದೇಶವನಾಲಿಸಿ
ದಾಗಳೇಹುದು ನರರಿಗೆ ಮುಕ್ತೀ ॥ ಪ ॥
ದುರಿತ ಕರ್ಮ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತ್ತರೊಡನಾಡು
ಕರುಣಾವಿರಲಿ ಜೀವರೊಳು ನೀತಿವಿದನಾಗೂ
ಪೊರೆಪ್ರೋರ್ದಿಥರನೆಂದ್ದು ಬೆಸಸುವಾ ॥ ೧ ॥

ಅಂತ್ಯ: ॥ ೧೭೨ ॥ ರಾಗಾ ॥ ಸೌರಾಷ್ಟ್ರ ॥ = ॥
ಪ್ರಾರಬ್ಧಕರ್ಮ್ಮವಾಸನೆ। ಯೊಂದೆ ನಾಲ್ಕು ಪ್ರಕಾರವಾಗಿಹುದು। ಜೀವಂನ್
ಮುಕ್ತರಾ ॥ ಪ ॥ × × × ×
ಯಿಂತು ಕರ್ಮ್ಮದ ಭೇದವೆಂತು ಫಲಿಸುತ್ತಿಹು
ದಂತ್ತೆ ಗ್ನಾನಿಗಳಿರೆ ಪರಿವಂದದಿ

ಸಂತಸದೊಳು ಶಂಭೂಲ್ಲಿಂಗವಾಗಿಹ ಮೋಕ್ಷ
ವಂತ್ತವರಿಗೆ ಸಮಾನವೆಯುಹುದೂ ॥ ೫ ॥ ಶ್ರೀ
ಯಿತಿ ಜೀವಂನ್‌ಮುಕ್ತಿ ಪ್ರಕರಣಂ ॥ ಯಿಂತ್ತು ಶ್ರೀ ನಿಜಗುಣಶಿವಯೋಗಿ
ವಿರಚಿತಮಾದ ಕೈವಲ್ಯಪದ್ಧತಿಯೆಂಬ ಪ್ರಕರಣದಲ್ಲಿ ಗ್ನಾನಪಾದ ಪ್ರತಿಪಾದನ
ಸ್ಥಲಕ್ಕೆ ಸೇರಿದ ವಚನಂಗಳು ಜೊತೆ ೫೮ ॥ ಅಂತು ಜೊತೆ ೧೭೩ಕ್ಕಂ ಮಂಗಳ
ಮಹಾ ಶ್ರೀ ವಚನ ೨೨೦ ವಚನ ೨೦೦ ಶ್ರೀ ಶ್ರೀ (ಮುಂದೆ ಇರುವ ಸಂಖ್ಯಾ
ರಹಿತವಾದ ಎರಡು ಪತ್ರಗಳಲ್ಲಿ)

ರಾಗ ॥ ಸಾಕು ಲಉಕಿಕ ಜನಸಂಗಾಚಿತ್ತ
ವ್ಯಾಕುಲವದು ಲೋಕದೊಳು ಮಾನಭಂಗಾ ।
ಜ್ಯೋತಿ ಬೆಳಗುತಿದೇ ವಿಮಲಪರಂ
ಜ್ಯೋತಿ ಬೆಳಗುತಿದೆ
ಮಾತು ಮನಂಗಳಿಂದತ್ತತ್ತಲಾದ ವಿಮಲ ಪರಂ
ಜ್ಯೋತಿ ಬೆಳಗುತ್ತೀದೆ ॥ ಪ ॥ × × ×
ಪ್ರಣಮುವಕಾರದಿಂ ಗುಣ ಮೂರು ಮುಟ್ಟದೇ
ಗಣನೆಗತ್ತಿತಗಳನೆ ತೋರುತಾ
ಅಣಿಮುಯ್ಯೋಚನೆಗಳಿಲದ ಮೋಕ್ಷ ಚಿಂತಾ
ಮಣಿಯೆನಿಸುವ ಶಂಭುಲಿಂಗವೆ ತಾನಾಗಿ ಜ್ಯೋತಿ ಬ್ಯೆಳಗುತಿದೇ ॥ ૩ ॥

ವಿಷಯ : ವೀರಶೈವ ತತ್ವಬೋಧೆ.

ವಿಶೇಷ : ಗ್ರಂಥದ ಆದಿಯಲ್ಲಿ ಚಿತ್ರಗಳಿರುವ ಎರಡು ಪ್ರತ್ಯೇಕ ಪತ್ರಗಳಿವೆ. ಸಮಗ್ರವಾಗಿದೆ. ಒಟ್ಟು ಐದು ಸ್ಥಳಗಳಾಗಿ ಈ ಗ್ರಂಥವು ೧೭೩ ಸ್ವರ ವಚನಂಗಳು ಅಲ್ಲದೆ ಮತ್ತೆ ೩ ಮಂಗಳಗಳನ್ನೂ ಉಳ್ಳುದಾಗಿದೆ. ಇದೇ ಕಟ್ಟಿನಲ್ಲಿ ಕೈವಲ್ಯ ಪದ್ಧತಿ ವ್ಯಾಖ್ಯಾನ, (ಸಂಸ್ಕೃತ), ಧಾತುಪಾಠ (ಸಂಸ್ಕೃತ) ಇಷ್ಟಲಿಂಗ ಲಿಂಗ ಜಪಗಳಿವೆ.

355

ಕೆ. ಬಿ. ೩೮೨	**ಕೈವಲ್ಯ ಪದ್ಧತಿ**	ಹಾಡು
೯″×೬.೬″	ನಿಜಗುಣಶಿವಯೋಗಿ	ಸು. ೧೫೦೦
೨–೮೨ ಪತ್ರ	೧೬ ಪಂಕ್ತಿ	೧೮ ಅಕ್ಷರ

ಆದಿ : ....ನದಿಗಳಗೂಡಿದನೆ ಮಹಾ....ತ್ರಂಗಳೇಳು ಕೋಟಿ....ರ್ಥನೆ ॥೨ ॥ ಯೇಳು ಸುನಿಯಾಮುದಿಂ'....ಳು .... ಭುಜಗನೇಳುತೋರುವ ಪ್ರಣವದೇಳು ಭೇದ.... ನೂ।ಕಂಡೇಳು ಸುಜ್ಞಾನ ಭೂಮಿಗೆ ಶಿದ್ಧಿಯಾಗಿ....ನೇಳು ತತ್ವದ ತನುವನೂ।

ಯೇಳು ಜಲ್ಮದ ಕಲುಷವನು ಜಯಿಸಿ ಯೋಗಿವರಂ ಯೇಳುತಾಗ್ರದೊಳು ಕೀಳುವ ಸುನಾದಾತ್ಮ ಯೇಳು ಮಲಪಾಶ ದೂರನೇ ಶಂಭುಲಿಂಗ ನೀನೇಳು ಮುನಿಕುಲವಂದ್ಯನೇ ಶಿವನೆ॥ ೩ ॥

ಅಂತ್ಯ : ಯಿಂತು ಕರ್ಮದ ಭೇದವೆಂತು ಫಲಿಸುತಿಹುದಂತೆ ಸುಜ್ಞಾನಿಗಳಿರೆ ಫಲರಂದದಿ ಸಂತಸದೊಳು ಶಂಭುಲಿಂಗವಾಗಿಹ ಮೋಕ್ಷವಂತರಿಗೆ ಸಮಾನವೆಯಹುದು ॥ ೫ ॥ ೫೯ ॥ × × × ಯೋಗ ಪ್ರತಿಪಾದನ ಸ್ಥಳಕ್ಕೆ ಸೇರಿದ ವಚನಂಗಳು ಜೋಡು ೪೯ ಪದ ೧೪೯ ಜ್ಞಾನ ಪ್ರತಿಪಾದನ ಸ್ಥಲಕ್ಕೆ ಸೇರಿದ ಜೋಡು ೫೯ ಪದ ೨೨೩ ಅಂತೂ ಸ್ಥಲ ೫ಕ್ಕೆ ವಚನ ೧೭೪ ಜೋಡು ಪದ ೬೪೮ ಕಾಂ ಮಂಗಳ ಮಹಾಶ್ರೀ.

ವಿಷಯ : ವೀರಶೈವತತ್ತ್ವಬೋಧೆ.

ವಿಶೇಷ : ಕೊನೆಯಲ್ಲಿ ವಚನಪದಗಳ ಸಂಖ್ಯೆಯನ್ನು ಈ ರೀತಿ ಕೊಡಲಾಗಿದೆ : "ಕ್ರಿಯಾಪ್ರತಿಪಾದನ ಸ್ಥಳಕ್ಕೆ ವಚನಂಗಳ ಜೋಡು ೨೮ ಪದ ೧೦೬, ಜೀವಸಂಬೋಧನ ಸ್ಥಳಕ್ಕೆ ವಚನಂಗಳ ಜೋಡು ೨೨ ಪದಾ ೭೨, ನೀತಿಕ್ರಿಯಾಚಾರ್ಯ ಪ್ರತಿಪಾದನ ಸ್ಥಳಕ್ಕೆ ವಚನಂಗಳ ಜೋಡು ೨೬ ಪದಾ ೯೮, ಯೋಗ ಪ್ರತಿಪಾದನ ಸ್ಥಳಕ್ಕೆ ವಚನಂಗಳ ಜೋಡು ೪೯ ಪದಾ ೧೪೯ ಜ್ಞಾನಪ್ರತಿಪಾದನ ಸ್ಥಳಕ್ಕೆ ವಚನಂಗಳ ಜೋಡು ೫೯ ಪದಾ ೨೨೩ ಅಂತು ಸ್ಥಳ ೫ಕ್ಕೆ ವಚನ ೧೭೪ ಜೋಡು ಪದಾ ೬೪೮." ಪುಸ್ತಕ ಹುಳು ತಿಂದು ತುಂಬ ಶಿಥಿಲವಾಗಿದೆ.

356

ಕೆ.ಬಿ. ೩೯೬/೨	**ಕೈವಲ್ಯಪದ್ಧತಿ**	ಹಾಡು
೬.೮" × ೪.೮"	ನಿಜಗುಣಶಿವಯೋಗಿ	ಸು. ೧೫೦೦
೧–೩೯ ಪತ್ರ	೩೨ ಪಂಕ್ತಿ	೨೬ ಅಕ್ಷರ

ಆದಿ : ನಿಜಗುಣ ಶಿವಯೋಗಿ ವಿರಚಿತಮಪ್ಪ ಕೈವಲ್ಯಪದ್ಧತಿಯಂ ಬರೆಯುವದಕ್ಕೆ ಶುಭಮಸ್ತು। ರಾಗ। ನಾದನಾಮ ಕ್ರಿಯಾ । ಚೌಪದಿವರ್ಣ।

ಶ್ರೀ ಗುರುವಚನೋಪದೇಶವನಾಲಿಶಿ
ದಾಗಳವುದು ನರರಿಗೆ ಮುಕ್ತಿ॥ ಪ ॥
ದುರಿತ ಕರ್ಮವನೊಲ್ಲದಿರು ಪುಂಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡೂ
ಕರುಣವಿರಲಿ ಜೀವರೊಳು ನೀತಿವಿಧನಾಗು
ಪೊರೆ ಪರ್ದ್ಧಿಥರನೆಂದು ಬೆಸಸೂವ ॥ ೧ ॥

ಅಂತ್ಯ : ಯಿಂತು ಕರ್ಮದ ಭೇದವೆಂತು ಫಲಿಸುತ್ತಿಹು
ದಂತು ಜ್ಞಾನಿಗಳೆರೆ ಫಲವಂದದೀ
ಸಂತಸಾದೊಳು ಶಂಭುಲಿಂಗವಾಗಿಹ ಮುಕ್ತಿ
ವಂತವರಿಗೆ ಸಮಾನವೇಯುಹದೂ ‖ ೫ ‖ ೫೬ ‖

ಇಂತು ನಿಜಗುಣಶಿವಯೋಗಿ ವಿರಚಿತವಾದ ಕೈವಲ್ಯ ಪದ್ಧತಿಯಂತಿ ಪ್ರಕರಣದಲ್ಲಿ ಜ್ಞಾನ ಪ್ರತಿಪಾದನಸ್ತಲವೆಂಬಲ್ಲಿಗೆ ಪದನೂ ೧೬೭ಕ್ಕೆ ನುಡಿಗಳು ೬೩೨ಕ್ಕಂ ಸಂಧಿ ೫ಕ್ಕಂ ಸಂಪೂರ್ಣ ಮಂಗಳಂ ‖ ಇಂತು ಶ್ರೀ ಗುರು ಶಂಭುಲಿಂಗದೊಲವಿಂ ನಿಜಗುಣಶಿವಯೋಗಿ ಆಬಾಲವೃದ್ಧರಿಗಾಯಾಸವಿಲ್ಲದಂತೆ ಸಮ್ಯಜ್ಞಾನಿಗಳೊಡಂಬಡೆವಂತ್ತೆ ಸಕಲ ವೇದಾಗಮ ಸ್ಮೃತಿ ಪುರಾಣೇತಿಹಾಸ ಸೂತ್ರಾದಿ ಶಾಸ್ತ್ರಸಂಮತದಿಂ ಪುರಾತನ ಗೀತಾನುಗುಣ್ಯವೆನಿಶಿ ಕೈವಲ್ಯಪದ್ಧತಿಯೆಂಬ ಪೆಸರನಿಟ್ಟು ಮೃದುಮಧುರ ಲಕ್ಷಣ ಸಮೇತವಾದ ಪಂಚಸ್ತಲ ಪರಿವಿಡಿದು ೧೬೭ ವಚನಮೆಂದು ಗಣನೆಮುಳ್ಳ ಸ್ವರವಚನ ಸಂಗ್ರಹಮಂ ಪೇಳ್ದಂ ‖

ವಿಷಯ : ವೀರಶೈವತತ್ತ್ವಬೋಧೆ.

ವಿಶೇಷ : ಇದನ್ನು ದುಂದುಭಿಸಂ ‖ ಶ್ರಾವಣ ಬಹಳ ೨ ರಲ್ಲಿ ಬರೆದಿರುವದಾಗಿ ಕೊನೆಯಲ್ಲಿ ಹೇಳಿದೆ. ಇದೇ ಪುಸ್ತಕದಲ್ಲಿ ಬ್ರಹ್ಮಾಂಡ ಲಕ್ಷಣ, ಗಣಾಷ್ಟಕ (ಸಂ) ಮತ್ತು ಸಂಕ್ಷೇಪ ಭಾರತ ಎಂಬ ಗ್ರಂಥಗಳೂ ಇವೆ. ಕೊನೆಯಲ್ಲಿ ಸಂವತ್ಸರ ಮಾಸಾದಿ ಗಣನೆಯೂ, ಶ್ರೀ ರಂಜನಿರೂಪಕವೆಂಬ ಪದವೂ ಇವೆ.

357

ಕೆ.ಎ. ೧೫೮/೨	ಕೈವಲ್ಯಪದ್ಧತಿ ವ್ಯಾಖ್ಯಾನ	ಗದ್ಯ, ಪದ್ಯ
೧೨.೮" × ೮.೩"	ನೀಲವೃಷಭ	?
೨೫–೩೫೫ ಪತ್ರ	೩೪ ಪಂಕ್ತಿ	೩೪ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ‖ ಗದ್ಯ ಪದ್ಯ ‖ ಯಿಂತು ಶಂಭುಲಿಂಗದೊಲವಿನಿಂ । ನಿಜಗುಣ ಶಿವಯೋಗಿ ಆಬಾಲವೃದ್ಧರಿಗಾಯಾಸವಿನಿತಿಲ್ಲದಂತೆ ಸೌಮ್ಯಜ್ಞಾನಿಗಳೊಡಂಬಡುವಂತೆ ಸಕಲ ವೇದ ವೇದಾಂತಾಗಮಶ್ರುತಿ ಪೌರಾಣೇತಿಹಾಸ ಸೂತ್ರಾರ್ಥದಿಂ ಶಾಸ್ತ್ರಸಂನ್ಮತದಿಂ ಪೂರಾತನರ್ನಿಶಮಗುಂಣ್ಯವ್ಯೆನಿಸಿ ಕೈವಲ್ಯ ಪದ್ಧತಿಯೆಂಬ ಪೆಸರನಿಟ್ಟು ಮೃದು ಮಧುರ ಸಲಕ್ಷಣ ಸಮೇತವ್ಮಾದ ಪಂಚಸ್ಥಲಪರಿವಿಡಿದು ಶೇರಿದ ಜೋಡು ವಚನ ೧೭೩ಕಂ ಗಣನೆಯನುಳ್ಳ ಸ್ವರವಚನ ಸಂಗ್ರಹವಂ ಪೇಳ್ದ ನೀತಿಶಾಸ್ತ್ರ ಸ್ವರವಚನ ‖

ಶ್ರೀ ಗುರುಬಸವಲಿಂಗಾಯ ನಮಃ ॥ ಶ್ರೀ ಸದ್ಗುರು ನಿಜಗುಣಶಿವಯೋಗಿ ವಿರಚಿತವಮ್ಮಾದ ಕೈವಾಲ್ಯ ಪದ್ಧತಿಯೆಂಬ ಶಿವಕಾರುಂಣ್ಯ ಪ್ರಾರ್ಥಸ್ಥಲಾಶ್ವರ ವಚನಂಗಳು ॥ ಶ್ರೀ ಗುರು ಚಂನ ಸದಾಶಿವ ಯೋಗೀಶ್ವರನೆಂಬ ಆಚಾರ್ಯ್ಯ ನಂನ್ನು ಸ್ಮರಿಸಿ ಧರಿಸಿದಂತ್ತ ಶ್ರೀ ನಿಜಗುಣಶಿವಯೋಗೀ ನೀಲವೃಷಭನೆಂಬ ನಿಜಶಿಷ್ಯಂಗೊರವಾಗೀ ಪಾಲಿಸಿದ ಪರಮಾನಂದ ಯೋಗಿ ಜಗದ್ಗುರುವಾಗಿ ಯಲೆ ಮಗನೆ ಕೈವಾಲ್ಯ ಪದ್ಧತಿಯೆಂಬ ವಾಕಕ್ಕೆ, ನೀನು ವ್ಯಾಕ್ಯಾನವ ಮಾಡುಯೆಂದು ಅನುಗ್ರಹಿಸಲು ॥

ಅಂತ್ಯ : ಅಖಂಡ ಸ್ವರೂಪವನ್ನುಳ್ಳ ಸುಜ್ಞಾನವೆ ಶಿವಯೋಗೀಶ್ವರನೆಂದು ಗ್ನಾನಸಖಿ ಯಳ ಕೂಡೆ ಮುಕ್ತ್ಯಂಗನೆಯು ಪೇಳಿದಳೂ ಯೀ ಅನುವಂ ತಿಳಿದು ಶಿದೋದಕ ವೆಂಬ ನಿರ್ಮ್ಮ ಗ್ನಾನ ಸ್ವರೂಪವಾದ ಶಂಭೂಲ್ಲಿಂಗವಂನ್ನೆ ನಂಬಿ ಪರಮಾನಂದ ಸ್ವರೂಪವನುಳ್ಳ ಶಿವಯೋಗಿ ನೀನೆಂಬುದರ್ಥಾಃ ॥ ವಚನಾ ೧೨೧ ॥

ವಿಷಯ : ಕೈವಲ್ಯಪದ್ಧತಿಯ ವ್ಯಾಖ್ಯಾನ.

ವಿಶೇಷ : ೨೬ ರ ಹಿಂದಿನ ಪತ್ರಕ್ಕೆ ಕ್ರಮಸಂಖ್ಯೆಯಿಲ್ಲ. ಅಸಮಗ್ರ. ಕೈವಲ್ಯ ಪದ್ಧತಿ ಯಲ್ಲಿ ಒಟ್ಟು ಇರುವ ೧೭೩ ಸ್ವರವಚನಗಳಲ್ಲಿ ಕೇವಲ ಆದಿಯಿಂದ ೧೨೦ ಸ್ವರವಚನಗಳ ವರೆಗೆ ಮಾತ್ರ ವ್ಯಾಖ್ಯಾನವಿದ್ದು ಅಪೂರ್ಣವಾಗಿ ನಿಂತಿದೆ. ಇದರ ಜೊತೆಗೆ ಕೈವಲ್ಯ ಪದ್ಧತಿ, ಸಂಸ್ಕೃತ ಧಾತುಪಾಠ (ಸಂಸ್ಕೃತ) ಎಂಬ ಇತರ ಗ್ರಂಥಗಳಿವೆ.

358

ಕೆ. ೫೩೭	**ಕೈವಲ್ಯಸಾರದ ಟೀಕು**	ಶ್ಲೋಕ, ಟೀಕು
೧೯.೪″ × ೨.೧″	ತೋಂಟದ ದೇಶಿಕೇಂದ್ರ	?
೫೪–೧೧೮ ಪತ್ರ	೧೦ ಪಂಕ್ತಿ	೧೦೫ ಅಕ್ಷರ

ಆದಿ: ಶ್ರೀಗುರುಬಸವಲಿಂಗಾಯ ನಮಃ ॥ ಕೈವಲ್ಯಸಾರವ ಬರವುದಕ್ಕೆ ಶುಭಮಸ್ತು ॥

ಯದೇಕಮವ್ಯಕ್ತಮನಂಥಮೀಢ್ಯಂ ವಿಭುಸ್ವಯಂ ನಿಷ್ಕಲಮದ್ವಿತೀಯ್ಯಂ ।
ಗುರುಸ್ವರೂಪೇಣ ಸುಖಪ್ರದಂತಂ ನಿರಂಜನಂ ಲಿಂಗಮಹಂ ನಮಾಮಿ ॥

ಟೀಕೆ ॥ ಏಕಂ = ವೊಂದಾಗಿದ್ದಂಥ । ಅವ್ಯಕ್ತಂ ಕಾಣಲ್ಪಡದಿರ್ದಂಥಾ । ಅನಂತಂ। ಕಡೆಯಿಲ್ಲದೆಯಿದ್ದಂಥಾ । ಯೀಢ್ಯಂ ಸ್ತೋತ್ರಕ್ಕೆ ಪಾತ್ರವಾದಂಥಾ.

ವಿಭು। ವ್ಯಾಪಕವಾಗಿದ್ದರ್ಥಂಥಾ। ನಿಷ್ಕಲಂ। ಕಲಾತೀತವಾಗಿದ್ದರ್ಥಂಥಾ। ಅದ್ವಿತೀಯಂ। ಯರಡನೆಯ ವಸ್ತುವಿಲ್ಲದಿರ್ದಂಥ। ಗುರುಸ್ವರೂಪೇಣ। ಗುರು ಸ್ವರೂಪದಿಂದೆ। ಸುಖಪ್ರದ ಸ:ಖವ ಕೊಡುವಂಥಾ। ಸ್ವಯಂ। ತಾನು। ಯತ್। ಆವದಾನೊಂದು ವಸ್ತುವುಂಟು। ತತ್। ಆವಸ್ತುವಾದ। ನಿರಂಜನ। ನಿರಂಜನನೆನಿಸಿಕೊಂಬಂಥಾ। ಲಿಂಗಂ। ಲಿಂಗವನು। ಅಹಂ। ನಾನು। ನಮಾಮಿ। ನಮಸ್ಕರಿಸಿಹೆನು ॥ ೧ ॥

ಅಂತ್ಯ : ಶೂನ್ಯಂ ಶೂನ್ಯಂ ಪುನಃ ಶೂನ್ಯಂ ತ್ರಿಶೂನ್ಯಂ ಪಶ್ಯತಿ ಕ್ಷಣಾತ್।
ಸರ್ವಶೂನ್ಯಂ ನಿರಾಭಾಸಂ ಸಾಮರಸ್ಯಂ ತದಾಭವೇತ್ ॥

ಟೀ ॥ ಯದಾ। ಆವಾಗ। ಪರಮಾತ್ಮ। ವಸ್ತುವನು। ಶೂನ್ಯಂ। ಉತ್ಪತ್ತಿಶೂನ್ಯವಾದುದನಾಗಿ। ಶೂನ್ಯಂ। ಸ್ಥಿತಿಶೂನ್ಯವಾದುದನಾಗಿ। ಪುನಃ। ಮರಳಿ। ಶೂನ್ಯಂ। ಲಯಶೂನ್ಯವಾದುದನಾಗಿ। ಯು। ತ್ರಿಶೂನ್ಯಂ। ಭೂತ ಭವಿಷ್ಯದ್ವರ್ತಮಾನವೆಂಬ ಕಾಲ ಮೂರರಿಂದವು। ಶೂನ್ಯವಾದುದನಾಗಿ। ಕ್ಷಣಾತ್। ಕ್ಷಣಮಾತ್ರದಿಂದ। ಪಶ್ಯತಿ। ಕಾಣುತ್ತಿಹನು। ತದಾ। ಆವ ಕಾಲ ದಲ್ಲಿ। ಸರ್ವಶೂನ್ಯಂ। ಸರ್ವಶೂನ್ಯವಾಗಿವುಳ್ಳುದಾಗಿ। ನಿರಾಭಾಸಂ। ಬೇರಾಗಿ ತೊಪ್ಪುದಿಲ್ಲಹಣವು। ಸಾಮರಸ್ಯಂ। ಸಮರಸತ್ವವು। ಭವೇತ್। ಅಹುದು ॥
ತೋಂಟದಾರ್ಯ್ಯೇಣ ರಚಿತಮೇಕೋತ್ತರ ಶತಸ್ಥಲಂ।
ಕೈವಲ್ಯಸಾರ ಪಠನಾತ್ಸದ್ಯ ಏವವಿಮುಕ್ತಿಭಾಕ್ ॥

ಇತಿ ಶ್ರೀಮತ್ಪರಮಶಿವಯೋಗಿದಾಟ್ಪರಿವ್ರಾಜಕಾಚಾರ್ಯ್ಯ ಶ್ರೀ ತೋಂಟ ದಾರ್ಯ ವಿರಚಿತಾ। ಪರಮ ವೀರಶೈವಾದ್ವೈತ ಬೋಧಿನ್ಯಾಮೇಕೋತ್ತರ ಶತಸ್ಥಲ ಶೃತಿಮಾಲಾ ವಿವರಣಾಖ್ಯ ಕೈವಲ್ಯಸಾರೇ ಲಿಂಗಸ್ಥಲ ನಿರೂಪಣೇ ಮಹಾಲಿಂಗಸ್ಥಲ ಷಟ್ಕ ಪ್ರಕರಣಃ। ಅಂಗಸ್ಥಲ ೬ ಲಿಂಗಸ್ಥಲವಾಱು ಸಹ ದ್ವಾದಶ ಪ್ರಕರಣಂ ಸಂಪೂರ್ನಂ ಮಂಗಳಮಸ್ತು ಶುಭಮಸ್ತು ವಿಘ್ನರಹಿತ ಮಸ್ತು ಶ್ರೀ ಶ್ರೀ ಶ್ರೀ ಗುರುಬಸವಲಿಂಗಾಯ ನಮಃ ॥

ವಿಷಯ : ನೂರೊಂದು ಸ್ಥಲದಲ್ಲುದಿತವಾದ ಶಿವಾದ್ವೈತ ಸಿದ್ಧಾಂತ ವಿವರಣೆ.

ವಿಶೇಷ : ಶಕಟರೇಫದ ಪ್ರಯೋಗವಿದೆ. ೬೨, ೯೩, ೧೧೬ ಈ ಪತ್ರಗಳು ಲುಪ್ತ ವಾಗಿವೆ. ೯೧ನೆಯ ಪತ್ರ ಮುರಿದಿದೆ.

359

ಕೆ. ೪೧೭/೨ ಕೈವಲ್ಯೋಪನಿಷತ್ತಿನ ಟೀಕು ಟೀಕು
೧೭" × ೧.೬" ? ?
೩೨–೩೯ ಪತ್ರ ೭ ಪಂಕ್ತಿ ೭೦ ಅಕ್ಷರ

ಆದಿ : ....ತತ್ವಂ ಪರಂಸಾಕ್ಷಾತ್ ಶಿವರುದ್ರಾದಿಸಂಜ್ಞಿತಂ।
ತದವಸ್ಯಂ ಮಹಾಯಾಸಾದ್ವೇದಿತವ್ಯಂ ಮನೀಷಿಭಿಃ॥

ಯೀ ಪೂರ್ವೋಕ್ತ ಪ್ರಕಾರದಿಂದ ಅಥರ್ವಣ ಮುಂಡಕೋಪನಿಷತ್ತಿಗೆ ಜೀವ....ಪ್ರತಿಪಾದಿಸಲಿಚ್ಛೆಯಿಂದ ಪೂರ್ವಾಧ್ಯಾಯದಲ್ಲಿ ಆ ವುಪನಿಷದರ್ಥ ವಂನ್ನು ಸಂಗ್ರಹಿಸಿ ಅನಂತರದಲ್ಲಿ ಈ ಅಧ್ಯಾಯದಲ್ಲಿ ಕೈವಲ್ಯೋಪನಿಷತ್ತಿಗೂ ಜೀವ ಬ್ರಹ್ಮೈಕ್ಯ ಪರತ್ವವನು ಪ್ರತಿಪಾದಿಸ.... ಉಳವನಾಗಿ ಆವುಪನಿಷತ್ತನು ಸಂಗ್ರಹಿಸುತಲಿಧಾನೆ।

ಅಂತ್ಯ : ಪರಮಾರ್ಥಿಕವಾಗಿ ಯೀಶ್ವರನಿಗೆ ಶೋಕಮೋಹಾದಿಗಳಿಲ್ಲವೆಂದು ತಾತ್ಪರ್ಯ। ....ವನಾಗಿ ಸ್ವಾಸ್ವಾತಂತ್ರ್ಯ ಬಲೇನತು ಸ್ವಜನ್ಯಕಾರ್ಯದಲ್ಲಿ ಸ್ವಾತಿರಿಕ್ತ ಕಾರಣಾಂತರಾಪೇಕ್ಷೆಯಿಲ್ಲದ ಸ್ವರೂಪವಾದ ಸ್ವಕೀಯವಾದ ಸ್ವಾತಂತ್ರ್ಯವೆಂಬ ಸಾಮರ್ಥ್ಯದಿಂದ ಯಿದಂ ಶರೀರಂ ಈ ಶರೀರವ........

ವಿಷಯ : ವೇದಾಂತ ತತ್ತ್ವಬೋಧೆ.

ವಿಶೇಷ : ಅತ್ಯಂತ ಶಿಥಿಲ ಮತ್ತು ಅಸಮಗ್ರ ಪ್ರತಿ. ಇದರೊಂದಿಗೆ ಬ್ರಹ್ಮಗೀತೆಯ ಟೀಕೂ ಇದೆ.

360

ಕೆ. ೬೦೩ ಕೈಶಿಕದ್ವಾದಶೀ ಮಾಹಾತ್ಮ್ಯದ ಕನ್ನಡ ಟೀಕು ಶ್ಲೋಕ, ಟೀಕು
೧೩.೭"× ೨" ? ?
೧–೧೨ ಪತ್ರ ■ ಪಂಕ್ತಿ ೫೬ ಅಕ್ಷರ

ಆದಿ : ಶ್ರೀ ಶೈಲಾರ್ಯಗುರುವೇ ನಮಃ। × × ×

ಪೂರ್ವಾಧ್ಯಾಯದಲ್ಲಿ ಶ್ರೀಮನ್ಮಹಾವರಾಹಸ್ವಾಮಿಯವರನ್ನು ಭೂಮಿದೇವಿ ಯರು ಕೇಳಲಾಗಿ ದೀಪಾರಾಧನೆ ರಂಗವಲ್ಲಿಸೇವೆ ಮುಂತಾದವರ ಭಗ ವತ್ಕೈಂಕರ್ಯ ಮಹಾತ್ಮ್ಯವಂನು ಬುದ್ಧಿಗಲಿಶಿದ ಅನಂತರದಲ್ಲಿ ಸಕಲ ಪ್ರಾಣಿ

ಗಳಿಗೂ ಸುಲಭದಲ್ಲಿ ಮೋಕ್ಷೋಪಾಯ ಸಾಧನವಾಗುವ ಸೂಕ್ಷ್ಮೋಪಾಯ ವೇನೆಂದು ಪ್ರಾರ್ಥಿಸಿ ಕೇಳುತ ಯಿಧಾರೆ ॥ ೧ ॥

ಅಂತ್ಯ : ಯಿಹ ಲೋಕದಲ್ಲಿ ಯಿಷ್ಟಾರ್ಥಗಳಂ ಪಡೆದು ಶ್ರೀ ವಿಷ್ಣುಲೋಕವಾದ ವೈಕುಂಠವಂ ಪಡೆಯುವರೂ ಯೆಂದು ಶ್ರೀ ವರಾಹಸ್ವಾಮಿಯವರೂ ತಂಮ್ಮ ಪ್ರಾಣಕಾಂತೆಯಾದ ಭೂಮಿದೇವಿಯವರಿಗೆ ನಿರೂಪಿಸಿದ ಅಧ್ಯಾಯಾರ್ಥ ಯಿತಿ ಶ್ರೀಮದ್ವರಾಹ ಪುರಾಣೇ ಶ್ರೀ ವರಾಹಭೂಮಿ ಸಂವಾದೇ ಸಪ್ತ ಮೋಧ್ಯಾಯಃ × × ×

ಸರ್ವೇಷು ಸುಖಿನ ಸಂತು ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ಪಾಪಮಾಪ್ನುಯಾತ್ ॥

ಸ್ವಸ್ತಿಪ್ರಜಾಭ್ಯಃ ॥

ವಿಷಯ : ಕೈಶಿಕದ್ವಾದಶಿಯ ಮಾಹಾತ್ಮ್ಯೆ.

ವಿಶೇಷ : ಪ್ರತಿ ಚೆನ್ನಾಗಿದೆ. ಈ ಗ್ರಂಥಕ್ಕೆ ಕೈಶಿಕ ದ್ವಾದಶೀ ಮಾಹಾತ್ಮ್ಯವೆಂದು ಹೆಸರು. ಮೂಲದಲ್ಲಿ ಕೈಶಿಕವೆಂದು ಎಲ್ಲಿಯೂ ಕಂಡುಬರುವುದಿಲ್ಲ. ಕೌಶಿಕ ರಾಗದ ಹೆಸರು ಮಾತ್ರ ಕಂಡುಬರುತ್ತದೆ. ಟೀಕೆಯಲ್ಲಿ ಮಾತ್ರ ಕೈಶಿಕ ದ್ವಾದಶೀ ಮಾಹಾತ್ಮ್ಯೆಯೆಂದೂ, ಕೈಶಿಕಪುರಾಣದಲ್ಲಿ ಗಾನವ್ರತ ಮಾಹಾತ್ಮ್ಯೆ ಎಂದೂ ಉಲ್ಲೇಖಿಸಿದೆ. ಇದು ವರಾಹಪುರಾಣದಲ್ಲಿ ವರಾಹಭೂಮಿ ಸಂವಾದ ವೆಂದು ಉಕ್ತವಾಗಿದೆ.

361

ಕೆ. ಎ. ೨೫೬/೨	**ಕೊರವಂಜಿ ಕಥೆ**	ಯಕ್ಷಗಾನ
೧೨.೮"×೮"	?	ಸು. ೧೭೦೦
೧–೨೦ ಪತ್ರ	೧೦ ಪಂಕ್ತಿ	೧೮ ಅಕ್ಷರ

ಆದಿ : ....ಪ್ಪುವ ವೀಳ್ಯವು ಮುಂಜುಳಿಯ
ಸರ ಹವಳ ಪಚ್ಚೆಸರ ಮುತ್ತು
ಕೊರಳೊಳು ಹೊಳೆಯುತಾಲಾದಾಳೆ ಕೊರವಿ ॥ ೮ ॥
ಅಂಜನವನೆಚ್ಚಿ ಅರಳುಗಂಣಿಗೆ, ಅತಿಹರುಷದಿಂದ ಬೇಗದೀ
ಕಂಜೋದ್ಭತ್ರಿಂಗರಿಸಿ ಬೆಳಗುವಾ ಕಂನಡಿಯೆನೀಕ್ಷಿಸಿದಳೆ ವನಿತೆ ಕೊರವಿ
॥ ೯ ॥

ವಚನಾ ॥ ಆಹೊ ಬ್ರಂಹ್ಮದೇವರು ಕೊರವಂಜಿವೇಸಮಂ ಧರಿಸಿ । ಸತ್ಯಲೋಕ ದಿಂ ಪೊರವಟ್ಟು ಮಧುರಾಪುರಕ್ಕೆ ಬರುತಿರ್ದ್ದಳದೆಂತೆನೆ ॥ ೧೦ ॥

ಯಕ್ಕತಾಳ ॥ ಮುತ್ತು ಮಾಣಿಕ ಹೊನ್ನಗೂಡೆಯಾ ಪಿಡಿದು ತಂ
ನುತ್ತಮ ಸಿಸುವನ್ನು ಬೆಂನಲ್ಲಿ ಕಟ್ಟಿ
ಚಿತ್ತದೊಳಗೆ ನರಹರಿಯ ಧ್ಯಾನಿಸುತಾ
ಸತ್ಯಲೋಕಾದಿಂದಾ ಯಿಳಿದಾಳೆ ಕೊರವಿ ॥ ೧೧ ॥

ಅಂತ್ಯ : ವಚನ ॥ ಉಂಡುಟ್ಟ ಕಂಡ ಕನಸು ಮೊದಲಾದ ವಿವರೆಗಳನ್ನು ಹೇಳೇನು ಕೇಳಂಮಯ್ಯ ॥ ಕೇಳೇನು ಹೇಳು ಕೊರವಂಜಿ ॥
ಜಂಪೆ ॥ ಕಣಿಪೇಳೆ ಕಣಿಪೇಳೆ ಕಣಿಪೇಳೆ ಕೊರವಿ ಗುಣ
ಗಾಣದೊಳಗೆ ನಿನಗೆಣೆಗಾಣೆ—ಮುಂದೆ ಗ್ರಂಥವಿಲ್ಲಾ—

ವಿಷಯ : ಚತುರ್ಮುಖಬ್ರಹ್ಮನು ಕೊರವಂಜಿ ವೇಷದಿಂದ ಬಂದು ದೇವಕಿಗೆ ಭವಿಷ್ಯತ್ಕೃಷ್ಣಾವತಾರದ ಕಥೆಯನ್ನು ತಿಳಿಸುವುದು.

ವಿಶೇಷ : ಪ್ರತಿಮಾಡಿದ ಕಾಲ ೭–೧–೧೯೨೯. ಪ್ರತಿಕಾರರು ಬಿ. ರಾಮಸ್ವಾಮಿ ಶಾಸ್ತ್ರಿಗಳವರು. ಕೃತಿಯ ಆದ್ಯಂತ್ಯಗಳಲ್ಲಿ ಗ್ರಂಥ ಲುಪ್ತವಾಗಿದೆ. ಪತ್ರದ ಒಂದೇ ಪಾರ್ಶ್ವದಲ್ಲಿ ಗ್ರಂಥವನ್ನು ಬರೆದಿದೆ. ಇದೇ ಪುಸ್ತಕದಲ್ಲಿ ಧನ್ಯಕುಮಾರ ಚರಿತ್ರೆ ಎಂಬ ಮತ್ತೊಂದು ಕೃತಿ ಇದೆ.

362

ಕೆ. ಎ. ೨೬೬ **ಕೊಲ್ಲಾಪುರದ ಸಾಮುಂತರಾಜ ಚರಿತೆ**		ಭಾಮಿನೀಷಟ್ಪದಿ
೧೩" × ೮"	?	?
೧–೧೫೩ ಪುಟ	೨೦ ಪಂಕ್ತಿ	೧೪ ಅಕ್ಷರ

ಆದಿ : ಶ್ರೀ ವೀತರಾಗಾಯ ನಮಃ ॥ ಕೊಲ್ಲಾಪುರದ ಸಾಮುಂತರಾಜ ಚರಿತಂ ॥
ಭೂನುತನು ಭವ್ಯಂಬುಜಾಕರ
ಭಾನುವೆನಿಸಿದ ನಿಂಬನುಸಿರಿದ
ನಾ ನರೇಶನ ಸಭೆಗೆ ಸುವ್ರತಜಾತ ಕೌತುಕಮಂ ॥ ಪಲ್ಲವಿ ॥
ಶ್ರೀ ಮದೋನ್ನತೆ ಮುಕ್ತಿ ಸತಿಗತಿ
ಪ್ರೇಮ ಸುರನರ ಕಿನ್ನರೋರಗ
ಸ್ತೋಮ ಮಣಿಯ ಮಕುಟ ತಾಡಿತ ಚರಣನಖಕಿರಣ

ಕಾಮ ಮದಗಜ ಮದವಿದಾರಣ
ಕೋಮಲ ಸುಬೋಧೋದಯಾಂಬುಧಿ
ಸ್ವಾಮಿ ಪಾರ್ಶ್ವಜಿನೇಶನೆಮಗೊಲದೀಗೆ ಸುಖಪದಮುವ್ ॥ ೧ ॥

ಅಂತ್ಯ : ಇಂತು ಧರ್ಮವ ಮಾಡುವರು ಸಂ
ತತಂ ಸುಖದಿಂದಿಹರು ಭಯ ಸಿರಿ
ವಂತರಾಗಿಹರನವರತ ಮತ್ತಾವ ಕಾಲದೊಳು
ಕಂತುಹರ ಜಿನವಚನವನು ಕೇ
ಳ್ದಂತೆ ನಂಬಿದ ಭವ್ಯಜನರಿಗ
ನಂತ ಸುಖಪದವೀವ ಪಾರ್ಶ್ವಜಿನೇಶನನವರತ ॥ ೫೦೮ ॥
ಸಾವಂತನ ಚರತಗೆ ಮಂಗಳಮಾಹ ॥

ವಿಷಯ : ಕೊಲ್ಲಾಪುರದ ಸಾಮಂತರಾಜರ ರಾಜ್ಯಭಾರ ವಿಚಾರ.

ವಿಶೇಷ : ಪ್ರತಿ ಚೆನ್ನಾಗಿದೆ. ಇದರಲ್ಲಿ ೫೦೮ ಪದ್ಯಗಳಿವೆ. ಕವಿಯ ಕಾಲದೇಶಾದಿಗಳು ಹೇಳಿಲ್ಲ. ಕವಿಯ ಹೆಸರು ಮಾತ್ರ ೫೦೨ ನೆಯ ಪದ್ಯದಲ್ಲಿ “ ಸತ್ಕವಿತಾನೆನಿಪ ಪಾರಿಸ್ವರ ಚಿತ್ತಸಾವಂತ ಚರಿತೆಯನೂ ” ಎಂದೂ ೫೦೪ ನೆಯ ಪದ್ಯದಲ್ಲಿ “ ಸೇವಕನುಗು ಚರಣಿತ ಭಾವ ಸತ್ಕವಿಪಾಲ ವಿರಚಿತನೀ ವಸುಧೆಗಚ್ಚರಿಯುವೆನೆ ಸಾವಂತಚರಿತೆಯನೂ ” ಎಂದಿರುವುದರಿಂದ ಕವಿಯ ಹೆಸರು ಇಂತಹುದೆಂದು ನಿಶ್ಚಯಿಸಲು ಆಧಾರ ಸಾಲದಾಗಿದೆ.

363

ಕೆ. ೪೭೯	**ಕೊಲ್ಲೀಪಾಕಿ ಮಾಹಾತ್ಮ್ಯೆ**	ಯಕ್ಷಗಾನ
೧೬.೩"×೧.೪"	ಗುರುಮುದ್ದುಸಂಗಮದೇವ	ಸು. ೧೭೦೦
೧–೧೫೪ ಪತ್ರ	೬ ಪಂಕ್ತಿ	೭೨ ಅಕ್ಷರ

ಆದಿ : ಶ್ರೀ × × ಓಂ ಪರಮಮುಕ್ತ್ಯೈಶ್ವರ್ಯ ವೀರಶೈವಾಚಾರ ಸ್ಥಲದ ಪುರಣವೆಂಬ ಕೊಲ್ಲಿಪಾಕಿ ಮಾಹಾತ್ಮೆಯಂ ಬರವುದಕ್ಕೆ ಶುಭಮಸ್ತು ॥ ವೃತ್ತ ಪದ್ಯ॥
ಜಯಜಯ ಶಾಂಭವೀಶ ರಜತಾದ್ರಿನಿವಾಸ ಭುಜಂಗಭೂಷಣಾ
ಜಯಜಯ ಗಂಗತರಂಗ ಜಟಾಧರ ಚೆಂದ್ರಶೇಖರಾ
ಜಯಜಯ ಮಾಯಾಭಂಗ ಭಸ್ಮಾಂಗ ಪರಾತ್ಪರ ಚಾಲವಿಗ್ರಹಾ
ಜಯಜಯ ದೇವದೇವ ಸದ್ದೈವ ಜಯಾ ತ್ರಿಶೂಲಪುರಾಧಿಪಾ ॥ ೧ ॥
× × × ×

ಕಂದ ॥ ಯಿಾತೆರದಿಂ ಶಿವನರ್ಚಿಸಿ
ಭೂತಲದಿಂ ಪ್ರಮುಥರುದ್ರಗಣಾವಳಿಗಂ
ಅತಿಶಯದಿಂ ಸ್ತುತಿಯೊನರಿಶಿ
ಶಿತಿಕಂಠನ ತೋರ್ಪ ಪುಂಣ್ಯಚರಿತ್ರೆಯ ರಚಿಪೆಂ ॥ ೭ ॥

× × × ×

ಕಂದ ॥ ನೀ ಹ್ಯಾಗೆ ಯಂನ ಮನದೊಳೂ
ವೂಹಾವಮಾಡಿಯಿಾಗ ನುಡಿಸುವ ತೆರದಿಂ
ನಾ ಹ್ಯಾಗೆ ನುಡಿದು ಭಕ್ತಿಯ
ಸಾಹಸದಿ ಪೇಳ್ವೆ ಕೊಲ್ಲಿಪಾಕಿಮಾಹಾತ್ಮೆ ॥ ೧೦ ॥

× × × ×

ವ ॥ ಯಿಾ ಪ್ರಕಾರದಿಂ ಶ್ರೀಮಹಾಕೊಲ್ಲಿಪಾಕಿ ಮಾಹಾತ್ಮೆ ಪ್ರಥಮ ಪ್ರಾರಂಭದಲ್ಲಿ ಶ್ರೀ ತ್ರಿಶೂಲ ಪುರವರಾಧೀಶ್ವರನಾದಂಥಾ ಶ್ರೀ ಶಂಭುಮೂರ್ತಿಯನ ಸ್ತೋತ್ರನಮಸ್ಕಾರಂಗಳಿಗೆ ಆರಾಧಿಶಿ ಮುಂದಿನ ವಿವರಮಂ ಪೇಳ್ವೆನದೆಂತೆನೇ ॥ ೧೨ ॥

ಅಂತ್ಯ : ಅನಘರು ಪಂಡಿತಾರಾಧ್ಯರು ಕೇಳಿ ಅತ್ಯಂತಾ ಸಂತೋಷವಾರ್ಧಿಲೋಲಾಡಿ ಸತ್ಯಶರಣರುಂಟುಲ್ಲ ಸಾಂಬಲೋಕಕ್ಕೆ ಚಿತ್ತೈಶಿದರು | ಯಿಂನು ಕಲಿ ಬಹಳ ಹೆಚ್ಚಿ ಮರ್ತ್ಯಕ್ಕೆ ಬರುವ ಸವಿಾಪವಾಯಿತು | ಮೇಧಿನಿಯೊಳಗೆ ನಾವಿರಲಾಗದಿಂನ್ನು ಯೆಂದೆನುತ ತಂಮ್ಮ ಲಿಂಗಯ್ಯನವರೊಳಗೆ ಬೆರದು ನಿರ್ವಯಲಾದರೆನುತ ನೆಲ್ಲೂರ ಗುರುಮೂರ್ತಿ ಕಸಿಶೆಟ್ಟಿ ವೀರಭದ್ರೈಯನವರಿಗೆ ಪೇಳಲಾನಂದವಂ ಪಟ್ಟು ಅವನಿಯೊಳಗಭವಂಗೆ ಅತಿಭಕ್ತಿಮಾಡಿ

ಕಸಿಶೆಟ್ಟಿ ವೀರಭದ್ರಯ್ಯನವರುಗಳು ಘನಮೋಕ್ಷ ಪದವನು ಪಡೆದರೆಂದೆನುತ ಅತಿಪ್ರೀತಿ ಇಂದಲೀ ಪುಂಣ್ಯಚರಿತ್ರೆ ಚಿತ್ತಾರು ಗಂಗಾಧರೈಯ್ಯನವರೆಂಬ ಶಿವ ಶರಣರುಗಳಾಂಧ್ರ ಭಾಷದಲಿ ದ್ವಿಪದೆ ಕಾವ್ಯದಿ ವಿರಚಿಸಲಾಗಿ ಆದನರಿದು ಯಿಾ ಮಹಿಮೆಯೊಳಗಿರ್ಪ ಯಿದೆ ಭಾಗಾನಗರಶೀಮೆಲಾ ನಗರಕ್ಕೆ ನೈರುತ್ಯ ದಿಕ್ಕಿನಲ್ಲಿ ಚೌರಾಶಿ ಗ್ರಾಮಂಗಳಿಗೆ ಕಸುಬೆಸ್ಥಲವೆನಿಶಿರುತಿರ್ಪ ಶ್ರೀಕೋಣುಧೂರ್ತಿ ಪುರ ವಾಸ ಕೆಂಪಿನ ಮುದ್ದೈಯ್ಯನವರ ವರಪುತ್ರ ಸಕಲ ಶಾಸ್ತ್ರಾರ್ಥಪ್ರವೀಣ ವೀರೈಯ್ಯನವರು ಅವರುಗಳರ್ಧರಾಣಿ ವೀರಮಾಂಬಿಕೆಯು ಆಯಿಾರ್ವರು ಗಳಿಗೆ ಸುತನು ಶ್ರೀ ಗುರು ಮುದ್ದುಸಂಗಮದೇವರತೀಮುದದಿ ಕರ್ನಾಟ ಭಾಷದಿಂದೆಕ್ಷಗಾನ ಕಾವ್ಯದಿ ಇದನು ಮೇದಿನಿಯೊಳಗೆ ಘನಶಾಸ್ತ್ರವೆಂದೆನುತ ವಿರಚಿಶಿ ಶಂಭುಲಿಂಗಗರ್ಪಿಸಿದರೀ ಪುಂಣ್ಯಚಾರಿತ್ರೆ । ನಂಗೈಲಿ ಲಿಂಗದೋಷಾದಿ ಯಲ್ಲಿರಿಶಿಕೊಂಡನು. ದಿನಭಕ್ತಿ ಇಂದಲರ್ಪಿಸುತ ಬಿಡದೋದಿ ಕೇಳುವ

ಸದ್ಭಕ್ತರುಗಳ ಮಂದಿರಂಗಳಿಗೆ ಗ್ರಹಪವನವನು ಮೃತ್ಯು ಮೊದಲಾದ ಪೀಡೆಗಳ ಸರ್ವವು ಸೋಂಕಲೀಸದೆ ಶ್ರೀಶಾಂಭವಿನಾಥನವರುಗಳ ಪೋಷಿಸುತ್ತಿಹನು ನಿರಂತರವು ಕೃಪದೀ ॥ ೧ ॥ ಸಮೂಹಪದನೂ ॥ ೪೦೭ ॥ ವಚನಾ ॥ ಇತಿ ಓಂ ಶ್ರೀ ಪರಮಾ ಮುಕ್ತ್ರೈಶ್ವರ್ಯ ವೀರಶೈವಾಚಾರಸ್ಥಲದ ಪುರಾಣವೆಂಬ ಕೊಲ್ಲಿ ಪಾಕಿ ಮಾಹಾತ್ಮ್ಯೆ ಪಂಚಮಾಶ್ವಾಸಂ ಸಂಪೂರ್ಣಂ ಮಂಗಳ ಮಹಾಶ್ರೀ । × × × × ನಂಜಾರಾಧ್ಯ ಪತ್ನಿ ನಂಜಾಂಬೆ ಗರ್ಭ ಸಂಜಾತನಾದ ಚೆನ್ನ ಮಲ್ಲೈಯ್ಯನು ಶ್ರೀ ಕೊಲ್ಲಿಪಾಕಿ ಮಾಹಾತ್ಮೆ ಮನೆಯಲ್ಲಿ ಯಿರತಕ್ಕದ್ದು ಯೆಂದು ಲೇಖನವ ಮಾಡಿದ ಶ್ರೀ ಕೊಲ್ಲಿಪಾಕಿ ಮಾಹಾತ್ಮೆ ಸಂಪೂರ್ಣ ॥ ಪ್ರಭವನಾಮ ಸಂವತ್ಸರದ ಜೇಷ್ಠ ಶುಕ್ಲ ೫ ಶುಕ್ರವಾರದ ಹಗಲು ೧೦ ಘಳಿಗೆಯಲ್ಲು ಶ್ರೀ ಮಹಾಕೊಲ್ಲಿಪಾಕಿ ಮಾಹಾತ್ಮೆ ಸಂಪೂರ್ಣ ॥ ಶ್ರೀ ॥

ವಿಷಯ : ವೀರಶೈವಾಚಾರದ ಸ್ಥಲಪುರಾಣ (ಕೊಲ್ಲಿಪಾಕಿ ಮಾಹಾತ್ಮ್ಯ)

ವಿಶೇಷ : ಆದ್ಯಂತಗಳಲ್ಲಿ ಕೆಲವು ಶುದ್ಧ ಪತ್ರಗಳಿವೆ. ಕೊನೆಯ ಪತ್ರದ ಅಂಚು ಮುರಿದಿದೆ. ಆದಿ ಮತ್ತು ಅಂತ್ಯದಲ್ಲಿರುವ ಎರಡು ಪತ್ರಗಳಲ್ಲಿ ಕೆಲವು ರೇಖಾ ಚಿತ್ರಗಳಿವೆ. ೪೫ ನೆಯ ಪ್ರತ್ರ ಸ್ವಲ್ಪ ಭಾಗ ಮುರಿದಿದೆ.

364

ಕೆ. ಬಿ. ೪೧೭/೨	**ಕೋಲಾಟದ ಪದಗಳು**	ಹಾಡು
೭.೫″ × ೫.೭″	?	?
೩೯–೪೫ ಪತ್ರ	೧೬ ಪಂಕ್ತಿ	೧೬ ಅಕ್ಷರ

ಆದಿ : ಕೋಲು ಸುವ್ವೆಂಣಾಲಿಕೋಲೆ ನಂಮ
ಕೋಲುಪದ್ನವ ಹೇಳು ಬಾಲೆ
ತಾಳಿ ಬೀರಪ್ಪರ ನೀಲೆ ಪದ್ನ
ಹೇಳುವೆನಿಬ್ಬರ ಮ್ಯಾಲೆ ॥ ೧ ॥

ಅಂತ್ಯ : ತರುತಂಡು ತಿನ್ನದ ದಾಸ
ನೆರಕೆ ಮನೆಯಲ್ಲಿ ವಾಸಾ
ಹಸುತು ಚಿಂತೆಯು ಯಾಸಾ
ಮರಸಿ ಮಾಡುವರ್ತಿಸ ॥

ವಿಷಯ : ಕೋಲಾಟದ ಪದಗಳು.

ವಿಶೇಷ : ಮೋಡಿ ಅಕ್ಷರ. ಇದೇ ಪುಸ್ತಕದಲ್ಲಿ ತತ್ವಾಭಿನಯ ನಿಘಂಟು ಮತ್ತು ತತ್ವದ ಪದಗಳಿವೆ. ಈ ಗ್ರಂಥದ ಮುಂದೆ ಕೆಲವು ಶುದ್ಧ ಪತ್ರಗಳಿವೆ.

365

ಕೆ. ಬಿ. ೩೨೦/೪	**ಕೋಶಪ್ರತಿಕೋಶದ ಟೀಕು**	ಕಂದ, ಶ್ಲೋಕ, ಟೀಕು
೩.೩"×೨.೬"	ಪೂರ್ಣಾನಂದ ಅವಧೂತಶಿವಯೋಗಿ	?
೧೨೩–೧೪೭ ಪತ್ರ	೧೧ ಪಂಕ್ತಿ	೧೨ ಅಕ್ಷರ

ಆದಿ : ಕೋಶಪ್ರತಿಕೋಶದ ಟೀಕು ಬರೆವುದಕ್ಕೆ ಶುಭಮಸ್ತು ॥
ಶ್ರೀಮದದ್ವೈತ ವಾರಾಶಿ ಸಂಭೂತಾತ್ಮಸುಧಾಕರಂ ।
ಚಿದಾನಂದ ಗುರುಂ ವಂದೇ ಗುರುದೇವ ಮಹಾರ್ನಿಶಂ ॥

ಕಂದಾ ॥ ಯಿಾಶನು ಕರುಣಾರಸದಿಂ
ದಾ ಶಾಂಭವಿಗೆ ವಿವೃತಿಯಾತ್ಮ ಪರಮಪ್ಪುದಕೀ
ಕೋಶಪ್ರತಿಕೋಶವಂಸ್ನುಪ
ದೇಶಂಗೈದನು ವಿಶ್ವಕೋಶಂಗಳೊಳೂ ॥

ಅಂತ್ಯ : ಯೋತೋ ವಾಚಿತು ವರ್ತಂತೆ ಅಪ್ರಾಪ್ಯ ಮಾನಸಸಾಹಗೀ ।
ಆನಂದಬ್ರಂಹ್ಮಣೋ ವಿದ್ವಾನ್ ಅಭಿಭೇತಿಕಪಾಚನಾ ॥

ಎಂಬ ಶೃತಿಯೇ ಸಂಮತವೆಂದು ಪಾರ್ವತಿಗೆ ಪರಮೇಶ್ವರನು ರುದ್ರಯಾಮಳಂ ಯಂಬ ಗ್ರಂಥದಲ್ಲಿ ಕೋಶಪ್ರತಿಕೋಶ ರೂಪೋಪದೇಶವಂ ಮಾಡಿದರೂ । ಯೇಕೋನವಿಂಶತಿ ಶ್ಲೋಕರೂಪ ಪ್ರಕರಣ ಪಟಲವು ಸಮಾಪ್ತ ಸಂಪೂರ್ಣಂ.

ಕಂದಾ ॥ ಸುರನಾಗ ಸುರಪ್ರಾಗ
ನರನಾಥದಿನೇಶ ಲೋಕನಾಥನಿಳೆಯೋಳ್
ಗುರುಮೂಲದಿಂ ತಾರಕ
ಪರಿಯದೆ ಪರಮಾತ್ಮಭಾವ ಪರಿಯಪ್ಪುದೇ ॥

ಇತಿ ಶ್ರೀಮತ್ಪರಹಂಸ ಪರಿವ್ರಾಜಿಕಾಚಾರ್ಯ ಪೂರ್ಣಾನಂದ ಅವಧೂತ ಶಿವಯೋಗೀಂದ್ರಪ್ರಣೀತಮಾದ ಕೋಶಪ್ರತಿಕೋಶದ ಟೀಕು ಸಮಾಪ್ತಂ ಮಂಗಳ ಮಹಾಶ್ರೀ.

ಶ್ಲೋಕ॥ ಯಸ್ಸರ್ವಜ್ಞ ಸರ್ವಗತಸ್ಸರ್ವ ವ್ಯಾವೋ ಮಹೇಶ್ವರಃ।
ಯಥಾ ತೇನ ನಿಯುಕ್ತೋಽಹಂ ತಥೈವ ರಜತ್ತೈಭುವಿ॥
ತಸ್ಮಾದ್ವೈತರಿದೋಷೇಣ ಮಮ ನಾಸ್ತಿ ವಿಚರಣೆಯೇ।
ಮಹಂತೋಽಪಿ ಶೃವಂತಿ ತೆರಳಕಂ ನಿವಾರ್ಯಕಾಂ॥

ಸಂಪೂರ್ಣ ಜಯಮಂಗಳಂ ಮಹಾಶ್ರೀ ದುಂದುಭಿ ಸಂ॥ ಪಾಲ್ಗುಣ ಬ ೧೪ ಬುಧವಾರಾ ಶ್ರೀ.

ವಿಷಯ : ಮಂತ್ರಶಾಸ್ತ್ರದೊಳಗಿನ ವೇದಾಂತಭಾಗದ ಮೂಲ ಸಂಸ್ಕೃತ ಶ್ಲೋಕಗಳಿಗೆ ಕರ್ಣಾಟಕ ಭಾಷಾಟೀಕು.

ವಿಶೇಷ : ಗ್ರಂಥಾರಂಭಕ್ಕೆ ಮುಂಚೆ ಶಾರದಾಂಬಾ, ಕಲ್ಪವೃಕ್ಷ, ರಾಧಾಕೃಷ್ಣ–ಇವರುಗಳ ವರ್ಣರಂಜಿತ ಚಿತ್ರಗಳೂ, ನಂಜುಂಡಶತಕ, ಭೂಚಕ್ರದ ವಿವರವೂ, ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾಬೋಧೆಯೂ, ಅನಂತರ ಬಾಲಕೃಷ್ಣನ ವರ್ಣರಂಜಿತ ಚಿತ್ರವೂ ಇವೆ. ಪತ್ರಸಂಖ್ಯೆ ಹಾಕಿಲ್ಲ. ಕೊನೆಯ ಪತ್ರದ ಹಿಂಭಾಗದಲ್ಲಿ "ಮುತ್ತಿನ ಕಂತೆ ವಚನ ಬರೆಯುವುದಕ್ಕೆ ಶುಭಮಸ್ತು॥" ಎಂದು ಮಾತ್ರ ಇದೆ. ಆ ಗ್ರಂಥವು ಪ್ರಾರಂಭವಾಗಿಲ್ಲ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

366

ಕೆ. ೬೦೬	**ಕೌತುಕ ಚಿಂತಾಮಣಿ**	ಶ್ಲೋಕ, ಗದ್ಯ
೯" × ೧.೩"	?	?
೩೪ ಪತ್ರ	೬ ಪಂಕ್ತಿ	೨೫ ಅಕ್ಷರ

ಆದಿ : ಹರಿಹಿ ಓಂ। ಕೌತುಕ ಚಿಂತಾಮಣಿ।
ಪ್ರಣಂಮ್ಯ ಗಂಗಾದರಪಾದಯುಗ್ಮಂ ಪುರಾರಿಣಾಂ ಪರ್ವತ ರಾಜಪುತ್ರಿ।
ಪ್ರಭೋಧಿತಂ ಕೌತುಕ ಹೇತು ಬಾಲಂ ಪ್ರಕಾಶಯೆ ಲೋಕವಿನೋದ ಹೇತೋಃ॥
ಅಹಂ ತು ಗಂಗಾದರಸಿದ್ಧನಾಮಾ ಶ್ರಿಕಾಳಹಸ್ತಿ ಪರಮದ್ಯದಾಮಾ।
ಶ್ರಿಕೃಶಾಶೇಷ ಫಣೀದ್ರ ಹೇಮಪನದಾಮಿ ಸಂವಾದಲು ಮಾಡುಯೋ ಶಿಮಂ॥ × × ×

ಜಪಸಿದಿಃ॥ ಶತ್ರುವಿನ ಮುತ್ರದ ಮಂಣಾ। ಕಾಲುಕೆಳಗಲ ಮಣು। ಎಡಗಾಲು ಮಣು। ಬಲಗಾಲು ಮಣು। ನಿಂಬೇಹಂಣು।

ಅಂತ್ಯ : ೧ ಮುರುದಾರು ಶಿಂಗಿ ಸುಂಣಾ ಸಹಾ ಕಂಚಿನ ಹರಿವಾಣದಲ್ಲಿ ಹಾಕಿ ತಾಬ್ರದ ಚೊಂಬಿನಿಂದಾ ೧ ಅರಿದಳ ಮರ್ದಿಶಿ ಅಮೇಲೆ ಸಂಣಾ ಪವಡೆಗೆ ಹಾಕಿ ಹುಂಗೆ ಹತ್ತಿಸೂವದು ೧ ಹಂಸ ಪಾದಿ ಯಿಗಲೀಕ ಕಾಲುಮಂಡಲ ದೊಳಗೆ ಯಂತಾದ್ದು ಮಾಯೂವದು। ೧ ತುತ್ತ । ೧ ಕಾಚು.

ವಿಷಯ : ಆಭಿಚಾರಿಕ, ವೈದ್ಯ, ಜ್ಯೋತಿಷ ಇತ್ಯಾದಿ.

ವಿಶೇಷ : ಕ್ರಮಸಂಖ್ಯೆ ಸರಿಯಾಗಿಲ್ಲ. ಸಂಸ್ಕೃತ, ಕನ್ನಡ, ತಮಿಳು, ತೆಲುಗು ಈ ಭಾಷೆಗಳ ಸಂಮಿಶ್ರಿತವಾಗಿದೆ.

367

ಕೆ. ಎ. ೭೧	ಕ್ಷಪಣಸಾರ	ಶ್ಲೋಕ, ಟೀಕು
೧೨.೫" × ೭.೫"	?	?
೧–೭೦ ಪತ್ರ	೧೮ ಪಂಕ್ತಿ	೪೮ ಅಕ್ಷರ

ಆದಿ : ಶ್ರೀ ವೀತರಾಗಾಯ ನಮಃ
ಶ್ರೀ ಸದ್ಧರ್ಮ ಸಮುದ್ರ ನಂದನವರ ಸಂವೃದ್ಧರತ್ನಾಕರ
ಸ್ಸತ್ಸೇವ್ಯೋ ವಿಮಬೋತುಲಃ ಸುಖಕರೋ ಲೋಕಪ್ರಕಾಶಪ್ರದಃ
ಉದ್ಸದ್ದೀ ಬಲಭದ್ರಮಾಧವನುತ ಶ್ರೀಪಾದಪದ್ಮದ್ವಯೋ
ಯೋಯೂಯಂ ನಮತಾದರಾತ್ಕೃತ ಧಿಯಸ್ತಂ ನೇಮಿಚಂದ್ರಂ ಸದಾ

ಕ್ಷಪಣಸಾರ ಶಾಸ್ತ್ರದ ನಾಂದೀಸೂತ್ರದ ವ್ಯಾಖ್ಯಾನಮಿದು
ಶ್ರೀ ಸದ್ಧರ್ಮ ನಂದನವರ ಸಪ್ತಾಂಗ ರಾಜ್ಯಲಕ್ಷ್ಮಿಯೊಳ್ಕೂಡಿ ವಿಶಿಷ್ಟ ಕ್ಷೇತ್ರ ಧರ್ಮಮನುಳ್ಳ ಸಮುದ್ರವಿಜಯಪ್ರಿಯ ಪುತ್ರಂ । ಸಮ್ವೃದ್ಧರತ್ನಾಕರ ಪರಮೋತ್ಕರ್ಷಮನೆಯ್ದಿದ ಪರಮಾವಗಾಢ ಸಮ್ಯಕ್ತ್ವ ಕೇವಲಜ್ಞಾನ ಯಥಾಖ್ಯಾತ ಶುದ್ಧ ಚಾರಿತ್ರಂಗಳೆಂಬ ರತ್ನಂಗಳುತ್ಪತ್ತಿಗಾಗರಮಾದಂ ಸತ್ಸೇವ್ಯ ಗಣಧರ ಕುಳಿಶಧರ ಫಣಾಧರ ಚಕ್ರಧರರ್ಮೊದಲಾದ ಭವ್ಯವರ ಪುಂಡರೀಕರ್ಗಾರಾಧ್ಯಂ ವಿಮಳಃ ದ್ರವ್ಯ ಭಾವಾತ್ಮಕ ಘಾತಿ ಚತುಷ್ಟಯ ರಹಿತಂ ಅತುಲಃ ರೂಪಿಂ ಕಾಂತಿಯಿಂ ಮಾಹಾತ್ಮದಿಂ ತ್ರೈಲೋಕ್ಯದೊಳುಪ ಮಾತೀತಂ ಸುಖಕರಃ ತತ್ವೋಪದೇಶನದ್ವಾರದಿಂ ಸಹಜ ಶಾರೀರ ಮಾನ ಸಾಗಂತುಕಂಗಳೆಂಬ ಚತುರ್ವಿಧ ದುಃಖಂಗಳಂ ನಿವಾರಿಸಿ ಭವ್ಯರ್ಗಭ್ಯುದಯ ನಿಃಶ್ರೇಯಸ ಸುಖಮುಂ ಮಾಳ್ಪಂ

ಅಂತ್ಯ : ಯೆಂದಿಂತದು ಕಾರಣದಿನುಕ್ತ ಲಕ್ಷಣಲಕ್ಷಿತ ಸೂಕ್ಷ್ಮಕ್ರಿಯಾ ಪ್ರತಿಪಾತಿ ಸಂಜಿತ ಪರಮಶುಕ್ಲಧ್ಯಾನಮನೀಯುವಸರದೊಳು ಯೋಗನಿರೋಧ ಕೇವಲಿ ಕರ್ಮಾದಾನ ಸಾಮರ್ಥ್ಯ ನಿರವಶೇಷ ನಿಮಿತ್ತಂ ಧ್ಯಾನಿಸುಗುಮೆಂಬೀ

ವಿದೂಷಾವಮಾಧವ ಚಂದ್ರ ದಿವ್ಯಗಣಿನಾ ತ್ರೈವಿಧ್ಯ ಚಕ್ರೇಶನಾ
ಕ್ಷಪಣಾಸಾರಮಕಾರಿ ಬಾಹುಬಲಿ ಸನ್ಮಂತ್ರೀಶ ಸಂಜ್ಞಪ್ರಯೆ
ಶಕಕಾಲೇ ಶರಸೂರ್ಯ್ಯ ಚಂದ್ರಗಣಿತ್ಮೆ ಜಾತ್ಮೆಪುರೇ ಕ್ಷುಲ್ಲಕೇ
ಶುಭದೇ ದುಂದುಭಿ ವತ್ಸರೇ ವಿಜಯತಾಮಾಚಂದ್ರತಾರಂ ಭುವಿ ‖

ಕ್ಷಪಣಸಾರಂ ಸಂಪೂರ್ಣಂ

ವಿಷಯ : ಜೈನತತ್ತ್ವ.

ವಿಶೇಷ : ಜೈನಪ್ರಕ್ರಿಯೆಗಳಿಗೆ ಸಂಬಂಧಿಸಿದ ಕೋಷ್ಟಕಗಳಿವೆ.

368

ಕೆ. ಎ. ೧೬೯	ಕ್ಷೇತ್ರಗಣಿತ	ಪದ್ಯ, ಶ್ಲೋಕ, ಟೀಕು
೧೩"×೮"	ತಿಮ್ಮರಸ	ಸು. ೧೭೦೦
೨೮ ಪತ್ರ	೨೩ ಪಂಕ್ತಿ	೨೨ ಅಕ್ಷರ

ಆದಿ : ಕನ್ನಡಕ್ಷೇತ್ರಗಣಿತಂ ‖ ಕರ್ಣಾಟಕ ವಾರ್ತೆಯಲ್ಲಿ ಅಷ್ಟಾದಶಗಣಿತಂಗಳಂಟು ಅವಾವಾವುವೆಂದೊಡೆ ಮಗ್ಗಿ, ಗಣಿತ....ವರ್ಗ, ವರ್ಗಮೂಲ, ಘನ, ಘನ ಮೂಲ, ಕ್ಷೇತ್ರಗಣಿತ, ಮಂಗುಳಿ ಅಳತೆ, ರಾಜನೀತಿ, ಬಣ್ಣಾಂತರ, ಪದ್ಮನಾಭ ....ಕಗುಣ, ಉಕ್ಕಳಿತಗುಣ, ಮುತ್ತಿನ ಚೆಲ್ವಿನ ಗುಣಿತವುಂ, ಅಷ್ಟಾದಶ ಗುಣಿ ತಂಗಳು ಮೊದಲಾಗಿ ಇನ್ನುಮನೇಕ ಕುಶಲಂಗಳುಂಟು, ಪೂರ್ವಾಚಾರ್ಯರು ಹೇಳಿದ್ದು, ದೇಹದಲ್ಲಿ ಹುಟ್ಟಿದ್ದು, ಅಕ್ಷರ ನುಡಿವ ಲಕ್ಷಣಂ.

ಅಂತ್ಯ : ಮುತ್ತು ೧ ಕ್ಕೆ ೨೪ ವಜ್ರ ೧ ಕ್ಕೆ ೨೩೩೪ ಈ ಮೇರೆಯಲ್ಲಿ ವಿವರ | ಮುತ್ತು ೧ ಕ್ಕೆ ೨೪ ವಜ್ರ ೫ ಕ್ಕೆ....ಲಿ ಕಳೆವರೆ ವಜ್ರ ೫ ಕ್ಕೆ ೩ ಉಳಿದ ೨ ಕೆಂಪು ೮ ಕ್ಕೆ ೩ ಈ ಉಳಿದ ೫ ನೀಲ ೧೦ ಕ್ಕೆ ೩ ಉಳಿದುದು ೭ ಮುತ್ತು ೧೦೦ ಕ್ಕೆ ೩ ಉಳಿದುದು ೯೭ ಈ ವಜ್ರ ೧ ಕ್ಕೆ ಕ್ರಯ ೨೩೦೪, ಕೆಂಪು ೧ ಕ್ಕೆ ಕ್ರಯ ೫೭೬, ನೀಲ ೧ ಕ್ಕೆ ಕ್ರಯ ೩೮೪, ಮುತ್ತು ೧ ಕ್ಕೆ ಕ್ರಯ ೨೪ ಅಂತು ೫೯೯೨ ಈ ರೀತಿಯಲ್ಲಿ ನೋಡಿಕೊಂಬುದು.

ವಿಷಯ : ಕ್ಷೇತ್ರಗಣಿತಕ್ಕೆ ಸಂಬಂಧಪಟ್ಟ ಸೂತ್ರ ಮುತ್ತು ಉದಾಹರಣೆಗಳು.

ವಿಶೇಷ : ಈ ಪ್ರತಿಯಲ್ಲಿ ಮೂರು ತೆರನಾದ ಅಕ್ಷರಗಳಿವೆ. ಕೆಲವು ಕಡೆ ಲೀಲಾವತಿಯ ಒಂದೆರಡು ಲೆಕ್ಕಗಳ ವಿವರ ಕನ್ನಡದಲ್ಲಿದೆ. ೧ ನೆಯ ಪತ್ರದಲ್ಲಿ ಪ್ರತಿಕಾರರು ಕೆ. ರಾಮಸ್ವಾಮಯ್ಯಂಗಾರ್ಯರು ಪ್ರತಿಮಾಡಿದ ಊರು ಮಾಗಡಿ. ಪ್ರತಿಯ ಕಾಲ ೨೪–೧೦–೧೯೦೫. ಮಧ್ಯೆ ತೆಲಗುಭಾಷೆಯ ಸೂತ್ರವೂ ಇದೆ. ಕೆಲವು ಕಡೆ ಕ್ಷೇತ್ರಗಳನ್ನೂ ಬರೆದಿದೆ. ಕನ್ನಡ ಪದ್ಯಗಳನ್ನು ಪಾದ ಬಿಡಿಸಿ ಬರೆದಿದೆ. ಕೋಲಕ್ಷರ.

369

ಕೆ. ೬೪೦	**ಕ್ಷೇತ್ರಜ್ಞಸುಮನೋವಾದ**	ವಿವಿಧ ಷಟ್ಪದಿ
೧೨" × ೨.೧"	ಚೆಂನಬಸವೇಶ್ವರದೇವರು	೧೧೬೦
೧–೭೬ ಪತ್ರ	೧೦ ಪಂಕ್ತಿ	೫೪ ಅಕ್ಷರ

ಆದಿ : ಶ್ರೀಗುರುಬಸವಲಿಂಗಾಯ ನಮಃ॥ ಷಟ್ಸ್ಥಲ ಚಕ್ರವರ್ತ್ತಿ ಚೆಂನ್ನಬಸವೇಶ್ವರದೇವರು ನಿರೂಪಿಸಿದ ಕ್ಷೇತ್ರಜ್ಞ ಸುಮನೋವಾದಂ ॥ ಪ್ರಥಮದಲ್ಲಿ ವಸ್ತುನಿರ್ದ್ದೇಶಂ ॥ ಭಾವನಿ ॥ ಪಲ್ಲವಂ ॥

ವಸ್ತು ನಿರ್ದೇಶವನು ತನ್ಮಯ
ಹಸ್ತಕಮಲಭವಂಗೆ ಮುದದಿಂ
ವಿಸ್ತರಿಸಿ ಪೇಳ್ದನು ಕೃಪಾರ್ನ್ನವನಾದಿ ದೇಶಿಕನು ॥

ಪದಂ॥ ಶ್ರೀಮದವಿರಳ ಸಚ್ಚಿದಾನಂ
ದಾಮಲಾತ್ಮಖಂಡ ಪೂರ್ನೋ
ದ್ದಾಮ ಶಿವತತ್ವಾನುಭವ ಸಂಸಿದ್ಧ ಸರ್ವಜ್ಞಾ
ನಾಮ ರೂಪಾತೀತ ಸಂಸಾ
ರಾಮಯೌಷಧ ಮುಕ್ತಿಕಾಂತಾ
ಪ್ರೇಮ ಚೆಂನ್ನವೃಷೇಂದ್ರ ಘನಯೋಗೀಂದ್ರ ಮಾಂ ಪಾಹಿ ॥ ೧ ॥

ಅಂತ್ಯ : ಇದು ಸಮಸ್ತ ಪುರಾತನಾತ್ಮ
ಭ್ಯುದಯ ವಚನಾಗಮಸದೃಶಮಿಂ
ತಿದುವೆ ನಿಜಮತಮಮಲ ತತ್ವರಹಸ್ಯ ಸಂಬೋಧೆ
ಇದಱಿಂ..................ಸಂ
ವಿದನುಭಾವಿಗಳಱುದು ಋಜು ಮಾ
ಳ್ಪದು ಸದಾಂಗೀಕರಿಸಿ ಸಲೆ ಪಾಲಿಪುದು ಲಾಲಿಪುದೂ ॥ ೫೫ ॥

ಸನ್ನಿಧೀಶ್ವರ ವಧನ ಶಿವಶ
ಕ್ಯನ್ವಯ ಸುಧಾಕರರ ಸಂಖೆಯೊ
ಳುನ್ನತ ಕ್ಷೇತ್ರಜ್ಞ ಸು....ಪದಬಂಧಂ
ಮುನ್ನ ಷಟ್ಸ್ಥಲಸಾರ್ವಭೌಮಂ
ಚೆನ್ನವೃಷಭೇಂದ್ರಾಭಿದಾನದ
ಚೆನ್ನವೃಷಭೇಶ್ವರ ನಿರೂಪಣವಾಗಿಯೊಪ್ಪಿದುದೂ ॥ ೩೬ ॥
ಇದನು ಶ್ರದ್ಧೆಯೊಳೊಲಿದು ಪಠಿಯಿಸಿ
ಹೃದಯದಿ............ಳಿದರ್ತ್ಥವಮಂ ಕೇ
ಳಿದೊಡೆ ಭಕ್ತಿಜ್ಞಾನ ವೈರಾಗ್ಯಂಗಳಹವಱಿವಿಂ
ವಿದಿತ ಸದಸದ್ವಸ್ತುವಂ ತಿಳಿ
ದೊದೆದು ವೈರಾಗ್ಯದೊಳು ವಾಯೆಯು
ನುದಿತ ಭಕ್ತಿಯೊಳಾ ಪ್ರಸಾದದ ಸುಖಮು........ರು ॥ ೩೭ ॥
ಇದು ಸಮಸ್ತ ಶಿವಾನುಭಾವರ
ಪದಪಯೋರುಹ ಗಂಧವುದ ಷ
ಟ್ಪದನು ಷಟ್ಸ್ಥಲಸಾರ್ವಭೌಮಂ ಚೆನ್ನವೃಷಭೇಂದ್ರಂ
ವಿದಿತವಾಗಿ ನಿರೂಪಿಸಿದ ಸ
ಮ್ಮುದ ಮಹಾ.......ಜ್ಞ ಸಮನೋ
ಕದನದೊಳು ನಿರ್ಗ್ಗುಣಕಿದೇಕಸುವಿಂಶತಿಸ್ಥಲವೂ ॥ ೩೭ ॥

ಇತಿ ಕ್ಷೇತ್ರಜ್ಞಸುಮನೋವಾದೇ ಸ್ವಲೀಲಾನಂದ ಭಕ್ತಿತ್ರ್ಯ ಚರಣವಿವರಣ ಮೇಕವಿಂಶತಿ ಪ್ರಕರಣ............ಅಂತು ಸ್ಥಲವಿಪ್ಪತ್ತೊಂದಕ್ಕಂ ಪದನು ೧೨೫೫ಕ್ಕಂ ಸಮಾಪ್ತ ಮಂಗಳಮಹಾ ॥ ಶ್ರೀ.

ವಿಷಯ: ಷಟ್ಸ್ಥಲ ಸಿದ್ಧಾಂತ.

ವಿಶೇಷ: ಶಕಟರೇಫವನ್ನು ಬಳಸಿದೆ. ೨೧ ಸ್ಥಲಾತ್ಮಕವಾಗಿ ಈ ಪದ್ಯಪ್ರಬಂಧ ವನ್ನು ರಚಿಸಿರುವನು. ವಿದಧ ಷಟ್ಪದಿಗಳಿಂದ ರಚಿತವಾಗಿದೆ. ಅಲ್ಲಲ್ಲಿ ತ್ರುಟಿತ, ಲುಪ್ತ. ಪತ್ರ ೬೯ ಅರ್ಧಭಾಗ ಮುರಿದು ಲುಪ್ತವಾಗಿದೆ. ಪತ್ರ ೮೫ ಮತ್ತು ೮೬ ಅತಿ ಶಿಥಿಲ. ಎಡ–ಬಲಗಳ ಅಂಚು ತ್ರುಟಿತವಾಗಿ ಸ್ವಲ್ಪ ಭಾಗ ಲುಪ್ತ. ೧, ೨೮, ೨೯, ೩೮, ೫೭, ೬೬, ೬೭, ೭೧, ೮೮—ಈ ಪತ್ರಗಳು ಅಂಚುಗಳಲ್ಲಿ ಸ್ವಲ್ಪಸ್ವಲ್ಪ ತ್ರುಟಿತವಾಗಿ ಕೆಲಕೆಲ ಅಕ್ಷರಗಳು ಲುಪ್ತ ವಾಗಿವೆ.

370

ಕೆ.ಬಿ. ೨೪೧	ಕ್ಷೇತ್ರ, ನದಿ ಇತ್ಯಾದಿಗಳ ಪಟ್ಟಿ	ಹೆಸರು
೭.೮" × ೬.೩"	?	?
೧–೨೫ ಪತ್ರ	೧೬ ಪಂಕ್ತಿ	■ ಅಕ್ಷರ

ಆದಿ : ಶ್ರೀಃ॥ ಕ್ಷೇತ್ರಗಳು ॥ ನದಿಗಳು॥ ತೀರ್ಥಗಳು ॥ ದೇವರುಗಳು ॥ ತ್ರಿಮಾಧವ॥ ತ್ರಯಸ್ತ್ರಿಂಶನ್ನೃಸಿಹ್ಮ ॥ ವಟವೃಕ್ಷಗಳು ॥ ಪಞ್ಚವಿಂಶತಿ ನಾರಾಯಣಃ ॥ ದಶಕೃಷ್ಣಕ್ಷೇತ್ರ ॥ ವಿಂಶತಿರಾಮಾಃ ॥ ಸಪ್ತವಿಂಶತಿ ವೆಂಕಟರಮಣಾಃ ॥ ದಶ ವಿಧ ರಂಗರು ॥ ದ್ವಾವಿಂಶತಿ ಪ್ರಾಣದೇವರು ॥ ದ್ವಾವಿಂಶತಿ ಗಣಪತಿಃ ॥ ಗಂಗಾ ನದಿಯಲ್ಲಿ ಸಂಗಮವಾಗತಕ್ಕ ನದಿಗಳು ॥ ಗೋದಾವರಿಯಲ್ಲಿ ಸಂಗಮವಾಗ ತಕ್ಕ ನದಿಗಳು ॥ ಕೃಷ್ಣಾನದಿಯಲ್ಲಿ ಸಂಗಮವಾಗತಕ್ಕ ನದಿಗಳು । ಕಾವೇರಿ ಯಲ್ಲಿ ಸಂಗಮವಾಗತಕ್ಕ ನದಿಗಳು ॥ ಚಿಲ್ರೆ ನದಿಗಳು ಸಂಗಮವಾಗತಕ್ಕದ್ದು ಇವುಗಳನ್ನು ತೋರಿಸತಕ್ಕ ಪಟ್ಟಿ ॥ ಶ್ರೀಃ ॥ ಕ್ಷೇತ್ರಗಳು ॥ ಬದರಿಕಾಶ್ರಮ ೧ ಕೇದಾರಕ್ಷೇತ್ರ ೨, ಗಂಗೋತ್ತರೀ ೩

ಅಂತ್ಯ : ಪಶ್ಚಿಮ ಸಮುದ್ರಕ್ಕೆ ಪ್ರವೇಶವಾಗತಕ್ಕ ನದಿಗಳು ॥ ಸಿಂಧುನದಿ ೧, ನರ್ಮದಾ ನದಿ ೨, ಅಟಕನದಿ ೩, ಶತದ್ರು ನದಿ ೪, ನೇತ್ರಾವತೀ ನದಿ ೫, ವರದಾನದಿ ೬, ಶಿತಾನದೀ ೭, ಕೊಮಾರಧಾರಾ ೮, ಅಮರಾವತೀ ನದಿ ೯, ಗಂಗಾಧಾರ ನದಿ ೧೦, ವಸವೋರ್ಧಾರ ನದಿ ೧೧ ॥ ೧೬೫ ಶಿವ ಕ್ಷೇತ್ರಗಳು ೧೫೩ ವಿಷ್ಣು ಕ್ಷೇತ್ರಗಳು, ೧೭೫ ಶಿವ ದೇವಸ್ಥಾನಗಳು, ೧೫೫ ವಿಷ್ಣುದೇವ ಸ್ಥಾನಗಳು, ೮ ಸ್ವಯಂ ವ್ಯಕ್ತಸ್ಥಳಗಳು, ೭ ಪುರಿಗಳು, ೧೨ ಜ್ಯೋತಿಲಿಂಗ, ೫ ಪಂಚಲಿಂಗ, ೧ ವರಾಹ ದೇವರು, ೨೫ ನಾರಾಯಣ ದೇವರು, ೧೦ ಕೃಷ್ಣ ದೇವರು, ೧೬ ವೆಂಕಟರಮಣ ದೇವರು, ೯ ನಾರಸಿಹ್ಮ ದೇವರು, ೨೪ ಚಿಲ್ರೆ ನರಸಿಹ್ಮ, ೫ ವರಾಹ ದೇವರು, ೩ ಕೇಶವದೇವರು, ೩ ಮಾಧವ ದೇವರು, ೩ ವಟವೃಕ್ಷ, ೧೩೨ ನದಿಗಳು, ೧೮೫ ತೀರ್ಥಗಳು, ೨೪ ಪ್ರಾಣದೇವರು, ೨೨ ಗಣಪತಿ, ೫೫ ಋಷಿಗಳ ಆಶ್ರಮ, ೧೯೦ ಋಷಿಗಳ ಹೆಸರು, ೧೨ ಪಶ್ಚಿಮ ಸಮುದ್ರಕ್ಕೆ ಶೇರುವ ನದಿಗಳು. ಒಟ್ಟು ೧೪೯೯

ವಿಷಯ : ಕ್ಷೇತ್ರಗಳು, ನದಿಗಳು, ತೀರ್ಥಗಳು ಇವುಗಳ ಹೆಸರು.

ವಿಶೇಷ : ಇದನ್ನು ಮೂಲ ಪ್ರತಿಯೊಡನೆ 19-7-01ರಲ್ಲಿ ತಾಳೆ ನೋಡಿದೆ ಎಂದು ಗ್ರಂಥಾರಂಭದಲ್ಲಿ ಬರೆದಿದೆ.

371

ಕೆ. ಎ. ೧೭	ಖಗೇಂದ್ರಮಣಿದರ್ಪಣ	ಚಂಪು
೧೩" × ೮"	ಮಂಗರಾಜ	ಸು. ೧೩೬೦
೧–೬೬ ಪತ್ರ	೧೮ ಪಂಕ್ತಿ	೧೮ ಅಕ್ಷರ

ಆದಿ : ಖಗೇಂದ್ರಮಣಿದರ್ಪಣಾ ತೃತೀಯಾಶ್ವಾಸಂ ಸಂಗ್ರಹಾಧಿಕಾರಂ
........ಜಂಗಮ ವಿಷದೊಳ್
ಶಾಂತರಸಮಯ ಜಿನೇಂದ್ರಮ
ತಾಂತರದೊಳ್ತಿಳಿಯ ಪೇಳ್ವೆನೆಂಟಂಗಮುಮಂ ||
ವ|| ಅಂತು ಗಾರುಡ ಮತದೊಳ್ ಎಂಟಂಗವಾವುದೆಂದೊಡೆ

ಅಂತ್ಯ : ಕಂ|| ಜಾಲಂ ಕತ್ತುರಿ ಕಾಮನ
ಮೂಲಂ ನಸುಗುಂನ್ನಿ ಭೃಂಗಕರ್ಕೋಟಕಮುಂ
ಮೂಲಿಸುಗುಂ ಫಣಿವಿಷಮುಂ
ಪಾಲೊಳ್ಕುಡಲವನಘೋಮುಖಾಂನ್ವಿತನಾಗಳ್ || ೧೦೧ ||

ವಿಷಯ : ವಿಷವೈದ್ಯ.

ವಿಶೇಷ : ಗ್ರಂಥವು ತೃತೀಯಾಶ್ವಾಸದಿಂದ ಪ್ರಾರಂಭವಾಗಿ ಚತುರ್ಥ, ಪಂಚಮ ಆಶ್ವಾಸಗಳಿಗೆ ಮಾತ್ರ ಮುಗಿಯುತ್ತದೆ. ದೊರೆತಷ್ಟನ್ನೇ ಪ್ರತಿಮಾಡಿರುವುದಾಗಿ ಹೇಳಿದೆ. ಇದನ್ನು 1892ರಲ್ಲಿ ಪ್ರತಿಮಾಡಿದಂತೆ ತಿಳಿದುಬರುತ್ತದೆ. ಪತ್ರದ ಒಂದು ಭಾಗದಲ್ಲಿ ಮಾತ್ರ ಬರೆದಿದೆ. ಚತುರ್ಥಾಶ್ವಾಸಕ್ಕೆ ಟೀಕೆ ಇದೆ. ೩೪ ರವರೆಗೆ ಕ್ರಮಸಂಖ್ಯೆಯಿದ್ದು ಮತ್ತೆ ೧ ರಿಂದ ೩೨ ಪತ್ರಗಳಿವೆ.

372

ಕೆ. ಎ. ೮೪	ಖಗೇಂದ್ರಮಣಿದರ್ಪಣ	ಚಂಪು
೧೨.೩" × ೭.೯"	ಮಂಗರಾಜ	ಸು. ೧೩೬೦
೧–೧೦೭ ಪತ್ರ	೨೫ ಪಂಕ್ತಿ	೨೪ ಅಕ್ಷರ

ಆದಿ : ಖಗೇಂದ್ರಮಣಿದರ್ಪಣ.
ವೃತ್ತಂ|| ಶ್ರೀಮದ್ಗೀರ್ವಾಣ ಶೋಣಾಮಲಮಣಿ ಮಕುಟೋದ್ಯತ್ಪ್ರಭಾ
ವಲ್ಲರೀ ಪ್ರೋ
ದ್ಭಾಮಾಂಘ್ರಿ..........ಪನನಘನಚಿಂತ್ಯಂ ಸಮಸ್ತಾರ್ಥದಿಂ ನಿ

ಷ್ಯಾಕಮಂ ಸೋಮಾರ್ಕಕೋಟಿದ್ಯುತಿ ವಿಮಲಗುಣಂ ಮುಕ್ತಿ
ಸೌಖ್ಯಾವನೀಜಾ
ರಾಮಂ ಶ್ರೀ ಪಾರ್ಶ್ವನಾಥಂ ನಿರವಧಿಕ ಸುಖಾವಾಪ್ತಿಯಂ
ಮಾಳ್ಕೆ ನಮ್ಮೊಳ್ ‖ ೧ ‖

ಅಂತ್ಯ : ಸಮ್ಯಕ್ತ್ವಾಂಕುರಮಾಗಿ ಪುಟ್ಟಿ ವಿಲಸದ್ವೈರಾಗ್ಯ ಮೂಲಾನ್ವಿತಂ
ರಮ್ಯಾನೇಕನಯಾರ್ಥ ಶಾಖೆಯಿನತರ್ಕ್ಯಾಕಾಂಡ ಪರ್ವಂಗಳಿಂ
ಸೌಮ್ಯಂ ಸೂಕ್ತಿ ಲತಾಂತಮಕ್ಷಯ ಫಲಾಕೀರ್ಣಂ ಕುಡುತ್ತಿರ್ಕದಾ
ನಮ್ಯಂ ಸ್ವಾಹತಕಲ್ಪ ಭಾಜಮನಘಂ ಮಂಗಂಗಭೀಷ್ಟಾರ್ಥಮಂ ‖೧೭೧‖

ಇದು ಸಕಲವಿದಮಲ ಜಿನೇಂದ್ರೋಕ್ತ ಸಿದ್ಧಾಂತ ಪಯಃಪಯೋಧಿ ಪಾದ ಶ್ರೀ ಪೂಜ್ಯಪಾದ ಮುನೀಂದ್ರ ಚಾರು ಚರಣಾರವಿಂದ ಗಂಧ ಗುಣಾನಂದಿತ ಮಾನಸಂ ಶ್ರೀಮದಖಿಳ ಕಲಾಗಮೋತ್ತುಂಗ ಮಂಗವಿಭು ರಚಿತಮಪ್ಪ ಖಗೇಂದ್ರಮಣಿದರ್ಪಣದೊಳ್ ನಿರ್ವಿಷೀಕರಣ ಚಿಕಿತ್ಸಾ ವಿವರಣಾಧಿಕಾರಣಂ ಷೋಡಶಾಶ್ವಾಸಂ ಅಂತು ಆಶ್ವಾಸಂ ೧೬ಕ್ಕೆ ಕಂದ ವೃತ್ತಸಹ ೧೪೩೪ಕ್ಕೆ ಗದ್ಯ ೧ಕ್ಕೆ ಮಂಗಳಮಹಾಶ್ರೀ.

ವಿಷಯ : ವಿಷವೈದ್ಯ.

ವಿಶೇಷ : ಪ್ರತಿಯ ಸ್ಥಿತಿ ಸುಮಾರಾಗಿ ಉತ್ತಮವಾಗಿದೆ. ಒಂದೊಂದು ಕಡೆಯಲ್ಲಿ ಗ್ರಂಥಲೋಪವಿದೆ. ಕೆಲವು ಪದ್ಯಗಳು ಟೀಕು ಸಹಿತವಾಗಿವೆ.

373

ಕೆ. ಎ. ೨೦೮	**ಖಗೇಂದ್ರಮಣಿದರ್ಪಣ**	ಚಂಪು
೧೩" × ೮"	ಮಂಗರಾಜ	ಸು. ೧೩೬೦
೧–೧೭೦ ಪತ್ರ	೩೩ ಪಂಕ್ತಿ	೨೦ ಅಕ್ಷರ

ಆದಿ : ಖಗೇಂದ್ರಮಣಿದರ್ಪಣ.

ಶ್ರೀಮದ್ಗೀರ್ವಾಣಶೋಣಾಮಲ ಮಣಿಮಕುಟೋದ್ಯತ್ಪ್ರಭಾವಲ್ಲರೀ ಪ್ರೋ
ದ್ಧಾಮಾಂಘ್ರಿದ್ವಂದ್ವ ಕಲ್ಪಾಂಘ್ರಿ ಪದನನಘನಚಿಂತ್ಯಂ ಸಮಸ್ತಾರ್ಥವಿನಿ
ಷ್ಯಾಕಮಂ ಸೋಮಾರ್ಕಕೋಟಿದ್ಯುತಿ ವಿಮಲಗುಣಂ ಮುಕ್ತಿಸೌಖ್ಯಾವ
ನೀಜಾ
ರಾಮಂ ಶ್ರೀ ಪಾರ್ಶ್ವನಾಥಂ ನಿರವಧಿ ಸುಖಾವಾಪ್ತಿಯಂ ಮಾಳ್ಕೆ
ಯೆಂಮ್ಮೊಳ್ ‖ ೧ ‖

ಅಂತ್ಯ : ಸಾರಾಸಾರಮನಱಿಯದೆ
ಯಾರಾನುಂ ಕೇಳೆ ಪೇಳ್ದೊಡಂ ಭೇಷಜಮಂ
ಸಾರಂಗೆಡುಗುಂ ಮತ್ತಾ
ಧೀರಂ ತಾನಾಗೆ ಪೇಳದೀ ಗ್ರಂಥಮುಮಂ ॥

ಅಂತು ಪ್ರಯತ್ನಪರನಾಗಿ ಗ್ರಂಥಮಂ ಸಾಧ್ಯಂ ಮಾಳ್ಪುದು ॥ ೧೭೫ ॥

ಇದು ಸಕಲ ವಿದಮಲ ಜೀನೇಂದ್ರೋಕ್ತ ಸಿದ್ಧಾಂತಪಯಃಪಯೋಧಿ ಪಾರಗ ಶ್ರೀ ಪೂಜ್ಯಪಾದಮುನೀಂದ್ರ ಚಾರು ಚರಣಾರವಿಂದಗಂಧ ಗುಣಾನಂದಿತ ಮಾನಸಂ ಶ್ರೀಮದಖಿಳ ಕಳಾಗಮೋತ್ತುಂಗ ಮಂಗವಿಭು ವಿರಚಿತಮಪ್ಪ ಖಗೇಂದ್ರಮಣಿದರ್ಪಣದೊಳ್ಸಕಲವಿವರಣಂ ಷೋಡಶಾಧಿಕಾರಂ ಸಮಾಪ್ತಂ ॥ ಮಂಗಳ ಮಹಾಶ್ರೀ.

ವಿಷಯ : ವಿಷವೈದ್ಯ.

ವಿಶೇಷ: ಪ್ರಕೃತ ಗ್ರಂಥವು ಶಿಥಿಲವಾಗಿದೆ. ಅಲ್ಲಲ್ಲಿ ಲುಪ್ತ ಹಾಗೂ ಪದ್ಯಗಳು ಪ್ರಥಮಾಶ್ವಾಸದಲ್ಲಿ ೫೦ ನೆಯ ಪದ್ಯದಿಂದ ೬೩ ನೆಯ ಪದ್ಯದವರೆಗೆ ಬಿಟ್ಟು ಹೋಗಿವೆ. ಶಕಟರೇಫದ ಪ್ರಯೋಗವಿದೆ. ಪತ್ರದ ಒಂದೇ ಕಡೆ ಬರೆದಿದೆ. ೨೩ ರಿಂದ ೨೯ ಮತ್ತು ೧೫೬ ನೆಯ ಪತ್ರಗಳು ಎರಡೆರಡಿವೆ.

374

ಕೆ. ೫೭೧	ಖಡ್ಗಶಾಸ್ತ್ರ	ಶ್ಲೋಕ, ಟೀಕು
೧೩.೯" × ೨.೨"	?	?
೧–೫೫ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಖಡ್ಗಶಾಸ್ತ್ರ ಬರವುದಕೆ ಅಯಿಶ್ವರ್ಯಮಸ್ತು ॥

ಶ್ಲೋಕ॥ ಶ್ರೀಮಾಂನ್ನ ಹಸ್ತಿಪುರೇಪೂರ್ವಂ ಜನಮೇಜಯ ಭೂವರಃ।
ಆಸ್ಥಾನೇ ಸುಖಮಾಸೀನಃ ಸಖ್ಯೈ ಪರಿವೃತಃ ಶುಚಿಃ ॥ ೧ ॥

ಟೀಕು ॥ ಪೂರ್ವದಲೂ ಜನಮೇಜಯರಾಯನು ಹಸ್ತಿನಾವತಿಯಲ್ಲಿ ಆಸ್ಥಾನದಲ್ಲಿ ಸಖ್ಯರು ಮುಂತಾಗಿ ಕುಳಿತುಕೊಂಡು ॥

ಶ್ಲೋಕ॥ ಭಾರತೀಯಾಃ ಕಥಾಶ್ರಿತಾಃ ಯಿತಿಹಾಸಾಃ ಪುರಾತನಃ।
ಪುರಾಣಾನಿ ಸಮಾಕರ್ಣ್ಯ ವೈಶಂಪಾಯನತಃ ಪ್ರಭುಃ ॥

ಟೀಕು ॥ ಆಶ್ಚರ್ಯತರವಾದಂಥಾ ಭಾರತಕಥೆಗಳು ಕೇಳಿ ಯಿತಿಹಾಸಗಳನು ಭಾಗವತ ರಾಮಾಯಣಗಳನು ಪುರಾಣಗಳನು ವೈಶಂಪಾಯನ ಮುನೀಂದ್ರನಿಂದಲು ಕೇಳಿ ॥ ೨ ॥

ಅಂತ್ಯ : ಶ್ಲೋಕಾ ॥ ಯಿತಿ ಶ್ರೀ ಕೃಷ್ಣದೇವರಾಯ ದ್ರೋಣಾಚಾರ್ಯೇಣಧೀಮತಾ ।
ಖಡ್ಗಶಾಸ್ತ್ರ ರಹಸ್ಯಾ ಯತ್ಕಥಿತಂ ಖುರಳಿಗ್ರುಹೇ ॥
ತತ್ಸರ್ವಂ ತವ ಭೂಪಾಲಾ ಜನಮೇಜಯ ತತ್ಪರಃ ।
ಮಯಾಗಧಿತಮಿತ್ತೇವಂ ಸವೈಶಂಪಾಯನೋಬ್ರವೀತು ॥ × ×
ಯಿತಿಶ್ರೀಮದ್ಭಾರತೇ ಆದಿಪರ್ವಣಿ ಖಡ್ಗಶಾಸ್ತ್ರ ಪ್ರಶಂಸಾಯಾಂ ಪಂಚದಶೋಧ್ಯಾಯಃ। ಮಂಗಳಮಹಾ ಶ್ರೀ ।

ವಿಷಯ : ಮಲ್ಲವಿದ್ಯೆ, ಧನುರ್ವಿದ್ಯೆ, ಕತ್ತಿವರಸೆ ಇತ್ಯಾದಿ.

ವಿಶೇಷ : ಆರಂಭದಲ್ಲಿ ವಿಷಯಾನುಕ್ರಮಣಿಕೆಯಿರುವ ಒಂದು ಪ್ರತ್ಯೇಕ ಪತ್ರವಿದೆ. ಕ್ರಮಾಂಕದಲ್ಲಿ ೪೪ ಎನ್ನುವ ಸಂಖ್ಯೆ ಎರಡಾವರ್ತಿ ಬಂದಿದೆ.

375

ಕೆ.ಎ. ೪	**ಗಗನ ತಾರಾವಳಿ**	ಭಾಮಿನೀಷಟ್ಪದಿ
೧೩.೪″ × ೮.೫″	ನಿರಂಜನಾವಧೂತ	ಸು. ೧೬೦೦
೧–೨೦ ಪುಟ	೧೯ ಪಂಕ್ತಿ	೨೬ ಅಕ್ಷರ

ಆದಿ : ಶುಭಮಸ್ತು ಗಗನತಾರಾವಳಿ ಗ್ರಂಥ × × × ಭಾಮಿನೀಷಟ್ಪದೀ
ಸೂಚನೆ ॥ ಶ್ರೀ ಮಹಾಗುರು ಗಗನ ಬ್ರಹ್ಮವು
ಶ್ರೀ ಮಹಾಗುರು ಗಗನ ವಿಷ್ಣುವು
ಶ್ರೀ ಮಹಾಗುರು ಗಗನ ಈಶ್ವರ ಗುರುಪರಬ್ರಹ್ಮ ॥ ಪಲ್ಲವಿ ॥
ಶ್ರೀ ಮಹಾಗುರು ಗಗನರೂಪಗೆ
ಆ ಮಹಾ ಗಗನದಲಿ ಬೆಳಗುವ
ಸೋಮರವಿತಾರಾ ಸಮೂಹವ ಬೆರಸಿ ಸರಗೊಳಿಸಿ
ನೇಮಿಸಿಯೆ ಕಂಠಾಭರಣದಂ
ತಾ ಮಹಾಗುರು ಧರಿಪ ವ್ಯೋಮ
ಸುಖಸಾರ ನಿರುಪಮ ಗಗನ ತಾರಾವಳಿಯ ವಿರಚಿಸಿದಾ ॥ ೧ ॥

ಅಂತ್ಯ : ದೆಶೆಯು ಬೆಳಗುವ ದಿವ್ಯಕಾಂತಿಯು
ಕುಸುಮಶರಪಿತ ಬಿಸಜಸಂಭವ
ಅಸಮಲೋಚನರೊಂದುಗೂಡಿದ ಚಂದಸುಂದರದಾ
ಮಂದಹಾಸದ ಮುಖೇಂದು ಬಿಂಬ
ಚಿದಂಬರಾತ್ಮಪರಾತ್ಮ ಗುರು ಗಗ
ನಾಂಬ ಮೂರುತೀ ನೋಡಿದನು ಕಾರುಣ್ಯದೃಷ್ಟಿಯಲಿ ॥ ೧೨ ॥

ವಿಷಯ : ಗಗನಗುರುವಾದ ಈಶ್ವರನ ಮಹಿಮೆ ಹಾಗೂ ವೇದಾಂತ ವಿಚಾರ.

ವಿಶೇಷ : ಪ್ರತಿ ಸಂಧಿಯ ಅಂತ್ಯದಲ್ಲಿ "ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಗಗನಾನಂದ ಗುರುವರ್ಯ ಪಾದಕಮಲ ಭೃಂಗಾಯ ಮಾನಾಪಹವಾಹಿ ನಿರಂಜನಾವಧೂತ ವಿರಚಿತಮಪ್ಪ ಗಗನತಾರಾವಳೀ ಗ್ರಂಥೆ ಗಗನಗುರು ನಿರಂಜನಾವಧೂತ ಸಂವಾದೇ ವೇದಾಂತ ಪ್ರಕರಣೇ" ಎಂದಿದೆ. ೧೨ನೆಯ ಪದ್ಯದಲ್ಲಿ ಪೂರ್ವಾರ್ಧಕ್ಕೂ ಉತ್ತರಾರ್ಧಕ್ಕೂ ಪ್ರಾಸದಲ್ಲಿ ವ್ಯತ್ಯಾಸವು ಕಾಣ ಬರುತ್ತದೆ.

376

ಕೆ. ೨೦೭/೬	**ಗಂಗೆಗೌರೀವಾದ**	ಹಾಡು
೬.೬″ × ೧″	ದೇವಣಾಚಾರ್ಯ	?
೮೪–೮೯ ಪತ್ರ	[illegible] ಪಂಕ್ತಿ	೨೭ ಅಕ್ಷರ

ಆದಿ : ಗಂಗೆಗೌರೀ ವಾದಾ ॥
ಬ್ಯಾಡವೆಲೆ ಗಂಗೆಯೆಂನೊಳು ಗರ್ವ ನಿಂನ ಗುಣ
ಆಡಿದರೆ ಹುರುಳಿವೆ ಶಿವನಾ
ಯಿಂತ್ರಾ ಗಾಡಿಕಾರನ ನೆಚ್ಚಸಲ್ಲಾ
ಮಸಣ ಗಾಡಿನೊಳು ಹೊರಗಿರುವಲ್ಲಾ
ತಲೆ ವೋಡಿನೊಳು ತಿರಿದುಂಬ ಬಲ್ಲಾ
ಜಾಡಿ ಪುಲಿದೊಗಲುಟ್ಟು ಮುಪ್ಪುರವನೆ ಸುಟ್ಟು
ಕುಲಗೇಡಿಯೊಳು ಸೋತುಬಂದೆ ಗಂಗೆ ಬ್ಯಾಡವೆ ॥ ೧ ॥

ಅಂತ್ಯ : ಪರಶಿವನು ಪಾರ್ವತಿಯು ಜರಿದು ಪುತ್ರನ ಕರದು
ಕರಿಮುಖನ ಗೌರಿ ಕೈಗಿತ್ತು
ಯಿರ್ವರಿಗೆ ಪರಮಜ್ಞಾನದ ಭೋಗವಿತ್ತು

ಗುರುದೇವಣಾಚಾರ್ಯನುರದನುರೊಂದರನು
ಹರಮೆಚ್ಚಿ ಯಿಷ್ಟಾರ್ಥದವನೀವಾ
ತೀರಿತೇ ಕಲಹವೆಮಗೆ ॥ ೨೦ ॥ ಶ್ರೀ ಶ್ರೀ ಶ್ರೀ

ವಿಷಯ : ಗಂಗೆ ಗೌರೀ ವಾದ.

ವಿಶೇಷ : ಈ ಗ್ರಂಥದೊಡನೆ ಹಾಡುಗಳು, ಐರಾವತದ ಚೌಪದ ಮೊದಲಾದ ಇತರ ೮ ಗ್ರಂಥಗಳಿವೆ.

377

ಕೆ. ೨೧೪	ಗಂಗೆಗೌರೀ ಸಂವಾದ	ಯಕ್ಷಗಾನ
೮.೬" × ೧.೪"	?	?
೧–೭೫ ಪತ್ರ	೮ ಪಂಕ್ತಿ	೫೦ ಅಕ್ಷರ

ಆದಿ : ಗಂಗೆ ಗೌರಿಯ ಸಂವಾದವಂನು ಬರೆಯುದಕ್ಕೆ ಶುಭಮಸ್ತು ॥ ಶ್ರೀ ಕಲ್ಯಾಣವೆಂಬ ಪಟ್ಟಣದಲ್ಲಿ ಪರಮಗ್ನಾನಿ ಶಕ್ತಿಯಹಂತಾ ನೀಲಲೋಚನೆ ತನ್ನ ಪುರುಷ ಬಸವೇಶ್ವರದೇವರಿಗೆ ನಿರೂಪಿ ಪೇಳ್ದ ಗಂಗೆಗೌರಿ ಸಂವಾದ ವರ್ನ್ನವಚನ ಸಂಗೀತ್ಯ ಪದಕ್ಕೆ ಶುಭಮಸ್ತು ॥

ಕಂದ ಪದ್ಯ ॥ ಅಂಭಾರದ ಗಂಗೆಯು....ಬೊ....ರೂಪನೆ ಮಾಡಿ
ಅಂಬಿಗರ ಶರಣಾತ್ಮಜೆಯೆನಿಸುತ್ತಂ
ಕುಂಬಿನಿಗೆ ಚೋದ್ಯವೆಂದೆನಿಪ ಶಿವನು
ಹಂಬಲಿಸಿ ತಂದ ಹರುಷಾಬ್ಧಿ ಕಥೆಯಂ ॥ ೧ ॥

ಅಂತ್ಯ : ನಯವಾಗಿ ಕರಸ್ಥಲದಲಿ ನಿಂತೆನ್ನ
ಮಾಯಾಪಾಶಗಳ ಕಂಡಿಸಿ
ದಯ ಕರುಣ ಕೃಪೆಯಿಟ್ಟು ರಕ್ಷಿಸುವ ಗುರುರಾಯ
ಜಯ ಸಂಗಮೇಶ ಗುರುವೆ ॥ ೧೦ ॥

ಕಂದ ॥ ಸರ್ವಕರ್ಮ್ಮವಿ........
ಸರ್ವಸಂಗ ವಿವರ್ಜಿತಂ
ಸರ್ವಮಯಂ ಶಾಂತಂ ಪಾಹಿಮಾದೊಂದ್ಗುರ ದೇವಯೋ ॥ ೧೧ ॥

ಅಂತು ಸಂಧಿ ೯ಕಂ ಪದನು ೧೨೫ಂಕ್ಕೆ ಮಂಗಳಮಹಾ ಶ್ರೀ ॥

ವಿಷಯ : ಗಂಗೆಯನ್ನು ಶಿವನು ತಂದ ಬಗೆ, ಗಂಗೆಗೌರಿಯರ ವಾಗ್ವಾದ ಮತ್ತು ದಕ್ಷನ ವೃತ್ತಾಂತ.

ವಿಶೇಷ : ಗ್ರಂಥ ಕೊಂಚಮಟ್ಟಿಗೆ ಶಿಥಿಲವಾಗಿದೆ. ಪತ್ರಗಳು ಮುರಿದಿವೆ. ಅಲ್ಲಲ್ಲಿ ತ್ರುಟಿತ. ೧೦ ರಿಂದ ೧೧ನೆಯ ಪತ್ರದ ಮಧ್ಯದಲ್ಲಿರುವ ೮ ಪತ್ರಗಳು ಬೇರೆ ಗ್ರಂಥಕ್ಕೆ ಸಂಬಂಧಿಸಿವೆ. ೨೦ ನೆಯ ಪತ್ರ ತುಂಡಾಗಿದೆ. ಗ್ರಂಥಾಂತ್ಯದಲ್ಲಿ " ಶೋಭನ ಸಂವತ್ಸರದ ಸ್ರಾವಣ ಭೌಳ ೮ ಮಿಯ ಗುರುವಾರದ್ದಿವಸ ಹೆಡ ತಲೆಯ ತಂಮಡಿ ಸುಬ್ಬೈಯ್ಯನವರ ಮಗ ಗಂಗೌರಿಯ ಸಂವಾದವನ್ನು ಒರೆದು ಹೆಚ್ಚಿತ್ತು ಮಂಗಳಮಹಾ ಶ್ರೀ ಶ್ರಿ ಶ್ರೀ " ಎಂದಿದೆ.

378

ಕೆ. ೯೨/೧	ಗಜೇಂದ್ರಮೋಕ್ಷ	ಭಾಮಿನೀಷಟ್ಪದಿ
೧೫.೮" × ೧.೩"	?	?
೮ ಪತ್ರ	೮ ಪಂಕ್ತಿ	೮೭ ಅಕ್ಷರ

ಆದಿ : ಗಜೇಂದ್ರಮೋಕ್ಷವ ಬರವುದಕ್ಕೆ ನಿರ್ವಿಘ್ನಮಸ್ತು ॥
ಶಾಪವಶದಲಿ ಗಜವೆನಿಸಿ ವರ
ಭೂಪನಿಂದ್ರದ್ಯುಮ್ನನೆಂಬ ಮ
ಹಾಪುರುಷನೆಸದನು ತ್ರಿಕೂಟ ಗಿರೀಂದ್ರ ಶಿಖರದಲಿ ॥ ಪಲ್ಲ ॥
ಅರಸ ಕೇಳಾ ಪಾಂಡ್ಯದೇಶದ
ಧರಣಿಪತಿ ಧರ್ಮಾತ್ಮನೆಸದನು
ಧರೆಯಲಿಂದ್ರದ್ಯುಮ್ನನೆಂಬಭಿಧಾನವನು ಪಡದು
ಪರಮ ವಿಷ್ಣುವ್ರತಪರಾಯಣ
ನುರುಗುಣಾಂಬುಧಿ ನಿಯಮಿತಾಂತಃ
ಕರಣನಚ್ಯುತಗೋತ್ರ ನಿರತನಮೋಘ ಚಾರಿತ್ರಾ ॥ ೧ ॥

ಅಂತ್ಯ : ಕೇಳಿದಡೆ ದುಸ್ವಪ್ನನಾಶನ
ಪಾಲಿಸಿದಮಘಕುಲ ವಿನಾಶನ
ವೇಲಿ ದಿಠದಿಂದೊಂಮೆ ಕೇಲಲು ಮನವ ಮಾಡಿದಡೆ
ಆಲಯವ ಮಾಡುವನು ಲಕ್ಷ್ಮಿಕ್ರೀ
ಲೋಲನವರೊಲಗೊಲಿದು ತ್ರಿಭುವನ
ಪಾಲಕನು ನಿತ್ಯಾತ್ಮ ಕೃಷ್ಣನಶೇಷ ಜನಬಂಧು ॥ ೪೦ ॥

ಅಂತು ಸಂಧಿ ೪ ಕ್ಕಂ ಮಂಗಲ ಮಹಾಶ್ರೀ × × ×
ವಾಸವಬ್ರಂಹ್ಮಾದಿ ವಿಬುಧರು
ವಾಸುದೇವನ ಪದಕೆ ತ್ರಿಭುವನ
ದಾಸರನು ಬಿಂನ್ನೈಸಿದರು ಸಾಷ್ಟಾಂಗದಲಿ ನಮಿಸೀ ॥ ಶ್ರೀ

ವಿಷಯ : ಗಜೇಂದ್ರಮೋಕ್ಷದ ಕಥೆ.

ವಿಶೇಷ : ನಾಗರಿಲಿಪಿ. ಅಸಮಗ್ರಪ್ರತಿ. ಇದೇ ಕಟ್ಟಿನಲ್ಲಿ ಜನವಶ್ಯ (ಮದನತಿಲಕ) ವೆಂಬ ಮತ್ತೊಂದು ಗ್ರಂಥವಿದೆ.

379

ಕೆ. ಬಿ. ೧೩೪/೧	**ಗಜೇಂದ್ರಮೋಕ್ಷ**	ಯಕ್ಷಗಾನ
೭.೭" × ೬.೩"	ಸುಬ್ರಹ್ಮಣ್ಯ	ಸು. ೧೮೫೦
೧–೨೩ ಪತ್ರ	೧೫ ಪಂಕ್ತಿ	೨೪ ಅಕ್ಷರ

ಆದಿ: ಭಾಗವತ ಗಜೇಂದ್ರಮೋಕ್ಷ ಯಕ್ಷಗಾನ ನಾಟ್ಕ ಬರಿಯುವದಕ್ಕೆ ನಿರ್ವಿಘ್ನ ಮಸ್ತು ॥ ನಾಂದೀ ॥ ಶ್ರೀರಸ್ತು ॥
ಶ್ರೀ ಶೇಶಾದ್ರಿ ನಿವಾಸಂ। ರವಿ ಶತಭಾಸಂ । ಸುಂದರಂ ನಾರಾಯಣಂ।
ಈಶಾರಾಧಿಸುರೌಘವಂದಿತಪದಂ ವೃಂದಾವನಂ ಪಾಲನಂ
ತೋಷಂ ಭಕ್ತಜನಾರ್ಚಿತಂ । ಹರಿಪದಂ । ಮಂದಸ್ಮಿತಂ ಮಾಧವಂ
ಪಾಶಂ ತ್ರಿಭುವನೈಕ್ಯವೀರಸದೃಶಂ । ವಂದೇ ಸದಾ ವೆಂಕಟಂ ॥ ೧ ॥

ಅಂತ್ಯ : ಭಾಮಿನೀ ॥ ಭರದಿ ಪೇಳಿದ ಭಾಗವತದೊಳು
ವರಗಜೇಂದ್ರಗೆ ಮೋಕ್ಷವಿತ್ತುದ
ನರಿತುಮಾಡಿದೆ ಪರಮಪುರುಷನ ದಯದಿ ನಾನಿ
ಕರುಣಸಿಂಗರ ದುರಿತಭಂಜನ
ಶರಣರಕ್ಷಕ ನರಕಮೋಚನ
ಗರುಡವಾಹನ ಶರಣುಹೊಕ್ಕೆನು ಸಲಹು ಕರುಣದಲಿ ॥ ೨೫೪ ॥

× × × ×

ಮಂಗಳಂ ಶ್ರೀ ಮಂಜುನಾಥನಿಗೆ
ಜಯಮಂಗಳಂ ಗಜಮುಖರೂಪನಿಗೆ ॥ ೨೬೨ ॥
ಮಂಗಳಂ ಶೇಷಗಿರೀಶನಿಗೆ
ಜಯಮಂಗಳಂ ಶ್ರೀವೆಂಕಟೇಶನಿಗೆ ॥ ೨೬೩ ॥
ಸಂಪೂರ್ಣಂ.

ವಿಷಯ : ಪಾಂಡ್ಯದೇಶದ ಭೂವರನಾದ ಇಂದ್ರದ್ಯುಮ್ನನು ಅಗಸ್ತ್ಯರ ಶಾಪಕ್ಕೊಳಗಾಗಿ ಗಜನಾಗಿ ಹುಟ್ಟಿ ಮೊಸಳೆಯಿಂದ ಹಿಡಿಯಲ್ಪಟ್ಟು ಕಡೆಗೆ ಶ್ರೀ ಹರಿಯ ಕೃಪಾಕಟಾಕ್ಷದಿಂದ ಬಿಡುಗಡೆ ಹೊಂದಿದ ಕಥೆ.

ವಿಶೇಷ : ಗ್ರಂಥವು ಸುಭದ್ರವಾಗಿದ್ದರೂ ಪತ್ರದ ಅಂಚಿನಲ್ಲಿ ಮಾತ್ರ ಹುಳು ತಿಂದಿದೆ. ಈಗ್ರಂಥವು ಮೈಸೂರರಸರಾದ ಶ್ರೀಕೃಷ್ಣರಾಯರ ಕಾಲದಲ್ಲಿ ಬರೆಯಲ್ಪಟ್ಟಿದೆ. ಈ ಗ್ರಂಥದೊಡನೆ ಶ್ರೀಕೃಷ್ಣಗೋವರ್ಧನವೆಂಬ ಮತ್ತೊಂದು ಯಕ್ಷಗಾನ ಗ್ರಂಥವಿದೆ.

380

ಕೆ. ೪೫೨	**ಗಣದಾಸಿವೀರಣ್ಣನವರ ವಚನ**	ವಚನ
೧೦" × ೨.೧"	ಗಣದಾಸಿವೀರಣ್ಣ	ಸು. ೧೬೦೦
೧–೨೩ ಪತ್ರ	೯ ಪಂಕ್ತಿ	೩೮ ಅಕ್ಷರ

ಆದಿ : ಶ್ರೀಗುರು ಪರಬ್ರಂಹ್ಮಣೇ ನಮಃ ‖ ಶ್ರೀಗುರುಭ್ಯೋಂ ನಮಃ ‖ ರಾಕ್ಷಸನಾಮ ಸಂವತ್ಸರದ ಆಷಾಢ ಶು ೧ ಯಲ್ಲು ಗಣದಾಶಿ ವೀರಂಣನವರ ವಚನ ಬರೆಯುವುದಕ್ಕೆ ನಿರ್ವಿಘ್ನಮಸ್ತು ‖ ಗುರುವೆ ಪರಶಿವನು । ಗುರುವೆ ಸಕಲಾಗಮಂಗಳ ಮೂರ್ತಿ । ಗುರುವೆ ಸಕಲ ವಿದ್ಯಾಸ್ವರೂಪವೂ । ಗುರುವೆ ಸಕಲಮಂತ್ರ ಸ್ವರೂಪನೂ । ಗುರುವೆ ಕಾಮಧೇನು । ಗುರುವೆ ಕಲ್ಪವೃಕ್ಷ । ಗುರುವೆ ಪರುಷದ ಕಣಿ । ಗುರುವೆ ಕರುಣಾ ರಸಾಬ್ದಿ । ಗುರುವಿನಿಂದಧಿಕ ದೈಯ್ವವಿಲ್ಲಾ । ಸರ್ವಧ್ಯಾನಕ್ಕೆ ಗುರು ಧ್ಯಾನವೆ ಅಧಿಕಾ । ....ರುವಿನ ಮಂತ್ರಕೆ ಅಧಿಕ ಗುರುವಿನ ವಾಕ್ಯವೆ ಅಧಿಕ । ಸರ್ವ ಮುಕ್ತಿಗೆ ಗುರುವಿನ ಕೃಪೆಯೆ ಅಧಿಕ ‖ ಸಾಕ್ಷಿ ‖ ಧ್ಯಾನಮೂಲೋ ಗುರೋ ಮೂರ್ತಿಪೂಜೆ ಮೂಲೋ ಗುರೋಪದಂ ಮಂತ್ರ ಮೂಲೋ ಗುರೋವಾಕ್ಯ ಮುಕ್ತಿಮೂಲೋ ಗುರುಕ್ರುಪಾ ‖ ಯಂದುದಾಗಿ × × × ಯಿಂತಿ ಅಷ್ಟಾವರ್ಣ ಸ್ವರೂಪವ । ಯಂನೊಳಗೆ ತಂನ ಕರುಣ ಕ್ರುಪೆಯಿಂದಾ । ತೋರಿದಾತನು ನಂಮ್ಮ ಶಾಂತ ಕೂಡಲಸಂಗಮದೇವಾ ಸಕಲಾಗಮಂಗಳಿಗೆ ಅತೀತನೂ ‖ ೧ ‖

ಅಂತ್ಯ : ‖ ೩೫ ‖ ನಿರಾಕಾರ ಪರಾವಸ್ತು ಹ್ಯಾಗೆಯಂದ × × × × ಯಲೆಗಳದ ವೃಕ್ಷದಂತೆ । ನೊರೆಫೆರೆಗಳಿಲ್ಲ । ಬುದ್ಬುದಾಕಾರವಡಗಿದ ಸಮುದ್ರದಂತೆ ಭಕ್ತನು ಮಹೇಶ್ವರನೊಳಗಡಗಿ ಶರಣನು ಐಕ್ಯನೊಳಡಗಿ । ಐಕ್ಯನು ನಿರ್ವಯಲಡೊಳಡಗಿ । ನಿರ್ವಯಲ ಕೂಡಿದಂತ್ತೆ ಜೋತಿ ಜೋತಿಯ ಕೂಡಿ ಆ ಬಯಲು

ಬಯಲು ಕೂಡಿ। ಚಿದ್ಬಯಲನಿಂದ ನಿಲವು ಲಿಂಗದೊಳರುಹಿಡ ಮುವ್ವತ್ತಾರು ವಚನಂಗಳ ವೋದಿದವರು ಕೇಳಿದವರು ಸದ್ಯೋನ್ಮುಕ್ತರಪ್ಪರೂ। ತಪ್ಪದೂ। ಯಂದಾತ ನಂಮ್ಮ ಶಾಂತ ಕೂಡಲಸಂಗಮದೇವಾ ॥೩೬॥ ಯಿಂತು ಗಣದಾಶಿ ವೀರಂಣನವರು ನಿರೂಪಿಸಿದ ವಚನಾ॥

ವಿಷಯ : ವೀರಶೈವ ಸಿದ್ಧಾಂತ.

ವಿಶೇಷ : ಜನೆಯ ಪತ್ರದ ಸ್ಥಾನದಲ್ಲಿ ಕ್ರಮಸಂಖ್ಯೆಯಿಲ್ಲದ ೨ ಪತ್ರಗಳಿವೆ. ೨೨ ಮತ್ತು ೨೫ ಈ ವಚನಗಳಲ್ಲಿ ಕೈತಪ್ಪಿ 'ಕೂಡಲಸಂಗಮದೇವಾಂಕಿತವು' ನಯಶಾಂತ ಕೂಡಲಸಂಗಮದೇವಾಂಕಿತಕ್ಕೆ ಬದಲಾಗಿ ಬಿದ್ದಿರಬಹುದು. ಪ್ರತಿಯ ಆದಿಯಲ್ಲಿ ಪ್ರತಿಕಾಲ ಬರೆದಿದ್ದರೂ 'ವಾರ'ವಿಲ್ಲದ್ದರಿಂದ ಕಂಡು ಹಿಡಿಯಲು ಶಕ್ಯವಿಲ್ಲ.

381

ಕೆ. ೧೬೬/೩	**ಗಣಭಾಷ್ಯರತ್ನಮಾಲೆ**	ವಚನ
೧೨.೯" × ೨.೧"	ಗುಬ್ಬಿಯ ಮಲ್ಲಣ್ಣ	೧೪೭೫
೧೪೪–೨೧೪ ಪತ್ರ	೧೬ ಪಂಕ್ತಿ	೮೦ ಅಕ್ಷರ

ಆದಿ : ಭಾಷ್ಯರತ್ನಾಮಾಲೆ ॥

ಕಂದ॥ ಶ್ರೀ ಗುರುವೆ ಪರಮಗುರುವೆ ಮ
ಹಾಗುರುವೆ ನಿಂಮ್ಮ ಕೃಪೆಯೊಳುಂ ಪರಮಾಮೃತ
ಸಾಗರಮೆಂಬವೊಲಿದನು
ದ್ಯೋಗಿಸಿದೆಂ ಶಾಸ್ತ್ರ ವಚನ ಸಂಮತದಿಂದ ॥ ೧ ॥
ಇದು ಶ್ರೀಮದನಿರ್ವಾಚ್ಯಸ್ವರೂಪನಪ್ಪ

ಅಂತ್ಯ : ॥ ೬ ॥ ಯಿತಿ ಶ್ರೀಮದಸಂಖ್ಯಾತ ಪುರಾತನ ಗಣಭಾಷಿತರತ್ನಮಾಲಾಯಾಂ ಸದ್ಭಕ್ತಮಹಾತ್ಮೆಯ ಸ್ಥಲಸಮಾಪ್ತ ॥ ಯೀ ಪ್ರಕಾರದಿಂ ಬ್ರಹ್ಮವಿಷ್ಣ್ವಾದಿ ದೇವದಾನವ ಮಾನವರು ಮೊದಲಾದ ಸಮಸ್ತ ದೇಹಿಗಳೊಳಗೆ ಪರಮ ಶಿವ ಸದ್ಭಕ್ತರುಗಳೆ ಘನಮಹಿಮೆಯುಳ್ಳವರೆಂಬುದಂ ಪ್ರತಿಷ್ಟೆಯಂ ಮಾಡಿ ನುಡಿದಮ್ಮರ್ಹಾ ಪುರಾತನರೂ ॥ ಯಿಂತಿ ಅಂಗಸ್ಥಲ ೪೪ಕ್ಕಂ ಸೇರಿದ ಗ್ರಂಥ ೨೩೬ ವಚನ ೨೨೬ ಲಿಂಗಸ್ಥಲ ೪೫ ನಿರಂಗಸ್ಥಲ ೧೨ ಅಂತೂ ಸ್ಥಲ ನೂರೊಂದು

ಲಿಂಗಸ್ಥಲಕ್ಕೆ ಸೇರಿದ ಗ್ರಂಥ ೨೪೬ ವಚನ ೨೬೪ ವುಭಯಂ ಗ್ರಂಥ ೪೮೩ ವಚನ ೪೯೧ಕ್ಕಂ ಮಂಗಳ ಮಹಾ ಶ್ರೀ ಶ್ರೀ ಶ್ರೀ ಗುರುಬಸವಲಿಂಗಾಯ ನಮಃ ॥ ಯಿಂನು ಫಲಶ್ರುತಿ ॥ ಶಿವಧರ್ಮ್ಮೆ ॥ ಅಂಶಂಪೂಜ್ಯಂ × × × ಗುಬ್ಬಿಯ ಮಲುಹಣಯ್ಯಗಳು ಶಿವಗಣಂಗಳ ಶಿವಾನುಭಾವ ಸ್ತೋತ್ರವಂ ಮಾಡಿ। ಶಿವಗಣಂಗಳ ಮುಖಕ್ಕೆ ನಿರ್ಮಳದರ್ಪಣವೆನೆ ಸಮರ್ಪಿಸಿದೆನು ॥

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಸಮಗ್ರ. ಪತ್ರ ೯೯ರನಂತರ ಪತ್ರಸಂಖ್ಯಾ ೧೦೦ರಿಂದಾರಂಭವಾಗಿದೆ ಯಾದರೂ ವಿಷಯ ವ್ಯತ್ಯಾಸವಿಲ್ಲ. ೧೦೦ನ್ನು ೨೦೦ ಎಂದು ಪರಿಗಣಿಸಿ ಲೆಕ್ಕ ಹಾಕಿಕೊಂಡಲ್ಲಿ ಎಲ್ಲವೂ ಸರಿಹೋಗುತ್ತದೆ. ಗ್ರಂಥದ ಒಳಭಾಗಗಳಲ್ಲಿ 'ಗಣ ಭಾಷ್ಯರತ್ನಮಾಲಾ' ಎಂದು ಬರೆದಿರುತ್ತದೆ. ಇದರೊಂದಿಗೆ ಷಡುಸ್ಥಲ ತಾಮಸಗುಣದ ಅನುಭಾವದ ವಚನಗಳು, ಷಟ್‌ಪ್ರಕಾರ ಸಂಗ್ರಹ ವೊದ ಲಾದ ಇತರ ೩ ಗ್ರಂಥಗಳಿವೆ.

382

ಕೆ. ಬಿ. ೩೭೩	**ಗಣಭಾಷ್ಯರತ್ನಮಾಲೆ**	ವಚನ
೮.೬" × ೬.೫"	ಗುಬ್ಬಿಯ ಮಲ್ಲಣ್ಣ	೧೪೭೫
೧—೨೧೯ ಪತ್ರ	೨೪ ಪಂಕ್ತಿ	೧೮ ಅಕ್ಷರ

ಆದಿ : ಶ್ರೀರಸ್ತು ॥ ಕ್ರೋಧಿನಾಮ ಸಂವತ್ಸರದ ಕಾರ್ತೀಕ ಶುದ್ಧ ಅಷ್ಟಮಿಯ ಕುಜ ವಾರದಲ್ಲಿ ಗಣಭಾಷ್ಯರತ್ನಮಾಲೆ ಬರೆಯಲು ಶುಭಮಸ್ತು. ಶ್ರೀ ಸಾಂಬಸದಾ ಶಿವಾಯನಮಃ ನಿರ್ವಿಘ್ನಮಸ್ತು.

ಕಂ ॥ ಶ್ರೀ ಗುರುವೆ ಪರಮಗುರುವೆ ಮ
ಹಾ ಗುರುವೆ ನಿಂಮ ಕೃಪೆಯೊಳು ಪರಮಾಮೃತ
ಸಾಗರವೆಂಬವೋಲಿದನು
ದ್ಯೋಗಿಸಿದೇಂ ಶಾಸ್ತ್ರವಚನ ಸಂಮತದಿಂದಂ ॥ ೧ ॥

× × × ×

ನೂರೊಂದು ಸ್ಥಳವಾಗೆ ಶೇರಿಸಿದ ಹರಶರಣರಣುಗಂ ಗುಬ್ಬಿಯ ಮಲ್ಲಂಣಗಳು ಮಾಡಿದ। ಭಾಷ್ಯರತ್ನಮಾಲೆಯ ಪ್ರಥಮದಲ್ಲಿ ಅನುಭವ ಸ್ಥಳ ॥ ಶಿವರಹಸ್ಯ ದಲ್ಲಿ ॥ ಅನುಭವಸ್ತಲಾ ॥

ದಿನೇ ದಿನೇ ವಿಶೇಷಂ ಚ ಮಾಸೇ ಮಾಸೇ ಮಹದ್ಧನೇ |
ವತ್ಸರಸ್ಯ ಮಹಶ್ಫೋದ್ಯಂ ಮದ್ಭಕ್ತಸ್ಯ ಚ ಲಕ್ಷಣಂ || ೧ ||

ಅಂತ್ಯ : ಮನೋರತಿಯಿಂದ ಹೇಳಿದಡೆ ಕೇಳಿದಡೆ ಪರಸಿದಡೆ ಚತುರ್ವಿಧ ಪದವ ಪಡೆವರು × × × ಗಣಭಾಷ್ಯರತ್ನಮಾಲಾಯಾಂ ಸಮಾಪ್ತ ಮಂಗಳ ಮಹಾಶ್ರೀ ಈ ಪುಸ್ತಕವು ೯೦೫-೧-ಲರಲ್ಲೂ ಬರದ್ದು ಪೂರೈಸಿರುತ್ತೆ. (ಕ್ರೋಧಿನಾಮ ಸಂವತ್ಸರದ ಪುಷ್ಯ ಶುದ್ಧ ೩ಯಲ್ಲು ಸಂಪೂರ್ಣವು || ನಂಜನ್‌ಗೂಡು ತಾಲ್ಲುಕು ಕಳಲೆಯಲ್ಲಿರುವ ವರಕೋಡು ಪ್ರೈ || ಮಾ || ಸಿದ್ದಪ್ಪನ ಪುಸ್ತಕವೂ)

ವಿಷಯ : ಷಟ್ಸ್ಥಲ ಸಿದ್ಧಾಂತ.

ವಿಶೇಷ : ಗ್ರಂಥವು ಶ್ಲೋಕ, ಟೀಕು, ವಚನಗಳನ್ನೊಳಗೊಂಡಿದೆ. ಪ್ರತಿಕಾರನ ವಿವರ ಮತ್ತು ಕಾಲ ಆದಿ ಅಂತ್ಯಗಳೆರಡರಲ್ಲೂ ಬರುತ್ತವೆ. ಗ್ರಂಥದ ಆದಿಯ ೫ ಪುಟಗಳಲ್ಲಿ ವಿಷಯಾನುಕ್ರಮಣಿಕೆಯಿದೆ.

383

ಕೆ. ೩೪೬/೧	**ಗಣಸಹಸ್ರನಾಮ**	ಗದ್ಯ, ಪದ್ಯ
೫.೯" × ೧.೩"	ಪಾಲ್ಕುರಿಕೆ ಸೋಮನಾಥ	ಸು. ೧೧೯೦
೧-೨೩ ಪುಟ	೯ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಶಿವಾಯ ಗುರುಮೂರ್ತಯೇ ನಮಃ × × × ಗಣಸಹಸ್ರನಾಮ ಬರೆಯುವುದಕ್ಕೆ ಶುಭಮಸ್ತು ||

ಶ್ರೀ ಮಲ್ಲಿಕಾರ್ಜುನಾರ್ಯ್ಯಂ
ಧೀಮಂತ್ರನ ಪಾಪರಹಿತ ಗಣಸಂಕ್ಕುಳಮಂ
ಪ್ರೇಮದಿಂ ಸ್ತುತಿಪೇಂ
ಸಾವಿರ ನಾಮವ ಜಪವೆಂದು ಪೊಗಳ್ದು ವಿಸ್ತರಿಪೇಂ ||

ವ || ಓಂ ಪ್ರಮಥಗಣ ರುದ್ರಗಣ ಭಕ್ತ ಮಹಾಗಣ। ದಿವ್ಯನಾಮ ಸಂಕೀರ್ತನಮಂ |

ಅಂತ್ಯ : ವ || ಯೆಸವ ಗಣಸಹಸ್ರನಾಮಂಗಳ । ಪಸರಿಸಿದನು ಧರೆಯೊಳಗೆ | ಪಾಲ್ಕುರಿಕೆಯ ಸೋಮ ಶರಣನೊಪ್ಪುವ ಗಣ ಸಹಸ್ರನಾಮಂಗಳಮಂ ||

× × × ×

ಕಂ|| ಸುರತರುವಂ ಸುರಧೇನುಂ
ವರ ಚಿಂತ್ತಾಮಣಿಗಳೆಂದ್ದು ಪೇಳ್ವರು
ಹರಗಣನಾಮವ ಜಪಿಸಲು
ಬರದಿಂದಂ ಸಿದ್ಧಿಯಕ್ಕು ಶಿವಬಸವೇಶಾ
ಗಣಸಹಸ್ರನಾಮ ಸಮಾಪ್ತಂ ಮಂಗಳ ಮಹಾಶ್ರೀ.

ವಿಷಯ : ಗಣಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಶ್ರೀರುದ್ರವೆಂಬ ಇನ್ನೊಂದು ಸಂಸ್ಕೃತ ಕೃತಿ ಇದೆ.

384

ಕೆ. ಬಿ. ೨೮೯/೧	**ಗಣಸಹಸ್ರನಾಮ**	ಗದ್ಯ, ಪದ್ಯ
೬.೧" × ೩.೮"	ಪಾಲ್ಕುರಿಕೆ ಸೋಮನಾಥ	ಸು. ೧೯೯೦
೧–೪೩ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ಶ್ರೀ ಗುರುಸಂಗಮನಾಥ ಪ್ರಸಂನಾ ಗಣಸಹಸ್ರನಾಮ ಬರೆಯುವದಕ್ಕೆ ಶುಭಮಸ್ತು ಓಂ ಅಸ್ಯ ಶ್ರೀ ಶಿವಗಣಸಹಸ್ರನಾಮ ಮಹಾಮೂಲ ಮಂತ್ರಸ್ಯ ಭೃಂಗಿರುಷಿಃ × × ×

ತೀರ್ಥಪ್ರಸಾದ ನೇಮೆ ನಾರ್ಪಯಿತ್ರೇಷ್ಟಲಿಂಗೈಕ್ಯಪೀತಾ।
ನೇಷ್ಠೇ ನಪ್ರಚುರತರ ಪಾಲ್ಕುರಿಕೆ ಸೋಮೇಶ್ವರಃ ॥
ಭಕ್ತಪಾಲಕ ಸಹಸ್ರಗಣ ನಾಮಾವಳೀಂ ವಿಸ್ತಾರ ಯಾಮಿ।
ತಸ್ಯ ಶೀಲಶ್ರೀಮದಸಂಖ್ಯಾತ ಪ್ರಮಥಗಣೇಭ್ಯೋ ನಮಃ॥
ಶ್ರೀ ಮಲ್ಲಿಕಾರ್ಜುನಾರ್ಯಂ
ಧೀಮಂತಂ ಪಾಪರಹಿತಂ ಗಣಸಂಕುಳಮಂ
ಪ್ರೇಮದಿ ನುತಿಪೆನಾಂ ಸಾವಿರ
ನಾಮವ ಜಪವೆಂದು ಪೊಗಳ್ದು ವಿಸ್ತರಿಸಿದಪೆಂ ॥ ೧ ॥

ಅಂತ್ಯ : ಕಂ || ಯೆಸೆವ ಗಣಸಹಸ್ರ ನಾಮಂಗಳಿಂತು
ಪಸರಿಸಿದನು ಧರೆಯೊಳಗೆ ಪಾಲ್ಕುರಿಕೆ ಸೋಮಶರಣನೊಪ್ಪುವ
ಗಣಸಹಸ್ರನಾಮಂಗಳನಿತು ವುಸುರಿಸಿದ ಗುರುಭಕ್ತಿಯಿಂ।

ಮನ್ಮನದ ಸಂಚಲವಂ ತೊಲಗಿಸಿ
ಶಿವಾಂಘ್ರಿಯೊಳ್ ಬೆಚ್ಚಂತೆ
ನೆಲಸುಗೆಯೆಂದು ಆನಂದದಿಂ ವಂದಿಪೇಂ ॥

ಯಿಾ ಗಣಸಹಸ್ರನಾಮ ಸಂಖ್ಯಾಪೀಠಶಾಸ್ತ್ರವಮಂ ಪರಿಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಗಣಸ್ತುತಿ.

ವಿಶೇಷ : ಇದೇ ಪುಸ್ತಕದಲ್ಲಿ ಬಸವಲಿಂಗ ನಾಮಾಷ್ಟೋತ್ತರ, ಹಾಡುಗಳು, ಕಲ್ಯಾಣ ಪಟ್ಟಣದ ಮಾಹಾತ್ಮ್ಯ, ನುಲಿಯ ಚಂದಯ್ಯನ ಕಥೆ ಇವೆ.

385

ಕೆ. ೧೬೦/೧	**ಗಣಿತಸಾರ ಸಂಗ್ರಹ**	ಶ್ಲೋಕ, ಟೀಕು
೧೨.೧" × ೧.೨"	ಮಹಾವೀರಾಚಾರ್ಯ	?
೧–೨೪ ಪತ್ರ	೬ ಪಂಕ್ತಿ	೪೬ ಅಕ್ಷರ

ಆದಿ : ಶುಭಮಸ್ತು ॥ ಗುಣಿತ ॥

ಅಲಂಘ್ಯಂ ತ್ರಿಜಗತ್ಸಾರಂ ಯಸ್ಯಾನಂತ ಚತುಷ್ಟಯಂ।
ನಮಸ್ತಸ್ಮೈ ಜಿನೇಂದ್ರಾಯ ಮಹಾವೀರಾಯ ತಾಯಿನೇ ॥

ಆಪ್ತಾಭಾಸರಿನತಿಕ್ರಮಿಸಲ್ಪಡದ, ತ್ರಿಜಗತ್ಸಾರಂ–ಮೂಱು ಲೋಕದೊಳು ಶ್ರೇಷ್ಠಮಪ್ಪ,ಅನಂತ ಚತುಷ್ಟಯಂ–ಅನಂತ ಜ್ಞಾನಾದಿ ಚತುಷ್ಟಯಂ, ಯಸ್ಯ-ಆವನೊರ್ವ್ವ, ಪರಮೇಶ್ವರಂಗುಂಟು, ತಸ್ಮೈ–ಅಂತಪ್ಪ, ತಾಯಿನೇ–ತಂನ್ನಂ ಪೊರ್ದ್ದಿದ ವಿದಯಜನಕ್ಕಭ್ಯುದಯಾದಿ ಸುಖವನಿತ್ತು ಪಾಲಿಸುವ, ಜಿನೇಂದ್ರಾಯ–ಸಮ್ಯಗ್ದೃಷ್ಟಿಗಳ್ಗಾರಾಧ್ಯನಪ್ಪ, ಮಹಾವೀರಾಯ ವರ್ದ್ಧಮಾನ ಸ್ವಾಮಿಗೆ, ನಮಃ–ನಮಸ್ಕಾರಮಕ್ಕೆ ॥ ೧ ॥

ಸಂಖ್ಯಾಜ್ಞಾನ ಪ್ರದೀಪೇನ ಜಿನೇಂದ್ರೇಣ ಮಹತ್ವಿಷಾ।
ಪ್ರಕಾಶಿತಂ ಜಗತ್ಸರ್ವಂ ಯೇನತಂ ಪ್ರಣಮಾಯ್ಯಹಂ ॥ ೨ ॥

× × × ×

ಸಪ್ತತ್ರಿಂಶತ್ಸಾಗರಂ ಚ ಅಷ್ಟತ್ರಿಂಶನ್ಮಹಾಸಾಗರಂ।
ನವತ್ರಿಂಶಸಲ್ಯಮಿತಿಂ ಚ ಚತ್ವಾರಿಂ ಸನ್ಮಹಾಪತಿಃ ॥

ಇತಿ ಸಾರಸಂಗ್ರಹೇ ಗಣಿತಶಾಸ್ತ್ರೇ ಮಹಾವೀರಾಚಾರ್ಯ್ಯಸ್ಯ ಕೃತೌ ಸಂಜ್ಞಾಧ್ಯಾಯ ಸಮಾಪ್ತಃ ॥

ಅಂತ್ಯ: ಪಂಚಾಸ್ಯ ದೃಗುಣೋತ್ತರೇ ಶರಗಿರಿ ದ್ವ್ಯೆಕಪ್ರಮಾಣೇ ದನೇ
ಸಪ್ತಾದ್ಯ ತ್ರಿಗುಣೇ ನಗೇಭ ದುರಿತಸ್ತಂಭೇರಮರ್ತುಪ್ರಮೇ
ತ್ರ್ಯಾಸ್ಯೇ ಪಂಚಗುಣಾಹುತವಹೋ ಸೇಂದ್ರಾಕ್ಷವನ್ಹಿ ದ್ವಿಪ
ಶ್ವೇತಾಂಶುದಿರದೇಭ ಕರ್ಮ್ಮ ಕರದೃಗೋನೇನಗಚ್ಛಃ ಕಿಯಾನ್ ॥
×××× ಗಚ್ಛದೊಳಗೆ ೧ದಂ ಕಳದರೆ ೯ ಇದನು ಪುತ್ತರದರ್ಧ ೩೮೦
ಗುಣಿಸಲು ೨೭ನು ಆ ೩೩ಗೆ ಕಳೆಯಲು ೬ ಆದಿಯುಹುದು ॥ ಸಂಕುಲಿತ ಸಮಸ್ತ
ಸಮಾಪ್ತ ॥ ವೊಂದನಖುವತ್ತನಾಲ್ಕುಬಾರಿ ಯಿಂಮಡಿಸಿ ಕೂಡಿದ ಲೆಕ್ಕ ೧
ಆ ೧ ಗುಣೋತ್ತರೆ ೨ । ಗಚ್ಛ ೬೪ ಗುಣಸಂಕಲಿತದಲ್ಲಿ ಬಂದ ಲಬ್ಧ
೧೮೪೪೬೭೪೪೦೭೩೭೦೯೫೫೧೬೧೬ ॥

ವಿಷಯ: ವ್ಯಕ್ತಗಣಿತ.

ವಿಶೇಷ: ಅಸಮಗ್ರ ಪ್ರತಿ. ೧೭ನೆಯ ಪತ್ರ ಲುಪ್ತ. ಇದೇ ಕಟ್ಟಿನಲ್ಲಿ ರಾಜಾದಿತ್ಯನ ವ್ಯವಹಾರ ಗಣಿತ ಇದೆ. ಮೊದಲಲ್ಲಿ ಗಾಯಕ್ಕೆ ಎಣ್ಣೆಯನ್ನು ತಯಾರಿಸುವುದನ್ನು ತಿಳಿಸುವ ಒಂದು ಪತ್ರವೂ, ಕೊನೆಯಲ್ಲಿ ಸಂವತ್ಸರ, ಮಾಸ, ರಾಶಿಗಳ ಹೆಸರನ್ನು ತಿಳಿಸುವ ಪತ್ರಗಳೂ ಇವೆ.

386

ಕೆ. ೯೯	**ಗದಾಪರ್ವ**	ಭಾಮಿನೀಷಟ್ಪದಿ
೧೦.೪" × ೦.೯"	ಕುಮಾರವ್ಯಾಸ	ಸು. ೧೮೩೦
೧–೧೪೯ ಪತ್ರ	೮ ಪಂಕ್ತಿ	೫೦ ಅಕ್ಷರ

ಆದಿ: ಶುಭಮಸ್ತು । ಶ್ರೀ ಲಕ್ಷ್ಮೀ ಸಮೇತ ಶ್ರೀ ಬಿಳಿಗಿರಿ ರಂಗಾಯ ನಮಃ ॥ ಗಧಾ ಪರ್ವ ಬರೆವ ಪಸ್ತುಕಕ್ಕೆ ನಿರ್ವಿಘ್ನಮಸ್ತು ॥
ಸೂ ॥ ಶಲ್ಯನವಸಾನದಲಿ ಕೌರವ
ಮಲ್ಲ ರಣದಲಿ ಕಾದಿ ಮುರಳಿದು
ನಿಲ್ಲದಡಗಿದನಿತ್ತ ಸಂಜಯ ಬಂದನಾಹವಕೆ ॥
ಪದನೂ ॥ ಕೇಳು ಧೃತರಾಷ್ಟ್ರ.... ನಿಪ ಸಿರಿ
ಲೋಲಸಹಿತರ್ಜುನನು ಸೇನಾ
ಜಾಲವನು ಸಂತೈಸಿ ಧೊರೆ ಸುಯಿಧಾನವೆಂದೆನುತಾ
ಆಳೊ....ನೆ ಬೆರಸಿದನು ಕುರುಭೂ
ಪಾಲಕನ ತಟ್ಟಿನಲಿ ಶಸ್ತ್ರ
ಜ್ವಾಲೆಗಳ ತರಿದನು ಮೂದಲಿಸಿದನು ಭೂಪತಿಯಾ ॥ ೧ ॥

ಅಂತ್ಯ : ಸರ್ಪಯಗ್ಣದಲಾದ ಖರ್ಮ್ರದ
ದರ್ಪವನು ಕೆಡೆಯೊದದು ತೊಳಗಿದ
ನುಪ್ಪರದ ರವಿ ತೇಜದಲಿ....ಮಿ....ಬೆರಗಾಗೆ
ತಪ್ಪದೀ ಭಾರತವ ಕೇಳ್ದಂ
ಗೊಪ್ಪುದಮರೀ ಶ್ರೀಕದಂಬದೊ
ಳೊಪ್ಪುವಿಂದ್ರ ನವಾಡಿ ಮಿಗೆ ನರನಾಥಕೇ.... ॥ ೨೩ ॥

ಅಂತೂ ಸಂದ್ಧಿ ೧೩ಕಂ ಪದನೂ ೬೧೭ಕಂ ಮಂಗಳ ಮಹಾಶ್ರೀ ॥ ಶ್ರೀ ಕೃಷ್ಣಾಯ ನಮಃ ॥ ಯಿತಿ ಶ್ರೀಮದಚಿಂತ್ಯ ಗದುಗಿನ ವೀರನಾರಾಯಣನ ಚರಣಾರವಿಂದ ಮಕರಂ....ಪಾನ ಪರೀಕ್ಷಿದ್ವಚೋಪಟ್ಟದಿ ನಿಕಾಯ ಶ್ರೀ ಕುಮಾರವ್ಯಾಸ ಯೋಗೀಂದ್ರ ವಿರಚಿತಮಪ್ಪ ಕರ್ನಾಟಕ ಭಾರತ ಕಥಾ ಮಂಜರಿಯೊಳ್....ಮಾಪ್ತಂ ||

ವಿಷಯ : ಭೀಮ ಧುರ್ಯೋಧನರ ಗದಾಯುದ್ಧ.

ವಿಶೇಷ : ತ್ರುಟಿತ ಪ್ರತಿ.

387

ಕೆ. ಎ. ೫೦	**ಗದಾಯುದ್ಧ**	ಚಂಪು
೧೩" × ೭.೯"	ರನ್ನ	೯೯೩
೧—೧೨೮ ಪತ್ರ	೨೨ ಪಂಕ್ತಿ	೧೭ ಅಕ್ಷರ

ಆದಿ : ಶುಭಮಸ್ತು ॥ ನಿರ್ವಿಘ್ನಮಸ್ತು ॥ ರಂನ ಗದಾಯುದ್ಧ

ವೃ ॥ ಶ್ರೀಯುವತೀಪ್ರಿಯಂ ಬಲಯುತಂ ಬಲಿದರ್ಪಹರಂ ಜಿತಾರಿ ದೈ
ತೇಯನನಂತ್ತಭೋಗ ನಿಲಯಂ ಪ್ರತಿಪಾಲಿತ ಧರ್ಮಚಕ್ರನ
ಜ್ಜಾಯತನೇತ್ರನಾದಿಪುರುಷಂ ಪುರುಷೋತ್ತಮನೀ ಚಳುಕ್ಯನಾ
ರಾಯಣ ದೇವನೀಗೆಮಗೆ ಮಂಗಲಕಾರಣಮುತ್ಸವಂಗಳಂ ॥ ೧ ॥

× × × ×

ಕೃತಿ ನೆಗಳ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ
ಕೃತಿಯಂ ವಿರಚಿಸಿ ಸದಲಂ
ಕೃತಿಯಂ ಕವಿರತ್ನನೆಂದೊಡೇವಂಣಿಪುದೋ ॥ ೩೨ ॥

ಅಂತ್ಯ: ಕಂ॥ ಸಕಸವು ಗತಿ ರುತು ಯುಗ ಶಶಿ
ನಿಕರಾಂಕಂ ಚಿತ್ರಭಾನುಕಾರ್ತ್ತಿಕ ಶಿತ ಸಪ್ತಮಿ
ಸುಕರಂ ಬುಧಸೇವ್ಯಮಾಯ್ತು ರನ್ನನ ಕಾವ್ಯಂ ॥ ೩೫ ॥

ಗದ್ಯ ॥ ಇದು ಸಮ ಸಮಸ್ತ ಭುವನವಲ್ಲಭ ಶ್ರೀಮದಾಹವಮಲ್ಲದೇವ ಶ್ರೀ ಪಾದಕಲ್ಪಪಾದಪ ಛಾಯಾಶ್ರಯಾಸನ್ನ ಕವಿಚಕ್ರವರ್ತ್ತಿ ಕವಿರನ್ನ ವಿರಚಿತಮಪ್ಪ ಚಾಣುಕ್ಯ ಚಕ್ರವರ್ತ್ತಿ ಶ್ರೀ ಸಾಹಸಭೀಮ ವಿಜಯದೊಳ್ಭೀಮ ಸೇನನ ಪಟ್ಟಾಭಿಷೇಕ ವರ್ಣ್ನನಂ ದಶಮಾಶ್ವಾಸಂ ॥

ಅಂತು ಆಶ್ವಾಸ ೧೦ಕ್ಕಂ ವೃತ್ತ ೧೭೬ಕ್ಕಂ ಕಂದ ೪೦೧ಕ್ಕಂ ವಚನ ೧೮೫ ಕ್ಕಂ ಗದ್ಯ ಸಹ ೭೭೦ಕ್ಕಂ ಮಂಗಳ ಮಹಾಶ್ರೀ.

ಕವಿರನ್ನ ವಿರಚಿತ ಚಾಳುಕ್ಯ ಚಕ್ರವರ್ತಿ ಸಾಹಸ ಭೀಮಸೇನ ಕಾವ್ಯಮಿದಂ ಶಕ ವರುಷ ೧೬೬೪ನೇ ಚಿತ್ರಭಾನು ಸಂವತ್ಸರದಲ್ಲಿ ಮಾಡಿದ ಕಾವ್ಯ ॥ಶ್ರೀ॥

ವಿಷಯ : ಭೀಮ ದುರ್ಯೋಧನರ ಗದಾಯುದ್ಧ.

ವಿಶೇಷ : ಶಕಟರೇಫವಿದೆ. ಪತ್ರದ ಒಂದು ಕಡೆ ಮಾತ್ರ ಬರೆದಿದೆ. ೯೬ ಮತ್ತು ೧೦೩ ಪತ್ರಗಳೆರಡೆರಡಿವೆ. ಗ್ರಂಥದಾದಿಯ ಎರಡು ಪ್ರತ್ಯೇಕ ಪತ್ರಗಳಲ್ಲಿ ವಿಷಯ ಸೂಚಿಯಿದೆ.

388

ಗಂಧಕತೈಲಾದಿ ಪ್ರಯೋಗಗಳು

ಕೆ. ೪೯	ಗಂಧಕತೈಲಾದಿ ಪ್ರಯೋಗಗಳು	ಗದ್ಯ
೧೧.೪" × ೧.೪"	?	?
೧–೧೯ ಪತ್ರ	■ ಪಂಕ್ತಿ	೪೫ ಅಕ್ಷರ

ಆದಿ : ಶ್ರೀ × × × × ನಿಷ್ಪ್ರತ್ಯೂಹಾಮಸ್ತು ।
ಜ್ಞಾನಾನಂದದು ಅಮುಂ ದೇವಂ ನಿರ್ಮಲಸ್ಫಟಿಕಾಕೃತಿಂ ।
ಆಧಾರಂ ಸರ್ವವಿದ್ಯಾನಾಂ ಹಯಗ್ರೀವಮುಪಾಸ್ಮಹೇ ॥

ಸಾರಕಟ್ಟು । ನವಾಸಾರ ॥ ೧೦ ॥ ಪೆಟ್ಲು ಉಪ್ಪು ॥ ೩ ॥ ಪಟಿಕಾರ ॥ ೩ ॥ ತುರಶಿ ॥ ೩ ॥ ಯಿಾ ಮೂರು ದಿನಸನ್ನು ಪುಡಿಮಾಡಿ । ಬೂರಗದ ಚಕ್ಕೆ ಬೂದಿ । ೨ ಪಡಿ ಯಿಾ ಬೂದಿಯನ್ನು ಗಡಿಗೆಯಲ್ಲಿ ಹಾಕಿ ಮೂರು ವಿಧ ಪುಡಿ ಯನ್ನು ಹಾಕಿ ಅದರ ಮೇಲೆ ಶಾರಕಟ್ಟೆ ಮಡಗಿ ಪುನಶ್ಚ ಪುಡಿ ಹಾಕಿ.

ಅಂತ್ಯ : ತುತ್ತ ಶ್ವೈತಾರ್ಕ ಕ್ಷೀರದಲ್ಲಿ ೩ ದಿನ ನೆನೆಹಾಕಿ ನಂತರ ಬೇರು ಮಾಡಿ ಪುಠ ವಿಡಲು ಭಸ್ಮ ॥ ಗಂಧಕ ॥ ರಸಮಣಿಶಿಲಾ । ಯಿಂಗಳೀಕ ಮಾದಲದ ಹಂಣು। ಕೆಂಪು ಅಗಶೆ । ಪೊಂಮೊಗಳು ॥ ರಸ ॥ ಕೆಂಪು ಗಣಿಕೆಸೊಪ್ಪು ॥ ರಸ ॥ ಪೊಂಮೊಗಳು ॥

ವಿಷಯ : ವೈದ್ಯ.

ವಿಶೇಷ : ಕೆಲವು ಪತ್ರ ಮುರಿದಿವೆ. ೧೩, ೧೫ ಪತ್ರಗಳು ಲುಪ್ತ. ಅಸಮಗ್ರ.

389

ಕೆ. ೨೧೧	**ಗಯ ಚರಿತ್ರೆ**	ಭಾಮಿನೀಷಟ್ಪದಿ
೮.೭" × ೧.೯"	ಕೋನಯ್ಯ	ಸು. ೧೭೫೦
೨–೧೭೯ ಪತ್ರ	೧೦ ಪಂಕ್ತಿ	೪೨ ಅಕ್ಷರ

ಆದಿ : ....ಪಲ್ಲವಗಳಿಗೆ
ಫಾಲಮಂ ಚಾಚುತ್ತ ಪೇಳುವೆನೀ ಮಹಾಕೃತಿಯಾ ॥ ೧೧ ॥
ಅದರಿನಿಂದಲಿ ಮುಂನ್ನ ದುಖವಿ
ನಿವಹ ಚರಣದ್ವಂದಕೆರಗುವೆ
ಸುವಿನೆಯದಿ ಸಾಷ್ಟಾಂಗಯುತನಾಗಾನು ಭಕ್ತಿಯಲಿ
ಅವದರಿಸಿ ಬಾಲಕನು ಪೇಳುವ
ನವ ಕಥಾವಿಸ್ತರವ ಮುದದಿಂ
ಭುವನದೊಳ್ ಪ್ರಖ್ಯಾತಿಯುಹವೊಲು ಗುಣವ ಗ್ರಹಿಸುವುದೂ ॥ ೧೨ ॥

× × × ×

ಸಿರಿಯರಸನೊಲವಿಂದ ರಚಿಸಿದ
ಮಿರುಪ ಕಸ್ಯಪಗೋತ್ರ ಸಂಭವ
ಧರೆಗಧಿಕ ಹೋತೂರ ಬೆಟ್ಟರನ ತನೂಭವನೂ
ಸರಸಭಾರತಿ ಕೋನಯಾಖ್ಯನು
ತರಣಿ ಚಂದ್ರಮರುಳ್ಳನಕ ಸು
ಸ್ಥಿರಮೆನಿಸಿವೀ ಕೃತಿಯ ಪರಿಣತರುಗಳು ಲಾಲಿಪುದೂ ॥ ೧೬ ॥

ಅಂತ್ಯ : ಅಪರಿಮಿತದಾಯುವನು ಸಕವನು
ವಿಪುಳಸುತ ಪವುತ್ರಾಭಿವೃಧಿಯ
ನುಪಮಿಸಲ್ಕೊಲವಿಂದ ಸಕಲ ಧರಾದಿಪತ್ಯವನೂ

ದ್ವಿಪ ರಥಾಶ್ವ ಪದಾತಿ ಸಂಘವ
ನಿಪುಣತೆಯು ಧನಧಾನ್ಯಗಳನೊದ
ವಿಪನಿದನು ವಿರಚಿಸಿದವಂಗಧಿಪತಿ ರಮಾನಾಥಾ ॥ ೧೧೯ ॥

ಅಂತೂ ಸಂಧಿ ೨೭ಕಾಂ ಪದನು ೧೭೧೦ಕ್ಕಾಂ ಮಂಗಳ ಮಹಾಶ್ರೀ××× ಯುವನಾಮ ಸಂವತ್ಸರದ ಚೈತ್ರ ಶು ೫ ಸೋಮವಾರದಲು ತಿರುಮಕೂಡಲ ಧರ್ಮೈಯನವರ ಮಗ ರಾ........ನು ಬರದ ಗಯಚರಿತ್ರೆ ಪುಸ್ತುಕಕೆ ಜಯ ಮಂಗಳ ಮಹಾಶ್ರೀ.

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ೧ನೆಯ ಪತ್ರವೂ ೫೧ರಿಂದ ೧೦೦ ರವರೆಗಿನ ಪತ್ರಗಳೂ ಇಲ್ಲ. ೩, ೧೦ ನೆಯ ಪತ್ರಗಳು ಮುರಿದುಹೋಗಿವೆ.

390

ಕೆ. ಎ. ೬	ಗಯಚರಿತ್ರೆ	ಭಾಮಿನೀಷಟ್ಪದಿ
೧೩"×೮.೧"	ಕೋನಯ್ಯ	ಸು. ೧೭೫೦
೧–೧೬೩ ಪತ್ರ	೧೮ ಪಂಕ್ತಿ	೨೪ ಅಕ್ಷರ

ಆದಿ : ಗಯಚರಿತ್ರೆಯು ಪೀಠಿಕಾ ಸಂಧಿ ॥
ಶ್ರೀವರ ನಮೋ ಜಯತು ಪರರಾ
ಜೀವಸಂಭವ ವಿನುತಪದ ಭುವ
ನಾವಳೀಪರಿಪೂರ್ಣ ದುಗ್ಧಾಂಭೋಧಿ ನಿವಾಸಾ
ದೇವ ಮನುಮುನಿಪಾಲ ನಿಗಮಶಿ
ರೋವಿಭೂಷಣ ಕೃಷ್ಣ ಕೇಶವ
ಕಾವುದಾನತಜನವನನುದಿನ ತಿರುಮಲಾಧೀಶಾ ॥ ೧ ॥

× × × ×

ಪರಿಣತರು ಕೇಳ್ವಂತೆ ರಚಿಸಿದೆ
ಮೆರವ ಕಾಶ್ಯಪಗೋತ್ರಜಾತನು
ವರನಿಪುಣ ತಿರುಪತ್ತೂರ ಚಿಟ್ಟದರರಸರ ತನೂಭವನೂ
ಸರಸಿ ಕೋನೈಯ ನಾಮಧೇಯನು
ನಿರುತ ತಿರುವೇಂಕಟನ ಪದಯುಗ
ಸರಸಿಜವ ನೆನೆವಧಿಕರಂಘ್ರಿಯ ಕರುಣದಲಿ ಕೃತಿಯಾ ॥ ೧೭ ॥

ಅಂತ್ಯ : ಅಪರಿಮಿತದಾಯುತನು ಸಖರನು
ವಿಪುಳಸುತಪೌತ್ರಾಭಿವೃದ್ಧಿಯ
ನುಪಮಿಸಲ್ಕೊಲವಿಂದ ಸಕಲ ಧರಾಧಿಪತ್ಯವನೂ
ದ್ವಿಪರಥಾಶ್ವಪದಾತಿಸಂಗವ
ನಿಪುಣತೆಯ ಧನಧಾನ್ಯಗಳಿನೊದ
ವಿಪನಿದನು ಕೇಳಿದ ಜನರಿಗಧಿಪತಿ ರಮಾನಾಥಾ ॥ ೧೯ ॥

ಸಂಧಿ ೨೧ಕ್ಕಂ ಪದನು ೧೫೪೧ಕ್ಕಂ ಮಂಗಳಂ ॥
॥ ಗಯಚರಿತ್ರಂ ಸಂಪೂರ್ಣಂ ॥

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ಪುಟಗಳು ೩೨೬—ಎಂದು ಪುಟಗಳ ಸಂಖ್ಯೆಯನ್ನೂ ಕೊಡಲಾಗಿದೆ. ಗ್ರಂಥದ ಆದಿಯ ಒಂದು ಪ್ರತ್ಯೇಕ ಪತ್ರದಲ್ಲಿ ವಿಷಯಸೂಚಿಯಿದೆ.

391

ಕೆ. ಎ. ೬೩	**ಗಯಚರಿತ್ರೆ**	ಭಾಮಿನೀಷಟ್ಪದಿ
೧೩." × ೭.೯"	ಕೋನಯ್ಯ	ಸು. ೧೭೫೦
೧–೩೪೫ ಪತ್ರ	೨೦ ಪಂಕ್ತಿ	೨೩ ಅಕ್ಷರ

ಆದಿ : ಗಯಚರಿತ್ರೆ ಬರೆಯೂವದಕ್ಕೆ ನಿರ್ವಿಘ್ನಮಸ್ತು ।....
ಪದನೂ ॥ ಶ್ರೀರಮಣ ಸುರವಂದ್ಯ ನಿರುಪಮ
ಚಾರು ನೀರದವರ್ನ ವಿಮಲ ಸ
ರೋರುಹಾಂಬಕ ಜಗದುದರ ರವಿಕೋಟಿ ಸಂಕಾಶಾ
ನಾರದಾದಿ ಮುನಿ ಪ್ರಿಯಾಚ್ಯುತ
ವಾರಿಜಾಸನ ಜನಕ ಸಲಹು ಕೃ
ಪಾರಸದಿ ಸುಜನರನನುದಿನ ತಿರುಮಲಾಧೀಶಾ ॥ ೧ ॥

× × × ×

ಶಿರಿಯರಸನೊಲವಿಂದ ರಚಿಶಿದ
ಮಿರುಪ ಕಾಶ್ಯಪಗೋತ್ರಸಂಭವ
ಧರೆಗಧಿಕ ಪೋತೂರು ಬೆಟ್ಟರಸನ ತನೂಭವನೂ

ಸರಸಭಾರತಿ ಕೋನಯಾಖ್ಯನು
ತರಣಿಚಂದ್ರಮರುಳ್ಳನಕಸು
ನ್ತಿರಮೆನಿಸವೀಕೃತಿಯ ಸಜ್ಜನರುಗಳು ಲಾಲಿಪುದೂ ॥ ೧೭ ॥

ಅಂತ್ಯ : ಅಪರಿಮಿತದಾಯುವನು ಸುಖವನು
ವಿಪುಳಸುತ ಪೌತ್ರಾಭಿವೃದ್ಧಿಯ
ನುಪಮಿಸಲ್ಕೊಲವಿಂದ ಸಕಲ ಧರಾಧಿಪತ್ಯವನೂ
ದ್ವಿಪ ರಥಾಶ್ವ ಪದಾತಿ ಸಂಘೆವ
ನಿಪುಣತೆಯ ಧನಧಾನ್ಯಗಳನೊದ
ವಿಪನು ಕೇಳಿದ ಜನರಿಗಧಿಪತಿ ರಮಾನಾಥಾ ॥ ೧೨೦ ॥
ಅಂತೂ ಸಂಧಿ ೨೭ಕ್ಕಾಂ ಪದ ೨೧೪೫ಕ್ಕಾಂ ಮಂಗಳಮಹಾ ಶ್ರೀ.

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ಪತ್ರದ ಒಂದು ಕಡೆ ಬರೆದಿದೆ. ವ್ಯಾಸ, ವಾಲ್ಮೀಕಿ, ಶುಕ, ಕಾಳಿದಾಸ ಮಯೂರ, ಬಾಣ, ದಂಡಿ, ಮಲಹಣಿ, ಕುಮಾರವ್ಯಾಸ, ಲಕ್ಷ್ಮೀಶ ಇವರನ್ನು ಸ್ತುತಿಸಿದ್ದಾನೆ. ಗ್ರಂಥದ ಆದಿಯ ಪ್ರತ್ಯೇಕ ಪತ್ರದಲ್ಲಿ ವಿಷಯಸೂಚಿಯಿದೆ.

392

ಕೆ. ಎ. ೨೦೦	**ಗಯಚರಿತ್ರೆ**	ಭಾಮಿನೀಷಟ್ಪದಿ
೧೩" × ೭.೮"	ಕೋನಯ್ಯ	ಸು. ೧೭೫೦
೧–೨೬೧ ಪತ್ರ	೨೪ ಪಂಕ್ತಿ	೨೬ ಅಕ್ಷರ

ಆದಿ : ಕೃಷ್ಣಾರ್ಜುನರ ಸಂಗರವು.
ಶ್ರೀವರ ನಮೋಜಯತು ವರ ರಾ
ಜೀವಸಂಭವ ವಿನುತಪದ ಭುವ
ನಾವಳೀ ಪರಿಪೂರ್ಣದುಗ್ಧಾಂಭೋನಿಧಿನಿವಾಸಾ
ದೇವ ಮನುಮುನಿಪಾಲ ನಿಗಮ ಶಿ
ರೋವಿಭೂಷಣ ಕೃಷ್ಣ ಕೇಶವ
ಕಾವುದಾನತ ಜನಪನನುದಿನ ತಿರುಮಲಾಧೀಶಾ ॥ ೧ ॥

ಅಂತ್ಯ : ಪುರಕೆ ಖಚರನ ಕಳುಹಿ ಪಾರ್ಥನು
ಧರಣಿಪತಿಗೆರಗಲ್ಕೆ ತಮ್ಮನ
ಹರುಷದಲಿ ಬಲಸೆಳೆದು ತಕ್ಕೈಸುತ್ತ ಮುಂಡಾಡಿ

ತರುಣ ಬಾಯನ್ನಾನೆ ನಿಂನಿಂ
ದುರುವ ಕೀರ್ತಿಯು ಪಡೆದೆ ವೀರರ
.... ||

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ೨೬ನೆಯ ಸಂಧಿಯಲ್ಲಿ ೧೦೬ನೆಯ ಪದ್ಯದ ಅರ್ಧದವರೆಗೆ ಗ್ರಂಥವಿದೆ. ೯, ೨೨, ೨೯, ೩೫, ೧೨೧, ೧೯೯, ೨೦೭, ೨೨೪, ೨೫೨ನೆಯ ಪತ್ರಗಳಲ್ಲಿ ಗ್ರಂಥಲೋಪ. ೧೦, ೨೩, ೨೪, ೨೫, ೨೬, ೩೦, ೩೬, ೧೨೨, ೨೦೦, ೨೦೮ ನೆಯ ಪತ್ರಗಳು ಖಾಲಿಯಿವೆ. ಅನೇಕ ಪದ್ಯಗಳಲ್ಲಿ ಪದಗಳ ಲೋಪವೂ ಇದೆ. ಪತ್ರಗಳ ಒಂದೇ ಕಡೆಯಲ್ಲಿ ಬರೆದಿದೆ.

393

ಕೆ. ೨೮೮	**ಗಯಚರಿತ್ರೆ**	ಗದ್ಯ
೧೩.೭" × ೧.೪"	?	?
೧–೧೭೭ ಪತ್ರ	೫ ಪಂಕ್ತಿ	೫೦ ಅಕ್ಷರ

ಆದಿ : ಶುಭಮಸ್ತು × × × ಗಯಚರಿತ್ರೆ ಬರೆಯುವದಕ್ಕೆ ನಿರ್ವಿಘ್ನಮಸ್ತು | ಶ್ರೀ ಕೃಷ್ಣಾ....ನಮಃ | ಸ ಬೇಕೆಂದು ಸ್ತುತಿಗೈಯುತ್ತಮಿರುವ ಶೌನಕಾದಿ ರುಷಿಗಳ ವಚನವಂ ಕೇಳಿದ ಸೂತ ಪೂರಾಣೀಕನು ಮನಸಿನೊಳು ಸಂತೋಷ ಭರಿತನಾಗಿ ನೀವು ಯೀ ರೀತಿಯಿಂ ನಂನನು ಸ್ತುತಿಸಲಾಗದು ನೀವು ಸಾಧಾ ರಣರೆ ಪರಿಭಾವಿಸಿ ನೋಡಲು ಆದಿಪುರುಷನಾದ ಪರಶಿವನ ಶರೀರದಲ್ಲಿ ಯಿರುವವರಲ್ಲವೇ ಯಾವ ನಿಂಮ್ಮ ಪಾಪಹರವಾದ ಚರಿತ್ರೆಗಳಂ ಸ್ತುತಿಸಿದ ಮನುಷ್ಯರುಗಳು.

ಅಂತ್ಯ : ಯೀ ಮಾತುಗಳಂ ಪೇಳಿದ್ದೂ ಅನರ್ಥಕ್ಕೆ ಕಾರಣವಾದುದೆಂದ್ದು ಭಯ ಭ್ರಾಂತಳಾಗಿ ಯಿರ್ದಳೆಂದು ವೈಶಂಪಾಯನ ಮಹಾಮುನಿಯು ಜನಮೇಜಯ ರಾಯನಿಗೆ ಕುರಿತ್ತು ಪೇಳಿದ ಅರ್ಥವಂನ್ನು ಸೂತಪುರಾಣಿಕನು ನೈಮಿಶಾ ರಂಣ್ಯಾವಾಸಿಗಳಾದ ಶೌನಕಾಧಿರುಷಿಗಳಿಗೆ ಪೇಳಿದನೆಂಬಲ್ಲಿಗೆ ಹದಿನಾಲ್ಕನೇ ಅಧ್ಯಾಯಕ್ಕೆ ಮಂಗಳಮಹಾ ಶ್ರೀ.

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ಪತ್ರಗಳು ಶಿಥಿಲವಾಗಿವೆ.

394

ಕೆ. ಎ. ೧೦೬	**ಗಯೆ ಚರಿತ್ರೆ**	ಗದ್ಯ
೬.೮″ × ೧೨.೩″	?	?
೧—೧೫೧ ಪತ್ರ	೨೫ ಪಂಕ್ತಿ	೨೫ ಅಕ್ಷರ

ಆದಿ: ಶ್ರೀಗಣಾಧಿಪತಯೇ ನಮಃ। ವಚನ ಗಯ ಚರಿತ್ರೆ ಪ್ರಥಮಾಧ್ಯಾಯಾ। ಅನಂತ್ತರದಲ್ಲಿ ನೈಮಿಷಾರಂಣ್ಯವಾಸಿಗಳಾದ ಶೌನಕಾದಿಋಷಿಗಳು ವೇದಾಂತ್ತ ಪಾರಂಗತರಾದ ಶ್ರೀ ಮಹಾವಿಷ್ಣುವಿನ ಪಾದಕಮಲಪರಾಗಕ್ಕೆ ತುಂಬಿಗಳೋಪಾದಿಯಲ್ಲಿ ಯಿರುತ್ತ ನಿತ್ಯಕರ್ಮಂಗಳಂ ನೇಮತಪ್ಪದಂತ್ತೇ ಮಾಡುತ್ತ ಸಕಲ ವೇದಾರ್ಥಂಗಳಂ ನಿತ್ಯದಲ್ಲೂ ಪಾರಾಯಣಗೈಯ್ಯುತ್ತ ಇರುವರು। ಯಾವ ಈ ಋಷಿಗಳಿಗೆ ನಿತ್ಯದಲ್ಲೂ ವಾಸವಂಗೈಯ್ಯುವಾ

ಅಂತ್ಯ: ವಿಜಯನು ಆಕೆಯಂನು ಪಿಡಿದಪ್ಪಿ ಪಿಡಿನಡುವಿನ ಮಡದಿಯೆ ನೀನು ಚಿಂತಿಸಬೇಡ ನೆನದಾಗ ಸಿದ್ಧವಾಗಿ ನಿಂನ್ನ ಮನೋರಥವಂನು ಶುಕರಥನಾಟದಲ್ಲಿ ಪೂರೈಸುವೆನೆಂದ ಮಂದಸಂತೋಷ ಶರಧಿಯೊಳೋಲಾಡಿಸಿ ಬೀಳ್ಕೊಟ್ಟು ಅತಿ ಸಂಭ್ರಮದಿಂದ ದ್ವೈತವನದಲ್ಲಿ ಸುಖವಾಗಿದ್ದನು ಯಂದು ನೈಮಿಷಾರಂಣ್ಯವಾಸಿಗಳಾದ ಶೌನಕಾದಿಗಳಿಗೆ ನಿರೂಪಿಸಿದನೆಂಬಲ್ಲಿಗೆ ಗದ್ಯ ೩೭ಕ್ಕೆ ಮಂಗಳ ಮಹಾ ಶ್ರೀ.

ಕಂದ॥ ಮಂಗಳ ಮಹಿಮಾಲಂಬಗೆ
ಮಂಗಳ ಯದುವಂಶತಿಲಕ ಶ್ರೀರಂಗನಿಗೆ
ಮಂಗಳ ಸಂಗರಶೂರಗೆ
ಮಂಗಳ ಖಗವಾಹನನಾದಭ್ರಕೇಶವಗೆ ॥ ೧ ॥
× × × ×
ಸತಿಸುತ ಧನಧಾನ್ಯಗಳಂ
ಅತಿಸಂ..............

ವಿಷಯ: ಕೃಷ್ಣಾರ್ಜುನರ ಕಾಳಗ.

ವಿಶೇಷ: ಕೊನೆಯ ಪತ್ರ ಶಿಥಿಲವಾಗಿದೆ.

395

ಕೆ. ಬಿ. ೧೦೭	ಗಯೋಪಾಖ್ಯಾನ	ನಾಟಕ
೮.೨" × ೬.೬"	?	?
೧–೪೪ ಪತ್ರ	೨೩ ಪಂಕ್ತಿ	೧೮ ಅಕ್ಷರ

ಆದಿ : ಸೂತ್ರಧಾರ ॥ ವೃತ್ತಂ ॥

ಶ್ರೀಮದ್ವೇಂಕಟಶೈಲ ಶೃಂಗಶಿಖರ ಪ್ರಾಸಾದದೊಳ್ ಪದ್ಮಿನೀ
ರಾಮಾಲಿಂಗಿತನಾಗಿ ಮಿಂಚೆಸೆವ ನೀಲಾಂಭೋದಮಂ ಪೋಲುತಂ
ಸೀಮಾತೀತ ನಿಜಪ್ರಭಾವನೆನಿಸಿರ್ಪಾ ವೇಂಕಟಾಧೀಶ್ವರಂ
ಪ್ರೇಮಂಬೆತ್ತು ನಿರಂತರಂ ಸಲಹುಗುಂ ಶ್ರೀಚಾಮರಾಜೇಂದ್ರನಂ ॥
॥ ರಾಗ ॥ ಕಲ್ಯಾಣಿ ॥ ಚೌಕತಾಳ ॥ ದೃಪದ್‌ಮಟ್ಟು ॥

ಅಂತ್ಯ : ರಾಗ ॥ ಭೂಪಾಳಿ ॥ ರೂಪಕ ॥ × × ×

ಶರಣಾಗತೋದ್ಧಾರ	ಕರುಣಾಲವಾಲ
ಗಿರಿಜಾತಾವರ	ಕರಧೃತಶೂಲ
ಸುರರಾಜ ಮಂದಾರ	ಕರಿಚರ್ಮಾಂಬರಸೀಲ
ಸುರಲೋಕ ಸಂಹಾರ ॥ ೨ ॥	ಪರಮೇಶಾನತಜಾಲ ॥ ೩ ॥

(ಎಲ್ಲರೂ ತೆರಳುವರು)

ಪಂಚಮಾಂಕಂ ಸಂಪೂರ್ಣಂ.

ಸೂತ್ರಧಾರ ॥ × × × ×

ರಾಕಾಶಶಿವಂಶಜಾತ ಚಾಮರಾಜಗೆ
ಬೇಕಾದಿಷ್ಟವನೀವಗೆ
ಪಾಕವೈರಿ ಶೋಕಹಾರಿ
ಲೋಕಧಾರಿ ಮಾಕಾಂತಗೆ ॥ ೩ ॥

ವಿಷಯ : ಕೃಷ್ಣಾರ್ಜುನರ ಕಾಳಗ.

ವಿಶೇಷ : ಕೊನೆಯಲ್ಲಿ ಕೆಲವು ಖಾಲಿ ಪತ್ರಗಳಿವೆ.

396

ಕೆ. ೪೦೫	ಗರಳಪುರಿ ಮಹಿಮೆ	ಗದ್ಯ
೮.೩" × ೧.೬"	ಕಳಲೆ ನಂಜರಾಜ	೧೭೪೦
೧–೭೦ ಪತ್ರ	೭ ಪಂಕ್ತಿ	೩೫ ಅಕ್ಷರ

ಆದಿ : ಶ್ರೀ × × × ಗರಳಪುರಿಮಹಿಮೆ ಕಂನಡಿಶಿದ್ದ ಬರವದಕ್ಕೆ ನಿರ್ವಿಘ್ನಮಸ್ತು.

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
ಪ್ರಸನ್ನವದನಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ॥
× × × ×
ಪಾಶುಪತ ಶಾಸ್ತ್ರಾರ್ಥತತ್ವವ
ದೇಶಿಕೋತ್ತಮರಂಘ್ರಿಸೇವೆಯ
ಲೇಶಿನಿಂದಲಿ ತಿಳಿದು ನಂಜನರೇಂದ್ರ ನಾನೀಗಾ
ವ್ಯಾಸಕೃತ ಪೌರಾಣಸೂಕ್ತಿಗ
ಳಾಶಯವನರಿದಚ್ಚ ಕಂನಡ
ಭಾಷೆಯಿಂದುಸುರುವೆನು ಗರಳಪುರೀಶ ಮಹಿಮೆಯನೂ ॥ ೧೫ ॥

× × × ನೈಮಿಶಾರಣ್ಯವಾಶಿಗಳಾದ ಶೌನಕಾದಿ ಮುನಿಗಳು ದ್ವಾದಶ ವರ್ಷ ಸತ್ರಯಾಗಮಂ ಮಾಡಲುಪಕ್ರಮಿಶಿದರು। ಅದಂ ಕೇಳಿ ಬಳಿಕ ಪೌರಾಣಿಕೋತ್ತಮನಾದ ಸೂತಮುನೀಶ್ವರನು ಅಲ್ಲಿಗೆ ಬರಲಾಗಿ। ಅಲ್ಲಿರುವ ಸಕಲ ಮುನೀಶ್ವರರು ಜಡೆಗಳನು ನಾರವಸ್ತ್ರವನು ಧರಿಶಿರುವ। ರುದ್ರಾಕ್ಷಮಾಲಾಭರಣನಾದ। ತ್ರಿಪುಂಡ್ರಾಂಕಿತಮಸ್ತಕನಾದ। ಕಮಂಡಲಮಂ ಧರಿಶಿರ್ದ ಸದಾಬ್ರಹ್ಮಧ್ಯಾನಪರನಾದ। ಸೂತಮುನಿಯಂ ಕಂಡು

ಅಂತ್ಯ : ....ಅದು ಕಾರಣ ಋಷಿಗಳಿರಾ ನೀವು ಶ್ರೀ ಭೂಕೈಲಾಸಪುರದಲ್ಲಿ ಸುಖದಿಂದ ವಾಸಮಂ ಮಾಡುವದು । ಸೂತಪೌರಾಣಿಕರು ಶೌನಕಾದಿ ಋಷಿಗಳಂ ಕುರಿತು ಗರಳಪುರ ಮಹಿಮೆಯಂ ಪೇಳಿದರೂ ಶ್ರೀಮನ್ಮಹೀಶೂರ ಸೇನಾಪತಿ ಕಳುಲೆ ದೊಡ್ಡರಾಜಸುತ ವೀರರಾಜನಂದನ ದಳಪತಿ ದೇವರಾಜಾನುಜ ನಂಜರಾಜೈಯನು ವಿರಚಿಸಲ್ಪಟ್ಟ ಸ್ಕಂದ ಪುರಾಣೋಕ್ತ ಗರಳಪುರಿ ಮಹಿಮಾದರ್ಶನವೆಂಬ ಕರ್ನಾಟಕಭಾಷಾ ರಚಿತಮಾದ ಟೀಕಿನಲ್ಲಿ ದ್ವಾದಶಾಧ್ಯಾಯದರ್ಥಃ ॥ ಗರಳಪುರಿಮಹಿಮೆ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಕಪಿಲಾನದಿಯ ಉತ್ಪತ್ತಿ, ಸಗರನು ಅಶ್ವಮೇಧಯಾಗ ಮಾಡಿದುದು, ಗರಳಪುರಿ ಮಹಿಮೆ.

ವಿಶೇಷ : ಪ್ರತಿ ಚೆನ್ನಾಗಿದೆ.

397

ಕೆ. ಎ. ೨೦	**ಗರಳಪುರಿ ಮಹಿಮೆ**	ಗದ್ಯ
೧೨.೮″ × ೭.೮″	ಕಳಲೆ ನಂಜರಾಜ	೧೭೪೦
೧–೮೨ ಪತ್ರ	೧೯ ಪಂಕ್ತಿ	೨೦ ಅಕ್ಷರ

ಆದಿ: ಶ್ರೀ × × × × ಗರಳಪುರಿ ಮಹಿಮೆ ಕಂನಡಿಶಿ ಬರವದಕ್ಕೆ ನಿರ್ವಿಘ್ನಮಸ್ತು |

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ |
ಪ್ರಸನ್ನವದನಂ ಧ್ಯಾಯೇತ್ಸರ್ವ ವಿಘ್ನೋಪಶಾಂತಯೇ ||
× × × ×
ಪಾಶುಪಥ ಶಾಸ್ತ್ರಾರ್ಥತತ್ವವ
ದೇಶಿಕೋತ್ತಮರಂಘ್ರಿ ಸೇವೆಯೆ
ಲೇಸಿಲಂದಲಿ ತಿಳಿದ ನಂಜನರೇಂದ್ರ ನಾನೀಗಾ
ವ್ಯಾಸಕೃತ ಪೌರಾಣಸೂಕ್ತಿಗ
ಳಾಶಯವನರಿದಚ್ಚಕನ್ನಡ
ಭಾಷೆಯಿಂದುಸುರುವೆನು ಗರಳಪುರೀಶ ಮಹಿಮೆಯನು ||೧೧||

ಅಂತ್ಯ: ಯಿಾ ಪ್ರಕಾರ ನೀಲಕಂಠನಿಂದಾ ಭಾವನೆಯಂ ಕುರಿತು ನಿರೂಪಿಸಲ್ಪಟ್ಟ ದಂನೆ ನಿಮಿಗೆ ಯಂನಿಂದಾ ಹೇಳಲ್ಪಟ್ಟಿತು. ಆದು ಕಾರಣ ರುಷಿಗಳಿರಾ ನೀವು ಶ್ರೀ ಭೂಕೈಲಾಸಪುರದಲ್ಲಿ ಸುಖದಿಂದಿದ್ದಾ ಪಾಸವಂ ಮಾಡುವದೂ ಸೂತ ಪೌರಾಣೀಕನು ಶೌನಕಾದಿಗಳಂ ಕುರಿತು ಗರಳಪುರಿ ಮಹಿಮೆಯಂ ಪೇಳಿದನೂ. ಸ್ಕಂದಪುರಾಣೋಕ್ತಮಾದ ಗರಳಪುರೀ ಮಹಿಮಾದರ್ಶವೆಂಬೀ ಕರ್ನಾಟಕ ಭಾಷಾ ಟೀಕಿನಲ್ಲಿ ಹನ್ನೆರಡನೆ ಅಧ್ಯಾಯಾರ್ಥಃ.

ವಿಷಯ: ಕಪಿಲಾನದಿಯ ಉತ್ಪತ್ತಿ, ಸಗರನು ಅಶ್ವಮೇಧಯಾಗ ಮಾಡಿದುದು, ಗರಳಪುರಿ ಮಹಿಮೆ.

ವಿಶೇಷ: ಪತ್ರದ ಒಂದು ಕಡೆ ಮಾತ್ರ ಬರೆದಿದೆ.

398

ಕೆ. ಬಿ. ೩೧೫	**ಗರುಡ ಹನುಮಂತರ ಕಾಳಗ**	ಯಕ್ಷಗಾನ
೭.೭″ × ೬.೩″	?	?
೧–೨೯ ಪತ್ರ	೧೬ ಪಂಕ್ತಿ	೨೪ ಅಕ್ಷರ

ಆದಿ: ಸ್ಕಾಂದಪುರಾಣದೊಳಗಣ ಗರುಡ ಹನುಮಂತನ ಕಾಳಗ ಬರಿಯುುವದಕ್ಕೆ ಶುಭಮಸ್ತೂ.

ನಾಂದಿ ॥ ಶ್ಲೋಕ ॥
ಶ್ರೀ ರಘುವರ ಪಾದಪದ್ಮಯುಗಳಂ । ಸರ್ವೋಪಕಾರಂ ಶುಭಂ
ವಾರಿಜಾಸನ ಮುಖ್ಯ ಪೂಜಿತಪದಂ । ಕ್ಷೀರಾಬ್ಧಿ ಜಾವಲ್ಲಭಂ
ಕಾರುಣ್ಯಾಂಬುಧಿ ಭಕ್ತವತ್ಸಲ ಹರೀಂ । ಗರುಡಾದ್ರಿ ಶುಭ ಮಂದಿರಂ
ಪಾರಿಜಾತಾಪಹಾರಕಂ ಮುರಹರಂ ಶ್ರೀ ವೆಂಕಟೇಶಂ ಭಜೇ ॥ ೧ ॥

ರಾಗ ॥ ನಾಕಿ ॥ ಝಂಪೆ ॥
ಜಯ ಗಣಪ ಗುಣತೋಷ । ಜಯ ಭಕ್ತಜನಪೋಷ
ಜಯ ಸೂರ್ಯಸಂಕಾಶ । ಜಯ ಮೃದುಳಭಾಷ
ಜಯ ಸರ್ವಲೋಕೇಶ । ಜಯ ದುಷ್ಟಖಳನಾಶ
ಜಯ ರತ್ನವರಭೂಷ । ಜಯವ್ಯೋಮಕೇಶ ॥ ೨ ॥

ಅಂತ್ಯ : ರಾಗ ॥ ಸೌರಾಷ್ಟ್ರ ॥ ತ್ರಿವುಡೆ ॥
ಧರಣಿಪತಿ ಜನಮೇಜಯಂಗಾ
ಮೆರೆವ ವೈಶಂಪಾಯಮುನಿಪತಿ
ಭರದಿ ಸ್ಕಾಂದಪುರಾಣ ಕಥನವ ಹರುಷದಿಂದ ॥ ३೬೨ ॥
ಪೇಳಲಾ ಕಥೆಯನ್ನು ಧರೆಯೊಳು
ಕೇಳಿ ರಚಿಸಿದೆ ಯಕ್ಷಗಾನದಿ
ಬಾಲ ಭಾಷಿತವೆಂದು ಜರಿವುದೆ ಲೀಲೆಯಿಂದ ॥ ೩೬೩ ॥

× × × ×

ಮಂಗಳಂ ಶ್ರೀಕೃಷ್ಣರಾಜನಿಗೇ ಜಯ
ಮಂಗಳಂ ಮಹಿಸೂರವಾಸನಿಗೇ
ಮಂಗಳಂ ನರಪತಿ ಬಿರುದಾಂತನಿಗೆ
ಮಂಗಳಂ ಭವಪುರಿವಾಸನಿಗೆ
ಮಂಗಳಂ ಜಯ ಮಂಗಳಂ ॥ ೩೭೧ ॥

ಅಂತು ಗರಡ ಹನುಮಂತನ ಕಾಳಗಕ್ಕೆ ಮಂಗಮಹಾಶ್ರೀ.

ವಿಷಯ : ಗರುಡ ಹನುಮಂತರ ಕಾಳಗ.

ವಿಶೇಷ : ಕೊನೆಯಲ್ಲಿ ಎರಡು ಖಾಲಿ ಪತ್ರಗಳಿವೆ.

399

ಕೆ. ಬಿ. ೪೯೫	**ಗರುಡ ಹನುಮಂತೆರ ಕಾಳೆಗ**	ಯಕ್ಷಗಾನ
೮.೪" × ೬"	?	?
೧–೭೪ ಪುಟ	೧೬ ಪಂಕ್ತಿ	೧೮ ಅಕ್ಷರ

ಆದಿ: ಶ್ರೀ × × ಸ್ಕಂದಪುರಾಣದ ಗರುಡ ಹನುಮಂತನ ಕಥೆ ಬರೆಯುುವದಕ್ಕೆ ನಿರ್ವಿಘ್ನಮಸ್ತು.

ಶ್ಲೋಕಾ ॥ ಶ್ರೀರಘುವರ ಪಾದಪದ್ಮಯುುಗಳಂ । ಸರ್ವೋಪಕಾರಂ ಶುಭಂ
ವಾರಿಜಾಸನ ಮುಖ್ಯ ಪೂಜಿತಪದಂ । ಕ್ಷೀರಾಬ್ಧಿಜಾವಲ್ಲಭಂ
ಕಾರುಣ್ಯಾಂಬುಧಿ ಭಕ್ತವತ್ಸಲ ಹರಿಂ । ಗರುಡಾದ್ರಿ ಶುಭಮಂದಿರಂ
ಪಾರಿಜಾತಾಪಹಾರಕಂ ಮುರಹರಂ । ಶ್ರೀವೆಂಕಟೇಶಂ ಭಜೇ ॥೧॥

ರಾಗಾ ॥ ನಾಟಿ । ತಾಳ ಜಂಪೆ ।

ಜಯುಗಣಪ ಗುಣತೋಷ । ಜಯು ಭಕ್ತಜನಪೋಷ
ಜಯ ಸೂರ್ಯಸಂಕಾಶ । ಜಯ ಮೃದುಳಭಾಷಾ
ಜಯ ಸರ್ವಲೋಕೇಶ । ಜಯುದುಷ್ಟಖಳನಾಶ
ಜಯ ರತ್ನವರಭೂಷ । ಜಯುವ್ಯೋಮಕೇಶಾ । ಜಯತೂ ॥ ೧ ॥

× × × ×

(೪ನೆಯ ಪತ್ರ)

ಅರುಹುವೆನು ಯಿಾ ಕಥೆಯ ಯಕ್ಷಗಾನದಲೀ
ಶರಣರಕ್ಷಕ ಶ್ರೀನಿವಾಸನೊಲುಮೆಯುಲೀ ॥ ೧೧ ॥

ಅಂತ್ಯ: ರಾಗಾ । ಸೌರಾಷ್ಟ್ರ ತ್ರಿಉಡೆ ।
ಧರಣಿಪತಿ ಜನಮೇಜಯಂಗಾ
ಮೆರವ ವೈಶಂಪಾಯುಮುನಿಪತಿ
ಭರದಿ ಸ್ಕಾಂದಪುರಾಣ ಕಥನವ ಹರುಷದಿಂದಾ ॥ ೧ ॥

ಪೇಳಲಾ ಕಥೆಯಂನು ಧರೆಯೊಳು
ಕೇಳಿ ರಚಿಶಿದೆ ಯಕ್ಷಗಾನದಿ
ಬಾಲಭಾಷಿತವೆಂದು ಜರೆಯದೆ । ಲೀಲೆಯಿಂದಾ ॥ ೨ ॥

× × × ×

ಮಂಗಳ ಗರಳಪುರೀಶನಿಗೇ ಜಯ
ಮಂಗಳ ಶ್ರೀ ಕೃಷ್ಣರಾಜನಿಗೇ

ಮಂಗಳ ಭಟಪುರವಾಸನಿಗೆ ಜಯ
ಮಂಗಳ ಶ್ರೀ ವೆಂಕಟೇಶನಿಗೇ ಜಯ ॥ ೪ ॥

ಅಂತ್ಯ ಸಂಧಿ ೧೭ಕ್ಕೆ ಪದ ೩೭೩ಕ್ಕಂ ಮಂಗಳ ಮಹಾಶ್ರೀ.

ವಿಷಯ : ಗರುಡ ಹನುಮಂತರ ಕಾಳಗ.

ವಿಶೇಷ: ಕೈಯಿಂದ ತಯಾರಿಸಿದ ಕಾಗದದ ಪ್ರತಿ. ಅಲ್ಲಲ್ಲಿ ಹುಳು ಹೊಡೆದಿದೆ. ಸ್ಫುಟಾಕ್ಷರ.

400

ಕೆ. ೨೪೦	ಗಿರಿಜಾಕಲ್ಯಾಣ	ಚಂಪು
೧೯.೩" × ೨.೩"	ಹರಿಹರ	ಸು. ೧೨೦೦
೧—೮೩ ಪತ್ರ	೯ ಪಂಕ್ತಿ	೭೫ ಅಕ್ಷರ

ಆದಿ : ಶ್ರೀ ಗಿರಿಜಾಕಲ್ಯಾಣವ ಬರವುದಕ್ಕೆ ನಿರ್ವಿಘ್ನಮಸ್ತು × × ಕಥಾಗರ್ಭಂ ॥ ಗದ್ಯಂ ॥ ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತ ಧರಿತ್ರೀಕಾಂತೆಯ ನಾಭೀ ಕಮಲ ಮಧ್ಯಸ್ಥಿತ ಕರ್ನಿಕೆಯಂತಿರ್ಪ್ಪ ಮೇರುವಿನ ಮೂಡಣ ಜಲಧಿ ಪಶ್ಚಿಮ ವಾರ್ಧಿ ಪರ್ಯಂತರಂ ಪರ್ವದ ಪರ್ವತಾಧೀಶಂಗೆ ಗಿರಿರಾಜನೆಂಬ ನಾಮದಿಂದೋಷಧಿ ಪ್ರಸ್ತಪುರದೊಳಗಿದ್ದು

ಸ್ರಗ್ಧರಾವೃತ್ತಂ ॥

ಶ್ರೀಮಚ್ಛೈಲೇಂದ್ರ ಕಂನ್ಯಾ ನಿರುಪಮ ಸುರತಕ್ಷೀರವಾರಾಸಿಚಂದ್ರಂ
ವ್ಯೋಮಾರ್ಕ್ಕೇಂದು ಕ್ಷಮಾತ್ಮಾನಲಜಲಪವಮಾನಾಷ್ಟಮೂರ್ತ್ತಿಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕ ಮಾಣಿಕ್ಯಮೌಳಿ
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥

× × × ×

ಮಹಾಸ್ರ ॥ ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸಭ್ವಾರ್ಪುರೇ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹಮಾ ಕಾವ್ಯಮಂ ವಿ
ಸ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರವರದ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥೩೩॥

ಅಂತ್ಯ : ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹ್ವರನಗ್ನಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆಮಗೆ ಭಕ್ತಿಗ್ನಾನ ವೈರಾಗ್ಯಮಂ
ಕರುಣಂಗೈಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೧೪ ॥

× × × ×

ಹರಿಹರದೇವ ವಿರಚಿತಮಪ್ಪ ಗಿರಿಜಾಕಲ್ಯಾಣ ಮಹಾಪ್ರಬಂಧದೊಳು ಪಾರ್ವತೀಪರಮೇಶ್ವರ ವಿವಾಹವರ್ನ್ನನಂ ದಶಮಾಸ್ವಾಸಂ ಸಂಪೂರ್ಣ್ಣಂ. ಅಂತೂ ಆಶ್ವಾಸ ೧೦ ಕ್ಕಂ ಪದ್ಯಂಗಳು ೧೦೮೦ ಕ್ಕಂ ಗಿರಿಜಾಕಲ್ಯಾಣ ಸಮಾಪ್ತ........ಅಸ್ಯಶ್ರೀ ಶಾಲಿವಾಹನಶಕ ವರುಷಂಗಳು ೧೬೮೭ನೆಯ ಪಾರ್ಥಿವನಾಮಸಂವತ್ಸರದ ಚೈತ್ರ ಬ ೮ ಭಾನುವಾರ...........ಶ್ರೀಮಹ ನ್ಮಹಾನಾಯಕಾಚಾರ್ಯ್ಯ.

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ೯ ನೆಯ ಪತ್ರ ಎರಡಿವೆ. ೭೦, ೭೧ ಎರಡು ಪತ್ರಗಳು ಇಲ್ಲ.

401

ಕೆ. ೨೫೫	**ಗಿರಿಜಾಕಲ್ಯಾಣ**	ಚಂಪು
೯" × ೧.೯"	ಹರಿಹರ	ಸು. ೧೨೦೦
೧–೧೫೦ ಪತ್ರ	೧೦ ಪಂಕ್ತಿ	೩೬ ಅಕ್ಷರ

ಆದಿ : ಶ್ರೀ × × ಗಿರಿಜಾಕಲ್ಯಾಣ ಪದ್ಯಕಾವ್ಯದ ಪುಸ್ತಕಕ್ಕೆ ನಿರ್ವಿಘ್ನಮಸ್ತು ಸ್ವಸ್ತಿ ಸಮಸ್ತ ಮುದ್ರಿತ ಧರಣೀಕಾಂತಾ ನಾಭಿಕಮಲ ಮಧ್ಯಸ್ಥಿತ ಕರ್ನಿಕೆಯಂತಿರ್ಪ ಮೇರುವಿನ ಮೂಡಣ ಜಲಧಿಯಿಂ ಪಶ್ಚಿಮವಾರ್ಧಿಪರ್ಯಂತರಂ ಪರ್ವಿದ ಪರ್ವತಾಧೀಶಂ ಗಿರಿರಾಜನೆಂಬ ನಾಮದಿಂದೋಷಧಿಪ್ರಸ್ಥಮೆಂಬ × × ×

ಸ್ರಗ್ಧರಾವೃತ್ತ ॥
ಶ್ರೀಮಚ್ಛೈಲೇಂದ್ರ ಪುತ್ರಿ ಗುರುತರ ಸುರತಕ್ಷೀರವಾರಾಶಿಚಂದ್ರಂ
ವ್ಯೋಮಾರ್ಕೇಂದು ಕ್ಷಮಾತ್ಮಾನಲ ಜಲ ಪವಮಾನಾಷ್ಟಮೂರ್ತಿಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕ ಮಾಣಿಕ್ಯಮೌಳಿ
ಸ್ತೋಮಾಂಘ್ರಿ ಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥೧॥

× × × ×

(೬ನೆಯ ಪತ್ರ) ಮಹಾಸ್ರಗ್ಧರಾವೃತ್ತ ॥
ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸಬ್ಬಾರರೆ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರ ಗಿರಿಜೋದ್ವಾಹಮಿಾ ಕಾವ್ಯಮಂ ವಿ
ಸ್ತಾರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥

ಅಂತ್ಯ : ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭುಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವಿರಾಗ್ಯಮಂ
ಕರುಣಂಗೆಯ್ದೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥

ಇದು ಸಮಸ್ತ ಸುರನಿಕರ × × × ದಶಮಾಶ್ವಾಸ ೧ಕ್ಕೆ ಗದ್ಯ ೧ ವೃತ್ತ ೨೨೬ ಕಂದ ೮೭ ವಚನ ೪೬ ಅಂತು ಆಶ್ವಾಸ ೧೦ಕ್ಕೆ ಗದ್ಯ ೧೧ ವೃತ್ತ ೨೬೪ ಕಂದ ೭೧೪ ವಚನ ೩೮೧, ಅಂತು ಗದ್ಯ ವೃತ್ತ ವಚನ ಸಹಾ ೧೩೭೦ಕ್ಕಂ ಮಂಗಳಮಹಾಶ್ರೀ × × × ದುರ್ಮತಿ ಸಂವತ್ಸರದ ಭಾದ್ರಪದ ಶು ೧೨ ಗುರುವಾರ ಗುಂಮಳಾಪುರದ ಶ್ಯಾನಭಾಗ ತಿಂಮಣನ ಮಗ ವೆಂಕಂಣ ಬರದ ಗಿರಿಜಾಕಲ್ಯಾಣ ಪುಸ್ತುಕಕ್ಕೆ ಜಯಮಂಗಳ ಮಹಾಶ್ರೀ.

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ೧೫೦ನೆಯ ಪತ್ರ ಎರಡಿವೆ.

402

ಕೆ. ३೧೪/೨	**ಗಿರಿಜಾಕಲ್ಯಾಣ**	ಚಂಪು
೧೩″ × ೨.೧″	ಹರಿಹರ	ಸು. ೧೨೦೦
೫೪–೧೦೭ ಪತ್ರ	೧೫ ಪಂಕ್ತಿ	೬೮ ಅಕ್ಷರ

ಆದಿ : ಶ್ರೀ ಗುರು ಸದಾಶಿವಸಂಗಮೇಶಾಯ ನಮಃ । ಗಿರಿಜಾಕಲ್ಯಣವ ಬರಉದಕೆ ಶುಭಮಸ್ತು ॥ × × ×

ಕಥಾಗರ್ಭಂ॥ ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತ ಧರಿತ್ರೀಕಾಂತಾನಾಭಿ ಕಮಲ ಮದ್ಯಸ್ಥಿತ ಕರ್ಣಿಕೆಯಂತಿಪ್ಪರ್ ಮೇರುವಿನ ಮೂಡಣ ಜಲದಿಯಿಂ ಪಶ್ಚಿಮವಾರ್ಧಿ ಪರ್ಯ್ಯಂತರಂ ಪರ್ವ್ವಿದ ಪರ್ವತಾದೀಶಂ ಗಿರಿರಾಜನೆಂಬ ನಾಮದಿಂದೋಪಧಿಪ್ರಸ್ಥಮೆಂಬ ಪುರದೊಳಿದ್ದುರ್ ಪಿತೃಗಳ ಮನದೊಳ್ಪುಟ್ಟಿದ ಮೇನಾದೇವಿಯುಂ ವಿವಾಹಮಾಗಿ । ಮೈನಾಕನೆಂಬ ಪುತ್ರನಂ ಪಡೆದು

× × × ×

ಸ್ರಗ್ಧರಾವೃತ್ತಂ॥ ಶ್ರೀಮಚ್ಛೈಲೇಂದ್ರಪುತ್ರೀ ಗುರುತರ ಸುರತಕ್ಷೀರವಾರಾಶಿ ಚಂದ್ರಂ
ವ್ಯೋಮಾರ್ಕೇಂದು ಕ್ಷಮಾತ್ಮಾನಲ ಜಲಪವಮಾನಾಷ್ಟಮೂರ್ತಿ ಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕಮಾಣಿಕ್ಯಮೌಲಿ
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿಪಾಕ್ಷನಾನಂದಿಂದಂ ॥ ೧ ॥

× × × ×

ಜಾಣಂ ರಸಿಕಂ ಸುಜನ
ಪ್ರಾಣಂ ಕವಿತಾ ನಿಧಾವನಧಿಕಂ ಪುಣ್ಯಾ
ಕ್ಷೂಣಂ ವರಗಿರಿಜಾ ಕ
ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ ॥ ೪೨ ॥

ಅಂತ್ಯ : ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೧೧೪ ॥

ಯಿದು ಸಮಸ್ತ ಸುರನಿಕರ ಮಕುಟಖಚಿತ ದಿನಕರಕರಾಧಿಕ್ಯ ಮಾಣಿಕ್ಯ ಪ್ರಭಾಪುಂಜರಂಜಿತ ಪಂಪಾವಿರೂಪಾಕ್ಷ ಶ್ರೀಪಾದಕಮಳ ಮಕರಂದ ಮಧುಕರಾಯಮಾನ ಸತ್ಕವೀಶ್ವರ ಹಂಪೆ ಹರಿಹರದೇವ ವಿರಚಿತಮಪ್ಪ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್ ಪಾರ್ವತಿ ಪರಮೇಶ್ವರ ವಿವಾಹವರ್ಣನಂ ದಶಮಾಶ್ವಾಸಂ ॥ ಶ್ರೀ ॥ ಶ್ರೀ ಗಿರಿಜಾಕಲ್ಯಾಣಂ ಸಮಾಪ್ತಂ। ಶ್ರೀಮತು ಕಾಳಾಯುಕ್ತಿ ಸಂವತ್ಸರದ ಮಾಗಸುದ್ಧ ೧ಲ್ಲು ಗಿರಿಜಾ ಕಲ್ಯಾಣವ ಬರದು ಸಮಾಪ್ತಿಯಾಯಿತ್ತು.

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ೯ಳನೆಯ ಪತ್ರ ಲುಪ್ತ. ಅಲ್ಲಲ್ಲಿ ಪತ್ರಗಳ ಅಂಚಿನಲ್ಲಿ ತ್ರುಟಿತ. ಶಕಟರೇಫವಿದೆ. ಸಾಧಾರಣ ಸ್ಥಿತಿ. ಇದೇ ಕಟ್ಟಿನಲ್ಲಿ ರಾಜೇಂದ್ರವಿಜಯ ಮತ್ತು ರಾಜಶೇಖರ ವಿಳಾಸವೆಂಬ ಇತರ ಎರಡು ಗ್ರಂಥಗಳಿವೆ.

403

ಕೆ. ೩೩೫ ಗಿರಿಜಾಕಲ್ಯಾಣ ಚಂಪು

೧೨″ × ೦.೯″ ಹರಿಹರ ಸು. ೧೭೦೦

೧–೩೩೨ ಪತ್ರ ೩ ಪಂಕ್ತಿ ೪೦ ಅಕ್ಷರ

ಆದಿ : ಶ್ರೀ × × ....ಹಂಪ್ಪೆಯ ಹರಿ....ಕಲ್ಯಾಣಕ್ಕೆ ಮಂಗ್ಗಳಮಸ್ತು ಕಥಾ ಗರ್ಭ ಗದ್ಯಾಃ । ಸ್ವಸ್ತಿ ಸಮಸ್ತ ಸಮುದ್ರಮುದ್ರಿತ ಧರಿತ್ರೀ ಮಧ್ಯ.... ಜಲಧಿಯಿಂ ಪಶ್ಚಿಮ ವಾರ್ಧಿಪರಿಯಂತ್ತರಂ ಪರ್ವತಾಧೀಶ ಗಿರಿರಾಜನೆಂಬ್ಬ ನಾಮದಿಂದೊಸೆದಿಂದ್ರ.... × × ×

......................ಜಲಪವಮಾನಾಷ್ಟಮೂರ್ತಿ ಪ್ರಸಿದ್ಧಂ
ಪ್ರೇಮಂಬ್ಬೆತ್ತೀಯ್ಗೆ ಸದ್ಭಕ್ತಿಯನೆಮಗಮರಾನೀಕ ಮಾಣಿಕ್ಯಮೌಳಿ
ಸ್ಥೋಮಾಂ......................ವಿರೂಪಾಕ್ಷನಾನಂದ್ದದಿಂದಂ ॥ ೧ ॥
ಮಹಾಸ್ರಗ್ಧರಾ ॥
ಗಿರಿಜಾಕಲ್ಯಾಣಮಿಂತ್ತೀ ನುತ ಕೃತಿಯ ಪೆಸರ್ಭಾಪುರೇ ಕಾವ್ಯನಾಥಂ
ಗಿರಿಜಾನಾಥಂ ಕ್ಕಥಾಸಂಗ್ಗತಿ ವರ ಗಿರಿಜೋದ್ವಾಹಮೀ ಕಾವ್ಯಮಂ ವಿ
ಸ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮನೋತ್ಸಾಹ ದಿಂದ್ದಂ
ಪರಮಾನಂದ್ದಾಬ್ಧಿ ಪಂಪ್ಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥ ೩೩ ॥

ಅಂತ್ಯ : ಭಾವಿಸಿ ಮಂತ್ರಾವಳಿಯಂ
ದ್ದೋವುತೆ ಹುತವಹನೊಳೆಸೆಯಲಾಜಾ........
...............ಗಸುತೆ
ದೇವನ ಬಲದಿಂದೆಡಕೆ ಬಂದಳನೂನಂ ॥ ೯೬ ॥

ವ ॥ ಅಂತು ಬರೆ ಪೂರ್ನಾ........

ವಿಷಯ : ಪಾರ್ವತೀ ಪರಮೇಶ್ವರರ ವಿವಾಹ.

ವಿಶೇಷ : ಪ್ರತಿ ಬಹಳ ಶಿಥಿಲವಾಗಿದೆ.

404

ಕೆ. ೩೫೭/೧	ಗಿರಿಜಾಕಲ್ಯಾಣ	ಚಂಪು
೧೧.೧" × ೨"	ಹರಿಹರ	ಸು. ೧೨೦೦
೫೨ ಪತ್ರ	೧೧ ಪಂಕ್ತಿ	೬೫ ಅಕ್ಷರ

ಆದಿ : ಶ್ರೀ × × ಗಿರಿಜಾಕಲ್ಯಾಣವ ಬರವುದಕ್ಕೆ ಶುಭಮಸ್ತು ನಿರ್ವಿಘ್ನಮಸ್ತು । ಗಿರಿಜಾಕಲ್ಯಾಣದ ಕಥಾಗರ್ಭವೆಂತೆಂದೊಡೆ ॥ ಗದ್ಯ ॥ ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತ ಧರಿತ್ರೀಕಾಂತಾ ನಾಭಿಕಮಲ ಮಧ್ಯಸ್ಥಿತ ಕರ್ನಿಕೆಯ ರಿಪ್ಪರ್ ಮೇರುವಿನ ದಕ್ಷಿಣದಿಕ್ಕಿನಲ್ಲಿ ಪೂರ್ವ ಜಲಧಿಯಿಂ ॥

× × × ×

ಶ್ರಗ್ಧರೆ ವೃತ್ತಂ ॥
ಶ್ರೀಮಚ್ಛೈಲೇಂದ್ರ ಪುತ್ರೀ ಗುರುತರ ಸುರತಕ್ಷೀರವಾರಾಸಿಚಂದ್ರಂ
ವ್ಯೋಮಾರ್ಕೇಂದು ಕ್ಷಮಾತ್ಮಾನಲ ಜಲಪವಮಾನಾಷ್ಟಮೂರ್ತಿಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗದುರಾನೀಕ ಮಾಣಿಕ್ಯಮೌಳಿ
ಸ್ತೋಮಾಂಘ್ರಿಜ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥ ೧ ॥

ವೃ ॥ ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸರ್ಭಾರ್ಪುರೇ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹಮೀ ಕಾವ್ಯಮುಂ ಬಿ
ತ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥ ೩೩ ॥

ಅಂತ್ಯ : ತಿಳಿಯದೆ ಶೂಲಿಯ ತಪಮಂ
ಚಲಿಯಿಸು ನೀನೆಂಬುದಹಿತಮೆನಗೆ ಪರರ ಮ
ಕ್ಕಳನಿಕ್ಕಿ ನೆಲೆಯುನಱುವುದ
ನಿಳೆಯೊಳಗೆಂನಲ್ಲಿ ಮಾಳ್ಪರೆ ಕಮಲಾಕ್ಷಾ ॥ ೩೦ ॥

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ಶಕಟರೇಫ ಪ್ರಯೋಗವಿದೆ. ಈ ಪ್ರತಿಯಲ್ಲಿ ಆರು ಆಶ್ವಾಸಗಳೂ ೭ನೆಯ ಆಶ್ವಾಸದಲ್ಲಿ ೩೦ನೆಯ ಪದ್ಯದವರೆಗೂ ಇದೆ. ಈ ಕಟ್ಟಿನಲ್ಲಿ ರಾಜೇಂದ್ರವಿಜಯ ಮತ್ತು ಶಬರಶಂಖರವಿಲಾಸ ಎಂಬ ಗ್ರಂಥಗಳೂ ಇವೆ.

405

ಕೆ. ಎ. ೧೫೭	**ಗಿರಿಜಾಕಲ್ಯಾಣ**	ಚಂಪು
೧೩.೫" × ೮.೪"	ಹರಿಹರ	ಸು. ೧೨೦೦
೧–೨೬೫ ಪತ್ರ	೨೪ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಗಿರಿಜಾಕಲ್ಯಾಣಂ ಪದ್ಯಕಾವ್ಯ ಕಥಾಗರ್ಭ
ಸ್ವಸ್ತಿ ಸಮಸ್ತ ಸಮುದ್ರ ಮುದ್ರಿತ ಧರಣೀಕಾಂತಾ ನಾಭೀಕಮಲ ಮಧ್ಯಸ್ಥಿತ ಕರ್ಣಿಕೆಯಂತಿರ್ಪ ಮೇರುವಿನ ಮೂಡಣ ಜಲಧಿಯಿಂ ಪಶ್ಚಿಮವಾರ್ಧಿ ಪರ್ಯಂತಂ × × × ಪ್ರಥಮಾಶ್ವಾಸಂ ॥ ಹೈಮಾಚಲವರ್ಣನಂ

ಸ್ರಗ್ಧರಾ ॥ ಶ್ರೀಮಚ್ಛೈಲೇಂದ್ರಪುತ್ರೀ ಗುರುತರಸುರತ ಕ್ಷೀರವಾರಾಶಿ ಚಂದ್ರಂ
ವ್ಯೋಮಾರ್ಕೇಂದು ಕ್ಷಮಾತ್ಮಾನಲ ಜಲಪವಮಾನಾಷ್ಟಮೂರ್ತಿ ಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯ ನೆಮಗಮರಾನೀಕ ಮಾಣಿಕ್ಯಮೌಳಿ
ಸ್ತೋಮಾಂಘ್ರಿದ್ಯೋತಿ ಪಂಪಾಪುರದರಸ ವಿರೂಪಾಕ್ಷನಾನಂದದಿಂದಂ ॥ ೧ ॥

× × × ×

ಗಿರಿಜಾಕಲ್ಯಾಣಮಿಂತೀನುತ ಕೃತಿಯ ಪೆಸರ್ಭಾಪುರೆ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹಮಿಾ ಕಾವ್ಯಮಂ ಬಿ
ತ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥ ೩೩ ॥

ಅಂತ್ಯ : ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿ ಜ್ಞಾನ ವೈರಾಗ್ಯಮಂ
ಕರುಣಂಗೆಯ್ದೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥೧೧೩॥
ಗದ್ಯ ॥ ಇದು ಸಮಸ್ತ ಸುರನಿಕರ × × × ಹಂಪೆಯ ಹರಿಹರದೇವ ವಿರಚಿತಮಪ್ಪ ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್ ಪಾರ್ವತೀ ಪರಮೇಶ್ವರ ವಿವಾಹವರ್ಣನಂ ದಶಮಾಶ್ವಾಸಂ ಸಂಪೂರ್ಣಂ ಗದ್ಯ ೧ ವೃತ್ತ ೨೬ ಕಂದ ೮೭ ವಚನ ೪೬ ಅಂತು ೧೬೨ ಆಶ್ವಾಸ ೧೦ ಕ್ಕೆ ಗದ್ಯ ೧೧ ವೃತ್ತ ೨೬೪ ಕಂದ ೭೧೪ ವಚನ ೩೮೧ ಅಂತು ೧೩೭೦ ಗಿರಿಜಾಕಲ್ಯಾಣಂ ಸಂಪೂರ್ಣ.

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ಪತ್ರದ ಒಂದು ಕಡೆ ಮಾತ್ರ ಬರೆದಿದೆ.

406

ಕೆ. ಬಿ. ೩೭೨	ಗಿರಿಜಾಕಲ್ಯಾಣ	ಚಂಪು
೮.೫" × ೬.೫"	ಹರಿಹರ	ಸು. ೧೨೦೦
೯೯ ಪತ್ರ	೨೫ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ × × ಉಭಯ ಕವಿತಾ ವಿಶಾರದ ಶಿವಕವೀಶ್ವರರಾದ ಹಂಪೇ ಹರೀಶ್ವರಾಚಾರ್ಯರು ಶಾಲೀವಾಹನಶಕ ೧೨೨೨ನೇ ಕ್ರಿಸ್ತಶಕ ೧೩೦೦ ರಲ್ಲು ರಚಿಸಲ್ಪಟ್ಟ ಗಿರಿಜಾಕಲ್ಯಾಣದ ಪ್ರಬಂಧವನ್ನು ಬರೆಯುವದಕ್ಕೆ ನಿರ್ವಿಘ್ನ ಮಸ್ತು ||

ಘನ ಕವಿತಾ ವಿಲಾಸದೊಳೇ ಸಂದ ಮಯೂರನ ರೇಖೆ ಕಾಳಿದಾ
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧನಾಂಜು ಕೇಶಿರಾ
ಜನ ಬಗೆಯುದ್ಭಟ್ಟಯ್ಯನ ಗಭೀರತೆ ಮಲ್ಲಣನೇಳ್ಗೆ ಭೋಜರಾ
ಜನ ಝುಸವೆನ್ನ ಕಾವ್ಯರಸದೋಳ್ನಲವಿಂ ನೆಲಸಿರ್ಕೆ ಸಂತತಂ ॥ ೮ ॥

ವೃ ॥ ಗಿರಿಜಾಕಲ್ಯಾಣಮಿತೀ ನುತಕೃತಿಯ ಪೆಸರ್ಭಾಪುರೇ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರ ಗಿರಿಜೋದ್ವಾಹವೀ ಕಾವ್ಯಮಂ ವಿ
ಸ್ತರದಿಂ ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹ ದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷ ಸಾಕ್ಷಾತ್ಸುಪುತ್ರಂ ॥ ೩೩ ॥

ಅಂತ್ಯ : ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೈದೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ॥ ೯೭ ॥

ಗದ್ಯ ॥ ಯಿದು ಸಮಸ್ತ ಸುರನಿಕರ × × × ಹಂಪೆಯ ಹರಿಹರದೇವ ವಿರಚಿತಮಪ್ಪ ಗಿರಿಜಾಕಲ್ಯಾಣ ಮಹಾಪ್ರಬಂಧದೊಳ್ಪಾರ್ವತಿ ಪರಮೇಶ್ವರ ವಿವಾಹವರ್ಣನಂ ದಶಮಾಶ್ವಾಸಂ ಸಮಾಪ್ತಂ.

ವಿಷಯ : ಪಾರ್ವತೀಪರಮೇಶ್ವರರ ವಿವಾಹ.

ವಿಶೇಷ : ಗ್ರಂಥಕ್ಕೆ ಮೊದಲು 'ಕಳಲೆಯಲ್ಲಿರುವ ವರಕೋಡು ಪ್ರೈ. ಮಾ॥ ಸಿದ್ದಪ್ಪನ ಪುಸ್ತಕವೂ (ಗಿರಿಜಾಕಲ್ಯಾಣ) 23-10-1904 ಶಾಲಿವಾಹನ ಶಕ ೧೮೨೬ ನೇ ಕ್ರೋಧಿನಾಮ ಸಂವತ್ಸರದ ಆಶ್ವೀಜ ಶುದ್ಧ ೫ ಗುರುವಾರದ ದಿವಸ ಪ್ರಾರಂಭಃ ಶಾಲಿವಾಹನ ಶಕ ೧೭೦೫ನೇ ಶೋಭಕೃತು ನಾಮ ಸಂವತ್ಸರದಲ್ಲಿ ಬರೆದಿದ್ದ ಓಲೇಪುಸ್ತಕದ ಮೂಲಪ್ರತಿ ಪ್ರಕಾರ ಬರೆದಿದ್ದೇನೆ' ಎಂದಿದೆ. ಪ್ರತಿಯ ಮೊದಲು ೨, ೩, ೪ ಪತ್ರಗಳು ಖಾಲಿ ಇದ್ದು ಕಾವ್ಯವು ಮೊದಲ ಆಶ್ವಾಸದ ಎಂಟನೆಯ ಪದ್ಯದಿಂದಿದೆ. ಪತ್ರಗಳ ಕ್ರಮಸಂಖ್ಯೆಯಿಲ್ಲ, ಎಣಿಕೆಮಾಡಿ ಪತ್ರಸಂಖ್ಯೆ ಹಾಕಲಾಗಿದೆ. ೧ ನೆಯ ಪತ್ರದಲ್ಲಿ ಕವಿಯಕಾಲ ಸೂಚಿತವಾಗಿದೆ.

407

ಕೆ. ಬಿ. ೩೮೩	**ಗಿರಿಜಾಕಲ್ಯಾಣ**	ಯಕ್ಷಗಾನ
೭.೬"×೫.೯"	ಅಳಿಯ ಲಿಂಗರಾಜ	೧೮೫೦
೨೪–೪೭ ಪತ್ರ	೨೨ ಪಂಕ್ತಿ	೧೮ ಅಕ್ಷರ

ಆದಿ: ಶ್ರೀ × × × ಗಿರಿಜಾಕಲ್ಯಾಣ ಬರಿಯುವದಕ್ಕೆ ಶುಭಮಸ್ತು.
ವೃತ್ತ ॥ ಶೀಮತ್‌ಕ್ಷ್ಮಾಧ್ರಧರಜಾ ಚಿರಂತನ ತಪಸ್ಸಂಪಲ್ಲತಾ ಸತ್ಫಲಂ
ಕಾಮಾಂಗಾತುಲ ತೂಲದಾಹದಹನಂ ನಿಶ್ರೇಯಸ್ಯೆಕಾಶ್ರಯಂ
ಸಾಮಾಂಧಾಸುರ ತಾರಕಾರಿಜನಕಂ ಭಕ್ತಾವನೊನ್ನಿದ್ರಕಂ
ಪ್ರೇಮಂಬೆತ್ತು ಕೃಪಾರ್ಣವಂ ಸಲಹಲೆಂಮಂ ದಕ್ಷವಿಧ್ವಂಸಕಂ ॥ ೧ ॥

ಅಂತ್ಯ : ಕರ ರಸ ರಂಧ್ರ ಪಯೋನಿಧಿ
ಪರಿಮಿತ ಕಲಿವರ್ಷರಾಜಿ ಕಳೆಯಲ್ಕಾಗವ
ತರಿಸಿದ ದುರ್ಮತ್ಯಬ್ದದಿ
ವರ ಗುಹಚರಿತೆಯನು ಲಿಂಗರಾಜನುಸುರ್ದಂ ॥ ೩೬೮ ॥
ಅಂತೂ ಸಂದಿ ೧ಕಾಂ ಪದನೂ ೩೬೮ಕಾಂ ಗಿರಿಜಾಕಲ್ಯಾಣ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಪರಶಿವನು ಗಿರಿಜೆಯನ್ನು ಮದುವೆಯಾದುದು.

ವಿಶೇಷ : ಗ್ರಂಥದ ಕೊನೆಯಲ್ಲಿ ಗುಹನ ವಿಚಾರ ಕಂಡುಬರುತ್ತದೆ.

408

ಕೆ. ಎ. ೮೭/೩ | ಗಿರಿಜಾ ಪರಿಣಯ | ಹಾಡು
೧೫.೨" × ೯.೫" | ಶ್ರೀನಿವಾಸ | ೧೮೮೧
೩೬–೬೨ ಪತ್ರ | ೨೫ ಪಂಕ್ತಿ | ೨೨ ಅಕ್ಷರ

ಆದಿ: ಶ್ಲೋಕಂ ॥ ಶ್ರೀಮತ್ಕೈರವಬಂಧು ಭೂಷಿತ ಜಟಾಸಂಶ್ಲಿಷ್ಟ ಗಂಗಾಧಾರಃ
ಪ್ರಾಲೇಯಾದ್ರಿಸುತಾ ಪರಿಗ್ರಹ ಸಮುದ್ಭೂತ ಪ್ರಮೋದಾವೃತಃ
ವಾತಾಶಾದ್ರಿಮವಾಪ್ಯ ಭಕ್ತಿಭರಿತೋ ಯಸ್ಯಾಂಘ್ರಿಮಾರಾಧಯ
ತ್ಪದ್ಮಾವಲ್ಲಭಮಾಶ್ರಿತಾಘಹರಣಂ ಶ್ರೀ ಶ್ರೀನಿವಾಸಂ ಭಜೆ ॥ ೧ ॥

ಪ್ರಾರ್ಥನಾ ॥ ರಾಗ ಭೈರವಿ—
ವೃಷಶೈಲಪತೆ ಪಾಹಿಮಾಂ ಶ್ರೀ ಶ್ರೀನಿವಾಸ ಪಶುಪತಿಮುಖ ಸೇವಿತ ಬಿಸಜ
ಸಂಭವಭಾವ್ಯ ವಸುಮತೀ ಸುರಸೇವ್ಯ ತಲಸುಮುಸಾಮತಪಿತ

× × × ×

ಮೋದಚಿತ್ತನ ಮಾಡಿದೆ ಶ್ರೀಧರ ಭಕ್ತವಿನೋದನದಿತಿಸುತ
ಸೂದನ ದುರಿತವಿಚ್ಛೇದನ ಗುಣಯುತ ॥ ೧ ॥

ಅಂತ್ಯ: ರಾಗ ॥ ಮಂಗಳಮಿಂದುಧರಗೆ ಭವಹರ ಗಂಗೋತ್ತಮಾಂಗನಿಗೆ ॥ ಪಲ್ಲ ॥
ಅಂಬಾವಿನೋದನಿಗೆ ನಿರ್ಜಿತ ಶಂಬರಸೂದನಗೆ
ಕುಂಭಿನಿಯೊಳು ನೃಕದಂಬವ ಪೊರೆವಗೆ ॥ ೧ ॥ × × ×
ಆಕಾಳಿಇಂದ ಭವನೊಂದಲು ಬಾಲಸಂತಾಂ
ಪಾಕಾರಿ ವೈರಿಕುಲಕೃಂತನನೈದು ಮತ್ತಾಂ
ಲೋಕೋಪಕಾರಪರನಾಗಿರಲಾದೀತೇಯ
ಸಾಕಲ್ಯಸಿದ್ಧಿವಡದರ್ಸಲೆ ಸೇವಿಸುತ್ತಂ ॥ ೪ ॥

ವಿಷಯ: ಪಾರ್ವತೀ ಪರಮೇಶ್ವರರ ವಿವಾಹ.

ವಿಶೇಷ: ಕೆಲವು ಕಡೆಗಳಲ್ಲಿ ತಪ್ಪಾಗಿರುವುದನ್ನು ತಿದ್ದಿ ಬರೆದಿದೆ. ಇದರೊಂದಿಗೆ ಸಮುದ್ರಮಥನ, ಪ್ರಹ್ಲಾದಚರಿತ್ರೆ, ಕಿರಾತಾರ್ಜುನೀಯ, ಹರಿಶ್ಚಂದ್ರವಿಲಾಸ, ನಳೋಪಾಖ್ಯಾನ, ಹರಿಲೀಲಾವಿಲಾಸವೆಂಬ ಗ್ರಂಥಗಳೂ ಇವೆ.

409

ಕೆ. ಬಿ. ೩೫೬/೧	ಗಿರಿಜೆ ಗಂಗೆ ಸಂವಾದ	ಯಕ್ಷಗಾನ
೮" × ೬.೨"	?	?
೧–೬೬ ಪತ್ರ	೧೮ ಪಂಕ್ತಿ	೨೨ ಅಕ್ಷರ

ಆದಿ: ಗಿರಿಜೆ ಗಂಗೆಯು ಸಂವಾದ ಬರೆಯುವದಕ್ಕೆ ಶುಭಮಸ್ತು । ಅಂಮ್ಮನವರ ಅಷ್ಟಕ॥

ಸಾರಸಾರ ಸಮಾನ ಲೋಚನ ಕಾಂತ್ತಕಾಂತ್ತಿಯುತಾನನೆ
ಭೂರಿಭೂರಿಪು ಸಂಘ ಸಂಹೃತ್ತಿ ಶಕ್ತಿಸಮಾನ್ವಿತೇ
ಮಾರಮಾರಿಣೀ ದಕ್ಷದಕ್ಷಮುದಾಪಹಾಂಕ ವಿರಾಜಿತೇ
ಧೀರಧೀರತ್ತಿ ಪಾಲಪಾಲನಶೀಲೆ ಪಾಲಿಪುದಂಬಿಕೇ ॥

ಸೂಚನೆ ॥ ಶ್ರೀ ಮಹಾಕಲ್ಯಾಣಪಟ್ಟಣದಲ್ಲಿ ಪರಮುಗ್ನ್ಯಾನಿಶಕ್ತಿ ನೀಲಲೋಚನೆ ಬಸವೇಶ್ವರದೇವರಿಗೇ ಪೇಳ್ದ ಸಮರಸ ಸಂಪೂರ್ಣ ಚರಿತವನು ಆರುವೆಂಬಾ ಗುರುವಿಂಗೆ ಗ್ನ್ಯಾನವೆಂಬ ಶಿಶ್ಯ ನಿರೂಪಿಸಿ ಪೇಳ್ದ ಗಂಗೆ ಗಿರಿಜೆಯರ ಸಂವಾದನೂ.

ಅಂತ್ಯ: ಬಿದ್ದವರು ಬೀಳಲೆನುತಾ ಬಿರಿದಾಂಕ್ಕ
ಯಿದ್ದಲಿಯ ವರ್ನದವರೂ
ಮಥಗಣಿತತೋದಿ ನಿಜಶಕ್ತಿ ಮಾರ್ಭಲವೂ
ಅದ್ದಿ ಬಿಸುಡುವೆನೆನುತಲೀ
ಮುದ್ದುಮಂತ್ರವೂ ತಂತ್ರವೂ ಯಂತ್ರದಲಿ ಗದ್ದಲಿಸಿ

ವಿಷಯ: ಗಿರಿಜೆ ಗಂಗೆಯರ ಸಂವಾದ.

ವಿಶೇಷ: ಪುಸ್ತಕದ ಮೇಲುಹೊದಿಕೆ ಮಾತ್ರ ಬೇರೆಯಾಗಿದೆ. ಇದರೊಂದಿಗೆ ಮಹ ನ್ಸೌಮಿ ಪದ, ಗಂಗೆ ಗೌರಿ ವಾದ ಇವೆ.

410

ಕೆ. ಎ. ೪೮	ಗೀತಗೋಪಾಲಂ	ಹಾಡು
೧೨.೬" × ೭.೯"	ಚಿಕ್ಕದೇವರಾಜ	೧೭೦೦
೧–೧೧೦ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ: ಗೀತಗೋಪಾಲಂ ಬರಉದಕ್ಕೆ ಅವಿಘ್ನಮಸ್ತು ॥

ರಾಗ ಭೈರವಿ ॥ ಕಂ ॥

ಶ್ರೀಯಂ ತಂನೆರ್ದೆವನೆಯೊ
ಳ್ಪ್ರಾಯುವತಿಯನಡಿಯೊಳಿಂಬುಗೊಳಸಿದ ಸರಸೋ
ಪಾಯಂ ಮಂಗಳಕಾಯಂ
ಶ್ರೀಯಂ ಮಿಗೆ ನೆಗಳೆ ಚದುರ ಗೋವಳರಾಯಂ ॥ ೧ ॥

× × × ×

ತೊಡರ್ದಿರೆ ನುಡಿ ನುಂಣ್ಚರಗಳ
ಬೆಡಂಗು ಮನವೊಲ್ದು ಗೀತಗೋಪಾಲವೆಸ
ರ್ವಡೆದೊಳ್ಗಂನ್ನಡಗಬ್ಬಮ
ನೊಡರಿಸಿ ಚಿಕದೇವರಾಯನುಂ ನುತಿವೆತ್ತಂ ॥ ೧೧ ॥

ಅಂತ್ಯ : ರಾಗಾ ಘಂಟಾರವಾ ॥ ತಾಳಾ ॥
ಮನಮಿಗೆ ಲವಲವಿಸುತಿದೆ ಮರವೆ ಮೊಗದೋರುತಿದೆ ॥
ಪಲ್ಲಾ ॥ ಮುರಿದೆಳೆಮೆಯ್ನುವಿರ್ಮ್ರೊಳೆಯೆ ಬೆ
ಮರು ಬಿಡಿ ಬಂಣಿಗೆ ಬನದವಲ್ಲಿಂನ್ನು
ವೊಡಕುವಾತಿಗೆ ಮುಂದುದೋರದೆ ನಾನೀ ಬಗೆ
ಅಡಿಮುಡಿಗಾರೆನೋ ನಿಂನಡಿಗೆರಗುವೆನೂ ॥ ೨ ॥

ಕಕಮುಕವಾಗಿ ಕಣ್ಗತ್ತಲೆಗವಿವುತಿದೆ
ಅಕಟಕಟಾ ಸಾಧನೆಗಾನು ಸರಿಥೊರೆಯೆ
ಸಕಲ ಕಲ್ಯಾಣಗುಣಸಂಪಂನ ಸಾಕುಸಾಕಿಂನು
ಚಿಕದೇವರಾಯ ವರದ ಚಲುವ ಗೋಪಾಲಾ ॥೩॥ ಸಂಪೂರ್ಣಂ ॥ಶ್ರೀ॥

ವಿಷಯ : ಭಕ್ತಿಗೀತೆಗಳು.

ವಿಶೇಷ : ಪತ್ರದ ಒಂದು ಪಾರ್ಶ್ವದಲ್ಲಿ ಮಾತ್ರ ಬರೆವಣಿಗೆ ಇದೆ. ಶಕಟರೇಫದ ಬಳಕೆ ಇದೆ. ಒಂದೆರಡು ಕಡೆಗಳಲ್ಲಿ ಕೆಂಪು ಮಶಿಯಿಂದ ತಪ್ಪುಗಳನ್ನು ತಿದ್ದಿದೆ.

411

ಕೆ. ಬಿ. ೧೫	**ಗೀತಗೋಪಾಲ**	ಹಾಡು
೮.೧" × ೬.೫"	ಚಿಕ್ಕದೇವರಾಜ	೧೭೦೦
೧–೯೨ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಶ್ರೀ ಗೀತಗೋಪಾಲ ಪ್ರಾರಂಭಃ ಪ್ರಾಬೋಧಿಕ ಸಪ್ತಪದಿ. ರಾಗ ಭೈರವಿ.

ಕಂ ॥ ಶ್ರೀಯಂ ತಂನೆರ್ದೆವನೆಯೊ
ಳ್ಪ್ರಾಯುವತಿಯುನಡಿಯೊಳಿಂಬುಗೊಳಿಸಿದ ಸರಸೋ
ಪಾಯಂ ಮಂಗಳಕಾಯಂ
ಶ್ರೀಯಂ ಮಿಗೆ ನೆಗಳೆ ಚದುಜ ಗೋವಳರಾಯಂ ॥ ೧ ॥

ಅಂತ್ಯ : (೮೮ನೆಯ ಪತ್ರ) ॥ ಲಯಗ್ರಾಹಿ ॥
ವೊಂದುದೆಸೆಯೊಳ್ತುರುಕರೊಂದು ಕಡೆಯೊಳ್ಮರಸರೊಂದೆಡೆಯೊಳಾರೆಯರ ಬಿಂದಮಳವಿಂ ಬೇ
ರೊಂದು ಬಳಿಯೊಳ್ತಿಗುಳರೊಂದಿರವಿನೊಳ್ಕೊಡಗರೊಂದು ಕೆಲದೊಳ್ಮಲಿಗ ರೊಂದುವೆರೆದೆಲ್ಲರ್
ಸಂದಣಿಸಿ ಕಾಳೆಗಕೆ ಮುಂದುವರಿವನ್ನಮಥಟಿಂದವರಥಟ್ಟುಗಳ ಪಂದಲೆಗಳಂ ದಿ
ಗ್ಬೃಂದ ಬಲಿಯಿತ್ತು ಗೆಲವಿಂದೆ ಚಿಕದೇವನೃಪನಂದಮಗೆ ಪೆರ್ಜಸಮನೊಂದಿ ಸೊಗವಾಳ್ದಂ ॥
ಗದ್ಯಂ॥ಯಿದು ಸಕಲ ಜಗದುದಯ ವಿಭವಾದಿಲೀಲನುಂ ಲಕ್ಷ್ಮೀಲೋಲನುಂ × × × ಶ್ರೀಮದಪ್ರತಿಮ ವೀರನರಪತಿ ಶ್ರೀಚಿಕದೇವ ಮಹಾರಾಜ ವಿರಚಿತ ಮಪ್ಪ ದಿವ್ಯ ಪ್ರಬಂಧಗಳೊಳ್ ಶ್ರೀ ಗೀತಗೋಪಾಲ ಮಹಾಪ್ರಬಂಧದೊಳ್ ಉತ್ತರಭಾಗಂ ಸಂಪೂರ್ಣಂ ಮಂಗಳಂ ಶ್ರೀ ॥ ಗೀತಗೋಪಾಲ ಸಂಪೂರ್ಣ ॥

ವಿಷಯ: ಭಕ್ತಿ ಗೀತೆಗಳು

ವಿಶೇಷ: ಪತ್ರಸಂಖ್ಯೆಯಲ್ಲದೆ ಪುಟ ಸಂಖ್ಯೆಯನ್ನೂ ಕೊಟ್ಟಿದೆ.

412

ಕೆ. ೧೬೨	**ಗೀತಗೋವಿಂದ ಟೀಕೆ**	**ಶ್ಲೋಕ, ಟೀಕು**
೧೩.೮" × ೧.೩"	ಅಪ್ರಮೇಯಶಾಸ್ತ್ರಿ	ಸು. ೧೭೫೦
೧–೮೯ ಪತ್ರ	೭ ಪಂಕ್ತಿ	೭೫ ಅಕ್ಷರ

ಆದಿ: ವಂದೇ ಮಹಿಮಹಾನಂದದಾಯಿನಂ ಶ್ರೀಪತಿಂ ವಿಭುಂ ।
ಬೃಂದಾರಕೌಘಸಾನಂದ ವಂದೇ ಹರೀ ಪುರೇಸ್ಥಿತಂ ॥ ೧ ॥
× × × ×
ಅಪ್ರಮೇಯ ಪದಾಂಬೋಜ ಪೂಜಕೋಹಂ ಮಯಾಕೃತಂ ।
ಗೀತಗೋವಿಂದ ಕಾವ್ಯಸ್ಯ ಶೃಂಗಾರಸ್ಯ ಪ್ರಕಾಶಿತಾ ॥ ೭ ॥

ಮೇಘೈರ್ಮೇದುರಮಂಬರಂ ವನಭುವಃ ಶ್ಯಾಮಸ್ತಮಾಲಾದ್ರುಮೈ
ರ್ನಕ್ತಂ ಬೀರುರಯಂ ತ್ವಮೇವತದಿಮಂ ರಾಧೇಗ್ರಹಂ ಪ್ರಾಪಯಾ
ಯಿತ್ಥನಂ........ದೆ ಶತಚ್ಛರಿತಯೋಃ ಪ್ರತ್ಯದ್ವಕುಂಜದ್ರಮಂ ರಾಧಾ
ಮಾದವ
ರಾಧಾಮಾದವಯೋರ್ಜಯಂತಿ ಯಮುನಾ ಕುಲೇರಹಃ ಕೇಳಯಃ ॥

ಟೀಕೂ॥ ಹೇ ರಾಧೆ। ಯಲೆ ರಾಧಾದೇವಿಯೆ । ಯಸ್ಮಾತ್ | ಆವದಾ
ನೊಂದು ಕಾರಣ ದೆಸೆಯಿಂದ | ಅಂಬರಂ | ಆಕಾಶವು.

ಅಂತ್ಯ : ....ವನ ವಾಕ್ಯಂಗಳು ಮೃದುತರಂಗಳಾಗಿ ಅತ್ಯಂತ ರಸವತ್ತಾಗಿಯುಂ ಹೊರಗೊಳಗು ಕಾಣಿಸಲುಪಟಿತು | ಶೃಂಗಾರರಸವುಳ್ಳಂತಾದಾಗಿ ಯಿರುತಿಲ್ಲಾವೆಂಬುದರ್ಥಂ | ಹೇವಂ ದ್ವಿತಯಲೆ ಮ....ವೆ | ತವ | ನಿಂನ....××× ಜಯದೇವನ ವಾಕ್ಯಂಗಳಿಗೆ........××× ಕರ್ಣಾಕಟ........ಅಪ್ರಮೇಯಶಾಸ್ತ್ರಿ ವಿರಚಿತ ಗೀತಗೋವಿಂದ ಟೀಕಾಯಾಂ ಶೃಂಗಾರ ಪ್ರಕಾಶಿಕಾಯಾಂ ದ್ವಾದಶಸ್ಸರ್ಗಃ.

ವಿಷಯ : ಕೃಷ್ಣನಿಗೆ ಸಂಬಂಧಿಸಿದ ಗೀತೆಗಳು.

ವಿಶೇಷ : ಪ್ರತಿ ಶಿಥಿಲವಾಗಿದೆ.

413

ಕೆ. ೩೪೬/೧	**ಗೀತಗೋವಿಂದ ಟೀಕೆ**	ಶ್ಲೋಕ, ಟೀಕು
೧೦.೫" × ೨"	ಕೃಷ್ಣದಾಸ	?
೩೮–೧೨೪ ಪತ್ರ	೯ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ ×× ಗೀತಗೋವಿಂದ ಟೀಕೂ | ಹರಿಃ ಓ। ಶ್ಲೋಕಾ ॥

ಮೇಘೈಃರ್ಮೇದುರಮಂಬರಂ ವನಭುವಃ ಶ್ಯಾಮಸ್ತಮಾಲದ್ರುಮೈಃ
ನಕ್ತಂ ಭೀರುರಯಂ ತ್ವಮೇವ ತದಿಮಂ ರಾಧೇ ಗುಹಂ ಪ್ರಾಪಯಾ
ಯಿದ್ಧನಂದನಿದೇಶ ತಶ್ಚಲಿತಯೋಃ ಪ್ರತ್ಯಧ್ವಕುಂಜದ್ರುಮಂ
ರಾಧಾ ಮಾಧವಯೋರ್ಜಯಂತಿ ಯಮುನಾಕೂಲೇರಹಃ ಕೇಳಯಃ ॥ ೧ ॥

ಟೀಕೂ ॥ ಮೇಘೈಃ । ಮೇಘಗಳಿಂದಾ | ಅಂಬರಂ | ಆಕಾಶಉ | ಮೇಧುರಂ ದೊಡಿತಾಗಿದ್ಧಿತು | ವನಭುವಃ । ವನಭೂಮಿಗಳು | ತಮಾಲದ್ರುಮೈಃ | ಕದ್ದಾಳೆ ವೃಕ್ಷಗಳಿಂದ | ಕಪ್ಪಾಗಿ ಯಿರಲುಪಟ್ಟಉ ।

× × × ×

ಜಯದೇವ ಕವಿಯ ಕಾವ್ಯ ಚಮತ್ಕಾರವೆಂತ್ತೆಂದರೆ ।
ವಾಗ್ದೇವತಾಚರಿತ ಚಿತ್ರಿತ ಚಿತ್ತಸದ್ಮಾ
ಪದ್ಮಾವತೀ ಚರಣ ಚಾರಣ ಚಕ್ರವರ್ತೀ
ಶ್ರೀ ವಾಸುದೇವ ರತಿಕೇಳೀ ಕಥಾ ಸಮೇತ
ಮೇತಂ ಕರೋತಿ ಜಯದೇವ ಕವಿ ಪ್ರಬಂಧಂ ॥

ಅಂತ್ಯ : ಸ್ವಾಧ್ವೀಮದ್ವೀಕ ಚಿಂತಾನಭವತೀ ಭುವನೇ ಶರ್ಕ್ಕರೇ ಕರ್ಕ್ಕಶಾಂಶೇ
ದ್ರಾಕ್ಷೇದ್ರದ್ಯಾಂತಿ ಕೇತ್ವಾಮಮ್ರುತಮಸಿ ಕ್ಷೀರನೀರಂ ರಸಸ್ತ
ಮಾಕಂದಂ ಕಾಂತಾಧರ ಧರಣೀತಳಂಗಛ್ಛಗಛಂತೀ ಯಾವದ್ಭಾವಃ
ಶ್ರುಂಗಾರಸಾರಸ್ವತಮಯ ಜಯದೇವಸ್ಯ ವಿಷ್ವಾಗ್ವಚಂಸೀ ॥ ೩ ॥
ಇತಿ ಶ್ರೀಗೀತಗೋವಿಂದೇ ಕ್ರುಷ್ಣದಾಸ ಜಯ ಕವಿರಾಜ ಜಯದೇವ ಕ್ರುತೌ ಮಹಾಕಾವ್ಯೇ ಸ್ವಾದೀನರ್ತುಕಾವರ್ನ್ನನಂ । ನಾಮ ದ್ವಾದಶಸ್ಸರ್ಗ್ಗಃ ಸಮಾಪ್ತೇಯಂ ಗೀತಗೋವಿಂದಃ ॥ × × ×× × × ವಿರೋಧಿ ಸಂವತ್ಸರದ ಕಾರ್ತೀಕ ಶು ೩ ಕುಜವಾರ ಉದಯಕ್ಕೆ ಸಂಪೂರ್ನ್ನವಾಗಿ ಆಯಿತೂ.

ವಿಷಯ : ಕೃಷ್ಣನಿಗೆ ಸಂಬಂಧಿಸಿದ ಗೀತೆಗಳು.

ವಿಶೇಷ : ಪ್ರತಿ ಸುದೃಢವಾಗಿದೆ. ಇದರೊಂದಿಗೆ ಭಿಕ್ಷಾಟನ ಚರಿತ್ರೆಯಿದೆ.

414

ಕೆ. ಬಿ. ೪೨೭	ಗೀತಗೋವಿಂದ ಟೀಕೆ	ಶ್ಲೋಕ, ಟೀಕು
೮.೬" × ೬.೬"	ಕೃಷ್ಣದಾಸ	?
೧–೧೩೩ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಗೀತ್ತಗೋವಿಂದೇ ಮಹಾಕಾವ್ಯೇ ಪ್ರಥಮಸ್ಸರ್ಗಃ ಪ್ರಾರಂಭಃ ॥

ಶ್ಲೋ ॥ ಮೇಘೈಃರ್ಮ್ಮೇದುರಮಂಬರಂ ವನಭುವಃ ಶ್ಯಾಮಸ್ತಮಾಲ್ಲದ್ರುಮೈಃ
ನಕ್ತಂ ಭೀರುರಯಂ ತ್ವಮೇವತ್ತದಿದಂ ರಾಧೇ ಗೃಹಂ ಪ್ರಾಪಯಾ ॥
ಇತ್ಥಂ ನಂದನಿದೇಶತ್ತಛಲಿತಯೋಃ ಪ್ರತ್ಯಧ್ವಕುಂಜಧ್ರುಮಂ
ರಾಧಾಮಾಧವಯೋರ್ಜಯಂತ್ತುತಿ ಯಮುನಾ ಕುಲೇರಹಃ ಕೇಳಯಃ॥

ಟೀ॥ ಹೇ ರಾಧೆ। ಯಲೆ ರಾಧೆಯೆ। ಅಂಬರಂ। ಆಕಾಶವು। ಮೇಘೈಃ। ಮೇಘಗಳಿಂದ್ದಾ। ಮೇದುರಂ। ದಟ್ಟವಾಗಿ ಇದೆ। × × ×

ಶ್ಲೋ॥ ಯದಿ ಹರಿಸ್ಮರಣೇ ಸರಸಂ ಮನೋ
ಯದಿ ವಿಲ್ಲಾಸಕಥಾ ಸುಕುತ್ತೂಹಲಂ
ಮಧುರ ಕೋಮಲಕಾಂತ್ತ ಪದಾವಳಿಂ
ಶ್ರುಣುಕ್ತದಾ ಜಯದೇವ ಸರಸ್ವತೀಂ ॥
ಟೀ॥ ಹರಿಸ್ಮರಣೆ। ಶ್ರೀ ಕೃಷ್ಣಸ್ಮರಣದಲ್ಲಿ । ಮನಃ । ಮನಸ್ಸು....

ಅಂತ್ಯ : ಶ್ಲೋ॥ ಯದ್ಗಾಂಧರ್ವ ಕಳಾಸುಕೌಶಲ್ಲಮನ್ನುದ್ಯಾತಂ ಚ....ಷ್ಣಾವಂ
ಯಚ್ಛೃಂಗಾರ ವಿವೇಕತತ್ವಮಪಿಯಾ ಕಾವ್ಯೇಷು ಲೀಲ್ಲಾಯುತ್ತಂ
ತತ್ಸರ್ವಂ ಜಯದೇವ ಪಂಡಿತಕವೇ ಕೃಷ್ಣೇ ತದಾಸಾತ್ಮಾನಾ
ಸಾನಂದಾಃ ಪರಿಶೋಭಿಯಂತ್ತು ಸುಧಿಯಂ ಶ್ರೀಗೋವಿಂದತಃ
॥ ೭೨ ॥

× × × × ಯಿಾ ಕಾವ್ಯವಂನ್ನು ವಿದ್ವಾಂಸರುಗಳು ಸಂತೋಷ ಯುಕ್ತವಾಗಿ ಚಂನ್ನಾಗಿ ಪರಿಶೋಧಿಸತಕ್ಕದ್ದು । ಅಂದರೆ ಚಂನ್ನಾಗಿ ಶ್ರವಣ ವಂನ್ನು ಮಾಡುವದ್ದು ಯಂಬುವ ಅಭಿಪ್ರಾಯವು ॥ ೭೨ ॥ ....ಗೋವಿಂದೆ ಶ್ರೀ ಕೃಷ್ಣದಾಸ........ಗೀತಗೋವಿಂದೆ ಮಹಾ ಕಾವ್ಯೇ........ದ್ವಾದಶಸ್ಸರ್ಗಃ ಶ್ರೀ × × ಗೀತಗೋವಿಂದೇ ಮಹಾಕಾವ್ಯೇ ಹನ್ನೆರಡು ಸರ್ಗದ ಟೀಕು ಸಮಾಪ್ತಾ ಚತುರ್ವಿಂಶಾಷ್ಟಪದಿ ಸಮಾಪ್ತಾ ಟೀಕು ಸಮಾಪ್ತಾ.

ವಿಷಯ : ಕೃಷ್ಣನಿಗೆ ಸಂಬಂಧಿಸಿದ ಗೀತೆಗಳು.

ವಿಶೇಷ : ಪ್ರತಿ ತುಂಬಾ ಶಿಥಿಲವಾಗಿದೆ.

415

ಕೆ. ೪೮	ಗೀತವೀತರಾಗ (ಸಟೀಕು)	ಶ್ಲೋಕ, ಟೀಕು
೯.೫″ × ೨″	ಅಭಿನವ ಚಾರುಕೀರ್ತಿ	?
೨೨–೧೦೫ ಪತ್ರ	೮ ಪಂಕ್ತಿ	೪೦ ಅಕ್ಷರ

ಆದಿ : ವೊಷ್ಪಿದಾಯಕನಂ। ಭ್ರಮರಾಲಿಸೇವಿತ । ಪಾದಪದ್ಮಯುಗೇನ। ಭ್ರಮರ। ತುಂಬಿಗಳ। ಆಲಿ। ಸಮೂಹದಿಂ। ಸೇವಿತ। ಪೊರ್ದ್ದಿದ । ಪಾದ । ಪಾದಂಗಳಿಂದ। ಪದ್ಮ। ತಾವರೆಗಳ। ಯುಗೇನ। ಯುಗಲದಿಂದ। ಭ್ರಾಜಿತಾಂ। ಶೋಭಿತ ನಾದಾಯಕನ। ಧರಧರ ॥ ೨ ॥

ಅಂತ್ಯ : ಸಮ್ಯಕ್ತ್ವ ಜ್ಞಾನದೃಷ್ಟಿ ಸ್ಫುರದವಗಹನಾನಂತವೀರ್ಯ್ಯ ಪ್ರಭಾವ
ಸೂಕ್ಷ್ಮಾಡ್ಯೇ ಗುರುಲಘ್ವ ಬಾಧಗುಣಸಂತಪಾಮಲೋ ನಿಶ್ಚಲಃ
ನಿಂದ್ವಂದ್ವೋ ನಿರುಪದ್ರವೋ ನಿರುಪವೋ ನಿರ್ದ್ಧೂತಕರ್ಮ್ಮದ್ರುವೋ
ನಿರ್ಲೇಪೋ ನಿರಪೋ ನಿರಂಜನ ವರಃ ಸಿದ್ಧಃ ಸದಾವಾತುನಃ ||

ಸಮ್ಯಕ್ತ್ವ ಜ್ಞಾನದೃಷ್ಟಿ ಸ್ಫುರದವಗಾಹನಾನಂತವೀರ್ಯ್ಯ ಪ್ರಭಾವಃ| ಸಮ್ಯಕ್ತ್ವ| ಸಮ್ಯಕ್ತ್ವದ| ಜ್ಞಾನ| ಅನಂತ ಜ್ಞಾನದ × × × ಪ್ರಬಂಧಂ| ಪ್ರಬಂಧವನು | ಆತನೋತ್ | ವಿಸ್ತರಿಸಿದನು ||೧೨|| ಇತಿ ಶ್ರೀಮದಭಿನವ ಚಾರುಕೀರ್ತಿ ಪಂಡಿತಾಚಾರ್ಯ್ಯವರ್ಯ್ಯಸ್ಯ ಕೃತಾ ಪ್ರಣೀತ ಗೀತವೀತ ರಾಗಾಭಿಧಾನಾಷ್ಟಪದಿವ್ಯಾಖ್ಯಾನಂ ಸಮಾಪ್ತಂ || ಮಂಗಲಮಹಾ ಶ್ರೀ ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೭೦೩ನೆಯ ಸೋಭ ಕೃತು ಸಂವತ್ಸರದ ಆಶ್ವೀಜ ಶುದ್ಧ ೧ ರವಿವಾರದಲ್ಲು ಶ್ರೀ ಹಳೇಬೀಡ ಶ್ರೀ ವಿಜಯ ಪಾರಿಶ್ವನಾಥ ಸ್ವಾಮಿಯ ಬಸದಿ ಸಂವಿದಾನದಲು ಅಷ್ಟಪತಿ ವ್ಯಾಖ್ಯಾನ ಸಮಾಪ್ತ.

ವಿಷಯ : ವೃಷಭತೀರ್ಥಂಕರನ ಹತ್ತು ಭವಾವಳಿಗಳ ವರ್ಣನೆ.

ವಿಶೇಷ : ೬೨ನೆಯ ಪತ್ರ ಲುಪ್ತ. ಕೊನೆಯ ಬೇರೊಂದು ಪತ್ರದಲ್ಲಿ ಜನ್ಮಪತ್ರಿಕೆ ಯಿದೆ.

416

ಕೆ.ಎ. ೧೫೦	**ಗುಣರತ್ನಮಾಲಾ**	ಶ್ಲೋಕು, ಟೀಕು
೧೨.೪" × ೭.೯"	ರಾಮಕೃಷ್ಣಶಾಸ್ತ್ರಿ	೧೮೧೫
೧–೨೦೮ ಪುಟ	೨೧ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಕೃಷ್ಣರಾಜ ಗುಣರತ್ನಮಾಲಾ ಪ್ರಬಂಧ ಬರೆಯುವದಕ್ಕೆ ನಿರ್ವಿಘ್ನ ಮಸ್ತು.

ಕೃಷ್ಣಃ ಕೃಷ್ಣಾಂಬುದಾ ಭಾಂಗಃ ಕೃಷ್ಣಾರ್ತಿ ಹರಣೋ ವಿಭುಃ|
ಕೃಷ್ಣರಾಜ ಮಹಾರಾಜಂ ಕೃಷ್ಣ ಸೂತೋಭಿ ರಕ್ಷತಾನ್||

ಟೀಕು || ನೀಲಮೇಘಶ್ಯಾಮಶರೀರನಾದ ದ್ರೌಪದೀಮಾನಸಂರಕ್ಷಕ ನಾದ ಚತುರ್ದಶ ಭುವನಾಧಿಪತಿಯಾದ ಅರ್ಜುನ ಸಾರಥಿಯಾದಂಥಾ ಶ್ರೀ ಕೃಷ್ಣನೂ ಶ್ರೀ ಕೃಷ್ಣರಾಜ ಸಾರ್ವಭೌಮರನ್ನು ಸರ್ವಕಾಲದಲ್ಲಿಯು ಪ್ರತಿ

ಕ್ಷಣೋಪಚಿಯ್ಯ....ಖಂಡ ಸಾಂಬ್ರಾಜ್ಯದಿಂದ ರಕ್ಷಿಸಲಿ ಯಂಬದಾಗಿ ಪ್ರಾರ್ಥನಾ ಮಂಗಳಶ್ಲೋಕಾಪ್ರಾಯಃ ॥ ೧ ॥

ಅಂತ್ಯ : ಶ್ಲೋಕಾ ॥ ಗಿರ್ಯಗ್ನಿದ್ವಿರ್ನೇಪವಿಧುಭಿರ್ಗುಣಿತೇ ಶಾಲಿವಾಹನೇ
ಯವಾಬ್ದೇದೂಸಿವಾರ್ಗೆಸ್ಮಿನ್ಕೃಷ್ಣರಾಜೇಂದ್ರ ಶಾಸನಾತ್
ರಚಿತಾ ರಾಮಕೃಷ್ಣೇನ ವಿದು....ರೇಣಪ....ಗ್ರಾಹ್ಯಾ
ಟೀಕಾ ಕರ್ನಾಟಭಾಷಯಾ ॥........ ...

ಯಿಾ ದಿವಸ ಯಿಾ ಗ್ರಂಥದ ಟೀಕು ಮಾಡಿ ಸಂಪೂರ್ಣವಾಗಿ ಭಗವದರ್ಪಿತ ವಾಗಿ ಯಿಥೇಯಂಬ ತಾತ್ಪರ್ಯಾರ್ಥಕ್ಕೆ ಶ್ರೀರಸ್ತು ॥

ಶಿವೋಹಮಿತಿ ಭಾವರ್ಯ ಶಿವಮುಪಾಸ್ಯಯಾಯಾಚ್ಛಿವಂ
ಶಿವೇ....ನ ವಿನಾಶಿವಂ ನನಮತಃ ಶಿವಾಯಾ ಶಿವಂ
ಶಿವಾದಿತರ ಸೇವನಂ ಶಿವ....ಜತುಃ ಸ್ಮೃತೇಃ
ಶಿವಸ್ಯ ಶಿವತಾಮಿ ಯಾಚ್ಛಿವ ಶಿವೇಶಿತುಪ್ಯೈ ಶಿವೇ ॥

ವಿಷಯ : ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳಲ್ಲಿ ಹೇಳುವ ಸ್ಥಳಮಹಾತ್ಮ್ಯೆ, ಸ್ರಷ್ಟಿಕ್ರಮ ನಿರೂಪಣೆ, ಕಾಲಭೇದ, ದೇಶಪ್ರಕಾಶ, ಪೂರ್ವರಾಜರ ವೃತ್ತಾಂತ, ಮೈಸೂರು ರಾಜರ ವಿಚಾರ, ಅಷ್ಟದಶಾ ಪುರಾಣದ ದಶಾವತಾರ, ವರ್ಣಾಶ್ರಮ, ರಾಜ, ವೈಶ್ಯ, ಶೂದ್ರ ಧರ್ಮ ವಿವರಣೆ, ಅಷ್ಟಾಂಗ ಯೋಗ, ಅದ್ವೈತ ಜ್ಞಾನ ಇವುಗಳ ನಿರೂಪಣೆ.

ವಿಶೇಷ : ಗ್ರಂಥದ ಎಲ್ಲ ಪತ್ರಗಳೂ ಹುಳುಗಳಿಂದ ಕೊರೆಯಲ್ಪಟ್ಟಿವೆ. ಮೈಸೂರಿನ ಅರಸರಾದ ಶ್ರೀ ಕೃಷ್ಣಭೂಪಾಲರ ಕಾಲದಲ್ಲಿ ರಚಿಸಿದಂತೆಯೂ, ಶಾಲಿವಾಹನ ಶಕೆ ೧೭೩೦ರಲ್ಲಿ ಪ್ರಾರಂಭಿಸಿ ೧೭೩೩ರಲ್ಲಿ ಮುಗಿಸಿದಂತೆಯೂ ಕವಿ ಹೇಳಿ ಕೊಂಡಿದ್ದಾನೆ.

417

ಕೆ. ಬಿ. ೩೫೧/೧ — **ಗುಂಡುಬ್ರಹ್ಮಯ್ಯಗಳ ಸುವ್ವಿ** — ತ್ರಿಪದಿ

೮" × ೬.೨" — ? — ?

೧–೯೨ ಪತ್ರ — ೧೮ ಪಂಕ್ತಿ — ೧೬–೨೫ ಅಕ್ಷರ

ಆದಿ : ಗಂಡು ಬ್ರಹ್ಮಯ್ಯಗಳ ಸುವ್ವಿ ಮುಂತಾದ್ದು.... ....
ಶ್ರೀಮಂನ್ಮಹಾದೇವಾ ಸೋಮನಾಡಿದ ಭವಾ
ಕಾಮಿತಫಲವೀವ ಪರಶಿವನಂಘ್ರಿಗೆ
ಪ್ರೇಮದಿಂದೆರಗಿ ನಮಿಸುವೆ ॥ ೨ ॥

ಅಂತ್ಯ : ಶಿವಯೆಂದೆಂದು ಭಕ್ತಾರು ಕುಂದಾದೆಯಿದ ಕೇಳಿ
ಸಂದಿಯ ಧ್ವಜವ ಹಿಡಿಶಿದಾರೂ
ನಂದಿಯ ಧ್ವಜವ ಹಿಡಿಶಿದರು ಭಕ್ತರಿಗೆ
ಅಂದದೊಳು ಅಯಿಶ್ವರ್ಯಫಲವುಂಟೊ ॥ ೨೨೦ ॥

ಅಂತು ಸಂಧಿ ನಾಲ್ಕಕಂ ಪದನೂ ೯೫೦ಕ್ಕಂ ಮಂಗಳಮಹಾ ಶ್ರೀ ।
ಗುಂಡಬ್ರಹ್ಮಯ್ಯಗಳ ಸುಪ್ಪಿ ಸಂಪೂರ್ಣಂ.

ವಿಷಯ : ಶಿವಶರಣ ಗುಂಡುಬ್ರಹ್ಮಯ್ಯನ ಚರಿತ್ರೆ.

ವಿಶೇಷ : ಗ್ರಂಥದ ಮೊದಲ ಸಂಧಿ ೧೫ನೆಯ ಪತ್ರದವರೆಗಿದ್ದು, ಮತ್ತೆ ಮೊದಲ ಸಂಧಿಯಿಂದಲೇ ಗ್ರಂಥ ಪ್ರಾರಂಭವಾಗುತ್ತದೆ. ಪತ್ರಗಳು ತೆಳುವಾಗಿವೆ. ಈ ಗ್ರಂಥದ ಜೊತೆಯಲ್ಲಿ ಜೋಗುಳದ ಪದ, ಬಸವಾಷ್ಟಕ, ಬಸವೇಶ್ವರ ರಗಳೆ, ಗಣಾಷ್ಟಕ, ಬಸವಪವಾಡ, ಸುಲಿಯ ಚಂದಯ್ಯನ ವಚನ, ಹಾಡುಗಳು, ಪುರಾತನ ದೇವಿಯರ ತ್ರಿವಿಧಿ, ನಿರಾಳಗುರುಸ್ತೋತ್ರ ಇತ್ಯಾದಿ ಗಂಥಗಳೂ ಇವೆ. ಗ್ರಂಥದ ಕೊನೆಯ ಪತ್ರಗಳಲ್ಲಿ ಮಿಶ್ರ ವಿಷಯಗಳಿವೆ.

418

ಕೆ. ಎ. ೨೦೭	**ಗುಮ್ಮಟಸ್ವಾಮಿಯ ಚರಿತೆ**	**ಸಾಂಗತ್ಯ**
೧೪" × ೮"	ಚಂದ್ರಮ	೧೬೫೦
೧–೧೭೩ ಪತ್ರ	೩೦ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ ವೀತರಾಗಯ ನಮಃ ಗುಮ್ಮಟಸ್ವಾಮಿ ಚರಿತೆಯ ಬರೆವುದಕ್ಕೆ ನಿರ್ವಿಘ್ನ ಮಸ್ತು.

ಸುರನರಪತಿನುತ ಚರಣಸರೋಜ ಭಾ
ಸುರತರ ಕೇವಲಬೋಧಾ
ಪರಮಾರ್ಹಂತ್ಯ ಲಕ್ಷ್ಮೀಪತಿ ನಮಗೆ ನೀ
ಶರಣಾಗು ನಮಿ ಜೀನೇಶಾ ॥ ೧ ॥

× × ×

ಶೃತ ಸಾಗರಮುನಿಗತಿಪ್ರಿಯಶಿಷ್ಯ ಸಂ
ನುತ ಕವಿ ಚಂದ್ರಮ ನಾನೂ
ಪ್ರತಿಯಲ್ಲವೆನಲೀ ಕೃತಿಯ ಪೇಳ್ವೆನು ಬುಧ
ತತಿ ಮೆಚ್ಚುವಂತೆ ಕನ್ನಡದಿ ॥ ೩೧ ॥

ಅಂತ್ಯ : ಇದು ಶ್ರುತಸಾಗರಮುನಿರಾಯನ ಶಿಷ್ಯ
ಚದುರ ಚಂದ್ರಮ ವಿರಚಿಸಿದಾ
ಮದನಾರಿ ಗುಂಮಟಸ್ವಾಮಿಯ ಚರಿತೆಯೊ
ಳ್ಪದಿನೇಳನೆಯ ಸುಸಂಧಿ ॥ ೧೬೭ ॥

ಅಂತು ಸಂಧಿ ೧೭ಕ್ಕಂ ಪದ ೨೧೮೫ಕ್ಕಂ ಮಂಗಳಮಹಾ ಶ್ರೀ.

ವಿಷಯ : ಕಾರ್ಕಳದ ಗೊಮ್ಮಟೇಶ್ವರನ ಚರಿತ್ರೆ.

ವಿಶೇಷ : ಪತ್ರಗಳ ಒಂದೇ ಕಡೆ ಬರವಣಿಗೆಯಿದೆ. ೬೦–೮೫ ಪತ್ರಗಳ ಕ್ರಮಾಂಕ ಗಳನ್ನು ಬಿಟ್ಟಿರುವುದರಿಂದ ಒಟ್ಟು ಪತ್ರಸಂಖ್ಯೆ ೧೪೭ ಆಗುತ್ತದೆ. ಗ್ರಂಥ ಲೋಪವಿಲ್ಲ. ಗ್ರಂಥದಾದಿಯ ಬೇರೆ ಎರಡು ಪತ್ರಗಳಲ್ಲಿ ವಿಷಯಾನುಕ್ರಮಣಿಕೆ ಇದೆ.

419

ಕೆ. ಬಿ. ೨೯೫	**ಗುರುಕೃಷ್ಣಬೋಧೆ**	ಹಾಡು
೪.೪" × ೩.೧"	ಕನಕದಾಸಾದಿಗಳು	ಸು. ೧೫೫೦
೩೮೮ ಪತ್ರ	೨೦ ಪಂಕ್ತಿ	೨೧ ಅಕ್ಷರ

ಆದಿ : ರಾಗಾ ॥ ಆನಂದಭೈರವಿ ॥
ನೀ ಯಲ್ಲಿಗೆ ವೋಡಿ ಹೋದೆ ಕಂದೈಯ್ಯ ನೀ ಯಲ್ಲಿಗೆ ವೋಡಿ ಹೋದೆ
ಕಂದೈಯ್ಯ ಕಂದೈಯ್ಯ
ನೀ ಯಂನ ಕಂಣಾ ಮುಂದಿರದೆ ನೀ ಯಲ್ಲಿಗೆ ॥ ಪಲ್ಲ ॥
ಆವಾಯ ಬಂಗಲದೊಳಾಡದೆ ಕೆನೆಹಾಲು ಸಕ್ಕರೆಯ
ನೀನೊಲ್ಲದೆ ಪುಟ್ಟ ಬಾಲರೊಡನೆ ನೀನಾಡದೆ ಬಾಲೈಯ್ಯ
ನೀ ಯಂನ್ನ ಕಂಣಾ ಮುಂದಿರದೆ ನೀ ಯಲ್ಲಿಗೆ ॥ ೧ ॥

× × × ಶ್ರೀ ಗುರುಭ್ಯೋ ನಮಃ ಸಾಧಾರಣ ಸಂವತ್ಸರದ ಚೈತ್ರ ಬಹುಳ ೫ ಯಿಂದುವಾರ ಯೆಪ್ರೆಲ್‌ಗುರ್ರೆ ಮತ್ಸ್ಯಜಯಂತಿ ತೇದಿ ೨೧ರಲ್ಲು ಗುರುಕೃಷ್ಣ ಬೋಧೆಯಂಬ ಗ್ರಂಥವನ್ನು ಬರೆಯುವದಕ್ಕೆ ನಿರ್ವಿಘ್ನಮಸ್ತು ರಾಗಾ। ನಾಟಿ।
ಜಯತು ಸತ್ಯಸನಾಥ ಜಯತು ನಿಜ ನಿರ್ಭೀತ
ಜಯತು ಸದ್ಗುರುನಾಥ ಜಯತು ಗುರುಕೃಷ್ಣಾ ॥ ಪಲ್ಲ ॥

ಅಂತ್ಯ : ಕಂನೆ ಮೊರೆಯ ಲಾಲಿಸಿ ಕೇಳಿ
ಮುಂನಿಸುತ್ತ ವಸ್ತ್ರವಿತ್ತೆ
ನಿಂನ್ನ ಮಹಿಮೆಯಂತು ಪೊಗಳ್ವೆ
ಪಂನ್ನಗಶಯನ ವೆಂಕಟೇಶ ॥ ೨ ॥
ಯೋಚನೆ ಯಾಕೀಗಲೆನಗೆ
ಮೋಚಕಾಂಗ ಬಂದು ಸಲಹೊ
ಕೀಚಕಾರಿಗನುಜಗೊಲಿದ
ಬೀಚುಗೊಂಡ ಪುರೀಂದ್ರ ಹರಿಯೆ ॥ ೩ ॥ ಶ್ರೀ

ವಿಷಯ : ಭಕ್ತಿ, ಜ್ಞಾನ, ನೀತಿಗಳನ್ನೊಳಗೊಂಡ ಹಾಡುಗಳು.

ವಿಶೇಷ : ಆರಂಭದ ಮೊದಲು ೭ ಪತ್ರಗಳಿದ್ದು ಅವುಗಳಿಗೆ ಸಂಖ್ಯೆಗಳನ್ನು ಕೊಟ್ಟಿಲ್ಲ. ಈ ಪತ್ರಗಳನ್ನು ಸೇರಿಸಿಕೊಂಡು ಆದಿ, ಅಂತ್ಯಗಳನ್ನು ಮೇಲೆ ಕೊಟ್ಟಿದೆ. ಅಕ್ಷರ ಸ್ಫುಟವಾಗಿದೆ.

420

ಕೆ. ಬಿ. ೨೫೪	**ಗುರುದತ್ತ ಚರಿತ್ರೆ**	ಸಾಂಗತ್ಯ
ಆ" × ೬.೬"	ದೇವರಸಪಂಡಿತ	ಸು. ೧೬೫೦
೧–೨೫ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಗುರುದತ್ತಚರಿತ್ರೆ–ಸಾಂಗತ್ಯ × × ×
ಶ್ರೀ ಸುರಪತಿ ವಿನಮಿತ ಪದಬಿಸಜತಾ
ದೇಶ ತರಣಿ ನಿಭ ಕಿರಣಾ
ಭಾಸುರಮಲ ಗುಣ ಗಣಯುತನಾದಿ ಜಿ
ನೇಶ ಪಾಲಿಸೊ ಮುಕ್ತಿಪದವಾ ॥ ೧ ॥
ಅಲಘು ಭಕತಿಭರದಿಂದೆರಗುವೆ
ನಲವರ್ಕ್ಕಿಯಂತೆ ಕೈವಲ್ಯಾ
ಲಲನೆಯನೊಲಿಸಿದ ಜಿತ ಜಿನಪನ ಸ
ಲ್ಲಲಿತಾಂಘ್ರಿ ಸರಶಿಜಗಳಿಗೆ ॥ ೨ ॥

ಅಂತ್ಯ : ಯಿಂಬಿನಿಂದಿದನೋದಿದವರಿದರರ್ತ್ಥವ
ನುಂ ಬಂಣಿಸಿ ಪೇಳ್ದವರೂ
ಸಂಭ್ರಮದಿಂದ ಕೇಳ್ವರು ಬಾಳಲಿ ಶಶಿಸೂರ್ಯ
ಕುಂಭಿನಿಯುಳ್ಳನೆವರ ॥ ೧೨ ॥

ಯಿದು ಸಾರಸುಖವ ಸಂತತವೀವ ಕೈವಾಲ್ಯ
ಸುದತಿಗೆರೆಯು ತಾನಾದ
ಸದಮಲ ಪುಣ್ಯಪುರುಷನ ಚಾರಿತ್ಯವಿಂ
ದಿದನು ಭವ್ಯರು ಪಾಲಿಪುದು ॥ ೧೩ ॥

ಯಿತಿ ಗುರುದತ್ತಚರಿತ್ರೆ ಪದ ೮೧೩ಕಂ ಮಂಗಳಮಹಾಶ್ರಿ.

ವಿಷಯ : ಗುರುದತ್ತರಾಯನ ಕಥೆ.

ವಿಶೇಷ : ಗ್ರಂಥವು ಸುಭದ್ರವಾಗಿದ್ದರೂ ಕೆಲವು ಪತ್ರಗಳ ಅಂಚಿನಲ್ಲಿ ಹುಳು ತಿಂದಿದೆ.

421

ಕೆ.ಬಿ. ೪೩೧	**ಗುರುಪೀಳಿಗೆ**	ಗದ್ಯ
೮.೧" × ೩.೭"	ರಘುನಾಥತೀರ್ಥ	?
೧–೭೧ ಪತ್ರ	೮ ಪಂಕ್ತಿ	೨೫ ಅಕ್ಷರ

ಆದಿ : ಶ್ರೀ ಗುರುಭ್ಯೋ ನಮಃ ॥ ಕೊಪ್ರಕ್ಷೇತ್ರದಲ್ಲಿ ಶ್ರೀಪಾದರಾಯರಿಗೆ ವಿಬುಧೇಂದ್ರತೀರ್ಥರು ಗ್ರಂಥ ಹೇಳುವ ಕಾಲದಲ್ಲಿ ಉತ್ತರಾದೀಮಠಾ ಅವಲಂಬಿಗಳಾದ ರಘುನಾಥತೀರ್ಥ ಶ್ರೀಪಾದಂಗಳು ಬಂದ ಕಾಲದಲ್ಲಿ ಶ್ರೀಮದಾನಂದ ತೀರ್ಥರಾರಂಭವಾಗಿ ತಮ್ಮ ಗುರುಗಳಾದ ರಾಮಚಂದ್ರತೀರ್ಥರ ಪರ್ಯಂತರ ಅಶೇಷ ಗುರುಗಳು ಪಾರಂಪರ್ಯ ಸಂಸ್ಥಾನಗಳು ಮಾಹಾತ್ಮಿಯತ್ಕಿಂಚಿಗಳನ್ನ ಹೇಳಿದರು. ಅವು ಯಲ್ಲವನ್ನು ರಘುನಾಥತೀರ್ಥ ಶ್ರೀಪಾದಂಗಳು ಸಂಗ್ರಹಿಸಿ ತಮ್ಮ ದರ್ಶನ ಪುಸ್ತಕದಲ್ಲಿ ಬರಸಿ ಆದರ ಪ್ರತಿ ಕಲಿಯುಗದಲ್ಲಿ ಪ್ರಕಟವಾಗಬೇಕು ಯಂತ ಕಲಿಯುಗ ೪೨೨೪ ಶಾಲಿವಾಹನ ಶಕೆ ೧೦೪೫ನೇ ವಿಳಂಬಿ ನಾಮ ಸಂ| ವೈಶಾಖ ಶುಕ್ಲ ಅಕ್ಷ ತ್ರಿತೀಯಾ ಕರ್ಕಾಟಕ ಲಗ್ನದಲ್ಲಿ ಅ....ಕ ವ್ರತಗಳಿಂದ ನಿಸ್ತ್ರಾದ ಮದ್ವಗೇಹ ಭಟ್ಟರೂಪಾಜಕ ಕ್ಷೇತ್ರದಲ್ಲಿ ಇರತಾ ಇರಲಿಕ್ಕೆ ಮುಖ್ಯ ಪ್ರಾಣದೇವರು ಆ ಮದ್ವಗೇಹ ಭಟ್ಟರಲ್ಲಿ ಅವತರಸಿ ವಾಸುದೇವಯೆಂಬ ಜಲ್ಮನಾಮದಿಂದ ಉತ್ಪನ್ನರಾಗಿ ವೇದಗಳು ಅಭ್ಯಾಸಾನಂತರ ಗುರುಗಳಿಗೆ ಐತರೇಯ ಭಾಷ್ಯದಭಿಪ್ರಾಯಂಬ ದಕ್ಷಿಣೆಯನ್ನು ಕೊಟ್ಟು ಸೌಮ್ಯ ನಾಮ ಸಂವತ್ಸರದಲ್ಲಿ ಅಚ್ಯುತ ಪ್ರೇಕ್ಷ್ಯಾಚಾರ್ಯರಿಂದ ಸಂನ್ಯಾಸ ಶ್ವೀಕಾರ ಮಾಡಿ ಪೂರ್ಣಪ್ರಜ್ಞರೆಂಬ ನಾಮದಿಂದ ಅಚ್ಯುತ ಪ್ರೇಕ್ಷಕರಲ್ಲಿ ಮೋದೋ ಕಾಲದಲ್ಲಿ ಇಷ್ಟಸಿದ್ಧಿಯಂಬ ಗ್ರಂಥವನ್ನು ದೂಷಿಸಿದರು ॥

ಅಂತ್ಯ : ಆ ಸಮಯ ಮಹಾ ಅಗ್ನಿಬಾಧಿಸುಕಗಟಲು ಆಗ ವಿದ್ಯಾಧೀಶಾಚಾರ್ಯರು ಬಂದು ಮಹಾದ್ವಾರದ ಮುಂದೆ ಕೂಗೀ ಆ ದ್ವಾರ ಬಾಗೀಲ ತೆಗಿಸಿ ಪಟಗೀವ ಜ್ಯಗ ಇಟ್ಟುಕೊಂಡು ಸೀಘ್ರ ಹೊರಗ ಬರಲು ನಾಲ್ಕುಕೋಟಿ ಅಗ್ನಿ ವ್ಯಾಪಸಲು ಶ್ರೀ ಸ್ವಾಮಿಗಳು ನೋಡೀ ಶಂಖಪಾತ್ರಿ ವಳಗ ಇದ ಉದಕವು ಪ್ರೋಕ್ಷಿಸಲು ಪೂರ್ವದೋಗಾದೀಲೀ ಗ್ರಹಪದಾರ್ಥಗಳು ಸಹಾ ಕ್ಷೇಮವಾಯಿತು. ಇದು ಲೋಕಪ್ರಮಿತಾ ॥ ಇತಿ ಶ್ರೀ ಗುರುವಂಶಾವಳೀ ಶ್ರೀಮದಾಚಾರ್ಯರಾಭ್ಯ ಸಪ್ತಾಭಿನವತೀರ್ಥ ಶ್ರೀಪದಂಗಳ ಪರ್ಯಂತರಾ ॥

ವಿಷಯ : ಮಧ್ವಮತದ ಗುರುಪೀಳಿಗೆಯ ವಿಚಾರ.

ವಿಶೇಷ : ಕೆಲವು ಪತ್ರಗಳನ್ನು ಹುಳು ತಿನ್ನಲು ಆರಂಭಿಸಿದೆ. ೫ನೆಯ ಪತ್ರದಿಂದ ಮುಂದೆ ಪತ್ರಗಳು ಹಿಂದುಮುಂದಾಗಿವೆ. ಲಿಪಿ ದೇವನಾಗರಿ.

422

ಕೆ. ಬಿ. ೨೨೪	ಗುರುಬಸವಾಚಾರ್ಯರ ವಚನ	ಹಾಡುಗಬ್ಬ
೭.೮″ × ೬.೩″	?	?
೧–೮೨ ಪತ್ರ	೧೪ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ ಗಣಾಧಿಪತಯೇ ನಮಃ ಶ್ರೀ ಶಾರದ ಗುರುಭ್ಯೋ ನಮಃ ಶುಭಮಸ್ತು.
ತುಂಬಿಯಾಡುತ್ತೈತೆ ನೋಡಂಮ್ಮಯಿದೊಂದ
ರಿಂಬಿನ ಭೇದವ ಬಲ್ಲ ನಿತ್ಯಸು ॥ ಪ್ಲ ॥
ಆಕಾಶವನು ನುಂಗಿ ಬರುವಾಗ
ಸಾಕಾರ ಸೂರ್ಯಚಂದ್ರರ ನುಂಗಿ ತಮ್ಮ
ಬೇಕು ಬೇಡೆಂನದು ಮೂವರ
ಸೋಕಾಡದೆ ನುಂಗಿ ಸೋಕಿಸದಮ್ಮ ॥ ೧ ॥ × × × ×
ತಾವರೆ ಹೂವಿಗೆ ಬಂದವಳು ಯನ್ನ
ಭಾವ ಬಾರೆಂದು ತಾವರೆಕೊಳಕಿಳಿದಳು
ತಾವಿಗೆ ಕರತಂದು ಕೂಡಿದೆ ಅವಳ
ಭಾವದ ಕೂಟದ ಗುರುಬಸವನೆ ಬಲ್ಲಾ ॥ ೫ ॥

ಅಂತ್ಯ : ಮಂಗಳಂ ಮಂಗಳಂ ಗುರುಬಸವಲಿಂಗಕೆ ಸದಾ
ತುಂಗಮಹಿಮ ಜಂಗಮಾಂಗ
ಲಿಂಗ ಕಳಾಸಂಗವು ಹಿತ ಮಂಗಳಂ ॥ ಪಲ್ಲ ॥

ತರುಣ ತರಣಿ ಕಿರಣಗರ್ವ
ಹರಣ ಚರಣ ಶರಣ ಭರಣ
ಕರುಣ ಕರಣ ವಿತರಣ ಗುಣ
ವರುಣ ಶರಣ ಮರಣ ಮುಕ್ತ ಮಂಗಳಂ ‖ ೧ ‖
ತ್ರ್ಯಕ್ಷಭಜಕ ಪಕ್ಷ ಚರ
ದಕ್ಷದೀ ನರಕ್ಷಣ ಧೃತ
ದೀಕ್ಷ ನಿರ್ಜಿತಾಕ್ಷ ವಿನತ
ಮೋಕ್ಷಕರ ಕಟಾಕ್ಷದೇವ ‖ ೨ ‖
ನಾಶರಹಿತ ಕಾಶಿಕಾಮು
ಟೇಶ ಕೀರ್ತಿಭೇಷದವಳಿ
ಕಾಶ ಚಿದಾಕಾಶ ಗುರುಬಸ
ವೇಶಲಿಂಗ ಯಿಾಶದೇವ ಮಂಗಳಂ ‖ ೩ ‖ ಶ್ರೀ.

ವಿಷಯ : ವೀರಶೈವ ವೇದಾಂತ.

ವಿಶೇಷ : ಸಮಗ್ರ. ಒಟ್ಟು ನೂರಾರು ಹಾಡುಗಳಿವೆ. ಪ್ರತಿಯೊಂದು ಹಾಡಿಗೂ ಗುರು ಬಸವಾಂಕಿತವಿದೆ. ಈ ಹಾಡುಗಳಲ್ಲಿ ಪತ್ರ ೧೪ರಲ್ಲಿರುವ 'ಪ್ರಣಮಹತ್ವ'ದ ಹಾಡು ೩೭ ಪದ್ಯಗಳನ್ನೊಳಗೊಂಡ ದೊಡ್ಡ ಹಾಡು. ಇದರಂತೆಯೆ ೧೪ನೆಯ ಪತ್ರದಲ್ಲಿರುವ 'ಶರಣ ಮಹತ್ವ'ದ ಹಾಡೂ ಸಹ ೨೭ ಪದ್ಯಗಳನ್ನೊಳಗೊಂಡ ದೊಡ್ಡ ಹಾಡಾಗಿರುತ್ತದೆ. ಉಳಿದವು ೩, ೫, ೧೧ ಇತ್ಯಾದಿ ಚಿಕ್ಕ ಹಾಡುಗಳು. ಸರ್ಪಭೂಷಣ ಶಿವಯೋಗಿ ಇವರ ಕೃತಿಗಳಂತೆಯೇ ಇದೂ ಒಂದು ಹಾಡು ಗಬ್ಬ. ರಾಗ ತಾಳಗಳನ್ನೆಲ್ಲೂ ಸೂಚಿಸಿಲ್ಲ.

423

ಗುರುಬೋಧಾಮೃತ

ಕೆ. ಬಿ. ೧೬೦	ತ್ರಿವಿಧಿ, ವೃತ್ತ, ಗದ್ಯ, ಶ್ಲೋಕ, ಕಂದ	
೭.೮" × ೬.೩"	ಮಹಲಿಂಗದೇವ	೧೪೩೦
೧–೯೧ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ : ಶ್ರೀ ಗುರುಸಿದ್ಧಲಿಂಗಾಯ ನಮಃ ‖ ಗುರುಬೋಧಾಮೃತ ಪ್ರಾರಂಭಃ ‖

ಕಂದ ॥ ಗುರುಬೋಧಾಮೃತವಿದು ಸ
ದ್ಗುರು ಕಾರುಣ್ಯದೊಳು ತ್ರಿವಿಧಿವರ್ಣಕದಿಂದಂ
ವಿರಚಿಸಿದ ಕೃತಿಯು ನಿಶ್ಚಯವು
ಪರವಜ್ಞಾನಿಗಳು ಕೇಳಿ ಶಿವ ಸುಖದಿರವಂ ॥ ೧ ॥

ಅಂತ್ಯ : ಗುರುವೆ ಗುರು...........
ಕರ ದುರಿತಹರನೆ ನಿಮ್ಮಯ ಪದಮಂ
ಸ್ಮರಿಸಲೆಡ ಬಲದೊಳಿರ್ದಾ
ನರರೆಲ್ಲರು ಕೇಳ್ದು ಮುಕ್ತರಾದರು...............

ಅಂತು ಸ್ಥಲ ೫ ಕ್ಕಂ ಪದನು ಗ್ರಂಥ ವಚನ ವೃತ್ತ ಕಂದ ಸಹ ೧೦೨೧ಕ್ಕಂ ಶ್ರೀ ಶ್ರೀ ಮಂಗಳ ಮಹಾ ॥ ಶ್ರೀ ಶ್ರೀ ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲೀವಾಹನ ಶಕ ವರುಷ ೧೫೫೭ ನೆಯ ಭಾವ ಸಂವತ್ಸರದ ಜೇಷ್ಠ ಶುದ್ಧ ಪಂಚಮೀ ಬುಧವಾರದಲ್ಲೂ ಕೆರೆಯೂರಪುರದ ವೀರಣ್ಣವೊಡೆಯದೇವರ ಮಕ್ಕಳು ಕಿತ್ತೂರು ಗುರುದೇವರು ಚಿಕ್ಕವೀರಶಟ್ಟಿಯವರ ಮಕ್ಕಳು ಸಾವಂದಿಶಟ್ಟರಿಗೆ ಆಯುರಾರೋಗ್ಯ ಪರಮೈಶ್ವರ್ಯಾಭಿವೃದ್ಧಿಯಾಗಿ ಪುತ್ರಪೌತ್ರಾದಿಗಳಾಗಿ ಸುಖದಲ್ಲಿ ಬದುಕಲಿಯೆಂದು ಹರಸಿ ಬರೆದ ಗುರುಬೋಧಾಮೃತಕ್ಕೆ ಶುಭಮಸ್ತು ॥ ಶ್ರೀ ಶ್ರೀ ಶ್ರೀ ಮಂಗಳ ಮಹಾ ॥ ಗುರುಬೋಧಾಮೃತ ಸಂಪೂರ್ಣಂ ॥

ವಿಷಯ : ಗುರುಬೋಧೆ (ವೀರಶೈವ ಸಿದ್ಧಾಂತೋಪದೇಶ).

ವಿಶೇಷ : ಅಲ್ಲಲ್ಲಿ ಪದ್ಯಗಳ ಅಕ್ಷರಗಳು ಲುಪ್ತವಾಗಿರವುದರಿಂದ ಪೂರ್ಣ ಗ್ರಂಥವಿದ್ದರೂ ಅಸಮಗ್ರವೇ ಆಗಿದೆ. ಪತ್ರ ೪೯ರಲ್ಲಿ ಅಂದರೆ ೫ ನೆಯ ಸ್ಥಲದಲ್ಲಿ "ಕಂದ ॥ಗು........ಜ್ಞನೆ ಕೃಪೆಯಿಂ । ಪರಮಾಮೃತವೆನಿಸಿ ಮೆರವ ಗುರುಬೋಧೆಯನಿದ । ವಿರತ ಮಹಲಿಂಗದೇವರು । ವಿರ...........ಹರನ ಸ್ತುತಿಸಿ ಪೂಜಿಸುವರಿಗಂ ॥ ಎಂದುಕ್ತವಾಗಿದೆಯಾಗಿ 'ವಿರಚಿತ ಮಹಲಿಂಗದೇವರು' ಇದರ ಕರ್ತೃವೆಂದೂ, ಗ್ರಂಥಾರಂಭದ ಕಂದದಿಂದ 'ಈ ಗ್ರಂಥ ತ್ರಿವಿಧಿ ವರ್ಣಕದಿಂದ ವಿರಚಿಸಿದ ಕೃತಿ' ಯೆಂದೂ ತಿಳಿದುಬರುತ್ತದೆ.

424

ಕೆ. ಬಿ. ೭	ಗುರುಬೋಧೆ	ಹಾಡು
೭.೯" × ೫"	?	?
೧_೧೦ ಪತ್ರ	೧೧ ಪಂಕ್ತಿ	೨೫ ಅಕ್ಷರ

ಆದಿ : ಅಮರಗಿರಿ ವೆಂಕಟೇಶ್ವಾಯ ನಮಃ ॥ ಗುರುಬೋಧೆ ಬರೆಯುವುದಕ್ಕೆ ನಿರ್ವಿಘ್ನಮಸ್ತು ॥

ತಡಿಗಾಣದ ಭವಸಾಗರ
ನಡುವಿನ ಮಧ್ಯದಲಿ ಮುಳುಗುತ್ತೇಳುತ ನಡುಗಿ
ಕಡು ಬಳಲಿಯೆ ನೊಂದು ಶಿಷ್ಯನ
ಧೃಡದಿಂ ಗುರುವರನ ಪ್ರಶ್ನೆ ಕೇಳಿದ ಮುದದಿಂ ॥

ರಾಗಾ ॥ ಕಾಂಬೋದಿ ॥

ಲಾಲಿಸು ಶ್ರೀ ಗುರುರಾಯನೆ ಯಂನ
ಬಾಳುವೆಯೆನ್ನು ಯೆಂತು ಪೇಳುವೆ
ಹೀನವೃತ್ತಿಯಲಿ ನಾ ನಡದೆನೊ ದುಷ್ಟ
ಮಾನವರುಗಳ ನಂಬಿದ್ದೆನೊ
ಯೇನೊಂದನರಿಯದೆ ಯಿದ್ದೆನೊ ಭವ
ಕಾನನದೊಳು ಮುಳಿಗಿದ್ದೆನೊ ॥ ೧ ॥

ಅಂತ್ಯ : ಗುರುಶಿಷ್ಯರ ಬೋಧಾಕ್ರಮವಾ
ಅರಿವುದ್ದು ಮನದಲಿ ಸಜ್ಜನರು
ತಿರುಪತಿವಾಸನ ಚರಣ ಕಮುಲವನೂ
ಸ್ಮರಿಸಲು ಕೈವಲ್ಯ ಸಿದ್ಧಿಪುದೂ ॥ ೩ ॥
ನಿಜಬೋಧದ ಸುಖಸಾರದಲಿ ॥ ಶ್ರೀ ॥

ವಿಷಯ : ವೀರಶೈವ ವೇದಾಂತ ಬೋಧೆ.

ವಿಶೇಷ : ಕೆಲವು ಪತ್ರಗಳನ್ನು ಹುಳು ಹೊಡೆದಿದೆ. ಕೊನೆಯ ಪುಟದಲ್ಲಿ ವಿಕೃತಿ ಸಂವತ್ಸರದ ಮಾರ್ಗಶಿರ ಬಹುಳ ಅಮಾವಾಸ್ಯೆಯ ದಿವಸ ಪುಟ್ಟರಾಮು ಎಂಬುವನ ಜನನ ಎಂದು ನಂದಿನಾಗರಿ ಲಿಪಿಯಲ್ಲಿ ಬರೆದಿದೆ.

425

ಕೆ. ೨೫೯/೧	ಗುರುಭಕ್ತಾಂಡಾರಿಯ ಚರಿತ್ರೆ	ವಾರ್ಧಕಷಟ್ಪದಿ
೯.೫" × ೧.೭"	ಪೆಮ್ಮ	ಸು. ೧೬೫೦
೧–೪೪ ಪತ್ರ	೭ ಪಂಕ್ತಿ	೪೫ ಅಕ್ಷರ

ಆದಿ : ಗುರುಭಕ್ತನ ಕಾವ್ಯ ಬರಉದಕ್ಕೆ ಶುಭಮಸ್ತು ‖ ರಾಗ ಷಟ್ಪದಿ

ಪರಮ ಶ್ರೀ ಗುರುರಾಯ ಮರುಳ ಶಿದ್ದೇಶ್ವರನ
ಕರಕಮಲವಾರ್ಧಿಕ ಪರಿಪೂರ್ಣ ಚಂದ್ರಮನೆನಿಪ
ವರಪ್ರಕಾಶಭೂಷಣನ ಜಿಂಹ್ವೆಯೊಳು ಶಿವನಿದು ಪೇಳಿದನು ಸತ್ಕ್ರುತಿ ಯಿದು ‖

ಪದನೂ ‖ ಶ್ರೀಮದಮೃತಾಂಸು ಲೇಕಾಂಕಿತ ಜಟಾಭಾರ
ಭೂಮಿಭ್ರುತ್ಕುಲತಿಲಕ ಶೈಲಕಂನ್ಯಾರತ್ನ
ಕೋಮಲಿತ ಮುಖಕಮಲ ಬಾಲಭಾಸ್ಕರ ಕಿರುಣದೊಳಿಂನ ಹೃತ್ಕಮಲಮಂ
ಪ್ರೇಮದಿಂದರಳಿಸುವ ಘನಮಹಿಮ ಸುರಗಣ್ಣೆ
ಎರಮ ಮಣಿಮುಕುಟ ಮಂಡಿತ ನಕಮಯುಕ ಪದ
ತಾಮರಸಂಯುಗಳ ಪರಮಾರಾಧ್ಯರು ಮರುಳಸಿದ್ದೇಶ ಸತ್ಕ್ರುತಿಯನೂ ‖ ೧ ‖

ಧರೆಯೊಳೀ ಕ್ರುತಿವೆಸರು ಗುರುಭಕ್ತಯಂದಾರಿ
ಚರಿತೆಯಿದ ಪೇಳಿದ ಕರ್ತು ಅವನಾರೆನಲೂ
ಉರುತರತ ಮಂಡಗೆಯ ಮಾದರಸ ಮಾದಲಾಂಬಿಕೆಯ ಗರ್ಭನಿಧಿ
ಪರಿಪೂರ್ಣ ಚಂದ್ರಮನು ಶಿವಕವಿಗಳಿಗೆ ಕಲ್ಪ
ತರು ಕಾಮಧೇನು ಚಿಂತಾರತ್ನ ಬಸವೇ
ಶ್ವರನು ಮತಿಯ ಕೊಟ್ಟು ಪೇಳೆನಲು ಮಿಗೆ ಪ್ರಾಸಭೂಷಣ ಪೇಳ್ದ ಸತ್ಕ್ರುತಿಯಿದೂ ‖ ೧೧ ‖

ಅನುಪಮ ವಿಚಿತ್ರ ಕಲಿ ಪಾಲ್ಕುರಿಕೆ ಸೋಮೇಶ್ವ
ರನು ತಂದೆ ಭಾಷೆಯೊಳು ದ್ವಿಪದಿಯಿಪದಿ ಪೇಳೆ ಚಿ
ದ್ಘನ ಮಹಿಮ ಗುರುಭಕ್ತಯಾಡರ ಚರಿತೆಯಂ ಆರಾಧ್ಯಚರಿತೆ ಯೊಳಗೆ
ಮನವಲಿದು ತೆಗದು ಕಂನಡಿಸೆಂದು ಬಸವಂಣ
ನೆನಹಿನೊಳು ಪೇಳಿ ಭಸಿತವನಿಟ್ಟು ಮತಿಗೊಟ್ಟು
ವಿನಯದಿಂ ಪ್ರಾಶಭೂಷಣ ಪೇಳ್ದನೀ ಕ್ರುತಿಯ ಶರಣರಾಲಿಸಿ ಪಾಲಿಸಿ ‖ ೧೬ ‖

ಅಂತ್ಯ : ಹರಪೂಜೆ ಉಥೆಯಕಾಲದೊಳಿದ್ದು ಭಸಿತವಂ
ಧರಿಸಿ ಪಂಚಾಕ್ಷರಿಯ ಜಪಿಸುತ ಮಘಮಘಿಪ
ಪರಿಮಳದ ಪೂಪುಟ್ಟಿಯೊಳು ತುಂಬಿ ಶೋಧಿಸುತಲಾಗುವಾಡಿಯೆ
ತರುತಿಹಾ

ಶರಣರನು ಪಾಲಿಸುತ ಶ್ರೀ ಪರಮ ಶ್ರೀ ಗುರುರಾಯ
ಮರಳುಶಿದ್ದೇಶ್ವರನ ಕರಕಮಲವಾರಾಸಿ
ಪರಿಪೂರ್ಣಚಂದ್ರಮನು ಪ್ರಸಭೂಷಣನು ಪೇಳ್ದ ಕ್ರುತಿಯೊಳಿದು
ದ್ವಿತೀಯ ಸಂಧಿ ॥ ೧೧೭ ॥

ಅಂತು ಸಂಧಿ ಎರಡಕ್ಕಂ ಪದನು ೨೨೪ ಕ್ಕಂ ಮಂಗಾಳ ಮಹಾಶ್ರೀ.

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಅಸಮಗ್ರ. ಪತ್ರಗಳ ಒಂದು ಪಕ್ಕದಲ್ಲಿ ಮಾತ್ರ ಬರವಣಿಗೆ ಇದೆ. ೪೪ನೆಯ ಪತ್ರಕ್ಕೆ ದ್ವಿತೀಯ ಸಂಧಿ ಮುಗಿದ ಬಳಿಕ ಮುಂದೆ ೪೫ ಮತ್ತು ೪೬ ನೆಯ ಸಂಖ್ಯಾಪತ್ರಗಳೆರಡಿದ್ದು ಇದರಲ್ಲಿ ಗುರುಭಕ್ತನಿಗೆ ಪ್ರಹುಡಾವತಿಯ ಕಥೆಯನ್ನು ಹೇಳುವ ೮ ಪದ್ಯಗಳು ಸಮಗ್ರವಾಗಿಯೂ ೯ನೆಯ ಪದ್ಯವು ಅಸಮಗ್ರವಾಗಿಯೂ ಇದ್ದು ಇಲ್ಲಿಗೆ ಗ್ರಂಥ ನಿಂತುಹೋಗಿರುತ್ತದೆ. ಈ ಕಟ್ಟಿನಲ್ಲಿ ಪ್ರಾಣಲಿಂಗಜ್ಞಾನದರ್ಪಣ, ಅಕ್ಕಗಳ ಸೃಷ್ಟಿ, ಸರ್ವಾಂಗಲಿಂಗಸ್ಥಲದ ವಚನ, ಸ್ವತಂತ್ರ ಸಿದ್ಧಲಿಂಗೇಶ್ವರ ವಚನಗಳು ಇವೆ.

426

ಕೆ. ೧೯೧	**ಗುರುಭಕ್ತಾಂಡಾರಿಯ ಚರಿತ್ರೆ**	ವಾರ್ಧಕಷಟ್ಪದಿ
೮″ × ೧.೨″	ಪೆಸ್ಮ್ಮಿ	ಸು. ೧೬೫೦
?	೭ ಪಂಕ್ತಿ	೩೮ ಅಕ್ಷರ

ಆದಿ : ಗುರುಭಕ್ತಾಂಡಾರಿ ಚರಿತ್ರೆಯ ಬರೆಯುವದಕ್ಕೆ ನಿರ್ವಿಘ್ನಮಸ್ತು ॥
ವಾರ್ಧಿಕಷಟ್ಪದಿ ॥ ಶ್ರೀರಾಗ ॥
ಪರಮ ಗುರುರಾಯ ಕಮಲವಾರ್ಧಿ
ಪರಿಪೂರ್ನ್ನ ಚಂದ್ರಮನೆನಿಪ
ಪ್ರಾಸಭೂಷಣನ ಜಿಂಹ್ವೆಯೊಳು............ಸತ್ಕೃತಿಯಿದು ॥

ಶ್ರೀಮದಮುಪ್ರತಾಂಶುಲೇಕಾಂಕಿತ ಜಟಾಭಾರ
ಭೂವಿಭೃ..............ಕಂನ್ಯಾರತ್ನ
ಕೋಮಲಿತ ಮುಖಕಮಲ ಬಾಲಭಾಸ್ಕರ ಕಿರಣದೊಳೆಂನ್ನ
ಹೃತ್ಕಮಲವಂ
ಪ್ರೇ...........ಘನಮಹಿಮ ಸುರಗಣ
ಸ್ತೋಮ ಮಣಿಮಕುಟ ಮಂಡಿತ ನಖಮಯೂಕಪದ
ತಾಮರಸ...........ರಾಧ್ಯ ಮರುಳಸಿದ್ಧೇಶ ಸಲಹೀಕೃತಿಯನು ॥ ೧ ॥

ಅಂತ್ಯ : ಹೊಂಗದ್ದುಗೆಯನಿಟ್ಟು........
ರಂಗವಾಲಿಯನಿಡಿಸಿ ಪುಷ್ಪಂಗಳಂ ತರಿಶಿ
ಮಂಗಳಾರತಿಯ ಮಾಣಿಕದ........ನ ಸಾಲೆಯಾ
ಶೃಂಗಾರದುಪಕರಣಗಳ ಬೆಳಗಿ ರಂಭೇ ತಾ
ನಂಗೀಕ..............॥

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಅತ್ಯಂತ ಶಿಥಿಲ ಪ್ರತಿ. ಓಲೆಗಳ ಅರ್ಧಭಾಗ ಮಾತ್ರ ಇದೆ. ಮುಟ್ಟಿದರೆ ಪುಡಿಯಾಗುವುದರಿಂದ ಓಲೆಗಳೆಷ್ಟು ಎನ್ನುವುದನ್ನು ಲೆಕ್ಕ ಮಾಡಲಾಗುವುದಿಲ್ಲ. ಅಸಮಗ್ರಪ್ರತಿ.

427

ಕೆ. ೨೬೩/೧	**ಗುರುಭಕ್ತಾಂಡಾರಿಯ ಚರಿತ್ರೆ**	ವಾರ್ಧಕಷಟ್ಪದಿ
೭.೬" × ೨"	ಪೆಮ್ಮಿ	ಸು. ೧೬೫೦
೨೧–೬೧ ಪತ್ರ	೯ ಪಂಕ್ತಿ	೩೪ ಅಕ್ಷರ

ಆದಿ : ....ಕಾಬಡನಗರಿದಾಗಿದೇ
ಹದಿರು ಚೆದಿರುಟ ಮಟದ ಗಂನ್ನಗದುಕುಗಳಿಂದ
ಉದಕವನು ಪೂರವವರಿಸಿ ಮಾತುನೀತಿಯೆ
ಚೆದುರೆ ಕೇಳಿಂತಹರೆ ತ್ರಿಜಗದೊಳಂದ ನಾ ಗುರುಭಕ್ತ ಚಿತಾವಾಣಿ
॥ ೧೦೪ ॥ × × × ×

ಗುರುಲಿಂಗಜಂಗಮುವೆ ಪಿತಮಾತೆಯಾಗಿ ಸಲಹುವರೆಂದು
ನೆರೆನಂಬಿಯೋ ಗುರುಲಿಂಗಜಂಗಮುವನೆಡಬಿಡದೆ
ಪರಮುಗುರು ಮುರುಳಸಿದ್ಧೇಶ್ವರನ ಕರಕಮುಲ ವಾರ್ಧಿ
ಸಿರಿಪರಿಪೂರ್ನ ಚೆಂದ್ರಮುನು ಪ್ರಾಸುಭೂಷಣ ಪೇಳ್ದ ಕೃತಿಯೊಳಿದು
ಪ್ರತಮು ಸಂಧಿ ॥೧೦೭॥

ಪ್ರತಮು ಸಂದಿ ವಂದಕ್ಕೆಂ ಮುಂಗಳ ಮುಹಾಶ್ರೀ ॥

ಪಲ್ಲವ ॥ ಯಿಾ ಸಂಧಿಯೊಳು ಶ್ವೇತ ಮುಲುಹಣನ ಚೆರಿತ್ರೆಯನು
ವೇಸಿ ಪ್ರಹುಡಾವತಿಯು ಗುರುಭಕ್ತಗೊರದುದನು
ಪ್ರಾಸುರತ್ನೇಕರನು ಪೇಳಿದನೀ ಸತ್ಕೃತಿಯು ಶರಣರಾಲಿಸಿ ಪಾಲಿಸಿ ॥

ಅಂತ್ಯ : ಯಿಾ ಮೂರು ಸಂಧಿಯನು ಕೇಳಿದರೆ ಪೇಳಿದರೆ
ಸಾಮುಗಾನದೊಳೋದಿ ಬರದು ಅರ್ತ್ರೈಸಿದರೆ
ಶ್ರೀ ಮುಹದೇವನೊಲಿವನು ತಪ್ಪದಿದು ಸತ್ಯವೆಂದರಿದ ಪಾಲ್ಕುರಿಕೆಯಾ
ಸ್ವಾಮೇಶ್ವರನು ಪೇಳ್ದ ಕ್ರುತಿಯ ಕಂನಡಿಸೆಂದು
ಪ್ರೇಮುದಿಂದೊಲಿಮು ಬಸವಂಣಾ ಮತಿಯಂ ಕೊಡಲೂ
ಭುಮಿಯೊಳು ಪ್ರಾಸುಭುಷಣ ಪೇಳ್ದ ಕೃತಿಯುನಿದ ಶರಣರಾಲಿಸಿ
ಪಾಲಿಸಿ ॥ ೭೬ ॥

ಅಂತು ಸಂಧಿ ೩ ಕಂ ಪದನು ೩೦೦ ಕ್ಕಂ ಮುಂಗಳ ಮುಹಾಶ್ರೀ ॥ ××× ಅರಕಲಾಗೊಡ ಪೆಟ್ಟಿಯಲ್ಲಿ ರಾಚೊಟ್ಟದೇವರ ಮುಗ ಕಾಡೈಯನು ಗಿರಿಯಂಮ್ಮನ ಮುಗ ಗುರುವಂಣ್ಣಗೆ ಬರಕೊಟ್ಟ ಗುರುಭಕ್ತಾಂಡಾಯ ಪುಸ್ತಕ ಸಮುಪ್ತ ಮುಂಗಲ ಮುಹಶ್ರೀ ॥

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಶಕಟರೇಫದ ಬಳಕೆ ಇದೆ. ಮೊದಲನೆಯ ಸಂಧಿ ೧೦ಳ ನೆಯ ಪದ್ಯದಿಂದ ಮೂರನೆಯ ಸಂಧಿ ಪೂರ್ತಿ ಗ್ರಂಥವಿದೆ. ಅಕ್ಷರಗಳು ಸ್ಫುಟವಾಗಿವೆ. ಇದೇ ಕಟ್ಟನಲ್ಲಿ ಬಸವ ಚರಿತ್ರೆ ಎಂಬ ಕೃತಿ ಇದೆ.

428

ಕೆ. ೩೬೫	**ಗುರುಭಕ್ತಾಂಡಾರಿಯ ಚರಿತ್ರೆ**	ವಾರ್ಧಕಷಟ್ಪದಿ
೧೪.೨" × ೧.೯"	ಪೆಮ್ಮಿ	ಸು. ೧೬೫೦
೧–೩೧ ಪತ್ರ	೯ ಪಂಕ್ತಿ	೬೬ ಅಕ್ಷರ

ಆದಿ : ಗುರುಭಕ್ತನ ಕಾವ್ಯ ಬರೆವದಕ್ಕೆ ನಿರ್ವಿಘ್ನಮುಸ್ತು ॥

ರಾಗ ವಾರ್ಧಿಕಷಟ್ಪದಿ ||
ಪರಮ ಶ್ರೀಗುರುರಾಯ ಮರುಳುಸಿದ್ಧೇಶ್ವರನ
ಕರಕಮಲವಾರ್ಧಿ ಪರಿಪೂರ್ನ ಚೆಂದ್ರಮನೆನಿಪ
ವರಪ್ರಾಸಭೂಷಣನ ಜಿಂಹ್ವೆಯೊಳು ಶಿವನಿರ್ದು ಪೇಳಿಸಿದ ಸತ್ಕೃತಿಯಿದೂ ||
ಪದನೂ|| ಶ್ರೀಮದಮೃತಾಂಶು ಲೋಕಾತೀತ ಜಠಾಭಾರ
ಭೂಮಿಭೃತ್ಕುಲತಿಲಕ ರಾಜಕಂನ್ಯಾರತ್ನ
ಕೋಮಲಿತ ಮುಖಕಮಲ ಬಾಲಭಾಸ್ಕರ ಕಿರಣದೊಳಗೆಂನ
ಹೃತ್ಕಮಲಮಂ
ಪ್ರೇಮದಿಂದರಳಿಸುವ ಘನಮಹಿಮ ಸುರಗಣ
ಸ್ತೋಮ ಮಣಿಮಯ ಮಕುಟಮಂಡಿತ ಕನಕಮೈಯ್ಯಾಕಪದ
ತಾಮರಸಯುಗಳ ಪರಮಾರಾಧ್ಯ ಮರುಳುಸಿದ್ಧೇಶ ಸಲಹೀ ಕೃತಿಯನೂ
|| ೧ ||

ಅಂತ್ಯ : ಈ ತ್ರಿತೀಯ ಸಂಧಿಯನು ಹೇಳಿದರೆ ಕೇಳಿದರೆ
ಸಾಮಗಾನದೊಳೋದಿ ಬರದು ಆಧರಿಸಿದರೇ
ಶ್ರೀ ಮಹಾದೇವನೊಲಿವನು ತಪ್ಪದಿದು ಸತ್ಯವೆಂದು ಪಾಲ್ಕುರಿಕೆಯಾ
ಸೋಮೇಶ್ವರನು ಪೇಳ್ದ ಕೃತಿಯ ಕಂನಡಿಸೆಂದು
ಪ್ರೇಮದಿಂದೊಲಿದು ಬಸವಂಣ ಮತಿಯಂ ಕೊಡಲು
ಭೂಮಿಯೊಳು ಪ್ರಾಸುಭೂಷಣ ಪೇಳ್ದನೀ ಕೃತಿಯ ಶರಣರಾಲಿಸಿ
ಪಾಲಿಸಿ || ೭೬ ||

ಅಂತು ಸಂಧಿ ೩ ಕ್ಕಂ ಪದನು ೩೦೦ ಕ್ಕಂ ಮಂಗಳ ಮಹಾಶ್ರೀ.

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಮಧ್ಯೆ ಒಂದೆರಡು ಓಲೆಗಳ ಅಂಚು ಮುರಿದಿದೆ. ಕಟ್ಟಿನ ಮೊದಲು ಮತ್ತು ಕೊನೆಯಲ್ಲಿ ಕೆಲವು ಶುದ್ಧ ಓಲೆಗಳಿವೆ.

429

ಕೆ. ೪೮೨/೧ — ಗುರುಭಕ್ತಾಂಡಾರಿಯ ಚರಿತ್ರೆ — ವಾರ್ಧಕಷಟ್ಪದಿ
೮" × ೧.೨" — ಪೆಮ್ಮ — ಸು. ೧೬೫೦
೧–೯೮ ಪತ್ರ — ■ ಪಂಕ್ತಿ — ೪೦ ಅಕ್ಷರ

ಆದಿ : ಗುರುಭಕ್ತಾಂಡಾರಿ ಚರಿತ್ರೆ ಬರವುದಕ್ಕೆ ಶುಭಮಸ್ತು ||

ಪರಮ ಶ್ರೀಗುರುರಾಯ ಮರುಳುಸಿದ್ಧೇಶ್ವರನ
ಕರಕಮಲವಾರ್ಧಿ ಪರಿಪೂರ್ಣಚಂದ್ರಮನೆನಿಪಾ
ವರಪ್ರಾಸಭೂಷಣನ ಜಿಂಹ್ಮೆಯೊಳು ಶಿವಸಿರ್ದು ಪೇಳಿಸಿದ ಸತ್ಕೃತಿಯಿದು
॥ ಪಲ್ಲವಿ ॥

ಶ್ರೀಮದಾಂವೃತಾಂಶುವೇಕಾಂಕಿತ ಜಠಾಭಾರಾ
ಭೂಮಿಭೃತ್ಕುಲತಿಲಕ ರಾಜಕಂನ್ಯಾರತ್ನಾ
ಕೋಮಲಿತ ಮುಖಕಮಲ ಶಾಲಭಾಸ್ಕರನ ಕಿರಣದೊಳಿಂನ
ಹೃತ್ಕಮಲವಂ
ಪ್ರೇಮದಿಂದಲರಿಚುವ ಘನಮಹಿಮ ಸುರಗಣ
ಸ್ತೋಮ ಮಣಿಮುಟ ಮಂಡಿತ ನಕಮಯುಕ ಪದಾ
ತಾಮರಸಯುಗಳ ಪರಮಾರಾಧ್ಯ ಮರುಳುಸಿದ್ಧೇಶ ಸಲಹೀ
ಕೃತಿಯನು ॥ ೧ ॥

ಅಂತ್ಯ : ಶ್ರೀಮತ್ಪಂಚಾಕ್ಷರೀ ಪಂಚಮುಖ ಪಂಚಾಚಾರ ಪರಿಪೂರ್ನ ಪರಮಗ್ನ್ಯಾನ ಪರಮ ಪ್ರಕಾಶ ಪರಮಕಲೆಯಾ । ಜೇಂಕಾರಾ ಪ್ರಾಣಲಿಂಗ ಪ್ರತಿಷ್ಠಪಾಲಕ ಪ್ರಸಿದ್ಧಾವತಾರ। ಪರಮಯೋಗೀಶ್ವರ ಪರಮಗುರು ಮರುಳು ಸಿದ್ಧೇಶ್ವರನ ಕಾರುಂಣ್ಯ ಪ್ರಸಧಿ ಶಿವಕವಿ ಪೆಂಮಿಶಟ್ಟಿಯರು ಶಿವಶರಣರ ಶ್ರೀ ಪಾದರೇಣುವಂ ಧರಿಸಿದ ಭಲದಿಂದ ಪ್ರಾಸರತ್ನಾಕರನೆಂಬ ಪೆಸರ್ವೆತ್ತು ಪೇಳ್ದಾ ಗುರುಭಕ್ತ ಯಾಂಡಾರ ಚರಿತ್ರೆ ಸಂಪೂರ್ನಂ ಮಂಗಳಮಹಾರಾಜಶ್ರೀ ॥ ಪ್ರಥಮ ಸಂಧಿಗೆ ಸೇರಿದ ಪದನು ೧೦೭ ದ್ವಿತಿ ಸಂಧಿಗೆ ಸೇರಿದ ಪದನು ೧೧೭ ॥ ತ್ರಿತಿ ಸಂಧಿಗೆ ಸೇರಿದ ಪದನು ೭೬॥ ಅಂತು ಸಂಧಿ ಮೂರಕಂ ಪದನೂ ೩೦೦ಕಂ ಗುರುಭಕ್ತ ಯಾಂಡಾರಿಚರಿತ್ರೆ ಸಂಪೂರ್ನಂ ॥ ಪ್ಲವ ಸಂತ್ಸರದ ಕಾರ್ತಿಕದ ಬಹುಳ ೧೩ ಯಲೂ ಗುರುವಾರದಲ್ಲು ಗುಬ್ಬೆಯನವರ ಮಗ ಹುಚ್ಚೈಯನೂ ಬರದ ಗುರುಭಕ್ತಯಾಂಡಾರ ಚರಿತ್ರೆ ಸಂಪೂರ್ನ ಶ್ರೀ.

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಗ್ರಂಥ ಸಮಗ್ರವಾಗಿದೆ. ಇದೇ ಕಟ್ಟಿನಲ್ಲಿ ಸಿದ್ಧನೀತಿ ಎಂಬ ಕೃತಿ ಇದೆ.

430

ಕೆ. ೪೮೭	**ಗುರುಭಕ್ತಾಂಡಾರಿಯ ಚರಿತ್ರೆ**	ವಾರ್ಧಕಷಟ್ಪದಿ
೧೨"×೧.೨"	ಪೆಮ್ಮಿ	ಸು. ೧೬೫೦
೧–೫೦ ಪತ್ರ	೭ ಪಂಕ್ತಿ	೫೭ ಅಕ್ಷರ

ಆದಿ : ಗುರುಭಕ್ತನ ಕಾವ್ಯಕ್ಕೆ ಶುಭಮಸ್ತು ॥

ಪಲ್ಲ॥ ಪರಮ ಶ್ರೀ ಗುರುರಾಯ ಮರುಳುಶಿದ್ಧೇಶ್ವರನ
ಕರಕಮಲ ವಾರಾಸಿ ಪರಿಪೂರ್ನ್ನ ಚಂದ್ರಮನೆನಿಪ
ವರಪ್ರಾಸಭೂಷಣನ ಜಿಂಹ್ವೆಯೊಳು ಸಿವನಿರ್ದು ಪೇಳಿಸಿದ-
ಸತ್ಕೃತಿಯಿದೂ ॥
ಶ್ರೀಮದಾಂಮೃತಾಂಶು ಲೇಖಾಂಕಿತ ಜಟಾಭಾರ
ಭೂಮಿ ಭೃೂತ್ಕುಲತಿಲಕ ರಾಜಕಂನ್ಯಾರತ್ನ
ಕೋಮಲಿತ ಮುಖಕಮಲ ಬಾಲಭಾಸ್ಕರ ಕಿರಣದೊಳಗೆನ್ನ
ಹೃತ್ಕಮಲಮಂ
ಪ್ರೇಮದಿಂದರಳ್ಚಿಸುವ ಘನ ಮಹಿಮಾಸುರಗಣ
ಸ್ತೋಮ ಮಣಿಮಗುಟ ಮಂಡಿತ ನಖಮ್ಯೆಯೂಕ ಪದ
ತಾಮರಸಯುಗಳ ಮಹಿಮಾರಾಧ್ಯ ಮರುಳಸಿದ್ಧೇಶ ಸಲಹೀ
ಕೃತಿಯನೂ ॥ ೧ ॥

ಅಂತ್ಯ : ಯಿಾ ಮೂರು ಸಂಧಿಯಂ ಕೇಳಿದರೆ ಹೇಳಿ
...............ಮಾದೇವನೊಲಿವನು ತಪ್ಪದಿದು
..............................ಸತ್ಯವೆಂದರಿದು ಪಾಲ್ಕುರಿಕೆಯಾ ॥
ಸೋಮೇಶ್ವರನು ಪೇಳ್ದ........
...............ಣ ಮತಿಯಂ ಕೊಡಲು
ಭೂಮಿಯೊಳು ಪ್ರಾಸಭೂಷಣ ಪೇಳ್ವ ಸತ್ಕೃತಿಯು ಶರಣರಾಲಿಸಿ
ಪಾಲಿಸಿ ॥....ಮಹಾಶ್ರೀ.

ವಿಷಯ : ಗುರುಭಕ್ತಾಂಡಾರಿಯ ಕಥೆ.

ವಿಶೇಷ : ಕೆಲವು ಪತ್ರಗಳ ಅಂಚು ಮುರಿದಿರುವುದರಿಂದ ಮಧ್ಯೆ ಮಧ್ಯೆ ಅಕ್ಷರಗಳು ಲುಪ್ತವಾಗಿವೆ. ೨೬, ೩೯ ಪತ್ರಗಳೆರಡೆರಡಿವೆ. ಕೊನೆಯ ಪತ್ರ ಅರ್ಧ ಮುರಿದಿದೆ.

431

ಕೆ. ೬೩/೫	ಗುರುರಗಳೆ	ರಗಳೆ
೧೩.೪" × ೧.೩"	?	?
೧–೩ ಪತ್ರ	■ ಪಂಕ್ತಿ	೪೬ ಅಕ್ಷರ

ಆದಿ : ಯಿರುಳು ಹಗಲೆಂಬುದನರಿಯದೆ
ಗುರು ಚರಣವ ಬಜಿಸು ಮನವೆ ಸಂಚಲವಿಲ್ಲದೆ

ಪರವಮಾರ್ತದಿಂದೊಲಿದು ಬಗೆವುದು
............ಗುರುಮೂರ್ತಿ ಸಲಹು ಗುರುವಿಶ್ವೇಷಂ ।
ಸ್ವಸ್ತಿ ಶ್ರೀನಿಜ ಪರಮ ಪ್ರತ್ಯಕ್ಷ ಗುರು ಶರಣೂ ॥ ೧ ॥
ಬಕ್ತಿ ಬಯ ದಯದವ್ಮತವಿತ್ತ ಶ್ರೀಗುರು ಶರಣು ॥ ೨ ॥
ನೆತ್ತಿಗಾಂಘ್ರಿಯನಿತ್ತು ಸಲಹಿದನೆ ಗೂರು ಶರಣೂ ॥ ೩ ॥

ಅಂತ್ಯ : ನಿಮ್ಮ ಪಾದದ್ವಯದಿ ಸಲಹೆಂನ್ನ ಗುರು ಶರಣೂ ॥ ೫೫ ॥
ಆರೈದು ನಿಂಮ್ಮ ಸೊಂಮಿನೊಳಗಿರಿಸೈಯ್ಯ ಗುರುಶರಣೂ ॥ ೫೬ ॥
ಹಾರೈಸಿ ಚೌಪದನ ಚಿತ್ತೈಸು ಗುರು ಶರಣೂ ॥ ೫೭ ॥
ಸಾರಪರವಮಾರ್ತ ಪದವಿತ್ತೆ ಶ್ರೀಗುರು ಶರಣೂ ॥ ೫೮ ॥
ಮಾರಾರಿಯೆನಿಪ ಗುರು ವಿಶ್ವೇಷ ಗುರು ಶರಣೂ ॥ ೫೯ ॥
ಕಂ ॥ ಆದಿ ಅನಾದಿಗಳೆಂಬಿವ
ಭೇದಿಸಿ ತಾಂ ತಂದು ಯ್ಯೋಗ ಸಾದ್ಯದೊಳಿರಿಸಿ
ಬೋದಿಸಿ ಗುರು ಸುಗ್ನಾನದ
ಹಾದಿಯ ತೋರಿದನೆಂಮ್ಮೈಯ್ಯ ಗುರು ವಿಶ್ವೇಷಂ ॥ ೬೦ ॥
ಗುರುರಗಳೆ ಸಂಪೂರ್ನ ಮಂಗಳಮಹಾಶ್ರೀ ಶ್ರೀ.

ವಿಷಯ : ಗುರುಸ್ತೋತ್ರ.

ವಿಶೇಷ: ಪ್ರತಿ ಶಿಥಿಲವಾಗಿದೆ. ಇದು ಲಲಿತ ರಗಳೆ ಛಂದಸ್ಸಿನಲ್ಲಿದ್ದರೂ ಕವಿ ಕೊನೆಯಲ್ಲಿ " ಚೌಪದನ ಚಿತ್ತೈಸು " ಎಂದು ಹೇಳಿರುವುದು ವಿಮರ್ಶಾರ್ಹ. ಈ ಕೃತಿಯ ಪ್ರತಿಪದ್ಯವೂ " ಗುರುಶರಣು " ಎಂದು ಮುಗಿಯುತ್ತದೆ. ಈ ಕಟ್ಟಿನಲ್ಲಿ ನಾನಾರ್ಥ ರತ್ನಾಕರ, ಪ್ರಭುನಟನ ತಾರಾವಳಿ, ಪುರಾತನರ ತ್ರಿವಿಧಿ, ಶಂಕರದೇವರ ಕಂದ ಎಂಬ ಗ್ರಂಥಗಳಿವೆ.

432

ಗುರುರಗಳೆ

ಕೆ. ೨೭೧/೩		ರಗಳೆ
೮.೭" × ೧.೪"	?	?
೩ ಪತ್ರ	೭ ಪಂಕ್ತಿ	೪೦ ಅಕ್ಷರ

ಆದಿ : ಗುರುರಗಳೆ॥ ಯಿರಳು ಹಗಲೆಂಬುದರಿಯದೆ
ಗುರುಚರಣವ ಬಜಿಸುವ ಮನವ ಚಚ್ಚಲವಿಲದೆ
ಪರಮಾತ್ಮದಿಂದೊಲಿದು ಬಗೆವುದು
ಹರನೆ ಗುರುಮೂರ್ತಿ ಸಲಹು ಶರಣು ಗುರು ವಿಶ್ವೇಶಾ ॥ ೧ ॥

ಅಂತ್ಯ : ಆರ್ರೈದು ಪದನಾ ಚಿತ್ರೈಸ್ಯೆಯ ಗುರು ಶರಣು ॥ ೫೫ ॥
ಸಾರಯ ಪರಮತ್ಮ ಪದವಿತ್ತ ಗುರು ಶರಣು ॥ ೫೬ ॥
ಮಾರಾರಿಯೆನಿಪ ಗುರುವಿಶ್ವೇಶ ಗುರು ಶರಣೂ ॥ ೫೭ ॥
ಆದಿಯನಾದಿಗಳೆಂಬವ
ಭೋದಿಸಿ ತಂದ್ದು ಯೆಗ್ಣಸಾದ್ಯದೊಳಿರಿಸಿ
ಬೋದಿಸಿ ಗುರು ಸುಗ್ನನವಾ
ಆದಿಯ ತೋರಿದ ನಂಮಯ ಗುರು ವಿಶ್ವಶಾ ಶರಣೂ ॥ ೫೮ ॥
ಗುರುರಗಳೆ ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಗುರುಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಪಂಚಕಲಶ ದೀಕ್ಷಾವಿಧಿ, ಬಸವಚರಿತ್ರೆ, ಮಹಾದೇವರಗಳೆ ಎಂಬ ಕೃತಿಗಳಿವೆ. ಪ್ರತಿಪಾದವೂ " ಗುರುಶರಣು " ಎಂದು ಮುಗಿಯುತ್ತದೆ. ಪತ್ರಗಳಿಗೆ ಕ್ರಮಾಂಕವಿಲ್ಲ.

433

ಕೆ. ೩೭೯/೧	ಗುರುರಗಳೆ	ರಗಳೆ
೮" × ೧.೮"	?	?
೧—೨ಪತ್ರ	೯ ಪಂಕ್ತಿ	೪೧ ಅಕ್ಷರ

ಆದಿ : ....ಹರನೆ ಗುರುಮೂರ್ತಿ ಸಲಹು ಶರಣು ಗುರು ವಿಶ್ವೇಶ ॥ ಕಂದ ॥
ಸ್ವಸ್ತಿ ಶ್ರೀ ನಿಜಪರಮ ಪ್ರತ್ಯೆಕ್ಷ ಗುರು ಶರಣು ॥ ೧ ॥
....ಕ್ತಿ ಭಯ ದಯದಮೃತವಿತ್ತ ಶ್ರೀಗುರು ಶರಣು ॥ ೨ ॥
ನೆಂತಿಗಾಂಘ್ರಿಯನಿತ್ತು ಸಲಹೆಂನ ಗುರು ಶರಣು ॥ ೩ ॥
ಮುಕ್ತಿಭಾವದ ರೂಪ...........ಸಲಹೆಂನ ಗುರು ಶರಣು ॥ ೪ ॥

ಅಂತ್ಯ : ಪೂರ್ರೈಸಿ ಚಾಪದನ ಚಿತ್ತ್ರೈಸಿ ಗುರು ಶರಣು ॥ ೫೮ ॥
....ರಾಯ ಪರಮಾರ್ತ್ಥ ಪದವಿತ್ತ ಗುರು ಶರಣು ॥ ೫೯ ॥
ಮಾರಾರಿಯೆನಿಪ ಗುರು ವಿಶ್ವೇಶ ಗುರು ಶರಣು ॥ ೬೦ ॥
ಕಂದ ॥ ಆದಿಯನಾದಿಗಾಳೆಂಬಿವಾ
ಭೇದಿಸಿತಂದು ಯೋಗ ಸಾಧ್ಯದೊಳಿರಿಸಿ

ಬೋಧಿಸಿ ಗುರು ಸುಜ್ಞಾನದ
ಹಾದಿಯ ತೋರಿದನೆಂಮಯಾ ಗುರು ವಿಶ್ವೇಶಾ ॥ ೧ ॥
ಗುರುರಗಳೆ ಸಮಾಪ್ತ ಮಂಗಳಮಹಾ ಶ್ರೀ.

ವಿಷಯ : ಗುರುಸ್ತುತಿ.

ವಿಶೇಷ : ಶಿಥಿಲ ಪ್ರತಿ. ಈ ಕಟ್ಟಿನಲ್ಲಿ ಷಡಕ್ಷರಿ, ಬಸವ, ಮನೋವಿಕಾರನಿರಸನ, ಭಕ್ತಿಬಿನ್ನಹ ರಗಳೆಗಳೂ; ಬಸವಸ್ತೋತ್ರ, ಮಿಶ್ರಸ್ತೋತ್ರ, ಅಷ್ಟಾವರಣ, ಶೀಲವಂತಯ್ಯನ ತ್ರಿವಿಧಿಗಳೂ; ಶಂಕರದೇವ, ಮಂತ್ರಮಹತ್ವ, ಮರುಳು ದೇವ, ಪ್ರಭುಲಿಂಗ ಕಂದಗಳೂ; ಅಕ್ಷರಮಾಲಿಕ, ನಮಸ್ಕಾರ, ಷಟ್ಸ್ಥಲ, ಅಕ್ಷರಾಂಕನ ಗದ್ಯಗಳೂ; ಶಿವಾಧವ, ಶಿವಾವಲ್ಲಭ, ಮಹದೈಪುರೀಶ್ವರ ಶತಕ ಗಳೂ ಮತ್ತು ಮಲ್ಹಣ ಸ್ತೋತ್ರವೂ ಇವೆ.

434

ಕೆ. ಬಿ. ೨೮೮/೨	**ಗುರುರಗಳೆ**	ರಗಳೆ
೭.೭" × ೬.೨"	?	?
೧೩೭–೧೪೦ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ : ಕನ್ನಡ ಗುರುರಗಳೆ ಪ್ರಾರಂಭವೂ × × ×
.......................ಬುಧನರಿಯದೆ
ಗುರುಚರಣವ ಭಜಿಸು ಮನವೆ ಸಂಚಲವಿಲ್ಲದೆ
ಪರಮಾರ್ತಗತಿಯನೀವುದು ಹರನ
ಗುರುಮೂರ್ತಿ ಸಲಹು ಶರಣು ॥ಗುರುವಿಶ್ವೇಶ ॥
ಸ್ವಸ್ತಿ ಶ್ರೀ ನಿಜಪರಮ ಪ್ರತ್ಯಕ್ಷ ಗುರುಶರಣು ॥ ೧ ॥
ಭಕ್ತಿ ಭಯ ದಯದಮೃತವಿತ್ತ ಶ್ರೀ ಗುರುಶರಣು ॥ ೨ ॥

ಅಂತ್ಯ : ಹಾರೈಸಿ ಚಾಪದನ ಚಿತ್ತೈಸಿ ಗುರುಶರಣು ॥ ೫೯ ॥
ಮಾರಾರಿಯೆನಿಪ ಗುರುವಿಶ್ವೇಶ ಗುರುಶರಣು ॥ ೬೦ ॥
ಕಂದಪದ್ಯ ॥ ಆದಿಯನಾದಿಗಳೆಂಬಿವ
ಭೇದಿಸಿ ತಂದು ಯೋಗಸಾಧ್ಯದೊಳಿರಿಸಿ
ಬೋಧಿಸಿ ಗುರು ಸುಜ್ಞಾನದ
ಹಾದಿಯ ತೋರಿಸಿದ ನಮ್ಮಯ ಗುರು ವಿಶ್ವೇಶಾ ॥ ೧ ॥
ಗುರುರಗಳೆ ಸಮಾಪ್ತವು ಶ್ರೀ.

ವಿಷಯ : ಗುರುಸ್ತುತಿ.

ವಿಶೇಷ: ಈ ಗ್ರಂಥವು ಸಮಗ್ರವಾಗಿದೆ. ರಕ್ಷಾಕವಚವು ಗ್ರಂಥದಿಂದ ಬೇರೆಯಾಗಿದೆ. ಅಕ್ಷರಗಳು ಸ್ಫುಟವಾಗಿವೆ. ಇದೇ ಪುಸ್ತಕದಲ್ಲಿ ರೇವಣಸಿದ್ಧೇಶ್ವರ ಪುರಾಣವೆಂಬ ಮತ್ತೊಂದು ಗ್ರಂಥವಿದೆ.

435

ಕೆ. ೩೧೯	**ಗುರುರಾಜ ಚಾರಿತ್ರ**	ವಾರ್ಧಕಷಟ್ಪದಿ
೧೦." × ೨.೩"	ಸಿದ್ಧನಂಜೇಶ	ಸು. ೧೬೫೦
೧೧_೧೪೭ ಪತ್ರ	೧೨ ಪಂಕ್ತಿ	೪೫ ಅಕ್ಷರ

ಆದಿ : ....ರಹ ಸಕಲ
ರಾಜರ ತನುಜೆಯರ ವೇಳನೂರಂ ಮಹಾ
ರಾಜವಿಭವದೆ ವರಿಸಿ ಸರ್ವಸುಖಮಂ ಲಿಂಗಭೋಗೋಪಭೋಗಿಯಾಗಿ
ನೈಜದಿ ಕೈಕೊಂಡು ನಿಜಸತಿ ಸುಸೌಂಧಲೀ ಸ
ರೋಜವದನೆಯ ಗರ್ಭದಲ್ಲೊಗೆದ ರುದ್ರಮುನಿ
ರಾಜನಂ ಸಲಹೆಂದು ಭೂವನಿತೆಯಳ ಕೈಯ ಕೊಟ್ಟನಾ ಸಿದ್ಧೇಶನೂ ||೯||

ಅಂತ್ಯ : ....ಕಥಿಪ
ಚಿತ್ರಗುರುಪಂಚವಂಣಿಗೆ ಸಿದ್ಧನಂಜೇಶ
ಪುತ್ರ ಸತ್ಕವಿ ಕುಲಸ್ತೋತ್ರ ಶ್ರೀಶೈಲ ನೈರುತ್ಯಭಾಗದೊಳೊಪ್ಪುವಾ
ಕ್ಷೇತ್ರನವನಂದಿ ಮಂಡಲದ ಸಿಂಹಾಸನಕೆ
ಛತ್ರ ಶಿವಕವಿ ಸಿದ್ಧನಂಜೇಶಕೃತ ದಿವ್ಯ
ಸ್ತೋತ್ರ ಗುರುರಾಜ ಚಾಱತ್ರದೊಳು ನೂತನರ ಕಥೆಗೆ
ಹದಿನಾರು ಸಂಧಿ ॥ ೬೫ ॥

ಅಂತು ಸಂಧಿ ೧೬ಕ್ಕೆ ಪದನು ೧೨೭೭ಕ್ಕಂ ಮಂಗಳಮಹಾಶ್ರೀ
ಕಂದ|| ಧರಣಿ ಧನವೆಂಣಿನ ಮದದಿಂ
ಮರಹು ಆಲಶ್ಯವಿಡಿದಾ ದೇಹದ ಬಲದಿಂ
ಬರೆದನೀ ಪ್ರತಿಯಿದ್ದಂದಲಿ ಶಿವಪದವಿಡಿ
ಹರಭಕ್ತರು ವೋದಿತಿದು....ದು ನಿಂಮ ಭೃತ್ಯನೂಡಿಯಾ || ೧ ||

ಶ್ರೀ ಗುರುಭ್ಯೋ ನಮಃ ॥ ಯಿಾವ ಸಂವತ್ಸರದಲಿ ದೇಕ ಜೇಷ್ಟ ಬಳಜಲು ಗುರುರಾಯ ಪುರಾಣವ ಯಳಲೇ ಶ್ರೀ ಬರದಾತ। ಪುಣು ಬುಗಟೆಯ ಮಠಕ್ಕೆ ಕರ್ತರಾದ ಗುರುಶಾಂತಪ್ಪನ। ಉದು........ಂದ್ರ ಸಂಗಪ್ಪದೇವರು ಬರದ ಗುರುರಾಜ ಪುರಾಣ ಸಮಪ್ತ ಮಂಗಳ ಮಹಾಶ್ರೀ.

ವಿಷಯ : ಶರಣರ ಚರಿತ್ರೆ ಮತ್ತು ವೀರಶೈವ ತತ್ತ್ವ.

ವಿಶೇಷ : ಈ ಗ್ರಂಥದಲ್ಲಿ ಮೊದಲ ೧೦ ಪತ್ರಗಳು ಲುಪ್ತವಾಗಿವೆ. ೧೯ನೆಯ ಪತ್ರವು ಮುರಿದಿದೆ. ಕೆಲವು ಪತ್ರಗಳನ್ನು ಬಿಟ್ಟರೆ ಪ್ರತಿಯು ಸಾಧಾರಣವಾಗಿ ಉತ್ತಮ ಸ್ಥಿತಿಯಲ್ಲಿದೆ. ಶಕಟರೇಫವಿದೆ. ಗ್ರಂಥದ ಮುಕ್ತಾಯದಲ್ಲಿ ಪ್ರತಿಮಾಡಿದಾತನ ಹೆಸರು ದೊರಕುತ್ತದೆ.

436

ಕೆ. ಬಿ. ೭೫	**ಗುರುರಾಜ ಚಾರಿತ್ರ**	ವಾರ್ಧಕಷಟ್ಪದಿ
೭.೪" × ೬.೧"	ಸಿದ್ಧನಂಜೇಶ	ಸು. ೧೬೫೦
೧–೨೯೩ ಪತ್ರ	೧೨ ಪಂಕ್ತಿ	೨೦ ಅಕ್ಷರ

ಆದಿ: ಗುರುರಾಜ ಚರಿತ್ರವು ವಾರ್ಧಿಕ ಷಟ್ಪದಿ ॥

ಪದ॥ ಪರಶಿವಂ ತಾನೆ ಜಗದ್ಧಿತಾರ್ಥಂ ವಿಮಲ
ಗುರುರೂಪಮಂ ಧರಿಸಿ ಧೀಕ್ಷೆಯಂ ಮಾಡಿದಾ
ಪರಿಯ ತತ್ಪಂಚಕಳಶಾಚಾರ್ಯ್ಯರುದ್ಭವವನೊರೆದ
ನಗಜೆಗೆ ಶಂಕರಂ ॥ ೧ ॥

ಶ್ರೀ ಶಿವಮಹೇಶ ಶುಭವೇಷ ವೃಷಭಾಋಢ
ಕೇಶವಾರ್ಜಿತ ಪಾದಶೇಷ ಕೃತಭೂಷ ಕೀ
ನಾಶ ಮದನಾಶ ಸರ್ವೇಶ ಕೈಲಾಸಪುರವಾಸ ಸತ್ಪಥ ಸುಕೇಶಾ
ಈಶ ಮೃತ್ಯುಂಜಯ ಗಣೇಶವರ ಶಶಿಕಲಾ
ಭೂಷ ಭಕ್ತಪ್ರಿಯ ಪಾಶಹರ ಶಾರದಾ
ಧೀಶ ಶಂಕರ ಪಾರ್ವತೀಶ ಗುರು ಸಿದ್ಧನಂಜೇಶ ಜಯ ಸುಪ್ರಕಾಶಾ ॥೧॥

× × × ×

ಒರವೆನಾಚಾರ್ಯರುದ್ಭವವನಾ ಪರಮ ಸ
ದ್ಗುರುವಂಶವಂ ಶಿವನ ಪಂಚವಿಂಶತಿ ಲೀಲೆ
ಹರಪೂಜೆಯಂ ಪಂಡಿತಾರಾಧ್ಯರೊರೆದ ಗಣಸಹಸ್ರನಾಮಂಗಳಂ

ಧರೆಯಲ್ಲಿ ಮತ್ತೆ ಶಿವಕೃಪೆ ಪಡೆದ ನೂತನದ
ಹರ ಪುರಾತರ ಕಥೆಗಳಂ ಸಿದ್ಧನಂಜೇಶ
ಗುರು ನಿರೂಪದೊಳು ಗುರುರಾಜ ಚಾರಿತ್ರದೊಳು ಬುಧರ
ಬಗೆ ಬಯಸವಂತೆ ‖ ೮ ‖

ಅಂತ್ಯ : ಧಾತ್ರಿಗುತ್ತಮವೆನಿಪ ಪೂವಲ್ಲಿಪುರಕಧಿಕ
ಚಿತ್ರಗುರು ಪಂಚವಣ್ಣಿಗೆ ಸಿದ್ಧನಂಜೇಶ
ಪುತ್ರ ಸತ್ಕವಿಕುಲಸ್ತೋತ್ರ ಶ್ರೀಶೈಲ ನೈರುತ್ಯಭಾಗದೊಳೊಪ್ಪುವಾ
ಕ್ಷೇತ್ರ ನವನಂದಿಮಂಡಲದ ಸಿಹ್ಮಾಸನಕೆ
ಛತ್ರ ಶಿವಕವಿ ಸಿದ್ಧನಂಜೇಶಕೃತ ದಿವ್ಯ
ಸ್ತೋತ್ರ ಗುರುರಾಜ ಚಾರಿತ್ರದೊಳು ನೂತನರ ಕಥೆಗೆ
ಹದಿನಾರು ಸಂಧಿ ‖ ೬೫ ‖

ಅಂತು ಸಂಧಿ ೧೬ಕ್ಕ ಪದನು ೧೨೭೮ಕ್ಕ ಮಂಗಳುಮಸ್ತು ಹದಿನಾರನೆಯ ಸಂಧಿಯು ಸಂಪೂರ್ಣಮಾದುದು ಶ್ರೀ.

ವಿಷಯ : ಶರಣರ ಚರಿತ್ರೆ ಮತ್ತು ವೀರಶೈವ ತತ್ತ್ವ.

ವಿಶೇಷ : ಅಕ್ಷರಗಳು ಸ್ಫುಟ ಹಾಗೂ ಸುಂದರ. ಶಕಟರೇಫ ಪ್ರಯೋಗವಿದೆ.

437

ಕೆ. ಬಿ. ೪೧೦/೨	**ಗುರುಶಿಷ್ಯಬೋಧಾಮೃತ**	ಗದ್ಯ
೭.೬" × ೬.೧"	?	?
೩೩–೫೨ ಪುಟ	೧೦ ಪಂಕ್ತಿ	೨೨ ಅಕ್ಷರ

ಆದಿ : ಗುರುಶಿಷ್ಯರ ಬೋಧಾಮೃತ ಬರಿಯುವದಕ್ಕೆ ಶುಭಮಸ್ತು ‖
ಕಂದ‖ ತಡಿಗಾಣದೆ ಭವಸಾಗರ
ಮಡುವಿನ ಮಧ್ಯದಲ್ಲಿ ಮುಳುಗೇಳುತ್ತ
ಕಡು ಬಳಲಿಯೆ ನೊಂದು ಶಿಷ್ಯನು
ದೃಢದಿಂ ಗುರುವರನ ಪ್ರಶ್ನೆಯ ಕೇಳಿದ ಮುದದಿಂ ‖
ಸಾವೇರಿ ಅಷ್ಟತಾಳಾ ‖
ಲಾಲಿಸು ಶ್ರೀ ಗುರುರಾಯನೆ
ಯಂನ ಬಾಳುವೆಯನು ಯೆಂತು ಪೇಳುವೆ ‖ ಪ ‖

ಹೀನವೃತ್ತಿಯಲಿ ನಾ ನಡದೆನು ದುಷ್ಟ
ಮಾನವರುಗಳ ನಂಬಿದ್ದೇನು
ಯೇನೊಂದನರಿಯದೆ ಯಿದ್ದೇನು ಭವ
ಕಾನನದೊಳು ಮುಳುಗಿದ್ದೇನು ॥ ೨ ॥

ಅಂತ್ಯ : ಮನಬಂದಂತೆ ಸಂಚರಿಸುತಲಿ
ಜನರ್ಗೆ ಬಾಲೋನ್ಮತ್ತನಂದದಲಿ
ಅನವರತವು ನರಸಾರ್‍ಯನ ಪಾದ
ವನಜವ ನೆನದು ಅನ್ಯವ ಮರದ ॥ ೨೧೮ ॥
ಗುರು ಶಿಷ್ಯರ ಬೋಧಾಮೃತವ
ಅರಿಯಲುಬಹುದು ಸಜ್ಜನರು
ತಿರುಪತಿವಾಸನ ಚರಣಕಮಲವಂನೂ
ಸ್ಮರಿಸಲು ಕೈವಲ್ಯ ಸಿದ್ಧಿಪುದು ॥ ೨೧೯ ॥
ಗುರು ಶಿಷ್ಯ ಬೋದಾಮೃತ ಸಂಪೂರ್ಣಃ ಶ್ರೀ ॥

ವಿಷಯ : ವೇದಾಂತ.

ವಿಶೇಷ : ಇದೇ ಪುಸ್ತಕದಲ್ಲಿ ತತ್ತ್ವಚಿಂತಾಮಣಿ, ಭಾಗವತ ನಂಜುಂಡ ವಿರಚಿತ ಶೂನ್ಯಸಿಂಹಾಸನ ನಿರ್ಮಾಣ ಎಂಬ ಕೃತಿಗಳಿವೆ. ಆರಂಭದ ೧೮ ಪುಟಗಳು ಮತ್ತು ೫೩ರಿಂದ ೬೮ರವರೆಗಿನ ಪುಟಗಳಲ್ಲಿ ಕೆಲವು ದೇವರನಾಮುಗಳಿವೆ.

438

ಕೆ. ೧೬೧	**ಗುರುಶಿಷ್ಯ ಬೋಧೆ**	ಹಾಡು
೧೩.೩" × ೧.೫"	?	?
೧–೧೩ಪತ್ರ	೫ ಪಂಕ್ತಿ	೫೦ ಅಕ್ಷರ

ಆದಿ : ಕೃಷ್ಣಯೋಗಿಶ್ವರರು ಅಪ್ಪಣೆ ಕೊಟ್ಟ ಗುರುಶಿಷ್ಯಬೋಧೆ ಬರಉದಕ್ಕೆ ಶುಭಮಸ್ತು ॥ ಶ್ಲೋಕಾ ॥
ತಡಿಗಾಣದೆ ಭವಸಾಗರ ಮಡುವಿನ ಮಧ್ಯದಲಿ ಮುಳುಗುತೇಳುತ
ನಡುಗಿ ಕಡುಬಳಲಿಯೇನೊಂದು ಶಿಷ್ಯನು
ದ್ರುಡದಿಂ ಗುರುವರನ ಪ್ರುಸ್ನೆಯ ಕೇಳದ ಮುದದಿಂ ॥
ರಾಗಾ ॥ ಆಷ್ಟತಾಳಾ ॥
ಲಾಲಿಸು ಶ್ರೀ ಗುರುರಾಯನೆ ಯಂನ್ನ
ಬಾಳುವೆಯನು ಯಂತು ಪೇಳುವೆ ॥ ಪಲ್ಲ ॥

ಹೀನವೃತ್ತಿಯಲಿ ನಾ ನಡದೇನೊ
ದ್ರುಷ್ಟಮಾನವರುಗಳ ನಂಬಿದ್ದೇನೊ
ಯೇನೊಂದನರಿಯದೆ ಯಿದ್ದೇನೊ
ಭವಕಾನನದೊಳು ಮುಳುಗಿದ್ದೇನೊ ॥ ೧ ॥

ಅಂತ್ಯ : ಮನಬಂದಂತೆ ಸಂಚರಿಸುತಲಿ
ಜನರ್ಗೆ ಬಲೋನ್ಮತ್ತನಂಡದಲೀ
ಅನವರತವು ಗುರುನರಸಾರ್ಯರ ಪಾದ
ವನಜವ ನೆನದು ಅಂನ್ಯವರದಾ
ಗುರುಶಿಷ್ಯರ ಬೋಧಾ ಕ್ರಮುವಾ
ಅರಿವುದು ಮನದಲಿ ಸಜ್ಜನರೂ ॥ ೨ ॥
ತಿರುಪತಿ ವಾಸನ ಚರಣಕಮಲವಂನ್ನು
ಸ್ಮರಿಸಲು ಕೈವಲ್ಯ ಸಿದ್ಧಿಪುದೂ ॥ ೩ ॥

ಶ್ರೀ ॥ ನೆಲೆ । ೧೬ಕ್ಕಂ ವಚನಾ । ನಿತ್ಯನೆ ಶುದ್ಧನೆ ಬುದ್ಧನೆ ಸತ್ಯನೆ ಸರ್ವಸ್ವರೂಪ ಸರ್ವಾತ್ಮಕನೆ ಪ್ರತ್ಯಗ್ರೂಪನೆ ಪರತರ ವಸ್ತುವೆ । ಶ್ರೀ ವೆಂಕಟೇಶಸ್ವಾಮಿ ಪರಾಕು । ಇತಿ ಗುರುಶಿಷ್ಯ ಬೋಧಾ ಪ್ರಕರಣ ಸಮಾಪ್ತಃ । ಮಂಗಳ ಮಹಾಶ್ರೀ ॥

ವಿಷಯ : ತತ್ತ್ವಬೋಧೆ.

ವಿಶೇಷ : ಗುರುಶಿಷ್ಯಬೋಧೆಯು ೧೨ನೆಯ ಪತ್ರದಲ್ಲಿ ಮುಗಿದಿದೆ. ಬಳಿಕ ೧೨ ಮತ್ತು ೧೩ನೆಯ ಪತ್ರಗಳಲ್ಲಿ ಶರಣ ಮಾಲಿಕೆಯೆಂಬ ೯ ಹಾಡುಗಳೂ ಭಕ್ತ ಮಾಲಿಕೆಯೆಂಬ ೯ ಹಾಡುಗಳೂ ಇವೆ. ಆದ್ಯಂತ್ಯಗಳಲ್ಲಿ ಒಂದೊಂದು ಶುದ್ಧ ಪತ್ರವಿದೆ.

439

ಕೆ. ೧೮೪/೯	ಗುರುಶಿಷ್ಯ ವಾದ	ಹಾಡು
೧೩.೫″ × ೧.೮″	?	?
೨೧೬–೨೨೦ ಪತ್ರ	೮ ಪಂಕ್ತಿ	೬೬ ಅಕ್ಷರ

ಆದಿ : ಗುರುಶಿಷ್ಯ ವಾದವನ್ನು ಬರೆಯುವದಕ್ಕೆ ನಿರ್ವಿಘ್ನಮಸ್ತು ।
ಚೆಂನ ಶ್ರೀ ಗುರುರಾಯ ನಿಂಮ ಪಾದಂಗಳನು
ಮುಂನಲರಸುತ ಬಂದೆ

ಯನ್ನ ಭವಬಾಧೆಗಳ ಚೆಂನಾಗಿ ಪರಿಹರಿಸಿ
ಮಂನ್ನಿಸೆಂನ್ನಯ ಗುರುವೆ ನಿಂಮ್ಮ ಮರೆಹೊಕ್ಕೆನಭವಾ ‖ ಪಲ್ಲ ‖

ಅಂತ್ಯ : ನೆನೆದ ಮಾತ್ರದಿ ತಂನ ಭಜಕರಿಷ್ಟಾರ್ಥವನು
ಅನುದಿನವು ಕೊಟ್ಟು ರಕ್ಷಿಸುತಿರ್ಪ ಶ್ರೀ ಹರಿಯು ಹೆಗ
ಲನೇರಿಸಿಕೊಂಡು ತಿರುಗುವ ಖಗೇಶ್ವರನು
ಘನಮರಂಗಳನೇರಿ ಗಾಳಿ ಬಿಸಲೊಳು ಪಣಗಿ
ವಿನುತಾದಿ ಪರ್ವ್ವತ ಖಗೇಂದ್ರಗೊಂದಂಕಣದ
ಮನೆಯು ಕೊಟ್ಟವರಿಲ್ಲವಂತೆ ಯಿದನು
ಘನಮಹಿಮೆ ರಘುರಾಮಸ್ವಾಮಿಯೆ ಬಲ್ಲಾ ‖ ೫ ‖
ಪೂರ್ವಾರ್ಜಿತದ ಪ್ರಾಪ್ತಿ ಫಲವಾ‖

ವಿಷಯ : ತತ್ವೋಪದೇಶ.

ವಿಶೇಷ : ಇದರೊಂದಿಗೆ ಕಿರಾತಾರ್ಜುನರ ಕಾಳಗ, ಅಂಗದಸಂಧಾನ, ಸುಭಾಷಿತ (ಸಂ), ಸೋಮಾರಾಧ್ಯರ ಶತಕ, ಅರವತ್ತುಮೂವರ ತ್ರಿವಿಧಿ, ಶಿವ ವಿಷ್ಣು ಕೀರ್ತನೆಗಳು, ಮಾನಸಪೂಜೆ (ಸಂ), ಸದ್ಗುರು ರಹಸ್ಯ, ಐರಾವತ, ಭಾರತ ದಲ್ಲಿ ರಾಜನೀತಿ, (ಕೃಷ್ಣಮಾಚಾರ್ಯರ) ಕಾಲಜ್ಞಾನ ಎಂಬ ಗ್ರಂಥಗಳೂ ಇವೆ.

440

ಕೆ. ಬಿ. ೧೭೯/೭	**ಗುರುಶಿಷ್ಯ ಸಂವಾದ**	ಕಂದ, ಹಾಡು, ವಚನ
೮″ × ೬.೪″	?	?
೫೭–೬೭ ಪತ್ರ	೧೨ ಪಂಕ್ತಿ	೧೯ ಅಕ್ಷರ

ಆದಿ : ಗುರುಶಿಷ್ಯ ಸಂವಾದ ಬರೆಯುವದಕ್ಕೆ ಶುಭಮಸ್ತು.
ಕಂದ ‖ ತಡಿಗಾಣದೆ ಭವಸಾಗರ
ಮಡುವಿನ ಮಧ್ಯದಲಿ ಮುಳುಗುತ್ತೇಳುತ್ತ
ನಡುಗಿ ಕಡುಬಳಲಿಯೆ ನೊಂದು ಶಿಷ್ಯನು
ದೃಢದಿಂ ಗುರುವರನ ಪ್ರಶ್ನೆಯು ಕೇಳಿದ ಮುದದಿಂ ‖ ೧ ‖

ರಾಗ ॥ ಅಷ್ಟತಾಳ ॥
ಲಾಲಿಸು ಶ್ರೀ ಗುರುರಾಯನೆ
ಯೆಂನ ಬಾಳುವೆಯನು ಯೆಂತು ಪೇಳುವೆ
ಹೀನವೃತ್ತಿಯಲಿ ನಾ ನಡದೆನು
ದೃಷ್ಟಮಾನವರುಗಳ ನಾ ನಂಬಿದ್ದೆನು
ಯೇನೊಂದನರಿಯದೆ ಇದ್ದೇನು
ಭವ ಕಾನನದೊಳು ಮುಳುಗಿದ್ದೆನೂ ॥ ೧ ॥

ಅಂತ್ಯ : ಗುರುಶಿಷ್ಯ ಬೋಧಾಂಮೃತವ
ಅರಿವುದು ಮನದಲಿ ಸಜ್ಜನರು
ತಿರುಪತಿವಾಸನ ಚರಣಕಮಲವನು
ಸ್ಮರಿಸಲು ಕೈವಲ್ಯ ಸಿದ್ಧಿಪುದೂ ॥ ೩ ॥
ವಚನಾ ॥ ನಿತ್ಯನೆ ಶುದ್ಧನೆ ಬುದ್ಧನೆ
ಸಥ್ಯನೆ ಸರ್ವಸ್ವರೂಪ ಸರ್ವಾತ್ಮಕನೆ
ಪ್ರತ್ಯರೂಪನೆ ಪರತರ ವಸ್ತುವೆ
ಜಯ ವೆಂಕಟೇಶ್ವರಸ್ವಾಮಿ ಪರಾಕೂ ॥ ೧ ॥
ಇತಿ ಗುರುಶಿಷ್ಯಬೋಧಾಂ ಪ್ರಕರಣಂ ಸಂಪೂರ್ಣ ಮಂಗಳಮಹಾ ॥

ವಿಷಯ : ತತ್ತ್ವೋಪದೇಶ.

ವಿಶೇಷ : ೬೮ನೆಯ ಪತ್ರದಲ್ಲಿ ಒಂದು 'ಮಂಗಳಾರತಿ' ಹಾಡಿದೆ. ಈ ಗ್ರಂಥದೊಂದಿಗೆ ವಿರೂಪಾಕ್ಷ ಶತಕ, ಸದಾಶಿವ ಶತಕ, ಪ್ರಾಣೇಶ್ವರ ಶತಕ, ಅಂಬರೀಷ ಚರಿತ್ರೆ, ಧ್ರುವಚರಿತ್ರೆಗಳಿವೆ.

441

ಕೆ. ಬಿ. ೩೨೮/೨ — **ಗುರುಶಿಷ್ಯ ಸಂವಾದ** — ಗದ್ಯ
೭" × ೬" — ? — ?
೪–೮ ಪತ್ರ — ೧೮ ಪಂಕ್ತಿ — ೧೮ ಅಕ್ಷರ

ಆದಿ : ಸದ್ಗುರುವರನಿಂದ ಪ್ರಶ್ನ ॥ ಸತ್ಸಿಷ್ಯನಿಂದಾ ಉತ್ತರಾ ॥
೧. ನೀನು ಯಾರೋ ? ಗುರುಸ್ವಾಮಿಯೆ ನಾನೂ ।
೨. ವೋಂಕಾರವೇ ? ಮೂಲ ಪ್ರಣವ ಅದು ನಾನು ಅಲ್ಲ
೩. ವೋಂಕಾರವೆಲ್ಲಿ ಯೇನು ? ವೋಂಕಾರ ಯರಡು ಭಾಗವಾಯ್ತು

೪. ಮೂಲಪ್ರಣವ ಅಂದರೇನು?	ನಂನಲ್ಲಿ ಆದ ಊಹೆಯೆ ಶಬ್ದವಾಗಿ ಮೂಲ ಪ್ರಣವ ಅಂನಿಶಿಕೊಳ್ಳಿತು.
೫. ಯರಡಾದದ್ದೇನು ?	ಅರ್ಧ ಶ್ರೀಕಾರವು ನಿಂತರ್ಧ ಅಕಾರ ವುಕಾರ ಮಕಾರವಾಯಿತೂ.
೬. ಅದು ನೀನೆ?	ಅದು ನಾನು ಅಲ್ಲ.
ಅಂತ್ಯ: ಯಾವ ದೇಶ ೭೭	ವುಪದೇಶ ದೇಹ ಮಧ್ಯೆ
ಯಾವ ಆಶ್ರಮ ೭೭	ಅವದೂತ ಆಶ್ರಮ
ಯಾವ ನಾಮಾ ೭೮	ಶೂಂನ್ಯ ನಾಮಾ
ಯಾವ ಬುದ್ಧಿ ೭೯	ನಿಶ್ಚಲ ಬುದ್ಧಿ
ಯಾವ ಚಿತ್ತಾ ೯೦	ಚಿತ್ತಾನಂದವೆ ಚಿತ್ತ
ಯಾವ ಅಹಂಕಾರ ೯೧	ನಿರಹಂಕಾರ
ಯಾವ ಜಿಂಹ್ವಾ ೯೨	ವುಪಜಿಂಹ್ವಾ
ಯಾವ ಮುದ್ರಾ ೯೩	ಸೋಹಂಭಾವ ಮುದ್ರಾ

ವಿಷಯ: ವೀರಶೈವ ತತ್ತ್ವ.

ವಿಶೇಷ: ಗ್ರಂಥವಲ್ಲಿ ಬರುವ ಗುರು ಶಿಷ್ಯರ ಸಂವಾದವು ಎರಡನೆಯದು. ಪತ್ರಗಳು ಹರಿದಿವೆ. ಈ ಪುಸ್ತಕದಲ್ಲಿ ಅಕ್ಷರದ ಚೌಪದ, ಕಾಯಪುರಿವಾಸ ಪ್ರಕರಣಗಳಿವೆ.

442

ಕೆ. ಬಿ. ೩೩೧/೪	**ಗುರುಶಿಷ್ಯ ಸಂವಾದ**	ಹಾಡು
೮.೨" × ೬"	?	?
■ ಪತ್ರ	೧೫ ಪಂಕ್ತಿ	೨೦ ಅಕ್ಷರ

ಆದಿ: ಸದ್ಗುರುವು ಸತ್ಸಿಷ್ಯಂಗೆ ಪೇಳುವ ಕ್ರಮು। ಸ್ಥೂಲ। ಸೂಕ್ಷ್ಮ। ಕಾರಣ। ಮಹಾಕಾರಣ। ನಾಮು। ರೂಪು। ವರ್ನವೆತ್ತಿ। ಸ್ಥಾನ। ಪ್ರಮಾಣ। ಯಿ ಆರು ವಿದ। ನಾಲ್ಕು ದೇಹದ ನಿರ್ನಯವಮಾಡಿ। ಶಿವ ಜೀವ ಆತ್ಮನಲಿ। ಐಕ್ಯ ಮಾಡಿ। ಶಿವಐಕ್ಯ ಮೋಕ್ಷಂ। ನಾಮುವೆಂದರೆ ಸ್ಥಲದೇಹ.

ಅಂತ್ಯ: ತ್ವಂ ಪದವೆ ಅಂಗ। ತತ್ಪದವೆ ಲಿಂಗ। ಅಶಿಪದವೆ ಲಿಂಗಾಂಗ ಸಮರಸ। ಪಿತ್ತಶ್ವೇತ। ಕಪ್ಪು। ವರ್ನವೆ ಬಾಹ್ಯ ತ್ರಿಪುಟಿಯನಿಸುವುದು। ಅದರೊಳಗೀ ರಕ್ತ। ಅಶಿಪದನಾಮು ವರ್ನವೆ। ಅಂತರ ತ್ರಿಪುಟಿಯನಿಸುವುದು। ನೀಲ।

ಸುನೀಲವೆ। ಶುದ್ಧ ಸ್ಫಟಿಕ। ವರ್ಣವೆ ಅಂತರ ತ್ರಿಪುಟಿಯನಿಸುವದು। ಸಂಪೂರ್ಣ ಮಂಗಳಮಹಾ ಶ್ರೀ.

ವಿಷಯ : ಶಿವ ಜೀವ ಐಕ್ಯರ ವಿಚಾರ.

ವಿಶೇಷ : ಈ ಗ್ರಂಥದೊಂದಿಗೆ ಅನುಭವಸೂತ್ರ (ಸಂಸ್ಕೃತ), ಜ್ಞಾನಯೋಗತರಂಗಿಣಿ, ಜ್ಞಾನಪ್ರದೀಪಿಕೆ, ಎಂಬ ಗ್ರಂಥಗಳಿವೆ. ಪುಸ್ತಕದ ಕೊನೆಯಲ್ಲಿ ಕೆಲವು ಖಾಲಿ ಹಾಳೆಗಳಿರುವುದಲ್ಲದೆ ಕೊನೆಯಲ್ಲಿ ಎರಡು ತತ್ತ್ವ ಪದಗಳಿವೆ. ಪತ್ರಗಳಿಗೆ ಕ್ರಮಸಂಖ್ಯೆಯಿಲ್ಲ.

443

೩೧೬/೪	**ಗುರುಸ್ತೋತ್ರ ತ್ರಿವಿಧಿ ವ್ಯಾಖ್ಯಾನ**	ತ್ರಿವಿಧಿ, ಟೀಕು
೯.೭" × ೨"	ಪರ್ವತಶಿವಯೋಗಿ	ಸು. ೧೬೫೦
೧೨೪–೧೨೯ ಪತ್ರ	೧೪ ಪಂಕ್ತಿ	೬೦ ಅಕ್ಷರ

ಆದಿ : ಮಂ ತ್ಯಜಿಸಿ। ಅಂಗದಲ್ಲಿ ಲಿಂಗಧಾರಣವಿಲ್ಲದೆ ವಿಭೂತಿ ರುದ್ರಾಕ್ಷೆಯಂ ಧರಿಸಿ ....ಧ್ಯಾನಾದಿಗಳಂ ಮಾಡಿದೊಡೆಯು ನಿಃಫಲವೆಂದು ತಿಳಿದು। ಸೋಹಂ ಕೋಹವೆಂದು ಬಂದೆಜಗಲಾಗಿ ಸೋಹವೆಂದು ಅಂಗತ್ರಯಗಳಂ ಪೂವಾ .... × × × × ....ತ್ಯೆವಾಸಿ ಸ್ತುತಿಸಿದ ಪನದನರ್ತ್ಥಿಸಿ ಪೆನದೆಂತೆಂದೊಡೆ ॥ ವೊಬ್ಬರು × ×

........ಸ್ತೋತ್ರವೆಂದೆಂಬ
ಪರಮ ತ್ರಿವಿಧಿಯನೀಗ
ವಿರಚಿಸುವೆ ಬಲ್ಲ ತೆಱದಿಂದ
ವಿರಚಿಸುವೆ ಬಲ್ಲ ತೆಱದಿಂದ
ಶರಣಾರು ಹರುಷದಿಂದೋದಿ ಮೆಱೆವುದೂ ॥

ಟೀಕೆ ॥ ....ವನ। ಸ್ತೋತ್ರವೆಂದೆಂಬ। ಸ್ತುತಿಯೆಂದೆಂಬ। ಪರಮ ತ್ರಿವಿದಿಯಂ। ವುತ್ಕೃಷ್ಟವಾದ ತ್ರಿಪದಿಯನು। ಯೀಗ। ಯೀ ವರ್ತ್ತಮಾನ ಕಾಲದಲ್ಲಿ। ಬಲ್ಲ ತೆಱದಿ............ಮಾಡುವೆನು। ಶರಣರು। ಯೇಕಲಿಂಗ ನಿಷ್ಟರು। ಹರುಷದಿಂದ। ಸಂತೋಷದಿಂದ। ವೋದಿ। ಪಠಿಸಿ। ಮೆಱೆವುದು। ಶೋಭಿಸುವುದು। ನುತಿಸುತಿ............

........ದಿಸಿ ತಾತಂದು
ಮೇದಿನಿಯುಮೇಲೆ ಸ್ಥಿರಗೊಳಿಸಿ
ಮೇದಿನಿಯುಮೇಲೆ ಸ್ಥಿರಗೊಳಿಸಿ ತತ್ವಾದ
ಹಾದಿಯ ತೋಱಿ ಮೆಱೆದುದೂ ॥ ಟೀ ॥

ಅಂತ್ಯ : ೩೯ ॥ ಸಂಗ ನಿಜಭಕ್ತರ ಅಂಗಮನಪ್ರಾಣ....೪
ಸಂಗ ಚಿದ್ಘನದ ಪ್ರಭೆಯಲ್ಲಿ ನಮಿಸುವ
ಸಂಗ ದೇಶಿಕನೊಳಳಿದೆನೂ

ಟೀ ॥ ಸಂಗ ನಿಜಭಕ್ತರ । ಶಿವಶರಣರ । × × × ಅಳಿದೆನೂ ।
ಅಯಿಕ್ಯವಾದೆನೂ ॥೪೦॥
ಸಂಗಮೇಶ್ವರನ ನಿಜದಂಗದ ತ್ರಿವಿಧಿಯ
ಹಿಂಗದೆ ವೋದಿ ಪಠಿಸುವ ಶರಣಾರು
ಲಿಂಗಭೋಗದೊಳು ಮೆಱೆವಾರು ॥

ಟೀ ॥ ಸಂಗಮೇಶ್ವರನ । ಸಂಗಮೇಶ್ವರನೆಂಬ ಶ್ರೀಗುರುವಿನ । ನಿಜದ । ಯಥಾರ್ಥವಾದ । ಅಂಗದ । ಮುಖ್ಯವಾದ । ತ್ರಿವಿದಿಯ । ತ್ರಿಪದಿಯ । ಹಿಂಗದೆ । ತೊಲಗದೆ । ವೋದಿ । ಅರ್ತ್ಥವನು ತಿಳಿದು । ಪಠಿಸುವ । ಪಾಠವ ಮಾಡುವ । ಶರಣರು । ಶಿವಶರಣರು । ಲಿಂಗಭೋಗದೊಳು । ಲಿಂಗ । ಪರಶಿವಲಿಂಗದ । ಭೋಗದೊಳು । ಪ್ರಸಾದಾನುಭವದಲ್ಲಿ । ಮೆಱೆವರೂ । ಶೋಭಿಸುವರೂ ॥೪೧॥ ಶ್ರೀಮತ್ ಷಟ್ಸ್ಥಲಾದ್ವೈತ ವಿದ್ಯಾಪಾರಂಗತ ಸಿದ್ಧಲಿಂಗಾಖ್ಯಸ್ವಾಮಿಗಳ ಜ್ಞಾನಪ್ರಸಂನಪಾತ್ರ ಬಾಲೇಂದುಪುರದ ಹರೀಶ್ವರ ಶಾಂತವೀರೇಶ್ವರ ಕರ ಸರಸೀರುಹಸಂಜಾತ ವೀರಮಾಹೇಶ್ವರ ಪರ್ವತ ಶಿವಯೋಗಿ ವಿರಚಿತಮಪ್ಪ ಗುರುಸ್ತೋತ್ರದ ತ್ರಿವಿದಿಯ ವ್ಯಾಖ್ಯಾನ ಕ್ರೋಧಿ ಸಂವತ್ಸರದ ಜೇಷ್ಟಮಾಸದ ನಾಮಿ ಬುಧವಾರದೊಳ್ ಸಂಪೂರ್ಣವಾಯಿತ್ತು ಮಂಗಳಮಹಾ ಶ್ರೀ.

ವಿಷಯ : ವೀರಶೈವ ತತ್ತ್ವಬೋಧೆ.

ವಿಶೇಷ : ಆದಿಯ ಪತ್ರ ತ್ರುಟಿತವಾಗಿದೆಯಾಗಿ ಅಸಮಗ್ರವೆನಿಸಿದರೂ ಸಮಗ್ರಪ್ರಾಯ. ಶಕಟರೇಫವಿದೆ. ಇದರೊಂದಿಗೆ ಶತಕತ್ರಯದ ವ್ಯಾಖ್ಯಾನಗ್ರಂಥ, ಪ್ರಭುಲಿಂಗಕಂದದ ಟೀಕಾಗ್ರಂಥ; ಅಲ್ಲದೆ ಅಂತ್ಯದಲ್ಲಿ ವಿವಿಧ ಗ್ರಂಥಗಳ ಎಂಟು ಶಿಥಿಲ ಪತ್ರಗಳೂ ಇರುತ್ತವೆ. ಕಾಲಾದಿಗಳಿಗೆ ಗುರುಸ್ತೋತ್ರ ತ್ರಿವಿಧಿ ವ್ಯಾಖ್ಯಾನಾಂತ್ಯದಲ್ಲಿ ಕೊಟ್ಟಿರುವ ಸಂವತ್ಸರಾದಿಗಳನ್ನು ನೋಡಿ.

444

ಕೆ. ೧೭೯/೭ **ಗುರುಸ್ತೋತ್ರದ ನಾಂದ್ಯ** ವಾರ್ಧಕಷಟ್ಪದಿ

೯.೬" × ೨" ಸಿದ್ದನಂಜೇಶ ಸು. ೧೬೫೦

೩೩–೩೬ ಪತ್ರ ೧೦ ಪಂಕ್ತಿ ೫೦ ಅಕ್ಷರ

ಆದಿ : ವಾರ್ದಿಕ ಪದ ॥ ಗುರುಸ್ತೋತ್ರದ ನಾದ್ಯ
ಶ್ರೀ ಶಿವಮಹೇಶ ಶುಭವೇಶ ವೃಷಭಾರೂಢ
ಕೇಶವಾರ್ಚ್ಚಿತಪಾದ ಶೇಷಂ ಪತಭೂಷಕಿ
ನಾಶಮದನಾಶ ಸರ್ವ್ವೇಶ ಕೈಲಾಸ ಪುರವಾಸ ಸುರಪಥ ಸುಕೇಶಾ
ಯಿಾಶಮೃತ್ಯುಂಜಯ ಗಣೇಶ ವರಶಶಿಕಲಾ
ಭೂಷ ಭಕ್ತಪ್ರೀಯ್ಯ ಪಾಶಹರ ಶಾರದಾದಿ
ಶಶಿರಕರ ಪಾರ್ವ್ವತೀಶ ಗುರುಸಿದ್ಧನಂಜೇಶ ಜಯ ಸುಪ್ರಕಾಶಾ ॥ ೧ ॥

ಅಂತ್ಯ : ಧಾತ್ರಿಗುತ್ತಮವೆನಿಪ ಪೂವಲ್ಲಿ ಪುರಕದಿಪ
ಚಿತ್ರಗಾರಾ ಪಂಚವಂಣಿಗೆ ಸಿದ್ಧನಂಜೇಶ
ಪುತ್ರ ಶಿವಕವಿ ಕುಲಸ್ತೋತ್ರ ಶ್ರೀಶೈಲ ನೈರುತ್ಯಭಾಗದೊಳೊಪ್ಪುವಾ
ಕ್ಷೇತ್ರ ನವಸಂದಿ ಮಂಡಲದ ಸಿಂಹ್ವಾಸನಕೆ
ದತ್ರ ಶಿವಕವಿ ಸಿದ್ಧನಂಜೇಶಕ್ರುತ ದಿವ್ಯ
ಸ್ತೋತ್ರ ಗುರುರಾಜ ಚರಿತದೊಳು ನೂತನ ಕಥೆಗೆ ಹದಿನಾರು ಸಂಧೀ
॥ ೨೩ ॥

ಗುರುಸ್ತೋತ್ರದ ನಾಂದ್ಯ ಸಂಪೂರ್ನ್ನಂ ಮಂಗಳಮಹಾ ಶ್ರೀ.

ವಿಷಯ : ಗುರುರಾಜ ಚಾರಿತ್ರದಲ್ಲಿ ಬರುವ ಗುರುಸ್ತುತಿ.

ವಿಶೇಷ : ಇದೇ ಕಟ್ಟಿನಲ್ಲಿ ಸಿದ್ಧೇಶ್ವರನ ವಾರ್ಧಿಕ, ಸೋಮನಾಥನ ನಾಂದ್ಯಗಳೆಂಬ ಇನ್ನೂ ೨೩ ಗ್ರಂಥಗಳಿವೆ.

445

ಕೆ. ಬಿ. ೫೦೩ **ಗುಹಚರಿತೆ** ಯಕ್ಷಗಾನ

೮" × ೬.೩" ಲಿಂಗರಾಜ ೧೮೫೦

೧–೩೮ ಪತ್ರ ೧೭ ಪಂಕ್ತಿ ೧೬ ಅಕ್ಷರ

ಆದಿ : ಶುಭಮಸ್ತು । ನಾಂದೀ ಶಾರ್ದೂಲವೃತ್ತಾ ।
ಶ್ರೀಮುಕ್ತಾದ್ರಿಧರ ಚಾ ಚಿರಂತನ ತಪಸ್ಸಂಫಲತಾ ಸತ್ಫಲಂ
ಕಾಮಾಂಗಾತುಲ ತೂಲ ದಾಹದಹನಂ ನಿಶ್ರೇಯ ಸೈಕಾಶ್ರಯಂ

ಸಾಮಾಂಧಾಸುರ ತಾರಕಾರಿಜನಕಂ ಭಕ್ತಾವನೋನ್ನಿದ್ರಕಂ
ಪ್ರೇಮುಂಬೆತ್ತು ಕೃಪಾರ್ಣವಂ ಸಲಹಲೆಂಮುಂ ದಕ್ಷವಿಧ್ವಂಸಕಂ ॥ ೧ ॥
ರಾ ॥ ನಾಟ ॥ ರೂಪಕ ॥
ಜಯಜಯ ಕಾಳೀವಲ್ಲಭ । ಜಯಜಯ ದುರ್ಜನ ದುರ್ಲಭ
ಜಯಜಯ ನತಜನ ಸುಲಭ । ಜಯ ಧನುಜಕ್ಷೋಭ ॥

× × × ×

ಕಂದಾ ॥ ಸ್ಕಾಂದದಿ ಕಾಮನ ದಹಿಸುತ
ಲಿಂದುಧರಂ ಗಿರಿಜೆಯಂನು ಕೂಡುತ ಪಡದಾ
ಸ್ಕಂದನ ದೆಸೆಯಿಂ ತಾರಕ
ನಂದಂಗೆಡಿಸಿರುವ ಕಥೆಯ ಪೇಳುವೆನೊಲವಿಂ ॥ ೧೨ ॥

ಅಂತ್ಯ : ಕಂದಾ ॥ ಕರ ರಸ ರಂಧ್ರ ಪಯೋನಿಧಿ
ಪರಿಮಿತ ಕಲಿವರ್ಷರಾಜಿ ಕಳಿಯಲ್ಕಾವ
ತರಿಸಿಡ ದುರ್ಮತ್ಯಾಬ್ಧಧಿ
ವರ ಗುಹಚರಿತೆಯನು ಲಿಂಗರಾಜನುಸುರ್ದಂ ॥ ೩೭೩ ॥ ಶ್ರೀ

ವಿಷಯ : ಕಾಮದಹನ, ಕುಮಾರಸ್ವಾಮಿಯ ಜನನ ಮತ್ತು ತಾರಕಾಸುರನ ಸಂಹಾರ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

446

ಕೆ. ಎ. ೨೦೨	**ಗೊಮ್ಮಟೇಶ್ವರ ಚರಿತ್ರೆ**	ಸಾಂಗತ್ಯ
೧೩" × ೭.೯"	ಅನಂತಕವಿ	ಸು. ೧೭೪೦
೧–೧೫೦ ಪತ್ರ	೨೨ ಪಂಕ್ತಿ	೧೮ ಅಕ್ಷರ

ಆದಿ : ಗೊಂಮಟೇಶ್ವರ ಚರಿತ್ರೆ ॥ ಶ್ರೀಮತ್ಪಂಚಗುರುಭ್ಯೋ ನಮಃ ॥ ಭುಜಬಲಿ ಸ್ವಾಮಿ ಚರಿತ್ರೆ ಬರಿಯುವದಕ್ಕೆ ನಿರ್ವಿಘ್ನಮಸ್ತು ॥

ಶ್ರೀಮದನಂತ ಚತುಷ್ಟಯ ಧಾಮ ನಿ
ನ್ನಾಮ ತ್ರಿಲೋಕಾರಾಧ್ಯಾ
ಸೋಮಕರ್ಕ ಕೋಟಿಕಿರಣ ಬೆಳ್ಗುಳದ ಶ್ರೀ
ಗೋಮಟಜಿನ ಶರಣೆನಗೆ ॥ ೧ ॥

× × × ×

ಅರುವತ್ತಮೂರು ಶಲಾಕಪುರುಷ ಸ
ಚ್ಚರಿತವನುಸುದ್ದ೯ ಕವಿಗಳಾ
ನೆರೆ ಕೊಂಡಾಡಿ ಬೆಳ್ಗುಳದ ಮಹಾತ್ಮೆಯ
ನೊರವೆ ಬಲ್ಲನಿತ ಚಂನ್ನಾಗಿ ॥ ೬ ॥

× × × ×

ಯಿದು ಸದ್ಭುದ ಹೃತ್ಕೈರವ ಶಶಧರ
ವಿದು ಸೂಕ್ತಿ ಮುಕ್ತಾಹಾರಾ
ಮಿದುವೆ ಮನಂತ ಕವೀಂದ್ರರಚಿತ ಸಾರ
ಮಿದುವೆ ಬೆಳ್ಗುಳದ ವಿಸ್ತಾರಾ ॥ ೧೦೫ ॥

ಅಂತು ಸಂಧಿ ೧ ಕ್ಕಂ ಮಂಗಳ ಮಹಾಶ್ರೀ.

ಅಂತ್ಯ : ಮೆರೆಯೆ ಬೆಳ್ಗುಳದೊಳು ಪಂಡಿತಾಚಾರ್ಯನು
ವರ ತಪೋರಾಜ್ಯ ಸಂಪದದಿ
ಯಿರುತಿದ್ದ೯ ಸಕಲಶಾಸ್ತ್ರವನುದ್ಧರಿಸುವ
ಸ್ಮರಣೆದೋರಲು ಮನದೊಳಗೆ ॥ ೨೫ ॥
ಅಖಿಲಶಾಸ್ತ್ರವ ಧರ್ಮಸೂರಿಗು ಬೆಟ್ಟದ
ಅಕಲಂಕರಿಸಿಗು ಪೇಳಿಸಲೂ ॥

ವಿಷಯ : ಬೆಳ್ಗೊಳದ ಗೋಮಟೇಶ್ವರನ ಚರಿತ್ರೆ.

ವಿಶೇಷ : ಅಸಮಗ್ರ, ಪತ್ರದ ಒಂದು ಕಡೆ ಮಾತ್ರ ಬರೆದಿದೆ. ಕೊಂಚ ಮೋಡಿ ಬರಹ.

447

ಗೋತ್ರಪ್ರವರನಿರ್ಣಯ (ಸಟೀಕಾ)

ಕೆ. ೩೯೬		ಶ್ಲೋಕ, ಟೀಕು, ಪದ್ಯ
೧೫.೮″ × ೨″	?	?
೧–೩೭ ಪತ್ರ	೭ ಪಂಕ್ತಿ	೬೨ ಅಕ್ಷರ

ಆದಿ : ಶುಭಮಸ್ತು ॥

ಶ್ರೀಮನ್ಮಹಾಮಹಿಮನಖಿಲ ಕಲ್ಯಾಣಗುಣ
ನಾಮಗೆ ಸಕಲವೆಂದಾಂತಕಗತ್ಮ
ನಾಮರೂಪಾತ್ಮ ಜಗದಾರಾಮ ರೂಪಗೆ
ಕಾಮಿತಫಲದಂಗೆ ದೀಮತಿ ವಿಮಲ

ಮಾನಸ ಸರಃ ಸಂಜಾತ
ತಾಮರಸ ಹಂಸಂಗಖಿಲೋಕ ಫಲಭೋಗ
ಕಾಮರಹಿತರಿಗೆ ಕೈವಲ್ಯ ಪದವಾವಂಗೆ ಪ್ರೇಮದಿಂ ವಿದಿಸುವೆನು ॥ ೧ ॥

ಅಂತ್ಯ : ನಿತ್ಯಂ ಪರ್ವಣಿ ಸ್ವಾದ್ಯಾಯಿಯಾ ಬ್ರಹ್ಮಲೋಕೇ ಮಹೀಯತೇ ।
ಬ್ರಹ್ಮಲೋಕೇ ಮಹೀಯತ ಯಿತ್ಯಾಹ ಭಗವಾನ್ ಬೋಧಾಯನಃ ॥ ಯೆಂದು ಬೋಧಾಯನ ಮುನಿಕೃತ ಗೋತ್ರಪ್ರವರ ಶಾಸ್ತ್ರ ಸಮಾಪ್ತವಾಯಿತು ॥ ಇತಿ ಶ್ರೀ ವೈದಿಕಮಾರ್ಗ ಪ್ರತಿಷ್ಠಾನಿಷ್ಠ ವಸಿಷ್ಠಾನ್ವಯಾಭಿನವ ಮಾಧವಾಚಾರ್ಯೋರ್ಧೃತವಾದ ಗೋತ್ರಪ್ರವರ ನಿರ್ನಯದಲ್ಲಿ ದಶಮಪ್ರಕರಣ ಸಮಾಪ್ತವಾಯಿತು । ಗೋತ್ರಪ್ರವರ ನಿರ್ನಯಸ್ಸಮಾಪ್ತಃ ॥ ಶ್ರೀ ॥

ವಿಷಯ : ಗೋತ್ರ ಮತ್ತು ಪ್ರವರಗಳ ನಿರ್ಣಯ.

ವಿಶೇಷ : ನಾಗರೀ ಲಿಪಿ. ಮೂಲ ಶ್ಲೋಕಗಳ ಕರ್ತೃ ಅಭಿನವ ಮಾಧವಾಚಾರ್ಯರು. ಮಧ್ಯದಲ್ಲಿ ನಾಲ್ಕು ಪತ್ರಗಳು ಶಿಥಿಲವಾಗಿವೆ. ಪತ್ರಗಳ ಒಂದೇ ಕಡೆ ಬರೆದಿದೆ.

448

ಕೆ. ಬಿ. ೧೭೫	**ಗೋವರ್ಧನಗಿರಿ ಕಥೆ**	ಯಕ್ಷಗಾನ
೭.೮" × ೬.೩"	ವಿಷ್ಣುದಾಸ	೧೯ ನೆಯ ಶತಕ
೧–೨೪ ಪತ್ರ	೧೧ ಪಂಕ್ತಿ	೧೬ ಅಕ್ಷರ

ಆದಿ : ಭಾಗವತದೊಳಗಣ ಗೋವರ್ಧನಗಿರಿ ಕಥೆ ಬರೆವರೆ ಶುಭಮಸ್ತು ॥
ಶ್ಲೋಕ॥ ಶ್ರೀ ಪದ್ಮೋದ್ಭವ ವಂದಿತಾಂಘ್ರಿಸರೋಜಂ ಶ್ರೀ ವಾಯುಜಾತ ಪ್ರಿಯಂ
ಗೋಪಾಲಂ ವರಗೋಪಿಕಾಗ್ರಹಶುಭಂ ವ್ಯಾಪ್ತಿಸ್ತದಾ ಸವುಖ್ಯದಂ
ಆಪದ್ಬಂಧು ಸುರೇಂದ್ರವಂದಿತಪದಂ ಆನಂದಸನ್ಮೋಹನಂ
ರೂಪಂ ಸೂರ್ಯಸಹಸ್ರಕಾಂತಿಸದೃಶಂ ಶ್ರೀರಂಗನಾಥಂ ಭಜೆ ॥

ರಾಗ ॥ ನಾಟಿ ॥ ಝಂಪೆ ॥
ಕರುಣಾಸಾಗರ ಗಣಪ
ಪರಿಪೂರ್ಣಗುಣರೂಪ
ಪರಮಾನಂದ ಪ್ರತಾಪ

ಸಿರುತ ನಿಕ್ಷೇಪಾ
ಕರಿಮುಖಾಲಂಕಾರ
ವುರಗ ಭೂಷಣ ಧೀರ
ಸುರವಿನುತ ಮನೋಹಾರ
ಶರಧಿಗಂಭೀರ ಜಯ ಜಯ ॥೧॥

ಅಂತ್ಯ : ಅರಿತು ಪರೀಕ್ಷಿತಗೆಂದನು ಶುಕಮುನಿ
ಪರಮು ಭಾಗವತ ವಿಸ್ತರದಿ
ಪೊರೆವ ಶ್ರೀ ಗುರುಮಧ್ವಾಪತಿ ಕೃಷ್ಣ ಯಂದಾಗ
ವರದಾನು ಹರುಷದಿ ಕಥೆಯಾ ॥ ೩ ॥

ಭಾಮಿನಿ॥ ವರಮಹಾಭಾಗವತ ಪುರಾಣವ
ನರಿತು ಧರೆಯೊಳು ವೊರೆಯುತಿಹ
ದೊರೆ ಮಹಾಪಂಡರೀ ಪುರೇಶನ ಶರಣನಾದವನು
ಚರಣಸೇವಕ ವಿಷ್ಣುದಾಸನು
ಹರುಷದಿಂದ ಹರಿಯ ಚರಿತೆಯು
ವಿರಚಿಸಿದೆ ವೆಂಕಟೇಶನ ಪರಮನುಗ್ನೆಯಲಿ ॥
ಗೋವರ್ದನಗಿರಿ ಕಥೆ ಸಮಾಪ್ತ ಮಂಗಳ ಮಹಾಶ್ರೀ ॥

ವಿಷಯ : ಕೃಷ್ಣನು ಗೋವರ್ಧನ ಬೆಟ್ಟವನ್ನು ಎತ್ತಿದ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

449

ಕೆ. ಎ. ೧೯೦/೬	**ಗೋವಿನ ಹಾಡು**	**ಹಾಡು**
೧೨.೬" × ೮"	?	?
೧೧–೧೪ ಪತ್ರ	೩೧ ಪಂಕ್ತಿ	೩೩ ಅಕ್ಷರ

ಆದಿ : ಗೋವಿನ ಹಾಡು ಬರೆಯುವದಕ್ಕೆ ಶುಭಮಸ್ತು ॥
ಧರಣಿಮಂಡಲ ಮಧ್ಯದೊಳಗೆ
ಯಿರುವದೈವತ್ತಾರು ದೇಶದಿ
ಯಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನೊ ॥೧॥

ರೂಡಿಯೊಳಗರುಣಾದ್ರಿ ಗಿರಿಯು
ನಾಡಿನೊಳಗಿಹದೊಂದು ಬೆಟ್ಟವು
ರೂಡಿಗರ್ಭಗತ ಮೆರೆಯೂವಂದದಿ
ರೂಡಿಗಾಶ್ಚರ್ಯವೆನಿಶಿತೂ ॥ ೨ ॥

ಅಂತ್ಯ : ಗೋವು ಪೇಳಿದ ಪುಂಣ್ಯ ಕಥೆಗಳು
ಹೇಳಿದವರಿಗೆ ಕೇಳಿದವರಿಗೆ
ಯಿಾವನಚ್ಚುತ ಸೌಭಾಗ್ಯವಿವನೂ
ಆವ ಕಾಲಕೆ ತೆಗೆಯದಾ ॥ ೧೩೭ ॥
ಪರಂಧಾಮನೇ ಪದ್ಮನಾಭನೆ
ಮದ್ದೂರ ಶ್ರೀನಾರಶಿಂಹ್ವನೆ
ಮುದ್ದು ವರಗಳ ಕೊಡುವ ನಿಮಗೆಯು
ನಮೋ ನಮೋ ಮಂಗಳಂ ॥ ೧೩೮ ॥
ಗೋವಿನ ಹಾಡು ಸಂಪೂರ್ಣ ಜಯಮಂಗಳ ಮಹಾಶ್ರೀ ॥

ವಿಷಯ : ಗೋವಿನ ಕಥೆ.

ವಿಶೇಷ : ಇದೇ ಪುಸ್ತಕದಲ್ಲಿ ಸಂಕ್ಷೇಪ ರಾಮಾಯಣ, ಸಂಕ್ಷೇಪ ಭಾರತ, ಸೋಮೇಶ್ವರ ಶತಕ, ಧರ್ಮನೀತಿ, ವಿಭೀಷಣನ ಬುದ್ಧಿ, ವಿಷ್ಣುಭಕ್ತಿಸಾರ, ಸುಭಾಷಿತ ಗ್ರಂಥ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ರುದ್ರಭಾರತ ಈ ಕೃತಿಗಳಿವೆ.

450

ಕೆ. ೨೧೨/೩	ಗೋವೈದ್ಯ	ಕಂದ, ವೃತ್ತ
೧೯.೧" × ೨"	?	?
೧೯೯–೨೦೩ ಪತ್ರ	೯ ಪಂಕ್ತಿ	೭೮ ಅಕ್ಷರ

ಆದಿ : ಗೋವೈದ್ಯ—
ಬಿಸಿಯಾಗಿ ಕಾಶಿ ಕೌಟೆಯ
ರಸಮಂ........ಶೆ ಕಂಗಳಿಂದವೆ ಮತ್ತಂ
ಪಶುವಿನ ತಲೆಯೊಳ್ ಪೊಯ್ಯಲು
ಪಶಮಿಗುಂ ಜ್ವರದುಗುರ್ವು ತತ್ಕ್ಷಣದಿಂದಂ ॥ ೧ ॥

ಪಾಗಲೆಲೆ ಪಾಲುಮಂ............
ಬಾಗಿರೆಯುಜಮೂತ್ರದಿಂದ ನಸ್ಯಂ........
ಗ್ರೈಗ ಹಂದಿಯು ವೃಷ್ಟಿಯು
ಸಾಗಳೆ ಬಿಸಿನೀರೊಳೆ ಮಹಾಜ್ವರನಾಶಂ ॥ ೨ ॥

ಅಂತ್ಯ : ಕಡುಬಿಣ್ಪಾಗಿರೆ ಪಿಂದು ಮುಂತೊಡನೆ ಮಟ್ಟಂ ಕೊಂಬು ಕಂಬೆಚ್ಚುತ್ತಿ
ರ್ಪೊಡೆಬಾಯ್ ಮೂಗೊಣಗಕ್ಷಿಯುಗ್ಮ ಪಸುರಾಗಲ್ ತಾರುಗುತ್ತಂ
ಕರಂ
ತಡವತ್ತಿಂದ ನೀರುಪ್ಪು ಬೆಣ್ಣೆಯೊಳೆ ಮಯ್ಯಂ ಮರ್ದನಂ ಮಾಡಿ ನೇ
ರ್ಪ್ಪಡೆ ನೋಳ್ಪಂಪಡೆ ಬೆಂನುಮಂ ಬರೆಗೆ ಮೂರಾಗಳ್ ಮೊದಲ್
ಕಾಲುಮಂ ॥ ೧೧೨ ॥
ಪಟ್ಟಿಡೆಯಿಂದಲೆಳೆದಿರೆ ಯಿರ್ದೆಡೆಯಿಂದಲೆಳದೆತ್ತಲುಂ ನೆರ....
............ಮೈಮರೆಯದಿರ್ಪೊಡಮಿರ್ದೆಡೆಯಲ್ಲಿ ಮೇಹು ನೀ
ರ್ಮುಟ್ಟದೆ ನಿಂದೊಡಾಯಿತ್ತೆರಳೆಗುತ್ತಮಿದೆಂದರಿದಾಗ ಪೊಟ್ಟಣಂ
ಗಟ್ಟಿಯೆ ನುಗ್ಗಿವೊಳ್ಳೆಲೆಯ ಶಾಖದಿ ನಾರುಜೆ ಬಂದು ನಿಲ್ಕುಮೇ ॥೧೧೩॥

ವಿಷಯ : ಹಸುವಿನ ರೋಗಗಳಿಗೆ ಔಷಧ.

ವಿಶೇಷ : ಅಸಮಗ್ರಪ್ರತಿ. ಶಕಟರೇಫದ ಬಳಕೆ ಇದೆ. ಇದೇ ಕಟ್ಟಿನ ಆರಂಭದಲ್ಲಿ ಸಾಮುದ್ರಿಕ ಮತ್ತು ವೈದ್ಯಕ್ಕೆ ಸಂಬಂಧಪಟ್ಟ ಕ್ರಮಾಂಕವಿಲ್ಲದ ೧೫ ಪತ್ರಗಳಿವೆ. ಬಳಿಕ ವೈದ್ಯಸಾರ ಸಂಗ್ರಹ ಮತ್ತು ವೈದ್ಯಾಮೃತವೆಂಬ ಗ್ರಂಥಗಳಿವೆ. ಕೊನೆಯಲ್ಲಿ ಕೆಲವು ಔಷಧಗಳ ವಿಚಾರ ೨೬ (೨೦೪–೨೨೯) ಪತ್ರಗಳಲ್ಲಿವೆ.

451

ಕೆ. ಬಿ. ೪೬೧	ಗೌರಮ್ಮಣ್ಣಿಯವರ ಚರಿತ್ರೆ	ಸಾಂಗತ್ಯ
೮.೩" × ೬.೬"	?	?
೧–೪೨ ಪುಟ	೧೨ ಪಂಕ್ತಿ	೧೩ ಅಕ್ಷರ

ಆದಿ : ಶ್ರೀ ಕೃಷ್ಣರಾಜೇಂದ್ರನ ರಾಣಿಯು ಗೌರಮ್ಮನ ಮೇಲೆ ಹೇಳಿದ ಚರಿತ್ರೆ ॥ ಶುಭಮಸ್ತು ॥

ಶ್ರೀ ವೇಲಾಪುರಿವಾಸಂ
ಶ್ರೀ ವನಿತಾಧೀಶ ಸೌಮ್ಯ ಕೇಶವರಾಯಂ
ಬಾವಜನ್ಯೆಯ್ಯಂ ಬಯುಸಿದು
ದೀವುತೆ ರಕ್ಷಿಸಲಿ ಎಂದು ಪಾದಕೆ ಮನಿಪೇಂ ॥ ೧ ॥
ಶ್ರೀಯುತ ಕೃಷ್ಣಭೂವರಗೆ ಗೌರಮ್ಮಗೆ
ಆಯುರಾರೋಗ್ಯೈಶ್ವರ್ಯಗಳಾ
ಪ್ರೀಯದಿಂ ಕೊಡಲೆಂದು ಬೇಲೂರ ಚೆನ್ನಿಗ
ರಾಯ ಮೂರುತಿಗೆರಗುವೆನೂ ॥ ೨ ॥

ಅಂತ್ಯ : ಎನಿತು ದಿನದ ತಪಸಿನ ಫಲವಿರ್ಪುದೊ
ತನಗೆಂದು ಬಹಳ ಸಂತಸದಿ
ದಿನನ ಸಮದ ಕೃಷ್ಣರಾಯನೊಲಿದನೆಂದು
ವನಿತೆ ಗೌರಮ್ಮನೊಪ್ಪಿದಳೂ ॥
ಅರುಣೋದಯುದೊಳೆದ್ದು ದೇವಾದಿದೇವರ
ಸ್ಮರಣೆಯ ಮಾಡಿ ಭಕ್ತಿಯಲಿ ॥ (ಸಂತಸದಿ) ॥
(ಇಲ್ಲಿಂದ ಮುಂದೆ ಮೂಲಪ್ರತಿಯಲ್ಲಿ ಪತ್ರಗಳು ಲೋಪವಾಗಿರುತ್ತೆ.)

ವಿಷಯ : ಕೃಷ್ಣರಾಜೇಂದ್ರನ ರಾಣಿ ಗೌರಮ್ಮನವರ ಚರಿತ್ರೆ.

ವಿಶೇಷ : ಕೆಲವು ಪತ್ರಗಳು ಲುಪ್ತವಾದ ಪ್ರತಿಯಿಂದ ಇದನ್ನು ಕಾಪಿ ಮಾಡಲಾಗಿದೆ. ಅಸಮಗ್ರ. ೪೨–೫೩ ಪುಟಗಳಲ್ಲಿ ಗೌರಮ್ಮನವರ ಮೇಲೆ ಹಾಡಿರುವ ಹಾಡುಗಳಿವೆ.

452

ಕೆ. ಬಿ. ೩೨೭/೩	ಗೌರಿ ಸಿದ್ಧೇಶ್ವರನ ತ್ರಿವಿಧಿ	ತ್ರಿವಿಧಿ
೭.೫" × ೫.೭"	ಸಿದ್ಧೇಶ್ವರ	?
೧–೪ ಪತ್ರ	೧೭ ಪಂಕ್ತಿ	೨೨ ಅಕ್ಷರ

ಆದಿ : ಗೌರಿ ಸಿದ್ಧೇಶ್ವರ ಸ್ವಾಮಿಯವರ ತ್ರಿವಿದೆ ಬರೆವುದಕ್ಕೆ ಶುಭಮಸ್ತು ॥
ಜಯ ಜಯ ಜಗದೀಶ
ಜಯ ಜಯ ಅಘಹರನೆ

ಜಯ ಜಯ ನಿಗಮ ತತಿಗಳಿಗೆ ದುರ್ಲಭನೆ
ಜಯತು ಸಿದ್ಧೇಶ ದಯವಾಗು ॥ ೧ ॥

ಅಂತ್ಯ : ವರಗುರು ಸಿದ್ಧೇಶ್ವರನ
ವುರುತರದ ಸ್ತೋತ್ರವ
ಬರದೋದಿ ಕೇಳಿ ನುತಿಪರ್ಗೆ ಕೇಳ್ದರ್ಗೆ ಪರಶಿವನೊಳೈಖ್ಯ
ಗುರುಸಿದ್ಧಲಿಂಗ ದಯವಾಗು ॥ ೫೪ ॥
ಸಿದ್ಧೇಶ್ವರ ಸ್ವಾಮಿಯವರ ತ್ರಿವಿದೆ ಸಂಪುರ್ನ ಜಯ ಮಂಗಳ ಮಹಾನಿ ಭವಂತ್ತು ॥ ಶ್ರೀ ॥

ವಿಷಯ : ಶಿವಸ್ತೋತ್ರ.

ವಿಶೇಷ : ಈ ಗ್ರಂಥಕ್ಕೆ ಮೊದಲು ಕೆಲವು ಶುದ್ಧಪತ್ರಗಳಿವೆ. ತೆಳುವು ಕಾಗದ. ಇದೇ ಪುಸ್ತಕದಲ್ಲಿ ಮೊದಲು ಭಕ್ತಾಧಿಕ್ಯ ರತ್ನಾವಳಿ, ಅನುಭವ ರಸಾಯನ ಎಂಬ ಗ್ರಂಥಗಳಿವೆ.

453

ಕೆ.ಬಿ. ೨೫೭	ಘೋರಾಸುರನ ಯುದ್ಧ	ವಾರ್ಧಕಷಟ್ಪದಿ
೭.೯" × ೬.೫"	ಪರಮಭಕ್ತ	ಸು. ೧೭೦೦
೧–೪೩ ಪತ್ರ	೨೫ ಪಂಕ್ತಿ	೩೩ ಅಕ್ಷರ

ಆದಿ : ಶ್ರೀ × × ×
ಷಟ್ಪದಿ ॥ ಗಜಗೌರಿತನಯ ಗಣಪತಿಯೆ ಯಂನ ಹೃದಯ
ಸದನದಲಿ ನಿಂದು ಯಿಾ ಕೃತಿಗೆ ಪಾಲಿಸು ಮತಿಯ
ಭಜಿಪೆ ನಿಂನಯ ಪದವ ವಿಘ್ನಹರ್ತನೆ ಪ್ರಕ್ಯಾತನೆ
ತ್ರಿಜಗಾದಿ ಪೂಜಿತನೆ ತ್ರಿಣೆಯನ ಪದಾರ್ಚಿತನೆ
ಭಜಕರನು ಕರುಣದಲಿ ಪಾಲಿಸುವ ವಿಘ್ನೇಶ
ಭುಜಗನುರದಲಿ ತಳೆದ ಪಾಶಾಂಕುಶದ ಹಸ್ತನೆ ॥ ೧ ॥
× × × ×
ಧರೆಯೊಳಗೆ ಮಣಿಪುರದ ಕುಲಿಶಭುಜನೆಂಬ
ಪರಮಭಕ್ತನು ತಾನು ಸುರಮುನಿಪ ನಾರದನ
ವುಪದೇಶದಿಂದ ಅಸುರರನು ಜಯಿಸಿರುವ ಪರಿಯಾ ॥ ೪ ॥

ಆ ಸತ್ಕೃತಿಯನು ವಿಸ್ತಾರದಿಂದರುಹೆಂದು
ನಿರಂಜನ ಮುನಿಯು ಕೇಳಲಾ
ಸಾನಂದ ಮುನಿಪ ಸಾಂಗ್ಯದಿ ವರದ ಕಥೆಯನ್ನು ಪೇಳುವೆನು
ಮುದದಿಂದಲಿ ॥

ಅಂತ್ಯ : ಸಕಲ ವೈಭವದಿಂದ ಮಂಗಳಾರತಿಗಳಂ
ನಖಿಳ ಸಂಭ್ರಮದಿ ಬೆಳುಗುತ್ತ ಶಿರಿನಾರಿಯರು
ನಿಖಿಳ ಅಮರಾಪುರದಿ ಸುರಪಸಂತೋಷದಿಂ ಹರನ ನುತಿಸುತಲಿರ್ದನು
ಧರೆಯೊಳೀ ಕಥೆಯನಿರದೋದಿ ಆಲಿಪ ಜನರ
ಕರುಣದಿಂ ಪಾರ್ವತೀಶನು ಪಾಲಿಪನುಯಂದು
ಪರಮಭಕ್ತನು ಅವಿರಳ ಸಿದ್ಧಲಿಂಗೇಶನಾಣತಿಯೊಳ್ ವರ್ನಿಸಿದನು ॥
ಅಂತು ಸಂಧಿ ೮೫ಕಂ ಪದನು ೬೧೭೫ಕಂ ಮಂಗಳ ಮಹಾಶ್ರೀ ॥ ಘೋರಾಸುರನ ಯುದ್ಧ ಸಂಪೂರ್ಣಂ ॥

ವಿಷಯ : ಘೋರಾಸುರನ ಚರಿತ್ರೆ.

ವಿಶೇಷ : ಮೋಡಿ ಅಕ್ಷರ. ಅಕ್ಷರಸ್ಖಾಲಿತ್ಯ ಹೆಚ್ಚು. ಪ್ರತಿಸಂಧಿಯ ಕೊನೆಯಲ್ಲೂ ಅವಿರಳಸಿದ್ಧಲಿಂಗೇಶನ ಅಂಕಿತವಿದೆ. ಈ ಪುಸ್ತಕದಲ್ಲಿಯೆ ಕೆ. ಬಿ. ೨೫೬ನೆಯ ನಂಬರಿನ ವಿಜಯ ಕುಮಾರನ ಕಥೆ ಎಂಬ ಕೃತಿ ಇದೆ.

454

ಕೆ. ಬಿ. ೧೯೮/೨	**ಚಕ್ರಕುಲ ರೇಖಾಲಕ್ಷಣ**	ಗದ್ಯ
೭.೮" × ೬.೩"	ಚಿದಾನಂದಾವಧೂತ	ಸು. ೧೭೫೦
೧೦–೩೨ ಪತ್ರ	೧೧ ಪಂಕ್ತಿ	೨೦ ಅಕ್ಷರ

ಆದಿ : ಕಂದ ॥ ಯೀಶನ ಕರುಣಾರಸದಿಂ
ದಾ ಶಂಭು ವಿವೃತ್ತಿದಾತ್ಮ ಪರಮುಪ್ಪುದಕಿ
ಕೋಶ ಪ್ರತಿಕೋಶವನುಪ
ದೇಶಂಗೈದಿದನು ಚಿದಾನಂದ ಸದ್ಗುರುವುಂ ॥
ಶ್ರೀಮದನಂತಾನಂದಖಂಡತೈಕ್ಯ ರಸಭೋದಾವಿಗಹ ಸ್ವರೂಪ ಮಾತ್ರ ನಾದ ಪರಮೇಶ್ವರನಂ ಕುರಿತು ಶ್ರೀಮತ್ಪರಾತ್ಪರ ತತ್ವೈಕ್ಯ ಪರಂಜೋತಿ ಸ್ವರೂಪಿಣಿಯೊಳಹಾ ಪಾರ್ವತಾದೇವಿಯು ಪರಬ್ರಂಹ್ಮೋಪಲಕ್ಷಣ ಸ್ವರೂಪ

ವೆನಿಪ ತಾರಸೌಗ್ನಾರ್ಥ ರಹಸ್ಯಂಗಳನ್ನು ಕೋಶಪ್ರತಿಕೋಶವೆನಿಪ ಈ ಪರ್ಯಾಯನಾಮದಿಂ ಶೃತಿ ಸಂಮತವಾಗಿ ಪೇಳಲು ತಕ್ಕದೆಂದು ಪ್ರಶ್ನೆಯುಗೈಯುತ್ತಿದ್ದಾಳೆ.

ಅಂತ್ಯ : ಯಿಾಗಿಲ್ಲಿ ಬರದಿರುವ ಪುರಾಣ ಪುರಾತನೋಕ್ತಿಗಳಿಂ ಕಾಣಪಟ್ಟ ನೆವದಿಂ ಚಕ್ರಕುಲ ರೇಖಾಲಕ್ಷಣಂಗಳಿಂ । ಪ್ರತ್ಯಕ್ಷವಾಗಿ ತೋರಿಸಿದುದರಿಂ । ಯಲ್ರೈ ನೀಲಕಂಠನಾದ ಗೌರೀಪತಿಯೆ ಸಿಂಸ ತಿಳಿದೆನೆಂಬುದರ್ಥ ॥ ೯ ॥ ನವಚಕ್ರ ಕುಲಾರೇಖಾಲಕ್ಷಣವು ಪಂಚೀಕರಣ ಸಹ ಸಂಪೂರ್ನ ಮಂಗಳಮಹಾಶ್ರೀ॥

ವಿಷಯ : ವೇದಾಂತ.

ವಿಶೇಷ : ಇದೇ ಪುಸ್ತಕದಲ್ಲಿ ಪಂಚೀಕರಣವೆಂಬ ಇನ್ನೊಂದು ಗ್ರಂಥವಿದೆ.

455

ಕೆ. ಎ. ೮೦	**ಚತುರಾಚಾರ್ಯ ಪುರಾಣ**	ವಾರ್ಧಕಷಟ್ಪದಿ
೧೨" × ೭.೬"	ಪರ್ವತೇಶ	೧೬೯೮
೧–೧೬೮ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ × × ಚತುರಾಚಾರ್ಯ ಪುರಾಣ ಪ್ರಾರಂಭಃ ಶ್ರೀರಸ್ತು

ಸೂಚನೆ ॥ ಆದಿಯುವಿರಳ ಪರಬ್ರಹ್ಮ ಪರಶಿವ ತಾನೆ
ಭೇದವಿಲ್ಲದೆ ರೇಣುಕಾದಿ ಗುರುವರರೆನಿಸಿ
ಮಾದೇವನಾಜ್ಞೆಯಿಂ ಧರೆಗೆಯ್ದಿ ದೀಕ್ಷೆಯಂ ಮಾಳ್ಪ ಪರಿ
ಯಾವುದೆನಲೂ ॥

ಪದನೂ ॥ ಶ್ರೀಗುರುವೆ ಭಕ್ತಹೃತ್ಸರಸಿಜಾಮಲ ಶೃಂಗ
ಯೋಗ ನಿಗಮಾದಿವರ ಶ್ರುತಿತತಿ ಶಿರೋತ್ಸಂಗ
ಭೋಗ ಮೋಕ್ಷಾದಿದಾಯಕ ಚರಾಚರ ಜೀವಸರ್ವಾಂತರಾತ್ಮಲಿಂಗಾ
ರಾಗಾದಿ ದೋಷ ದುರ್ಗುಣದೂರ ಯಾತಿ ತುಂಗ
ನಾಗಾಮರಾಸುರ ಪ್ರಮುಖ ರಕ್ಷಾಪಾಂಗ
ಸಾಗರ ಚಿದಾಸಾರ ಪರಮಾಮೃತದ ಪೂರ ಶರಣು ಗುರುಬಸವಲಿಂಗಾ
॥ ೧ ॥

× × × ×

ಕರುಣಾಂಬುನಿಧಿ ಚೆಂನಮಲ್ಲಿಕಾರ್ಜುನ ದೇವ
ರೊರೆದ ಆಚರಣಕ್ಕೆ ಪರ್ವತೇಶಂ ನಮಿಸಿ
ತರುಣಾರ್ಕ ಕೋಟಿಪ್ರಕಾಶ ಕಲ್ಯಾಣಾದ್ರಿವಾಸ ಸರ್ವೇಶ ಗುರುವೇ
ಧರಣಿಯೊಳ್ಮೆರೆವ ಚತುರಾಚಾರ್ಯರನ್ವಯವ
ಕರುಣದಿಂದೊರೆದು ಕೃತಕೃತ್ಯನಂ ಮಾಳ್ಪುದೆನೆ
ಹರುಷದಿಂ ಪೇಳ್ದರಾ ವಾಕ್ಯಾಮೃತವ ಪದವ ಮಾಳ್ಪುದೆನೆ
ಪೇಳ್ವೆನೊಲವಿಂ || ೩೦ ||

ಅಂತ್ಯ : ಶಂಕರಂಗೆರಗಿ ದಕ್ಷನ ಕಾಯ್ವುದೆನಲಭವ
ಪಂಕಜೋದರನ ಬಿಂನಪಕೆ ಪಾರ್ಬರು ತಿನುತ
ಲುಂ ಕೂಡೆ ಪೊಲೆಯರಿಗೆ ಭಾಗೆಯೆಂದುಳಿದಜನ ತಲೆಯ ಪತ್ತಿಸಿ ದಕ್ಷನಂ
ಕಂಕಾಳಧರನಿದಿರೆ ನಿಲಿಸಲ್ಕೆ ಪುಂಶ್ಚವೆ
ಶಂಕೆಯಿನಿತಿಲ್ಲದೆ ಸ್ತ್ರೀಚಮೆಮೆಯೆಂದು
ಶಂಕರನ ಚಮಕದಿಂ ನುತಿಸಲಾಗವನ ಮಂನಿಸಿ ರಜತಗಿರಿಗೈದಿದಂ
|| ೧೦೭ ||

ಅಂತು ಸಂಧಿ ೮ ಕ್ಕಾಂ ಪದನು ೫೨೭ ಕ್ಕಾಂ ವಟ್ಟು ೧೬೦೯ ಕ್ಕಾಂ ಮಂಗಳ ಮಹಾಶ್ರೀ.

ವಿಷಯ : ವೀರಶೈವಾಚಾರ್ಯರ ಚರಿತ್ರೆ.

ವಿಶೇಷ : ಬರಹವು ಸ್ಫುಟವಾಗಿದೆ. ೧-೩ ಕಾಂಡಗಳು ಪ್ರಕೃತ ಪುಸ್ತಕದಲ್ಲಿಯೂ ೪-೬ ಕಾಂಡಗಳು ಕೆ. ಎ. ೮೧ ನೆಯ ಪುಸ್ತಕದಲ್ಲಿಯೂ ಇವೆ.

456

ಕೆ. ಎ. ೮೧	**ಚತುರಾಚಾರ್ಯರ ಪುರಾಣ**	ವಾರ್ಧಕಷಟ್ಪದಿ
೧೨" × ೭.೬"	ಪರ್ವತೇಶ	೧೬೯೮
೧–೧೯೨ ಪತ್ರ	೨೦ ಪಂಕ್ತಿ	೨೮ ಅಕ್ಷರ

ಆದಿ : ಶ್ರೀ × × × ಚತುರ್ಥ ಕಾಂಡದೊಳ್ ೧ನೇ ಸಂಧಿ.
ಸೂಚನೆ॥ ರಕ್ಕಸನ ರಕುತಗುಡಿದುಕ್ಕಿರಲ್ ನರಸಿಂಹ
ಮುಕ್ಕಣ್ಣನ ಮಲಸುತ ಸದ್ಬೋಧೆಯಂ ಪೇಳೆ
ಮಿಕ್ಕು ನಿಂದಿಸೆ ಶಿವನ ನರಹರಿಯ ಶಿರವರಿದು ಮೆರೆದನಾ ಶರಭೇಶ್ವರಂ॥

ಪದನೂ॥ ರುದ್ರ ನಿಜಭಕ್ತಜನ ಸಂಸಾರವಾಸನೋ
ಪದ್ರವ ವಿನಾಶಕರ ಭೂತಿ ರುದ್ರಾಕ್ಷಮಯ
ಮುದ್ರ ಕರುಣಾಪೂರಿತೇಕ್ಷಣ ಸುಧಾನಿಂದುಲಹರಿ ನಿರಸ್ತಮಾಯಾ
ಭದ್ರಪ್ರದಾಯಕ ಭವಾನೀಕಟಾಕ್ಷ ಲೀ
ಲಾದ್ರವ ವಿನೋದಿತಾಂತಃಕರಣ ಶರಣಜನ
ಹೃದ್ರಾಜಕಮಲವಾಸನಾಸೀನ ಗುರು ಚಂನಮಲ್ಲೇಶ ಜಯ ಜಯ ಜಯಾ ॥೧॥

ಅಂತ್ಯ : ಬಿದಿಯ ಮಾನದೊಳಗಿಪ್ಪತ್ತೆಂಟನೆಯ ಕಲಿಯ
ಮೊದಲಲ್ಲಿ ವೈವಸ್ವತಾಖ್ಯ ಮನ್ವಂತರಾಧಿ
ಕದಲ್ಲಿದಬ್ದಗಳೇಣಿಸೆ ಶಾಲಿವಾಹನ ಶಕದಿ ನವ ಚಂದ್ರ ರಸ ಶಶಿಗಳು
ಅದರೊಳೀಶ್ವರ ವತ್ಸರದ ಮಾಘ ಪೌರ್ಣೋಮಿಯೊ
ಳುದಿಸಿ ಕಾವ್ಯ ಚತುರಾಚಾರ್ಯ ಚಾರಿತ್ರ
ಮಿದಕೆ ರಕ್ಷರು ಕಲ್ಯಾಣ ಪಠನದ ಬಸವಾದಿ ಪ್ರಮಥರಾಗಲ್ಲಿ ॥೫೯॥
ಸತತೋಜ್ವಲಾನಂದ ಸಂದೋಹ ರೂಪ ಸಂ
ನುತ ವೇದ ಪೌರಾಣಿಕಾಗಮಾದ್ಯಖಿಲ ವರ
ಮತಶಾಸ್ತ್ರ ಮಂಜುಳ ಸುಪುಂಜರಂಜಿತ ಪುರಾತನ ವಚನ ಸಮ್ಮತವಹಾ
ಅತಿಶಯ ಮಹಾಲಿಂಗ ಪದಪದ್ಮ ಷಟ್ಪದೋ
ದಿತರೂಪರಹ ಚತುರ್ಗ್ಗುರು ಚರಿತದೊಳ್ನೋಡ
ಲತಿನೂತ್ನವಾದಾರು ಕಾಂಡದೋಳ್ತಿಳಿಯಲೆಂಟನೆಯ ಸಂಧಿ
ಸಂಪೂರ್ನ್ನವಾಯ್ತು ॥೫೦॥
ಅಂತು ಸಂಧಿ ೮ಕ್ಕಾಂ ಪದನೂ ೫೯೮ಕ್ಕಾಂ ಮಂಗಳ ಮಹಾ.

× × × ×

ಶ್ರೀ ಪರಮಕೈಲಾಸವಾಸಂ ಸ್ವಯಂಜ್ಯೋತಿ
ರೂಪನಭಿನ್ನವ ಪರಬ್ರಹ್ಮ ಸಂಪಾದನಾ
ದಿ ಪಿತಾಮಹ ಚನ್ನಮಲ್ಲಿಕಾರ್ಜುನ ತನ್ನ ಪಾದಪದ್ಮಭೃಂಗನೆನಿಪಾ
ಶ್ರೀ ಪರ್ವತಾರ್ಯನಿಗೊರೆದ ಗುರು ಚಕ್ರೇಶ್ವರಿ
ಗೆ ಪೇಳ್ದ ಸತ್ಕಥಾಚಾರಿತ್ರದೊಳ್ತಿಳಿಯ
ಲೆ ಪೇಳ್ವೆನಿಲ್ಲಿ ಮುಗಿಯಿತಾರು ಕಾಂಡ ಸುಜ್ಞಾನ ಮೌಕ್ತಿಕ ಕರಂಡಾ ॥೨॥
ಅಂತು ಕಾಂಡ ೬ಕ್ಕೆ ಸಂಧಿ ೫೪ಕ್ಕಂ ಪದ ೩೧೮೬ ಪಲ್ಲ ೨೬ ಕಾಂಡ ಮುಕ್ತಪದ ೧೨ ಅಂತು ಪದದಿ ೩೨೨೬ಕ್ಕೆ ಸಲೆ ಗ್ರಂಥ ೧೯೦ಳ ಶ್ರುತಿವಾಕ್ಯವೃತ್ತ ಸಾಕ್ಷಿ ಗ್ರಂಥ ೩೩೨ ಉಭಯಗ್ರಂಥಂ ೩೨೩೬ಕ್ಕಂ ಜಯಮಂಗಳಂ. ಇಲ್ಲಿಗೆ ಚತುರಾಚಾರ್ಯ ಪುರಾಣ ಸಮಾಪ್ತಮಾದುದು ಶ್ರೀ.

ವಿಷಯ : ವೀರಶೈವಾಚಾರ್ಯರ ಚರಿತ್ರೆ.

ವಿಶೇಷ : ೭ನೆಯ ಕಾಂಡದ ೭ನೆಯ ಸಂಧಿಯಲ್ಲಿ ೪೯ರಿಂದ ೫೦ ಮತ್ತು ೯೨ರಿಂದ ೧೧೨ನೆಯ ಪದ್ಯಗಳು ಲೋಪ. ಹಾಗೂ ಅಲ್ಲಲ್ಲಿ ಪದಗಳು ಲೋಪವಾಗಿವೆ. ಅಕ್ಷರ ಸ್ಫುಟವಾಗಿವೆ. ಈ ಗ್ರಂಥದ ಮೊದಲಭಾಗ ಕೆ. ಎ. ೮೦ನೆಯ ಗ್ರಂಥದಲ್ಲಿದೆ.

457

ಕೆ. ಎ. ೩೧೧	ಚತುರಾಚಾರ್ಯ ಪ್ರಬಂಧ	ಭಾಮಿನೀಷಟ್ಪದಿ
೧೩.೨" × ೮"	ಸೋಮ	೧೮೩೦
೧–೨೧೭ ಪತ್ರ	೨೦ ಪಂಕ್ತಿ	೧೪ ಅಕ್ಷರ

ಆದಿ : ಶ್ರೀ × × × ಚತುರಾಚಾರ್ಯ ಪ್ರಬಂಧ ಪ್ರಾರಂಭಃ

ಪಲ್ಲವಿ ॥ ಮಲಹರನ ಚಿತ್ಕಲೆಗಳೆ ಶ್ರೀ
ಕೊಲನುಪಾಕಿಯ ಸೋಮಲಿಂಗನ
ಲಲಿತಗರ್ಭದಿ ಜನಿಸಿದರುವಾಚಾರ್ಯರುಗಳಾಗಿ ॥

ಪದ ॥ ಶ್ರೀಶ್ವರೇಶ್ವರ ಸಿತಗಜಮುಖ
ಭಾಸ್ವರಾಂಬುಜ ಭಾಸ್ಕರಾನಿಗ
ಮಾಶ್ವ ನಿರುಪಮಮಾಜಮದ ಸಂಹಾರ ಗಣಸಾರಾ
ಶಾಶ್ವತಪಘನ ಶರಣಜನ ರ
ಕ್ಷಾ ಸ್ವತಂತ್ರ ಶ್ರೀಪರಮ ಮಾ
ಹೇಶ್ವರನೆ ಪೊರೆ ವಿಶ್ವವನು ಬಿಡದೆಲ್ಲ ಕಾಲದಲಿ ॥ ೧ ॥

ಅಂತ್ಯ : ಲೆಕ್ಕದಲಿ ನೃಪಶಾಲಿವಾಹನ
ಸಕ್ಕ ಸಾವಿರದೇಳು ನೂರರ್ಮೆ
ಲಕ್ಕರದ ಐವತ್ತುಮೂರಿನ ಖರಸಂವತ್ಸರದಾ
ಹೆಕ್ಕಳದ ಜ್ಯೇಷ್ಠ ಸಿತಪಕ್ಷದ
ಚೊಕ್ಕಟದ ತ್ರಯೋದಶಿಯ ಗುರುವಾ
ರಕ್ಕೆ ಚತುರಾಚಾರ್ಯರ ಕಥಾ ಪೂರ್ಣಮಾಯಿತ್ತೂ ॥ ೩೧ ॥

× × × ×

ಗುರುಬಸವಲಿಂಗನ ಭಜಿಪ ಶಿವ
ಶರಣರಡಿ ಹುಡಿಯುಂಗವೆಲ್ಲವು
ಧರಿಸಿರುವ ತಿಲಕೂರ ಪುರವರ ಸೋಮ ವಿರಚಿಸಿದಾ
ವರದ ಚತುರಾಚಾರ್ಯ ಪ್ರಬಂಧದಿ
ಪರಮಕಲಿಯುಗದಮಳ ಕಥೆಯನು
ಪರಿಸಮಾಪ್ತಕ ಸಂಧಿ ಸರಿಮಂಗಳಮಹಾ ಶ್ರೀ ಶ್ರೀ ॥ ೩೩೧ ॥

ಅಂತು ಸ್ಥಲ ೨೯ಕ್ಕಂ ಪದನು ೧೪೧೩ಕ್ಕಂ ಪಂಚಮಾಶ್ವಾಸ ಪರಿಸಮಾಪ್ತ ಮಂಗಳಮಹಾ ಶ್ರೀ.

ವಿಷಯ: ವೀರಶೈವಮತದ ನಾಲ್ವರು ಆಚಾರ್ಯರ ಕಥೆ.

ವಿಶೇಷ: ಗ್ರಂಥವು ಸಮಗ್ರ. ಸುದೃಢ. ಸುಂದರ ಮತ್ತು ಸ್ಫುಟಾಕ್ಷರ.

458

ಕೆ. ೨೮೪/೨	**ಚತುರಾಸ್ಯನಿಘಂಟು**	ಕಂದ
೧೦.೯″ × ೧.೯″	ಚತುರಾಸ್ಯಬೊಮ್ಮರಸ	ಸು. ೧೪೫೦
■ ಪತ್ರ	೧೦ ಪಂಕ್ತಿ	೬೦ ಅಕ್ಷರ

ಆದಿ: ಕರ್ನಾಟಕ ಚತುರಾಸ್ಯನಿಘಂಟು ಬರವುದಕ್ಕೆ ಶುಭಮಸ್ತು ॥

ವಾಣಿಗೆ ಜಾಣೆಗೆ ನೆರೆ ಕ
ಲ್ಯಾಣಿಗೆ ಮೋಕ್ಷಾಗ್ರಕಡಲೊಳುಜ್ಜುಗುಸಿದ ನಿ
ಶ್ರೇಣಿಗೆ ಸರೋಜಪಾಣಿಗೆ
ಮಾಣದೆ ನಾನೆರಗೆವರದೆಯಪ್ಪಳಮೋಘಂ ॥ ೧ ॥
ಯಿಂತೆಂದು ನಮಿಸಿ ಕಂನಡ
ಕೆಂತಪ್ಪವು ಶಬ್ದಮೆಂಬ ವಿದ್ವಜ್ಜನದಾ
ಚಿಂತೆ ಪರಿಹರಿಪ ಮಾಳ್ಕೆಯೊ
ಳಂತುಸುರ್ವೆ೯ಂ ದೇಶಿ ತದ್ಭವಂ ತತ್ಸಮದೊಳ್ ॥ ೨ ॥
ನೆಲನಮರ್ದುಣಿಸಿಗಳನ್ವಯ
ತಿಲಕಂ ಹನುಮರಸಸೂನು ತಿಪ್ಪರಸಂ
ಪೇಳೆನೆ ಚತುರಾನನ ಯು
ನಲಾಂ ಘಳಿಲನೆ ಕರ್ನ್ನಾಟಕಾಭಿಧಾನಮನುಸುರ್ವೆ೯ಂ ॥ ೩ ॥

ಅಂತ್ಯ : ಗಲ್ಲ...................ವಂತಂ
ಮಲ್ಲಂ ಮಣಿ ಪಟ್ಟವೆಂಬಿವಿನಿತುಂ ಸಂಸ್ಕೃತ
ದಲ್ಲಿಯುಂ ಕಂನಡ
ದಲ್ಲಿಯುಂ ಹೊಂದೆ ಸಮಾನಮೆಲೆ ಚತುರಾಸ್ಯಾ ॥ ೧೧೭ ॥ ಶ್ರೀ ॥ ಶ್ರೀ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ಪ್ರತಿಪದ್ಯವೂ ಚತುರಾಸ್ಯಾ ಎಂದು ಮುಗಿಯುತ್ತದೆ. ಇದೇ ಕಟ್ಟಿನಲ್ಲಿ ಬಾಲ ಚಿಕಿತ್ಸೆ ಮತ್ತು ಬಾಹಟೋಕ್ತಗಣಪಾಠವೆಂಬ ಎರಡು ಗ್ರಂಥಗಳಿವೆ.

459

ಕೆ. ಎ. ೨೬/೧	**ಚತುರಾಸ್ಯನಿಘಂಟು**	ಕಂದ
೧೦.೪" X ೮.೨"	ಚತುರಾಸ್ಯಬೊಮ್ಮರಸ	ಸು. ೧೪೫೦
೭ ಪತ್ರ	೨೪ ಪಂಕ್ತಿ	೩೨ ಅಕ್ಷರ

ಆದಿ: ವಾಣಿಗೆ ಜಾಣಿಗೆ ನೆರೆ ಕ
ಲ್ಯಾಣಿಗೆ ಮೋಕ್ಷಾಗ್ರಕಡರಲುಜ್ಜುಗಿಸಿದ ವಿ
ಶ್ರೇಣಿಗೆ ಸರೋಜಪಾಣಿಗೆ
ಮಾಣದೆ ನಾನೆರಗೆ ವರದೆಯಪ್ಪಳಮೋಘಂ ॥ ೧ ॥
ಪೊಂಬಸುರಂ ನುಡಿವೆಣ್ಣಾ
ಣ್ಬಂ ಬಿದಿಗಂ ಬೇದಬಿಜ್ಜೆಗಂ ತಾವರೆಗಂ
ದಂ ಬಿದಿ ನಾಲ್ಮೊಗನೆನಲಜ
ನೆಂಬಪರು ಇಳೆಗೆ ಕೋವಿದರ್ ಚತುರಾಸ್ಯಾ ॥ ೨ ॥

ಅಂತ್ಯ : ಬಾಣಸಿಯನಲಡಿಗೆವಳಂ
ರಾಣನುಯನೆ ರಾಯನಾಟಕಲಿತನೆನೆ ಧೂರ್ತಂ
ಹೂಣೆಹೊಕ್ಕೆಂದಮೆನೆ ಸ
ತ್ರಾಣದಿನೊಳಪೊಕ್ಕನೆಂಬುದೆಲೆಚ........॥ ೧೭೨ ॥

ವಿಷಯ : ಕನ್ನಡ ನಿಘಂಟು.

ವಿಶೇಷ : ಪತ್ರ ಸಂಖ್ಯೆ ಗುರುತಿಸಿಲ್ಲ. ಅಸಮಗ್ರ. ಇದಾದನಂತರ ಖಾಲಿಯಿರುವ ಮೂರು ಪತ್ರಗಳಿವೆ. ಇದರೊಂದಿಗೆ ಚಾಮುಂಡಿಕಾಲಘು ನಿಘಂಟು ಮತ್ತು ಅನುಭವಾಮೃತ ಎಂಬ ಗ್ರಂಥಗಳೂ ಇವೆ.

460

ಕೆ. ಬಿ. ೪೧೫	**ಚತುರಾಸ್ಯನಿಘಂಟು**	ಕಂದ
೭.೯" × ೪.೨"	ಚತುರಾಸ್ಯಬೊಮ್ಮರಸ	ಸು. ೧೪೫೦
೧–೧೩ ಪತ್ರ	೯ ಪಂಕ್ತಿ	೨೬ ಅಕ್ಷರ

ಆದಿ : ಶ್ರೀ ವೀರಭದ್ರಾಯನಮಃ ಚತುರಾಸ್ಯ ನಿಘಂಟು × × ×

ಶ್ರೀಮದ್ಗಿರಿಜಾತಾನನ
ತಾಮರಸ ಮಧು ಪ್ರಮೋದ ಭೃಂಗಂ ದೇವಲ
ಲಾಮಂ ಕೃಪೆಯಿಂದೆನೆಗೆ ಮ
ನೋಮುದಮಂ ಪಂಪೆಯಾಳ್ದನೀಗನವರತಂ ॥ ೧ ॥

× × × ×

ಕವಿಚತುರಾನನನೆಂದೆನಿ
ಸುವ ನಾಮವೆ ದೇಶಿ ತದ್ಭವಂ ತತ್ಸಮಮೆಂ
ಬಿವರಿಂದಲಚ್ಚಗಂನಡ
ವಿವರಣೆ ಚಲ್ವಾಗೆ ರಚಿಸಿದಂ ಚತುರಾಸ್ಯಂ ॥ ೩ ॥

ಅಂತ್ಯ : ಇಂತೀ ಕಂನಡ ದೇಶಿಯು
ನಂತರ್ಥವ ಬುಧಸಮೂಹವರಿವಡೆವಂದದಿ
ಸಂತಸದಿನರುಪಿದಂ ಕವಿ
ಚಿಂತಾಮಣಿಯನಿಪ ಸರಸಕವಿ ತಿಪ್ಪರಸಂ ॥ ೧೩೩ ॥
ವಾಣಿಗೆ ಜಾಣೆಗೆ ನೆರೆ ಕ
ಲ್ಯಾಣಿಗೆ ಮೋಕ್ಷಾಗ್ರಕಡಲೊಳುಜ್ಜುಗಿಸಿದ ನಿಃ
ಶ್ರೇಣಿಗೆ ಸರೋಜಪಾಣಿಗೆ
ಮಾಣದೆ ನಾನೆರಗೆ ವರದೆಯಪ್ಪಳಮೋಘಂ ॥ ೧೩೪ ॥
ಚತುರಾಸ್ಯನಿಘಂಟು ಸಂಪೂರ್ಣಂ.

ವಿಷಯ : ಕನ್ನಡ ನಿಘಂಟು.

ವಿಶೇಷ : ತಿಪ್ಪರಸ ಎಂಬುವನು ಈ ಗ್ರಂಥದ ರಚನೆಗೆ ಸಹಾಯ ಮಾಡಿದನೆಂದು ತೋರುತ್ತದೆ.

461

ಕೆ. ಬಿ. ೪೨೯/೫ | ಚತುರಾಸ್ಯ ನಿಘಂಟು | ಕಂದ
೭.೭"×೬" | ಚತುರಾಸ್ಯಬೊಮ್ಮರಸ | ಸು. ೧೪೫೦
೧–೧೩ ಪತ್ರ | ೧೫ ಪಂಕ್ತಿ | ೧೫ ಅಕ್ಷರ

ಆದಿ : ಚತುರಾಸ್ಯನಿಂಘಂಟು ಪ್ರಾರಂಭ ||

ಶ್ರೀಮದ್ಗಿರಿಜಾತಾನನ
ತಾಮರಸ ಮಧುಪ್ರಮೋದಭೃಂಗಂ ದೇವಲ
ಲಾಮಂ ಕೃಪೆಯಿಂದೆನಗೆ ಮ
ನೋಮುದಮಂ ಪಂಪೆಯಾಳ್ದನೀಗನವರತಂ ||೧||

ಇಂತೆಂದು ನಮಿಶಿ ಕಂನಡ
ಕೆಂತಪ್ಪಡ ಶಬ್ದಮೆಂಬ ವಿದ್ವಜ್ಜನರಾ
ಚಿಂತೆಯ ಪರಿಹರಿಪ ಮಾಳ್ಕೆಯೊ
ಳಂತುಸುರ್ವ್ವೆಂ ದೇಶಿ ತದ್ಭವಂ ತತ್ಸಮಮಂ ||೨||

ಕವಿ ಚತುರಾನನನೆಂದೆನಿ
ಸುವ ನಾಮವೆ ದೇಸಿ ತದ್ಭವಂ ತತ್ಸಮಮೆಂ
ಬಿವರಿಂದಲಚ್ಚಗಂನಡ
ವಿವರಣೆ ಚಲ್ವಾಗೆ ರಚಿಸಿದಂ ಚತುರಾಸ್ಯಂ ||೩||

ಅಂತ್ಯ : ವಾಣಿಗೆ ಜಾಣೆಗೆ ನೆರೆ ಕ
ಲ್ಯಾಣಿಗೆ ಮೋಕ್ಷಾಗ್ರಕಡಲೊಳುಜ್ಜುಗುಸಿದ ನಿಃ
ಶ್ರೇಣಿಗೆ ಸರೋಜಪಾಣಿಗೆ
ಮಾಣದೆ ನಾನೆರಗೆವರದೆಯುಪ್ಪಳಿಮೋಘಂ ||೧೩೪||

ಇಂತಿ ಚತುರಾಸ್ಯ ನಿಘಂಟು ಸಂಪೂರ್ಣ ಮಂಗಳ ಮಹಾಶ್ರೀ.

ವಿಷಯ : ಕನ್ನಡ ನಿಘಂಟು.

ವಿಶೇಷ : ಇದರೊಂದಿಗೆ ಭಾರತನಿಘಂಟು, ಕನ್ನಡ ಧಾತುಪಾಠ, ಶಬ್ದರತ್ನಾಕರ, ನಾನಾರ್ಥಕಂದ, ಕಬ್ಬಿಗರ ಕೈಪಿಡಿ, ಕರ್ನಾಟಕ ಶಬ್ದಮಂಜರಿ (ಸಟೀಕು), ಕರ್ನಾಟಕ ಧಾತುನಿರ್ಣಯ ಎಂಬ ಗ್ರಂಥಗಳಿವೆ.

462

ಕೆ. ೫೯/೨	ಚಂದನಾಂಬಿಕೆಯ ಕಥೆ	ತ್ರಿವಿದಿ
೧೬.೫" × ೨.೨"	?	?
೧–೧೧ ಪತ್ರ	೧೧ ಪಂಕ್ತಿ	೮೦ ಅಕ್ಷರ

ಆದಿ : ....ಬಾರೆ
ಕುಟ್ಟುತಾ ಇರ್ವ್ವರೊಂದಾಗಿ ನೆನವೆನೂ ॥ ೨ ॥

ಶ್ರೀ ಪಂಚಗುರುಗಳ ಶ್ರೀ ಪುಣ್ಯತರುಗಳಾ
ನಾ ಪೊತ್ತು ಪಾಡಿ ಸುಖಿಯಾಗಿ ಮುಂನ್ನಿನಾ
ಪಾಪಲೇಪಗಳ ಕಳವೆನೂ ॥ ೩ ॥

ಪುರುಪರಮೇಶನ ಸಿರಿಮೋಘದಲಿ ಪುಟ್ಟಿ
ದರೆಯ ಭವ್ಯರನು ಸಲಹೂವಾ ಪಾವಂನ್ನೆ
ಸರಸ್ವತಿ ತಾಯೆ ನಮೋ ಎಂಬೆ ॥ ೪ ॥

ಅಂತ್ಯ : ಚಂದಿರ ರವಿತಾರೆ ಮಂದಿರ ಮೇಜುಗ
ಳೆಂದುಳ್ಳವೆಂದುವರೆ ನಿಂದು ಜಯು....
ಚಂದನಾಂಬಿಕೆಯ ಕಥೆ ಇದೂ ॥ ೧೨೨ ॥

ಅಂತು ಸಂದಿ ೪ ಕ್ಕೆ ಪದನೂ ೪೬೦ ಕಂ ಮಂಗಳ ಮಹಾಶ್ರೀ. ಆಗಳಿ ಪಾಯಂಣಗಳು ಬರದ ಚಂದನೆ ಕಥೆ ಪ್ರತಿ ಇದ ಹಾಗೆ ಬರದೆನು × × ಶ್ರೀ ಹೇವಳಂಬಿ ಸಂವತ್ಸರ ಭಾದ್ರಪದ ಶು ೧೩ ಲೂ ದೊಡಸಾಮಿಗೆ ಸಾಸ್ತ್ರ ದಾನವಾಗಿ ಬರದುಕೊಟ್ಟರು ಆಗಳೀ ಪಾಯಂಣಗಳೂ ಲಕ್ಷ್ಮೀಸೇನ ದೇವರ ಶಿಸ್ಯರು ಆಗಳಿ ಲಕ್ಷ್ಮಿಸೇನದೇವ × × × ಶಾಂತಿ ಭಕ್ತಿಶ್ಚೇತಿ.

ವಿಷಯ : ಚಂದನಾಂಬಿಕೆಯ ಕಥೆ.

ವಿಶೇಷ : ಪ್ರತಿ ಶಿಥಿಲವಾಗಿದೆ. ಶಕಟರೇಫ ಪ್ರಯೋಗ ಇದೆ. ಇದರೊಂದಿಗೆ ‘ಜೈನ ಕಥೆಗಳು’ ಎಂಬ ಗ್ರಂಥವಿದೆ.

463

ಕೆ. ೪೩/೧	**ಚಂದನೆ ಕಥೆ**	ಯಕ್ಷಗಾನ
೧೦.೩" × ೨.೧"	ಚಂದ್ರಸಾಗರವರ್ಣಿ	ಸು. ೧೮೦೦
೧–೨೩ ಪತ್ರ	೧೨ ಪಂಕ್ತಿ	೪೪ ಅಕ್ಷರ

ಆದಿ : ಶ್ರೀ × × × ಚಂದನೆ ಯಕ್ಷಗಾನ

ವೃ ॥ ಶ್ರೀಮದ್ಭವ್ಯಸಮೂಹ ಚಿತ್ತ ಕುಮುದದ್ವಿಸ್ತಾರ ತಾರಾಧಿಪಂ
ಶ್ರೀ ಮೂಲಾಖ್ಯ ಸಸಂಘ ಪದ್ಮಿನಿ ಪ್ರಿಯಸ್ಸದ್ಬೋಧಮಿತ್ರೋದಯಂ
ಶ್ರೀ ಮನ್ನಮ್ರ ಸುರಾಸುರಾರ್ಚಿತ ಪದಸನ್ಮಂಗಲೋದ್ದ್ರ್ಸದಾ
ಶ್ರೀ ಮುಕ್ತೀವರ ಚಂದ್ರನಾಥ ನಮಗೀಗಿಷ್ಟಾರ್ಥ ಸಂಸಿದ್ಧಿಯಂ ॥

× × × ×

ಕಂ ॥ ಅರುಹಂ ಶಾರದೆ ಮುನಿಗಣ
ಕೆರಕದೊಳಾನೆರಗಿ ಯಕ್ಷಗಾನದಿ ಚಂದನೆ
ಚರಿತೆಯು ಪೇಳುವೆ ಸರ್ವ
ರ್ಯರಕದಿ ಲಾಲಿಪುದು ಚಂದ್ರಸಾಗರ ವಚನಂ ॥

ಅಂತ್ಯ : ವಂದಿಸಿ ಅರುಹಗೆ ಗಣಧರ
ರಿಂದಂ ಬೇಳ್ಕೊಂಡು ಚಂದನಾರ್ಯೆಯರಪ್ಪಣೆ
ಯಿಂದಂ ಚೇಟಿಕನೃಪ ನಿಜ
ಮಂದಿರಕೈತಂದ ಕಾಂತೆ ಸಹವೈಭವದೀ ॥

ಗದ್ಯಾ ॥ ಯಿದು ವಿದಮರೇಂದ್ರ ಮುಗುಟತಟಘಟಿತ ಮಣಿಗಣಕಿರಣ ಮಾಲಾ ಪ್ರಬಂಧ × × × ಶ್ರೀಮಚ್ಚಂದ್ರಸಾಗರವರ್ಣಿ ವಿರಚಿತಮಪ್ಪ ಶ್ರೀವರ್ಧಮಾನಸ್ವಾಮಿಪುರಾಣದೊಳಿದು ಚಂದನೆಯಕ್ಷಗಾನ ಸಂಪೂರ್ಣ ಮಂಗಳಂ ಭೂಯಾತ್ ॥

ವಿಷಯ : ಚಂದನೆಯ ಕಥೆ.

ವಿಶೇಷ : ಮೊದಲನೆಯ ಪತ್ರ ಮುರಿದಿದೆ. ಇದರೊಂದಿಗೆ ವಸುದೇವಪಾರಿಜಾತವೆಂಬ ಗ್ರಂಥವೂ ಇದೆ.

464

ಕೆ. ೫೮/೨	**ಚೆಂದನೆ ಕಥೆ**	ಯಕ್ಷಗಾನ
೭.೭" × ೧.೮"	ಚಂದ್ರಸಾಗರವರ್ಣಿ	ಸು. ೧೮೦೦
೫೨–೭೬ ಪತ್ರ	೧೩ ಪಂಕ್ತಿ	[illegible] ಅಕ್ಷರ

ಆದಿ: ಶ್ರೀ × × ಚಂದನೆ ಕಥೆ ಬರೆವುದಕ್ಕೆ ಶುಭಮಸ್ತು। ವೃ॥ ಯಕ್ಷಗಾನಾ।

ವೃ॥ ಶ್ರೀಮದ್ಭವ್ಯ ಸಮೂಹ ಚಿತ್ತಕುಮುದದ್ವಿಸ್ತಾರ ತಾರಾಧಿಪಂ
ಶ್ರೀ ಮೂಲಾಖ್ಯಸಸಂಘಪದ್ಮಿನಿ ಪ್ರಿಯಸ್ಸದ್ಬೋಧಮಿತ್ರೋದಯಂ
ಶ್ರೀಮನ್ನಮ್ರ ಸುರಾಸುರಾರ್ಚಿತ ಪದಸ್ಸನ್ಮಂಗಲೋದ್ವರ್ಗಂ ಸದಾ
ಶ್ರೀಮುಕ್ತೀವರ ಚಂದ್ರನಾಥ ನಮಗೀಗಿಷ್ಟಾರ್ಥ ಸಂಸಿದ್ಧಿಯಂ॥

ಅರುಹಂ ಶಾರದೆ ಮುನಿಗಣ
ಕೆರಕದೊಳಾನೆರೆಗಿ ಯಕ್ಷಗಾನದಿ ಚಂದನೆ
ಚರಿತೆಯ ಪೇಳ್ವೆ ಸರ್ವ
ರ್ಯರಕದಿ ಲಾಲಿಪುದು ಚಂದ್ರಸಾಗರ ವಚನಂ॥

ಅಂತ್ಯ: ಕೇಳ್ದಿಲ್ಲರು ಮುಖ ಕಿರಿಕಿರಿ
ದಾಳ್ದರು ಆ ಮಾತಿಗರಸು ಕಂನೆಯ....
....ಸು ತಾಳಿರಿ ನೆಲಯನು
ಕೇಳ್ದಪೆ ನಾನೆಂದು ಕರೆದ ಕಂನೆಯನೆಡೆಗೇ॥
ವ॥ ಅಂತೆಡೆಯೋಳ್ಕುಳ್ಳಿರಿಸೆ ಲೋಮ........

ವಿಷಯ: ಚಂದನೆಯ ಕಥೆ.

ವಿಶೇಷ: ಈ ಗ್ರಂಥ ಅಸಮಗ್ರ. ಇದರೊಂದಿಗೆ ವಸುದೇವಪಾರಿಜಾತವೆಂಬ ಗ್ರಂಥವೂ ಇದೆ. ೬೩, ೬೫, ೬೬ನೆಯ ಪತ್ರಗಳು ಲುಪ್ತ. ೭೬ ನೆಯ ಪತ್ರದ ಸ್ವಲ್ಪ ಭಾಗ ಮುರಿದುಹೋಗಿದೆ.

465

ಕೆ.ಬಿ. ೧೮೮	**ಚಂದ್ರಕಳಾವತೀ ವಿಲಾಸ**	ಹಾಡು, ಕಂದ, ವಚನ
೭.೬" × ೬.೨"	ವೆಂಕಟರಮಣ	?
೧–೮೮ ಪತ್ರ	೧೧ ಪಂಕ್ತಿ	೨೩ ಅಕ್ಷರ

ಆದಿ: ಶ್ರೀರಸ್ತು॥ ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ॥ ಚಂದ್ರಕಳಾವತಿ ವಿಲಾಸವಮ್ಂ ಬರೆಯುವದಕ್ಕೆ ಶುಭಮಸ್ತು॥ ನಿರ್ವಿಘ್ನಮಸ್ತು॥

ಕಂದ || ಅಕ್ಷಯ ಕವಿ ವಿದ್ವಜ್ಜನರಿಂ
ಲಕ್ಷಣಕವಿರಾಜನೆಂದು ರಾಜಸಭೆಗಳೊಳ್
ದಕ್ಷತೆ ಯಶವಾಂತ ಶ್ರೀ
ಲಕ್ಷಣಕವಿ ವೆಂಕಟಾರ್ಯನರುಹಿದ ಕೃತಿಯಂ ||

ಅಂತ್ಯ : ವರಸೂತ ಶೌನಕಾದ್ಯಖಿಲ ಮುನಿಗಳಿಗೆ ವರಸೆಯಿಂ ಪೇಳ್ದ ಯಿಾ ವರಕಥೆಯುಳ್ಳ ಮಹನೀಯ ಸ್ಕಾಂದದೊಳ್ ಮಲಯ ಖಂಡದಲ್ಲಿ ವಹಿಸಿ ಈ ನಾಲ್ಕನೆಯ ಅಧ್ಯಾಯವನ್ನು ಕರ್ನಾಟಭಾಷೆಯೊಳ್ ಕಮನೀಯ್ಯವಾಗಿ ನಿರ್ನೈಸಿ ರಚನೆಯಿಂದೀ ಪುರಾಣಾರ್ಥ ಶ್ರೀದನಾ ವಾಸುದೇವನ ಕಟಾಕ್ಷದಲಿ ಸಾದರದಿಂದಾದ ಸಾಹಿತೀ ವಿಭವ ಅತ್ರೀಲವಂಶ ಕ್ಷೀರಾಂಬುಧಿ ಚಂದ್ರ ಪೂರ್ವೇಂದು ಸತ್ಕೀರ್ತಿ ಪುಣ್ಯತರಮೂರ್ತಿ ಸರಸ ಭಾರದ್ವಾಜಗೋತ್ರಪವಿತ್ರ ಅರಸಲಾಪಸ್ತಂಭಸೂತ್ರಾಧಿಮಿತ್ರನಾದ ವೆಂಕಟ ಸುಧೀವರನ ಸತ್ಪಾತ್ರ ಶ್ರೀದ ಶ್ರೀರಾಮಾರ್ಯ ಧೀಮಣಿಪುತ್ರ ಸಕಲ ಸತ್ಕವಿಮಿತ್ರ ಸದ್ಗುಣಪಾತ್ರ ಅಖಿಲ ವಿದ್ವಜ್ಜನಾನಂತ ವಿಧೇಯ ರಮಣಾರ್ಯ ವೆಂಕಟರಮಣಾಭಿಧೇಯ ಕಮನೀಯ್ಯಮಾದ ಈ ಕಾವ್ಯವಂ ಮೊರೆದ ಚರಣ ನೂಪುರದಂತೆ ಜಲಜಲೋಚನೆಗೆ ಧರೆಯಲ್ಲಿ ಆಚಂದ್ರತಾರಾರ್ಕವಾಗೀ ಚಂದ್ರಕಳಾವಿಲಾಸದೊಳ್ ೪ ನೇ ಅಧ್ಯಾಯಕ್ಕೆ ಮಂಗಳಮಹಾ ||

ವಿಷಯ : ಸ್ಕಾಂದ ಪುರಾಣದ ಮಲಯ ಖಂಡಾಂತರ್ಗತ ನಾಲ್ಕನೆಯ ಅಧ್ಯಾಯದಲ್ಲಿ ಹೇಳಿರುವ ಚಂದ್ರಕಳಾವತಿಯ ಕಥೆ.

ವಿಶೇಷ : ಅಕ್ಷರಗಳು ಸ್ಫುಟವಾಗಿವೆ.

466

ಕೆ. ೫೧೮	**ಚಂದ್ರನಾಥ ಚರಿತೆ**	ಸಾಂಗತ್ಯ
೧೮.೯"×೧.೭"	ದೊಡ್ಡಯ್ಯ	ಸು. ೧೫೫೦
೧-೭೧ ಪತ್ರ	೬ ಪಂಕ್ತಿ	೧೦೮ ಅಕ್ಷರ

ಆದಿ : ಸ್ರಗ್ಧರಾವೃತ್ತ ||
ಶ್ರೀ ವರ್ಮಕ್ಷ್ಮಾಪತಿಃ ಶ್ರೀಧರ ಇತಿ ವಿಲಾಸನ್ನಾಮ ಭೃತ್ಸರ್ಗಜಾತಃ
ಷಟ್ಖಂಡಾಧೀಶ್ವರಃ ಷೋಡಶವರ ಕಲ್ಪೋದ್ಭವಃ ಪದ್ಮನಾಭಃ

ಪೃಥ್ವೀಪಾಲೋಹಮಿಂದ್ರೋsಪ್ಯಮ ನಿರುಪಮ ಸತ್ತೀರ್ಥ ನಾಥಶ್ಚಹ್ಯಂ
ಶ್ರೀಮಚ್ಚಂದ್ರಪ್ರಭಾಖ್ಯೋ ಜಿನಪತಿರತುಲಂ ಮುಕ್ತಿಸೌಖ್ಯಂ ದದಾತು
॥ ೧ ॥

ವೃ ॥ ಶ್ರೀಮದ್ಗೀರ್ವಾಣನಾಥವ್ರಜ ಫಣಿಪತಿ ಸಂದೋಹ ಸಚ್ಚಕ್ರವರ್ತಿ
ಸ್ತೋಮ ಪ್ರಸ್ತೂಯಮಾನಂ ವಿಮಲ ಗುಣಗಣಾಲಂಕೃತಂ
ಭವ್ಯಲೋಕ
ಸ್ವಾಮಿ ತ್ರೈಲೋಕ್ಯ ಚೂಡಾಮಣಿ ತುಹಿನ ಸಿತಾಂಭೋಜ
ಶುಭ್ರಾಂಗ ಶೋಭಂ
ಕಾಮಾರಿಪ್ರಾಪ್ತಬೋಧಂ ಕುಡುಗೆಮಗೆ ನಿಜಾನಂದಮಂ
ಚಂದ್ರನಾಥಂ ॥ ೨ ॥

ಅಂತ್ಯ : ಸ್ಮರ ಶಬರನ ಬಲೆಯೊಳು ಸಿಲ್ಕಿ ನೀಸುಗು
ಮುರು ಚಕ್ರವಾಕಗಳಂತೆ
ವರವಸದ ಮರೆಯೊಳಗಿನಿಸಲು
ಗುರುಕು....ರೆಸೆಯೆ ನಡೆದಳೂ ॥ ೧೫೫ ॥
ಬಿಡದೆ ಕಾಳಿಂದಿ ಗಂಗೆಯ್ಸ್ಹೊನಲುಗಳಿರ
ದೊಡಗೂಡಿದಂತೆ ಬ........

ವಿಷಯ : ಎಂಟನೆಯ ತೀರ್ಥಂಕರನಾದ ಚಂದ್ರನಾಥನ ಚರಿತ್ರೆ.

ವಿಶೇಷ : ಅಸಮಗ್ರ. ಕೆಲವು ಪತ್ರಗಳು ಮುರಿದು ಹೋಗಿವೆ. ಪತ್ರಸಂಖ್ಯೆ ೨೮-೩೭ ರವರೆಗೆ ಬಿಟ್ಟುಹೋಗಿವೆ, ಆದರೆ ವಿಷಯ ಲೋಪವಿಲ್ಲ.

467

ಕೆ. ೬೯	**ಚಂದ್ರನಾಥ ಚರಿತೆ**	ಸಾಂಗತ್ಯ
೧೩.೮" × ೨.೧"	ದೊಡ್ಡಯ್ಯ	ಸು. ೧೫೫೦
೧–೧೪೧ ಪತ್ರ	೧೦ ಪಂಕ್ತಿ	೪೮ ಅಕ್ಷರ

ಆದಿ : ಶ್ರೀ × × ಸ್ರಗ್ಧರಾವೃತ್ತ॥
ಶ್ರೀ ವರ್ಮಕ್ಷ್ಮಾಪತಿಃ ಶ್ರೀಧರ ಇತಿ ವಿಲಸನ್ನಾಮ ಭೃತ್ಸರ್ಗಜಾತಃ
ಷಟ್ಖಂಡಾಧೀಶ್ವರಃ ಷೋಡಶವರಸುರ ಕಲ್ಪೋದ್ಭವಃ ಪದ್ಮನಾಭಃ

ಪೃಥ್ವೀಪಾಲೋಹಮಿಂದ್ರೋಪ್ಸಮ ನಿರುಪಮ ಸತ್ತೀರ್ಥನಾಥಶ್ಚಮಹ್ಯಂ
ಶ್ರೀಮಚ್ಚಂದ್ರಪ್ರಭಾಖ್ಯೋ ಜಿನಪತಿರತುಲಂ ಮುಕ್ತಿಸೌಖ್ಯಂ
ದದಾತು ॥ ೧ ॥

ವೃತ್ತ॥ ಶ್ರೀಮದ್ಗೀರ್ವಾಣನಾಥವ್ರಜ ಫಣಿಪತಿ ಸಂದೋಹ ಸಚ್ಚಕ್ರವರ್ತಿ
ಸ್ತೋಮ ಪ್ರಸ್ತೂಯಮಾನಂ ವಿಮಲಗುಣಗಣಾಲಂಕೃತಂ ಭವ್ಯಲೋಕ
ಸ್ವಾಮಿ ತ್ರೈಲೋಕ್ಯಚೂಡಾಮಣಿ ತುಹಿನ ಸಿತಾಂಭೋಜ ಶುಭ್ರಾಂಗ
ಶೋಭಂ
ಕಾಮಾರಿಪ್ರಾಪ್ತಬೋಧಂ ಕುಡುಗೆಮಗೆ ನಿಜಾನಂದಮಂ
ಚಂದ್ರನಾಥಂ ॥ ೨ ॥

ಪಲ್ಲವ॥ ಸುರಚಿರ ಚಂದ್ರನಾಥನ ಸತ್ಕಥೆಯ ಬಂ
ಧುರ ಪೀಠಿಕೆಯನುಸುರುವೆನೂ ॥
ಪದನೂ॥ ಶ್ರೀಮನುಜಾಮರೋರಗ ರಾಜಪೂಜಿತ
ಕೋಮಲ ಪಾದಪಯೋಜಾ
ಕಾಮಿತಫಲ ಸಿದ್ಧಿದಾಯಕ ಸಲಹೆಂನ
ಪ್ರೇಮದಿ ಚಂದ್ರಜಿನೇಂದ್ರ ॥ ೧ ॥

ಅಂತ್ಯ: ವಾರ್ಧಿಕ ಷಟ್ಪದಿ॥ ಲಲನೆಯರ ಮೊಗದ ಮೂಗುತಿಮಾಣಿಮಣಿಯಂತೆ
ವಿಲಸಿತಾಂಗಿಯರ ನುಣ್ಗೊರಲ ಕಂಠಿಕೆಯಂತೆ
ಜಲಜನೇತ್ರೆಯರು ಸುಪ್ರೇಮದಿಂ ತಳಿಗೈರ್ಯೊಳಿರ
ದಾಂತು ಸಲೆ ನೋಡುವಾ
ಪೊಳೆವ ಕನ್ನಡಿಯಂತೆ ಕಣ್ಗೊಳಿಪ ದೊಡ್ಡಯ್ಯ
ನೊಲವಿನಿಂದಮೃತ ಲಕ್ಷ್ಮೀಕಾಂತ ಜಿನಪತಿಯ
ಚಲನ ಪಂಕಜಭೃಂಗನೆನಿಸಿಯೊಪ್ಪಿದನು
ಸದ್ವಿಪ್ರಕುಲ ರತ್ನದೀಪಂ ॥
ಅಂತು ಸಂಧಿ ೧೮ಕ್ಕಂ ಪದನು ೪೫೮೫ಕ್ಕಂ ಮಂಗಳಮಹಾಶ್ರೀ.

ವಿಷಯ : ಎಂಟನೆಯ ತೀರ್ಥಂಕರನಾದ ಚಂದ್ರನಾಥನ ಚರಿತ್ರೆ.

ವಿಶೇಷ : ೧೮ ಆಶ್ವಾಸಗಳು ಮಾತ್ರ ಇವೆ. ಗ್ರಂಥದಾದಿಯು ಬೇರೊಂದು ಪತ್ರದಲ್ಲಿ ವಿಷಯಸೂಚಿಯಿದೆ.

468

ಕೆ. ಬಿ. ೯೪	**ಚಂದ್ರನಾಥ ಚರಿತೆ**	ಸಾಂಗತ್ಯ
೭.೮" × ೬.೨"	ದೊಡ್ಡಯ್ಯ	ಸು. ೧೫೫೦
೧–೨೯೧ ಪತ್ರ	೧೧ ಪಂಕ್ತಿ	೨೨ ಅಕ್ಷರ

ಆದಿ : ಸ್ರಗ್ಧರಾವೃತ್ತ॥

ಶ್ರೀವರ್ಮಕ್ಷ್ಮಾಪತಿ ಶ್ರೀಧರ ಇತಿ ವಿಲಸನ್ನಾಮಭೃತ್ಸರ್ಗಜಾತಃ
ಷಟ್ಖಂಡಾಧೀಶ್ವರಃ ಷೋಡಶವರಸುರ ಕಲ್ಪೋದ್ಭವಃ ಪದ್ಮನಾಭಃ
ಪೃಥ್ವಿಪಾಲೋಹಮಿಂದ್ರಾಸ್ತ್ಯಪು ನಿರುಪಮ ಸತ್ತೀರ್ಥನಾದಶ್ಚಿಮಹ್ಯಂ
ಶ್ರೀಮಚ್ಚಂದ್ರಪ್ರಭಾಖ್ಯೋ ಜಿನಪತಿರತುಲಂ ಮುಕ್ತಿಸೌಖ್ಯಂ
ದದಾತು ॥ ೧ ॥

ಅಂತ್ಯ: ವಾರ್ಧಿಕಷಟ್ಪದಿ॥ ಲಲನೆಯುರವೊಗದ ಮೂಗುತಿಯಾಣಿಮಣಿಯಂತೇ
ವಿಲಸಿತಾಂಗಿಯುರ ನುಣ್ಗೊರಲ ಕಂಠಿಕೆಯಂತೆ
ಜಲಜನೇತ್ರಯರು ಸುಪ್ರೇಮದಿಂ ತಳಿಗೈಯೊಳಿರ
ದಾಂತು ಸಲೆ ನೋಡುವಾ
ಪೊಳೆವ ಕನ್ನಡಿಯಂತೆ ಕಣ್ಗೊಳಿಪ ದೊಡ್ಡಯ್ಯ
ನೊಲವಿನಿಂದಮೃತಲಕ್ಷ್ಮೀಕಾಂತ ಜಿನಪತಿಯ
ಜಲನ ಪಂಕಜಭೃಂಗನೆನಿಸಿಪ್ಪಿದನು
ಸದ್ವಿಪ್ರಕುಲರತ್ನದೀಪಂ ॥
ಅಂತು ಸಂಧಿ ೧೮ಕ್ಕಂ ಪದನು ೨೯೯೦ಕ್ಕಂ ಮಂಗಳಮಹಾ ಶ್ರೀ.

ವಿಷಯ : ಎಂಟನೆಯ ತೀರ್ಥಂಕರನಾದ ಚಂದ್ರನಾಥನ ಚರಿತೆ.

ವಿಶೇಷ : ಈ ಗ್ರಂಥದಲ್ಲಿ ೧೮ ಆಶ್ವಾಸಗಳಿವೆ. ಗ್ರಂಥ ಅಸಮಗ್ರ. ೧೨೬ನೆಯ ಪತ್ರ ಲುಪ್ತ.

469

ಕೆ. ಎ. ೨೧೧/೨	**ಚಂದ್ರನಾಥಾಷ್ಟಕ**	ವೃತ್ತ
೧೩" × ೮"	ಗುಣವರ್ಮ	?
೪೬–೪೭ ಪತ್ರ	೩೦ ಪಂಕ್ತಿ	೧೭ ಅಕ್ಷರ

ಆದಿ : ಶ್ರೀಪಾದಂ ಗೋಮಿನಿ ಭಂಗಿಗೆ ನವನಳಿನಂ ಶ್ರೀಮುಖಂ ಶ್ರವ್ಯದಿವ್ಯಾ
ಳಾಪ ಜ್ಯೋತ್ಸ್ನಾವಿಲಾಸಕ್ಕಮಲ ಹಿಮಕರಂ ಸ್ವಚ್ಛಾಬೋಧಂ ತ್ರಿಳೋಕೀ

ರೂಪಾರ್ಕಾ ಶವಾತ್ಮಾಕೃತಿ ಶಿವಸುಖವಲ್ಲೀ ವಿತಾನಕ್ಕಡರ್ಪಾ
ದಾ ಪೂರ್ಣೇಶ್ವರ್ಯಮಂ ಮಾಡೆನಗಮೃತ ಸುಖಾವಾಪ್ತಿಯಂ
ಚಂದ್ರನಾಥಾ ॥

ಅಂತ್ಯ : ಬಹುವಿದ್ಯಾಮಂಡನಂ ಪಂಡಿತಮುನಿಪತಿ ಚಂದ್ರವೃತಿ ಶ್ರೀಪದಾಂಭೋ
ರುಹಸೇವಾ ಸಂಭೃಂಗಂ ಕ್ಷಿತಿನುತ ಗುಣವರ್ಮಂ ವಚೋಮಾಲೆಯಿಂದಂ
ನ್ವಹಮಾದಂ ಪೂಜಿಸಲ್ ರಾಜಿಪ ಜಿನನನಘಂ ಮಾಳ್ಕೆ ಭವ್ಯರ್ಗೆ ಸೌಖ್ಯಾ
ವಹಮಂ ಕೊಲ್ಲಾಪುರ ಶ್ರೀ ತ್ರಿಭುವನತಿಲಕಾಲಂಕೃತಂ ಚಂದ್ರನಾಥಾ ॥

ವಿಷಯ : ಕೊಲ್ಲಾಪುರದ ಶ್ರೀಚಂದ್ರನಾಥಸ್ವಾಮಿಯ ಸ್ತುತಿ.

ವಿಶೇಷ : ಶಕಟರೇಫದ ಪ್ರಯೋಗವಿದೆ. ಇದರೊಂದಿಗೆ ಉದ್ಯೋಗಸಾರವೆಂಬ ಮತ್ತೊಂದು ಗ್ರಂಥವಿದೆ. ಪ್ರತದ ಒಂದು ಕಡೆ ಮಾತ್ರ ಬರೆದಿದೆ.

470

ಕೆ. ಎ. ೨೮೪/೯	**ಚಂದ್ರನಾಥಾಷ್ಟಕಂ**	ವೃತ್ತ
೧೨.೯" × ೮.೨"	ಮೌಕ್ತಿಕಕವಿ	ಸು. ೧೧೨೦
೧–೨ ಪತ್ರ	೨೦ ಪಂಕ್ತಿ	೨೦ ಅಕ್ಷರ

ಆದಿ : ಚಂದ್ರನಾಥಾಷ್ಟಕಂ ॥
ಶ್ರೀಯುಂ ತತ್ರತ್ರಯಂ ಚಾಮರಮುದಿಕತೆಯುಂ ಶೌರ್ಯಮಂ ಸಿಂಹಪೀಠ
ಶ್ರೀಯುಸ್ಸಂವಾಣಿ ಭಾಮಂಡಲವಮಲತೆಯುಂ ವಾದ್ಯಮುತ್ಸಾಮಂ ಸು
ಚ್ಛಾಯಾಶೋಕಂ ಮನೋರಾಗಮುರ್ವ್ವಳಿಸದ್ಭಾಗಮುಂ ಮಾಳ್ಕೆ ಲೋಕೋ
ದಯಂ ತತ್ಪ್ರಾತಿಹಾರ್ಯಂ ನಿಮಗೆರಗಿದವಂನಾಗಳುಂ ಚಂದ್ರನಾಥಾ
॥ ೧ ॥

ಅಂತ್ಯ : ಕೃತಕೃತ್ಯಂ ಮೌಕ್ತಿಕಂ ಸತ್ಕವಿ ವಿರಚಿಸಿದೀ ಸಾರಮಪ್ಪಷ್ಟಕ ಶ್ರೀ
ಸ್ತುತಿಯಂ ಪೇಳ್ದುದುವಾಲಿಪವರ್ಗ್ಗೆ ನಿರುಪಮಾನಂದಮಂ ಮಾಳ್ಕೆ ಸೀತಾ
ಪತಿ ರಾಮುಸ್ಥಾಪಿತೋದ್ಯ ತ್ರಿಭುವನತಿಲಕಾಲಂಕೃತ ಖ್ಯಾತಿನಾಮಾಂ
ಕಿತಮಾಗಿ ಪದೊಪ್ಪಿಪ್ಪಪೆನ್ನಂಗವುಲ ಪುರವರಾಧೀಶ್ವರಂ ಚಂದ್ರನಾಥಾ
॥ ೯ ॥

ವಿಷಯ : ಚಂದ್ರನಾಥನ ಸ್ತುತಿ.

ವಿಶೇಷ: ಪತ್ರದ ಒಂದು ಕಡೆ ಬರೆದಿದೆ. ಶಕಟರೇಫ ಪ್ರಯೋಗ ಇದೆ. ಪ್ರತಿಯೊಂದು ಪದ್ಯವೂ ಚಂದ್ರನಾಥಾ ಎಂದು ಮುಗಿದಿರುತ್ತದೆ. ಇದರಲ್ಲಿ 'ಪಾರ್ಶ್ವನಾಥಾಷ್ಟಕಂ' ಮೊದಲಾದ ಇತರ ೧೧ ಗ್ರಂಥಗಳಿವೆ.

471

ಕೆ. ಎ. ೪೧	**ಚಂದ್ರಪ್ರಭಪುರಾಣ**	ಚಂಪು
೧೩" × ೭.೯"	ಅಗ್ಗಳ	೧೧೮೯
೧–೧೮೨ ಪತ್ರ	೨೫ ಪಂಕ್ತಿ	೧೨ ಅಕ್ಷರ

ಆದಿ : ಶ್ರೀ × × ×

ಶ್ರೀಪಾದದ್ವಿತಯ ಪ್ರದಕ್ಷಿಣಕೃತಿವ್ಯಾಸಕ್ತ ಗೀರ್ವಾಣ ಕಾ
ನ್ತಾಪಾಂಗ ಪ್ರತಿಬಿಂಬ ಕೋಟಿ ಘಟಿತಸ್ಮೇರ ಸ್ಥಳೇಂದೀವರ
ಶ್ರೀಪೂರ್ಣಂ ಹಿಮವನ್ನಗೇಂದ್ರಮೆನೆ ಕಣ್ಗೆಂಬಾದ ಚಾಂದ್ರಪ್ರಭಂ
ರೂಪಂ ದಿವ್ಯವಚೋಮರುಂನ್ನದಿಯಿನೆಂಮ್ಮೊಳ್ ಮಾಳ್ಕೆ ನೈರ್ಮಲ್ಯಮಂ ‖ ೧ ‖

ಕಂದ ‖ ಚಂದ್ರಪ್ರಭಚರಿತಮನಾ
ಚಂದ್ರಾರ್ಕಸ್ಥಾಯಿ ಇನ್ತಿಡೆನೆ ಪೇಳ್ದು ಶರ
ಚ್ಚಂದ್ರೋಜ್ವಲ ಕೀರ್ತಿಗೆ ಸುಕ
ವೀಂದ್ರಂ ನೆಲೆಯಾದನಾದಮಗ್ಗಳದೇವಂ ‖

ಅಂತ್ಯ : ಏಕಾದಶಶತಮುಂ ಮ
ತ್ತೇಕಾದಶಮಾಗೆ ಶಕ ನೃಪಾಬ್ದಂ ಸೌಮ್ಯ
ಪ್ರಾಕಟವರ್ಷದ ಚೈತ್ರ ಸಿ
ತೈಕಾದಶಿ ಎಂದು ನೆಗಳ್ದುದೀ ಕೃತಿರತ್ನಂ ‖ ಶ್ರೀ ಶ್ರೀ ಶ್ರೀ ‖

ವಿಷಯ : ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆ.

ವಿಶೇಷ : ಮೋಡಿ ಅಕ್ಷರ. ಆದಿ ಮತ್ತು ಅಂತ್ಯದಲ್ಲಿ ಕೆಲವು ಶುದ್ಧ ಪತ್ರಗಳಿವೆ.

472

ಕೆ.ಬಿ. ೨ | ಚಂದ್ರಪ್ರಭಪುರಾಣ | ಚಂಪು
೭.೭" × ೬.೨" | ಅಗ್ಗಳ | ೧೧೮೯
೧–೧೬೨ ಪತ್ರ | ೧೫ ಪಂಕ್ತಿ | ೧೭ ಅಕ್ಷರ

ಆದಿ : ಶ್ರೀ ವೃಷಭತೀರ್ಥಂಕರಾಯ ನಮಃ ॥
ಶ್ರೀಪಾದದ್ವಿತಯ ಪ್ರದಕ್ಷಿಣಕೃತ ವ್ಯಾಸಕ್ತ ಗೀರ್ವಾಣ ಕಾಂ
ತಾಪಾಂಗ ಪ್ರತಿಬಿಂಬಕೋಟಿ ಘಟಿತ ಸ್ಮೇರಸ್ಥ ಳೇಂದೀವರ
ಶ್ರೀಪೂರ್ಣಂ ಹಿಮವನ್ನಗೇಂದ್ರಮೆನೆ ಕಣ್ಗೆಂಬಾದ ಚಾಂದ್ರಪ್ರಭಂ
ರೂಪಂ ದಿವ್ಯವಚೋ ಮರುನ್ನದಿಯಿನೆಮ್ಮೊಳು ಮಾಳ್ಕೆ ನೈರ್ಮಲ್ಯಮಂ ॥ ೧ ॥

ಅಂತ್ಯ : ॥ ೪ ॥ ವ । ಆ ಸಮಯದೊಳು ದೂಳೀ ಸೆಜ್ಜರಕ್ಕುಜ್ಜುಗುಸಿ ಕಾಡಾನೆಗಳ ಕೋಡ ಮೊನೆಯನೀಡಿರಿವ ಗಿರಿಯ ದರಿಯ ಗೈರಿಕ ಪರಾಗಮಂ × × × ಕಾಡೆಂಮೆಯ ಮೊಗದಿನುಗುವ ನೊರೆಯನುರಿಗೊಂಡಡವಿಯ ಗಿಡು

ವಿಷಯ : ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆ.

ವಿಶೇಷ : ಅಸಮಗ್ರ. ೭ ಆಶ್ವಾಸಗಳು ಮತ್ತು ೮ ನೆಯ ಆಶ್ವಾಸದಲ್ಲಿ ನಾಲ್ಕು ಪದ್ಯ ಮತ್ತು ಸ್ವಲ್ಪ ವಚನವೂ ಇವೆ.

473

ಕೆ. ಬಿ. ೧೦೮ | ಚಂದ್ರಹಾಸ ಚರಿತ್ರೆ | ನಾಟಕ
೮" × ೬.೪" | ಸೂಲಿಬೆಲೆ ರಾಮರಾಯ | ೧೯ ನೆಯ ಶತಕ
೧–೫೨ ಪತ್ರ | ೨೦ ಪಂಕ್ತಿ | ೨೦ ಅಕ್ಷರ

ಆದಿ : ಸೂತ್ರಧಾರ.
ವೃ ॥ ಆವಂ ಶ್ರೀಕುಚಯುಗ್ಮದೊಳ್ ಬರೆಯುವಂ ಪತ್ರಾಳಿಯಂ ಮತ್ತೆ ರಾ
ಜೀವೋದ್ಭೂತನ ಫಾಲದಲ್ಲಿ ಬರೆವಂ ಸತ್ಪುಣ್ಯ ವರ್ಣಾಳಿಯಂ
ಆವಂ ವಿಶ್ವಜನಿಸ್ಥಿತಿಕ್ಷಯುವ ಲೀಲಾಮಾತ್ರದಿಂ ಮಾಡುವಾ
ದೇವಂ ಪಾಲಿಸಲಂಬುಜಾಕ್ಷನನಿಶಂ ಶ್ರೀಚಾಮರಾಜೇಂದ್ರನಂ ॥

ರಾಗ ॥ ಪರಿಪಾಲಿಸೋ ಶ್ರೀಕರನೆ ಧೀರನೆ ॥ ಪ ॥
ತರವೆ ಮರವೆ ಪಾವನ ರಾಮ ॥ ಅ ॥
ಭಾನುವಂಶದೀಪ
ಮಾನವಭೂಪ
ದೀನಪಾಲನೇ ನತ ಕಾಮ
ದೇನುವೆ ರಾಮ ॥ ೧ ॥

ನಾರದಾದಿ ಯೋಗಿ
ವಾರನತಾಂಘ್ರಿ
ಸಾರ ಸಾಂಭೋದರ ನುತ
ಚಾರುಶರೀರ ॥ ೨ ॥

ಭೂಮಿಜಾತಾಧವ
ಕಾಮಿತದಾಭವ
ಶ್ರೀಮಂತನಾಗಿಹ
ಚಾಮಭೂಪನ ॥ ೩ ॥

ಇದೊ ನನ್ನ ಸ್ನೇಹಿತನಾದ ರಂಗನು ಸಭಿಕರ ಆಜ್ಞೆಯನ್ನು ನನಗೆ ತಿಳಿಸುವದಕ್ಕಾಗಿ ಎದುರಾಗಿಯೇ ಬರುತ್ತಿರುವನು.

ಅಂತ್ಯ : ಸೂತ್ರಧಾರ ॥ ಕಂ ॥ ಶಿವಮಂ ಜಗಮಾನುಗೆ ಮಾ
ಧವ ಭಕ್ತಿಯು ಮಾನವರ್ಗೆ ಪುಟ್ಟಲಿ ಸತತಂ
ಬುವಿಯೊಡೆಯರ ಕಾರುಣ್ಯದ
ಕವಿಗಳ್ ಶ್ರೀಮಂತರಾಗಿ ಮಾಡಲಿ ಕೃತಿಯು

ರಾಗ॥ ಶ್ರೀನಾಥಕೆ ಮಂಗಳಂ ಮಾನಿತ ಮಾನಸ ॥ ಪ ॥
ಪಂಕಜ ಸಂಭವ । ಶಂಕರ ನಿರ್ಜರ
ರಂಕರ ಪಾಲಿಪ । ಶಂಕರಧೀರ ॥ ೧ ॥

ಚಾಮನೃಪಾಲಕ । ಕಾಮಿತದಾಯಕ
ತಾಮರಸಾಂಬಕ । ಸಾಮಜಪಾಲಕ ॥ ೨ ॥
ಪಂಚಮಾಂಕಂ ಸಂಪೂರ್ಣಂ ॥

ವಿಷಯ : ಚಂದ್ರಹಾಸನ ಕಥೆ.

ವಿಶೇಷ : ಶುದ್ಧಪ್ರತಿ. ಸಮಗ್ರವಾಗಿದೆ.

474

ಕೆ. ಎ. ೩೪೭/೩ | **ಚಂದ್ರಹಾಸನ ಕಥೆ** | ಸಾಂಗತ್ಯ
೧೩.೯" × ೮" | ಹೆಳವನಕಟ್ಟೆ ಗಿರಿಯಮ್ಮ | ಸು. ೧೭೫೦
೧-೧೦೭ ಪತ್ರ | ೧೪ ಪಂಕ್ತಿ | ೧೩ ಅಕ್ಷರ

ಆದಿ: ಹೆಳವನಕಟ್ಟೆ ಗಿರಿಯಂಮನವರು ವಿರಚಿಸಿದ ಚಂದ್ರಹಾಸನ ಕಥೆ ಬರಿಯುವುದಕ್ಕೆ ಶುಭಮಸ್ತು ಪದನು ರಾಗಾ। ತಂಮಿಚ್ಛೆ–ಸಾಂಗತ್ಯ—

ಶ್ರೀವನುತೆಯ ಮನೋಹಾರ ಸುಜನ
ಮಂದಾರ ತ್ರೈಭುವನೋದ್ಧಾರಾ ಕಾರುಣಾನಿಧಿ ಹೆ
ಳವನಕಟ್ಟಿ ರಂಗಯ್ಯ ನಾರಾಯಣ ಶರಣೆಂಬೆ ॥೧॥

× × × ×

ಸುರಪುರವಾಸ ಲಕ್ಷ್ಮಿಯ ಕಾಂತ ಭಕ್ತರ್ಗೆ
ವರದಂಥ ಜಯಮುನಿಯೊಳಗೇ
ಪರಮಭಕ್ತ ಚಂದ್ರಹಾಸನ ಕಥೆಯನೂ
ಚರಿತೆಯ ಮಾಡಿ ವರ್ಣಿಸೂವೇ ॥೭॥

ಅಂತ್ಯ: ಅರಿಯೇನು ಕಲಿತೆ ಚಾತುರ್ಯದ ಮಹಿಮೆಯ
ಗುರುಮುಖದಲಿ ಹೇಳಲಿಲ್ಲಾ
ಪರಮದಯಾಳು ಹೈಳವನಕಟ್ಟೆರಂಗಯ್ಯ
ಯಂಮಾ ನೀ ಸಲಹೊ ಅನುದಿನವೂ ॥೧೩೧॥

ಅಂತು ಸಂಧಿ ೪ ಕ್ಕಂ ಪದನು ೩೫೫ ಕ್ಕಂ ಮಂಗಳ ಮಹಾ ಶ್ರೀಮನ್ನೃಪ ಶಾಲಿವಾಹನ ಶಕೆ ೧೭೪೧ ನೆ ಪ್ರತನಾಮಕ್ಕೆ ಸಲ್ಲುವ ಶುಕ್ಲಸಂವತ್ಸರದ ಭಾದ್ರಪದ ಕೃಷ್ಣಪಕ್ಷ ೧೩ ಲ್ಲು ಮಂಗಳವಾರದಲ್ಲೂ ತಾಸು ೫ ಕ್ಕೆ ಮಲೆಬೆಂನೂರಲ್ಲು ಮುಗದ್ದು ಚಂದ್ರಹಾಸನ ಕಥಾಸಂಗ್ರಹ ॥

ವಿಷಯ: ಚಂದ್ರಹಾಸನ ಚರಿತ್ರೆ.

ವಿಶೇಷ: ಗ್ರಂಥದ ಮೊದಲಲ್ಲಿ ವಿಷಯಸೂಚಿಯಿರುವ ಬೇರೊಂದು ಪತ್ರವಿದೆ. ಪತ್ರಗಳ ಒಂದು ಕಡೆಯಲ್ಲಿ ಮಾತ್ರ ಬರೆದಿದೆ. ಇವರೊಂದಿಗೆ ಸೀತಾಕಲ್ಯಾಣ, ಕೃಷ್ಣ ಪಾರಿಜಾತ, ವಿನಾಯಕಾಷ್ಟಕ, ಶಂಕರವಿಜಯ ಸಂಗ್ರಹ I, II, III ನೆಯ ಭಾಗಗಳೂ ಇವೆ.

475

ಕೆ.ಬಿ. ೧೬೩	**ಚಂದ್ರಹಾಸನ ಕಥೆ**	ಯಕ್ಷಗಾನ
೭.೭" × ೬.೧"	ನಂಜುಂಡ	೧೮೮೭
೧–೫೬ ಪತ್ರ	೧೧ ಪಂಕ್ತಿ	೧೮ ಅಕ್ಷರ

ಆದಿ : ಚಂದ್ರಹಾಸನ ಕಥೆ ಬರೆಯುವರೆ ಶುಭಮಸ್ತು ॥ ಶ್ರೀ ॥ ನಾಂದಿ ವೃತ್ತ ॥

ಶ್ರೀ ಕಾತ್ಯಾಯಿನಿ ಚಿತ್ತಪದ್ಮಮಿಹಿರಂ ಕಾರುಣ್ಯರತ್ನಾಕರಂ
ಶ್ರೀ ಕಾಮೇಶ ಮಹೀಂದ್ರ ಭೂಷಣಧರಂ ನೇತ್ರೋತ್ಥ ವೈಶ್ವಾನರಂ
ನಾಕಾಧೀಶ ವಿಪಕ್ಷದಾನವಹರಂ ಗಂಗಾಧರಂ ಸುಂದರಂ
ಲೋಕಾಭೀಷ್ಟ ಫಲಪ್ರದಂ ಹೃದಿ ಸದಾ ಶ್ರೀಮಂಜುನಾಥಂ ಭಜೇ ॥೧॥

ಅಂಬ ಮಾಂ ಪಾಹಿ
ಜಗದಂಬ ಮಾಂ ಪಾಹಿ
ಕಂಬು ಕಂದರಿ ಭ್ರಮರಾಂಬ ಮಾಂ ಪಾಹಿ ॥ ಪ ॥
ಕರುಣಾಪೂರೆ ಶರಣೋದ್ಧಾರೆ
ದುರಿತವಿದಾರೆ ಪುರಹರದಾರೆ ॥ ೨ ॥

ಅಂತ್ಯ : ಅಂಜಪಾಂಗನಿಗೆ ನಿರಂಜನಾತ್ಮನಿಗೆ
ನಂಜುಂಡವನಿಗೆ ಶ್ರೀ ಮಂಜುನಾಥನಿಗೆ ॥ ૩೭೯ ॥

ಕಂದ ॥ ಕಲಿವತ್ಸರ ನಾಲ್ಸಾಸಿರ
ಗಳು ನವಾಷ್ಟ ಸಪ್ತ ಸರ್ವಜಿತುವಾಶ್ವಯುಜಂ
ಬಿಳಿ ಸಪ್ತಮಿ ಕವಿದಿನದಿನೆ
ಗಳಿದಂ ನಂಜುಂಡ ಚಂದ್ರಹಾಸನ ಕಥೆಯಂ ॥ ೩೮೦ ॥

ಶ್ರೀ ಗುರುವೇ ಗತಿ ಚಂದ್ರಹಾಸನ ಕಥಾ ಸಂಪೂರ್ನ ಮಂಗಳ ಮಹಾಶ್ರೀ ॥

ವಿಷಯ : ಚಂದ್ರಹಾಸನ ಚರಿತ್ರೆ.

ವಿಶೇಷ : ಗ್ರಂಥ ಸಮಾಪ್ತಿಕಾಲ ೨೩–೯–೧೮೮೭ ನೆಯ ಆಶ್ವಯುಜ ಶುಕ್ಲ ಸಪ್ತಮಿಾ ಶುಕ್ರವಾರ.

476

ಕೆ.ಬಿ. ೨೯೨	ಚಂದ್ರಹಾಸನ ಕಥೆ	ಯಕ್ಷಗಾನ
೭.೬" × ೫.೮"	ನಂಜುಂಡ	೧೮೮೭
೧–೭೫ ಪತ್ರ	೧೨ ಪಂಕ್ತಿ	೧೨ ಅಕ್ಷರ

ಆದಿ : ಶುಭಮಸ್ತು ॥ ಚಂದ್ರಹಾಸನ ಕಥೆ ॥ ನಾಂದಿ ॥ ಕಂದ ॥
ಶ್ರೀ ಮಾಮುಗ್ಧ ಕುಚದ್ವಯ
ಸೀಮಾ ಸಂನ್ಯಸ್ತಘುಸೃಣ ಶೀತಲ ಹೃದಯಾ
ವ್ಯಾಮೋಹಕ ಕೌಸ್ತುಭಮಣಿ
ಧಾಮಂ ಪಾಲಿಸಲಿ ವೇಂಕಟೇಶಂ ಸತತಂ ॥ ೧॥

ನಾಟಿ ॥ ಆ ॥
ಜಯ ಮಾರ ಜನಕನೆ
ಜಯ ಮಾ ರಮಣನೆ ॥ ಪಲ್ಲವಿ ॥
ಜಯತು ನೀರಜನೇತ್ರ
ಜಯತು ನೀಲ ಸುಗಾತ್ರ
ಜಯತು ಕೃತ ನುತಿಪಾತ್ರ
ಜಯತು ಹರಮಿತ್ರಾ ॥ ೨ ॥

ಅಂತ್ಯ : ಅಂಜಿಪಾಂಗನಿಗೆ ನಿರಂಜರಾತ್ಮನಿಗೆ
ನಂಜುಂಡವನಿಗೆ ಶ್ರೀ ಮಂಜುನಾಥಗೆ ॥ ૩೮೪ ॥
ಕಂದ ॥ ಕಲಿವತ್ಸರ ನಾಲ್ಸಾಸಿರ
ಗಳು ನವಾಷ್ಟಸಪ್ತ ಸರ್ವಜಿತುವಾಸ್ವಯುಜಂ
ಬಿಳಿ ಸಪ್ತಮಿ ಕವಿದಿನದಿ ನೆ
ಗಳಿದಂ ನಂಜುಂಡ ಚಂದ್ರಹಾಸನ ಕಥೆಯಂ ॥ ૩೮೫ ॥
ಅಂತು ಚಂದ್ರಹಾಸನ ಕಥಾ ಸಂಪೂರ್ಣಂ ॥ ಶ್ರೀ ॥

ವಿಷಯ : ಚಂದ್ರಹಾಸನ ಚರಿತ್ರೆ.

ವಿಶೇಷ : ಗ್ರಂಥ ಸಮಾಪ್ತಿ ಕಾಲ ೨೩–೯–೧೮೮೭ ನೆಯ ಆಶ್ವಯುಜ ಶುಕ್ಲ ಸಪ್ತಮಿ ಶುಕ್ರವಾರ.

477

ಕೆ.ಬಿ. ೧೧೬ | ಚಂದ್ರಾವಳೀ ಕಥೆ | ಯಕ್ಷಗಾನ
೭.೬" × ೬.೨" | ಲಿಂಗರಾಜ | ೧೮೫೦
೧–೩೫ ಪತ್ರ | ೧೭ ಪಂಕ್ತಿ | ೨೦ ಅಕ್ಷರ

ಆದಿ : ಚಂದ್ರಾವಳೀಚರಿತ್ರೆ
ಶ್ರೀ ಕಾಳೀಪ್ರಿಯಮಂದಿರಂ ನತಜನಾನಂದಾಬ್ಧಿ ಚಂದ್ರೋಪಮಂ
ನಾಕೇಶಾಚ್ಯುತ ಪಂಕಜಾತಭವ ದೇವವ್ರಾತ ಸಂಭಾವನಂ
ಆಕಲ್ಪಾಂತ ಮಹಾ ಭಯಂಕರತರಾಕಾರೈಕ ಚಿದ್ರೂಪನೆ
ನೀ ಕಾಪಾಡು ಸುಖಂಗಳಂ ಕೊಡುತೆ ಭಕ್ತವ್ರಾತಮಂ ಸಾರ್ವದಾ ॥ ೧ ॥

ರಾಗ ॥ ಜಯಜಯ ಪಾರ್ವತಿರಮಣ
ಜಯಜಯ ಭಕ್ತಾಭರಣ
ಜಯಜಯ ಮುನಿಜನ ಶರಣ
ಜಯಜಯವಿಪದುದ್ಧರಣ ॥ ೨ ॥

ಅಂತ್ಯ : ಲಿಂಗಜ ಭಂಗಗೆ। ಮಂಗಳಾಂತರಂಗಗೆ
ಲಿಂಗೇಂದ್ರ ಸಂಗಗೆ। ತುಂಗಮಹಲಿಂಗಗೆ ॥ ೩೮೦ ॥
ಕಂದ ಪದ್ಯ ॥ ರುತು ರಸ ರಂಧ್ರಾಂಬುಧಿ ಪರಿ
ಮಿತ ಕಲಿವತ್ಸರಂಗಳಳಿಯೊಳ್ ಕಳೆಯಲ್
ನುತ ಲಿಂಗರಾಜನುಸುರ್ದಂ
ಸತಿ ಚಂದ್ರಾವಳಿ ಕಥೆಯ ಸಂತಸದಿಂದಂ ॥ ೩೮೦ ॥
ಸಂಪೂರ್ಣಂ

ವಿಷಯ : ಲಕ್ಷ್ಮೀವರನು ಚಂದ್ರಾವಳಿಯನ್ನು ಮೋಹಿಸಿ ವರಿಸಿದ ಕಥೆ.

ವಿಶೇಷ : ಅಕ್ಷರ ಸ್ಫುಟವಾಗಿವೆ.

478

ಕೆ.ಎ. ೩೨೪ | ಚಂದ್ರಾವಳೀ ಕಥೆ | ಯಕ್ಷಗಾನ
೧೧" × ೮.೫" | ಲಿಂಗರಾಜ | ೧೮೫೦
೬೫ ಪತ್ರ | ೮ ಪಂಕ್ತಿ | ೨೫ ಅಕ್ಷರ

ಆದಿ : ಶ್ರೀ ವೀರೇಶ ಪ್ರಸೀದ ॥ ಶ್ರೀ ಗುರುಬಸವಲಿಂಗಾಯ ನಮಃ ॥ ಶ್ರೀಹರಿ ವಂಶದಲ್ಲಿ ಚದ್ರಾವಳೀ ನಾಟಕ ಬರೆಯುವದಕ್ಕೆ ಶುಭಮಕ್ಕೆ ॥

ನಾಂದಿ ॥ ಕಂದ ॥ ನಿರ್ವಿಘ್ನಮಸ್ತು ॥
ಶ್ರೀ ಹಿಮಶಿಖರಿ ಕುಮಾರೀ
ದೇಹಲತಾ ವಲಯಿತಾಂಗ ನಿರ್ಜರಭೂಜಂ
ಮೋಹಿತ ಭಕ್ತ ಸಮಾಜಂ
ಶ್ರೀಹಿತನುತನೆಂಮ ಪೊರೆಗೆ ಕಾಳೀನಾಥಂ ॥ ೧ ॥

× × × ×

ಕಂದ ॥ ವರ ಭಾಗವತದಿ ಲಕ್ಷ್ಮೀ
ವರನತಿ ಮೋಹದೊಳು ತರುಣಿ ಚಂದ್ರಾವಳಿಯಂ
ಮರುಳಾಗಿಸಿ ನೆರೆದನುವಂ
ವಿರಚಿಸುವೆನು ಯಕ್ಷಗಾನದೊಳ್ನುಡಿಯಿಂದಂ ॥ ೧೨ ॥

ಅಂತ್ಯ । ವಾರ್ಧಕ ॥ ಪರಿಪರಿಯ ಲೀಲೆಯಂ ಸೆಸಗುತ್ತ ಜನನಿ ಜನ
ಕರ ಮನಕೆ ಸಂತಸವ ಪಸರಿಸುತ ಭೂತರುಣಿ
ಗಿರುವ ಭಾರವ ಕಳೆಯಲಾಲೋಚಿಸುತ್ತ ನರ ನಾಟಕವ ತಾ ನಟಿಸುತ
ಶರಣಾಗತ ತ್ರಾಣದೀಕ್ಷೆಯಿಂ ಕೈಗೊಳುತ
ಪರಮ ಸಂತೋಷದಿಂ ಹರಿಯಿರ್ದನೆಂದು ಚಂ
ದಿರ ಕುಲೋದ್ಭವ ಪರೀಕ್ಷಿತನೃಪಗೆ ಶುಕಯೋಗಿ ಹರಿಕಥೆ ಯನುಸುರುತಿರ್ದಂ ॥ ೩೭೭ ॥

× × × ×

ಕಂ ॥ ರುತು ರಸ ರಂಧ್ರಾಂಬುಧಿ ಪರಿ
ಮಿತ ಕಲಿ ಸಂವತ್ಸರಂಗಳಿಳೆಯೊಳ್ಕಳಿಯ
ಲ್ನುತ ಲಿಂಗರಾಜನುಸುರ್ದಂ
ಸತಿ ಚಂದ್ರಾವಳಿಯ ಕಥೆಯ ಸಂತಸದಿಂದಂ ॥ ೩೮೧ ॥

ವಿಷಯ : ಲಕ್ಷ್ಮೀವರನು ಚಂದ್ರಾವಳಿಯನ್ನು ಮೋಹಿಸಿ ವರಿಸಿದ ಕಥೆ.

ವಿಶೇಷ : ಬರಹವು ಸುಂದರವಾಗಿದೆ. ಆಯಾ ಸಂದರ್ಭಗಳನ್ನು ಚಿತ್ರಗಳ ಮೂಲಕ ವಿವರಿಸಲು ಅಲ್ಲಲ್ಲಿ ಜಾಗಗಳನ್ನು ಬಿಟ್ಟಿದೆ. ಮೊದಲು ೧೩ ಚಿತ್ರಗಳನ್ನು ಸೀಸದ ಕಡ್ಡಿಯಲ್ಲಿ ಬರೆದಿದೆ. ಕ್ರಮಾಂಕವಿಲ್ಲ.

479

ಕೆ. ಬಿ. ೩೫೯	**ಚಂದ್ರಾವಳೀ ಕಥೆ**	ಯಕ್ಷಗಾನ
೭.೮" × ೬.೧"	ಲಿಂಗರಾಜ	೧೮೫೦
೧–೨೬ ಪತ್ರ	೨೨ ಪಂಕ್ತಿ	೨೨ ಅಕ್ಷರ

ಆದಿ: ಭಾಗವತದೊಳಗಣಾ ಚಂದ್ರಾವಳೀಕಥೆ ಬರೆಯುವದಕ್ಕೆ ಶುಭಮಸ್ತು ॥
ನಾಂದೀ.
ಶ್ರೀ ಹಿಮಗಿರಿ ಕುಮಾರೀ
ದೇಹಲತಾವಲಯಿತಾಂನ್ನ ನಿರ್ಜರಭೂಜಂ
ಮೋಹಿತ ಭಕ್ತ ಸಮಾಜಂ
ಸ್ರೀಹಿತನುತನೆಂಮ ಪೊರೆಗೆ ಕಾಳೀನಾತ್ತಂ ॥ ೧ ॥

ಅಂತ್ಯ: ಕಂದಾ ॥ ರುತು ರಸ ರಂದ್ರಾಂಭುಧಿ ಪರಿ
ಮಿತ ಕಲಿ ಸಂವತ್ಸರಂಗಳಿಳೆಯೊಳ್ಕಳಿಯಲ್
ನುತ ಲಿಂಗರಾಜನುಸುರ್ದಂ
ಸತಿ ಚಂದ್ರಾವಳಿಯ ಸಂತಸದಿಂದಂ ॥ ೩೮೦ ॥
ಚಂದ್ರಾವಳೀಕಥೆ ಸಂಪೂರ್ನ ಮಂಗಳ ಮಹಾಶ್ರೀ ॥

ವಿಷಯ: ಚಂದ್ರಾವಳಿಯ ಕಥೆ.

ವಿಶೇಷ: ೨೬ನೆ ಪತ್ರದ ಕೊನೆಯಲ್ಲಿ ಪ್ರತ್ಯೇಕವಾಗಿ ಕೆಲವು ಹಾಡುಗಳನ್ನು ಬರೆದಿದೆ. ಗ್ರಂಥದ ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ.

480

ಕೆ. ಬಿ. ೪೮೯	**ಚಂದ್ರಾವಳೀಕಥೆ**	ಯಕ್ಷಗಾನ
೭.೮" × ೬ ೩"	ಲಿಂಗರಾಜ	೧೮೫೦
೧–೪೩ ಪತ್ರ	೧೭ ಪಂಕ್ತಿ	೧೬ ಅಕ್ಷರ

ಆದಿ: ಚಂದ್ರಾವಳಿ ಕಥೆ ಬರಿಯುವದಕ್ಕೆ ಶುಭಮಸ್ತು ॥ ನಾಂದಿ॥
ಕಂದ ॥ ಶ್ರೀ ಹಿಮಶಿಖರಿ ಕುಮಾರೀ
ದೇಹಲತಾ ಪಲಹಿತಾಂಗ ನಿರ್ಝರಭೂಜಂ
ಮೋಹಿತ ಭಕ್ತ ಸಮಾಜಂ
ಶ್ರೀಹಿತನೆಂಮ ಪೊರೆಗೆ ಕಾಳೀನಾಥಂ ॥ ೧ ॥
× × × ×

ಕಂದ ॥ ವರ ಭಾಗವತದಿ ಲಕ್ಷ್ಮೀ
ವರನತಿ ಮೋಹದೊಳು ತರುಣಿ ಚಂದ್ರಾವಳಿಯು
ಮರುಳಾಗಿಸಿ ನೆರೆದನುವಂ
ವಿರಚಿಸುವೆನು ಯಕ್ಷಗಾನದೊಳ್ನುಡಿಯಿಂದಂ ॥ ೧೨ ॥

ಅಂತ್ಯ : ವಾರ್ಧಖ ॥ ಪರಿಪರಿಯ ಲೀಲೆಯಿಂನೆಸಗುತ್ತ ಜನಸಿಜನ
ಕರ ಮನಕೆ ಸಂತಸವ ಪಸರಿಸುತ ಭೂತರುಣಿ
ಗಿರುವ ಭಾರವ ಕಳೆಯಲಾಲೋಚಿಸುತ್ತ ನರನಾಟಕವ ತಾ ನಟಿಸುತ
ಶರಣಾಗತ ತ್ರಾಣ ದೀಕ್ಷೆಯಂ ಕೈಗೊಳುತ
ಪರಮ ಸಂತೋಷದಿಂ ಹರಿಯಿರ್ದನೆಂದು ಚಂ
ದಿರಕುಲೋದ್ಭವ ಪರೀಕ್ಷಿತನೃಪಗೆ ಶುಕಯೋಗಿ ಹರಿಕಥೆಯ ನುಸುರುತಿರ್ದಂ ॥ ೩೭೬ ॥

× × × ×

ಅಂಗಜಭಂಗಗೆ ಮಂಗಳಾಂತರಂಗಗೆ
ಲಿಂಗೇಂದ್ರಸಂಗಗೆ ತುಂಗಮಹಾಲಿಂಗಗೆ ॥ ೩೭೯ ॥

ಕಂಡ ॥ ಋತು ರಸ ರಧ್ರಾಂಬುಧಿ ಪರಿ
ಮಿತ ಕಲಿ ಸಂವತ್ಸರಂಗಳಿಳಿಯೊಳ್ ಕಳಿಯಲ್
ನುತ ಲಿಂಗರಾಜನುಸುರ್ದ
ಸತಿ ಚಂದ್ರಾವಳಿಯು ಕಥೆಯು ಸಂತಸದಿಂದಂ ॥ ೩೮೦ ॥ ಶ್ರೀ

೨೫-೧೨-೮೫ ಚಲುವೈಯ್ಯ ॥

ವಿಷಯ : ಚಂದ್ರಾವಳಿಯ ಕಥೆ.

ವಿಶೇಷ : ಸುದೃಢ ಪ್ರತಿ, ಸ್ಫುಟಾಕ್ಷರ. ಅಂತ್ಯದಲ್ಲಿ ೯ ಶುದ್ಧ ಪತ್ರಗಳಿವೆ.

481

ಕೆ.ಬಿ. ೩೫೫/೧	**ಚಂದ್ರಾವಳೀ ಕಥೆ**	ಯಕ್ಷಗಾನ
೮.೩" × ೬.೫"	?	?
೧–೪೫ ಪತ್ರ	೧೫ ಪಂಕ್ತಿ	೨೨ ಅಕ್ಷರ

ಆದಿ : ಭಾಗವತದೊಳಗಣಾ ಚಂದ್ರಾವಳೀಕಥೆ ಬರೆಯುುವದಕ್ಕೆ ಶುಭಮಸ್ತು ॥

ಶ್ರೀ ಮಂನ್ಮಾರುತಾನಂದನಾರ್ಚಿತ ಪದಂಶಾಂತಂ ರಮಾವಲ್ಲಭಂ
ಸೋಮಾದಿತ್ಯ ಸಹಸ್ರಕಾಂತೀಸದ್ರುಷಂ ಸುಗ್ನ್ಯಾನದೇವಂ ಹರಿಂ
ಕಾಮಾರಾತಿಸಖಂ ಕರೀಂದ್ರವರದಂ ಶ್ರೀಕೃಷ್ಣದೇವಂ ಭಜೇ ॥
ಲಲನೆಯರ ಕುಲದೊಳಗೆ ತಾನತಿ
ಚೆಲುವೆ ಸೂಪ್ರತೆಯುಂಬ ಗರ್ವ
ದೊಳಿರುವ ಚೆಂದ್ರಾವಳಿಯು ಭೋಗಿಸಿದೊಲವ ಪೇಳ್ವೆ ॥ ೪ ॥
ಯೆನುತ ವಂದಿಸುತಿರುವ ನ್ರುಪತಿಯಾ
ಮನದ ಯಿಚ್ಚೆಯು ಸಾರ ತಿಳಿಉತ
ವನಜನಾಭನ ಚೆರಿತೆ ಸುಥೆಯನು ಮನದೊಳಂದೂ ॥ ೫ ॥

ಅಂತ್ಯ : ಶಶಿಕುಲೋದ್ಭವ ವರಪರೀಕ್ಷಿತ
ವಸುಮತೀಶಗೆ ಶುಕಮುನೀಂದ್ರನೂ
ಕುಶಲದಿಂ ಭಾಗವಥ ಕಥನವನುಸುರುತಿರಲೂ ॥ ೧ ॥
ಪೇಳಲದ ಕೇಳುತ್ತಲಾ ಭೂ
ಪಾಲ ತೋಷವ ತಾಳಿ ಲಕ್ಷ್ಮೀ
ಲೋಲನನು ಸ್ಮರಿಸುತ್ತಲೀರ್ದ ಯಾ ಲೀಲೆ ಕಥೆಯಾ ॥ ೨ ॥
ಯಿದನು ಹೇಳುವ ಕೇಳುತಿಹ
ಸದುಹೃಥೆಯರಿಗೆ ನಿತ್ಯಾತ್ಮ ಯಿಹಪರ
ಕೊಡಗಿ ಕರುಣದೋಳೀವ ಸವುಖ್ಯದ ಪದವಿಗಳನೊ ॥ ೩ ॥

ವಿಷಯ : ಚಂದ್ರಾವಳಿಯು ಕಥೆ.

ವಿಶೇಷ : ೩, ೪, ೨೭ ಮತ್ತು ೨೯ನೆಯ ಪತ್ರಗಳಲ್ಲಿ ಒಂದೇ ಪಾರ್ಶ್ವದಲ್ಲಿ ಬರೆದಿದ್ದರೂ, ಗ್ರಂಥಲೋಪವಿಲ್ಲ. ಇದರೊಂದಿಗೆ ನಳಕೂಬರ ಮತ್ತು ಕೃಷ್ಣಾರ್ಜುನರ ಕಾಳಗ ಎಂಬ ಗ್ರಂಥಗಳೂ ಇವೆ. ಪತ್ರಗಳಿಗೆ ಕ್ರಮಾಂಕವಿಲ್ಲ.

482

ಕೆ. ಬಿ. ೨೯೯	ಚಂದ್ರಾವಳೀ ಪ್ರಸಂಗ	ಯಕ್ಷಗಾನ
೮" × ೬.೫"	ಕಾರ್ಕಳ ರಂಗದಾಸ	೧೯ನೆಯ ಶತಕ
೧–೧೭ ಪತ್ರ	೨೮ ಪಂಕ್ತಿ	೩೦ ಅಕ್ಷರ

ಆದಿ : ಚಂದ್ರಾವಳಿ ಪ್ರಸಂಗ ಶ್ರೀ × × ×

ರಾಗ ॥ ಶಾರ್ದೂಲವಿಕ್ರೀಡಿತ ವೃತ್ತ—

ಶ್ರೀಮದ್ಬ್ರಹ್ಮ ಮುಖಾಮರಾರ್ಚಿತಪದಂ ಸುಜ್ಞಾನ ಕಲ್ಪದ್ರುಮಂ
ಸೋಮಾದಿತ್ಯ ಸಹಸ್ರತೇಜಸದೃಶಂ ಸ್ವಾನಂದಭಾಗ್ಯೋದಯಂ
ಭೀಮಂ ಸತ್ಯಸಮಾನ ಶೌರ್ಯಮುದಿತಂ ತ್ರೈಲೋಕ್ಯರಕ್ಷಾಮಣಿಂ
ಹೇಮಾಲಂಕೃತ ಶೋಭಿತಂ ಗುಣಯುತಂ ಶ್ರೀವೆಂಕಟೇಶಂ ಭಜೇ ॥ ೧ ॥

ಅಂತ್ಯ : ನಿಗಮವೈದಂತ ಶ್ರೀಮತ್ಸಗೆ ಮಂಗಳಂ
ನಗವ ಪೊತ್ತಿಹ ಕೂರ್ಮಗೆ ಮಂಗಳಂ
ಜನದೊಳು ಧರಣಿಯ ತಂದಗೆ ಮಂಗಳಂ ಜಯ ಮಂಗಳಂ
ಮೃಗದ ಶರೀರಗೆ ಮಂಗಳಂ
ಪೊಡವಿಯನೀರಡಿಗೈದಗೆ ಮಂಗಳಂ
ಬಿಡದೆ ಕ್ಷತ್ರಿಯರ ಕೊಂದಗೆ ಮಂಗಳಂ
ತುಡುಕಿ ದಶಶಿರನ ತರಿದಗೆ ಮಂಗಳಂ ಜಯ ಮಂಗಳಂ ॥
ಹುರುಡು ಗೋವಾಳಸಿಗೆ ಮಂಗಳಂ
ಪತಿವ್ರತಯರ ವ್ರತವಳಿದಗೆ ಮಂಗಳಂ
ಮತಿಯುತನಾದ ಕಲ್ಕ್ಯಗೆ ಮಂಗಳಂ
ಕ್ಷಿತಿಯೊಳು ಕಾರ್ಕಳದೊಳು ನೆಲಸಿಹ
ಪತಿ ರಂಗದಾಮನಿಗೆ ಮಂಗಳಂ ॥ ೪೨೬ ॥

ವಿಷಯ : ಚಂದ್ರಾವಳಿಯ ಕಥೆ.

ವಿಶೇಷ : ಮೋಡಿ ಲಿಪಿ.

483

ಕೆ. ೩೩೯	**ಚನ್ನಬಸವಣ್ಣನ ಕಾಲಜ್ಞಾನ**	ವಚನ, ದ್ವಿಪದಿ
೧೦.೫″×೧.೨″	ಚನ್ನಬಸವಣ್ಣ	೧೧೬೦
೧–೩೦ ಪತ್ರ	■ ಪಂಕ್ತಿ	೪೨ ಅಕ್ಷರ

ಆದಿ : ಶ್ರೀ × × × ಯಿಶ್ವರ ಸಂವತ್ಸರದ ಕಾರ್ತಿಕ ಶುದ್ಧ ೪ ಯಲ್ಲು ಚಂನ್ನಬಸಪ್ಪನವರ ಕಾಲಗ್ನಾನ ಬರೆಯುವದಕ್ಕೆ ಶುಭಮಸ್ತು ॥

ಸ್ವಸ್ತಿಶ್ರೀ ಸಮಸ್ತ ನಂದಿನಾತಜೇವರು ಭೃಂಗಿನಾತ ದೇವರೂ ಶ್ರೀ ವೀರ ಬದ್ರದೇವರೂ ಮುಕ್ಯವಾಥ ಕಲ್ಯಾಣದ ಮಾಹಾತ್ಮೆಯೇನೆಂದಡೆ ವಿಸ್ತರಿಶಿ

ಪೇಳುವೆನೂ ಯಲ್ಲಾ ಗಣಂಗಳೂ ಕೇಳಿ ಕೃತಾರ್ತರಾಗಿರೈಯ × × × ಅಂತಪ್ಪ ರುದ್ರಲೋಕದವನೂ ಮರ್ತಲೋಕದಿಂದಿಳೂಹಿ ತಂದೂ ಕಲ್ಯಾಣ ವೆಂದೂ ರಚಿಶಿದಾತಾ ಬಸವಂಣನೂ ಅಂತಪ್ಪ ಕಲ್ಯಾಣ ಮಹಾತ್ಮೆ ವಿಸ್ತೀರ್ನಾ ವೆಂತೆಂದಡೆ ದೆಶೆದೆಶೆಗೆ ೧೨ ಯೋಜನ ಪರಿಪ್ರಮಾಣ ಬಳಶಿಥ ಕೋಟೆ ೪೮ ಯೋಜನಾ ಪರಿಪ್ರಮಾಣ ೩೦೦೬೦ತ್ತು ಬಾಗಿಲೂ ೭೦೦ ಗುರು ೭೦ ಪತ್ತು ದಿಡ್ಡಿ ೯೦೦ನೂರು ಚೋರಗಂಡಿ ಲಕ್ಷದ ಮೇಲೆ ೯೬ ಶಿವಾಲಯಾ ಯಲ್ಲಾ ದೇವರಿಗೆ ಮುಕ್ಯವಾದ ದೇವರೂ ತ್ರಿಪೂರಾಂತಕದೇವರೂ ಆ ದೇವ ರಿಗೆ ತ್ರಿವಿದ ಪದಾರ್ತ ೧೨ಸಾವಿರಾ ಆ ಪಟ್ಟಣಕ್ಕೆ ರಾಜಾದಿರಾಜರೂ ಬಿಜ್ಜಳ ರಾಯಾ ॥

ಅಂತ್ಯ : ಸದ್ಯ ಸಮೆಯಕೆ ವ್ಯಾಖ್ಯವಾಯಿತ್ತು ಸಮೆಯಕೆಲ್ಲಾ ಶರಣಾರ್ತಿ
ಯಂದು ಯದ್ದು ಯರಗಿದ ಚಂನಬಸವನೂ ಅಲ್ಲಿದ್ದ ಗಣಸಬೆಗೆ ॥ ೨೪ ॥
ವಚನ ॥ ಹೀಗೆಂದು ಚಂನಬಸವಂಣನವರೂ ಶಿದ್ದರಾಮೈಯ ರುದ್ರಾಮುನಿ ಸ್ವಾಮಿಗಳ ಕೂಡೆ ಪೇಳಿ ಯೇನೆಂನೂತಿದರ್ಾರೂ
ದ್ವಿಪದೆ ॥ ಶ್ರೀ ಬಶಿತ ರುದ್ರಾಕ್ಷೆ ಶಿವಪೂಜೆ ಹಾಥಿ
ಶಿವಷಡಾಕ್ಷರಿಯ ಮಂತ್ರಾ ಶಿವ ಲಿಂಗಾಗ್ನ್ಯಾನಾ
ಶಿವಗಣಂಗಳ ಶೇವೆ ಆವ ಕಾಲದಲೀ ಶಿವತತ್ವ ಅನುಭವಾ
ಶಿವಗಣಂಗಳ ಗೋಷ ಯಿಂತ್ರಿ ಯಿವೂ ಚಂನಬಸವಂಣನವರು
ಪೇಳಿದರೂ ॥ ಸಂಪೂರ್ನ ಮಂಗಳ ಮಹಾ ಶ್ರೀ ॥ ಯಿಶ್ವರ
ಸಂವತ್ಸರದ ಮಾರ್ಗಶಿರ ಶುದ್ಧದಲ್ಲು ಸಂಪೂರ್ನ ಶ್ರೀ ॥

ವಿಷಯ : ದೇಶದಲ್ಲಿ ಮುಂದೆ ಶರಣರು ಹುಟ್ಟಿ ತೋರುವ ಕುರುಹುಗಳ ವಿವರ.

ವಿಶೇಷ : ಅಕ್ಷರಗಳು ವಿರಳವಾಗಿವೆ.

484

ಕೆ. ಬಿ. ೨೭೭	**ಚನ್ನಬಸವಣ್ಣನ ಕಾಲಜ್ಞಾನ**	ವಚನ, ದ್ವಿಪದಿ
೮.೧" × ೬.೫"	ಚನ್ನಬಸವಣ್ಣ	೧೧೬೦
೧–೧೨ ಪತ್ರ	೨೫ ಪಂಕ್ತಿ	೧೧ ಅಕ್ಷರ

ಆದಿ : ಚನ್ನಬಸವೇಶ್ವರ ಕಾಲಜ್ಞಾನ । ಸೂಚನೆ × × × ರಾಗ ॥ ಝಂಪೆ ॥

ಸಿದ್ಧರಾಮಯ್ಯಗಳೆ ರುದ್ರಮುನಿಸ್ವಾಮಿಗಳೆ
ಅಲ್ಲಿದ್ದ ಶರಣರು ಕೇಳಿ ಸಿದ್ಧಾಂತ ಧರೆಗೆ ॥ ೧ ॥

ಕಲಿಯೊಳಗೆ ನಡಿವಂತ ಕಾಲಸೂಚನೆ ಕುರುಹ
ನೆಲೆದೊರಿ ಪೊಗುವೆವೂ ಮಲಹರನ ದಯದೀ ॥ ೨ ॥

ಧರೆಯೊಳಗೆ ನಡೆವಂತ ಪರಿಪರಿಯ ಕುರುಹುಗಳ
ನರರು ನಖಮುಖದೊಳಗೆ ಕೊರಗಿ ಕೊರಗುವರೂ
ರುದ್ರಮುನಿಸ್ವಾಮಿಗಳೇ ಸಿದ್ಧರಾಮೈ ಕೇಳಿ ॥

ಅಂತ್ಯ : ವೀರವಸಂತರಾಯರಿಗೆ ಕಲ್ಯಾಣದಲ್ಲಿ ಪಟ್ಟಾಭಿಷೇಕವಾದೀತು. ಚಂನ ಬಸಪನವರಿಗೆ ಪ್ರದಾನಪಟ್ಟವಾದೀತು. ವಿರುಪಾಕ್ಷನ ಗೋಪುರಕ್ಕೆ ಕಳಸ ವಿಟ್ಟು ೩೨ ವರುಷಕ್ಕೆ ಪಟ್ಟ ನಿಜಾ ಯಿದಕ್ಕೆ ಕೂಡಲ ಸಂಗಮೇಶ್ವರ ಪ್ರಭೂ ರಾಯನ ಪಾದವೆ ಸಾಕ್ಷಿ ಆದಿ ಪುರಾತರ ಪಾದವೆ ಸಾಕ್ಷಿ ಕಪಿಲಶಿದ್ಧ ಮಲ್ಲಿಕಾರ್ಜುನನ ಶ್ರೀಪಾದವೆ ಸಾಕ್ಷಿ ಶ್ರೀ ಚಂನಬಸವೇಶ್ವರದೇವರ ಕಾಲ ಗ್ನಾನ ಸೂಚನೆ ಸಂಪೂರ್ನ ಮಂಗಳ ಮಹಾ ಜಯಮಂಗಳ ಶ್ರೀ ॥

ವಿಷಯ : ದೇಶದಲ್ಲಿ ಮುಂದೆ ಶರಣರು ಹುಟ್ಟಿ ತೋರುವ ಕುರುಹುಗಳ ವಿವರ.

ವಿಶೇಷ : ಮೋಡಿ ಅಕ್ಷರ.

485

ಕೆ. ಎ. ೯	**ಚೆನ್ನಬಸವ ಪುರಾಣ**	ವಾರ್ಧಕಷಟ್ಪದಿ
೧೨.೧" × ೮.೩"	ವಿರೂಪಾಕ್ಷ ಪಂಡಿತ	೧೫೮೫
೧–೫೩೯ ಪುಟ	೩೩ ಪಂಕ್ತಿ	೧೬ ಅಕ್ಷರ

ಆದಿ : ಚನ್ನಬಸವ ಪುರಾಣವು ವಾರ್ಧಕಷಟ್ಪದಿ ॥ ೧ ಸಂಧಿ
ಸೂಚನೆ ॥ ಪರಮಗುರು ಚನ್ನಬಸವಂ ಸಿದ್ಧರಾಮಂಗೆ
ಪರಮಶಿವತತ್ವಮಂ ತಿಳುಪಿ ದೀಕ್ಷೆಯನಿತ್ತ
ಪರಮ ಸತ್ಕಥೆಯಿದಂ ಸದ್ಭಕ್ತರೊಲವಿನಿಂ ಕೇಳ್ದು ಕೃತಕೃತ್ಯರಹರು ॥
ಪದ॥ ಶ್ರೀ ಪರಮ ಸದ್ಗುರು ಪರಂ ಪರಂಜ್ಯೋತಿ ಸ್ವ
ರೂಪನಾದ್ಯಂತರಹಿತಂ ನಿತ್ಯನದ್ವಯಂ
ಪಾಪರಹಿತಂ ಪರಬ್ರಹ್ಮ ಬ್ರಹ್ಮಜ್ಞಾನ ಬೋಧಾಸುಕರ್ತೃವೆಂದು

ಗೋಪ ವಾಹನರಾವಗಂ ಬಿಡದೆ ನಿಮ್ಮಯ
ಶ್ರೀಪಾದಪದ್ಮಂಗಳಂ ಭಜಿಸುತಿಹರೆನ್ನ
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಮ್ಮನಾಂ ಪೊಗಳ್ವೆನಳ್ಕರಿಂದಾ
॥ ೧ ॥

ಅಂತ್ಯ : ಇದು ಸಕಲ ವೀರಮಾಹೇಶ್ವರರ ಸದ್ವಿಮಲ
ಹೃದಯಾಬ್ಜ ಮಿತ್ರನುರುಪಟ್ಟಸ್ಥಲಬ್ರಹ್ಮವೆಂ
ಬುದಧಿವರ್ಧನ ಸೋಮನೆನಿಪ ಗುರುಸಿದ್ಧ ವೀರೇಶ್ವರನ ಕರಜಾತನು
ಸದಮಲಜ್ಞಾನಿ ಸಕಲಾಗಮ ಪುರಾಣ ಕೋ
ವಿದನಾ ವಿರೂಪಾಕ್ಷ ಪಂಡಿತಾರಾಧ್ಯನತಿ
ಮುದದೆ ಪೇಳ್ದೀ ಚನ್ನಬಸವ ಪೌರಾಣ ಸತ್ಕಥೆಯೊಳ್ಳೆದನೆಯ
ಖಾಂಡಂ ॥ ೭೮ ॥

ಇಂತೆಸವ ಚನ್ನಬಸವೇಶ್ವರ ಪುರಾಣಮಂ
ಸಂತಸದಿ ಬರೆದವರ್ಗೋದಿದರ್ಗರ್ಥವಾ
ದ್ಯಂತಮಂ ಬಿಡದೆ ಪೇಳ್ದರ್ಗೆ ಪಠಿಸಿದವರ್ಗೆ ಭಕ್ತಿಯಿಂ ಕೇಳ್ದವರ್ಗೆ
ಸಂತತಂ ಸಕಲಸುಖಮಂ ಸಕಲ ಭೋಗಮನ
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನ ಪರಾವರ್ತರನೆನಿಸುವ ಚನ್ನಬಸವೇಶ್ವರನಳ್ಕರಿಂದಂ
॥ ೭೯ ॥

ಅಂತು ಸಂಧಿ ೬೩ ಕ್ಕಂ ಪದ ೩೮೫೮ ಕ್ಕಂ ಮಂಗಳಂ.

ವಿಷಯ : ಚನ್ನಬಸವೇಶ್ವರನ ವೃತ್ತಾಂತ, ಸೋಮ ಸೂರ್ಯಾನ್ವಯ, ಹರಶರಣರ ಚರಿತೆ, ಶಿವನ ಪಂಚವಿಂಶತಿ ಲೀಲೆಗಳು, ಪಟ್‌ಸ್ಥಲ ಸಿದ್ಧಾಂತ, ಕಾಲಜ್ಞಾನ.

ವಿಶೇಷ : ಕಲ್ಲಚ್ಚಿನ ಪ್ರತಿ. ಮಂಗಳೂರಿನಲ್ಲಿ ೧೮೫೧ ರಲ್ಲಿ ಛಾಪಿಸಲಾಗಿದೆ.

486

ಕೆ.ಬಿ. ೨೭೪	**ಚನ್ನಬಸವ ಪ್ರಸ್ತಾವ**	ಗದ್ಯ
೮.೨" × ೬.೫"	ಜಗದೇವಮೊಲ್ಲಿ ಬೊಮ್ಮಣ್ಣ	?
೧–೧೪ ಪತ್ರ	೨೬ ಪಂಕ್ತಿ	೩೨ ಅಕ್ಷರ

ಆದಿ : ಚಂನಬಸವರಾಜದೇವರು ವುಳಿವಿಗೆ ಚಿತ್ತೈಸಿದ ಪ್ರಸ್ತಾವದ ವಚನಗಳೂ ॥ ಸ್ವಸ್ತಿ ಸಮಸ್ತಸಹಿತ ಶ್ರೀಮನ್ಮಹಾಕಲ್ಯಾಣಪುರದಲಿ ಯೇಳನೂರೆಪ್ಪತ್ತು ಗಣಂ

ಗಳು ಅಸಂಖ್ಯಾತ ಪುರಾತನರು ಮಹಾಗಣಂಗಳು ಮುಖ್ಯವಾದ ಪ್ರಮಥರು ಸಹಿತ ಚೆಂನಬಸವೇಶ್ವರದೇವರು ಅನುಭವದ ಮಂಟಪದಲ್ಲಿ ಮೂರ್ತ್ರಂ ಗೈಯ್ದಿರ್ಪ ಸಮಯದಲ್ಲಿ ಜಗದೇವಮೊಲ್ಲಿ ಬೊಂಮ್ಮಂಣಗಳೀರ್ವರು ಬಂದು ಬಿಂನ್ನೈಸಿದ ಪ್ರಸ್ತಾವದ ವಚನ
ಚೆಂನಬಸವದೇವರು ಮುಂತಾದೆಲ್ಲ ಗಣಂಗಳು ಕೇಳಿರೈಯ್ಯ ಬಿಂನಹ ಮಾಡಿಹೆವು। ಯಿಾಗ ನಡವ ರಾಕ್ಷಸ ನಾಮ ಸಂವತ್ಸರದಲ್ಲಿ ನಾಳೆ ಮಂಗಳವಾರ ಶುಕ್ಲಪಕ್ಷದ ಕಾರ್ತಿಕ ಶುದ್ಧ ಪೌರ್ಣಮಿಯಲ್ಲಿ ನಾಳೆ ಮಂಗಳವಾರಸ್ತಮಾನವಾದ ಹದಿನೆಂಟು ಘಳಿಗೆಗೆ ಬಿಜ್ಜಳರಾಯನ ಮರಿದು ಕೊಂದೇವು.

ಅಂತ್ಯ : ಯಿಂನ್ನು ರುದ್ರಮುನಿದೇವರೆ ನನಗೆ ನೀವು ಕೃಪೆಯಿಂದ ಸಂಗಮನಾಥನ ರಂಗಮಂಟಪದ ಮಧ್ಯದಲ್ಲಿ ಶಿವಯೋಗ ಸಮಾಧಿಯಂ ತೋರಿದಿರಿ. ಚೆಂನಬಸವಂಣ ಪ್ರಿಯ ಕೂಡಲಸಂಗನ ಶರಣರು ಸಾಕ್ಷಿಯಾಗಿ ಯಂನೊಡೆಯನ ಆವುಗೆಗಳು ಸಹಿತ ಯೇಳುನೂರೆಪ್ಪತ್ತು ಗಣಂಗಳ ನೆನವುತ್ತ ಅಸಂಖ್ಯಾತ ಪುರಾತರನ ನೆನವುತ್ತಂ ನಾನು ಶಿವಯೋಗ ಸಮಾಧಿಯಲ್ಲಿ ಸಂನರ್ಧನನಾದೆನು ಚೆಂನಬಸವಾದಿ ಪ್ರಮಥರೈಕ್ಯಸ್ಥಲದ ವಚನ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಚೆಂನಬಸವಂಣದೇವರ ಪ್ರಸ್ತಾವವೈಕ್ಯಸ್ಥಲ ಸಂಪೂರ್ನ ಶ್ರೀ ॥

ವಿಷಯ : ಕಲ್ಯಾಣನಗರಿಯ ಅನುಭವಮಂಟಪದಲ್ಲಿ ಶಿವಶರಣರಿಗೆ ನಡೆದ ಸಂವಾದ.

ವಿಶೇಷ : ಮೋಡಿ ಅಕ್ಷರ.

487

ಕೆ. ೧೬೯/೧೮	**ಚೆನ್ನಬಸವೇಶ್ವರ ಪುರಾಣದ ನಾಂಧ್ಯೆ**	ವಾರ್ಧಕ ಷಟ್ಪದಿ
೯.೬" × ೨"	?	?
೭೮_೮೯ ಪತ್ರ	೧೦ ಪಂಕ್ತಿ	೫೦ ಅಕ್ಷರ

ಆದಿ : ಚೆಂನಬಸವೇಶ್ವರನ ಪುರಾಣದ ನಾಂಧ್ಯ—
ಶ್ರೀ ಪರಮ ಸದ್ಗುರು ಪರಂ ಪರಂಜ್ಯೋತಿ ಸ್ವ
ರೂಪಸಾಂದ್ಯಂತರಹಿತ ನಿತ್ಯನದ್ವಯಂ
ಪಾಪರಹಿತಂ ಪರಬ್ರಂಹ್ಮ ಬ್ರಂಹ್ಮಗ್ನ್ಯಾನ ಬೋಧಾಸುಕರ್ತೃವೆಂದೂ
ಗೋಪವಾಹನರಾಪಗಂ ಬಿಡದೆ ನಿಂಮಯ
ಶ್ರೀಪಾದಪದ್ಮಂಗಳಂ ಭಜಿಸುತಿಹರೆಂನ
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಂಮನಾಂ ಪೊಂಗಳ್ವೆನಳ್ಕಱಿಂದಾ ॥೧॥

ಅಂತ್ಯ : ಯಿಂತೆಸೆವ ಚೆಂನಬಸವೇಶನ ಪುರಾಣಮಂ
ಸಂತಸದಿ ಬರದವಗ್ಗೋದಿದಗ್ಗರ್ತ್ಥವಾ
ದ್ಯಂತವಮಂ ಬಿಡದೆ ಪೇಳ್ದಗ್ಗೆ ಪಠಿಸಿದವಗ್ಗೆ ಭಕ್ತಿಯಿಂ ಕೇಳ್ದವಗ್ಗೆ
ಸಂತತಂ ಸಕಲಸುಖಮಂ ಸಕಲಭೋಗವುನ
ನಂತ ಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುಚೆವ ಚೆಂನಬಸವೇಶನಳ್ಕುಱಂದಾ ॥ ೪೪ ॥
ಚೆಂನಬಸವೇಶನ ಪುರಾಣದ ನಾಂದ್ಯದ ಪದ ಸಂಪೂರ್ನ್ನ ಮಂಗಳಮಹಾಶ್ರೀ.

ವಿಷಯ : ಚನ್ನಬಸವೇಶ್ವರ ಪುರಾಣದ ನಾಂದೀ ಪದ್ಯಗಳು.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಶಂಕರಸಂಹಿತೆಯ ನಾಂದ್ಯದ ಲಿಂಗ ಸ್ತೋತ್ರದ ಪದ, ಪ್ರಭುದೇವರ ಪುರಾಣದ ನಾಂದ್ಯಗಳೆಂಬ ಇನ್ನೂ ಇತರ ೨೩ ಗ್ರಂಥಗಳಿವೆ.

488

ಕೆ. ೩೨೫/೧೬	ಚನ್ನಬಸವೇಶ್ವರ ಪುರಾಣದ ನಾಂದ್ಯ	ವಾರ್ಧಕ ಷಟ್ಪದಿ
೯.೫" × ೨"	?	?
೪೨–೫೧ ಪತ್ರ	೧೧ ಪಂಕ್ತಿ	೫೩ ಅಕ್ಷರ

ಆದಿ : ಚೆಂನಬಸವೇಶ್ವರ ದೇವರ ಪುರಾಣದ ನಾಂದ್ಯ ॥
ಶ್ರೀ ಪರಮಸದ್ಗುರು ಪರಂ ಪರಂಜ್ಯೋತಿಸ್ವ
ರೂಪನಾದ್ಯಂತರಹಿತಂ ನಿತ್ಯನದ್ವಯಂ
ಪಾಪರಹಿತಂ ಪರಬ್ರಂಹ್ಮಗ್ನಾನಬೋಧಾ ಸುಕರ್ತೃವೆಂದೂ
ಗೋಪವಾಹನರಾವಗಂ ಬಿಡದೆ ನಿಂಮಯ
ಶ್ರೀಪಾದಪದ್ಮಂಗಳಂ ಭಜಿಸುತಿಹರೆಂನ
ತಾಪತ್ರಯಂಗಳಂ ಹರಿಸಿ ರಕ್ಷಿಸು ನಿಂಮನಾಂ ಪೊಗಳ್ವೆನಳ್ಕುಱಂದಾ ॥ ೧॥

ಅಂತ್ಯ : ಯಿಂತೆಸವ ಚೆಂನಬಸವೇಶನ ಪುರಾಣವಂ
ಸಂತಸದಿ ಬರದವಗೋದಿದಗ್ಗರ್ತ್ಥವಾ
ದ್ಯಂತವಮಂ ಬಿಡದೆ ಪೇಳ್ದಗ್ಗೆ ಪಠಿಸಿದವಗ್ಗೆ ಭಕ್ತಿಯಿಂ ಕೇಳ್ದವಗ್ಗೆ

ಸಂತತಂ ಸಕಲಸುಖಮಂ ಸಕಲಭೋಗಮನ
ನಂತಸೌಭಾಗ್ಯಮಂ ಕೊಟ್ಟು ರಕ್ಷಿಸುವನಾ
ಕಂತುಹರನಪರಾವತಾರನೆನಿಸುವ ಚೆಂನಬಸವೇಶನಳ್ಕಱಿಂದಾ ॥ ೮೪ ॥

ಚೆಂನಬಸವೇಶ್ವರ ಪುರಾಣದ ನಾದ್ಯಪದ ಸಮಾಪ್ತ ಮಂಗಳ ಮಹಾಶ್ರೀ.

ವಿಷಯ : ಚನ್ನಬಸವೇಶ್ವರ ಪುರಾಣದ ನಾಂದೀ ಪದ್ಯಗಳು.

ವಿಶೇಷ : ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಬಸವೇಶ್ವರ ಪುರಾಣದ ನಾಂದ್ಯ, ಶಿವಲಿಂಗ ನಾಂದ್ಯಗಳೆಂಬ ಇನ್ನೂ ೨೪ ಗ್ರಂಥಗಳಿವೆ.

489

ಕೆ. ಬಿ. ೪೧೬/೪	**ಚನ್ನಬಸವೇಶ್ವರ ವಚನ**	ವಚನ
೫.೮″ × ೫.೩″	ಚನ್ನಬಸವಣ್ಣ	೧೧೬೦
೧೧೧–೧೧೫ ಪತ್ರ	೯ ಪಂಕ್ತಿ	೧೫ ಅಕ್ಷರ

ಆದಿ : ಯೆಂನ ಬ್ರಂಹ್ಮರಂದ್ರದಲ್ಲಿ ಅಂಖಂಡಿನೆಂಬ್ಬ ರುದ್ರನಾಗಿ । ಬಂದೂ ನಿಂದಾತ ಬಸವಂಣ್ಣನೈಯಾ ॥ ಯಂನ್ನ ವುತ್ತುಮಾಂಗದಲ್ಲಿ ಗಂಗಾಧರನೆಂಬ್ಬ ರುದ್ರನಾಗಿ ಬಂದ್ದು ನಿಂದಾತ್ತ ಬಸವಂಣ್ಣನೈಯಾ ॥ ಯಂನ್ನ ಲಲಾಟದಲ್ಲಿ ಮಹಾದೇವನೆಂಬ್ಬ ರುದ್ರನಾಗಿ ಬಂದ್ದು ನಿಂದಾತ ಬಸವಂಣ್ಣನೈಯಾ ॥

ಅಂತ್ಯ : ಯಂನ್ನೀ ಸರ್ವಾಂಗದಲ್ಲಿ ಸರ್ವೇಶ್ವರನೆಂಬ್ಬ ರುದ್ರನಾಗಿ ಬಂದು ನಿಂದಾತ ಬಸವಂಣ್ಣನೈಯಾ ಯಿಂತ್ತೀ ಮೂವಂತ್ತೆರಡು ಸ್ತ್ರಳಂಗಳಲ್ಲಿ ಕೂಡಲ ಚಂನ್ನಸಂಗೈಯನ ಶರಣರೂ ಬಸವಸಹಿತರಾಗಿಪ್ಪರೈಯಾ ಕೂಡಲಚಂನ ಸಂಗಮದೇವ ॥ ೩೨ ॥

ಸಂಪೂರ್ಣ ಮಂಗಳಮಹಾಶ್ರೀ ॥

ವಿಷಯ : ಬಸವಣ್ಣನ ಸ್ತುತಿ.

ವಿಶೇಷ : ಒಂದು ವಚನಮಾತ್ರ ಇದೆ. ಇದೇ ಪುಸ್ತಕದಲ್ಲಿ ಗುಹೇಶ್ವರಾಂಕಿತ ವಚನ, ಲಿಂಗಸೂತ್ರ, ತತ್ತ್ವಚಿಂತಾಮಣಿ ಎಂಬ ಕೃತಿಗಳಿವೆ. ಮಧ್ಯದಲ್ಲಿ

ರುದ್ರಾಧ್ಯಾಯಕ್ಕೆ ಸಂಬಂಧಪಟ್ಟ ಎರಡು ಪತ್ರಗಳಿವೆ. ಕೊನೆಯಲ್ಲಿ ಕೆಲವು ಶುದ್ಧ ಪತ್ರಗಳಿವೆ. ಇವುಗಳಲ್ಲಿ ಮಧ್ಯೆ ಒಂದೆರಡು ಪತ್ರಗಳಲ್ಲಿ ಹಿಂದಿಯ ಒಂದೆರಡು ಹಾಡುಗಳೂ ಕೆಲವು ತತ್ತ್ವಬೋಧಕ ಹಾಡುಗಳೂ ಅಪೂರ್ಣವಾಗಿ ಇವೆ.

490

ಕೆ.ಬಿ. ೧೦೦	ಚನ್ನಮಲ್ಲೇಶ್ವರ ಶತಕ (ಸಟೀಕು)	ವೃತ್ತ, ಟೀಕು
೭.೮" × ೬.೩"	ಚನ್ನಮಲ್ಲಿಕಾರ್ಜುನ	೧೫೬೦
೧೫೪ ಪುಟ	೧೨ ಪಂಕ್ತಿ	೧೭ ಅಕ್ಷರ

ಆದಿ: ಚನ್ನಮಲ್ಲೇಶ್ವರ ಶತಕಂ ॥

ಶ್ರೀಮತ್ಪದ್ಮಜ ಪದ್ಮನಾಭ ವಿನುತ ಶ್ರೀಪಾದಪದ್ಮದ್ವಯಾ
ಕಾಮೋದ್ಗರ್ವತಮಃ ಪ್ರಚಂಡತರ ಮಾರ್ತಂಡ ಪ್ರಶಸ್ತ ಪ್ರತಿ
ಸ್ತೋಮಸ್ವಾತ್ತ ನಿಶಾಂತಕಾಂತ ನಿರುಪಾಧಿ ಜ್ಯೋತಿ ಮೋಕ್ಷಪ್ರದಾ
ಸ್ವಾಮಿ ಶ್ರೀ ಗಿರಿನಾಥ ರಕ್ಷಿಸೊಲವಿಂ ಶ್ರೀ ಚೆನ್ನಮಲ್ಲೇಶ್ವರಾ ॥ ೧॥

ಟೀಕು ॥ ಶ್ರೀಮತ್–ನಿರತಿಶಯ ಜ್ಞಾನಾನಂದೈಶ್ವರ್ಯದಿಂದೊಪ್ಪುವ ಪದ್ಮಜ–ಕಮಲಜನಾದ ಬ್ರಹ್ಮನು, × × × ಮಾರ್ತಂಡ– ಸೂರ್ಯನಾದಂಥಾ, ಪ್ರಶಸ್ತ–ಒಪ್ಪಲ್ಪಟ್ಟ, ಪ್ರತಿ–ಪ್ರತೀಶ್ವರರ

ಅಂತ್ಯ: ಕಂದ ॥ ಶೃತಿ ಸೂಕ್ತಿರತ್ನಮಾಲಾ

ಸ್ತುತಿಯಂ ಗುರು ಕರುಣದಿಂದೆ ಪೇಳ್ದಂ ಸ್ವಯಶೋ
ಜಿತ ಮಲ್ಲಿಕಾರ್ಜುನಂ ಪರಿ
ಹೃತ ಪರಮಿತ ಚನ್ನಮಲ್ಲಿಕಾರ್ಜುನದೇವಂ ॥ ೧೧೪ ॥
ಶಿವಮಹಿಮಾ ಶತಕಂ ವೈ
ಷ್ಣವ ವಾಗದ್ವೈತ ಕರ್ಮಿಗಳ ಹೃಚ್ಛಲ್ಯಂ
ಪ್ರವರ ಶಿವಭಕ್ತ ಪರಿಷ
ದ್ಭುವನದೊಳಿದು ಬೆಳ್ಪ ರತ್ನದೀಪಿಕೆಯೆನಿಕುಂ ॥ ೧೧೫ ॥

ಸಂಪೂರ್ಣ.

ವಿಷಯ : ಶಿವನ ಮಹಿಮೆ.

ವಿಶೇಷ : ಗ್ರಂಥದ ಹೆಸರು ೧೧೫ನೆಯ ಪದ್ಯದಲ್ಲಿ ಸೂಚಿಸಿರುವಂತೆ 'ಶಿವಮಹಿಮಾ ಶತಕ' ಎಂದಿರಬೇಕು. ಗ್ರಂಥದ ಕೊನೆಯಲ್ಲಿ ೧೧೪ ಮತ್ತು ೧೧೫ ಈ ಪದ್ಯಗಳು ಮಾತ್ರ ಕಂದ ಪದ್ಯಗಳು. ಉಳಿದುವೆಲ್ಲವೂ ವೃತ್ತಗಳು.

491

ಕೆ. ೬೫/೧	**ಚಾಮರಾಜೋಕ್ತಿ ವಿಲಾಸ**	ಗದ್ಯ
೨೦" × ೨.೨"	ಚಾಮರಾಜ	೧೬೧೭
೧–೩೩ ಪತ್ರ	೧೨ ಪಂಕ್ತಿ	೧೦೪ ಅಕ್ಷರ

ಆದಿ : ಯಲೆ ಕುಶನೆ ಕೇಳು ಯಿಾ ಮರಿಯಾದೆಯಲ್ಲಿ ರಾಕ್ಷಸರಿಂದ ಬಹುವಾಗಿ ಬೆದರಿಸಲು ಪಟ್ಟ ಸೀತಾದೇವಿ ಕಂಣುನೀರ ಬಿಡುತ, ಆ ರಾಕ್ಷಸಸ್ತ್ರೀಯರ ಕೂಡೆ ಬಿಕ್ಕಿ ಬಿಕ್ಕಿ ಅಳುತ, ರೋಧನವ ಮಾಡುತ ವೊಂದಾನೊಂದು ಮಾತನಾಡುತಂ ಯಿದ್ದಾಳೂ, ಯಲೆ ರಾಕ್ಷಸಿರಾ ಕೇಳಿ ಲೋಕದ್ಯು ಮನುಸ್ಯಸ್ತ್ರೀಯಾದವಳೂ ರಾಕ್ಷಸನಿಗೆ ಸ್ತ್ರೀಯಾಗಲರಿಯುಳೂ

ಅಂತ್ಯ : ಕಿಷ್ಕಿಂಧಾ ಪಟ್ಟಣಕ್ಕೆ ಬಂದು ರಾಮಃಲಕ್ಷ್ಮ್ರಣ ಸುಗ್ರೀವರಂನು ಸಂ.... ಕೊಂಡು ಅಭಿವಂದಿಸಿ ಸೀತಾದೇವಿ ಕೊಟ್ಟ ಕುರುಹಿನ ಚೂಡಾಮಣಿ ಭೂಷಣವ ಕೊಟ್ಟೊ ಸೀತಾದೇವಿ ಹೇಳಿಕಳುಹಿದ ಕುರುಹಿನ ಮಾತುಗಳ ರಾಮುಸ್ವಾಮಿಗೆ ಬಿಂನಹಂ ಮಾಡಿ ಆ ರಾಮುಸ್ವಾಮಿ ಮನಸ್ಸಿಗೆ ಸಂತೋಷವ ಮಾಡಿ, ತಾನು ಸ್ವಸ್ತ್ರಚಿತ್ತನಾದನೂ, ಯಂಬಾ ಸುಂಧರಕಾಂಡದಲ್ಲಿ ಆದ್ಯಂತ ಕಥಾ ಪ್ರಸಂಗದಲ್ಲಿ ಚಾಮರಾಜೋಕ್ತಿ ವಿಲಾಸದಲ್ಲಿ ವುತ್ತಮ ಕ್ಷತ್ರಿಯ ಕುಲೋದ್ಭವ × × × ಚಾಮುಂಡಿ ಸದ್ಭಕ್ತಿ ಮಂಡಿತ ಶ್ರೀ ಚಾಮರಾಜೋಕ್ತಿ ವಿಲಾಸದಲ್ಲಿ ೬೮ನೇ ಆಸ್ವಾಸಕ್ಕೆ ಮಂಗಳಮಹಾ ಶ್ರೀ.

ವಿಷಯ : ರಾಮಾಯಣದ ಸುಂದರಕಾಂಡದ ಕಥೆ.

ವಿಶೇಷ : ಅಸಮಗ್ರ. ೨೮, ೩೦ನೆಯ ಪತ್ರ ಲುಪ್ತ. ಅಕ್ಷರಗಳು ಸಣ್ಣ. ಪ್ರತಿಯು ಕೊಂಚ ಮಟ್ಟಿಗೆ ಶಿಥಿಲ. ಗ್ರಂಥದ ಆದಿಯಲ್ಲಿ ಬೇರೆ ೩ ಪತ್ರಗಳಲ್ಲಿ ಸಂಸ್ಕೃತ ಶ್ಲೋಕಗಳಿವೆ. ಇದೇ ಕಟ್ಟಿನಲ್ಲಿ ಮಾರ್ಕಂಡೇಯ ಜ್ಯೋತಿಷವೆಂಬ ಮತ್ತೊಂದು ಗ್ರಂಥವಿದೆ.

492

ಕೆ. ೪೪೩/೨ ಚಾಮರಾಜೋಕ್ತಿವಿಲಾಸ ಗದ್ಯ
೧೮.೬"×೨.೫" ಚಾಮರಾಜ ೧೬೧೭
೧–೪೨ ಪತ್ರ ೧೪ ಪಂಕ್ತಿ ೯೬ ಅಕ್ಷರ

ಆದಿ : ಶ್ರೀಮತೇ ರಾಮಾನುಜಾಯ ನಮಃ। ಬಾಲಖಾಂಡಾ। ಶ್ರೀಮದ್ರಾಮಾಯಣದ ಟೀಕೂ। ಚಾಮರಾಜೋತ್ತಿವಿಲಾಸ। ಬಾಲಕಾಂಡಾ। × × ಶ್ರೀಮದ ಶರಣ ಶರಣ್ಯನಹ ಅರ್ಥತ್ರಾಣ ಪರಾಯಣನಹ × × ಧರ್ಮಾರ್ಥ ಕಾಮ ಮೋಕ್ಷಂಗಳೆಂಬ ಚತುರ್ವಿಧ ಪುರುಷಾರ್ಥ ಸಾಧನವದ ಪಂಚಮವೇದವೆನಿಪ ಶ್ರೀಮದ್ರಾಮಾಯಣದಲ್ಲಿ ಆದಿ ಕಥಾ ವೃತ್ತಾಂತವದೆನಲಾಗಿ ಪರಮತಪಶ್ವಿಯಾದ ವಾಲ್ಮೀಕಿಮಹಾಮುನಿಸ್ವಾಧ್ಯಾಯದಲ್ಲಿ ನಿರಂತರ××× ಅಭಿವಂದಿಸಿವೊಂದಾನೊಂದು ಪ್ರಶ್ನೆಯಂ ಮಾಡಿ ಕೇಳುತ್ತಂ ಯಿದನೂ॥

ಅಂತ್ಯ : ಆ ವಿಶಾಲಪುರಿಯಲ್ಲಿ ಯಿದ್ದ ಸುಮತಿಯಂಬ ರಾಯನು। ವಿಶ್ವಾಮಿತ್ರ ಮುನೀಶ್ವರನ ಕಂಡು। ಅತಿಸತ್ಕಾರವನು ಮಾಡಿದನೆಂಬ ಕಥಾವೃತ್ತಾಂತವನು ವಾಲ್ಮೀಕಿಮುನೀಶ್ವರನು ಕುಶಲವರಿಗೆ ನಿರೂಪಂಗೊಡುತಿದ್ದನೆಂಬಲ್ಲಿ ಶ್ರೀಮದ್ದ್ರಾಮಾಯಣದ ಬಾಲಕಾಂಡದಲ್ಲಿ। ಚಾಮರಾಜೋಕ್ತಿವಿಲಾಸದಲ್ಲಿ ....ಶ್ವಾಸಕ್ಕೆ ಮಂಗಳ ಮಹಾಶ್ರೀ. ಶ್ರೀಮತೇ ರಾಮಾನುಜಾಯ ನಮಃ। ಅನಂತರದಲ್ಲಿ ಆ ವಿಶಾಲಪುರಿಯಲ್ಲಿ ಯಿದ್ದ ಸುಮತಿಯಂಬ ರಾಯನು।

× × × ×

ಕಮಲದ ಯಸಳುಗಳ ಮರ್ಯ್ಯಾದೆಯಲ್ಲಿ ವಿಶಾಲವಾದ ಕಂಣುಗಳುಳ್ಳವರು ಖಡ್ಗ ಬಿಲ್ಲು

ವಿಷಯ : ಶ್ರೀರಾಮನ ಕಥೆ.

ವಿಶೇಷ : ಅಸಮಗ್ರ, ಬಾಲಕಾಂಡವೂ ಪೂರ್ಣವಾಗಿಲ್ಲ. ೪೨ ನೆಯ ಪತ್ರವು ತ್ರುಟಿತ. ಶಕಟರೇಫವಿದೆ. ಇದೇ ಕಟ್ಟಿನಲ್ಲಿ ಭಾಗವತವೆಂಬ ಇನ್ನೊಂದು ಗ್ರಂಥವಿದೆ.

493

ಕೆ. ಎ. ೨೬/೨ ಚಾಮುಂಡಿಕಾ ಲಘುನಿಘಂಟು ಶ್ಲೋಕ, ಟೀಕು
೧೦.೪"×೮.೨" ಮುಮ್ಮಡಿಕೃಷ್ಣರಾಜ ೧೮೫೦
೧೭ ಪತ್ರ ೨೨ ಪಂಕ್ತಿ ೨೫ ಅಕ್ಷರ

ಆದಿ : ಶ್ರೀ ಚಾಮುಂಡಿಕಾ ಲಘುನಿಘಂಟು ರಿತಿಶ್ರುತಃ॥

ಶ್ರೀ ಕೃಷ್ಣೇಂದ್ರ ಭೂವರ ಕೃತಸ್ಸಕಲಾಭಿನಂದ್ಯಃ।
ಯುಥಾದ್ಯೈರ್ಮುದ್ರಾಕ್ಷರಾಂಚಿತ ತನುರ್ಜಯತುಪ್ರಕಾಮಂ ॥

ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವ ವಿರಚಿತ ಚಾಮುಂಡಾ ಲಘು ನಿಘಂಟನಲ್ಲಿ ದೇವತೆಗಳು ಮೊದಲಾದವರು ಹಸ್ತದಲ್ಲಿ ಧರಿಸುವ ಆಯುಧಗಳು ಹಸ್ತವಿಶೇಷಗಳು, ಮೃಗಗಳ ನಾಮಾವಳಿ

ಅಂತ್ಯ : ವೃಕ್ಷಾಃ ಪುಷ್ಪಾಣಿ ಶಾಕಾವ್ರತತಿಯುವತಯಃ ಕಂದಮೂಲಾನಿ ಶುಂಠೀ
ಮುಖ್ಯಾನ್ಯುಚ್ಚಾನಿ ರತ್ನಾನ್ಯನುಪಮ ಕನಕಾದ್ಯಾನಿ ಧಾನ್ಯಾದಿಜಾಲಂ
ಪಾನೀಯಾದೀನಿ ಕಷ್ಣ ಕ್ಷಿತಿಪತಿ ಪರಿತಾನ್ಯೈಷು ಯೋಗೋತ್ಥ ರೂಢಿ
ಪ್ರಖ್ಯಾತಂ ಶಬ್ದಜಾತಂ ಸಪದಿಲಿ ಜಯತಾಂ ಯಾವದಾಚಂದ್ರತಾರಂ
॥ ೧೫೨ ॥

× × × ×

ಶಾಲಿವಾಹನ ಶಕ ವರುಷಂಗಳು ೧೭೫೮ ನೆ ವರ್ತಮಾನವಾದು ದುರ್ಮುಖಿ ನಾಮಸಂವತ್ಸರದ ವೈಶಾಖ ಶುದ್ಧ ೧೫ ಭಾನುವಾರದಲ್ಲೂ × × × ಮಹೀ ಶೂರ ಪುರವರಾಧೀಶ ಶ್ರೀ ಕೃಷ್ಣ ರಾಜವಡಯರವರಿಂದ ರಸಿಕ ಜನಾನಂದಕರ ಮಾಗಿ ವಿರಚಿತಮಾದಚಾಮುಂಡಿಕಾ ಲಘುನಿಘಂಟೆಂಬ ನವೀನಕೋಶದೋಳ್ ಮೂರು ಪ್ರಕರಣಕ್ಕೂ ಮಂಗಳ ಮಹಾಶ್ರೀ ॥ ೧೮೫೮ ನೆ ಸಂವತ್ಸರದ ಜೂನ್ ತಿಂಗಳ ೨೧ ನೆ ತಾರೀಕಿನಲ್ಲಿ ಕಾಕರ್ಲಜ್ಯೋಸ್ಯನಿಂದ ಬರೆಯಲ್ಪಟ್ಟಿತು.

ವಿಷಯ : ನಿಘಂಟು.

ವಿಶೇಷ : ಪತ್ರಸಂಖ್ಯೆಯನ್ನು ಗುರುತಿಸಿಲ್ಲ. ಗ್ರಂಥದ ಕೊನೆಯಲ್ಲಿ ಒಂದು ಪತ್ರ ಖಾಲಿಯಿದೆ. ಇದರೊಂದಿಗೆ ಚತುರಾಸ್ಯನಿಘಂಟು ಮತ್ತು ಅನುಭವಾಮೃತ ಎಂಬ ಎರಡು ಗ್ರಂಥಗಳೂ ಇವೆ.

494

ಕೆ. ಬಿ. ೪೭೯	**ಚಾರುದತ್ತಂ**	ನಾಟಕ
೬.೩"×೬.೬"	ವೆಂಕಟರಾಯ	೧೯೪೫
೧–೩೯ ಪತ್ರ	೧೭ ಪಂಕ್ತಿ	೨೦ ಅಕ್ಷರ

ಆದಿ : ವೇಂಕಟರಾಯ ಕವಿಕೃತಂ ಚಾರುದತ್ತಂ (ಪ್ರಥಮಾಂಕಂ)

ನಾಂದ್ಯಂತದೊಳ್ ಸೂತ್ರಧಾರಂ ಪ್ರವೇಶಿಪಂ।
ಸೂತ್ರಧಾರಂ–ಕಂ॥ ಪೊಡೆಯೊಳಗುರಿಗುಂ ಮಾನಸ
ಮೆಡೆಯಾಡುಗುಮತ್ತಲಿತ್ತಲುಂ ಕಾತರದಿಂ
ದೊಡಲೊಳ್ ಪೊಡರ್ಗುಂ ಸಂಕಟ
ಮಡರ್ಗುಂ ನಿರ್ಬಲತೆ ಪಸಿವೆ ನಿನ್ನದಟಧಿಕಂ ॥ ೧ ॥

ಈಗಳಿನ ಪೊಳ್ತರೆಯೊಳ್ ಗೃಹದಿನೆಳ್ತಂದೆನ್ನ ಪಸಿವಿಂ ಪುಷ್ಕರ ಪತ್ರ ಪತಿತ ಜಲಬಿಂದುಗಳೆಂಬಂತೆವೊಲ್ ಚಂಚಲಂದಾಳ್ದಿರ್ಪುವಕ್ಷಿಗಳ್.

ಅಂತ್ಯ : ವಸಂತಸೇನೆ— ಹತಾಶೇ ! ಹಾಳಾಗು.
ಚತುರಿಕೆ— ಇತ್ತಲಿತ್ತಲೆಳ್ತರ್ಪುದಜ್ಜುಕೆ

× × × ×

ಕಂ॥ ನೆಗಳ್ದಂ ಭಾರದ್ವಾಜ
ಪ್ರಬುದ್ಧಗೋತ್ರಂ ಹನುಮದಾತ್ಮಜನೊವಜಂ
ವರಶಾತ್ತಾದ ಶ್ರೀವೈ
ಷ್ಣವ ಕುಲಜಂ ವೇಂಕಟಾರ್ಯಕವಿ ಕವಿರಾಜಂ ॥ ೧೦ ॥
(ಇಂತು ಚಾರುದತ್ತಮು ಪೂರ್ಣಂ)

ವಿಷಯ : ಚಾರುದತ್ತ ವಸಂತಸೇನೆಯರ ಕಥೆ.

ವಿಶೇಷ : ಕವಿಯು ಬರೆದಿರುವ ಮುನ್ನುಡಿಯು ಗ್ರಂಥದಾದಿಯಲ್ಲಿದೆ. ಗ್ರಂಥದ ಅಂತ್ಯದಲ್ಲಿ ಬೇರೊಂದು ಪತ್ರದಲ್ಲಿ ಕವಿಯ ಇತರ ಕೃತಿಗಳೆಷ್ಟು, ಅವುಗಳೆಲ್ಲಿ ಕಾಪಾಡಲ್ಪಟ್ಟವೆ ಎಂಬುದನ್ನು ತಿಳಿಸಿದೆ.

495

ಕೆ. ೧೧೮	**ಚಾವುಂಡರಾಯಪುರಾಣ**	ಚಂಪು
೧೪.೨" × ೧.೯"	ಚಾವುಂಡರಾಯ	೯೭೮
೧–೨೫೫ ಪತ್ರ	೯ ಪಂಕ್ತಿ	೬೫ ಅಕ್ಷರ

ಆದಿ : ದೇವರ್ದಯೆಗೆಯ್ಗೆ ವಿಮಲರತ್ನತ್ರಯಮಂ ॥
ಶ್ರೀಮದಶೋಕಂ ಮುಕ್ಕೊಡೆ
ಚಾಮರತತಿ ದಿವ್ಯಭಾಷೆ ಸುರತೂರ್ಯ್ಯರವಂ

ಪೂಮಳೆ ಕೇಸರಿವೀಹ
ಭಾಮಂಡಳಮೆಸೆಯೆ ನೆಗಳ್ದನೊಸೆದಾದಿ ಜಿನಂ ॥

ಅಂತ್ಯ : ನರಪತಿ ಶೌಚಿಯಕ್ಕೆ ಪಡೆದಿಂ ಮಳೆಯಕ್ಕೆ ಸುಭಿಕ್ಷಕ್ಕೆ ಸೌಂ
ದರ ಪತಿಭಕ್ತೆಯಕ್ಕೆ ಮನುಜರ್ಗುಣಿಯಕ್ಕೆ ಸುಧೇನುಪಾಲನು
ರ್ವರತರವಿಾವುದಕ್ಕೆ ಮುನಿಗಕ್ಕೆ ಸಮಾಧಿ ಜಿನೇಂದ್ರಧರ್ಮಮು
ದ್ಧರಿಸುವುದಕ್ಕೆ ಭೂವಳೆಯದೊಳ್ಮಹಿಮಾಸ್ಪದಮಕ್ಕೆ ಮಂಗಳಂ ॥

ವಿಷಯ : ತ್ರಿಷಷ್ಠಿ ಶಲಾಕಾಪುರುಷರ ಚರಿತ್ರೆ.

ವಿಶೇಷ : ೧೦೪ ನೆಯ ಪತ್ರ ಲುಪ್ತ. ಅಲ್ಲಲ್ಲಿ ಕೆಲವು ಪತ್ರಗಳು ಮುರಿದಿವೆ. ೨೫೯ ರಿಂದ ೨೬೩ ರ ಪತ್ರದವರೆಗೆ ಮಂಗಲಾಷ್ಟಕ (ಸಂ), ಸಮವಸರಣ ಸ್ತುತಿ (ಸಂ) ಗಳಿವೆ. ಇದರಿಂದ ಮುಂದಕ್ಕೆ ೧ ರಿಂದ ೮ ಪತ್ರ ಚಾವುಂಡರಾಯ ಪುರಾಣಕ್ಕೆ ಸಂಬಂಧಿಸಿದವು. ಶಕಟರೇಫದ ಬಳಕೆಯಿದೆ.

496

ಕೆ. ೫೮೭	**ಚಾವುಂಡರಾಯ ಪುರಾಣ**	ಚಂಪು
೨೦.೩"×೨.೨"	ಚಾವುಂಡರಾಯ	೯೭೮
೧–೧೭೮ ಪತ್ರ	೯ ಪಂಕ್ತಿ	೯೫ ಅಕ್ಷರ

ಆದಿ : ನಂ ಆಚಾರ ಪ್ರಜ್ಞಾಪ್ತಿ ವ್ಯವಹಾರ ದೃಷ್ಟಿವಾದ ಕುಶಲನುಂ ವೇದವೇದಾಂಗ ನ್ಯಾಯ ಶಬ್ದಾಗಮಾರ್ಥವೇದಿಯುಂ ಪರವಾದಿ ದರ್ಪಸಾಧನ ಪರಿಣತ.... ಭೂಷಿತನುಂ। ಚತುರಾಸಿತಿ ಲಕ್ಷ ಗುಣರತ್ನ ಭೂಷಣನಕ್ಕು। ನಾಲ್ಕನೆಯ ಕಥೆಯೆಂಬುದು ದ್ರವ್ಯಮುಂ ಕ್ಷೇತ್ರಮುಂ ಕಾಲಮುಂ

ಅಂತ್ಯ : ಗದ್ಯ ॥ ಇದು ಸಕಲ ಭುವನಜನ....ನ ವಿಜಿತ ದುರಿತಾರಾತಿ × × × ಶ್ರೀಮಚ್ಚಾವುಂಡರಾಜ ರಚಿತಮಪ್ಪ ತ್ರಿಷ್ಟಿಲಕ್ಷಣ ಮಹಾಪುರಾಣದೊಳು ಶ್ರೀ ವರ್ಧಮಾನ ಭಟ್ಟಾರಕ ಪುರಾಣಂ.... × × × ಪೂರ್ವಾಂಗದೇಶ ನಿರತರು ಷಟ್ಖಂಡರಚಿತ ಸೂತ್ರರು ಶ್ರೀ ಧತ್ತರುಮನರ್ಹಶಿರದತ್ತರರುಹದತ್ತರುಮೆನೆ ಪಾವನಚರಿತಭರ್ೂತ ಪುಷ್ಪದಂತಾಚಾರ್ಯರೂ ಯೆಸೆಯೆ ಕಷಾಯ ಪ್ರಾಭೃತಕ ಸೂತ್ರಮಂ ಬರೆದು ತಮ್ಮ ಕವಿತಾಗುಣ ಎಂದಿದೆ.

ವಿಷಯ : ತ್ರಿಷಷ್ಠಿ ಶಲಾಕಾ ಪುರುಷರ ಚರಿತ್ರೆ.

ವಿಶೇಷ : ೧, ೨, ೪ ಮತ್ತು ೬೫–೬೮ ಪತ್ರಗಳು ಲುಪ್ತ. ೧೦೫ನೆಯ ಪತ್ರ ಎರಡಿವೆ. ೩, ೫, ೬ನೆಯ ಪತ್ರಗಳು ತ್ರುಟಿತವಾಗಿವೆ. ೧೭೪ನೆಯ ಪತ್ರದಲ್ಲಿ ಸ್ವಲ್ಪಭಾಗ ಮುರಿದುಹೋಗಿದೆ. ಶಕಟರೇಫವನ್ನು ಬಳಸಿದೆ.

497

ಕೆ. ಎ. ೬೬	**ಚಾವುಂಡರಾಯ ಪುರಾಣ**	ಚಂಪು
೧೨.೭″ × ೭.೭″	ಚಾವುಂಡರಾಯ	೯೭೮
೧–೪೭೬ ಪತ್ರ	೨೮ ಪಂಕ್ತಿ	೨೨ ಅಕ್ಷರ

ಆದಿ : ಶ್ರೀ × × ×

ಕಂ ॥ ಶ್ರೀ ವೃಷಭ ಜಿನೇಂದ್ರಾದಿ ಮ
ಹಾವೀರ ಜನಾಂತ್ಯವಾದ ಜಿನಪತಿಗಳ್ಭ
ವ್ಯಾವಳಿಗೆ ಚತುರ್ವಿಂಶತಿ
ದೇವದ್ರ್ಗಯೆಗೆಯ್ಗೆ ವಿಮಲ ರತ್ನತ್ರಯಮಂ ॥ ೧ ॥

ಅಂತ್ಯ : ವೃತ್ತ ॥ ನವಶತ ಸಂಖ್ಯೆಯಾಗೆ ಶಖ ಕಾಲ ಸಮಂ ನೆಗಳ್ವಿಶ್ವರಾಬ್ದಮು
ತ್ಸವ ಕರಮಾಗೆ ಪಾಲ್ಗುಣ ಸಿತಾಷ್ಟಮಿ ರೋಹಿಣಿ
ಸೋಮವಾರಮೆಂ
ಬಿವು ಶುಭದಂಗಳಾಗೆ ಪರಮೋತ್ಸವದಿಂ ಗುಣರತ್ನಭೂಷಣಂ
ಕವಿಜಿನಶೇಖರನುಂ ಬರೆದ ಪುಸ್ತಕಕ್ಕೆರಿದಂ ಪುರಾಣಮಂ ॥

ಚಾವುಂಡರಾಜ ವಿರಚಿತ
ಯಾಮಿಯೊಳತ್ಯಧಿಕಮಿಾ ಮಹಾಪೌರಾಣಮ
ಪ್ರೇಮದಿ ಕೇಳ್ವ ಜನಂಗ
ಳ್ಗಾಮೋದಮಂ ಶುಭಂಗಳಕ್ಕುಂಗಿರುವಂ ॥

× × × ×

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದ ೧೬೯೯ ಕಲ್ಯಬ್ದ ೪೮೭೮ ಸಂದ ವರ್ತಮಾನ ಹೇವಿಳಂಬಿ ಸಂವತ್ಸರದ ಕಾರ್ತಿಕ ಶುದ್ಧ ೧೪ ಶುಕ್ರವಾರ ದಿವಸಕ್ಕೆ ಚಾವುಂಡರಾಯ ಪುರಾಣದ ಪುಸ್ತಕ ಬರೆದು ಪೂರ್ಣ

ಮಾಯ್ತು ಮಂಗಳ ಮಹಾಶ್ರೀ ಶ್ರೀ ಶ್ರೀ|| ಶತ್ರುಮರ್ದನಪುರದ ದೊಡ್ಡಣ್ಣ ಶದೇರ ಚೌಡಯ್ಯಶಟ್ಟರಿಗೆ ಕುದೇರು ದೇವರಸಪಂಡಿತರ ಮಗನು ದೇವಯ್ಯನು ಬರೆದುಕೊಟ್ಟ ಮಹಾಪುರಾಣದ ಪುಸ್ತಕಕ್ಕೆ ಭದ್ರಂ ಶುಭಂ ಮಂಗಲಂ ಮಹಾಶ್ರೀ ಶ್ರೀ ಶ್ರೀ.

ವಿಷಯ : ತ್ರಿಷಷ್ಠಿ ಶಲಾಕಾಪುರುಷರ ಚರಿತ್ರೆ.

ವಿಶೇಷ : ಗ್ರಂಥದ ಆದಿಯು ಬೇರೆ ಎರಡು ಪತ್ರಗಳಲ್ಲಿ ವಿಷಯಸೂಚಿಯಿದೆ. ಪತ್ರದ ಒಂದು ಕಡೆ ಮಾತ್ರ ಬರವಣಿಗೆಯಿದೆ.